TEXT PROBLEM WITHIN THE BOOK ONLY

UNIVERSAL LIBRARY
OU_200658
UNIVERSAL LIBRARY

OSMANIA UNIVERSITY LIBRARY

Call No. K630/H15K Accession No K 5264.

Author ಹಳಕಟ್ಟಿ, P.G.

Title ಕೃಷಿಶಾಸ್ತ್ರ ಪ್ರವೇಶಿಕೆ. 1936

This book should be returned on or before the date last marked below

ಶ್ರೀ.

ನಾಗಭೂಷಣ ಘನಮಠದಾರ್ಯರ

# ಕೃಷಿಜ್ಞಾನ ಪ್ರದೀಪಿಕೆ.

ಸಂಪಾದಕ,

ರಾವಸಾಹೇಬ ಫಕೀರಪ್ಪಾ ಗುರಬಸಪ್ಪಾ ಹಳಕಟ್ಟಿ.

ಬಿ ಎ ಎಲ್ ಎಲ್ ಬಿ

ವಿಜಾಪುರ

ಪ್ರಥಮ ಆವೃತ್ತಿ

೧೯೩೬.

ಇದನ್ನು ರಾ॥ ಸಾ॥ **ಫ. ಗು. ಹಳಕಟ್ಟಿ** ಇವರು ವಿಜಾಪುರದಲ್ಲಿ
ತಮ್ಮ **ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ** ಮುದ್ರಿಸಿದರು
ಮತ್ತು
ಅವರು ಅಲ್ಲಿಯೇ ಉಪಲೀಬುರುಜದ ಹತ್ತರ ಇರುವ
ತಮ್ಮ ೧೬೨೦ (ಅ) ನೇ ಮನೆಯಲ್ಲಿ ಪ್ರಸಿದ್ಧಿಸಿದರು.

All rights reserved



ಈ ಗ್ರಂಥಕ್ಕೆ ಧನಸಹಾಯ ಮಾಡಿದ

ಶ್ರೀಮಂತ ದೊಡ್ಡಪ್ಪ ಅಣ್ಣಾ ಬಸಪ್ಪ ನಾಗರಾಳ

ಮು. ಹುನಗುಂದ

# ಪ್ರಸ್ತಾವನೆ.

ಕೃಷಿಜ್ಞಾನ ಪ್ರದೀಪಿಕೆ ಎಂಬ ಈ ಗ್ರಂಥವು ಈಗಿನ ಕಾಲದಲ್ಲಿ ಬಹು ಉಪಯೋಗವುಳ್ಳದ್ದಾಗುವದೆಂದು ನಾವು ಭಾವಿಸಿದ್ದೇವೆ ಇದರಲ್ಲಿ ಒಬ್ಬ ಒಕ್ಕಲಿಗನು ಸುಖವಾಗಿ ಹ್ಯಾಗೆ ಜೀವಿಸಬೇಕು ಎಂಬದನ್ನು ಬಹು ಉತ್ತಮ ರೀತಿಯಿಂದ ಶ್ರೀನಾಗಭೂಷಣ ಘನಮಠದಾರ್ಯರು ವಿವರಿಸಿರುವರು ಐಹಿಕ ಮತ್ತು ಪಾರಮಾರ್ಥಿಕ ಇಪರಡೂ ಕಾರ್ಯಗಳಲ್ಲಿ ಮೇಲನ್ನು ಹೊಂದಿದವನೇ ಸುಖಿಯು ಎಂದು ಇಡೀ ಹಿಂದೂ ಸಮಾಜವು ತಿಳಿಯುತ್ತದೆ ಇದಕ್ಕನು ಸಾರವಾಗಿಯೇ ಶ್ರೀ ಸ್ವಾಮಿಗಳವರು ಈ ಗ್ರಂಥವನ್ನು ರಚಿಸಿದ್ದಾರೆ ಇದು ಈ ಗ್ರಂಥದ ವೈಶಿಷ್ಟ್ಯವಾಗಿದ

ಈಗಿನ ಕಾಲದಲ್ಲಿ ಒಕ್ಕಲುತನಕ್ಕೆ ಮುಖ್ಯ ಸ್ಥಾನವು ಉಂಟಾಗಿರುತ್ತದೆ ಈ ಉದ್ಯೋಗದ ಉತ್ಕರ್ಷದ ಮೇಲೆಯೇ ಹಿಂದುಸ್ತಾನದ ಆರ್ಥಿಕ ಅಭ್ಯುದಯವು ಅವಲಂಬಿಸಿದ ಎಂದು ಈಗ ಎಲ್ಲರ ಮನವರಿಕೆಯಾಗಿದೆ ಆದ್ದರಿಂದ ಒಕ್ಕಲತನವನ್ನು ಸುಧಾರಿಸುವ ಕುರಿತು ಅನೇಕ ಪ್ರಯತ್ನಗಳು ಈಗ ಸತತವಾಗಿ ನಡೆಯುಹತ್ತಿವೆ ಆದರೂ ಬಹು ಪುರಾತನ ಕಾಲದಿಂದ ನಡೆದು ಬಂದ ಕೃಷಿಪದ್ಧತಿಗಳು ಈಗಲೂ ಪರಿಣಾಮಕಾರಿಗಳೆಂದು ಬಹು ಜನರ ಅಭಿಪ್ರಾಯವಿದೆ ಮತ್ತು ಇದರಲ್ಲಿ ಬಹುಮಟ್ಟಿಗೆ ಸತ್ಯತೆಯೂ ಇದೆ. ಆದರೆ ಒಕ್ಕಲಿಗರು ತಮ್ಮ ಸೋಮಾರಿತನದಿಂದ ಹಾಗೆ ನಡೆಯುವದಿಲ್ಲಾದ್ದರಿಂದ ಅವರು ಈ ಉದ್ಯೋಗದಲ್ಲಿ ಹಾನಿಯನ್ನು ಹೊಂದುತ್ತಿರುವರು ಈ ಕೃಷಿಜ್ಞಾನ ಪ್ರದೀಪಿಕೆಯ ಗ್ರಂಥದಲ್ಲಿ ಒಕ್ಕಲುತನದ ಬಗ್ಗೆ ಅನುಭವದ ಸಂಗತಿಗಳು ಹೇರಳವಾಗಿ ಹೇಳಲ್ಪಟ್ಟಿವೆ ಆದ್ದರಿಂದ ಈ ಗ್ರಂಥವು ಒಕ್ಕಲಿಗರಿಗೆ ಬಹು ಉಪಯೋಗವಾಗಬಹುದೆಂದು ನಾವು ಎಣಿಸಿದ್ದೇವೆ

ಈ ಗ್ರಂಥದಲ್ಲಿ ನಾವು ಎರಡು ಭಾಗಗಳನ್ನು ಮಾಡಬಹುದು. ೧ನೇ ಭಾಗದಲ್ಲಿ ಜಿರಾಯತ ಪೈರಿನ ಕೃಷಿಯು ಹೇಳಲ್ಪಟ್ಟಿರುತ್ತದೆ ಇದರಲ್ಲಿ ಹೊಲಗಳನ್ನು ತಿದ್ದುವ ಕ್ರಮಗಳು ಮತ್ತು ಬೇರೆ ಬೇರೆ ಪೈರುಗಳನ್ನು ಮಾಡುವ ರೀತಿಗಳು ವಿವರಿಸಲ್ಪಟ್ಟಿರುತ್ತವೆ ಮೊದಲನೇ ಎಂಟು ಪ್ರಕರಣಗಳು ಇಂಥ ವಿಷಯಗಳ ಬಗ್ಗೆ ಇರುತ್ತವೆ. ೨ ನೇ ಭಾಗದಲ್ಲಿ ಬಾಗಾಯತ ಅಂದರೆ ತೋಟಗಳನ್ನು ಮಾಡುವ ಪದ್ಧತಿಗಳು ಹೇಳಲ್ಪಟ್ಟಿವೆ ಇವು ೯ ನೇ ಪ್ರಕರಣವಿಂದ ೧೬ ನೇ ಪ್ರಕರಣದ ವರೆಗೆ ಬಂದಿವೆ. ಮತ್ತು ಮುಂದಿನ

ಮೂರು ಪ್ರಕರಣಗಳಲ್ಲಿ ಒಕ್ಕಲಿಗರು ಅನುಸರಿಸಬೇಕಾದ ಕೆಲವು ಸಾಮಾನ್ಯ ವಿಷಯಗಳು ಹೇಳಲ್ಪಟ್ಟಿವೆ

ಗ್ರಂಥಕರ್ತರು ೧೯ನೇ ಪ್ರಕರಣದಿಂದ ೨೩ನೇ ಪ್ರಕರಣದ ವರೆಗೆ ಪಾರಮಾರ್ಥ ಕೃಷಿ ಎಂಬ ಹೆಸರಿನಿಂದ ಒಕ್ಕಲಿಗರು ನೀತಿ ಮತ್ತು ಧರ್ಮ ಇವುಗಳ ಸಾಧನೆಯನ್ನು ಹ್ಯಾಗೆ ಮಾಡಿಕೊಳ್ಳಬೇಕೆಂಬುದನ್ನು ವಿವರಿಸಿದ್ದಾರೆ.

ಗ್ರಂಥಕರ್ತರು ಹೋದ ಶತಮಾನದಲ್ಲಿ ಕರ್ನಾಟಕದಲ್ಲಿ ಬಹು ಪ್ರಖ್ಯಾತ ಧಾರ್ಮಿಕ ಪುರುಷರಾಗಿ ಹೋದರು ಆದ್ದರಿಂದ ಇವರು ಐಹಿಕ ಕೃಷಿಗೆ ಎಷ್ಟು ಮಹತ್ವ ಕೊಟ್ಟಿರುವರೋ ಅಷ್ಟೇ ಮಹತ್ವವನ್ನು ಪಾರಮಾರ್ಥ ಕೃಷಿಗೂ ಕೊಟ್ಟಿರುವರು. ಈ ಉಭಯ ಕೃಷಿಗಳು ಸರಿಯಾಗಿ ನಡೆದಾಗಳೇ ಒಕ್ಕಲಿಗರು ಸಂಪದಭಿವೃದ್ಧಿಯನ್ನು ಹೊಂದಿ ಸುಖವಾಗಿ ಬಾಳುವರೆಂಬದು ಅವರ ತತ್ವವಾಗಿದೆ. ಇದು ಸ್ವತಃ ಸಿದ್ಧವಾದ ಮಾತಾಗಿದೆ. ಆದರೆ ಇದನ್ನು ಒಕ್ಕಲಿಗರು ದುರ್ಲಕ್ಷಿಸುವದರಿಂದ ಅವರಿಗೆ ಆರ್ಥಿಕವಷ್ಟೇ ಅಲ್ಲ ಮಾನಸಿಕ ನೈತಿಕ ಹಾನಿಗಳುಂಟಾಗಿ ಅನೇಕ ಬಗೆಯ ಕಷ್ಟನಷ್ಟಗಳಿಗೆ ಗುರಿಯಾಗುತ್ತಲಿರುವರು.

೧೯ ನೇ ಪ್ರಕರಣದಲ್ಲಿ ನಿಸರ್ಗತತ್ವದ ವಿಷಯವು ವಿವೇಚಿಸಲ್ಪಟ್ಟಿದ್ದು ಅದು ಅತ್ಯಂತ ಮಹತ್ವದ ಪ್ರಕರಣವಾಗಿದೆ ಅದರಲ್ಲಿ ಹೇಳಿದಂತೆ ಒಕ್ಕಲಿಗರು ನಡೆದದ್ದಾದರೆ ಅವರು ರೋಗರಹಿತರಾಗಿ ಆರೋಗ್ಯದಿಂದ ಬಾಳುವರು ೨೦ ನೇ ಪ್ರಕರಣದಲ್ಲಿ ಸದಾಚಾರದ ವಿಷಯವು ಹೇಳಲ್ಪಟ್ಟದೆ ಒಬ್ಬ ವ್ಯಕ್ತಿಯ ಮತ್ತು ಗ್ರಾಮದ ಸುಧಾರಣೆಗೋಸ್ಕರ ಶ್ರೀ ಸ್ವಾಮಿಗಳು ಇಲ್ಲಿ ಹೇಳಿದ ಸೂಚನೆಗಳು ಅತ್ಯಂತ ಆದರಣೀಯವಾಗಿರುತ್ತವೆ ಇದರ ಮುಂದಿನ ಮೂರು ಅಧ್ಯಾಯಗಳಲ್ಲಿ ಅವರು ಸ್ವಾನುಭವದಿಂದ ತಿಳಿದುಕೊಂಡ ಶಿವಶರಣರ ಮತ್ತು ವಚನಕಾರರ ಮಾರ್ಗವನ್ನು ಬಹು ಚನ್ನಾಗಿ ವಿವರಿಸಿರುವರು ಅವು ಎಲ್ಲ ಸಮಾಜದವರಿಗೂ ಅನ್ವಯಿಸುವಂಥವು ಇರುತ್ತವೆ ಮೇಲ್ಕಂಡ ಸಂಗತಿಗಳ ಮೇಲಿಂದ ಈ ಗ್ರಂಥವು ಎಷ್ಟು ಮಹತ್ವದ್ದೆಂಬುದು ವಾಚಕರಿಗೆ ಗೊತ್ತಾಗದೆ ಇರದು

ಶ್ರೀ ನಾಗಭೂಷಣ ಘನಮಠದಾರ್ಯ ಮಹಾಸ್ವಾಮಿಗಳವರು ಸುಮಾರು ಒಂದುನೂರು ವರ್ಷಗಳ ಹಿಂದೆ ಜೀವಿಸಿದ್ದರು ಆ ಕಾಲದಲ್ಲಿ ಈಗಿನಂತೆ ಯಾಂತ್ರಿಕ ಕಲೆಯ ಪ್ರಚಾರವಿರಲಿಲ್ಲ ಆದರೂ ಒಕ್ಕಲುತನದ ಮೂಲಭೂತ ತತ್ವಗಳು ಯಾವಾಗಲೂ ಒಂದೇ ಇರುತ್ತವೆ ಅವುಗಳ ಜ್ಞಾನವನ್ನು ಹಿಂದಿನವರು ತಮ್ಮ ಅನುಭವದಿಂದ ಮಾಡಿಕೊಂಡು ಹ್ಯಾಗೆ ಸುಖಪಡುತ್ತಿದ್ದರೆಂಬದು ಈ ಗ್ರಂಥದಿಂದ ಚನ್ನಾಗಿ ತಿಳಿದುಬರುತ್ತದೆ ಹಾಗೂ ನಮ್ಮ ದೇಶದ

ಹೊಲಗಳ ಕ್ಷೇತ್ರ ಮತ್ತು ನಮ್ಮ ಒಕ್ಕಲಿಗರ ಸಾಂಪತ್ತಿಕ ಸ್ಥಿತಿ ಇವುಗಳನ್ನು ಲಕ್ಷಿಸಿದಲ್ಲಿ ಅನುಭವ ಸಿದ್ಧವಾದ ಹಿಂದಿನ ಪದ್ಧತಿಗಳು ಈಗಲೂ ಕೂಡ ಹಿತಕಾರಿಗಳೆಂದು ಕಂಡುಬರದೆ ಇರಲಾರದು

ಈಗಿನ ಸುಧಾರಿಸಿದ ಕಾಲದಲ್ಲಿ ಸರಕಾರದವರು ಹಿಂದುಸ್ತಾನದ ಕೃಷಿಯಲ್ಲಿ ಸಂಶೋಧನ ಮಾಡುವದು ಬಹಳ ಅಗತ್ಯವೆಂದು ಎಣಿಸಿ ಅವರು ಅಲ್ಲಲ್ಲಿ ಪ್ರಯೋಗ ಕ್ಷೇತ್ರಗಳನ್ನು ನಿರ್ಮಿಸತೊಡಗಿದ್ದಾರೆ ಅಲ್ಪಜಲ ಕೃಷಿಯಂತೂ ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ ಇದರಲ್ಲಿ ಯಾವ ಸುಧಾರಣೆಯೂ ಆಗಿರುವದಿಲ್ಲ ಆದರ ಶ್ರೀ ಸ್ವಾಮಿಗಳವರು ಅಲ್ಪ ಮಳೆ ಬೀಳುವ ಪ್ರದೇಶದಲ್ಲಿ ವಿಶೇಷವಾಗಿ ಇದ್ದವರಾಗಿ ಇಲ್ಲಿಯ ಒಕ್ಕಲಿಗರಿಗೆ ಉಪಯುಕ್ತವೆಂದು ಕಂಡು ಬಂದ ಸಂಗತಿಗಳನ್ನು ಈ ಗ್ರಂಥದಲ್ಲಿ ಅವರು ಹೆಚ್ಚಾಗಿ ನಿರೂಪಿಸಿದ್ದಾರೆ. ಈ ಬಗ್ಗೆ ಅವರು ಮಾಡಿದ ಸೂಚನೆಗಳು ಬಹು ಬೆಲೆಯುಳ್ಳವಾಗಿವೆ

ಈ ಮಹತ್ವದ ಗ್ರಂಥದ ಮುಖ್ಯ ಕರ್ತೃಗಳು ಶ್ರೀ ನಾಗಭೂಷಣ ಘನಮಠದಾರ್ಯ ಶಿವಯೋಗಿಗಳು ಎಂಬುದು ತಿಳಿಯಲು ಯಾವ ಪ್ರತ್ಯವಾಯವೂ ಇರುವದಿಲ್ಲ ಅವರು ಒಕ್ಕಲುತನವನ್ನು ಚನ್ನಾಗಿ ಬಲ್ಲವರಾಗಿ ಅವರು ಅದರ ಜ್ಞಾನವನ್ನು ಒಕ್ಕಲಿಗರಿಗೆ ಮಾಡಿಕೊಡುತ್ತಿದ್ದ ಸಂಗತಿಯನ್ನು ಅವರ ಶಿಷ್ಯರಾದ ಸಿದ್ಧರಾಮಪ್ಪ ಕುನ್ನಾಳ ಇವರು ಈ ಗ್ರಂಥದಲ್ಲಿ ಒಪ್ಪಿಕೊಂಡು ಅವರ ಸಲಹೆಯಿಂದಲೇ ತಾವು ಈ ಗ್ರಂಥವನ್ನು ಬರೆದದ್ದನ್ನು ಇದರಲ್ಲಿ ಅನೇಕ ಕಡೆಗೆ ಲಿಖಿಸಿರುವರು ಈ ಸಿದ್ಧರಾಮಪ್ಪನವರಾದರೂ ಒಕ್ಕಲುತನದಲ್ಲಿ ಬಹು ಜಾಣರಾಗಿದ್ದು ಅವರೂ ತಮ್ಮ ಸೂಚನೆಗಳನ್ನು ಈ ಗ್ರಂಥದಲ್ಲಿ ಸೇರಿಸಿದ ಹಾಗ ತೋರುತ್ತದೆ ಗ್ರಂಥದ ಮೂಲ ಕರ್ತೃಗಳು ಘನಮಠದಾರ್ಯರೆಂದು ಭಾವಿಸಿ ಮೇಲ್ಕಂಡ ಉಭಯತರು ಕಾಲಕಾಲಕ್ಕೆ ನೆರಿಕೊಂಡು ಈ ಗ್ರಂಥವನ್ನು ಸಿದ್ಧಪಡಿಸಿದರೆಂದು ತಿಳಿಯುವದು ಹೆಚ್ಚಿಗ ಸಯುಕ್ತಿಕವಾಗಿದೆ

ಶ್ರೀ ಘನಮಠದಾರ್ಯರು ಹೋದ ಶತಮಾನದಲ್ಲಿ ಕರ್ನಾಟಕದಲ್ಲಿ ಬಹು ಪ್ರಸಿದ್ಧ ಧಾರ್ಮಿಕ ಪುರುಷರಾಗಿದ್ದು ಅವರು ಮಾಡಿದ ಪದಗಳು ಈಗಲೂ ಬಹು ಪ್ರಸಿದ್ಧವಾಗಿವೆ ಈ ಪದಗಳು ಅತ್ಯಂತ ಭಕ್ತಿಪೂರಿತವಾದವುಗಳಿದ್ದು ಬಹು ಚಿತ್ತಾಕರ್ಷಕವಾಗಿವೆ ಅವರು ಶಿವಾನುಭವಿಗಳಾಗಿದ್ದಂತೆಯೇ ವಿದ್ವಾಂಸರಾಗಿದ್ದರು. ಶಿವಶರಣರ ವಚನ ಗ್ರಂಥಗಳಲ್ಲಿ ನಿರೂಪಿತವಾದ ತತ್ವಗಳನ್ನು ಅವರು ಬಹು ಚನ್ನಾಗಿ ಅರಿತವರಾಗಿದ್ದರು ವಚನಕಾರರ ಕಾಯಕದ ಅರಿವು ಅವರಿಗೆ ಬಹು ಚನ್ನಾಗಿ ಇತ್ತು. ಆದ್ದರಿಂದ ಅವರು ಕೃಷಿಜ್ಞಾನವು ಕಡಿಮೇ ತರದ್ದೆಂದು ಎಂದೂ ತಿಳಿಯಲಿಲ್ಲ ಅವರು

"ಬಾದಶಹ ರೈತರು" ಎಂದು ಒಕ್ಕಲಿಗರನ್ನು ಈ ಗ್ರಂಥದಲ್ಲಿ ಪದೇಪದೇ ಸಂಬೋಧಿಸುತ್ತಾರೆ. ಹೀಗೆ ಶಿವಶರಣರ ಮಾರ್ಗದಲ್ಲಿ ನಡೆದ ಶ್ರೀ ಘನಮಠದಾರ್ಯರು ಎಲ್ಲರಿಗೂ ಅನುಕರಣೀಯರಾಗಿರುವರು

ಸಿದ್ಧರಾಮಪ್ಪ ಕುನ್ನಾಳ ಇವರು ಶ್ರೀ ಸ್ವಾಮಿಗಳವರ ಚರಿತ್ರೆಯ ಬಗ್ಗೆ ಕೆಲವು ಸಂಗತಿಗಳನ್ನು ಈ ಗ್ರಂಥದಲ್ಲಿಯೇ ಹೇಳಿರುವರು ಅವುಗಳ ಮೇಲಿಂದ ತಿಳಿದುಬರುವದೇನಂದರೆ:--

ಶ್ರೀ ಸ್ವಾಮಿಗಳು ಮೊದಲು ಆಂಧ್ರ ದೇಶದವರು ಅವರ ಜನ್ಮಸ್ಥಳವು ನಿಜಾಮ ಇಲಾಖೆಯಲ್ಲಿ ಜಿಲ್ಹಾ ಅತ್ರಾಫಬಲ್ದಾ, ಪಟ್ಲೂರು ತಾಲೂಕು, ದೋರ್ವಾಡ ಎಂಬ ಗ್ರಾಮವಾಗಿದೆ ಅವರು ಅಲ್ಲಿ ೧೮೫೪ ಇಸ್ವಿಯಲ್ಲಿ ಹುಟ್ಟಿದರು ಇವರ ತಂದೆಯ ಹೆಸರು ವೀರಣ್ಣ ಮತ್ತು ತಾಯಿಯ ಹೆಸರು ವೀರಾಂಬೆ ಅವರು ತಮ್ಮ ೭ ನೇ ವರ್ಷದ ವಯಸ್ಸಿನಲ್ಲಿಯೇ ದೀಕ್ಷಾಬದ್ಧರಾಗಿ ಪಾರಮಾರ್ಥ ಸಾಧನೆಯಲ್ಲಿ ತೊಡಗಿದರು ಮುಂದೆ ಅವರು ೧೪ ವರ್ಷಗಳ ವರೆಗೆ ಭಕ್ತಿ ವೈರಾಗ್ಯಯುತರಾಗಿ ಜ್ಞಾನ ಸಂಪಾದನೆಯನ್ನು ಮಾಡುತ್ತ ಗೌಪ್ಯವಾಗಿ ಕಾಲಕಳೆದರು ತರವಾಯ ಅವರ ಮನಸ್ಸಿನಲ್ಲಿ ಭಕ್ತರನ್ನು ಉದ್ಧಾರ ಮಾಡಬೇಕೆಂಬ ವಿಚಾರವು ಬಂದು ಜನರಿಗೆ ಬೋಧಿಸುತ್ತ ಕಾಲಕಳೆಯಹತ್ತಿದರು ಅವರು ಅತ್ಯುತ್ತಮ ಕವಿಗಳಾಗಿದ್ದರು ಆದ್ದರಿಂದ ಅವರು ಈ ಕಾಲದಲ್ಲಿ ಅಸಂಖ್ಯ ಪದ್ಯಗಳನ್ನು ರಚಿಸಿದರು ಅವರು ಬಸವಾದಿ ಪ್ರಮಥರ ಬಗ್ಗೆ ಬಹು ಭಕ್ತಿಭಾವವುಳ್ಳವರಾಗಿದ್ದರು ಪ್ರಮಥರ ವಿಚಾರಗಳೇ ಅವರು ಮಾಡಿದ ಪದಗಳಲ್ಲಿ ಪ್ರತಿಬಿಂಬಿತವಾಗಿರುತ್ತವೆ ಈ ಪ್ರಕಾರ ಅವರು ಸಮಾಜ ಸೇವೆಯನ್ನು ೩೦ ವರ್ಷಗಳ ವರೆಗೆ ಮಾಡಿ ೧೮೮೪ ರಲ್ಲಿ ಲಿಂಗೈಕ್ಯರಾದರು

ಅವರು ವಿಶೇಷವಾಗಿ ಕಲಬುರ್ಗಿ ರಾಯಚೂರ ಕೊಪ್ಪಳ ವಿಜಾಪುರ ಈ ಜಿಲ್ಹೆಗಳಲ್ಲಿ ಸಂಚರಿಸುತ್ತಿದ್ದರು ಅವರ ಬಗ್ಗೆ ಅನೇಕ ದಂತಕಥೆಗಳು ಈ ಭಾಗಗಳಲ್ಲಿ ಈಗ್ಗೆಯೂ ಪ್ರಚಲಿತವಾಗಿರುತ್ತವೆ ಕಲಬುರ್ಗಿ ಜಿಲ್ಹೆಯಲ್ಲಿ ಚಿಂಚೋಳಿ ಎಂಬ ಗ್ರಾಮದಲ್ಲಿ ಬಸವ ಪುರಾಣದ ಮೆರವಣಿಗೆಯ ಕಾಲದಲ್ಲಿ ಬಂದ ತಡೆಗಳನ್ನು ಅವರು ಪರಿಹರಿಸಿದರು. ಮಕ್ತಲ್ ತಾಲೂಕು ನೀರಡಗುಂಭ ಗ್ರಾಮದಲ್ಲಿ ಬಂದು ಅಲ್ಲಿ ಶಾಂತವೀರಪ್ಪ ಗೌಡರ ತೋಟದಲ್ಲಿ ಕೆಲಕಾಲವಿದ್ದರು ಮುಂದೆ ಯಾತಗಿರಿ ತಾಲೂಕು ಬಾಡ ಎಂಬ ಗ್ರಾಮದಲ್ಲಿದ್ದರು. ಅಲ್ಲಿಂದ ರಾಯಚೂರು ತಾಲೂಕು ಗೂಗಲ ಗ್ರಾಮದಲ್ಲಿ ಕೃಷ್ಣಾ ನದೀ ತಟಾಕದಲ್ಲಿರುವ ಪ್ರಭುದೇವರ ದೇವಾಲಯದಲ್ಲಿ ಕೆಲಕಾಲವಿದ್ದರು. ಆಮೇಲೆ ದೇವದುರ್ಗ ತಾಲೂಕು ಜಾಲೀಹಳ್ಳಿ ಮತ್ತು ಲಿಂಗಸುಗೂರು

ತಾಲೂಕು ಸಂತೇಕೆಲ್ಲೂರು ಇಲ್ಲಿಯೂ ಇದ್ದದ್ದು ತಿಳಿಯುತ್ತದೆ ವಿಜಾಪುರ ಜಿಲ್ಲಾ ಸಿಂದಗಿ ತಾಲೂಕು ಬೆಕ್ಕಿನಾಳು ಹಾಗೂ ಹುನಗುಂದ ತಾಲೂಕು ಇಳಕಲ್ಲು, ಹುನಗುಂದ ಮುಂತಾದ ಕಡೆಗೂ ಆಗಿಂದಾಗ್ಗೆ ಸಂಚರಿಸುತ್ತಿದ್ದರು. ಈ ಪ್ರಕಾರ ಈ ಪ್ರಾಂತದಲ್ಲೆಲ್ಲ ಅರ್ಧಶತಮಾನ ಕಾಲದ ವರೆಗೆ ಜನರಲ್ಲಿ ನೀತಿ, ಸದಾಚಾರ, ಧರ್ಮಗಳನ್ನು ಬೋಧಿಸುತ್ತ, ಎಲ್ಲರಿಗೂ ಬಹು ಪೂಜ್ಯ ರಾದರು

ಅವರು ಮುಖ್ಯವಾಗಿ ಮೇಲ್ಕಂಡ ಜಿಲ್ಲೆಗಳಲ್ಲಿ ಕಾಲ ಕಳೆದರೂ ಅವರು ದೂರ ದೂರ ಪ್ರಾಂತಗಳಲ್ಲಿ ದೇಶಾಟನ ಮಾಡಿದ ಹಾಗೆ ಕಂಡು ಬರುತ್ತದೆ. ಅವರು ಹೋದ ಹೋದಲ್ಲಿ ಜನರು ಅವರನ್ನು ಬಹುಭಕ್ತಿಯಿಂದ ಕಾಣುತ್ತಿದ್ದರು ಅವರಿದ್ದ ಕಾಲದಲ್ಲಿ ಮೈಸೂರಲ್ಲಿ ಕೃಷ್ಣರಾಜ ಒಡೆಯರು ಆಳುತ್ತಿದ್ದರು ಸ್ವಾಮಿಗಳವರು ಒಮ್ಮೆ ಮೈಸೂರು ಸೀಮೆಯಲ್ಲಿ ಬಂದಾಗ ಕೃಷ್ಣರಾಜರು ಅವರನ್ನು ಕಾಣಲು ಬಯಸಿದರು ಆಗ ಸ್ವಾಮಿಗಳವರು ರಾಜರಿಗೆ ಕೆಳಗೆ ಕಾಣಿಸಿದಂತೆ ಷಟ್ಪದಿಗಳನ್ನು ರಚಿಸಿ ಕಳಿಸಿದರು. ನನ್ನ ಗ್ರಂಥಸಂಶೋಧನ ಕಾಲದಲ್ಲಿ ಇವು ನನಗೆ ಅಕಸ್ಮಾತ್ತಾಗಿ ದೊರೆದವು ಮತ್ತು ಅವುಗಳನ್ನು ನಾನು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇನೆ ಈ ಪದ್ಯಗಳು ಕೆಲವೆಡೆ ಗಳಲ್ಲಿ ಅಶುದ್ಧವಾಗಿವೆ ಆದರೂ ವಾಚಕರು ಇದನ್ನು ಲಕ್ಷಿಸದೆ ಅವುಗಳಲ್ಲಿ ರುವ ಭಾವವನ್ನು ಮಾತ್ರ ಅರಿತುಕೊಳ್ಳಬೇಕೆಂದು ನನ್ನ ವಿನಂತಿ ಇದೆ ಈ ಪದ್ಯಗಳಲ್ಲಿ ವಚನಕಾರರ ಉಜ್ವಲ ವೃತ್ತಿಯು ಹ್ಯಾಗೆ ಹೊರಸೂಸುತ್ತದೆಂಬ ದನ್ನು ವಾಚಕರು ಅರಿಯಬಹುದಾಗಿದೆ ಇವುಗಳ ಮೇಲಿಂದ ಘನಮಠದಾರ್ಯರು ಎಂಥ ಉದಾತ್ತ ಮತ್ತು ಉಚ್ಚವೃತ್ತಿಯುವರೂ ನಿರಿಚ್ಛೆಯುವರೂ ಆಗಿದ್ದರೆಂಬುದು ಚನ್ನಾಗಿ ವ್ಯಕ್ತವಾಗುತ್ತದೆ

## ವಾರ್ಧಿಕ.

ನೀನೆಲ್ಲಿ ನಿನ್ನ ನಾಡೆಲ್ಲಿ ಕೇಳಿಲೆ ರಾಜ
ನಾನೆಲ್ಲಿ ನಾನಿರುವ ಸುಡುಗಾಡು ರಾವೆಲ್ಲಿ
ಏನೆನ್ನನಾಶೆಯೆಂಬ ಪಾಶದಿ ಕಟ್ಟಿಹೆಯೋ, ಕಪ್ಪರನು ಕಟ್ಟು ರಾಜಾ ॥ ೧ ॥

(ಟೀಪುಃ- ಮೊದಲಿನ ೩ ಓಳಿಗಳು ಹೋಗಿವೆ)

ಪರಶಿವಾನಂದ ಏಕಾಂತ ಗವಿಯೊಳಗಿರುವ
ಪರಮಶಿವಯೋಗಿಯೆಂಬೀ ಹುಲಿಗೆ ಪೇಳ್ ನೃಪತಿ
ಇರದೆಯಾಶಿಸಿ ಭಕ್ತಿ ಬಲೆಯು ನೀನುರೆ ಹಾಕದಿರೆ, ಗೆಲಿವ ಪರಿಯದೆಂತೋ ?

ವರ ರಸನೆಯೊಳು ಮಂತ್ರ, ಘ್ರಾಣದೊಳು ಮಾರುತನು
ವರರೂಪವೀ ದೇಹದೊಳಗಿರ್ಪ ತೆರದಿಂದೆ
ಧೊರೆಯೆ ಭೋಗದೊಳಿದ್ದು ಇಲ್ಲದಿಹ ಯೋಗೀಶಗೆಣೆಯಾರು ನೀನರಿಯೆ ಯಾ
॥ ೨ ॥

ಮತ್ತೆ ಸಲೆ ರುದ್ರಗಣ ದೇವಗಣ ಪ್ರಮಥಗಣ
ಭಕ್ತಗಣಗಳು ನಿನಗೆ ಹರಸಿದರು, ಸತತಗೋತ್ರ
ರೋತ್ತರವು ಧೊರೆತನ ಗುಸ್ಸೈಶ್ವರ್ಯ ಭೋಗಗಳು ವೃದ್ಧಿಸುತ್ತಿರಲೆನ್ನುತೆ
ಮತ್ತವರು ಜನ್ಮಜನ್ಮಾಂತರದಲಿದುವೆ ದೊರೆ
ಯುತ್ತಿರಲೆಂದು ಹರಿಸಲಿ ಮತ್ತೆ ನನಗೆ ಹರಿ
ಸುತ್ತಿರಲಿ, ಸರ್ವಕಾಲದಿ ಕುಂಬಳದ ಬುರುಡಿ ಕೈಯ್ಯ ಬಿಡದಿರಲೆನ್ನುತ ॥ ೩ ॥

ಧರೆಯೊಳಗೆ ಮೆರೆವ ಮೈಸೂರಾಧಿಪನೆ ಕೇಳು
ಬರಲೆಂತು ನಿನ್ನಲ್ಲಿ? ರಥ ಹಯಾನೆಗಳಿಲ್ಲ
ಮೆರೆವ ಪಲ್ಲಕ್ಕಿಲ್ಲ. ಹೊರುವಾಳು ಮುನ್ನಿಲ್ಲ ಬಲು ಪುರಾತನದಿಂದಿಹ
ಹಿರಿಯೆತ್ತು ನನಗಿರುವದರಿಂದ ಬರಲಾರೆ.
ಕರಿಸುವದು ನಿನಗುಚಿತವಲ್ಲ ಪೋಣ್ ಬೇಡ ಬಿಡು
ಬರಿದೇತಕೀ ತವಕ? ಮನದೊಳುರುಭಕ್ತಿಯಿಂ ಪಿಡಿದಲ್ಲಿ ಕಾಣೆನ್ನನು ॥ ೪ ॥

ನಿರುಪಾಧಿ ಯೋಗಿಯನು ಬಹಿರಂಗ ಯೊಜನೆಯು
ನರಿದು ವಿರಚಿಸಿ ನೀನು ಕರಿಸುವದು ತರವಲ್ಲ
ಅರುಹುವೆನರಸ ನೀನು ಮೆರೆವ ಮಾನಸನಾದೆ ಸಿರಿಭೋಗ ದೊರೆತನವಲಿ
ಹರಹರಿ ಬ್ರಹ್ಮಪದ ತೃಣಕೆ ಸಮಗಂಡಿರುವ
ಪರಮ ಪಂಚಾಕ್ಷರುಚ್ಚರಣೆಯೊಳಗಿರುತಿರುವ
ವರಲಿಂಗ ಜಲಧಿಯೊಳು ಸತತ ಮುಳುಗಿರ್ಪವಗೆ ನರರ ಹಂಗೇನು ನೃಪತೀ
॥ ೫ ॥

ಪರಮ ಕೈಲಾಸದೊಳು ಪರಶಿವನು ಶರಣರನು
ಕರೆದು ಕೇಳಿದನಾಗ ಹೋಗಿ ಧರೆಯೊಳಗಿನ್ನು
ಹರಭಕ್ತರಿಗೆ ಕಂದನಾಗಿ, ಷಟ್‌ಸ್ಥಲ ಮಾರ್ಗವರುಹಿ ಬರುವವರಾರೆನೆ
ಶರಣರೆಲ್ಲರು ತಮ್ಮ ಚರಣ ಧೂಳಿಯ ತೆಗೆದು
ಇರದೊಂದು ಗೊಂಬೆಯನು ಕರುಣದಿಂ ರಚಿಸಿದರು
ವರನಾದ ಬಿಂದು ಕಳೆ ತುಂಬ ಲೊಡನಾ ಶಿಸುವು ಓಂ ಮಹಾಂತೇಂದಿತಾಗ
॥ ೬ ॥

ಆಗ ಪರಶಿವಮೂರ್ತಿ ಶಿಸು ಕಂಡು ನಸುನಕ್ಕ
ನೀಗಿದೇಂ ಸೋಜಿಗವು? ಮಗುವೆಂತು ಜನಿಸಿತೆನೆ
ನಾಗಭೂಷಣನೆಂದು ಚರಣಧೂಳಿಯ ತೆಗೆದು ಗೊಂಬೆಯೊಂದನು ಗೈದೆವು
ರಾಗದಿ ಬಳಿಕ ನಾದಬಿಂದು ಕಳೆ ತುಂಬಿದೆವು
ಕೂಗಿತಾಗದು 'ಅ ಉ ಮ' ಎಂಬ ನಾಮವನೆನಲು
ಯೋಗಿ ಪರಶಿವ ಕೇಳಿ 'ಜೋ ಪರಬ್ರಹ್ಮ ಶಿಸು' ಬಾರೆಂದು ಪೆಸರಿಟ್ಟನು ॥ ೭ ॥

ಪರಶಿವನು ಹರಭಕ್ತ ಹರಶರಣರೊಂದಾಗಿ
ಪರಮ ಪಶ್ಚಿಮಚಕ್ರ ಪಟ್ಟವನು ಕಟ್ಟಿದರು
ಹರಸಿದರು ಸಿಂಹಾಸನಾಧೀಶನಾಗೆಂದು ಮುದವೆರಸಿ ಹರಶರಣರು
ಧರೆಯೊಳಗೆ ಹೋಗಿನ್ನು ಚರರೂಪದಲಿ ಮೆರೆದು
ವರಧರ್ಮವನ್ನರುಹಿ ಕರಣ ಗುಣಗಳ ಜಯಿಸಿ
ತರಿದಟ್ಟಿ ಮಲಮೂರ ನಾರು ವೈರಿಯ ಗೆದ್ದು, ತರುಳ ಬಾರೆಂದೊರೆದರು ॥ ೮ ॥

ನಮ್ಮಪ್ಪ ಪರಶಿವನು ನಮ್ಮವ್ವ ನಮ್ಮಪ್ವೆ
ನಮ್ಮಕ್ಕ ನಾಗಮ್ಮನಲ್ಲದೆ ಮಹಾದೇವಿ
ನಮ್ಮಮ್ಮನಿವರು ಕದಳಿಯ ಮೊಕ್ಕ ಬೈಲೊಡನೆ ಬೈಲಾಗಿ ನೆರೆಮೆರೆದರು
ನಮ್ಮಣ್ಣ ಷಣ್ಮುಖನು ಬಳಗವಾ ಗಣಗಡಣ
ನಮ್ಮ ಪ್ರಾಚೀನರರುವತ್ತುಮೂವರು ಶರಣ
ರೆಮ್ಮನ್ನ ಪೋಗಗೊಡರೆಲೆ ರಾಜ ನಿನ್ನೆಡೆಗೆ ಸ್ವಾತಂತ್ರ್ಯವಿಲ್ಲವೆನಗೆ ॥ ೯ ॥

ದೃಢಭಕ್ತ ಮೇದಾರ ಚನ್ನಯ್ಯನಂಬಲಿಯು
ಮೃಡಗೆ ಬಲು ಸವಿಯಾಯ್ತು ಸವಿದನಲ್ಲದೆಯುಳಿದ
ಕಡುಧನಿಕ ಪೊಡವಿಪರ ಸವಿಯ ಮೃಷ್ಟಾನ್ನವೆನ್ನೊಡೆಯ ಪರಶಿವನೊಲ್ಲನು
ಪೊಡವಿಪತಿ ಕೇಳಿನ್ನ ಹಡದ ತಾಯುಮ್ಮನ್ವೆ
ಬಡ ಮಗನ ಸಲಹುವಳು ಜಡಮಾಲವಿರದಿರಲು
ಬಡಿದೆನಗೆ ಕುಡಿಸುವಳು ಚರತೀರ್ಥ ಶೇಷವೇ ಎಲ್ಲಾಗೆ ಸವಿಯೆನ್ನುತಾ ॥ ೧೦ ॥

ನೀರೊಳಿಹ ಜೀವಿಗಳ ಬಯಲೊಳಗಿಡುವ ತೆರದಿ
ಊರೊಳಿಹ ಮೃಗಗಣವನಡವಿಗಟ್ಟುವ ತೆರದಿ
ಘೋರಪಡಿಸುವದೆನ್ನನುಚಿತವಲ್ಲೆಲೆ ರಾಜ ಮನದೊಳಗೆ ತಿಳಿದು ನೋಡು
ಬಾಲಬ್ರಹ್ಮಿಯು ನಾನು, ಬಳಸಿ ಬ್ರಹ್ಮಿಯು ನೀನು.
ಹೇಳಲೇಂ ನಾನಿನ್ನು ತಿಳುವಳಿಕೆಯುಳ್ಳವಗೆ
ಮೇಲೆ ಮಿಗೆ ಸುಖವಿರುವದೊಳಗೇನು ಸುಖವಿಲ್ಲ ವೈಸೂರು ವೈಚೂರಿಯು
॥ ೧೧ ॥

ಅರಸ ಕೇಳ್ ನೀನೆನ್ನ ಮೊರಸದಿರು ಮೋದದಿಂ.
ಪರಶಿವಾಜ್ಞೆಯನಾಂತು ಮೆರೆಯುವದು ತರವಲ್ಲ
ಮೆರೆಯುವಡೆ ಛತ್ರಚಾಮರಗಳೆಂಬಾ ತಟ್ಟು ಕಸಬರಿಗೆಗಳು ಸುಖಪ್ರದಗಳೆಂತು?
ಧರೆಯ ಭೋಗಿವನೊಲ್ಲೆ ಪರರ ಭೋಗವನೊಲ್ಲೆ.
ಗುರುಬಸವ ಪ್ರಮಥಗಣ ಮೆರೆಯಬೇಡೆನ್ನುವರು
ಹೊರಗೆ ರಂಜನೆ ಬೇಡ. ಗುಪ್ತಭಕ್ತಿಯ ಮಾಡಿ ಮುಕ್ತಿ ಪಡೆವುದು ರಾಜನೇ ॥೧೨॥

ಮೂರು ತೆರೆನಾಗಿರುವ ಧೀರ ಶಿವಯೋಗೀಶ
ಮಾರಹರ ಮೊದಲಾದ ಯಾರ ಹಂಗಿಗನಲ್ಲ
ತೋರುವೀ ಜಗದ ಸುಖವೈಭವಂಗಳನೆಲ್ಲ ತೃಣಕೆ ಸರಿ ಎಂದರಿವನು.
ಭೂರಮಣ ಕೇಳೆನ್ನ ಕರಿಸಿ ಘಾಸಿಪುದೇಕೆ?
ತೋರ ಮುತ್ತನು ಬೆಳ್ಳಿ ಭಂಗಾರಗಳ ನೊಲ್ಲೆ
ಬೇರೆ ಕುಂಬಳಬುರುಡಿಯಂ ಕಳುಹು ಮನವೊಪ್ಪಿದೊಡೆ ಗುಪ್ತಭಕ್ತಿಯಿಂದ ॥೧೩॥

ನಾಗಭೂಷಣ ಘನಮರದಾರ್ಯರು ಸಂತೆ ಕೆಲ್ಲೂರು ಗ್ರಾಮದಲ್ಲಿರುವಾಗ್ಗೆ ದೋರ್ವಾಡಿ ಮಠಾಧಿಕಾರಕ್ಕೆ ಒಳಪಟ್ಟ ಘನಲಿಂಗ ಚರವರ್ಯ ಚನ್ನವೀರ ಸ್ವಾಮಿಗಳೆಂಬವರು ಲಿಂಗೈಕ್ಯರಾದದ್ದನ್ನು ಕೇಳಿದರಂತೆ. ಆಗ ಅವರು ಅಲ್ಲಿರುವ ಜನರಿಗೆ ನಾವೂ ಲಿಂಗೈಕ್ಯರಾಗುವೆವೆಂದು ತಿಳಿಸಿ ಅಂಗಳದಲ್ಲಿ ಸಂಚರಿಸುವಲ್ಲಿ ಅದರ ಪಾವಟಿಗೆಯನ್ನು ಹತ್ತಿ ವೈರಾಗ್ಯದಿಂದ "ಶಿವನು ಅಲ್ಲುಂಟು, ಇಲ್ಲಿಲ್ಲವೇ?" ಎಂದು ತಮ್ಮ ಕಂಬಳಿಯನ್ನು ಅಲ್ಲಿಯೇ ಹಾಸಿ ಕುಳಿತು ತಮ್ಮ ಕರದಲ್ಲಿರುವ ಇಷ್ಟಲಿಂಗದಲ್ಲಿ ದೃಷ್ಟಿಯನ್ನು ಇಟ್ಟು ಶಿವನಾಮೋಚ್ಚಾರವನ್ನು ಉಚ್ಚರಿಸುತ್ತ ಅಲ್ಲಿಯೇ ಲಿಂಗೈಕ್ಯರಾದರೆಂದು ತಿಳಿಯುತ್ತದೆ ಅವರ ಸಮಾಧಿಯು ಅದೇ ಗ್ರಾಮದಲ್ಲಿಯೇ ಇದೆ ಈಗಲೂ ಬಹುಜನರು ಆದಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಾರೆ

ಈ ಕೃಷಿಜ್ಞಾನ ಪ್ರದೀಪಿಕೆ ಗ್ರಂಥವನ್ನು ಪೂರ್ತಿಗೊಳಿಸಿದ್ದು ೧೮೭೫ನೇ ಇಸ್ವಿಯಲ್ಲಿ ಎಂದು ಈ ಗ್ರಂಥದ ಅಂತ್ಯದಲ್ಲಿ ಸಿದ್ಧರಾಮಪ್ಪ ಕುನ್ನಾಳ ಇವರು ಬರೆದಿರುವರು. ಈ ಗ್ರಂಥವನ್ನು ಬರೆಯುವ ಕಾಲಕ್ಕೆ ೧೮೭೬ ನೇ ಇಸ್ವಿಯ ಭಯಂಕರ ಕ್ಷಾಮವು ಇದ್ದ ಹಾಗೆ ತೋರುತ್ತದೆ ಯಾಕಂದರೆ ಇದರಲ್ಲಿ ಈ ಕ್ಷಾಮದ ಉಲ್ಲೇಖಗಳು ಅನೇಕ ಕಡೆಗೆ ಬಂದಿವೆ ಈ ಗ್ರಂಥವನ್ನು ಬರೆಯ ಲಿಕ್ಕೆ ಕೆಲವು ವರ್ಷಗಳು ಹತ್ತಿದ ಹಾಗೆ ತೋರುತ್ತದೆ.

ಈ ಗ್ರಂಥವನ್ನು ಮೊದಲು ಪ್ರಕಟಿಸಿದವರು ರಾ. ರಾ ಪಿ ಎಮ್ ದಾನಯ್ಯಾ ಬಿಜಾಪ್ಪುರ ಮಾಸ್ತರ ಚೇಗುಂಟಿ ಇವರು ಇದ್ದಾರೆ. ಇವರು ಕಲಬುರ್ಗಿ ಜಿಲ್ಹಾ ಶಹಾಪುರ ತಾಲೂಕ ದೇವರ ಹಾಲಗೇರಿಯಲ್ಲಿ ದೊರೆದ ಒಂದು ಪ್ರತಿಯ ಸಹಾ

ಯದಿಂದ ಈ ಗ್ರಂಥವನ್ನು ೧೯೧೭ ನೇ ಇಸ್ವಿಯಲ್ಲಿ ಅಚ್ಚು ಹಾಕಿಸಿದರು. ಮುಂದೆ ಅವರು ಇದನ್ನು ಪುನಃ ಅಚ್ಚು ಹಾಕುವ ಬಗ್ಗೆ ನನ್ನ ಕೂಡ ಪತ್ರವ್ಯವಹಾರ ನಡಿಸಿ ತಾವು ಸಿದ್ಧಪಡಿಸಿದ ಬ್ಲಾಕುಗಳನ್ನು ಸಹ ನನ್ನ ಕಡೆಗೆ ಕ್ರಯಕ್ಕೆ ಕಳಿಸಿ ಕೊಟ್ಟರು. ಇದೊಂದು ಉಪಯುಕ್ತ ಗ್ರಂಥವೆಂದು ನನಗೆ ತೋರಿದ್ದರಿಂದ ಇದನ್ನು ಅಚ್ಚು ಹಾಕಲು ಉಪಕ್ರಮಿಸಿದೆನು.

## ಶ್ರೀಮಂತ ದೊಡ್ಡಪ್ಪ ಅಣ್ಣಾ ನಾಗರಾಳ
## ಮು॥ ಹುನಗುಂದ ಇವರ ಸಹಾಯ

ತರುವಾಯ ಈ ಗ್ರಂಥದ ಬೇರೊಂದು ಪ್ರತಿಯು ಶ್ರೀಮಂತ ದೊಡ್ಡಪ್ಪ ಅಣ್ಣಾ ನಾಗರಾಳ ಮು॥ ಹುನಗುಂದ ಇವರಲ್ಲಿ ಇರುವದೆಂದು ನನಗ ತಿಳಿಯಿತು. ಇದನ್ನು ಕಳಿಸಿಕೊಡಲು ಅವರಿಗೆ ಸೂಚಿಸಿದ ಕೂಡಲೆ ಅವರು ಅದನ್ನು ನನ್ನ ಕಡೆಗೆ ಕಳಿಸಿಕೊಟ್ಟದ್ದಲ್ಲದೆ ಈ ಕಾರ್ಯಕ್ಕೋಸ್ಕರ ಹಣದ ಸಹಾಯವನ್ನು ಸಹ ಮಾಡಲು ಒಪ್ಪಿ ನನ್ನ ಕಡೆಗೆ ೫೦೦ ರೂಪಾಯಿ ಗಳನ್ನು ಕಳಿಸಿಕೊಟ್ಟರು. ಇದಕ್ಕೋಸ್ಕರ ನಾನು ಅವರಿಗೆ ಬಹಳ ಋಣಿ ಯಾಗಿದ್ದೇನೆ. ಶ್ರೀಮಂತ ದೊಡ್ಡಪ್ಪನವರು ಇಂಥ ಉಪಯುಕ್ತ ಕಾರ್ಯ ಗಳಿಗೆ ಯಾವಾಗಲೂ ದೇಣಿಗೆಗಳನ್ನು ಕೊಡಲು ಮುಂದಾಗುವವರಾಗಿದ್ದು ಅವರು ಹೀಗೆ ಈ ದೊಡ್ಡ ಗ್ರಂಥವನ್ನು ಪ್ರಕಟಿಸಲು ನನಗೆ ಸಹಾಯ ಮಾಡಿ ದ್ದಕ್ಕೆ ನಾನು ಅವರ ಆಭಾರವನ್ನು ಅತ್ಯಂತವಾಗಿ ಮನ್ನಿಸುತ್ತೇನೆ.

ವಿಜಾಪುರ
ತಾ॥ ೭-೫-೩೬.

ಫ. ಗು. ಹಳಕಟ್ಟಿ.
ಸಂಪಾದಕ

# ಅನುಕ್ರಮಣಿಕೆ.


| ಪ್ರಕರಣ ಸಂಖ್ಯೆ | ೧ನೆಯ ಭಾಗ. | |
|---|---|---|
| | **ಪೀಠಿಕೆ** | ೧—೧೭ |
| ೧ | ಕೃಷಿಕರಾದ ಯಜಮಾನರಿಗೆ ಹೇಳುವ ನೀತಿಯು | ೧೮—೨೪ |
| | ಎತ್ತುಗಳ ಆರೈಕೆ | ೧೯—೨೦ |
| | ಒಕ್ಕಲುತನ ಸಾಮಾನುಗಳ ವ್ಯವಸ್ಥೆ | ೨೦—೨೨ |
| | ಹೊಲಗಳ ಆರೈಕೆ | ೨೨—೨೩ |
| | ಸೇವಕರ ವ್ಯವಸ್ಥೆ | ೨೩—೨೪ |
| ೨ | ನಟ್ಟು ಕಡಿಸುವದು | ೨೫—೩೧ |
| ೩ | ಹೊಲಗಳಲ್ಲಿ ಒಡ್ಡು ಬಲಿಸುವ ಪ್ರಯೋಜನವು | ೩೨—೪೨ |
| ೪ | ಗೊಬ್ಬರವನ್ನು ಹಾಕುವದು | ೪೩—೪೮ |
| ೫ | ಹೊಲಗಳನ್ನು ಹೂಡಿ ಹರಗುವದು | ೪೯—೫೩ |
| ೬ | ನೆಲ್ಲು ಬಿತ್ತುವದು | ೫೪—೬೪ |
| ೭ | ಮುಂಗಾರಿಯ ಧಾನ್ಯಗಳು | ೬೫—೭೩ |
| | ನವಣೆ | ೬೮—೬೯ |
| | ಶೇಂಗದ ಬೀಜ ಬಿತ್ತುವ ರೀತಿಯು | ೬೯—೭೦ |
| | ಎರಿಯಲ್ಲಿ ಮೆಣಸಿನ ಗಿಡಗಳನ್ನು ಹಚ್ಚುವ ರೀತಿಯು | ೭೦—೭೧ |
| | ಬಳ್ಳೊಳ್ಳಿ | ೭೧—೭೩ |
| ೮ | ಹತ್ತಿಯು ಮತ್ತು ಹಿಂಗಾರಿ ಮುಂಗಾರಿಗಳ ಮಧ್ಯದ ಬೆಳೆಯು | ೭೫—೯೬ |
| | ಹತ್ತಿ ಮೊದಲಾದ ಹಿಂಗಾರಿಯ ಸರ್ವ ಧಾನ್ಯಗಳು | ೭೬—೮೦ |
| | ಹಿಂಗಾರಿ ಧಾನ್ಯದಲ್ಲಿ ಬಿಳಿ ಜೋಳವು | ೮೦—೮೫ |
| | ಕಡಲಿಯು | ೮೫—೮೬ |
| | ಸಣಬು | ೮೬—೮೮ |
| | ವಂಡು ಭೂಮಿಗಳ ವಿಷಯವು | ೮೮—೮೯ |
| | ಸಿರಂಜಿಯನ್ನು ಬಿತ್ತುವದು | ೮೯—೯೩ |

| | | |
|---|---|---|
| | ನೀಲಿಯ ಬೀಜವನ್ನು ಬಿತ್ತುವದು | ೯೩—೯೪ |


## ೨ನೇ ಭಾಗ


| | | |
|---|---|---|
| ೯ | ತೋಟದ ಭೂಮಿಯ ತಿದ್ದುವಿಕೆಯು ಮತ್ತು ಭಾವಿಯನ್ನ ಕಡಿಸುವ ಯುಕ್ತಿಯು | ೯೭—೧೨೩ |
| ೧೦ | ಕೃಷಿಕಾರ್ಯಗಳನ್ನು ವಿಶ್ವಾಸಪೂರ್ವಕವಾಗಿ ಮಾಡುವದು | ೧೨೪—೧೩೧ |
| ೧೧ | ತೋಟದ ಪೈರನ್ನು ಮಾಡುವ ರೀತಿಯು | ೧೩೨—೧೮೧ |
| | ಬೇಲಿಯು | ೧೩೨—೧೩೪ |
| | ಮಾವಿನ ಗಿಡಗಳು | ೧೩೪—೧೩೭ |
| | ತೋಟದಲ್ಲಿ ಮಾವಿನ ಮರಗಳನ್ನು ಬೆಳಿಸುವದು | ೧೩೭—೧೪೨ |
| | ಉದ್ಯಾನವನವು | ೧೪೨—೧೪೫ |
| | ತೆಂಗಿನ ವನವು | ೧೪೬—೧೪೯ |
| | ಅಡಿಕೆಯ ವನವು | ೧೪೯—೧೫೪ |
| | ಬಾಳೆಯ ವನವು | ೧೫೪—೧೫೮ |
| | ತೋಟದ ಬಗ್ಗೆ ಸಾಮಾನ್ಯ ಉಪಯುಕ್ತ ಸೂಚನೆಗಳು | ೧೫೮—೧೬೫ |
| | ಜಿರಾಯತ ಭೂಮಿಯ ವಿಷಯದ ಬಗ್ಗೆ ಉಪಯುಕ್ತ ಸಾಮಾನ್ಯ ಸೂಚನೆಗಳು | ೧೬೫—೧೭೨ |
| | ಎಲೆಯ ಬಳ್ಳಿಯು | ೧೭೨—೧೭೭ |
| | ನಿಂಬಿಯ ವನವು | ೧೭೭—೧೭೮ |
| | ಪೇರಲ ವನವು | ೧೭೯—೧೭೯ |
| | ಅಂಜೀರದ ವನವು | ೧೭೯—೧೮೦ |
| | ಬದಾಮಿಯು | ೧೮೦—೧೮೧ |
| ೧೨ | ಕಬ್ಬು ಹಚ್ಚುವದು | ೧೮೨—೧೮೬ |
| ೧೩ | ಅರಿಷಣ ಮೆಣಸಿನ ಗಿಡಗಳು | ೧೮೭—೧೯೦ |
| ೧೪ | ಗೋಡಂಬಿಯ ವನ | ೧೯೧—೧೯೨ |
| | ಯಾಲಕ್ಕಿಯ ಗಿಡಗಳು | ೧೯೩—೧೯೫ |
| | ಮೆಣಸಿನ ಬಳ್ಳಿಯು | ೧೯೫—೧೯೫ |
| | ಅಲ್ಲವು | ೧೯೫—೧೯೬ |
| | ಕಸಕಸಿಯು | ೧೯೬—೧೯೮ |

| | | |
|---|---|---|
| | ಜೀರಿಗೆಯು | ೧೯೮—೧೯೯ |
| | ಶಾಜೀರಿಗೆಯು | ೧೯೯—೧೯೯ |
| | ಸೊಪ್ಪು | ೧೯೯—೧೯೯ |
| | ಬೂಂದಿನ ದಾಣಿ | ೧೯೯—೧೯೯ |
| | ಚಹಾದ ತೊಪ್ಪಲು | ೨೦೦—೨೦೦ |
| | ಪುಷ್ಪದ ಗಿಡಗಳು ಲತೆಗಳು | ೨೦೦—೨೦೧ |
| | ವೃಕ್ಷ ಜಾತಿಗಳು | ೨೦೧—೨೦೩ |
| | ತೋಟದ ನೆಲ್ಲು | ೨೦೩—೨೦೫ |
| ೧೫ | ತೋಟದ ಶೃಂಗಾರ ಸಂಭ್ರಮದ ವರ್ಣನೆಯು | ೨೦೬—೨೧೨ |
| ೧೬ | ಯುತ್ನಾಧಿಕ್ಯವು | ೨೧೩—೨೨೫ |
| ೧೭ | ನೀರಿನ ವ್ಯವಸ್ಥೆಯ ಅವಶ್ಯಕತೆಯು | ೨೨೬—೨೩೧ |
| ೧೮ | ಧರ್ಮ ನೀತಿ | ೨೩೨—೨೫೨ |
| | ಕರ್ಮ ನಿವೃತ್ತಿ | ೨೫೨—೨೬೧ |


## ಪಾರಮಾರ್ಥ ಕೃಷಿ


| | | |
|---|---|---|
| ೧೯ | ನಿರ್ಮಲತ್ವ | ೨೬೨—೨೭೪ |
| | ಲೌಕಿಕಾಚಾರದ ನಿರ್ಮಲತ್ವವು | ೨೬೩—೨೭೪ |
| ೨೦ | ಸದಾಚಾರವು | ೨೭೫—೨೯೫ |
| ೨೧ | ಸುಜ್ಞಾನಸಾರವು | ೨೯೬—೩೧೩ |
| | ಸುಜ್ಞಾನಸಾರದಲ್ಲಿಯ ಯತ್ನೀಕೃತವು | ೨೯೯—೩೦೧ |
| | ಸುಜ್ಞಾನ ಸಂಪಾದನೆ | ೩೦೧—೩೧೩ |
| ೨೨ | ಸದ್ಭಕ್ತಿಯು | ೩೧೪—೩೨೨ |
| ೨೩ | ಪಾರಮಾರ್ಥ | ೩೨೩—೩೨೬ |
| | ಪಾರಮಾರ್ಥ ಕೃಷಿಯು | ೩೨೬—೩೩೨ |
| | ನಿಜನಿರ್ಮಲತ್ವವು | ೩೩೩—೩೩೩ |
| | ಮಲತ್ರಯ | ೩೩೩—೩೩೩ |
| | ವೇಧಾ ದೀಕ್ಷೆ | ೩೩೩—೩೪೬ |
| | ವೇಧಾ ದೀಕ್ಷೆಯಲ್ಲಿ ಮೊದಲಣ ಮಲಸಿರಸನ | ೩೩೪—೩೩೭ |
| | ವೇಧಾ ದೀಕ್ಷಾ ಕ್ರಮವು | ೩೩೭—೩೪೬ |

| | |
|---|---|
| ಮಾಯಾಮಲವು | ೩೪೩—೩೪೪ |
| ಕಾರ್ಮಿಕ ಮಲವು | ೩೪೪—೩೪೬ |
| ಮಂತ್ರದೀಕ್ಷೆಯು | ೩೪೬—೩೪೮ |
| ಕ್ರಿಯಾದೀಕ್ಷೆಯು | ೩೪೮—೩೫೦ |
| ಗುರುದೇವನ ನಿಜಸ್ಥಿತಿಯು | ೩೫೦—೩೫೧ |
| ಸದ್ಭಕ್ತನಾಚರಣೆಯ ಪರಿ | ೩೫೧—೩೫೩ |
| ಪರಮಾರ್ಥ ಕೃಷಿ ಕಾಯಕದ ವಚನಗಳು | ೩೫೩—೩೫೬ |
| ಈ ಗ್ರಂಥದ ಸತ್ಫಲವು | ೩೫೬—೩೫೮ |
| ಗ್ರಂಥಕ್ಕೆ ಸಹಾಯ ಮಾಡಿದ ಪುಣ್ಯಶಾಲಿಗಳಿಗೆ ಮಹಾ<br>ಶಿವಯೋಗಿಗಳ ಆಶೀರ್ವಾದ ಸೂಚನೆ | ೩೫೯—೩೬೩ |
| ಮಹಾಗುರು ನಾಗಭೂಷಣ ಶಿವಯೋಗಿಗಳು ಜಗದ್ವೈಭವ<br>ವತಿ ವಿಶೇಷವಾಗುವದಕ್ಕಾಗಿ ಹರಸಿದಾಶೀರ್ವಾದವು | ೩೬೪—೩೬೪ |
| ಗ್ರಂಥಸಮಾಪ್ತಿ | ೩೬೪ - ೩೬೪ |

# ಈ ಗ್ರಂಥದಲ್ಲಿಯ ಚಿತ್ರಗಳು.


| | | ಪು-ಟ |
|---|---|---|
| ೧ | ಒಡ್ಡು ಹಾಕುವ ಪದ್ಧತಿ | ೩೩ |
| ೨ | ಬಾರಿ ಮತ್ತು ಕಾವಲಿ ಕಟ್ಟುವ ಪದ್ಧತಿ | ೧೦೦ |
| ೩ | ತೊಟ್ಟಿಲ ಸಾಚೆ | ೧೦೬ |
| ೪ | ಸಾಚೆ | ೧೦೯ |
| ೫ | ಸಿದ್ಧ ಮಾಡಿದ ಬಾರಿ ಮತ್ತು ಸಾಚೆ | ೧೧೨ |
| ೬ | ಸಾಚೆ ಇದ್ದ ಭಾವಿ | ೧೧೬ |
| ೭ | ಹೆಚ್ಚು ಬಾರಿಗಳಿದ್ದ ಭಾವಿ | ೧೧೮ |

॥ಶ್ರೀ॥

# ಕೃಷಿಜ್ಞಾನ ಪ್ರದೀಪಿಕೆ.

## ಪೀಠಿಕೆ.

ಉ ವೃ. ಶ್ರೀಗುರು ದೇವನಾಜ್ಞೆಯೊಳಗೀಗ ಶೃತಿ ಸ್ಮೃತಿ ಸತ್ಪುರಾಣ ಶಾ।
ಸ್ತ್ರಾಗಮ ನೀತಿ ಯಾದ್ಯರ ಮತೋಕ್ತಿ ಸುಸಮ್ಮತವಾಗಿ ಯಾಗಲಿ।
ಲೋಗರ ಭೋಗ ಮೋಕ್ಷಕರ ಮಾಗಿ ಸಮಸ್ತ ಪದಾರ್ಥಜ್ಞಾನದು।
ದ್ಯೋಗ ಚಮತ್ಕೃತಾರ್ಥಸುವಿವೇಕದಿ ಸೇರಿಸದೇಂ ಕೃಷಿಕ್ರಮಂ ॥೧॥

ಶ್ರೀ ಮಚ್ಛಿದ್ಘನಮಠನಿವಾಸ ಶ್ರೀ ನಾಗಭೂಷಣ ಮಹಾ ಪ್ರಭುಗಳ ಆಜ್ಞಾನುಸಾರವಾಗಿ ಶೃತಿ ಸ್ಮೃತಿ ಸತ್ಪುರಾಣ ಶಾಸ್ತ್ರಾಗಮಂಗಳ ನೀತಿಯಿಂದಲೂ ಪೂರ್ವ ಪುರಾತನ, ಬಸವಾದಿ ಪುರಾತನ, ನೂತನ ಪುರಾತನರೆನಿಪ ಪರಮಾರಾಧ್ಯರ ಮತೋಕ್ತಿಯ ವಚನ ಸಮ್ಮತದಿಂದಲೂ ಈ ಲೋಕವ ಸಮಸ್ತ ಸಜ್ಜನ ಸದ್ಭಕರುಗಳೆಲ್ಲರ ಭೋಗ ಮೋಕ್ಷಕರವಾಗಿ ಈ ಭೂಮಿಯಿಂದುದಯಿಸುವ ಸಮಸ್ತ ಧಾನ್ಯಾದಿ ಫಲ ಪದಾರ್ಥಂಗಳನ್ನು ಬಿತ್ತಿ ಬೆಳೆದುಂಬುವ ಜ್ಞಾನವನ್ನು ಷಟ್ಕೃಷಿ ವ್ಯಾಪಾರದುದ್ಯೋಗದ ಚಮತ್ಕೃತಿಗಳನ್ನು ಮೋಕ್ಷಜ್ಞಾನೋತ್ಕರ್ಷವಾಗಲೋಸ್ಕರವಾಗಿ ಶ್ರೀ ಗುರುದೇವನ ಪ್ರಸಾದವಾಕ್ಯದಾಧಾರದಿಂದ ಸಮಸ್ತರಿಗೂ ತಿಳಿಯುವ ಹಾಗೆ ದೇಶ ಭಾಷೆಯಾದ ತಿಳಿಗನ್ನಡ ವಾಕ್ಯರೂಪದಿಂದ ಮತ್ತು ಕೆಲವು ಕೆಲವು ವ್ಯಂಗಿ ಉಕ್ತಿಗಳಿಂದಾದರೂ ತಿಳಿಯುವ ಹಾಗೆ ಬರೆದಿದೆ.

ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥವು ಇಪ್ಪತ್ತೈದು ಪ್ರಕರಣಂಗಳುಳ್ಳದ್ದಾಗಿ ಪೂರ್ವೋತ್ತರವೆಂಬ ಎರಡು ಭಾಗವಾಗಿರುವದು. ಪ್ರಥಮದ ಪೂರ್ವ ಭಾಗವು ಪ್ರವೃತ್ತಿ ಮಾರ್ಗವಾಗಿ ಲೌಕಿಕಾಚಾರದ ಸಮಸ್ತ ಸದುಕ್ತಿ ಸುನೀತಿಗಳಿಂದ ಯುಕ್ತವಾಗಿದ್ದು ಅದರಲ್ಲಿ ಎರಡು ವಿಧವಾಗಿದೆ. ಹೇಗೆಂದರೆ ಮೊದಲನೆಯ ವಿಧದ ಎಂಟು ಪ್ರಕರಣಗಳ ವರೆಗೂ ಜಿರಾಯತ ಸಂಬಂಧವಾಗಿ ಬೈಲು ಹೊಲಗಳ ವ್ಯವಸಾಯವನ್ನು ಮಾಡಿ ಸಕಲ ಧಾನ್ಯಾದಿಗಳನ್ನು ಸಮೃದ್ಧಿಯಾಗಿ ಪಡೆಯತಕ್ಕಂಥ ಸುಲಭೋಪಾಯದ ಸಮಸ್ತ ಯುಕ್ತಿಗಳನ್ನು ವ್ಯಕ್ತವಾಗಿ ತಿಳಿಯಪಡಿಸಿದ್ದೇನೆ. ಮತ್ತು ಒಂಬತ್ತನೆಯ ಪ್ರಕರಣದಿಂದ ಪ್ರಾರಂಭಿಸಿ ಎರಡನೆಯ ವಿಧದ ಬಾಗಾಯತ ಸಂಬಂಧವಾಗಿ ತೋಟದ ಸಕಲ ವ್ಯವ

ಸಾಯದಿಂದ ಬಹು ತರದ ಫಲ ಪದಾರ್ಥಗಳನ್ನು ಬಿತ್ತಿ ಬೆಳೆ ಮಾಡಿಕೊಳ್ಳ ತಕ್ಕಂಥ ಸುಲಭವಾದ ಉಪಾಯಗಳಿಂದ ಸಕಲೈಶ್ವರ್ಯ ಸಂಪದ್ವೃದ್ಧಿಯಾಗುವ ಹಾಗೆ ಅತಿ ಹಿತವಾದ ದಿವ್ಯ ಯುಕ್ತಿಗಳನ್ನು ಬಹುತರದ ಪುಣ್ಯ ಕಾರ್ಯಗಳ ನೀತಿಗಳನ್ನು ಶಾಸ್ತ್ರ ದೃಷ್ಟಾಂತಗಳಿಂದ ಕೆಲವು ಇತಿಹಾಸಗಳಿಂದ ಕೆಲವು ಗಾದೆಯ ಪ್ರಸಂಗ ದೃಷ್ಟಾಂತಗಳಿಂದ ಲೋಕಹಿತೋಪಕಾರಾರ್ಥವಾಗಿ ಇದರಲ್ಲಿ ಬರೆದಿದೆ.

ಇಪ್ಪತ್ತೈದನೆಯ ಪ್ರಕರಣದಲ್ಲಿ ಪರೋಪಕಾರ ಧರ್ಮನೀತಿ ಎನಿಪ ಪುಣ್ಯದ ಬೆಳೆಯನ್ನು ಮಾಡಿಕೊಳ್ಳುವ ಸಕಲ ನೀತಿಯನ್ನು ಹೇಳಿದೆ ಇದಲ್ಲದೆ ಎರಡನೆಯ ಉತ್ತರ ಭಾಗದಲ್ಲಿ ನಿಜ ಮೋಕ್ಷಪ್ರದವಾದ ಪಾರಮಾರ್ಥ ಕೃಷಿಯ ಪಂಚ ಪ್ರಕರಣಗಳಲ್ಲಿ ಜ್ಞಾನಪ್ರತಿಪಾದನೆಯನ್ನು ಹೇಳಿದೆ ಈ ಗ್ರಂಥದ ಮೊದಲಲ್ಲಿ ಲೋಕೋಪಕಾರವಾಗಿ ಭೋಗ ಭುಕ್ತಿಪ್ರದವಾದ ಕೃಷಿಯ ಕೆಲಸದ ಸಕಲ ಯುಕ್ತಿಗಳನ್ನು ಮತ್ತು ಆ ಕೃಷಿಯ ಸಂಬಂಧವಾದ ಸಮಸ್ತ ಸುನೀತಿಗಳನ್ನು ಹೇಳಿ ತರುವಾಯದಲ್ಲಿ ಮೋಕ್ಷಪ್ರದವಾದ ಜ್ಞಾನ ವಿಷಯವನ್ನು ಆದ್ಯರ ವಚನ ದೃಷ್ಟಾಂತಗಳಿಂದ ಹೇಳಿದೆ.

ಮತ್ತು ಮನೆಯ ಕೋಣೆಯಲ್ಲಿರುವ ಸಕಲ ಪದಾರ್ಥಗಳನ್ನು ವ್ಯಕ್ತವಾಗಿ ಗೋಚರಿಸಿಕೊಡಬೇಕಾದರೆ ದೀವಿಗೆಯು ಹೇಗೆ ಕಾಣಿಸಿಕೊಡುವದೋ ಹಾಗೆ ಭೋಗ ಮೋಕ್ಷಂಗಳೆರಡು ವಿಧವಾದ ಪ್ರಯೋಜನಕ್ಕೆ ಬೇಕಾಗಿರುವ ಸರ್ವ ಸಾಧನವಾದ ಸಮಸ್ತ ಸುಲಭೋಪಾಯದ ಯುಕ್ತಿಗಳನ್ನು ಸನ್ಮಾರ್ಗವಿವೇಕದ ಸಕಲ ಸುನೀತಿಗಳನ್ನು ಜ್ಞಾನಪ್ರಕಾಶರೂಪದಿಂದ ಪ್ರಜ್ವಲ ತೇಜವನುಳ್ಳ ನಿರ್ಮಲ ದೀವಿಗೆಯಂತೆ ಗೋಚರಿಸಿ ಕೊಡುವದಾದ ಕಾರಣ ಈ ಪುಣ್ಯ ಗ್ರಂಥಕ್ಕೆ ಕೃಷಿಜ್ಞಾನ ಪ್ರದೀಪಿಕೆ ಎಂಬ ನಾಮವು ಸಾರ್ಥಕವಾಗಿದೆ.

## ಗ್ರಂಥಾತಿಶಯವು.

ಶ್ರೀಗುರುದೇವನಾಜ್ಞಾನುಸಾರದಿಂ ನಿರ್ಮಿಸಲ್ಪಟ್ಟ ಲೋಕಹಿತವಾದ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಈ ಗ್ರಂಥವನ್ನು ಓದುವಂಥ ಸಮಸ್ತ ವಿದ್ವಾಂಸರುಗಳಿಗೆ ವಿನಯಪೂರ್ವಕವಾಗಿ ಮಾಡುವ ವಿಜ್ಞಾಪನೆ ಏನಂದರೆ ಪ್ರಾಜ್ಞರಾದವರು ಈ ಗ್ರಂಥವನ್ನು ನೋಡಿ ಬಾಹುಲ್ಯವದೆ ಎಂದು ಬೇಸರಪಡಬಾರದು. ಬೇಸರವೆಂಬುವದು ಆಲಸ್ಯದ ಮನೆಯು. ಆಲಸಿಕೆಯು ದಾರಿದ್ರ್ಯದ ಬೀಜವು.

ಮೊದಲಲ್ಲಿ ತಪಸ್ಸುಗಳಿಗೆ ಬೇಸತ್ತರೆ ಸಕಲ ಸಿದ್ಧಿಗಳನ್ನು ಪಡೆಯುವದೆಂತು? ಶಾಸ್ತ್ರಾಭ್ಯಾಸಕ್ಕೆ ಗ್ರಂಥ ಬಾಹುಲ್ಯವದೆ ಎಂದು ಅಂಜಿ ಪಾಠಕರು ಬೇಸತ್ತರೆ ಪಂಡಿತರಾಗುವ ಪರಿ ಎಂತು? ದೇಹದಂಡನೆ ಇಂದ್ರಿಯ ನಿಗ್ರಹಕ್ಕೂ ಬೇಸತ್ತರೆ ತಪಸ್ಸಿದ್ಧಿಯಾಗುವದೆಂತು? ಕೃಷಿ ಮೊದಲಾದ ಸಕಲ ವ್ಯಾಪಾರಂಗಳಿಗೆ ಬೇಸತ್ತರೆ ಸಂಸಾರಿಗಳು ಸುಖ ಪಡೆಯುವದೆಂತು? ಸತ್ಕರ್ಮಗಳಿಗೆ ಬೇಸತ್ತರೆ ಪುಣ್ಯ ಸಂಪಾದನವಾಗುವದೆಂತು? ಸಜ್ಜನ ಸತ್ಪುರುಷರ ದರ್ಶನ ಮುಖಾಂತರವಾಗಿ ಜ್ಞಾನಶಾಸ್ತ್ರ ಪ್ರಸಂಗವ ಕೇಳುವದರಲ್ಲಿ ಬೇಸತ್ತರೆ ಸುಜ್ಞಾನಿಯಾಗುವದೆಂತು? ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲನ ಮಾಡುವಲ್ಲಿ ಬೇಸತ್ತರೆ ಭೂಪತಿಗಳಾಗುವದೆಂತು? ಮತ್ತು ಭೂಪಾಲರುಗಳು ಸಕಲ ಜನಹಿತೋಪಕಾರ ಮಹತ್ಕಾರ್ಯಗಳಾದ ಲೇಖ ಪತ್ರ ನ್ಯಾಯಾಧಿಪತ್ಯ ಧರ್ಮಾಧರ್ಮ ವಿಚಾರ ಮುಂತಾದ ಸಕಲ ಕಾರ್ಯಗಳ ಧೋರಣೆಯನರಿದು ಆಯಾಯ ಕೆಲಸದ ತಾರತಮ್ಯದಂತೆ ಕೋರ್ಟ ತಾಲೂಕ ಜಿಲ್ಹಾ ಇಲಾಖೆ ಮೊದಲಾದ ಕಚೇರಿಗಳಿಗೆ ಉಪಯೋಗವಾದ ನ್ಯಾಯಶಾಸ್ತ್ರ ಧರ್ಮಶಾಸ್ತ್ರಂಗಳಿಗನುಸಾರವಾಗಿ ಕಾನೂನಗಳ ರಚಿಸಿ ಬಡವರಾದ ರೈತ ಜನರನ್ನು ರಕ್ಷಿಸುವಲ್ಲಿ ಬೇಸತ್ತರೆ ರಾಜ್ಯದ ಅಭಿವೃದ್ಧಿಯನ್ನು ಸಂಪತ್ತು ಸತ್ಕೀರ್ತಿಯನ್ನು ಹೊಂದುವದೆಂತು? ಮತ್ತು ಸೂಪಶಾಸ್ತ್ರ ಕ್ರಮದಂತೆ ಸಕಲ ವಿಚಿತ್ರತರವಾದ ಪಾಕ ಪ್ರಯತ್ನಂಗಳ ಮಾಡುವಲ್ಲಿ ಬೇಸತ್ತರ ರಸ ರಸಾಯನಯುಕ್ತವಾದ ಮೃಷ್ಟಾನ್ನ ಭೋಜನ ಸೌಖ್ಯವನ್ನು ಪಡೆಯುವ ಪರಿ ಎಂತು? ಸಕಲ ಸಿದ್ಧಿಪ್ರದವಾದ ಮಂತ್ರ ಶಾಸ್ತ್ರಂಗಳನ್ನು ತಿಳಿದು ಕ್ರಮಯುಕ್ತವಾಗಿ ಜಪಿಸುವದಕ್ಕೆ ಬೇಸತ್ತರೆ ಸರ್ವ ಸಿದ್ಧಿಗಳ ಪಡೆಯುವದೆಂತು? ಮತ್ತು ವಿಚಿತ್ರತರವಾದ ಸಕಲ ಯಂತ್ರ ಕಾರಖಾನೆಗಳನ್ನು ಮಾಡುವದಕ್ಕೆ ಬೇಸತ್ತರೆ ಚಾತುರ್ಯ ಪದಾರ್ಥಗಳ ಕಾಣುವದೆಂತು? ಈ ರೀತಿಯ ಸಕಲ ಕಾರ್ಯಂಗಳಲ್ಲಿ ಆಲಸತ್ವದಿಂದ ಬೇಸರಗೊಂಡು, ಮಾಡಿದರೆ ಬಂದೀತು, ನೋಡಿದರೆ ಬಂದೀತು, ಓದಿದರೆ ಬಂದೀತು, ಕೇಳಿದರೆ ಬಂದೀತು, ಹೇಳಿದರೆ ಬಂದೀತು, ತಿಳಿದರೆ ಬಂದೀತೆಂದು ತಾತ್ಸಾರದಿಂದ ಮಾಡದೆ ನೋಡದೆ ಹೇಳದೆ ಕೇಳದೆ ಓದದೆ ತಿಳಿಯದೆ ಹೋದರೆ, ಯಾವ ಕಾರ್ಯವಾದರೂ ಫಲಿಸುವದಿಲ್ಲವು. ಅದುಕಾರಣ ಈ ಗ್ರಂಥವು ಸಕಲ ಜನ ಹಿತೋಪದೇಶವಾಗಿರುವದರಿಂದ ಓದುವದಕ್ಕೆ ಬೇಸರಗೊಳ್ಳದೆ ಆದಿಯಿಂದ ಅಂತ್ಯದ ವರೆಗೂ ಚನ್ನಾಗಿ ನೋಡಿ ತಿಳಿಯಬೇಕು ಬಾಹುಲ್ಯವದೆ ಎಂದು ಭಯಪಡಬಾರದು. ಮತ್ತು ಭೂಗೋಲ ಶಾಸ್ತ್ರ ಖಗೋಲ ಶಾಸ್ತ್ರ ಸೂಪಶಾಸ್ತ್ರ ಪದಾರ್ಥವಿಜ್ಞಾನಶಾಸ್ತ್ರ ಮೊದಲಾದವುಗಳನ್ನು ರಚಿಸಬೇಕಾದರೆ ಸಂಜ್ಞೆ ಮಾತ್ರದಿಂದ ಸಂಕ್ಷೇಪವಾಗಿ ತಿಳಿಸಿದರೆ ಹೇಗೆ ತಿಳಿದಾವು? ಮತ್ತು ಭಾರತ ರಾಮಾಯಣಾದಿ ಶಾಸ್ತ್ರಗಳನ್ನು ಅತಿ ಸಂಕ್ಷೇಪವಾಗಿ, ಕಟ್ಟಿದ, ಹೊಡೆದ, ತಂದ ಎಂದರೆ ಇದರಲ್ಲೇನು ತಿಳಿಯಬಹುದು? ಇದಲ್ಲದೆ ಸೇತುವೆಯ ಕಟ್ಟಿದ, ರಾವಣಾದಿ ರಕ್ಕಸರ ಸಂಹರಿಸಿದ

ಜಾನಕಿಯನ್ನು ತಂದ, ಎಂದು ಹೇಳಿದರೆ ರಾಮಾಯಣ ಸಂಪೂರ್ಣವಾಯಿತೇ?
ಮೊದಲೇ ರಾಮಾಯಣದ ಸಕಲ ಸಾರವನ್ನು ಚನ್ನಾಗಿ ತಿಳಿದವನಾದರೆ ಇಷ್ಟೇ
ಸಾಕು. ಆದರೆ ಎಂದೆಂದು ರಾಮಾಯಣವನ್ನು ಕೇಳದೆ ಇದ್ದವನಿಗೆ ಅದರ ಸಾರ
ಯಾವತ್ತು ಹೇಗೆ ಗೋಚರವಾದೀತು? ಅದು ಕಾರಣ ಸರ್ವರಿಗೆ ತಿಳಿಯಬೇ
ಕೆಂದು ವಾಲ್ಮೀಕಿ ಮಹಾ ಮುನಿಯು ಶತಕೋಟಿ ಗ್ರಂಥ ಸಂಖ್ಯೆಯನುಳ್ಳ
ಷಟ್ಕಾಂಡ ರಾಮಾಯಣವನ್ನು ಕಥಾಭಾಗ ವಿಸ್ತಾರವಾಗಿ ರಚಿಸಿರುವನು. ಅದ
ರಂತೆ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥವು ಲೋಕೋಪಕಾರಾರ್ಥವಾಗಿ
ಮೂಢರಿಗೂ ಪ್ರೌಢರಿಗೂ ಸಹ ಉಪಯೋಗವಾಗುವ ಹಾಗೆ ಬಾಹುಲ್ಯವಾಗಿ
ರಚಿಸಬೇಕಾಗಿದೆ ಇದನ್ನು ಸಂಕ್ಷೇಪವಾಗಿ ಹೇಳಿದರೆ ಕೃಷಿಕರಾದ ಸಮಸ್ತ
ರೈತ ಜನರಿಗೆ ಉಪಯೋಗವಾಗದು ಮತ್ತು ಈ ಗ್ರಂಥದಲ್ಲಿ ಬಂದ ಮಾತು-
ಗಳೇ ಪುನಃ ಪುನಃ ಅಲ್ಲಲ್ಲಿಗೆ ಬಂದಿರುವವೆಂದು ಧಿಃಕ್ಕಾರ ಮಾಡಲಾಗದು.
ಏತಕ್ಕೆಂದರೆ ಕೃಷಿಕರು ಮಂದಮತಿಗಳಾದುದರಿಂದ ಒಂದೊಂದು ಮಾತನ್ನು
ಹತ್ತು ಹತ್ತು ವೇಳೆ ತಿಳಿಸಿದರೂ ನಿದರ್ಶನಕ್ಕೆ ನಿಲ್ಲುವದು ದುರ್ಲಭವಾಗುತ್ತದೆ.
ಅದು ಕಾರಣ ಇವರಿಗೆ ಅದರಂತೆ ಹೇಳತಕ್ಕದ್ದಾಗಿದೆ.

ಸಮಸ್ತ ದೇಶಗಳ ಭೂಪತಿಗಳು ಮತ್ತು ಸಕಲ ವಿದ್ಯಾ-ಕಲಾ-ಕೌಶಲ್ಯ
ಪ್ರವೀಣರಾದ ಮಂತ್ರಿಗಳು ಸರ್ವಶಾಸ್ತ್ರ ಪುರಾಣ ಕವಿತಾ ಮುಖ್ಯ ಸಂಗೀತ
ಸಾಹಿತ್ಯ ವಿಶಾರದರಾದ ಪಂಡಿತರುಗಳು ಮತ್ತು ಕುಶಲಮತಿಗಳಾದ ಸರ್ವ
ಶಾಸ್ತ್ರಸಾರಜ್ಞರಾದ ಪ್ರೌಢರು ವಾಣಿಜ್ಯಾದಿ ವ್ಯವಹಾರ ಚಾತುರ್ಯರಾದ
ಸಕಲ ವ್ಯಾಪಾರಿಗಳು ಕೃಷಿಕರಲ್ಲಿ ರಾಜಬುದ್ಧಿಯನುಳ್ಳ ರಾಜಕೃಷಿಕರಾದ ಕೃಷಿ
ಕರ್ಮ ವಿದಗ್ಧರು ಇದಲ್ಲದೆ ಮಂದಮತಿಗಳಾದ ಜಾಡ್ಯ ಬುದ್ಧಿಯನುಳ್ಳ
ಗಾಂಪರು ಮತ್ತು ಮಾಡಿ ಉಣ್ಣಲಾರದ ಮೈಗಳ್ಳರು ಪರಾನ್ನಾಪೇಕ್ಷಿತ ಜಿಹ್ವೆ
ಯನುಳ್ಳ ಗುಪ್ತಯಾಚಕರು ಮುಂದಿನ ಲಾಭ ಚಿಹ್ನದ ಊಹೆಯನ್ನರಿಯದ
ಮುಗ್ಧರು ಮತ್ತು ಬುದ್ಧಿಯನ್ನು ಹೇಳಿದವರೊಡನೆ ಗುಪ್ಯಾಟಕ್ಕೂ ಸಿದ್ಧವಾ
ಗುವ ಮೂರ್ಖರುಗಳು ಮುಖ್ಯವಾದ ಸಮಸ್ತರಿಗೂ ನಾನು ಪ್ರಾರ್ಥಿಸು
ವದೇನಂದರೆಃ—

ಪ್ರಾಜ್ಞರಾದ ಶಾಸ್ತ್ರಜ್ಞರೆಲ್ಲರು ಈ ಲೋಕೋಪಕಾರ ಶಾಸ್ತ್ರವಾದ ಕೃಷಿ
ಜ್ಞಾನ ಪ್ರದೀಪಿಕೆ ಎಂಬ ಗ್ರಂಥವ ನೋಡಿ ಇದು ಕನ್ನಡ ವಾಚ್ಯರೂಪ
ವಾದುದರಿಂದ ಇದೇನು ಸಂಸ್ಕೃತವಾದುದಲ್ಲ ಮತ್ತು ಪದಪದ್ಯ ಪ್ರಬಂಧವಲ್ಲ
ಇದೇತರದ ಕವಿತೆ ಎಂದು ತಾತ್ಸಾರ ಮಾಡುವರು. ಮಾಡಿದರೂ
ಮಾಡಲಿ. ಅದು ವಿದ್ಯಾಮದದ ಗುಣವು. ಅದಂತಿರಲಿ. ಸಕಲ ಶಾಸ್ತ್ರಂಗ
ಳಿಲ್ಲ ಮಾತಿನ ಮಕ್ಕಳಾದ ಕಾರಣ ಕನ್ನಡವಾದರೇನು, ಸಂಸ್ಕೃತವಾದರೇನು,

ಆಂಧ್ರ ಫಾರ್ಸಿ ಇಂಗ್ಲೀಷ ಭಾಷೆಯಾದರೇನು, ಭಾಷಾಭೇದವಲ್ಲದೆ ಸಾರ
ವೆಲ್ಲ ಒಂದೇ ಇರ್ಪುದು. ಅದು ಕಾರಣ ಬಲ್ಲವರು ಈ ಶಾಸ್ತ್ರವನುಪೇಕ್ಷಿಸದೆ
ಈ ಗ್ರಂಥ ರಚನಾ ಕರ್ತೃಗಳನ್ನು ತಿರಸ್ಕರಿಸುತ್ತಾದರೂ ಚನ್ನಾಗಿ
ಓದಿನೋಡಿ ಇದರ ಅಭಿಪ್ರಾಯವನ್ನು ತಿಳಿದು ಕುಶಲಮತಿಗಳಾಗಿ ಅದರಂತೆ
ಪ್ರಯತ್ನಮಾಡಿ ಭೋಗ ಮೋಕ್ಷಂಗಳನ್ನು ಪಡೆಯತಕ್ಕದ್ದೆಂದು ಪ್ರಾರ್ಥಿಸುವೆನು.

ಸರ್ವಶಾಸ್ತ್ರ ಸಾರಜ್ಞರಾದ ಪ್ರೌಢರಿಗೆ ಹಾಗು ವಾಣಿಜ್ಯಾದಿ ಸಕಲ
ವ್ಯವಹಾರ ಚಾತುರ್ಯರುಗಳಿಗೆ ಕೃಷಿ ಎಂಬುದು ಅಲಕ್ಷ್ಯವಾದ ಕಾರಣ ಈ
ಕೃಷಿಜ್ಞಾನ ಪ್ರದೀಪಿಕೆ ಎಂದರೆ ಅವರೆಲ್ಲರು ಇದರ ಸಾರವನ್ನರಿಯದೆ ದೂಷಿಸಿ
ಉಪೇಕ್ಷೆ ಮಾಡತಕ್ಕವರೇ ಸರಿ ಆದಾಗ್ಯೂ ಸಮಸ್ತ ವ್ಯಾಪಾರಿಗಳೆಲ್ಲರಿಗೂ
ಹೇಳತಕ್ಕದ್ದೇನಂದರೆ ಕೋಟಿ ವ್ಯಾಪಾರಗಳೆಲ್ಲ ಮೇಟಿಯ ಸಮವಲ್ಲವೆಂಬ
ಲೋಕದ ಗಾದೆಯುಂಟಾಗಿರ್ಪುದು ಮತ್ತು ವ್ಯಾಪಾರಿಗಳೆಲ್ಲರೂ ಕೊಟ್ಟು
ಚಿಂತಿಸುವರು, ಇಟ್ಟು, ಚಿಂತಿಸುವರು ಕೃಷಿಕರು ನಿಶ್ಚಿಂತರಾದ ಕಾರಣ,
'ಬಾದಶಾಹಾ, ರೈತರು ಎಂಬುದು ಪ್ರಸಿದ್ಧವಾಗಿದೆ.

ಈ ಕೃಷಿಯೊಂದು ಸಾಗದಿದ್ದರೆ ಸಕಲವ್ಯಾಪಾರಿಗಳು ಸಮಸ್ತ ಶಾಸ್ತ್ರಜ್ಞರು
ಮೂಢರು ಪ್ರೌಢರು ಮೂರ್ಖರು ಪಂಡಿತರು ಮೊದಲಾದವರೆಲ್ಲರು ದುಃಖಾ
ಬ್ಧಿಯೊಳು ಮುಳುಗುವರಲ್ಲದೆ ಯಾರಿಗೂ ಪರಿಣಾಮವಿಲ್ಲ ವ್ಯಾಪಾರಕ್ಕಾ
ದರೂ ಕೃಷಿಯೇ ಮುಖ್ಯ. ರಾಜ್ಯಕಾರ್ಯ ಸಮರ್ಥರಾದ ಭೂಪಾಲರಿಗಾ
ದರೂ ವೀರರಿಗೂ ಧೀರರಿಗೂ ವೇದಾಗಮ ಶಾಸ್ತ್ರ ಪುರಾಣ ಪಂಡಿತ
ರಿಗೂ ಸೇವಾ ಯಾಚನಾದಿ ಷಟ್ಕೃತ್ಯಂಗಳಿಗಾದರೂ ಕೃಷಿಯೇ ಮುಖ್ಯವು.
ಅನ್ನವೇ ಆನಂದದ ಬೀಜವು. ಭೂಮಿಯಿಂದ ಬೆಳೆಯುವ ಸಕಲ ಪದಾರ್ಥ
ಗಳು ಬೆಳೆಯದಿದ್ದರೆ ಲೋಕವ್ಯವಹಾರವೇ ನಿಲ್ಲುವದು. ಮತ್ತು ವ್ಯಾಪಾರಿ
ಗಳು ತಂದು ತಂದು ಮಾರುವ ಪದಾರ್ಥಗಳೆಲ್ಲ ಭೂಮಿಯಿಂದ ಉತ್ಪ
ನ್ನವಾಗತಕ್ಕವುಗಳಾದ ಕಾರಣ ಕೃಷಿಯು ತಡೆದರೆ ಸಕಲ ವ್ಯಾಪಾರವೇ
ತಡೆಯುವದು. ಒಂದು ವೇಳೆಗೆ ಪಾರಜ, ಚಂದ್ರ, ಹುರಿಮಂಜು, ಅರದಾಳ,
ತಾಳಕ, ಇಂಗ್ಲೀಕ, ಗಂಧಕ, ಮುಡದಾರಸಿಂಗಿ, ವಚನಾಭಿ, ಪಾಷಾಣ, ಸಂಗ
ಜೀರಿಗೆ, ಸೋರುಪ್ಪು, ಉಪ್ಪು, ಪಂಚವಿಧ ಲವಣ ಮೊದಲಾದ ಖನಿಜ
ಪದಾರ್ಥಗಳನ್ನು ಒಂದು ವೇಳೆ ತಂದು ಮಾರಿದರೆ ಬಂದೀತೆಂಬರು. ಅನ್ನ
ವಸ್ತ್ರಂಗಳಿಲ್ಲದಿದ್ದರೆ ಅಖಿಳಪದಾರ್ಥಗಳನ್ನು ಕೊಂಬುವರಾರು? ಆತ್ಮ ಹಿತ
ವಾದದ್ದೇ ಅನ್ನಪದಾರ್ಥವು. ಈ ಅನ್ನ ವಸ್ತ್ರಂಗಳೆರಡು ಕೃಷಿಯಿಂದುತ್ಪನ್ನ
ವಾಗುವವು. ಆದ ಕಾರಣ ಅಖಿಳ ಶಾಸ್ತ್ರಂಗಳೆಲ್ಲ ಅನ್ನದ ಮಕ್ಕಳೆಂಬ ಗಾದೆ
ಯುಂಟು. ಮತ್ತು ರಂಜನೆಯ ಬೀಜಕ್ಕೆ ರಾಗ ಮೂವತ್ತೆರಡು ಎಂದ

ಲೋಕದೃಷ್ಟ ಶಾಸ್ತ್ರದೃಷ್ಟ ಲೋಕದ ಗಾದೆಯ ನೀತಿಗಳಿಂದಲೂ ಚಾತುರ್ಯ
ಶೃಂಗಾರ ಹಾಸ್ಯ ಬೀಭತ್ಸ ಭಯ ಲಜ್ಜೆ ಜಿಗುಪ್ಸೆ ಭೋಗವಿಲಾಸ ಆನಂದ
ವೆನಿಪ ನವರಸಾಲಂಕಾರಯುಕ್ತವಾಗಿರ್ದು ಭೋಗ ಮೋಕ್ಷಪ್ರದವಾಗಿರುವ
ದರಿಂದ ಭುಕ್ತಿ ಮುಕ್ತ್ಯಾಪೇಕ್ಷಿತರೆಲ್ಲರು ಸರ್ವ ಜ್ಞಾನಸಾರವಾದ ಈ ಗ್ರಂಥ
ವನ್ನು ಓದಿ ಕೇಳಿ ಸಮಸ್ತ ಬುದ್ಧಿಶಾಲಿಗಳಾದವರೆಲ್ಲರು ಗ್ರಂಥಕ್ಕೆ ಆಶ್ರಯ
ಕೊಟ್ಟು ನನ್ನ ಸ್ವಲ್ಪ ಬುದ್ಧಿಯ ವಿಷಯದಲ್ಲಿಯೋ ಏನಾದರೂ ಹೆಚ್ಚುಕಡಿಮೆ
ಯಾಗಿ ಕಾಣಬಂದರೆ ಅದನ್ನು ತಿಳಿಸಿದರೆ ತಮ್ಮ ಉಪಕಾರವನ್ನು ಸ್ಮರಿಸಿ
ತಿದ್ದಿಕೊಂಬುವೆನು ಸರ್ವ ನೀತಿಯ ವಿಷಯಗಳಲ್ಲಿ ಚಮತ್ಕಾರ ಮತ್ತು
ಚಾತುರ್ಯ ಹಾಗು ರಸಹಾಸ್ಯ ವಿನೋದವಾಕ್ಯಗಳೇನಾದರೂ ಊಹಿಸಿದರೆ
ಅವುಗಳನ್ನು ಬರೆದು ತಿಳುಹಿಸಿ ಕಲ್ಪವೃಕ್ಷದಂತೆ ಈ ಗ್ರಂಥವನ್ನು ಬೆಳಿಸಿದರೆ
ಲೋಕಹಿತವಾಗಿರುವದು ಮತ್ತು ಅನಭ್ಯಾಸಿಗಳಾದವರು ಈ ಗ್ರಂಥಸಾರದ
ರುಚಿಯನ್ನರಿಯದೆ ಜೇಡನ ಹುಳದ ಸೂತ್ರದಂತೆ ಸುಮ್ಮನೆ ಉದ್ದಕ್ಕೆ ಬರೆದಿ
ಹನೆಂದು ಹಾಸ್ಯಭಾವದಿ ನುಡಿವರು ಅದು ಉಪಯೋಗವಲ್ಲವು. ಬುದ್ಧಿ
ವಂತರು ಬೇಸರವಿಲ್ಲದೆ ಚನ್ನಾಗಿ ಓದಿ ತಿಳಿಯಬೇಕು ಮತ್ತು ಸರ್ವರಿಗೂ
ತಿಳಿಸಬೇಕು.

ಇಲ್ಲಿಯ ವರೆಗೂ ಈ ಗ್ರಂಥಸಾರವನ್ನು ಚನ್ನಾಗಿ ತಿಳಿಯಬೇಕೆಂದು
ಪ್ರಾಜ್ಞರನ್ನು ಕುರಿತು ಪ್ರಾರ್ಥಿಸಿದನು ಇನ್ನು ಮೇಲೆ ಬುದ್ಧಿಯನ್ನು ಹೇಳು
ವದಕ್ಕ ಹೋದರೆ ಇದ್ದ ಮತಿ ಹೋಗಿ ಗುದ್ಯಾಟಕ್ಕೆ ನಿಲ್ಲುವ ದುರ್ವಾದಿಗ
ಳಾದ ಮೂರ್ಖರ ವಿಷಯವಾಗಿ ಮತ್ತು ಸಕಲ ಚಾತುರ್ಯ ಬುದ್ಧಿಯನ
ರಿಯದ ಮುಗ್ಧರ ವಿಷಯವಾಗಿ ವಿನಯಪೂರ್ವಕದಿಂದ ಅವರವರ ಹಿತ
ಕ್ಕಾಗಿ ಪ್ರಾರ್ಥಿಸುವೆನು. ಹೇಗಂದರೆ ಈ ಗ್ರಂಥಸಾರವನ್ನು ಚನ್ನಾಗಿ ಕೇಳು
ವಲ್ಲಿ ನಿಮ್ಮ ನಿಮ್ಮ ಮಾತಿನ ಅಭಿಪ್ರಾಯದ ಪಾರವನ್ನೇ ಸಾಧಿಸಬೇಕೆಂಬ
ಛಲವನ್ನು ಹಿಡಿದು ವಾದಿಸದೆ ಚನ್ನಾಗಿ ಮನಸ್ಸು ಕೊಟ್ಟು ಕೇಳಿ ಇದರ
ಅರ್ಥವನ್ನು ತಿಳಿದು ಅದರಂತೆ ಸರ್ವ ಪ್ರಯತ್ನಮಾಡಿ ಸಕಲ ಧಾನ್ಯ ಸಮಸ್ತ
ಫಲ ಪದಾರ್ಥಗಳನ್ನು ಬೆಳೆದು ಸಕಲೈಶ್ವರ್ಯ ಸಂಪನ್ನರಾಗಬೇಕೆಂದು ಪ್ರಾರ್ಥಿ
ಸುವೆನು. ಯಾತಕ್ಕೆಂದರ ಜಗತ್ತು ಎಲ್ಲದರಲ್ಲಿ ದಾರಿದ್ರ್ಯ ದುರ್ಭಿಕ್ಷಂಗಳಿಲ್ಲ
ದಂತಾಗಿ ಒಂದು ವರ್ಷ ಕಷ್ಟ ಬಟ್ಟು ಇದರಲ್ಲಿ ಹೇಳಿದಂತೆ ಮಾಡಿದರೆ
ಹತ್ತು ನರ್ಷ ಕೂತು ಉಂಬುವಷ್ಟು ಪದಾರ್ಥಗಳನ್ನು ಬೆಳೆದು ಸರ್ವರೂ
ಮಹದೈಶ್ವರ್ಯದಿಂದಿರಬೇಕೆಂಬುವದೇ ನನ್ನ ಅಭಿಪ್ರಾಯವು. ಆದು ಕಾರಣ
ಪದಾರ್ಥವಿಜ್ಞಾನಾದಿ ಸಮಸ್ತ ಜ್ಞಾನೋತ್ಪತ್ತಿಗೆ ಶ್ರವಣವೇ ಮುಖ್ಯವಾದ
ಕಾರಣ ಈ ಗ್ರಂಥ ಶ್ರವಣಾಧಿಕ್ಯವನ್ನು ಹೇಳುತ್ತೇನೆ.

# ಗ್ರಂಥಶ್ರವಣಾತಿಶಯವು.

ಸರ್ವ ಸಾಧನಂಗಳಿಗೂ ಸಮಸ್ತ ಜ್ಞಾನೋತ್ಪತ್ತಿಗೂ ಶ್ರವಣವೇ ಮುಖ್ಯ ವಾದ ಕಾರಣ ಶ್ರವಣವಿಲ್ಲದವನಿಗೆ ಶಬ್ದಾರ್ಥ ಜ್ಞಾನಸಾಧನಗಳು ಗೋಚ ರಿಸುವದಿಲ್ಲವು. ಅದು ಹೇಗಂದರೆ ಬಾಲ್ಯದಲ್ಲಿ ಕಿವಿಗಳು ಚನ್ನಾಗಿ ಕೇಳಬರು ತ್ತಿದ್ದರೆ ಅಕ್ಷರವಾಚನವು ಚನ್ನಾಗಿ ಹೊರಡುತ್ತದೆ. ಸ್ವಲ್ಪ ಮಧ್ಯಮ ಪೈಕಿ ಯಾದರೂ ಕೇಳಬರುತ್ತಿದ್ದು ನಾಲಿಗೆಯು ದಪ್ಪಾಗಿದ್ದರೆ ತೊದಲು ನುಡಿಗ ಳಾಡಿದ ಕಾಲಕ್ಕೆ ಕಿವಿಗಳು ಕೇಳುತ್ತಿದ್ದ ಕಾರಣ ಮುಂದೆ ಶಬ್ದಜ್ಞಾನವಾಗು ವದೆಂದು ತಿಳಿಯಬಹುದು ಸ್ವಲ್ಪಾದರೂ ಕಿವಿ ಕೇಳದೆ ಇದ್ದಲ್ಲಿ ಆತನಿಗೆ ಶಬ್ದಜ್ಞಾನವಿಲ್ಲದಾಗಿ ಮೂಕನಾಗುವನೆಂದು ಬಲ್ಲವರು ಸ್ಪಷ್ಟವಾಗಿ ತಿಳಿಯು ತ್ತಾರೆ ಹೇಗೆಂದರೆ ಕಿವುಡರಲ್ಲಿ ಕೆಲವರಿಗೆ ಶಬ್ದಜ್ಞಾನವಿರಬೇಕಾದರೆ ಬಾಲ್ಯ ದಲ್ಲಿ ಕಿವಿಗಳು ಕೇಳುತ್ತಿದ್ದು ಕೆಲವು ದಿವಸದ ಮೇಲೆ ರೋಗದಿಂದ ಕಿವಿ ಗಳು ಮಂದವಾಗಿದ್ದರೆ ಮಾತಾಡುವದಕ್ಕೆ ಬರುವದು ಆದರೆ ಕಿವಿಗಳು ಕೇಳಿಸು ವದಿಲ್ಲವು ಬಹಳವಾಗಿ ಬಾಯಿ ಮಾಡಿ ಗಟ್ಟ್ಯಾಗಿ ಕೂಗಿದರೆ ಸ್ವಲ್ಪ ಕೇಳ ಬರುವದು ಇದಲ್ಲದೆ ಬಾಲ್ಯಾರಭ್ಯದಿಂದ ಕಿವಿ ಕೇಳದಂಥ ಘನ ಬಧಿರಂಗೆ ಶಬ್ದಜ್ಞಾನವು ತಲೆದೋರದು ಇದಕ್ಕ ದೃಷ್ಟಾಂತವೇನೆಂದರೆ ಜಾತ್ಯಂಧಕ ನಿಗೆ ಸ್ವಪ್ನವಾದರೆ ಕೇಳಿದಂತೆ ಸ್ವಪ್ನವಾಗುವದಲ್ಲದೆ ಕಂಡಂತೆ ಆಗದು ಮತ್ತು ಘನ ಬಧಿರಂಗೆ ಕನಸಾದರೆ ಕಂಡಂತೆ ಆಗುವದಲ್ಲವೆ ಕೇಳಿಕೆಯಂತಾಗದು. ಈ ದೃಷ್ಟಾಂತದ ಹಾಗೆ ಶ್ರವಣವಿಲ್ಲದವನಿಗೆ ಯಾವ ವಿಷಯದಲ್ಲಾದರೂ ಶಬ್ದಜ್ಞಾನ ಬೋಧೆಯಾಗದು· 'ಮನೋನೇತ್ರಾಣಿ ಇಂದ್ರಿಯಂ' ಕೇಳಿದಂತೆ ಕಂಡರ ಬುದ್ಧಿಗೆ ನಿಶ್ಚಯುವಾಗುವದು. ಕೇಳಿದಷ್ಟು ಕಾಣಬೇಕೆಂಬುವದೇ ಜ್ಞಾನದ ನಿಶ್ಚಯವು ಮತ್ತು ಅಕ್ಷರ ಮಧ್ಯದಲ್ಲಿ ಶಬ್ದವಡಗಿರ್ಪುದು ಆ ಶಬ್ದದ ಮಧ್ಯದಲ್ಲಿ ಅನ್ವಯುವಡಗಿರ್ಪುದು ಆ ಅನ್ವಯತ್ವದಿಂದ ಫಲಸಿದ್ಧಿ ಯಾಗುವದು ಅದು ಕಾರಣ ಈ ಗ್ರಂಥಸಾರವನ್ನು ಸರ್ವರೂ ಮನಃಪೂ ರ್ವಕವಾಗಿ ಕೇಳಿ ತಿಳಿದರೆ ಇದರ ವಿಷಯದಲ್ಲಿ ಸರ್ವ ಜ್ಞಾನ ಹುಟ್ಟಿ ಮಾಡಿ ಉಣ್ಣಬೇಕೆಂಬ ಬುದ್ಧಿಯೂ ದೃಢವಾಗುವದು. ಶ್ರವಣದಿಂದ ಮನನವಾಗು ವದು ಮನನದಿಂದ ನಿಜಧ್ಯಾಸವಾಗಿ ನಿಶ್ಚಯಗೊಳ್ಳುವದು ಮತ್ತು ಲೌಕಿ ಕಾಚಾರವಾದ ಈ ಕೃಷಿಜ್ಞಾನಾದಿ ಶಾಸ್ತ್ರಂಗಳಿಗಾದರೂ ಪಾರಮಾರ್ಥಾಚಾರ ದಲ್ಲಿ ಮೋಕ್ಷಪ್ರದವಾದ ಜ್ಞಾನಶಾಸ್ತ್ರಂಗಳಿಗಾದರೂ ಶ್ರವಣ ಮನನಾದಿಗಳೇ ಮುಖ್ಯವು ದುರ್ವಾದ ಆಲಸ್ಯ ಅವಿಶ್ವಾಸಂಗಳೇ ಸಂಸಾರಕ್ಕೆ ವಿಘ್ನತ್ರಯಂ ಗಳು. ಇವುಗಳಿಂದ ದರಿದ್ರತನವೆಂಬ ಘನ ದುಃಖವು ಪ್ರಾಪ್ತಿಸುವದು. ಮತ್ತು ಮೋಕ್ಷಕ್ಕೆ ಅಜ್ಞಾನ ಸಂಶಯ ವಿಪರೀತಂಗಳೆಂಬವೇ ವಿಘ್ನತ್ರಯಂಗಳಾಗಿ ಭವದುಃಖವನುಣಿಸುತ್ತಿಹವು. ಅದು ಕಾರಣ ವಿಘ್ನತ್ರಯ ಪರಿಹಾರಕ್ಕೆ ಶ್ರವಣ

ಮನನ ನಿಜಧ್ಯಾಸಂಗಳೇ ಮುಖ್ಯವಾಗಿರುವದರಿಂದ ನಿಜಗುಣಾರ್ಯರ ಶಾಸ್ತ್ರದಲ್ಲಿ ಸ್ಪಷ್ಟವಾಗಿ ಶ್ರವಣಾತಿಶಯವನ್ನು ಶೃತ್ಯರ್ಥ ಸಮ್ಮತವಾಗಿ ಹೇಳಿದ್ದಾರೆ ಮತ್ತು ಈ ಗ್ರಂಥದಲ್ಲಾದರೂ ದುರ್ವಾದ ಆಲಸ್ಯ ಅವಿಶ್ವಾಸವೆಂಬ ವಿಘ್ನತ್ರಯಂಗಳಿಂದ ಸಂಸಾರದ ಸಾರ ಕೆಟ್ಟು ದಾರಿದ್ರ್ಯವೆಡೆಗೊಂಡಿರುವದು ಆ ದಾರಿದ್ರ್ಯ ದುಃಖ ಪರಿಹಾರಕ್ಕೋಸ್ಕರ ಜಗದುಪಕಾರವಾಗಿ ನಿರ್ಮಿಸಲ್ಪಟ್ಟ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥಸಾರ ಯಾವತ್ತನ್ನು ಮನಃಪೂರ್ವಕವಾಗಿ ಕೇಳಿ ತಿಳಿಯುವದರಿಂದ ತಕ್ಕಮಟ್ಟಿಗಾದರೂ ತನ್ನ ಶಕ್ತ್ಯಾನುಸಾರ ಪ್ರಯತ್ನ ಮಾಡಿ ಬದುಕಬೇಕೆಂಬ ಬುದ್ಧಿಯು ಧೃಢವಾಗುತ್ತದೆ ಅದರಿಂದ ದಾರಿದ್ರ್ಯ ದುಃಖ ಬಿಡುಗಡೆಯಾಗಿ ಸುಖವನ್ನು ಕೊಡುತ್ತದೆಯಾದ ಕಾರಣ ಈ ಗ್ರಂಥವನ್ನು ಚನ್ನಾಗಿ ಕೇಳಿ ತಿಳಿಯಬೇಕೆಂದು ಪ್ರಾರ್ಥಿಸುವೆನು.

## ಪುಣ್ಯಾತಿಶಯವು

ಸತ್ಪುಣ್ಯ ಸ್ವರೂಪಿಗಳಾದ ಸದ್ಬುದ್ಧಿಯುಳ್ಳವರಿಗೆ ಈ ಕೃಷಿಜ್ಞಾನವನ್ನು ಹೇಳಿದರೆ ಅವರು ಚನ್ನಾಗಿ ಗ್ರಹಿಸಿ ಇದರಲ್ಲಿರುವ ಸಮಸ್ತ ಯುಕ್ತಿಗಳನ್ನು ಊಹಿಸಿ ತಿಳಿದು ಪ್ರಯತ್ನದಿಂದ ಕೃಷಿಕೆಲಸದ ಸರ್ವಾರಂಭವನ್ನು ಮಾಡಿಸಿ ಮಹದೈಶ್ವರ್ಯ ಸಂಪನ್ನರಾಗುವರು ಪುಣ್ಯಹೀನರಿಗೆ ಎಷ್ಟುಮು ಖದಿಂದ ಜ್ಞಾನೋದಯವಾಗಲೆಂದು ಹೇಳಿದಾಗ್ಯಾದರೂ ಮಾಡಿ ಉಣ್ಣಬೇಕೆಂಬ ಇಚ್ಛೆಯು ಹುಟ್ಟದೆ ಹೋಗುವದು ಇದಕ್ಕೆ ದೃಷ್ಟಾಂತವೇನಂದರೆ ಘನಬಧಿರಂಗೆ ಎಷ್ಟು ಗಟ್ಟಿಯಾಗಿ ಕೂಗಿ ಹೇಳಿದಾಗ್ಯಾದರೂ ಹೇಗೆ ಕೇಳ ಬರುವದಿಲ್ಲವೋ ಹಾಗೆ ಪುಣ್ಯಹೀನಂಗೆ ಈ ಶಾಸ್ತ್ರದ ರುಚಿಯು ತಿಳಿಯದೆ ಹೋಗುವದು. ಪುಣ್ಯಾನುಕೂಲನೇ ಪ್ರಯತ್ನವು ಪುಣ್ಯಹೀನತ್ವವೇ ಆಲಸ್ಯವೆಂಬ ಮೈಗಳ್ಳತನವು ಅದು ಯಾವನಲ್ಲಿ ನೆಲೆಗೊಳ್ಳುವದೋ ಅವನು ಪರಾನ್ನಕ್ಕಾಸೆ ಮಾಡುವವನು. 'ಸುಡುಸುಡು ಪರಾನ್ನಾಪೇಕ್ಷಿತಾ ಜಿಹ್ವೆಯಂ' ಎಂಬ ನೀತಿಯುಂಟಾಗಿ ಮಾಡಲಾರದೆ ಮೈಗಳ್ಳತನದಿಂದ ಆಶಾ ಪಾಶಕ್ಕೊಳಗಾಗ ಬಾರದು.

## ಆಶಾನಿರಸನ.

॥ಶ್ಲೋಕ॥ ಆಶಾಬದ್ಧತೇ ಲೋಕೇ। ಕರ್ಮಣಾ ಬಹು ಚಿಂತಯಾ। ಆಶಾ ಪರಮಂ ದುಃಖಂ । ನಿರಾಶಾ ಪರಮಂ ಸುಖಂ" ಎಂಬ ಶಾಸ್ತ್ರ ಪ್ರಮಾಣ ಉಂಟಾಗಿ ಲೌಕಿಕರೆಲ್ಲರು ಕೃಷಿ ಮುಂತಾದ ಕಾರ್ಯಂಗಳ ಮಾಡುವಲ್ಲಿ ಪ್ರಯತ್ನ ಮುಖದಿಂದ ತನುವ ದಂಡಿಸಿ ವಿಶ್ವಾಸದಿಂದ ಮಾಡಿ ಸಕಲ ಸಂಪತ್ತನ್ನು ಪಡೆಯಲಾರದೆ ಮೈಗಳ್ಳತನದಿಂದ ಅನಿರ್ವಾಹ ಪಕ್ಷಕ್ಕೆ ಅಲ್ಪ

ಸ್ವಲ್ಪ ಕಾರ್ಯಗಳನ್ನು ಆದಷ್ಟಾಗಲಿ ಎಂದು ಅಲಸತ್ವದ ಬೇಸರದಿಂದ ಮಾಡಿ ದಲ್ಲಿ ಸರ್ವಾರಂಭದ ಕ್ರಮದ ಯುಕ್ತಿಗಳು ತಪ್ಪಿ ಹದಬೆದೆಗಳು ಮೀರಿದ ಕಾರಣ ಅಲ್ಪ ಸ್ವಲ್ಪ ಧಾನ್ಯಾದಿಗಳು ಅಥವಾ ಅಲ್ಪ ಸ್ವಲ್ಪ ದ್ರವ್ಯವಾದರು ದೊರೆಯುವದರಿಂದ ಅದು ಅನ್ನವಸ್ತ್ರಕ್ಕೆ ಸಾಲದಾಗಿರುವದರಿಂದ ಪುಣ್ಯಶಾಲಿ ಗಳಾದ ಧನಧಾನ್ಯ ಸಂಪನ್ನರಲ್ಲಿಗೆ ಹೋಗಿ ಕಡ ಬಡ್ಡಿ ಸಾಲಗಳನ್ನು ಕೇಳು ತ್ತಿರಲು ಅವರು ಇವನ ಪೈಗಳ್ಳತನದ ಸ್ವಭಾವವನ್ನು ಬಲ್ಲವರಾದುದರಿಂದ ಇವನಿಗೆ ಕೊಟ್ಟ ದ್ರವ್ಯವು ತಿರುಗಿ ಬರಲಾರದೆಂದು ತಿಳಿದು ಕೊಡದೇ ಇದ್ದಲ್ಲಿ ಹೊಟ್ಟೆಗೆ ಅನ್ನವ ಕಾಣದೆ ಹಸುವಿನಿಚ್ಛಾಧೀನನಾಗಿ ಹಬ್ಬ ಹುಣ್ಣಿವೆ ಸೋಮ ವಾರ ಮಂಗಳವಾರನೆಂಬ ವಾರತಿಥಿಗಳನ್ನು ಪರೀಕ್ಷಿಸುತ್ತ ಮತ್ತು ನೆರೆಹೊರೆ ಮನೆಗಳಲ್ಲಿ ಬೀಗರು ಆಪ್ತರು ಸ್ನೇಹಿತರು ಬಂದ ಸಮಯದಲ್ಲಿ ಯಾರೇನು ಮಾಡ್ಯಾರೋ ಎಂದು ನಿರೀಕ್ಷಿಸುತ್ತ ಇದ್ದಲ್ಲಿ ಸಕಲೈಶ್ವರ್ಯ ಸಂಪನ್ನರು ಯಾವ ದಾದರೊಂದು ಕಾರ್ಯ ನಿಮಿತ್ಯ ಅಥವಾ ಹಬ್ಬದ ನಿಮಿತ್ಯ ಇಲ್ಲವೇ ಆಪ್ತ ರಿಷ್ಟರ ನಿಮಿತ್ಯ ಸಂಭ್ರಮದಿಂದ ಹೋಳಿಗ ಹುಗ್ಗಿ ಕರ್ಚಿಕಾಯಿ ಕಡಬು ಕಜ್ಜಾಯಗಳನ್ನು ಮಾಡಿದ ವಾಸನೆಯ ತಿಳಿದು ಅವರು ಉಂಬುವ ವೇಳೆಗೆ ಹೋಗಿ ಅವರ ಮನೆಯ ಮುಂದೆ ನಿಂತು ಹಬ್ಬವ ಮಾಡಿದ ಹರ ದಿಯರಿರಾ ಹಲವರೆಲ್ಲರು ಉಂಡು ಪರಿಣಾಮವೇ, ಎಂಬ ಬಣ್ಣದ ಮಾತಿನ ಗುಪ್ತ ಯಾಚನೆಯ ಸಂಜ್ಞಾಭಾವವನ್ನು ತೋರಿಸುತ್ತ, ಸುಳಿದಾಡುವ ಲಕ್ಷಣ ವನ್ನು ತಿಳಿದು ಪುಣ್ಯಶಾಲಿಗಳಾದರೆ ಕರೆದೊಯ್ದು ಉಣಿಸುವರು. ಮತ್ತು ಅಲ್ಪ ಜನರುಗಳಾದರೆ ಈ ಸಂಜ್ಞೆಯನ್ನು ತಿಳಿದು ಮಾತಾಡದೇ ಇರು ವರು. ಆ ಭಾವವನ್ನು ತಿಳಿದು ಈ ಗುಪ್ತಯಾಚಕನು ಹಿಂದಿರುಗಿ ಹೋಗುವಾಗ ಹಸಿವೆ ಯಾಶೆಯಿಂದ ಕರುಳು ಸುಟ್ಟಂತಾಗಿ ಹೊಟ್ಟೆ ಉರಿಯಲು ತಾನು ಗೃಹಸ್ಥನೆಂಬ ಧರ್ಮಕ್ಕೆ ತಪ್ಪಿ ಹಸುವಿನಿಚ್ಛೆಗೆ ಪ್ರಕಟ ಯಾಚಕತ್ವದಿಂದ ಅವರಿವರೆನ್ನದೆ ಎಲ್ಲರ ಬೇಡಿದಲ್ಲಿ ಯಾರೇನು ಕೊಡದೆ ಹೋದ ಕಾಲದಲ್ಲಿ ಕಳವು ಹಿಂಸಾದಿ ದ್ರೋಹಂಗಳಿಗೆ ಹೇಸದೆ ಪರದ್ರವ್ಯಂಗಳನಪಹರಿಸುತ್ತ ಸೆರೆಮನೆಯ ಸಂಕೋಲೆಯ ಬಂಧನಕ್ಕೊ ಳಗಾಗಿ ಮಾನಹೀನನೆನಿಸಿ ನರಳ ಯಾತನೆಗೆ ಪಾತ್ರನಾಗಿ ಭೂಭಾರಕ ನಾಗಿ ಅನ್ನ ಶತೃವಾಗಿ ದಾರಿದ್ರ್ಯದೋಷಿಯಾಗಿ ಖಲಜನರೆನಿಸಿ ಅವಮರ್ಯಾ ದೆಯಿಂದ ಜೀವನವನ್ನು ಮಾಡುವನು.

ಮತ್ತು ಪ್ರಾಜ್ಞರಾದವರು ಭೂಮಿಯನ್ನು ನಂಬಿ ವಿಶ್ವಾಸಿಸಿ ಕೃಷಿ ಮುಂತಾದ ಕಾಯಕಂಗಳ ಮಾಡಿ ಧನಧಾನ್ಯ ಮೊದಲಾದ ಸಕಲ ಸಂಪ ತ್ತನ್ನು ಪಡೆದು ದಾನಧರ್ಮ ಪರೋಪಕಾರಗಳನ್ನು ಮಾಡುತ್ತ ಸದಾ ಕಾಲ

ಗಳಲ್ಲಿ ಸಕಲಸುಖ ಭೋಗಂಗಳ ಭೋಗಿಸುತ್ತ ಅರಗಾಲ ಬರಗಾಲಂಗಳಲ್ಲಿ ಸಹ ನಿತ್ಯದಲ್ಲಿಯೂ ಸುಭಿಕ್ಷಕಾಲದಂತೆ ಸಹಜವಾದ ಊಟ ಸಹಜವಾದ ಉಡಿಗೆ ಸಹಜವಾದ ತೊಡಿಗೆಗಳಿಂದ ಯಥಾಪ್ರಕಾರವಾಗಿ ಸುಖದಿಂದಿರುವರು. ಮತ್ತು ವೈಗಳ್ಳರಾದವರು ಕೃಷಿ ಮೊದಲಾದ ವ್ಯಾಪಾರಂಗಳ ಮಾಡಲಾರದೆ ಬೆಕ್ಕು ನಾಯಿಗಳು ಪರಾನ್ನಕ್ಕೆ ಆಸೆ ಮಾಡಿ ಬಾಲವ ಗುಂಡಾಡಿಸುತ್ತ ಧನಪಾಲರ ಕಾಲಲ್ಲಿ ಸುಳಿದಾಡುವಂತೆ ಆಲಸತ್ವದಿಂದ ಮಾಡಲಾರದೆ ಬೇಸರಗೊಂಡ ಕಾರಣ ಋಣಭಾರಕರಾಗಿ ಊಟಕ್ಕೆ ಕಾಣದೆ ಅಷ್ಟಿಷ್ಟು ಗೋದಿಯ ಬೀಸಿಕೊಂಡುಂಡು ಉಡುವದಕ್ಕೆ ಕಾಣದೆ ಹಿರಿಯರು ಸಂಪಾದಿಸಿದ ಧಡಿದೋತ್ರ ಬಣ್ಣದ ಸೀರೆಗಳು ಮುಂತಾದ ವಸ್ತ್ರಗಳನ್ನು ಉಟ್ಟು ತೊಟ್ಟು ತಿರುಗಾಡುತ್ತಿದ್ದಲ್ಲಿ ಇವರು ಋಣಭಾರಕರಾಗಿ ಉಂಬುವದಕ್ಕೆ ಕಾಣದೆ ಗೋದಿಯ ಬೀಸಿದ್ದಾರೆ ಉಡುವದಕ್ಕೆ ಕಾಣದೆ ಬಣ್ಣವನುಟ್ಟಿದ್ದಾರೆಂದು ಹಾಸ್ಯವ ಮಾಡಿದಾಗ್ಯಾದರೂ ಲಜ್ಜಾಯುತನಾಗಿ ಮುಖವ ತಗ್ಗಿಸುವರು. ಎಷ್ಟು ಲಜ್ಜೆ ಇದ್ದಾಗ್ಯಾದರೂ ಪರಮೇಶ್ವರನನ್ನು ಕುರಿತು ಪ್ರಾರ್ಥಿಸಿ ಸತ್ಯಕಾಯಕದಿಂದ ಮಾಡಿ ಉಣ್ಣಬೇಕೆಂಬ ಬುದ್ಧಿ ಕಡಿಮೆಯಾಗಿ ಹಸಿವೆಂಬುದು ಪ್ರತ್ಯಕ್ಷ ಬ್ರಹ್ಮೇತಿಯಂತೆ ಉಪದ್ರವ ಕೊಟ್ಟ ಕಾರಣ ಹಸಿವೆಯನ್ನು ನೈರಿಸಲಾರದೆ ವೈಗಳ್ಳತನದ ಅಭ್ಯಾಸದಿಂದ ಮಾಡಲಾರದೆ ಯಾರೇನು ಕೊಟ್ಟಾರೆಂದು, ಯಾರೇನು ನೀಡ್ಯಾರೆಂದು, ಕೆಲವು ದಿವಸ ಗುಪ್ತಯಾಚಕನಾಗಿ ಪರಾನ್ನಕ್ಕೆ ಆಶೆ ಮಾಡಿ, ಬಹು ಜನರನು ಆಶ್ರಯಿಸಿದಾಗ್ಯಾದರೂ ಯಾರೂ ನೀಡದಿದ್ದರೆ ಹೊಟ್ಟೆ ಸುಟ್ಟು ಆಶೆ ಹೆಚ್ಚಾಗಿ ಗಾಂಭೀರ್ಯ ಹೀನತ್ವದಿಂದ ಬಹು ಜನರನ್ನು ಬೇಡುತ್ತಿರಲಾಗಿ ಕೆಲವರು ನೀಡುವರು, ಕೆಲವರು ಧಿಕ್ಕಾರ ಮಾಡುವರು. ಹೀಗಾಗಿ ಅಗೌರವತ್ವದಿಂದ ಪ್ರಕಟ ಯಾಚಕನಾಗಿ ಬೇಡಿದಾಗ್ಯಾದರೂ ಹೊಟ್ಟೆಗೆ ಸಾಲದೆ ಹೋದಲ್ಲಿ ಕಳವು ಕ್ಷುದ್ರ ಹಿಂಸಾದಿ ಕ್ರೂರ ಕರ್ಮಗಳಿಂದ ಪರದ್ರವ್ಯಾಪಹಾರಿಯಾದರೆ ಇಹಲೋಕ ಪರಲೋಕವೆಂಬ ಉಭಯಲೋಕ ಭ್ರಷ್ಟನಾಗಿ ಖಲಜನರೆನಿಸಿ ನೀಚ ವರ್ತನೆಯಲ್ಲಿ ಜೀವನವನ್ನು ಮಾಡುವನಲ್ಲದೆ ಯುಕ್ತಿಯಿಂದ ಮಾಡಿ ಉಣ್ಣಬೇಕೆಂಬ ಬುದ್ಧಿ ಹುಟ್ಟದು. ಬುದ್ಧಿಹೀನತ್ವದಿಂದ ವೈಗಳ್ಳತನವು. ಆ ವೈಗಳ್ಳತನದ ಫಲವೇ ದಾರಿದ್ರ್ಯದುಃಖವು. ಆ ದಾರಿದ್ರ್ಯದುಃಖದಿಂದ ದುಷ್ಟವರ್ತನೆಯು ಪ್ರಾಪ್ತಿಸಿ ಅನರ್ಥಸಾಧನವಾಗುವದು. ಮತ್ತು ಬುದ್ಧಿಶಾಲಿಗಳಾಗಿ ಸದಾಚಾರ ಸತ್ಕಾಯಕದಿಂದ ಮಾಡಿ ಉಂಬುವನಿಗೆ ದಾರಿದ್ರ್ಯವಿರಬಹುದೆ? ಒಂದು ವೇಳೆ ಮಾಡುವವನೊಬ್ಬನಾಗಿ ಉಂಬುವವರು ಬಹಳ ಮಂದಿಯಾದರೆ ಘನಸಂಪತ್ತಿಲ್ಲದಿದ್ದರೂ ಅನ್ನ ವಸ್ತ್ರಕ್ಕೇನೂ ತಾಪತ್ರಯವಿಲ್ಲವು.

ಈ ಲೋಕದ ಸಮಸ್ತ ಬುದ್ಧಿಹೀನ ಜನರ ದಾರಿದ್ರ್ಯವನ್ನು ದೂರ ಮಾಡುವದಕ್ಕಾಗಿಯೂ ಭೂಲೋಕದ ಸಮಸ್ತ ಜನರಿಗೆಲ್ಲರಿಗೂ ಘನ ಸಂಪತ್ತನ್ನು ಕೊಡು

ವದಕ್ಕಾಗಿಯೂ ಲೋಕೋಪಕಾರವಾದ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥ ರಚಿಸಲ್ಪಡುವದಾಯಿತು ಮತ್ತು ಈ ಲೋಕದ ಸಮಸ್ತ ಪ್ರಾಣಿಗಳ ರಕ್ಷಣಾರ್ಥಕ್ಕೆ ಅನ್ನೋದಕವೇ ಮುಖ್ಯವಾದ ಕಾರಣ ಈ ಕಲಿಯುಗದಲ್ಲಿ ಉದ್ಭವಿಸಿದ ಪ್ರಾಣಿಗಳು ಯಾವತ್ತು ಅನ್ನಗತ ಪ್ರಾಣಿಗಳಾದುದರಿಂದ ಅನ್ನ ಕಡಿಮೆಯಾದಾಗಲೇ ಆಯುಷ್ಯವು ಕಡಿಮೆಯಾಯಿತೆಂದು ತಿಳಿಯಬೇಕು.

## ಅನ್ನಾತಿಶಯವು.

ಪ್ರಾಣಿ ಮಾತ್ರಗಳ ಯಾವತ್ತರ ಪ್ರಾಣಾಧಾರಕ್ಕೆ ಅನ್ನವೇ ಮುಖ್ಯವಾದ ಕಾರಣ ಅನ್ನದ ವಿಶೇಷ ವರ್ಣನೆಯನ್ನು ಬಹು ಜನ ಪ್ರಾಜ್ಞರು ಹೇಳಿದ್ದಾರೆ.

॥ಸಾಕ್ಷಿ॥ ಕೂಳು ಕೂಟವೇ ಕೂಟ ಕೂಳು ಮೇಳವೇ ಮೇಳ ಕೂಳಿಂದು ಗಳಿಗೆ ತಪ್ಪಿದರೆ ಪಾತರದ ಮೇಳ ಮುರಿದಂತೆ ಸರ್ವಜ್ಞ॥ ಎಂದು ಸರ್ವಜ್ಞಮೂರ್ತಿಗಳ ವಾಕ್ಯವುಂಟು ಮತ್ತು ಹಸಿವೆಯ ವೇಳಿಗೆ ಅಶನವು ದೊರತರೆ ಭಸಿತಧಾರಕರಾದ ಸನ್ಯಾಸಿಗಳಾದರೂ ಕುಸುಮ ಶರನಂತೆ ಸ್ತ್ರೀಲೋಲರಾಗುವರು ಆಶನವು ವೇಳಿಗೆ ದೊರೆಯದಾದಲ್ಲಿ ಕುಸುಮಶರನಾದರೂ ಸನ್ಯಾಸಿಯಂತೆ ಸ್ತ್ರೀ ವ್ಯಸನವನ್ನು ತೊರೆದು ಗಾಂಭೀರ್ಯಹೀನನಾಗಿ ಅಗೌರತ್ವದಿಂದ ಭಿಕ್ಷಕ್ಕೆ ಪೋಗನೆ? ॥ಸಾಕ್ಷಿ॥ ಅನ್ನ ರಸಂ ಜಾತ ಅತಿವೆಲು ಪುರುಷಲು। ಯೇ ಪುರೇಗಿನ ಮದನಡೇ ಚ ನಂಚು॥ ಅನ್ನ ಮುಡುಗಿನಯನಕ। ಅತಡೆಂದು ಬೋಯನೋ। ವಿಶ್ವತಾಭಿರಾಮವಿನರವೇಮಾ। ಇದರ ಅನ್ವಯವೇನೆಂದರೆ, ಅನ್ನರಸದಿಂದ ಸ್ತ್ರೀಪುರುಷರು ಸೊಕ್ಕಿದರೆ ಮನ್ಮಥನ ಕ್ರೀಡೆ ವಿಶೇಷವಾಗುವದು ಅನ್ನ ತಪ್ಪಿದ ಬಳಿಕ ಮನ್ಮಥನು ಯಾವ ಕಡೆಗೆ ಹೋದನೋ ಎಂಬ ಅಭಿಪ್ರಾಯವು.

ಅನ್ನವ ಬಿಟ್ಟವನ ಬಳಿಗೆ ಸನ್ನುತ ಮೋಹನಾಂಗಿಯಳಾದ ಕನ್ಯೆಪ್ರಾಯದ ಸ್ತ್ರೀಯಳು ಬಂದು ಕಾಮಕಲೆಯ ಸನ್ನೆಯ ಚೇಷ್ಟೆಯಿಂದ ಕರೆದಾಗ್ಯಾದರೂ ಇನ್ನಾರಿಗೆ ಬೇಕೆಂದು ಉಪೇಕ್ಷೆ ಮಾಡುವನು ಮತ್ತು ಅನ್ನಪೂರ್ಣವಾದಲ್ಲಿ ಅಖಿಳಶಾಸ್ತ್ರಯಂತ್ರ ಸನ್ನುತ ಗಾಯನ ಹಾಸ್ಯರಸ ಚೇಷ್ಟೆಗಳಲ್ಲದೆ ಅನ್ನತಪ್ಪಿದರವುಗಳೊಂದು ಇಲ್ಲವು. ಅದು ಕಾರಣ ಅನಂತ ಶಾಸ್ತ್ರಂಗಳೆಲ್ಲ ಅನ್ನದ ಮಕ್ಕಳೆಂಬ ಲೋಕದ ಗಾದೆಯುಂಟು. ಇದಲ್ಲದೆ

॥ಸಾಕ್ಷಿ॥ ಅನ್ನ ಪರಬ್ರಹ್ಮಮಯ್ಯ್ಯನ್ನದನ್ನಂ। ಅನುಚುಮೆಮಿನ್ನಂ। ಆತ್ಮಲೋಗನ್ನಂ। ಎಂಬ ಆಂಧ್ರ ಪಂಡಿತರ ವಚನ ಉಂಟಾಗಿ ಅನ್ನವು ಆತ್ಮತೃಪ್ತಿಯ ಪದಾರ್ಥವಾದ ಕಾರಣ ಸಕಲ ರಸರಸಾಯನ ಪದಾರ್ಥವಾದ ದಿವ್ಯಾನ್ನ

ಹೇವಾನ್ನ ರಾಜಾನ್ನ ಪರವಾನ್ನ ಮೊದಲಾದ ಸಮಸ್ತ ಸುಭೋಜನವನುಂಡು ಪರಿಣಾಮಿಯಾಗಿದ್ದರೆ ಸಕಲ ಚಾತುರ್ಯ ಕಲಾಕೌಶಲ್ಯ ರಾಗ ರಸ ಹಾಸ್ಯ ವಿನೋದ ವಿಲಾಸಗಳು ಮತ್ತು ಮಂತ್ರ ಶಾಸ್ತ್ರ ನೀತಿ ಸ್ತೋತ್ರ ಪುರಾಣ ಇತಿಹಾಸ ತಾಳ ಮೃದಂಗ ವೀಣಾದಿ ಲೆತ್ತಪಗಡೆ ಚದುರಂಗ ಗಂಜೀಪ ಮೊದಲಾದ ವಿನೋದ ಪ್ರಸಂಗ ಸ್ತ್ರೀಸಂಗ ಮುಂತಾದ ಆನಂದಕರ ಕಾರ್ಯ ಗಳೆಲ್ಲ ಜರಗುತ್ತಿಹವು ಅನ್ನವು ಕ್ಷಣಮಾತ್ರ ತಡೆದರೆ ವಡಬಾಗ್ನಿ ತಾಪದಿಂದ ಕರುಳು ಸುಟ್ಟು ಕಳೆಗುಂದಿ ಮುಖಬಾಡಿ ಸಕಲ ವಿನೋದಂಗಳೆಲ್ಲ ತಪ್ಪಿ ಆಯಾಸಗೊಂಡಂತೆ ಅವಯವಾದಿಗಳ ತ್ರಾಣವೆಲ್ಲ ನಿಸ್ಸಾರವಾಗಿ ಸಕಲ ಪ್ರಸಂಗಗಳಲ್ಲಿ ರುಚಿ ತಪ್ಪಿ ಬಿದ್ದಲ್ಲಿ ಬೀಳುವರಲ್ಲದೆ ಎದ್ದು ತಿರುಗಾಡುವವಕ್ಕೆ ಆಯಾಸವಾಗುವದು ಹತ್ತೆಂಟು ದಿವಸ ಅನ್ನವಿಲ್ಲದಿದ್ದರೆ ಕ್ಷಯರೋಗಿಯಂತೆ ಶರೀರ ಕ್ಷೀಣವಾಗುವದು. ಇಪ್ಪತ್ತೊಂದು ದಿವಸ ಅನ್ನವಿಲ್ಲದಿದ್ದರೆ ನೇತ್ರಪ್ರ ಕಾಶವು ಅಡಗುವದು. ಮತ್ತು ಮೂವತ್ತು ದಿವಸಕ್ಕೆ ಸರ್ವೇಂದ್ರಿಯಂಗಳು ಕೆಡುವವು. ನಾಲ್ವತ್ತು ದಿವಸಕ್ಕೆ ಪ್ರಾಣ ಹೋಗುವದು ಆದು ಕಾರಣ ಅನ್ನದ ಮಕ್ಕಳು ಅಖಿಳಮಂತ್ರ ಶಾಸ್ತ್ರಸಂಗೀತ ಸಾಹಿತ್ಯಂಗಳು ಎಂಬುವದು ನಿಶ್ಚ ಯವೇ ಸರಿ.

ಈ ಲೋಕದ ಸಮಸ್ತ ಭೋಗ ಪುರುಷರಾದ ವೀರರಿಗೆ ಧೀರರಿಗೆ ವೇದಾಗಮ ಪುರಾಣ ಶಾಸ್ತ್ರ ಪಂಡಿತರಾದ ಪ್ರಾಜ್ಞರಿಗೆ ಪ್ರೌಢರಿಗೆ ಸಂಗೀತ ಸಾಹಿತ್ಯಾದಿ ಗಾನಲೋಲರಿಗೆ ಸಕಲಕಲಾಕೌಶಲ್ಯ ಚಾತುರ್ಯತರ ಕಾರ್ಯ ಕರ್ತರಿಗೆ ಕೃಷಿವಾಣಿಜ್ಯಾದಿ ಷಟ್ಕೃಷಿ ವ್ಯಾಪಾರಿಗಳಿಗೆ ಸಂಸಾರಿಗಳಿಗೆ ಸನ್ಯಾ ಸಿಗಳಿಗೆ ಮೊದಲಾದ ಸಮಸ್ತರಿಗೂ ಅನ್ನವೇ ಮುಖ್ಯವಲ್ಲದೆ, ಅನ್ನವಿಲ್ಲದಿರ ಲಿನ್ನೆತ್ತಣ ಸಂಭ್ರಮವೆಂದ ಹಾಗೆ ಮತ್ತು ಅನ್ನ ವೆಗ್ಗಳವಾಗಲಖಿಳ ಚಾತು ರ್ಯಗಳು, ಅನ್ನತಪ್ಪಿದರವುಗಳೆತ್ತ ಹೋಗುವವೋ ಎಂಬ ಹಾಸ್ಯಕ್ಕೆ ಕಾರಣ ವಾಗುವದು

ಸಕಲ ಪ್ರಾಣಿಗಳೆಲ್ಲರಿಗೂ ಮನುಷ್ಯರುಗಳೆಲ್ಲರಿಗೂ ಶರೀರ ಪೋಷಣೆಗೆ ಅನ್ನ ಪಾನಾದಿಗಳೇ ಮುಖ್ಯವಲ್ಲದೆ ಅನ್ನಪಾನಾದಿಗಳು ತಪ್ಪಿದರೆ ನುಣ್ಣನ್ನ ಶರೀರವೆಲ್ಲ ಬಣ್ಣಗುಂದುವದ ಹಾಗು ಕಣ್ಣುಗಳು ಒಳನಟ್ಟು ಮೂಗು ದ್ದಾಗಿ ಗೋಣು ಹಾಯ್ದು ಬಹು ಕಾಲದ ತಪೋವೃದ್ಧರಂತೆ ಅಸ್ತಿಮಯ ವಾದ ದೇಹವಾಗಿ ಮಾಂಸ ರಕ್ತ ಮೊದಲಾದವುಗಳು ಕಡಿಮೆಯಾಗುವವು ಸಪ್ತಧಾತುಗಳು ಕ್ಷೀಣವಾಗುವವು. ವಾಯು ಗತಿ ಹೆಚ್ಚಾಗಿ ಸರ್ವೇಂದ್ರಿಯಗಳ ತ್ರಾಣ ತಪ್ಪಿ ಅಚೇತನ ಪ್ರಾಣಿಗಳಾಗುವರು. ಮತ್ತು ಅನ್ನಪಾನಾದಿಗಳು ತಪ್ಪಿದ ಕಾಲದಲ್ಲಿ ಸಕಲಭೋಗ ಸಾಧನ ದಿವ್ಯ ಪದಾರ್ಥಗಳೆಲ್ಲ ತಿರಸ್ಕಾರ

ವಾಗಿ ಸದ್ಗುಣ ಸುಬುದ್ಧಿಗಳು ಅಡಗಿ ಜ್ಞಾನ ಹೀನರಾಗಿ ಲಜ್ಜಾಭಿಮಾನಂಗಳು ನಷ್ಟವಾಗಿ ಗಾಂಭೀರ್ಯಾದಿ ಗೌರತ್ವಗೆಟ್ಟು ದಶಾವಸ್ಥೆಗೆ ಬಂದು ಪ್ರಾಣತ್ಯಾಗವಾಗುವದು.

ಅನ್ನವೆಂಬುದು ಆತ್ಮ ಹಿತಕರವಾಗಿರ್ದು ಪ್ರಾಣೇಶ್ವರಂಗೆ ಪ್ರಾಣ ತೃಪ್ತಿಯಾಗುತ್ತಿಹುದಾದ ಕಾರಣ ಅನ್ನಕ್ಕೆ ಪ್ರಸಾದವೆಂಬ ನಾಮವಾಯಿತ್ತು ।ಸಾಕ್ಷಿ॥ ಅನಾದಿ ವೃಷಭೇಶ್ವರನು ಬಲಗಾಲ ಕೆದರಲು ಶಂಕರನೆಂಬ ಬೀಜ ಉದಯ ವಾಯಿತ್ತು ಆ ಬೀಜವು ಮೂರು ಲೋಕಂಗಳಿಗೂ ಪ್ರಸಾದವಾಯಿತ್ತು. ಆ ಪ್ರಸಾದದಿಂದ ಅಖಿಳ ಬ್ರಹ್ಮಾಂಡದುದಯ ರಕ್ಷಣ್ಯವಾಯಿತ್ತೆಂಬ ಆದ್ಯರ ವಚನ ಪ್ರಮಾಣ ಉಂಟಾಗಿರುವದು ಮತ್ತು ನಿನ್ನ ಪಾದಾಂಬುವೇ ನಿನಗೆ ಮಜ್ಜನವಾಗಿ ತವಪ್ರಸಾದ ದಿವ್ಯಾನ್ನವೇ ಭೋಜನಾನ್ನವಿದು ತಥ್ಯವೆಂಬ ಮಾಯಿದೇವ ಪ್ರಭುಗಳ ವಾಕ್ಯ ಉಂಟಾಗಿರ್ಪುದು.

ಜೀವರಿಗೆ ಅನ್ನದ ಮೇಲೆ ರುಚಿ ಇದ್ದ ಹಾಗೆ ಮೋಕ್ಷಶಾಸ್ತ್ರಂಗಳಲ್ಲಿ ರುಚಿ ಹುಟ್ಟದಿರುವ ಕಾರಣ ಚಿಕ್ಕವರಿಗೆ ಸಕ್ಕರೆಯ ನೆವದಿಂದ ಆರೋಗ್ಯ ಔಷಧವ ಕೊಟ್ಟಂತೆ ಕೃಷಿಕರ್ಮ ಯುಕ್ತಿ ನೀತಿಗಳ ಮೇಲಿಂದಲೇ ಮೋಕ್ಷಪ್ರದವಾದ ಭಕ್ತಿ ಜ್ಞಾನ ವೈರಾಗ್ಯಂಗಳ ಸಕಲ ಸುನೀತಿಯ ಆದ್ಯರ ವಚನ ಸಾಕ್ಷಿಗಳಿಂದ ಯುಕ್ತವಾದ ಪಾರಮಾರ್ಥ ಕೃಷಿ ಎಂಬ ಮೋಕ್ಷಶಾಸ್ತ್ರಸಾರವನ್ನು ತಿಳುಹಿಸುವದಕ್ಕೆ ಲೋಕೋದ್ಧಾರಾರ್ಥವಾಗಿ ಭೂಲೋಕದಲ್ಲಿ ಅವತಾರವನ್ನು ಮಾಡಿದ ನೂತನಲ್ಲಮದೇವರೆಂಬ ಘನಮಠನಿವಾಸ ಶ್ರೀ ನಾಗಭೂಷಣ ಮಹಾಪ್ರಭುಗಳವರು ಇಂದಿಗೆ ಇಪ್ಪತ್ತೆಂಟು ವರುಷ ಜ್ಞಾನಜಂಗಮ ಲೀಲಾವೈಭವದಿಂದ ಭೂಸಂಚಾರ ಮಾಡುತ್ತ ರೇವಣೇಶ್ವರಲ್ಲಮದೇವರು ತೋಂಟದಾರ್ಯರುಗಳಂತೆ ವೇದಾಗಮ ಸಕಲಶಾಸ್ತ್ರ ಪುರಾಣೇತಿಹಾಸಗಳಿಂದ ಮತ್ತು ಆದ್ಯರು ಪೇಳಿದ ವಚನಗಳಿಂದ ನಿಜವ ಬೋಧಿಸಿದರೆ ಈ ಲೋಕದವರೊಬ್ಬರಿಗಾದರೂ ಮೋಕ್ಷಾಪೇಕ್ಷೆಯ ರುಚಿ ಹುಟ್ಟದೆ ಹೋಯಿತು. ಅದು ಕಾರಣ ಈ ಜನರಿಗೆ ಮುಸುಕಿರ್ದ ಮಾಯಾಮೋಹದ ಬಲಾತ್ಕಾರವನರಿತು ತಾನು ಮಾಯಾಕೋಲಾಹಲನಾದ ಕಾರಣ ಮಾಯೆಗೆ ಮಾಯನಾಗಿ ಮಾಯಾಬೋಧದಿಂದಲೇ ಮಾಯಾ ಜಾಡ್ಯಮಂ ಪರಿಹರಿಸಬೇಕಲ್ಲದೆ ಸರ್ವಜ್ಞಮೂರ್ತಿಗಳಾದ ಜ್ಞಾನಜಂಗಮವು ಜಗತ್ತಿಗೆ ಬಂದು ಸುಮ್ಮನೆ ಹೋಗಲಾಗದು. ಭಕ್ತನಾದರೆ ಭಕ್ತಿದಾಸೋಹ, ಯುಕ್ತನಾಯಿತ್ತಾದರೆ ಯುಕ್ತಿದಾಸೋಹ ಮಾಡಬೇಕೆಂಬ ಪ್ರಮಾಣದಂತೆ ಜೀವರಿಗೆ ಜೀವಹಿತವಾದುದನ್ನೇ ಬೋಧಿಸಿ ಸನ್ಮಾರ್ಗಕ್ಕೆ ತರಬೇಕೆಂದು ಶ್ರೀಮತ್ಪ್ರಾಣಹಂಸ ಪರಮ ಪ್ರಭುಗಳಾದ ಶ್ರೀಮನ್ನಾಗಭೂಷಣ ಮಹಾ ಪ್ರಭುಗಳಾದ ಶ್ರೀಮ

ನ್ನಾಗಭೂಷಣರವರು ಲೌಕಿಕ ಪಾರಮಾರ್ಥಾನಂದ ಸುಖಮಯವಾದ ಜ್ಞಾನ
ಬೀಜವನ್ನು ತಮ್ಮ ಕುಮಾರನಾದೆನ್ನ ಚಿದ್ಹೃದಯ ಕ್ಷೇತ್ರದೋಳ್ ಬಿತ್ತಿ ಬೆಳೆ
ಮಾಡಿ ಅಖಂಡ ಪರಿಪೂರ್ಣ ಘನರಾಶಿಯನ್ನು ಕೈವಶಮಾಡಿಕೊಟ್ಟು ಅತ್ಯಾ
ನಂದದಿಂದಾಜ್ಞಾಪಿಸಿದ್ದೇನಂವರೆ ಈ ಲೋಕದ ಸಮಸ್ತ ಜನರೆಲ್ಲರು ಇಹ
ಲೋಕ ಪರಲೋಕದ ಸಕಲ ಸುಖಸಂಪದಂಗಳನ್ನು ಪಡೆದು ಜಗತ್ತೆಲ್ಲ
ಮಹದೈಶ್ವರ್ಯದಿಂದ ತುಂಬಲ್ಪಡುವದಾಗಿ ಸರ್ವರೂ ಸತ್ಕಾಯಕ ಮುಖ
ದಿಂದ ಸದ್ಗುಣ ಸದಾಚಾರ ಸದ್ಭಕ್ತಿ ಸಮ್ಯಜ್ಞಾನದಿಂದಾಚರಿಸಿ ಸದ್ಯೋನ್ಮು
ಕ್ತಿಯಂ ಪಡೆಯುತಕ್ಕಂಥ ದಿವ್ಯ ಯುಕ್ತಿಗಳಿಂದಲೂ ವೇದಾಗಮ ಪುರಾಣ
ಶಾಸ್ತ್ರ ಶೃತಿ ಸ್ಮೃತಿಗಳ ಸಾರತರವಾದ ಸುನೀತಿ ಸದ್ಬೋಧೆಗಳಿಂದಲೂ ಯುಕ್ತ
ಮಾದ ಭೋಗ ಮೋಕ್ಷಪ್ರದಮಾದ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥ
ವನ್ನು ಮೂಢರಿಗೂ ಪ್ರಾಜ್ಞರಿಗೂ ಮುಗ್ಧರಿಗೂ ವಿದಗ್ಧರಿಗೂ ಆಬಾಲವೃದ್ಧ
ರಿಗೂ ಆಯಾಸವಿಲ್ಲದೆ ತಿಳಿಯುವ ಹಾಗೆ ದೇಶಭಾಷೆಯಾದ ತಿಳಿಗನ್ನಡ
ವಾಚ್ಯರೂಪದಿಂದ ರಚಿಸುವಲ್ಲಿ ಸಮಸ್ತ ಜನರ ಕರ್ಣಮುಖಕ್ಕೆ ರಸರಸಾ
ಯನ ಪದಾರ್ಥವನ್ನು ತುತ್ತು ಮಾಡಿ ಉಣಿಸುವಂತೆ ಕೇಳುವವರಿಗೆ ರುಚಿಯು
ಹುಟ್ಟುವ ಹಾಗೆ ಈ ಗ್ರಂಥದಲ್ಲಿ ಅಮೌಲ್ಯರತ್ನ ಸದೃಶವಾದ, ಜೀವರಿಗೆ
ಜೀವ ಪ್ರಿಯಕರಮಾದ, ಸಕಲ ಸುನೀತಿಯ ಗ್ರಂಥ ಶಾಸ್ತ್ರಾಗಮಸಾರಂ
ಗಳ ಚಾತುರ್ಯ ವಾಕ್ಯಗಳನ್ನು ಮತ್ತು ಲೋಕಚಾತುರ್ಯ ಯುಕ್ತಿಗಳನ್ನು
ಅಲ್ಲಲ್ಲಿ ಲಾಭ ಚಿಹ್ನ ತೋರುವ ಸುಲಭೋಪಾಯದ ತಿಳುವಳಿಕೆಯ ಸಂಗ್ರ
ಹಗಳನ್ನು ಜ್ಞಾನಪ್ರದಮಾದ ಆದ್ಯರ ವಚನಗಳನ್ನು ತರವರಿದು ವಿವೇಕದಿಂದ
ಸೇರಿಸಿ ಜೀವರಿಗೆ ಭೋಗ ಮೋಕ್ಷ ಚಿಂತಾರತ್ನಹಾರದಂತೆ ರಚಿಸಿ ಜಗತ್ಪ್ರ
ಸಿದ್ಧ ಮಾಡಬೇಕೆಂದು ಅಜ್ಞಯನಿತ್ತ ಕಾರಣ ಗುರುವಾಜ್ಞೆಯಂ ಶಿರಸಾ ಮಾನ್ಯ
ಮಾಡಿಕೊಂಡು ಶ್ರೀಗುರು ಪ್ರಸಾದ ವಾಕ್ಯಬಲದಿಂದಲವರ ಅನುಮತವಿದ್ದಂತ
ನಾನು ಸಕಲ ಪ್ರಪಂಚ ವ್ಯವಹಾರಂಗಳಂ ತಿರಸ್ಕರಿಸಿ ಸರ್ವ ಪ್ರಪಂಚಾಭಿ
ಮಾನವನ್ನು ಶಿವನಿಗೊಪ್ಪಿಸಿ ಈ ಲೋಕೋಪಕಾರ ಗ್ರಂಥ ಪೂರ್ಣವಾಗ
ಲೋಸ್ಕರವಾಗಿ ಶ್ರೀಮನ್ ಮಹಾಗುರು ನಾಗಭೂಷಣ ಪ್ರಭುಗಳವರ ಚಿನ್ಮಯ
ಪದಂಗಳನ್ನೇ ಎನ್ನಯ ಚಿತ್ಕಲಾ ಹೃತ್ಕಮಲ ಪೀಠದೋಳ್ ನೆಲೆಗೊಳಿಸಿ
ಅಭಿನ್ನ ಜ್ಞಾನಾಚಾರದ ಅಷ್ಟವಿಧ ಷೋಡಶೋಪಚಾರಂಗಳಿಂದ ಯುಕ್ತಮಾದ
ನಿರ್ಗುಣ ಜ್ಞಾನ ಪೂಜಾ ನಮಸ್ಕಾರ ಧ್ಯಾನ ಪೂಜಾ ಸ್ತೋತ್ರಂಗಳಿಂದ
ವಂದಿಸಿ ಮಂಗಳಾಚರಣಮಂ ಮಾಡಿ ಸರ್ವಾಹಂ ಭಾವ ನಾಸ್ತಿಯಾಗಿ
ಸೂತ್ರಧಾರಿಯನುಮತದಿಂ ಚೇಷ್ಟಿಸುವ ನಾಟಕದ ಬೊಂಬೆಯಂತೆ ಶಿವನು
ಹೃದಯ ಮುಖದಿಂದ ಸೂಚಿಸಿದ ಜ್ಞಾನ ಯುಕ್ತಿಗಳಿಂದ ಗ್ರಂಥರಚನೋ
ದ್ಯೋಗಕ್ಕೆ ಪ್ರಾರಂಭಿಸಿರುವೆನು.

## ಪ್ರಾರ್ಥನೆಯು.

ಸಮಸ್ತ ಜನರಿಗೂ ಸಕಲ ರೀತಿಯಿಂದಲೂ ಪರೋಪಕಾರವಾದ ಈ ಸದ್ಗ್ರಂಥವು ಪರಿಸಮಾಪ್ತಿಯಾಗಿ ಜಗತ್ ಪ್ರಸಿದ್ಧವಾಗುವ ವರೆಗೂ ಜಗದೋಪಕಾರವಾದ ನಿಮಿತ್ಯವಾಗಿ ಶಿವಾಜ್ಞೆಯಿಂದ ಶಿವಕಾರ್ಯವಾಗಿ ರಚಿಸಲುದ್ಯೋಗಿಸಿದ ಈ ಶಾಸ್ತ್ರವನ್ನು ಪೂರ್ಣಮಾಡಿ ಪ್ರಸಿದ್ಧ ಮಾಡುವ ವಿಷಯದಲ್ಲಿ ಸರ್ವರೀತಿಯಿಂದಲೂ ಸಹಾಯ ಮಾಡಿ ಗ್ರಂಥಕ್ಕಾಶ್ರಯವನ್ನು ಕೊಡಬೇಕೆಂದು ಸಮಸ್ತ ದ್ರವ್ಯಾಧಿಕಾರಿಗಳಾದ ಸಜ್ಜನ ಸದ್ಭಕ್ತ ಮಹಾರಾಜ ರಾಜರುಗಳನ್ನು ಮತ್ತು ಶಾಸ್ತ್ರಾಧಿಕಾರಿಗಳಾದ ಪಂಡಿತ ಮಾಹೇಶ್ವರರುಗಳನ್ನು ಕುರಿತು ಅರ್ಥ ಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ಕೊಟ್ಟು ಸರ್ವ ವಿಷಯಗಳಲ್ಲಿ ಸಹಾಯ ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುವೆನು. ಯಾತಕ್ಕೆಂದರೆ ಈ ಲೋಕದ ಜನರೆಲ್ಲರು ಇದನ್ನು ತಿಳಿದು ಜ್ಞಾನೋನ್ಮುಖರಾಗಿ ಧನ ಧಾನ್ಯ ಸಕಲ ಸಂಪದವನ್ನು ಸಮೃದ್ಧಿಯಾಗಿ ಪಡೆದು ಆನಂದ ಭೋಗದಿಂದಿರುವಲ್ಲಿ ಮೋಕ್ಷಾಪೇಕ್ಷೆ ಹುಟ್ಟಿ ಸರ್ವರು ಜ್ಞಾನದಾನೈಶ್ವರ್ಯ ಸಂಪನ್ನರಾದರೆ ಆ ಸತ್ಫಲವು ಈ ಗ್ರಂಥಕ್ಕಾಶ್ರಯ ಕೊಟ್ಟ ಪುಣ್ಯಾಶಾಲಿಗಳಿಗೆ ಪ್ರಾಪ್ತಿಸುವದು. "ಸ್ವದತ್ತಾ ದ್ವಿಗುಣಂ ಪುಣ್ಯಂ। ಪರದತ್ತಾನು ಪಾಲನಂ॥ ಪರದತ್ತಾಪಹಾರೇಣ। ಸ್ವದತ್ತಾಚ ನಿಷ್ಫಲಂ" ಎಂಬ ಪ್ರಮಾಣ ಉಂಟಾಗಿ ತಾನು ಮಾಡುವ ಪುಣ್ಯಕ್ಕಿಂತಲೂ ಪರರು ಮಾಡುವ ಕಾರ್ಯಕ್ಕೆ ಸಹಾಯ ಮಾಡಿದರೆ ಬಹು ಪುಣ್ಯವೆಂದು ಸಕಲ ಶಾಸ್ತ್ರಾಗಮ ಪುರಾಣಂಗಳಲ್ಲಿ ಹೇಳಿರುವದಾದ ಕಾರಣ ಪುಣ್ಯಶಾಲಿಗಳಾದವರು ಶಿವ ಕಾರ್ಯವಾದ ಈ ಗ್ರಂಥ ಪೂರ್ಣವಾಗಿ ಜಗತ್ ಪ್ರಸಿದ್ಧ ಮಾಡುವ ವಿಷಯದಲ್ಲಿ ಹಲವು ರೀತಿಯಿಂದ ಸಹಾಯ ಮಾಡಿ ಸತ್ಫಲವನ್ನು ಮತ್ತು ಪ್ರಸನ್ನತೆಯನ್ನು ಪಡೆಯತಕ್ಕದ್ದು. ಸಾಮರ್ಥ್ಯ ದೊರೆತೀತು. ಸಮಯ ದೊರೆಯದು. ಈ ಸಮಯದಲ್ಲಿ ಸಮರ್ಥರಾದ ಸದ್ಭಕ್ತರು ಸಹಾಯ ಮಾಡಿ ಸತ್ಫಲವನ್ನು ಪಡೆಯಬೇಕೆಂದು ಪ್ರಾರ್ಥಿಸುವೆನು.

ಸಿದ್ಧರಾಮಪ್ಪ ಕುನ್ನಾಳ
ಮು. ಚಿಕ್ಕನಾಳ ತಾ. ಸಿಂದಗಿ.

# ಮೊದಲನೆಯ ಭಾಗವು.

## ೧ ನೇ ಪ್ರಕರಣವು.

### ಕೃಷಿಕರಾದ ಯಜಮಾನರಿಗೆ ಹೇಳುವ ನೀತಿಯು.

ಸರ್ವ ತ್ರಾಣಿಯಾದ ದೇವರು ಸಕಲೈಶ್ವರ್ಯ ಸಂಪತ್ಕರವಾದ ದ್ರವ್ಯ ವನ್ನು ಸೂಕ್ಷ್ಮ ರೂಪಿನಿಂದ ಭೂಮಿಯಲ್ಲಿ ಮರೆ ಮಾಡಿದ್ದಾನೆ. ಸೂಕ್ಷ್ಮ ಜ್ಞಾನದಿಂದ ನೋಡಿದಲ್ಲಿ ಈ ಭೂಮಿಯು ಸುವರ್ಣಮಯವಾಗಿದೆ ಹೇಗೆಂ ದರೆ ಭಾಗ್ಯಶಾಲಿಯು ಮಣ್ಣು ಹಿಡಿದರೆ ಚಿನ್ನವಾಗುವದೆಂಬ ನಿಶ್ಚಯದಂತೆ ಸಕಲ ಪದಾರ್ಥಗಳ ಉದಯವು ಭೂಮಿಯಿಂದಲ್ಲದೆ ಮತ್ತಾವುದರಿಂದಲೂ ಉತ್ಪನ್ನವಾಗಲಾರದು. ಬಹು ಬುದ್ಧಿಶಾಲಿಗಳಾದ ಪಂಡಿತರುಗಳು ಈ ಭೂಮಿ ಯನ್ನು ಪರೀಕ್ಷಿಸಿ ಯಾವ ತರದ ಭೂಮಿಯನ್ನು ಯಾವ ಪ್ರಕಾರದಿಂದ ಹದಕ್ಕೆ ತಂದು ಅದರಲ್ಲಿ ಯಾವ ಬೀಜಗಳನ್ನು ಬಿತ್ತಿದರೆ ಅದರಿಂದ ಹುಟ್ಟಿ ದಂಥ ಲಾಭವನ್ನು ಸೌಖ್ಯವನ್ನು ಪ್ರಯೋಜನವನ್ನು ಮಾಡಿಕೊಳ್ಳಬಹುದೋ ಎಂಬದನ್ನು ಆಲೋಚನೆಗೆ ತಂದು ಅದಕ್ಕೆ ತಕ್ಕ ಹಾಗೆ ಉಪಾಯಗಳನ್ನು ಮಾಡುತ್ತ ಭೂಮಿಯ ವ್ಯವಸಾಯವನ್ನು ಜಾಗ್ರತೆಯಿಂದ ಆಯಾಯ ಸಮ ಯಕ್ಕೂ ಏನೇನು ಮಾಡಬೇಕೆಂಬುದನ್ನು ಬೇಸರವಿಲ್ಲದೆ ಮಾಡುತ್ತ ಹೋದರೆ ಅದರಿಂದ ಅತ್ಯಂತ ಹಿತಕರವಾಗುವದು

ಈ ಭೂಮಿಯು ಕಲ್ಪವೃಕ್ಷಕ್ಕೂ ಕಾಮಧೇನುವಿಗೂ ಚಿಂತಾಮಣಿಗೂ ಪರುಷದ ಕಣಿಗೂ ಸಮಾನವಾಗಿದೆ ಇಂಥ ಭೂಮಿ ಇದ್ದು ಮನುಷ್ಯರು ಗಳು ಕಾಯಶಕ್ತಿಯಿಂದಲೂ ಬುದ್ಧಿಶಕ್ತಿಯಿಂದಲೂ ದ್ರವ್ಯಶಕ್ತಿಯಿಂದಲೂ ಮೆಹನತು ಮಾಡಿ ಶ್ರಮಪಟ್ಟು ಸಕಲ ಸಂಪತ್ತನ್ನು ದೊರಕಿಸಿಕೊಳ್ಳಬೇಕು. ಮೈಗಳ್ಳರಾಗಿ ದರಿದ್ರರಾಗಬಾರದು. ಮೈಗಳ್ಳತನವು ದರಿದ್ರಕ್ಕೆ ಮುಖ್ಯ ಕಾರ ಣವಾಗಿದೆ.

ಈ ಭೂಮಿಯನ್ನು ವಿಶ್ವಾಸದಿಂದ ನಂಬಿ ಅದರ ವಿಷಯದಲ್ಲಿ ಖರ್ಚು ಮಾಡಿದ ದ್ರವ್ಯವು ಮೆಹನತು ಮಾಡಿದ ಶ್ರಮವು ಫಲವನ್ನು ಕೊಡದೆ ಹೋಗಲಾರದು. ಮತ್ತು ಭೂಮಿಯ ವ್ಯವಸಾಯವನ್ನು ಮಾಡುವ ರೈತ

ರಿಗೆ ಸೂಚಿಸುವದೇನಂದರೆ ಎತ್ತುಗಳು ಬಲಾತ್ಕಾರವುಳ್ಳವುಗಳಾಗಿಯೂ ಪುಷ್ಟಿಕರವಾಗಿಯೂ ಇರಬೇಕು.

## ಎತ್ತುಗಳ ಆರೈಕೆ

ಕೃಷಿಕರಾದವರು ಎತ್ತುಗಳಿಗೆ ಯೋಗ್ಯ ಆಹಾರವಾದ ಹುಲ್ಲು ನೀರು ಹುರುಳಿ ಹತ್ತಿಯಕಾಳು ಹಿಂಡಿ ಹೊಟ್ಟು ಕಣಿಕೆಗಳಲ್ಲಿ ಯಾವ ಯಾವ ಕಾಲಗಳಲ್ಲಿ ಯಾವ ಯಾವ ಪದಾರ್ಥಗಳನ್ನು ಮೇಯಿಸಬೇಕೋ ಅಂಥ ಕಾಲದ ತಕ್ಕಂಥ ಆಹಾರಗಳನ್ನು ಅವುಗಳಿಗೆ ಯಥೇಷ್ಟವಾಗಿ ಕೊಟ್ಟು ವೇಳೆ ವೇಳೆಗೆ ಮೇವು ನೀರಿನಿಂದ ಪರಾಮರಿಸುತ್ತಿರಬೇಕು. ಮತ್ತು ಎತ್ತುಗಳನ್ನು ಕಟ್ಟುವ ಮನೆಯು ನಿರ್ಮಲವಿರಬೇಕು ಆ ಮನೆಯು ಅತಿ ಗಾಳಿಯು ಅತಿ ಉಷ್ಣವುಳ್ಳ ಹಾಗೆ ಇರಬಾರದು. ಎತ್ತುಗಳ ಕಾಲಿನಲ್ಲಿ ಮತ್ತು ಅವುಗಳು ಮಲಗುವ ಸ್ಥಳದಲ್ಲಿ ಕೆಸರು ಹುದಲು ರಾಡಿ ನೀರು ರೊಜ್ಜು ಆಗದ ಹಾಗೆ ಆಗಾಗ್ಗೆ ಅವುಗಳ ಸಗಣಿಯನ್ನು ಮೂತ್ರವನ್ನು ಬಳಿದು ಹಸನ ಮಾಡುತ್ತಿರಬೇಕು ಇದಲ್ಲದೆ ಕುದುರೆಗಳಿಗೆ ಹ್ಯಾಗೆ ಮೈ ಒರಿಸುವದರಿಂದ ಹಿತವಾಗುವದೋ ಹಾಗೆಯೇ ಎತ್ತುಗಳಿಗಾದರೂ ಮೈಯನ್ನು ತಿಕ್ಕಿ ಒರಿಸುವದರಿಂದ ಅತ್ಯಂತ ಸೌಖ್ಯ ಉಂಟಾಗುತ್ತಿಹುದು. ಆದು ಕಾರಣ ಅವುಗಳ ಮೈಯನ್ನು ದಿನದಿನದ ಸಾಯಂಕಾಲದಲ್ಲಿ ಹೀರೇಕಾಯಿ ಸೊಟ್ಟೆಯಿಂದ ಚನ್ನಾಗಿ ತಿಕ್ಕಿ ಒರಿಸಿ ಆ ಮೇಲೆ ಕೋರಿಯಿಂದ ತಿಕ್ಕಿ ಒರಿಸಬೇಕು ಅದರ ಮೇಲೆ ಕೈಯ್ಯಿಂದ ಚನ್ನಾಗಿ ಯಾವತ್ತು ಮೈಯ್ಯನ್ನು ಕಾಲುಗಳನ್ನು ಮೋಹನತಿಯಿಂದ ಬೇಸರವಿಲ್ಲದೆ ಅನುವಾಗಿ ತಿಕ್ಕಿ ಒರಿಸುವದರಿಂದ ಯಾವತ್ತು ನರಗಳು ಸ್ಪೈಲಾಗಿ ಸಮಧಾತು ಬರುವದು. ಮತ್ತು ಎತ್ತುಗಳು ಎಷ್ಟು ದಣಿದ್ದರೂ ಅವುಗಳ ಶ್ರಮವು ಪರಿಹಾರವಾಗಿ ವಿಶ್ರಾಂತಿಯನ್ನು ಹೊಂದುವವು ಅದರಿಂದ ಅವುಗಳ ಮನಸ್ಸಿಗೆ ಸಂತೋಷ ಹುಟ್ಟಿ ದೇಹಕ್ಕೆ ಆರೋಗ್ಯವಾಗಿ ತ್ರಾಣವು ಪುಷ್ಟಿಯು ದಿನಂಪ್ರತಿಯಲ್ಲಿ ಹೆಚ್ಚುತ್ತ ಹೋಗುವದು. ಇದರಲ್ಲಿ ನೆನಪಿನಲ್ಲಿ ಇಡತಕ್ಕದ್ದೇನಂದರೆ, ಕೃಷಿಕರಾದವರು ಪಶುಗಳನ್ನು ತಮ್ಮ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಯನ್ನಿಟ್ಟು ಪಾಲನ ಮಾಡಬೇಕು. ಯಾತಕ್ಕೆಂದರೆ ಎತ್ತು ಇಲ್ಲದ ಮನೆಗೆ ಎದೆ ಇಲ್ಲವು ಎಂಬ ಗಾದೆಯುಂಟು. ಇದರ ಅರ್ಥವು ತ್ರಾಣವುಳ್ಳ ಎತ್ತುಗಳು ಇಲ್ಲದ ಕೃಷಿಕ ಜನರುಗಳಿಗೆ ಧೈರ್ಯವಿಲ್ಲವೆಂಬುವದು ನಿಶ್ಚಯವಾಗಿದೆ. ಆದು ಕಾರಣ ಪಶುಗಳಿಗೆ ಹುಲ್ಲು ನೀರುಗಳಿಗಿಂತಲೂ ಹೆಚ್ಚು ಸೌಖ್ಯವಾದದ್ದು ಕೈಯಾರೈಕೆಯು. ಹೇಗೆಂದರೆ ಅವುಗಳಿಗೆ ನಿತ್ಯದಲ್ಲೂ ಸ್ವಲ್ಪ ಸ್ವಲ್ಪ ಅನ್ನವನ್ನು ಹುಳಿ ನೀರನ್ನು ಕಚ್ಚು ನೀರನ್ನು ಹಾಕು

ತ್ತಿರಬೇಕು. ಹಾಗು ದಿನಂಪ್ರತಿಯಲ್ಲಿಯೂ ತಪ್ಪದೇ ಅವುಗಳ ಮೈಯ್ಯನ್ನು ಒರಿಸುತ್ತಿರಬೇಕು.

## ಒಕ್ಕಲುತನ ಸಾಮಾನುಗಳ ವ್ಯವಸ್ಥೆ.

ಭೂಮಿಯ ವ್ಯವಸಾಯಕ್ಕೆ ಬೇಕಾಗಿರುವ ಯಾವತ್ತು ಕಟ್ಟಿಗೆ ಕಬ್ಬಿಣದಿಂದ ಮಾಡಲ್ಪಟ್ಟಿರುವ ಸಾಮಾನುಗಳು ನೇಗಲಿ ಮಡಿಕೆ ರೆಂಟೆ ಕುಂಟೆ ಕೂರಿಗಿ ಯಡಿಯ ಕುಂಟೆ ಈಸು ನೊಗಗಳು ಶಿಲ್ಪಶಾಸ್ತ್ರ ಕ್ರಮದಂತೆ ಅನುವಾಗಿಯೂ ಬಲಾತ್ಕಾರವಾಗಿಯೂ ಇರಬೇಕು ಮತ್ತು ಕಬ್ಬಿಣದ ಸಾಮಾನುಗಳಲ್ಲಿ ಮುಂಜ, ಬಳಿ, ಕುಡ, ಮೊಳೆ, ಕೊಡ್ಲಿ, ಗುದ್ದಲಿ, ಬೆಡಗ, ಬಾಚಿ, ಉಳಿ, ಕುರಿಪೆ, ಕುಡಗೋಲು ಮುಂತಾದ ಯಾವತ್ತು ಸಾಮಾನುಗಳು ಹದನಾಗಿಯೂ ಮೊನೆಯಾಗಿಯೂ ದಪ್ಪಾಗಿಯೂ ಬಲಾತ್ಕಾರವಾಗಿಯೂ ಕೈಯ್ಯಲ್ಲಿ ಅನುವಾಗಿಯೂ ಇರಬೇಕು ಮುಖ್ಯವಾಗಿ ಇದರ ತಾತ್ಪರ್ಯವೇನಂದರೆ ತನ್ನ ಯಾವತ್ತು ಸಾಮಾನುಗಳು ಚನ್ನಾಗಿ ಇದ್ದು ಮಿಣಿ ಕಣ್ಣಿ ಹಗ್ಗ ಮೊದಲಾದವುಗಳು ಬಲಾತ್ಕಾರವಾಗಿ ಇರಬೇಕು. ಮತ್ತು ಎತ್ತುಗಳು ಪುಷ್ಟಿಕರವಾಗಿ ತ್ರಾಣವುಳ್ಳವಾಗಿ ಇರಬೇಕು ಇದರ ವಿಷಯದಲ್ಲಿ ಲೋಕ ದೃಷ್ಟಾಂತವಾದ ಒಂದು ಸಣ್ಣ ಇತಿಹಾಸವನ್ನು ಹೇಳಬೇಕಾಗಿದೆ. ಅದು ಹೇಗಂದರೆ:—

## ಕಥೆಯು.

ಒಂದು ಚಿಕ್ಕ ಗ್ರಾಮದಲ್ಲಿ ಒಬ್ಬ ವಿವೇಕ ಕೃಷಿಕನು ತನ್ನ ಎರಡು ಎತ್ತುಗಳು ಬಲಿಷ್ಠವುಳ್ಳವಾಗಿದ್ದು ಅವುಗಳಿಂದ ಒಂದು ಹೊಲವನ್ನು ಮಾಡಿಕೊಂಡು ಸೌಖ್ಯದಿಂದ ಇದ್ದನು ಕೆಲವು ದಿವಸಗಳು ಆದ ಮೇಲೆ ಆ ಊರಲ್ಲಿ ಇರುವ ಯಾವತ್ತು ರೈತಜನರುಗಳೆಲ್ಲರು ಕೂಡಿ ಆಲೋಚಿಸಿದ್ದೇನಂದರೆ, ಈ ಗೃಹಸ್ಥನು ಎರಡು ಎತ್ತುಗಳಿಂದೆ ಒಂದೇ ಹೊಲದ ವ್ಯವಸಾಯವನ್ನು ಮಾಡಿ ನಮ್ಮೆಲ್ಲರಕಿಂತಲೂ ಹೆಚ್ಚು ಬೆಳೆಯುತ್ತಾನೆ. ಇವನು ಮಂತ್ರಗಾರನಾಗಿ ಏನೋ ಮಾಟವಿದ್ಯೆಯಿಂದ ನಮ್ಮೆಲ್ಲರ ರಾಶಿಯ ಧಾನ್ಯವನ್ನು ತನ್ನ ಹೊಲದ ರಾಶಿಯಲ್ಲಿ ಬರಮಾಡಿಕೊಳ್ಳುತ್ತಾನೆ. ಆದರಿಂದ ನಾವು ಎಂಟು ಹತ್ತು ಎತ್ತುಗಳನ್ನು ಕಟ್ಟಿ ೩—೪ ಹೊಲಗಳ ವ್ಯವಸಾಯವನ್ನು ಮಾಡಿದಾಗ್ಯಾದರೂ ಇವನಷ್ಟು ಧಾನ್ಯವು ನಮಗೆ ಸಿಕ್ಕುವದಿಲ್ಲವೆಂದು ನಿಶ್ಚೈಸಿ ವೈರವನ್ನು ತಾಳಿ ಎಲ್ಲರೂ ಕೂಡಿ ನ್ಯಾಯಾಧೀಶರ ಸಭೆಯಲ್ಲಿ ಫಿರ್ಯಾದಿಯನ್ನು ಮಾಡಿದರು. ಏನಂದರೆ ಇವನು ಮಂತ್ರಗಾರನಾಗಿದ್ದು ನಮ್ಮೆಲ್ಲರ ರಾಶಿಯನ್ನು ತನ್ನ ರಾಶಿಯಲ್ಲಿ ಬರಮಾಡಿಕೊಳ್ಳುತ್ತಾನೆ. ಹೇಗೆಂದರೆ ನಾವು ಎಂಟು ಹತ್ತು ಎತ್ತುಗಳನ್ನು

ಕಟ್ಟಿ ೩—೪ ಹೊಲಗಳ ವ್ಯವಸಾಯುವನ್ನು ಮಾಡುತ್ತೇವೆ. ಆದರೆ ಈ ಗೃಹಸ್ಥನು ಎರಡು ಎತ್ತುಗಳಿಂದ ಒಂದೇ ಹೊಲದ ವ್ಯವಸಾಯದಿಂದ ನಮ್ಮೆಲ್ಲರಕ್ಕಿಂತಲೂ ಹೆಚ್ಚು ಧಾನ್ಯವನ್ನು ತರುತ್ತಾನೆ ಇದರ ಕಾರಣವು ಈ ಗೃಹಸ್ಥನು ಕಲಿತಿರುವ ಮಂತ್ರವಿದ್ಯೆಯ ಸಾಮರ್ಥ್ಯವೆಂದು ನಮಗೆ ತಿಳಿಯಬಂದುದರಿಂದ ಇದರ ಬಂದೋಬಸ್ತಿಯ ಬಗ್ಗೆ ತಮ್ಮ ಸನ್ನಿಧಿಗೆ ಬಂದಿರುವೆವೆಂದು ತಮ್ಮ ವ್ಯಾಜ್ಯದ ಮೂಲವನ್ನು ಶೃತಪಡಿಸಿದರು. ಆಗ ಯಾವತ್ತು ಜನರು ಹೇಳುವದನ್ನು ಕೇಳಿದಾಗಲೇ ನ್ಯಾಯಾಧೀಶನು ಇದರ ಪರೀಕ್ಷೆಗೋಸುಗ ಆ ಗೃಹಸ್ಥನನ್ನು ಕರೆಯುಕಳುಹಿಸಿದನು. ಆ ಕೃಷಿಕನಾದ ಗೃಹಸ್ಥನಿಗೆ ಈ ಸಂಗತಿಯು ತಿಳಿದಾಗಲೆ ತ್ರಾಣವಂತನಾದ ತನ್ನ ಮಗನನ್ನು ಬಲಿಷ್ಠಳಾದ ತನ್ನ ಮಗಳನ್ನು ಯಾವತ್ತು ತನ್ನ ಹೊಲದ ವ್ಯವಸಾಯದ ಸಾಧನವಾದ ಸಾಮಾನುಗಳನ್ನು ಪುಷ್ಟಿಕರವಾದ ತನ್ನ ಎರಡು ಎತ್ತುಗಳನ್ನು ಸಹ ತೆಗೆದುಕೊಂಡು ಹೋಗಿ ನ್ಯಾಯಾಧೀಶರ ಸಮ್ಮುಖದಲ್ಲಿರಿಸಿ ಹೇಳಿದ್ದೇನಂದರೆಃ—ನಾನು ಹಾಗೂ ಈಗ ಇಲ್ಲಿ ನಿಂತಿರುವ ನನ್ನ ಮಗನು ಮತ್ತು ನನ್ನ ಮಗಳು ಈ ಮೂವರು ತ್ರಾಣವುಳ್ಳವರಾಗಿದ್ದು ಕ್ಷಣವಾದರೂ ವ್ಯರ್ಥವಾಗಿ ಹೊತ್ತನ್ನು ಕಳೆಯದೆ ಬೇಸರವಿಲ್ಲದೆ ಹೊಲದ ಕೆಲಸದಲ್ಲಿ ಕಷ್ಟಪಡುತ್ತೇವೆ. ಮತ್ತು ಈ ಎರಡು ಎತ್ತುಗಳು ತ್ರಾಣವುಳ್ಳವಾದುದರಿಂದ ಎಂಟು ಎತ್ತುಗಳಿಗೆ ಹೋಗದಂಥಾ ಕರಕಿಯನ್ನು ಎರಡೇ ಎತ್ತುಗಳಿಂದ ಕಳೆದು ಭಂಡಿಯ ಮೇಲೆ ಗೊಬ್ಬರವನ್ನು ಹಾಕಿ ಹೊಲವನ್ನು ಗೊಬ್ಬರದಿಂದ ತುಂಬಿಸಿದ್ದೇವೆ ಮತ್ತು ಬೆಳೆಯಾದ ಮೇಲೆ ಹೊಲದಲ್ಲಿ ಒಂದಾದರೂ ಕಸದ ನಾಟಿಕೆ ಇಲ್ಲದ ಹಾಗೆ ನಾವು ಮೂವರು ಬೇಸರವಿಲ್ಲದೆ ತೆಗೆದುಹಾಕುತ್ತೇವೆ ಮತ್ತು ಅದರ ಆರೈಕೆಯನ್ನು ಯಾವ ಯಾವ ಸಮಯಕ್ಕೆ ಹ್ಯಾಗೆ ಮಾಡಬೇಕಾಗುವದೋ ಹಾಗೆ ಮಾಡುವದಕ್ಕೆ ಬೇಕಾಗಿರುವ ಸಾಧನವಾದ ಯಾವತ್ತು ನನ್ನ ಸಾಮಾನುಗಳು ಎಷ್ಟು ಚನ್ನಾಗಿವೆಯೋ ಇದನ್ನು ನೋಡುವದಕ್ಕೆ ಸರ್ವ ಪದಾರ್ಥಗಳನ್ನು ತಮ್ಮ ಎದುರಿನಲ್ಲಿಯೋ ಇಟ್ಟದ್ದೇನೆ ಇವುಗಳನ್ನು ನೋಡಿದಾಗಲೆ ನನಗೆ ಈ ಒಂದೇ ಹೊಲವು ಇವರೆಲ್ಲರಕಿಂತಲೂ ಹೆಚ್ಚು ಧಾನ್ಯವನ್ನು ಕೊಡಬಹುದೋ ಇಲ್ಲವೋ ಎಂಬದನ್ನು ಪರೀಕ್ಷಿಸಿರೆಂದು ಹೇಳಿದನು.

ಆ ಸಭೆಯಲ್ಲಿದ್ದವರೆಲ್ಲರು ಈ ನ್ಯಾಯುವನ್ನು ಪರೀಕ್ಷಿಸಿದಲ್ಲಿ ಭೂಮಿಯು ಬೆಳೆಯು ಚನ್ನಾಗಿ ಫಲಿಸುವದಕ್ಕೆ ಎತ್ತುಗಳೂ ಸಾಮಾನುಗಳೂ ಬಲಾತ್ಕಾರವಾಗಿ ಮಾಡುವವರು ತ್ರಾಣವುಳ್ಳವರಾಗಿ ಭೂಮಿಯು ಪರೀಕ್ಷೆಯನ್ನು ಅದರ ಹದದ ಕಾಲವನ್ನು ಬಲ್ಲವರಾಗಿ ಇರಬೇಕೆಂಬುವದು ನಿಶ್ಚಯವಾಗಿದೆ. ಆದರೆ ಈ ಗೃಹಸ್ಥನು ಭೂಮಿಯು ವ್ಯವಸಾಯ ಮಾಡುವ ಕ್ರಮವನ್ನು ಪಾರಂಗತ ಬಲ್ಲವನಾದುದರಿಂದ ಚನ್ನಾಗಿ ಎಲ್ಲರಕಿಂತಲೂ ಹೆಚ್ಚು ಬೆಳೆ ಮಾಡಿಕೊಳ್ಳ

ತ್ತನೆ, ಉಳಿದ ಯಾವತ್ತು ಜನರು ಮೂರ್ಖರಿದ್ದುದರಿಂದ ವಿಪರೀತ ಕಲ್ಪನೆಯಿಂದ ಈ ಗೃಹಸ್ಥನ ಮೇಲೆ ವ್ಯಾಜ್ಯವನ್ನು ತಂದಿರುವರೆಂದು ತಿಳಿದು ನ್ಯಾಯಾಧೀಶನು ಅವರೆಲ್ಲರಿಗೂ ನೀವು ಈ ಗೃಹಸ್ಥನಂತೆ ಮಾಡಿಕೊಂಡಿರಬೇಕೆಂದು ಚನ್ನಾಗಿ ಬುದ್ಧಿಯನ್ನು ಹೇಳಿ ಎಲ್ಲರನ್ನು ಕೈಗೂಡಿಸಿ ಅವರವರ ವೈರವನ್ನು ಬಿಡಿಸಿ ಕಳುಹಿಸಿದನು.

ಈ ಇತಿಹಾಸದ ತಾತ್ಪರ್ಯದಿಂದ ಕೃಷಿಕರಾದ ಯಾವತ್ತು ಜನರು ತಿಳಿಯತಕ್ಕದ್ದೇನಂದರೆ, ಬಲಹೀನವಾದ ಎತ್ತುಗಳಿಂದ ಯಾವ ಕೆಲಸವು ಸಾಗುವದಿಲ್ಲವಾದ ಕಾರಣ ವ್ಯೈಗಳ್ಳರಾದ ಮನುಷ್ಯರುಗಳನ್ನು ಬಲಹೀನವಾದ ಎತ್ತುಗಳನ್ನು ಬಿಟ್ಟು ತ್ರಾಣವುಳ್ಳ ಪುಷ್ಟಿಕರವಾದ ಎತ್ತುಗಳನ್ನು ಬಲಿಷ್ಠರಾದ ಮನುಷ್ಯರುಗಳನ್ನು ಉತ್ತಮವಾದ ಗಟ್ಟಿಯಾದ ಹದನಾದ ಮೊನೆಯಾದ ಅನುವಾದ ಸಾಮಾನುಗಳನ್ನು ಸಿದ್ಧಮಾಡಿಕೊಂಡು ಭೂಮಿಯ ವ್ಯವಸಾಯವನ್ನು ಮಾಡಲಾರಂಭಿಸಬೇಕು.

## ಹೊಲಗಳ ಆರೈಕೆ.

ಅತ್ಯಾಶೆಯಿಂದ ಬಹಳವಾಗಿ ಹತ್ತೆಂಟು ಹೊಲಗಳನ್ನು ಮಾಡಿಕೊಂಡು ಅದರ ಆರೈಕೆಯು ತನ್ನಿಂದಾಗದಾಗಿ ಭೂಮಿಯನ್ನು ಕೆಡಿಸಿ ತನ್ನ ಉತ್ಪನ್ನವನ್ನು ಕಡಿಮೆ ಮಾಡಿಕೊಳ್ಳಲಾಗದು ತನ್ನ ತ್ರಾಣವನ್ನು ಮೊದಲೇ ಪರೀಕ್ಷಿಸಿ ತನ್ನ ಕಾಯಶಕ್ತಿಯಿಂದಲೂ ಬುದ್ಧಿಶಕ್ತಿಯಿಂದಲೂ ಅಥವಾ ಅರ್ಥಶಕ್ತಿಯಿಂದಲೂ ಎಷ್ಟು ಭೂಮಿಯ ಆರೈಕೆಯು ತನ್ನಿಂದಾಗುವದದೆಯೋ ಅಷ್ಟು ಭೂಮಿಯನ್ನು ತನ್ನ ಕೈವಶಮಾಡಿಕೊಂಡು ಬಹು ಎಚ್ಚರದಿಂದ ಸುಲಭವಾದ ಯುಕ್ತಿಗಳಿಂದ ಆ ಭೂಮಿಯ ವ್ಯವಸಾಯವನ್ನು ಮಾಡಿಕೊಳ್ಳಬೇಕು.

## ಸೇವಕರ ವ್ಯವಸ್ಥೆ.

ಶ್ರೀಮಂತರಾದರೆ ಅಥವಾ ಐಶ್ವರ್ಯವುಳ್ಳವರಾದರೆ ಅಂಥವರು ಬೇಕಾದಷ್ಟು ಭೂಮಿಯ ವ್ಯವಸಾಯವನ್ನಾದರೂ ಮಾಡುವದಕ್ಕೆ ಅರ್ಥಶಕ್ತಿಯು ಇರುವದರಿಂದ ಒಂದು ವೇಳೆಗೆ ಹಾಗೆ ಭೂಮಿಯನ್ನು ಮಾಡಿಕೊಳ್ಳುವದಕ್ಕೂ ಸಂಶಯವಿಲ್ಲವು ಆದಾಗ್ಯೂ ಆ ಕೆಲಸದ ಮೇಲೆ ತಾವು ಸ್ವತಃ ನಜರು ಹಾಕಬೇಕು. ಇಲ್ಲವೇ ಜಾಗ್ರತನಾದ ಸರ್ವಲಕ್ಷಣ ಸಂಪನ್ನನಾದ ವಿಶ್ವಾಸಿಕ ಮನುಷ್ಯನನ್ನು ಆ ಕೆಲಸಕ್ಕೆ ಅಧಿಕಾರಿಯಾಗಿ ನೇಮಿಸಿ ಆತನಿಂದಲಾದರೂ ಆ ಕೃಷಿಕೃತ್ಯವನ್ನು ಚನ್ನಾಗಿ ಸಾಗಿಸಬೇಕು. ಮತ್ತು ಸರ್ವ ಸೇವಕರು ಕೂಲಿಯವರುಗಳು ಯಾವತ್ತೂ ಆ ಕೆಲಸದಲ್ಲಿರುವಂಥ

ಜನರು ಆ ಕೆಲಸಕ್ಕೆ ಮುಖ್ಯಾಧಿಕಾರಿಯಾದವನ ಆಜ್ಞೆಯನ್ನು ಮೀರದೆ ಅವನ ಕೈಕೆಳಗೆ ನಡೆದುಕೊಂಡು ಹೇಳಿದ ಹಾಗೆ ಕೇಳಿಕೊಂಡು ಇರುವ ಹಾಗೆ ಕಟ್ಟು ಮಾಡಬೇಕು. ಮತ್ತು ಆ ಕೆಲಸದ ಅಧಿಕಾರವನ್ನು ಒಬ್ಬನಿಗೆ ನೇಮಿಸು ವದು ಉತ್ತಮವು ಯಾವ ಕೆಲಸಕ್ಕಾದರೂ ಬಹು ನಾಯಕರಾಗಬಾರದು. ಒಂದೇ ಕೆಲಸದಲ್ಲಿ ಬಹಳ ಮಂದಿ ತಮ್ಮ ತಮ್ಮ ಇಚ್ಛಾನುಸಾರವಾಗಿ ಎಲ್ಲರು ಅಧಿಕಾರಿಗಳಾಗಿ ನಡೆಯುವದರಿಂದ ಆ ಕೆಲಸವು ಕೆಡದೇ ಇರಲಾರದು. ಬಹು ನಾಯಕರಿಂದ ಕೇಡುಂಟು.

ಒಬ್ಬನು ಯಜಮಾನನಾದವನು ತನ್ನ ಕೈಕೆಳಗೆ ಎಷ್ಟು ಜನರನ್ನು ತೆಗೆದುಕೊಂಡು ಕೆಲಸ ನಡಿಸತೊಡಗಿದಾಗ್ಯಾದರೂ ಎಲ್ಲರಿಗೂ ಸ್ವತಂತ್ರ ಅಧಿಕಾರವನ್ನು ಕೊಡದೆ ತನ್ನ ಆಜ್ಞೆಯ ಪ್ರಕಾರ ನಡೆದುಕೊಳ್ಳುವ ಹಾಗೆ ನೇಮಿಸಿಕೊಳ್ಳಬೇಕು. ಆಜ್ಞೆಯ ಪ್ರಕಾರ ನಡೆಯದ ಜನರನ್ನು ಆ ಕೆಲಸ ದಿಂದ ದೂರ ಮಾಡುವ ಅಧಿಕಾರವನ್ನು ತನ್ನ ಕಡೆಗೆ ಇಟ್ಟುಕೊಳ್ಳಬೇಕು. ಮತ್ತು ತಾನು ಸ್ವತಃ ನೋಡದೆ ಆ ಕೆಲಸವನ್ನು ಎರಡನೆಯವರ ಕೈಯ್ಯಿಂದಲು ಮಾಡಿಸಬೇಕಾದರೆ ಕಾಯಶಕ್ತಿ ಇಲ್ಲದವನಾದರೂ ಆ ಕೆಲಸದ ಮಾಹಿತಿ ಚನ್ನಾಗಿ ತಿಳಿದಿರುವ ಬುದ್ಧಿಶಕ್ತಿಯುಳ್ಳ ಕೃಷಿಜ್ಞಾನ ಪರಿಣತನನ್ನು ಆ ಕೆಲಸ ದಲ್ಲಿ ನಾಯಕನಾಗಿ ನೇಮಿಸಿ ಅವನ ಕೈಕೆಳಗೆ ಎಲ್ಲರೂ ನಡೆಯುವ ಹಾಗೆ ಮಾಡಿ ಅವನು ತನ್ನ ಆಜ್ಞೆಯ ಪ್ರಕಾರ ನಡೆಯುವ ಹಾಗೆ ಕಟ್ಟಳೆ ಯನ್ನು ನೇಮಿಸಿ ತಾನಾದರೂ ಆ ಕೆಲಸದಲ್ಲಿ ಜಾಗ್ರತನಾಗಿ ಪರಾಮರಿಸು ತ್ತಿರಬೇಕು.

ಕೃಷಿಕನಾದ ಮುಖ್ಯ ಯಜಮಾನನು ಬುದ್ಧಿಶಕ್ತಿಯಿಂದ ಕೂಲಿಯ ಆಳುಗಳ ಕಡೆಯಿಂದ ಕೆಲಸ ಮಾಡಿಸುವವನಾದರೆ ತಾನು ನಿತ್ಯದಲ್ಲು ಹೊಲಕ್ಕೆ ಹೋಗಿ ಆಗಾಗ್ಗೆ ತಕ್ಕ ಆಲೋಚನೆಯನ್ನು ಯುಕ್ತಿಗಳನ್ನು ಹೇಳಿ ಆಳುಗ ಳಿಂದ ಆ ಕೆಲಸವನ್ನು ಮಾಡಿಸುತ್ತಿರಬೇಕು ಯಾತಕ್ಕೆಂದರೆ ತಾನು ಮಾಡಿದ್ದು ಉತ್ತಮವು, ಮಗನು ಮಾಡಿದ್ದು ಮಧ್ಯಮವು, ಆಳು ಮಾಡಿದ್ದು ಹಾಳು ಎಂಬ ಗಾದೆಯ ಹಾಗೆ ತನಗೆ ಇದ್ದಷ್ಟು ಆತುರವು ಆಳುಗಳಿಗೆ ಇರುವದಿ ಲ್ಲವಾದ ಕಾರಣ ತಾನು ಸ್ವತಃ ಆ ಕೆಲಸದಲ್ಲಿ ಜಾಗ್ರತನಾಗಿದ್ದು ನಿತ್ಯದಲ್ಲಿಯೂ ಪರಾಮರಿಸುತ್ತಿರಬೇಕು.

ಹೊಲವನ್ನು ನೋಡದೆ ಇದ್ದರೆ ಕೆಡುವದು, ಸಾಲವನ್ನು ಕೇಳದೆ ಇದ್ದರೆ ಮುಳುಗುವದು, ಮನ ಬಂದ ಪರಿಯಲ್ಲಿ ವಿವೇಕವಿಲ್ಲದೆ ಆಚರಿಸಿದರೆ ಬುದ್ಧಿಹೀನತ್ವವಾಗುವದು. ಅಜ್ಞಾನಿಗಳ ಸಂಗದಿಂದ ಅಜ್ಞಾನಿಗಳಾಗುವರು. ಸುಜ್ಞಾನಿಗಳ ಸಂಗದಿಂದ ಮಹಾಜ್ಞಾನ ದೊರೆಯುವದು. ಅವರವರ ಸಂಗ

ದಿಂದ ಆವರವರಂತೆ ಆಗುವರು. ಅದು ಕಾರಣ ಈ ಕೃಷಿಕೃತ್ಯದಲ್ಲಿ ಬಹು ಜಾಣನಾಗಿ, 'ನೋಡಿದರೆ ಹೊಲ, ಮಾಡಿದರೆ ಮನೆ, ಕೇಳಿದರೆ ಸಾಲ, ವಿಚಾರಿಸಿದರೆ ಜ್ಞಾನ' ಎಂಬ ಗಾದೆಯ ಹಾಗೆ ತಾನು ಕೃಷಿಕನಾಯಿತ್ತಾದರೆ ಸರ್ವದಾ ಹೊಲದ ಕೆಲಸಕ್ಕೆ ಮನಸ್ಸು ಹಾಕುತ್ತಿರಬೇಕು. ಅಥವಾ ಒಂದು ಪಕ್ಷದಲ್ಲಿ ಅಡಚಣಿ ಇದ್ದು ತಾನು ಹೊಲಕ್ಕೆ ಹೋಗದ ಹಾಗೆ ಇದ್ದರೆ ಹತ್ತು ದಿವಸದೊಳಗಾಗಿ ಒಂದು ವೇಳೆಯಾದರೂ ಹೋಗಿ ನೋಡಿದಲ್ಲಿ ಯಾವ ಯಾವ ಕೆಲಸಗಳನ್ನು ಹೇಗೆ ಮಾಡಿಸಬೇಕೆಂಬುವದರ ಆಲೋಚನೆಯು ತಿಳಿಯುತ್ತದೆ. ಹೇಗಂದರೆ--"ಪರಿತೆಪಂಚರಾತ್ರೇಣ । ಕೃಷಿತೋ ದಶರಾತ್ರಯೋ । ಎಂದುಂಟಾಗಿ ತಾನು ಸರ್ವದಾ ಹೊಲಕ್ಕೆ ಹೋಗುತ್ತಿರಬೇಕು. ಮತ್ತು ತಾನು ಹೊಲಕ್ಕೆ ಹೋಗದೆ ಇದ್ದರೆ ನಿತ್ಯದಲ್ಲೂ ಸಾಯಂಕಾಲಕ್ಕೆ ಆ ಕೆಲಸದವರೆಲ್ಲರನ್ನು ಕರೆದು ಆ ದಿವಸ ಅವರು ಹೊಲದಲ್ಲಿ ಮಾಡಿದ ಕೆಲಸವೇನು ಅದನ್ನು ಹ್ಯಾಗೆ ಮಾಡಿದರೆಂಬುದನ್ನು ಅವರ ಮುಖದಿಂದ ಕೇಳಿ ಮರುದಿವಸ ಮಾಡತಕ್ಕ ಕೆಲಸದ ಆಲೋಚನೆಯನ್ನು ಅವರುಗಳಿಗೆ ತಿಳಿಸುತ್ತ ದಿನಂಪ್ರತಿಯಲ್ಲಿ ಕೇಳುತ್ತಿರಬೇಕು.

## ೨ ನೇ ಪ್ರಕರಣವು.

### ನಟ್ಟು ಕಡಿಸುವದು.

ನಮ್ಮ ದೇಶಬಾಂಧವರಾದ ಯಾವತ್ತು ರೈತಜನರಿಗೆ ಸೂಚಿಸುವದೇ ನಂದರೆ, ಭೂಮಿಯು ಹಸನಾಗಿರಬೇಕು ಅದರಲ್ಲಿ ಕರಿಕೆ ಕಣಿಗೆ ನಟ್ಟು ಗಳು ಇರಲಾಗದು ಹೊಲದ ಮಧ್ಯದಲ್ಲಿ ಕಲ್ಲುಕುಟರಿ, ನಟ್ಟು, ಸಣ್ಣಸಣ್ಣ ಗಿಡಗಳು, ಬನ್ನಿಯ ಕಂಟಿ, ಬೇವಿನ ಕಂಟಿ, ವಡಿಯನಕಂಟಿ, ಎಕ್ಕೆಯ ಗಿಡಗಳು, ಮುಳಗಲ ಕಂಟಿ ಮುಂತಾದ ಗಿಡಗಳಿದ್ದರೆ ಅವುಗಳ ಬೇರು ಸಹಿತ ಅಗಿದು ತಗೆಯಬೇಕು. ಭೂಮಿಯಲ್ಲಿ ಉತ್ತಮ ಮಧ್ಯಮ ಕನಿಷ್ಠ ಪ್ರತಿಯಾದ ಬಹು ಪ್ರಕಾದ ಜಮೀನುಗಳುಂಟು. ಯಾವ ಪ್ರಕಾರದ ಹೊಲ ಗಳಿಗಾದರೂ ನಟ್ಟು ಮುಂತಾದ್ದನ್ನು ಬೆಳಿಸಿದಲ್ಲಿ ಆ ಭೂಮಿಯಲ್ಲಿ ಪೈರು ಆಗುವದಿಲ್ಲ ಅದರಲ್ಲಿಯ ಗಿಡಗಳನ್ನು ಕಂಟಿಗಳನ್ನು ಒಂದಾವರ್ತಿ ಬೇರು ಸಹಿತವಾಗಿ ಅಗಿದು ಕಡಿದರೆ ನಿರ್ಮೂಲವಾಗುವವು ಕರಿಕೆಯು ಕಣಿಗೆಯು ಚನ್ನಾಗಿ ಬಹು ಶ್ರಮದಿಂದ ಕಳೆಯದಿದ್ದರೆ ಹೋಗವು ಅವುಗಳಲ್ಲಿ ಸ್ವಲ್ಪ ಉಳಿದರೆ ಪುನಃ ಹೊಲವನ್ನೆಲ್ಲ ಆಚ್ಛಾದಿಸುವವು. ಅದರೆ ಅಂಥ ಕರಿಕೆ ಮೊದಲಾದ ನಟ್ಟನ್ನು ಕಳೆಯಬೇಕಾದರೆ ಮೊದಲು ಎಂಟು ಹತ್ತು ಹನ್ನೆ ರಡು ಎತ್ತುಗಳ ದೊಡ್ಡ ನೇಗಿಲನ್ನು ಕಟ್ಟಿ ಕಾರ್ತೀಕಮಾಸದಿಂದ ಪ್ರಾರಂ ಭಿಸಿ ಮೂರು ಸಾಲು ಹೊಡೆಯಬೇಕು. ಆ ಮೇಲೆ ಹನ್ನೆರಡು ಎತ್ತಿನ ದೊಡ್ಡ ಕುಂಟೆಯನ್ನು ಕಟ್ಟಿ ಮೂರುಸಾಲು ಹರಗಬೇಕು ಮತ್ತು ಅದರಲ್ಲಿ ಕರಿಕೆ ಕಣಿಗೆಯ ಬೇರುಗಳು ಹೊರಟದ್ದರಲ್ಲಿ ಒಂದೂ ಉಳಿಯದ ಹಾಗೆ ಅವು ಗಳನ್ನು ಆರಿಸಿ ಕಡೆಗೆ ಹಾಕಬೇಕು. ಈ ಪ್ರಕಾರ ಒಂದು ವರುಷ ಮಾಗಿ ಯ ಮಾಡಿ ಎರಡನೇ ವರ್ಷದ ಬೇಸಿಗೆಯಲ್ಲಿ ಸ್ವಲ್ಪ ಸ್ವಲ್ಪ ಉಳಿದಿದ್ದರೆ ಗುದ್ದಲಿಯಿಂದ ಅಗಿದು ತೆಗೆಯಬೇಕು. ಇಷ್ಟಾದರೂ ಕರಿಕೆಯು ನಿರ್ಮೂಲ ವಾಗದೆ ಒಂದೊಂದು ಬೇರು ಉಳಿದರೆ ಅದು ಪುನಃ ಚಿಗಿತಿರುವದು. ಮತ್ತು ಮೂರನೆಯ ವರ್ಷ ಅದನ್ನು ಶೋಧಿಸಿ ಗುದ್ದಲಿಯಿಂದ ಅಗಿದು ತೆಗೆಯುತ್ತ ಹೋದರೆ ಹೊಲವು ಹಸನಾಗುವದು.

ಎಂಟು ಹತ್ತು ಹನ್ನೆರಡು ಎತ್ತುಗಳಿಂದ ಹೊಡೆಯುವ ಸಾಮರ್ಥ್ಯವು ತನಗೆ ಇಲ್ಲವಾದರೆ ಆರು ಎತ್ತುಗಳಿಂದ ಅಥವಾ ನಾಲ್ಕು ಎತ್ತುಗಳಿಂದ ನೇಗಿಲವನ್ನು ಹೊಡೆಯಬೇಕು. ಒಂದು ಪಕ್ಷದಲ್ಲಿ ದ್ರವ್ಯ ಶಕ್ತಿಯೂ ಇಲ್ಲ

ದಾಗಿ ಎಂಟು ಆರು ನಾಲ್ಕು ಎತ್ತುಗಳನ್ನು ತೆಗೆದುಕೊಳ್ಳುವ ತ್ರಾಣವು ತನಗೆ
ಇಲ್ಲವಾದರೆ ಎರಡು ಎತ್ತುಗಳಿಂದಾದರೂ ಹೊಡೆಯಬೇಕು. ಮತ್ತು ಎರಡು
ಎತ್ತಿನ ಮಡಿಕೆಯನ್ನು ಕಟ್ಟಬೇಕಾದರೆ ಎರಡೇ ಎತ್ತುಗಳಾದರೂ ತ್ರಾಣವು
ಳ್ಳವುಗಳಾಗಿ ಇರಬೇಕು ಮಡಿಕೆಯು ಮತ್ತು ಅದರ ಈಸು ಬಹಳ ಬಾಗಿನ
ಮೇಲೆ ಅನುವಾಗಿ ಎತ್ತುಗಳಿಗೆ ಬಹಳ ಜಡವಾಗದೆ ಇದ್ದು ಮಂಜವು ಹದ
ನಾಗಿ ಬಲಾತ್ಕಾರವಾಗಿ ಇರಬೇಕು ಆ ಸಣ್ಣ ನೇಗಿಲನ್ನು ಹೊಡೆಯುವ
ವನು ಜಾಗ್ರತನಾಗಿ ನಡೆಸಿ ಗಟ್ಟಿ ನೆಲವನ್ನು ಉಳಿಸದೆ ಸಾಲಿನ ಹೊಂದಿಗೆ
ಸಾಲು ಹಿಡಿದು ಹತ್ತಿಯಾಗಿ ಹೆಳ್ಳಿ ಕೀಳುವ ಹಾಗೆ ಎರಡು ಸಾಲು ಅಥವಾ
ಮೂರು ಸಾಲು ಮಡಿಕೆಯು ಹೊಡೆದು ತದನಂತರ ಆ ಹೆಳ್ಳಿಗಳು ಬಿಸಿಲು
ತಿಂದು ಒಡೆಯುವ ಹದಕ್ಕೆ ಬಂದಾಗಲೆ ಕುಂಟೆಯು ಕಟ್ಟಿ ಮೂರು ಸಾಲು
ಚನ್ನಾಗಿ ಹರಗಬೇಕು ಈ ಪ್ರಕಾರ ಮೂರು ವರುಷದ ಸರಿಯಂತರಕ್ಕು
ಹೊಡೆದ ಹೊಲವನ್ನೇ ಚನ್ನಾಗಿ ಮಡಿಕೆಯು ಹೊಡೆದು ಹರಗುತ್ತ ಮತ್ತು
ಮುಂಗಾರಿ ಪೂರ್ವದ ಮಳೆಯಾಗುವವರೊಳಗೆ ಒಂದೊಂದು ಬೇರು ಕರಿಕೆಯು
ನಾಟಿಕೆಯು ಕಾಣಬಂದರೆ ಅವುಗಳನ್ನು ಅರಿದು ತೆಗೆಯುತ್ತ ಹೋದರೆ
ಮೂರು ವರುಷಕ್ಕೆ ಕರಿಕೆಯು ಅಳಿದು ಹೋಗುತ್ತದೆ.

ಅರ್ಥ ಶಕ್ತಿಯು ಚನ್ನಾಗಿ ಇರುವಂಥ ದ್ರವ್ಯ ಸಂಪನ್ನರಾಗಿದ್ದರೆ
ಬೇಸಿಗೆಯ ಕಾಲವಲ್ಲಿ ಅಂದರ ಶಿವರಾತ್ರಿಗ ಆರಂಭ ಮಾಡಿಸಿ ಎರಡು
ತಿಂಗಳ ವರಗೂ ನಿತ್ಯದಲ್ಲು ನೂರು ಇನ್ನೂರು ಆಳುಗಳನ್ನು ಹಚ್ಚಿ ಹೊಲದ
ನಾಲ್ಕೂ ಮೂಲಿ ಸಹಿತ ಅಗಿಸಿ ಕರಿಕೆ ಕಣಿಗೆಯನ್ನು ತೆಗಸಿ ಅದರ ಬೇರು
ಗಳನ್ನು ಆರಿಸಿ ಕಡೆಗೆ ಹಾಕಿದರೆ ಎರಡು ವರ್ಷಕ್ಕೆ ಆ ಹೊಲವು ಹಸನಾಗು
ಗುತ್ತದ ದ್ರವ್ಯ ಶಕ್ತಿ ಇಲ್ಲದಂಥ ಬಡಜನರಾಗಿದ್ದರ ನಿತ್ಯದಲ್ಲು ಹತ್ತು
ಎಂಟು ಆಳುಗಳಿಂದ ಕಾರ್ತಿಕ ಮಾಸದಿಂದ ಪ್ರಾರಂಭಿಸಿ ವೈಶಾಖ ಮಾಸದ
ಅಂತ್ಯದ ವರಗೂ ನಟ್ಟುಕಡಿಸಬೇಕು ಒಂದು ಪಕ್ಷಕ್ಕೆ ಹತ್ತೆಂಟು ಆಳು
ಗಳು ಆದರೂ ಅಲ್ಲಿಯ ವರಗೂ ಹಣವನ್ನು ಕೊಡುವ ತ್ರಾಣವು ತನಗೆ ಇಲ್ಲ
ದಾದರೆ ಅದರ ಉದ್ದಿಶ್ಯವಾಗಿ ಸಾಲವನ್ನಾದರೂ ಮಾಡಿ ಹೊಲವನ್ನು ಕಿರ್ದಿ
ಮಾಡಿಕೊಳ್ಳಬೇಕು ಭೂಮಿಯ ವಿಷಯವಾಗಿ ಖರ್ಚು ಮಾಡಿದ ದ್ರವ್ಯವು
ಎಂದಿಗೂ ವ್ಯರ್ಥವಾಗಲಾರದು.

ನಟ್ಟು ಕಡಿದು ಹಸನ ಮಾಡಿದ ಹೊಲವು ಎರಿಯ ಭೂಮಿಯಾಗಿ
ದ್ದರೆ ಅದೇ ವರ್ಷ ಅದರಲ್ಲಿ ಕಡಲಿಯನ್ನು ಬಿತ್ತಬೇಕು. ಆ ಕಡಲಿಯ
ಬೆಳೆಯು ಸರ್ವೋತ್ಕೃಷ್ಟವಾಗಿ ನಟ್ಟು ಕಡಿಸುವದಕ್ಕೋಸ್ಕರ ಮಾಡಿದ ಸಾಲ
ವನ್ನೂ ಅದರ ಬಡ್ಡಿಯನ್ನೂ ಕಳೆದು ತನ್ನ ಕುಟುಂಬವನ್ನು ಸಹ ಪಾಲನೆ

ಮಾಡುವದು. ಆದರೆ ನಟ್ಟು ಕಡಿಸಿದ ಹೊಲವು ಮಸಾರಿ ಕೇಸರಿ ಮೊರ ಡಿಯ ಜಮೀನುಗಳಾದರೂ ಅಂಥ ಹೊಲಗಳಿಗೆ ನಟ್ಟು ಕಡಿಸಿದ ವರ್ಷ ಬೆಳೆಯ ಎಳ್ಳು ಬಿತ್ತಬೇಕು. ಮಂಡು ಭೂಮಿಯಾಗಿ ಮಡಿಕಟ್ಟು ನೆಲವಾಗಿ ದ್ದರೆ ಮೊದಲು ಎಳ್ಳು ಬಿತ್ತಿ ಆ ಬೆಳೆಯನ್ನ ತೆಗೆದುಕೊಂಡು ಪುನಃ ಕಡ ಲೆಯನ್ನಾಗಲಿ ಗೋದಿಯನ್ನಾಗಲಿ ಬಿಳಿಜೋಳವನ್ನಾಗಲಿ ಭೂಮಿಯ ಪರೀ ಕ್ಷಿಸಿ ಬಿತ್ತಬೇಕು

ಕೃಷಿಕರಾದವರು ಸಾಲವನ್ನ ಮಾಡಿ ಹಬ್ಬವನ್ನ ಮಾಡಬಾರದು. ಮನೆಯನ್ನು ಕಟ್ಟಿಸಬಾರದು ಹಾಗೂ ಸಾಲವನ್ನು ಮಾಡಿ ಸಂಭ್ರಮದಿಂದ ಲಗ್ನ ಶೋಭನ ಮುಂಜ ಮೊದಲಾದ ಕಾರ್ಯಗಳನ್ನು ಮಾಡಲಾಗದು ಮತ್ತು ಸಾಲವನ್ನು ಮಾಡಿ ಆಭರಣ ಮೊದಲಾದವುಗಳನ್ನ ಮಾಡಿಸಬಾರದು ಇದರ ವಿಷಯದಲ್ಲಿ ಗುಳೇದಗುಡ್ಡದಲ್ಲಿ ಮೂವತ್ತು ಸಹಸ್ರ ರೂಪಾಯಿಗಳನ್ನು ಖರ್ಚು ಮಾಡಿ ಘನಸಂಭ್ರಮದಿಂದ ಲಗ್ನವನ್ನ ಮಾಡಿದ ಆಲೂರ ಕರಕಪ್ಪನವರೇ ಸಾಕ್ಷಿ ಈಗಲೂ ಆತನ ಸ್ಥಿತಿಯು ಹೇಗಿರುವದೆಂಬದನ್ನು ನೀವೇ ವಿಚಾರಿಸಿ ತಿಳಿಯತಕ್ಕದ್ದು. ಆತನು ಮಾಡಿದ ಕೃತ್ಯವು ಹದಿನೈದು ದಿವಸದ ಪೂರ್ತಿ ಮಹಾ ಸಂಭ್ರಮವಾಗಿ ಕಾಣಿಸಿ ಕಡೆಯಲ್ಲಿ ಹಾನಿಗೆ ಕಾರಣವಾ ಯಿತು ಹೀಗೆ ಮಾಡದೆ ಇಷ್ಟು ದ್ರವ್ಯವನ್ನು ಖರ್ಚ ಮಾಡಿ ಕೆಲವು ಹೊಲ ಗಳನ್ನು ನಾಲ್ಕಾರು ಸಂಭ್ರಮದ ತೋಟಗಳನ್ನು ಮಾಡಿಸಿದ್ದರೆ ವರುಷ ವರು ಷಕ್ಕೆ ಇಪ್ಪತ್ತೈದು ಮೂವತ್ತು ಸಾವಿರ ರೂಪಾಯದ ಉತ್ಪನ್ನವು ನಿರಾಯಾ ಸದಿಂದ ಆಗುತ್ತ ತನ್ನ ವಂಶ ಪರಂಪರೆಯಲ್ಲಿ ದಾರಿದ್ರ್ಯವೇ ಇಲ್ಲದ ಹಾಗೆ ಆಗುತ್ತಿತ್ತು ಈದು ಕಾರಣ ಕೃಷಿಕರಾದವರು ಇಂಥ ಹುಚ್ಚು ಕಾರ್ಯಗಳಿಗೆ ಹೋಗಬಾರದು ಭೂಮಿಯಲ್ಲಿ ಎಷ್ಟು ಖರ್ಚು ಮಾಡಿದರೂ ಸಂಶಯವಿಲ್ಲವು ಅದಾದರೂ ಯುಕ್ತಿಯ ಮೇಲೆ ಹಗುರಾಗುವ ಹಾಗೆ ಮಾಡಬೇಕು

ಬಸವರಾಜದೇವರ ವಚನವನ್ನು ಪ್ರಮಾಣಕ್ಕೆ ಅರ್ಥೈಸಿ ನುಡಿಯುತ್ತಿ ಹರು. ಅದೆಂತೆಂದರೆ “ಬಹು ಜನರು ಹೆಣ್ಣಿನ ದೆಸೆಯಿಂದ ಕೆಟ್ಟರು ಕೆಲ ವರು ಹೊನ್ನಿನ ದೆಸೆಯಿಂದ ಕೆಟ್ಟರು ಅನಂತರು ಮಣ್ಣಿನ ದೆಸೆಯಿಂದ ಕೆಟ್ಟರು” ಎಂದು ನೀತಿಯನ್ನು ಹೇಳುತ್ತಾರೆ ಈ ಮಾತು ಸತ್ಯವು ಇದರ ಅರ್ಥವು ಬೇರೆ ಇದೆ ಹೇಗೆಂದರೆ ಪರರ ಹೆಣ್ಣನ್ನು ಬಯಸಿ ಅದರ ಉದ್ದಿ ಶ್ಯವಾಗಿ ತಾನು ಕೈಯನ್ನು ಹಾಕಿದರೆ ತನ್ನ ಅರ್ಥ ಪ್ರಾಣಾಭಿಮಾನಾದಿ ಗಳು ನಾಶವಾಗುವದುಂಟು ಲಂಕಾಧೀಶನಾದ ರಾವಣನು ಜಾನಕಿ ಯಿಂದ ಭಂಗವಾದನು ಕೀಚಕನು ದ್ರೌಪದಿಯಿಂದ ನಾಶವಾದನು. ವಾಲಿಯು ತಾರೆಯಿಂದ ಕೆಟ್ಟನು. ಇನ್ನೂ ಕೆಲವರು ಆ ಕಾಲದಿಂದ ಇವೊತ್ತಿನ

ವರೆಗೂ ಪರರ ಹೆಣ್ಣನ್ನು ಆಶಿಸಿ ಅದರಿಂದ ತಮ್ಮ ಅರ್ಥ ಪ್ರಾಣಾಭಿಮಾನ ಗಳನ್ನು ಕಳೆದುಕೊಂಡು ಅಪಕೀರ್ತಿಪಾತ್ರರಾಗಿ ಕೆಟ್ಟುಹೋದರು.

ಇದಲ್ಲದೆ ಪರರ ಭೂಮಿಯನ್ನು ಇಚ್ಛೈಸಿ ಅನಂತ ಜನರು ಕೆಟ್ಟದ್ದುಂಟು. ಪಾಂಡವರ ಭೂಮಿಯನ್ನು ಸೆಳೆದುಕೊಳ್ಳಬೇಕೆಂದು ಯೋಚಿಸಿ ದುರ್ಯೋಧನನು ಕೆಟ್ಟು ತನ್ನ ವಂಶಸಹಿತ ನಿರ್ಮೂಲನಾದನು. ಇದಲ್ಲದೆ ಈ ಭೂಮಿಯನ್ನು ಆಳಿದಂಥ ಎಷ್ಟೋ ರಾಜರುಗಳು ಮತ್ತು ಬಹು ಜನರುಗಳು ಅಂದಿನಿಂದ ಇವೊತ್ತಿನ ವರೆಗೂ ಕೆಟ್ಟು ಹೋದದ್ದನ್ನು ಸರ್ವರೂ ಕೇಳುತ್ತಿರುವರು. ಇದರಲ್ಲಿ ಪರರ ಭೂಮಿಯನ್ನು ಬಯಸಿದವರು ಕೆಟ್ಟರೇ ಹೊರ್ತು ತಮ್ಮ ಸ್ವಂತ ಭೂಮಿಯನ್ನು ನೆಟ್ಟಗೆ ತಿದ್ದಿಕೊಳ್ಳಬೇಕೆಂದು ಪೂರ್ಣಾಪೇಕ್ಷಿತರಾಗಿ ಭೂಮಿಯನ್ನು ಹಸನ ಮಾಡಿದ ಜನರು ಭೂಮಿಯಿಂದ ಎಂದೂ ಕೆಡಲಿಲ್ಲವು.

ಪರರ ದ್ರವ್ಯವನ್ನು ಕಸೆದುಕೊಳ್ಳಬೇಕೆಂದು ಯೋಚನೆ ದುರಾಲೋಚನೆಯಿಂದ ಅದಕ್ಕೆ ಕೈಹಾಕಿದಲ್ಲಿ ಕೆಟ್ಟುಹೋಗುವದು ನಿಶ್ಚಯವೇ ಸರಿ ಹೇಗೆಂದರೆ ಜಮದಗ್ನಿಯಲ್ಲಿ ಇರುವ ಕಾಮಧೇನುವನ್ನು ಬಲಾತ್ಕಾರದಿಂದ ತೆಗೆದುಕೊಳ್ಳಬೇಕೆಂದು ಯತ್ನಿಸಿದ ಕಾರ್ತವೀರ್ಯ ಮಹಾರಾಜನು ಪರುಶುರಾಮನ ಕರದ ಶಸ್ತ್ರಕ್ಕೆ ಈಡಾಗಿ ತಾನು ಮತ್ತು ತನ್ನ ವಂಶಸ್ಥರು ಇದಲ್ಲದೆ ತನ್ನ ಸಮಸ್ತ ಕ್ಷತ್ರಿಯ ಕುಲಸಹಿತ ನಿರ್ಮೂಲನಾದನು ಮತ್ತು ಪರದ್ರವ್ಯಾಪಹಾರದಿಂದ ಕೆಟ್ಟುಹೋದ ಪ್ರಸಿದ್ಧರ ಇತಿಹಾಸಗಳೂ ಅನಂತ ಉಂಟು ಆದರೆ ತನ್ನ ಸ್ವಂತ ಸ್ತ್ರೀಯರನ್ನು ಪಾಲನೆ ಮಾಡುವಲ್ಲಿ ಸ್ವಂತ ದ್ರವ್ಯವನ್ನು ರಕ್ಷಿಸುವಲ್ಲಿ ಸ್ವಂತ ಭೂಮಿಯನ್ನು ತಿದ್ದಿಕೊಂಡು ಕೆರ್ದಿ ಮಾಡಿ ಬಿತ್ತಿ ಬೆಳೆಯುವಲ್ಲಿ ಯಾರು ಕೆಟ್ಟರೆಂಬುದನ್ನು ನೀವು ಯಾರಾದರು ಬಲ್ಲರೇ ಹೇಳಿರಿ. ಅದು ಕಾರಣ ಭೂಮಿಯ ವಿಷಯದಲ್ಲಿ ಯುಕ್ತಿಯಿಂದ ದ್ರವ್ಯ ಖರ್ಚು ಮಾಡಿ ಸಕಲ ಪದಾರ್ಥಗಳನ್ನು ಬಿತ್ತಿ ಬೆಳೆ ಮಾಡಿಕೊಳ್ಳುವದರಿಂದ ಯಾರೂ ಕೆಡುವದಿಲ್ಲವೆಂಬದನ್ನು ನಿಶ್ಚಯವಾಗಿ ತಿಳಿದುಕೊಳ್ಳಬೇಕು. ಲಕ್ಷ್ಮಿಯ ಜನನಿ, ಹಾಗು ಆಕೆಯ ಜಠರವಾಗಿ ಇರುವ ಭೂಮಿಯ ವಿಷಯದಲ್ಲಿ ಖರ್ಚು ಮಾಡಿದ ದ್ರವ್ಯವು ಎಂದಿಗೂ ಕಡಿಮೆಯಾಗಲಾರದು. ದಿನದಿನಕ್ಕೆ ಅಭಿವೃದ್ಧಿಯಾಗಿ ಬೆಳೆಯುತ್ತಲೇ ಇರುವದು.

ಸಾಲವನ್ನಾದರೂ ಮಾಡಿ ಭೂಮಿಯ ನಟ್ಟನ್ನು ಕಡಿಸಬೇಕು. ಬಲಾತ್ಕಾರವಾದ ಎತ್ತುಗಳನ್ನೂ ಸಾಮಾನುಗಳನ್ನೂ ಸಿದ್ಧಮಾಡಿಕೊಳ್ಳಬೇಕು. ಹಾಗೂ ಅತ್ಯಂತ ಬಡವನಿದ್ದು ಅಂಥವನಿಗೆ ಸಾಲವನ್ನು ಯಾರೂ ಕೊಡದ ಹಾಗಿದ್ದರೆ ತಾನೊಬ್ಬನೆಯಾದರೂ ನಿತ್ಯದಲ್ಲಿಯೂ ಒಂದು ಗುದ್ದಲಿಯನ್ನು

ತೆಗೆದುಕೊಂಡು ಒಂದು ವರುಷ ಎರಡು ವರುಷ ಪರಿಯಂತರದಲ್ಲಿಯಾದರೂ ಕಷ್ಟಪಟ್ಟು ನಟ್ಟು ಕಡಿದು ಹೊಲವನ್ನು ಹಸನಮಾಡಿಕೊಳ್ಳಬೇಕು. ಆ ಮನುಷ್ಯನಿಗೆ ಮೊದಲು ಬಹಳ ಶ್ರಮವಾಗಿ ಇದು ಕಾಣಿಸುವದು. ಸ್ವಲ್ಪ ದಿವಸ ಕಷ್ಟಪಟ್ಟಾಗ್ಯಾದರೂ ಅನಂತ ದಿವಸದ ವರೆಗೂ ಸುಖವನ್ನು ಅನುಭವಿಸುವನು. ಅದರಿಂದ ಭೂಮಿಯ ವಿಷಯದಲ್ಲಿ ಚನ್ನಾಗಿ ಕಷ್ಟಪಡಬೇಕು ಮನುಷ್ಯರುಗಳು ವೈಗಳ್ಳರಾಗಿ ದರಿದ್ರರಾಗಬಾರದು ವೈಗಳ್ಳನನ್ನು ಯಾರೂ ಸೇರುವದಿಲ್ಲ. ಅವನು ಎಂದಿಗೂ ಧನಸಂಪನ್ನನಾಗಲಾರನು ಇದಲ್ಲದೆ ಈ ಪ್ರಕರಣದಲ್ಲಿ ಹೇಳುವದೇನಂದರೆ ಹೊಲದಲ್ಲಿ ನಟ್ಟು ಮುಂತಾದ ಮಲಿನವಿರಬಾರದೆಂಬುವದೇ ಮುಖ್ಯ ತಾತ್ಪರ್ಯವು ಮನುಷ್ಯರುಗಳಿಗೆ ಸಮಸ್ತ ನಖರೋಮಾದಿಗಳನ್ನು ತೆಗಿಸತಕ್ಕ ಸ್ಥಾನಗಳಲ್ಲಿ ಕ್ಷೌರಿಕರಿಂದ ತೆಗಿಸಿದಲ್ಲಿ ದೇಹದ ಹೊಲಸು ಹೋಗಿ ಹೇಗೆ ಸೌಖ್ಯವಾಗುತ್ತದೆಯೋ ಹಾಗೆ ಭೂಮಿಯನ್ನು ನಿರ್ಮಲ ಮಾಡಿದರೆ ಬೆಳೆಗೆ ಸೌಖ್ಯವಾಗಿ ಪೈರು ವೃದ್ಧಿಯಾಗುವದು. ಯಾರಾದರೂ ಹೊಲವನ್ನು ನೋಡಿದಾಗಲಿ ನಿರ್ಮಲ ಮಣ್ಣೇ ಕಾಣುವ ಹಾಗೆ ಮಾಡಬೇಕಲ್ಲದೆ ಕಸ ಕರಿಕೆ ಗಿಡಗಂಟೆ ಕಲ್ಲು ಮುಳ್ಳು ನೊದಲಾದ ಪದಾರ್ಥಗಳಿಂದ ತುಂಬಿ ಮಲಿನವಾಗಿ ಕಾಣಿಸಬಾರದು ತನ್ನ ಶರೀರವು ಮತ್ತು ಮೈಮೇಲಿನ ವಸ್ತ್ರವು ನಿರ್ಮಲವಾಗಿದ್ದರೆ ತನ್ನ ದೇಹಕ್ಕೂ ಮನಸ್ಸಿಗೂ ಸೌಖ್ಯ ಉಂಟಾಗುತ್ತದೆ. ಮತ್ತು ನೋಡುವವರ ದೃಷ್ಟಿಗೆ ಆನಂದವಾಗುತ್ತದೆ ಇದಲ್ಲದೆ ತನ್ನ ಶರೀರಕ್ಕೆ ಆರೋಗ್ಯ ಉಂಟಾಗುತ್ತದೆ. ಇದರಂತೆ ಭೂಮಿಗಾದರೂ ನಿರ್ಮಲತನವು ಅವಶ್ಯಕವಾದದ್ದು. ಈ ಭೂಮಿಯು ತನ್ನನ್ನು ನಿರ್ಮಲ ಮಾಡಿದವನನ್ನು ಸುಖಪಡಿಸದೆ ಇರಲಾರದು

ನಟ್ಟು ಕಡಿಸಿ ಹೊಲವನ್ನು ಹಸನ ಮಾಡುವ ವಿಷಯದಲ್ಲಿ ರೈತ ಜನರು ಹಿಂಜರಿಯಲಾಗದು ಅನೇಕ ಪ್ರಕಾರದ ಶ್ರಮವು ತನಗೆ ಆದಾಗ್ಯೂ ನಟ್ಟು ಕಡಿದ ಹೊಲವನ್ನು ಕಿರ್ದಿ ಮಾಡದೆ ಇರಲಾಗದೆಂಬುದರ ವಿಷಯದಲ್ಲಿ ಬುದ್ಧಿಶಾಲಿಯಾದ ಒಬ್ಬ ಕೃಷಿಕನ ಇತಿಹಾಸವನ್ನು ಇಲ್ಲಿ ಹೇಳುತ್ತೇನೆ. ಏನೆಂದರೆಃ—

## ಕಥೆಯು.

ಕೃಷಿಕರಲ್ಲಿ ಒಬ್ಬ ಜಾಣ ಗ್ರಹಸ್ಥನು ರೋಗದಿಂದ ಇದ್ದು ತಾನು ಮರಣ ಹೊಂದುವ ಸಮಯದಲ್ಲಿ ತನ್ನ ಮಕ್ಕಳುಗಳಿಗೆ ಭೂಮಿಯಃ ಮರೆಯಲ್ಲಿ ದ್ರವ್ಯವು ಸಿಕ್ಕಬೇಕೆಂದು ಒಂದು ಯುಕ್ತಿಯನ್ನು ಯೋಚಿಸಿ ತನ್ನ ನಾಲ್ಕು ಮಂದಿ ಮಕ್ಕಳನ್ನು ಸಮೀಪಕ್ಕೆ ಕರೆದು ಹೇಳಿದ್ದೇನಂದರೆ, ನಾನು

ಗಳಿಸಿಟ್ಟುಕೊಂಡಿರುವಂಥ ದ್ರವ್ಯವನ್ನು ಒಂದು ಕೊಡದಲ್ಲಿ ತುಂಬಿ ನನ್ನ ಹೊಲದಲ್ಲಿ ಒಂದು ಮೊಳದ ಕೆಳಗೆ ಹೂಳಿದ್ದೇನೆ. ಆದರೆ ಆ ಹೊಲವನ್ನು ಎರಡನೆಯವರ ವಶಕ್ಕೆ ಕೊಡಬೇಡಿರಿ ನೀವು ನಾಲ್ವರು ಏಕಸ್ತರಾಗಿದ್ದು ಎರಡನೆಯವರಿಗೆ ಕಾಣಗೊಡದ ಹಾಗೆ ಆ ದ್ರವ್ಯವನ್ನು ಅಗಿದು ತಗೆದುಕೂಂಡು ಚನ್ನಾಗಿ ಸೌಖ್ಯಪಡೆಯಿರೆಂದು ಹೇಳಿ ಮರಣವನ್ನೈದಿದನು. ಕೆಲವು ದಿವಸದ ಮೇಲೆ ಆ ಮಕ್ಕಳು ಅಂದದ್ದು ನಮ್ಮ ತಂದೆಯು ಹೊಲದಲ್ಲಿ ದ್ರವ್ಯವನ್ನು ಮಡಿಗಿದ್ದೇನೆಂದು ಹೇಳಿರುವನು ಆದರೆ ಇಂಥ ಸ್ಥಲದಲ್ಲಿ ಅದೆ ಎಂದು ಗುರುತು ತಿಳುಹಿಸಲಿಲ್ಲ. ನಾವು ನಾಲ್ವರೂ ಕೂಡಿ ಹೊಲದ ನಾಲ್ಕೂ ಮೂಲೆಯನ್ನು ಶೋಧಿಸಿ ಅಗಿದರೆ ದ್ರವ್ಯವು ಸಿಕ್ಕುವದೆಂದು ಯೋಚಿಸಿ ದ್ರವ್ಯಾಪೇಕ್ಷೆಗೆ ಒಂದು ಗೇಣು ಸ್ಥಳ ಬಿಡದಂತೆ ಒಂದು ಮೊಳದಕಿಂತಲೂ ಹೆಚ್ಚು ತಗ್ಗಿಸಿ ಸ್ವಲ್ಪಾದರೂ ಬಿಡದೆ ಯಾವತ್ತು ಹೊಲವನ್ನು ಬಹು ಶ್ರಮದಿಂದ ಅಗಿದರು ಆದರೆ ಅವರಿಗೆ ದ್ರವ್ಯವೇನೂ ಸಿಕ್ಕಲಿಲ್ಲ ಹೊಲವು ಮಾತ್ರ ಹಸನಾಗಿ ಹೊಸ ಮಣ್ಣಾದುದರಿಂದ ಹೊಲವು ಹಸಿಯಾದ ಸಮಯವನ್ನು ನೋಡಿ ಆಯಾಯ ಭೂಮಿಯ ತಾರತಮ್ಯವರಿತು ಬೀಜವನ್ನು ಬಿತ್ತಿಬಿಟ್ಟರು. ಆದರೆ ಆದೇ ವರುಷದ ಬೆಳೆಯು ಸರ್ವೋತ್ಕೃಷ್ಟವಾದುದರಿಂದ ತಂದೆಯು ಹೇಳಿದ ಪ್ರಕಾರ ಒಂದು ಕೊಡದ ತುಂಬಾ ದ್ರವ್ಯವು ಪ್ರಾಪ್ತಿಸಿತು ಮುಂದ ಅವರಿಗೆ ಭೂಮಿಯ ವ್ಯವಸಾಯವು ಅತ್ಯಂತ ರುಚಿಕರವಾಗಿ ದಿನದಿನಕ್ಕೆ ಹೆಚ್ಚು ಮೆಹನತು ಮಾಡಿ ಬಹಳ ದ್ರವ್ಯವನ್ನು ಪಡೆದು ಧನಧಾನ್ಯಸಂಪನ್ನರಾಗಿ ತಮ್ಮ ಕುಟುಂಬ ಸಹಿತ ಸುಖಿಎಂದಿದ್ದರು

ಇದರ ತಾತ್ಪರ್ಯವು ಯಾವನಾದರೂ ಕೃಷಿಕನಾದವನು ತನ್ನ ಶರೀರದ ಶ್ರಮವನ್ನು ನೋಡದ ಕಾಯಶಕ್ತಿಯಿಂದ ಕಷ್ಟಪಟ್ಟು ಭೂಮಿಯನ್ನು ಹಸನಮಾಡಿಕೊಳ್ಳಬೇಕು ಯಾತಕ್ಕಂದರ “ ಆಳಾಗಿ ಮಾಡಿದವನು ಅರಸಾಗಿ ಉಂಡಾನು ” ಎಂಬ ಗಾದಯುಂಟು. ಗಾದೆಯ ವಾಕ್ಯವು ವೇದವಾಕ್ಯದಂತೆ ಸರ್ವರಿಗೂ ನೀತಿಯನ್ನು ಹೇಳುವ ವಿಷಯದಲ್ಲಿ ಹಿತಕರವಾದದ್ದು ಮತ್ತು ಗಾದೆಯ ಮಾತು ಹಾದಿಯ ತೋರಿಸುವದಾದ ಕಾರಣ ಯಾರಾದರೂ ಗಾದೆ ಎಂದರೆ ಆ ಮಾತುಗಳನ್ನು ಅಲಕ್ಷಮಾಡಲಾಗದು ವೇದಕ್ಕ ಮೊದಲು ಗಾದೆ ಎಂಬರು ಆದರ ಇದರಲ್ಲಿ ಮುಖ್ಯವಾಗಿ ಯಾರಾದರೂ ಹೊಲವನ್ನು ಹಸನುಮಾಡಿಕೊಂಡಿರುವದೇ ಕೃಷಿಕರಾದ ರೈತ ಜನರಿಗೆ ಮುಖ್ಯ ಧರ್ಮವಾಗಿದೆ

ಹೊಲದಲ್ಲಿ ಕರಿಕೆ ಕಣಿಗೆಯು ದೃಷ್ಟಿಗೆ ಬಿದ್ದರೆ ಆ ಕ್ಷಣವೇ ಅದನ್ನು ಅಗಿದು ತೆಗೆಯಬೇಕು ಹಸನಾದ ಹೊಲದಲ್ಲಿ ಅಕಲ್ಪಿತವಾಗಿ ಒಂದೇ ಕರಕೆಯ ನಾಟಕೆಯು ಕಾಣಬಂದರೆ ಅದನ್ನು ಅಲಕ್ಷ ಮಾಡಿಬಿಡಲಾಗದು.

ಒಂದು ಪಕ್ಷಕ್ಕೆ ಅಲಕ್ಷ ಮಾಡಿದರೆ ಆ ಒಂದೇ ನಾಟಿಕೆಯು ಒಂದು ವರುಷದಲ್ಲಿ ಗಂಟು ಗಂಟಿಗೆ ಬೇರು ಬಿಟ್ಟು ವಿಸ್ತಾರವಾಗಿ ಹಬ್ಬುತ್ತ ಒಂದು ಚಚ್ಚೌಕು ಗಜದ ಪ್ರಮಾಣ ಭೂಮಿಯನ್ನು ಬೇರಿನಿಂದ ತೊಪ್ಪಲದಿಂದ ಮುಚ್ಚಿಕೊಂಡು ಆಚ್ಛಾದಿಸಿ ಆ ಭೂಮಿಯಲ್ಲಿ ಯಾವ ಬೆಳೆಯೂ ಆಗದ ಹಾಗ ಕೆಡಿಸಿಬಿಡುವದು ಅದು ಎರಡನೆಯ ವರಷಕ್ಕೆ ಸುತ್ತಲೂ ಹಬ್ಬಿ ಬೆಳೆಯುತ್ತ ಹೆಚ್ಚಹೆಚ್ಚಾಗುತ್ತ ಹೋಗುವದು ಮತ್ತು ಕೆಲವು ವರುಷ ಹೀಗೆ ಬಿಟ್ಟರೆ ಹೊಲವನ್ನು ತುಂಬಿಕೊಳ್ಳುವದು

ಸಣ್ಣದಾದ ಒಂದೇ ನಾಟಿಕೆಯನ್ನು ಕಂಡಾಗಲೇ ಅದನ್ನು ಅಗಿದು ತೆಗೆಯಲು ಒಂದೇ ಕ್ಷಣಹೊತ್ತು ಬೇಕಾಗುವದು. ಅಂಥ ನಾಟಿಕೆಯನ್ನು ಒಂದು ವರುಷ ಬಿಟ್ಟರೆ ಒಬ್ಬ ಮನುಷ್ಯನಿಗೆ ಎಷ್ಟೋ ಶ್ರಮಬಡುವಂತೆ ಮಾಡುವದು ಎರಡನೇ ವರುಷ ಹತ್ತು ಆಳುಗಳನ್ನು ದಣಿಸುವದು ೩ ನೇ ವರ್ಷಕ್ಕೆ ನೂರಾರು ಆಳುಗಳಿಗೆ ಶ್ರಮ ಕೊಡುವದು. ಮುಂದ ಹತ್ತು ಹನ್ನೆರಡು ವರುಷದ ವರೆಗೂ ಬೆಳೆಯು ಬಿಟ್ಟರ ಯಾವತ್ತು ಹೊಲವನ್ನು ಕೆಡಿಸಿ ಬಹಳ ದ್ರವ್ಯವನ್ನು ಖರ್ಚುಮಾಡಿಸದ ಎತ್ತುಗಳನ್ನೂ ಮನುಷ್ಯರುಗಳನ್ನೂ ಶ್ರಮಪಡಿಸದ ಹೋಗಲಾರದು. ಅದು ಕಾರಣ ಕೃಷಿಕರಾದವರು ಹೊಲಕ್ಕ ಹೋಗಬೇಕಾದರೆ ತಮ್ಮ ಕೈಯ್ಯಲ್ಲಿ ಗುದ್ದಲಿಯನ್ನಾಗಲಿ ಬಿಡಗವನ್ನಾಗಲಿ ಕೊಡಲಿಯನ್ನಾಗಲಿ ಕುರಿಪೆಯನ್ನಾಗಲಿ ಹಿಡಕೊಂಡು ಹೋಗಬೇಕಲ್ಲದೆ ಹಾಗೇ ಹೋಗಲಾಗದು ಯಾತಕ್ಕಂದರ ತಾನು ಹೊಲದಲ್ಲಿ ತಿರುಗಾಡುವಾಗ್ಗೆ ಒಂದು ಕರಿಕೆ ಅಥವಾ ಕಣಗಿಯ ನಾಟಿಕೆಯನ್ನಾಗಲಿ ತಾನು ಕಂಡಾಗಲೆ ತನ್ನ ಬಳಿಯಲ್ಲಿ ಇರುವ ಗುದ್ದಲಿಯಿಂದ ಅಗಿದು ತಗಿಯುತ್ತಾನೆ. ಮತ್ತು ಸಣ್ಣ ಸಣ್ಣ ಕಂಟಿ ಮುಳ್ಳು ಗಿಡಗಳು ನಾಟಿಗದ್ದರ ಕೊಡಲಿ ಬಿಡಗಗಳಿಂದ ಆಯಾಯ ಅನುಮರಿತು ನೋಡಿ ಕಡಿದು ಹಾಕುವನು ಈ ಪ್ರಕಾರ ಆಗಿಂದಾಗಲೇ ತೆಗೆದು ಹಾಕುತ್ತ ಹೋದರ ಸುಲಭದಿಂದ ಹೋಗುವದು ಯಥಾಪ್ರಕಾರವಾಗಿ ಹಸನಾದ ಹೊಲವನ್ನು ವೈಮುರತು ಕಡಿಸಿಕೊಳ್ಳಬಾರದು

ಕರಿಕೆ ಮುಂತಾದ ಸಟ್ಟು ಕಳೆದು ಹಸನಾದ ಭೂಮಿಯು ದುರ್ಗುಣಾದಿ ಮಲಿನಂಗಳಿಲ್ಲದೆ ನಿರ್ಮಲವ ನಸ್ಸನ್ನುಳ್ಳ ದೇಹದಂತೆ ಸದಾ ಕಾಲದಲ್ಲಿ ಉತ್ತರೋತ್ತರ ಸೌಖ್ಯವನ್ನು ಮಾನವನ್ನು ಧನಸಂಪತ್ತನ್ನು ಕೊಡುತ್ತಿಹುದೆಂದು ಸಂಶಯವಿಲ್ಲದೆ ನಂಬಬೇಕು.

---

## ೩ ನೇ ಪ್ರಕರಣವು.

### ಹೊಲಗಳಲ್ಲಿ ಒಡ್ಡು ಬಲಿಸುವ ಪ್ರಯೋಜನವು.

ಒಂದು ಹೊಲದ ಮಣ್ಣು ಮತ್ತೊಂದು ಹೊಲಕ್ಕೆ ಹೋಗದ ಹಾಗೆ ಹೊಲದ ಬಾಂದಿನ ಹದ್ದು ಹಿಡಿದು ಒಂದು ಮೊಳ ಅಥವಾ ಎರಡು ಮೊಳ ಎತ್ತರವಾಗಿ ನಾಲ್ಕೂಕಡೆಗೂ ಸುತ್ತಲೂ ಒಡ್ಡು ಹಾಕಿಸುವದು ಅವಶ್ಯವಾಗಿದೆ. ಈ ಪ್ರಕಾರವಾಗಿ ಹಾಕಿದ ಒಡ್ಡಿನಿಂದ ಆಗುವ ಪ್ರಯೋಜನವೇನಂದರೆ ತಮ್ಮ ತಮ್ಮ ಹೊಲಗಳನ್ನು ನೇಗಲಿಯಿಂದಾಗಲೀ ಮಡಕಿಯಿಂದಾಗಲೀ ಹೊಡೆದು ಬಿಗಿಯಾದ ಮಣ್ಣನ್ನು ಸೈಲು ಮಾಡಿ ಕುಂಟೆಯಿಂದ ಹರಗಿ ಮೆತ್ತಗೆ ಮಾಡಿದಲ್ಲಿ ಆ ಭೂಮಿಯ ಮಣ್ಣು ಚನ್ನಾಗಿ ಮಂಡು ಭೂಮಿಯ ಹಾಗೆ ಹದಕ್ಕೆ ಬರುವದು. ಅಂಥ ಸಮಯದಲ್ಲಿ ಮಳೆಯಾದರೆ ಮಣ್ಣಿನ ಉತ್ತಮ ಸಾರವು. ಅದರ ತ್ರಾಣವು ನೀರಿನಲ್ಲಿ ಮಿಶ್ರವಾಗಿ ಹರಿದುಹೋದರೆ ಆ ಭೂಮಿಯ ತ್ರಾಣವು ಅರ್ಧ ಕಡಿಮೆಯಾಗುವದು ಮತ್ತು ಹೊಲದಲ್ಲಿ ನಿಸ್ಸಾರವಾದ ಮಣ್ಣು ಹಾಗು ಉಸುಕು ಅಥವಾ ಹರಳು ಉಳಿಯುವವು ಅದರಿಂದ ಭೂಮಿಯು ಚನ್ನಾಗಿ ಬೆಳೆಯಲಾರದು. ಅದು ಕಾರಣ ಸುತ್ತು ಒಡ್ಡನ್ನು ಶಕ್ತ್ಯನುಸಾರ ಹಾಕಿಸಬೇಕು

ಇದಲ್ಲದೆ ಹೊಲದಲ್ಲಿ ಗೊಬ್ಬರವನ್ನು ಹಾಕಿದ್ದರೆ ಮಳೆಯಾದ ಸಮಯದಲ್ಲಿ ಆ ಹೊಲದ ನೀರಿನಲ್ಲಿ ಯಾವತ್ತು ಗೊಬ್ಬರದ ಕಾವೂ ಹಾಗು ಗೊಬ್ಬರದ ಸಾರವೂ ಮಣ್ಣಿನ ಸಾರವೂ ಕಲಿತು ಆ ನೀರು ತನ್ನ ಹೊಲವನ್ನು ಬಿಟ್ಟು ಎರಡನೆಯ ಕಡೆಗೆ ಹರಿದುಹೋದರೆ ತಾನು ಅತ್ಯಂತ ಶ್ರಮದಿಂದ ಗೊಬ್ಬರಹಾಕಿದ್ದೂ ನೇಗಿಲ ಹೊಡೆದದ್ದೂ ನಟ್ಟು ಕಡಿಸಿದ್ದೂ ಹೊಲವನ್ನು ಹರಗಿ ಮೆತ್ತಗೆ ಮಾಡಿದ್ದೂ ಈ ಪ್ರಕಾರವಾದ ಅನಂತ ಶ್ರಮವು ವ್ಯರ್ಥವಾಗುವದು. ಅದು ಕಾರಣ ಹೊಲದ ನಾಲ್ಕು ದಿಕ್ಕಿಗೆ ಸುತ್ತು ಒಡ್ಡನ್ನು ಹಾಕಿಕೊಳ್ಳತಕ್ಕದ್ದು. ಹೀಗೆ ಒಡ್ಡುಹಾಕಿಸುವದರಿಂದ ಹೊಲದ ಮಣ್ಣು ಹಾಗು ಹೊಲದ ಸಾರವು ಕಡಿಮೆಯಾಗದೆ ಹೊಲನನ್ನು ಉತ್ತಮ ಪ್ರಕಾರದ ಹದಕ್ಕೆ ತರುವದು ಹಾಗು ಬಹಳ ಮಳೆಯಾದರೂ ಸ್ವಲ್ಪ ಮಳೆಯಾದರೂ ಹೊಲದಲ್ಲಿ ನೀರು ನಿಂತು ತಂಪುಮಾಡುತ್ತದೆ. ಆ ತಂಪಿನಿಂದ ಆರಗಾಲ ಬರಗಾಲಂಗಳಲ್ಲಾದರೂ ತಕ್ಕಷ್ಟು ಬೆಳೆಯಾಗುವದು ಇದಲ್ಲದೆ ಅತ್ಯುತ್ಕೃಷ್ಟ ಮಳೆಯಾದರೆ ಹೊಲದಲ್ಲಿ ಎಷ್ಟು ನೀರು ನಿಲ್ಲಬೇಕೋ ಅಷ್ಟು ನೀರು ನಿಂತು ಹೆಚ್ಚಾದ ನೀರು ಎತ್ತರ ಭೂಮಿಯ ಕಡೆಗೆ ಮಾಡಿದ ಕೋಡಿಯ ಮುಖಾಂತರವಾಗಿ ಮೆಲ್ಲಗೆ ಹರಿದು ಹೋಗುತ್ತದೆ.

ಹೊಲವು ಸಮತಳವಾಗಿದ್ದರಂತೂ ಮೇಲೆ ಹೇಳಿದ ಪ್ರಕಾರ ಸುತ್ತಲು ಒಡ್ಡು ಹಾಕಿಸುವದು ಅವಶ್ಯಕವಾದದ್ದು. ಮತ್ತು ಹೊಲವು ಒಂದು ಮೈ ಕಡೆಗೆ ಎತ್ತರವಾಗಿ ಒಂದು ಮೈ ಇಳಿತರವಾದದ್ದಾಗಿದ್ದರೆ ಇಳಿತರವಾದ ಭೂಮಿಯ ತೂಕಕ್ಕೆ ಎಷ್ಟು ಒಡ್ಡುಬೇಕೋ ಅದರ ಅನುವಂತು ಅಥವಾ ಸ್ವಲ್ಪ ಹೆಚ್ಚು ಕಡಿಮೆಯಾದರೂ ಅನುವಂತು ಸುತ್ತಲೂ ಎಡಬಲದ ಪಕ್ಕದಲ್ಲಿ ತಕ್ಕವುಟ್ಟಿಗೆ ಒಡ್ಡು ಹಾಕಿ ಕೆಳಗಣ ಒಂದು ಮೈ ಕಡೆಗೆ ಒಡ್ಡು ಅಗಲವಾಗಿ ಅದರ ಅನುವಂತು ಎತ್ತರವಾಗಿ ಬಲಿಸಬೇಕು ಮತ್ತು ಅದರ ಎಡಬಲದ ಕಡೆಗೆ ಒಡ್ಡು ಹಾಕಿಸಬೇಕಾದರೆ ಇಳಿತರದ ದೊಡ್ಡ ಒಡ್ಡಿನ ಸಮಾಂತರ ಹಿಡಿದು ಎತ್ತರ ಭೂಮಿಯ ವರೆಗೂ ಅದರ ತೂಕಕ್ಕೆ ಸರಿಯಾಗಿ ಒಡ್ಡು ಹಾಕಿ ಕೋಡಿಯನ್ನು ಬಿಡಿಸಬೇಕು. ಅದು ಹೇಗೆಂದರೆ ಇಲ್ಲಿ ಬರೆದಿರುವ ಚಿತ್ರವನ್ನು ನೋಡಿ ತಿಳಿಯಬೇಕು




ಒಡ್ಡು ಹಾಕುವ ಪದ್ಧತಿ.

ಇಲ್ಲಿ ತೋರಿಸಿದ ಚಿತ್ರದ ಹಾಗೆ ಹೊಲದ ಇಳಿತರದ ಕಡೆಗೆ ಎತ್ತರವಾಗಿ ಒಡ್ಡು ಬಲಿಸಿ ಆ ಮೇಲೆ ಇಳಿತರದ ಕಡೆಯಿಂದ ಹಿಡಿದು ಎಡಬಲದ ಎರಡು ಬಾಜೂದಲ್ಲಿಯೂ ದೊಡ್ಡ ಒಡ್ಡಿನ ಬರಾಬರಿ ಹಿಡಿದು ಎಡಬಲಕ್ಕೆ ಒಡ್ಡು ಹಾಕಿಸಬೇಕು. ಮತ್ತು ಎತ್ತರ ಬಾಜೂದ ಕಡೆಯಿಂದ ನೀರು ಬರುವ ಹಾಗೆ ಹಾಗೆಯೇ ಬಿಟ್ಟರೂ ಚಿಂತೆ ಇಲ್ಲ ಈ ಪ್ರಕಾರವಾಗಿ ಹಾಕಿದ ದೊಡ್ಡ ಒಡ್ಡಿನ ಪ್ರಯೋಜನವು ಬಹಳ ವಿಶೇಷವುಂಟು. ಅದರ ವಿಷಯವನ್ನು ಮುಂದೆ ವಿಸ್ತಾರವಾಗಿ ಬರೆಯುತ್ತೇನೆ

ಒಡ್ಡು ಹಾಕುವವರು ಒಡ್ಡಿನ ಬಳಿಯಲ್ಲಿಯೇ ಮಣ್ಣು ಕಡಿದು ಒಡ್ಡಿಗೆ ಹಾಕಬಾರದು. ದೂರವಾದ ತೆವರು ಇದ್ದ ಸ್ಥಲದಲ್ಲಿಯ ಮಣ್ಣನ್ನು ನೇಗಲಿಯಿಂದ ಚನ್ನಾಗಿ ಹೊಡೆದು ಮಣ್ಣು ಮೆತ್ತಗೆ ಮಾಡಿ ಸಮೀಪದಲ್ಲಿ ಇದ್ದರೆ ಸಲಿಕೆಯಿಂದ ಪುಟ್ಟಿಯಲ್ಲಿ ತುಂಬಿ ತಲೆಯ ಮೇಲೆ ಹೊತ್ತು ಹಾಕಬೇಕು. ಅಥವಾ ದೂರವಾಗಿದ್ದರೆ ಚಕ್ಕಡಿ ಭಂಡಿಯಲ್ಲಿ ಮಣ್ಣನ್ನು ತುಂಬಿ ಎರಡು ಎತ್ತುಗಳನ್ನು ಕಟ್ಟಿ ಒಡ್ಡಿನ ಬಳಿಯಲ್ಲಿ ತಂದು ಎತ್ತಿಷ್ಟ ಜತ್ತಿಗೆಯು ಬಿಟ್ಟು

ಚಕ್ಕಡಿಯ ಭಂಡಿಗಳ ಈಸಿನ ಮೋಕು ಹಿಡಿದು ಮೇಲಕ್ಕೆ ಎತ್ತಿದಾಗಲೆ ಆ ಮಣ್ಣು ಒಡ್ಡಿಗೆ ಬಂದು ಚಚ್ಚೌಕ ಒಂದುವರೆ ಗಜದ ಪ್ರಮಾಣವಾಗಿ ಬೀಳುವದು. ಹೀಗೆ ಮೂರು ಸಾಲು ಹಾಕುವಲ್ಲಿ ಒಡ್ಡು ಮಹತ್ತರವಾಗುವದು. ಹೀಗೆ ಮಾಡದೆ ಗುದ್ದಲಿಯಿಂದ ಕಡಿದು ಪುಟ್ಟಿಯಲ್ಲಿ ತುಂಬಿ ತಲೆಯ ಮೇಲೆ ಹೊತ್ತುಕೊಂಡು ಒಡ್ಡಿನ ವರೆಗೂ ಮೆಲ್ಲಗೆ ನಡೆಯುತ್ತ ಬಂದು ಒಡ್ಡಿಗೆ ಮಣ್ಣು ಹಾಕುವದರಿಂದ ಎಷ್ಟೋ ಆಳುಗಳು ಬೇಕಾಗಿ ಬಹಳ ದ್ರವ್ಯವು ಬೇಕಾಗುತ್ತದೆ ಆದರಿಂದ ಆಳುಗಳಿಂದ ಹಾಕಿಸುವದಕ್ಕಿಂತಲೂ ಚಕ್ಕಡಿಯಿಂದ ಹಾಕಿಸುವದು ಬಹಳ ಸುಲಭವಾಗಿರುವದು ಎರಡು ಎತ್ತು ಐದು ಮಂದಿ ಮನುಷ್ಯರು ಒಂದು ಚಕ್ಕಡಿ ಇಷ್ಟರಿಂದ ಸಹಸ್ರ ರೂಪಾಯದಿಂದಾಗುವಷ್ಟು ಕೆಲಸವು ನೂರು ರೂಪಾಯದಿಂದಾಗುವದು. ಆದರಲ್ಲಿ ಮನೆಯ ಜನರೇ ಸ್ವತಃ ಕಷ್ಟಮಾಡುವವರಿದ್ದರೆ ಅಥವಾ ಒಬ್ಬರು ಇಬ್ಬರು ಕೂಲಿಯ ಮನುಷ್ಯರುಗಳನ್ನು ತೆಗೆದುಕೊಂಡು ಮಾಡಿದ್ದಾದರೆ ಐವತ್ತು ರೂಪಾಯದ ಖರ್ಚಿನೊಳಗೆ ಸಾವಿರ ರೂಪಾಯದಿಂದಾಗುವಷ್ಟು ಕೆಲಸವಾಗುತ್ತದೆ.

ಆದರೆ ಕಲ್ಲು ಹೊಲವಾಗಿ ಹೊಲದ ಸಮೀಪದಲ್ಲಿ ಪುಷ್ಕಳ ಕಲ್ಲುಗಳಿದ್ದರೆ ಸುತ್ತಲೂ ಗೋಡೆಯ ಕಟ್ಟಿದ ಹಾಗೆ ಕಲ್ಲು ಒಡ್ಡನ್ನು ಹಾಕಿಸಬೇಕು. ಹಾಗು ಒಡ್ಡು ಹಾಕುವಲ್ಲಿ ಮಣ್ಣು ಒಡ್ಡು ಹಾಕುವದರಿಂದ ಅದರಲ್ಲಿ ಗಿಡಗಳು ಆಗುವವು

ಇಂಥ ಹಗುರಾದ ಯುಕ್ತಿಗಳನ್ನು ತಿಳಿಸಿದಾಗ್ಯಾದರೂ ಇದರಂತೆ ಸರ್ವಾಲೋಚನೆಯನ್ನು ತಿಳಿದು ಆದರ ಉಪಯೋಗವನ್ನು ಮಾಡಿಕೊಳ್ಳುವದು ಆಗದೆ ಹೋದರೆ ಅವರ ಪೂರ್ವದ ಕರ್ಮಫಲವು ಆದ್ದರಿಂದ ಒಡ್ಡು ಹಾಕಿಸುವದನ್ನು ಅಲಕ್ಷ ಮಾಡಿ ಬಿಡಲಾಗದು. ಯಾವತ್ತರೂ ತಮ್ಮ ತಮ್ಮ ಯೋಗ್ಯತಾನುಸಾರವಾಗಿಯಾದರೂ ಹೊಲದಲ್ಲಿ ಸುತ್ತು ಒಡ್ಡುಗಳನ್ನು ಹಾಕಿಸಬೇಕು ಎರಿಯ ಭೂಮಿಗಳಾಗಲಿ ಉಸುಕು ಗರಸು ಕರಲು ಭೂಮಿಗಳಾಗಲಿ ಕೆಂಪು ಮಸಾರಿಗಳಾಗಲಿ ಯಾವ ಪ್ರಕಾರದ ಭೂಮಿಗಳಿಗಾಗಲಿ ಸುತ್ತಲೂ ನಾಲ್ಕೂ ದಿಕ್ಕಿಗೂ ಒಡ್ಡು ಹಾಕಿಸುವದು ಅಗತ್ಯವಾಗಿದೆ. ಹೀಗೆ ಹಾಕದೆ ಇದ್ದರೆ ಅದರ ಬೆಳೆಯೂ ಚನ್ನಾಗಿ ಆಗಲಾರದು.

ಒಡ್ಡುಗಳನ್ನು ಬಲಿಸುವ ಜನರು ಹಿಂದೆ ಹೇಳಿದ ಹಾಗೆ ಒಂದು ಮೈ ಎತ್ತರ ಒಂದು ಮೈ ಇಳಿತೆವರಾಗಿದ್ದ ಹೊಲಗಳಿಗೆ ದೊಡ್ಡ ಒಡ್ಡುಗಳನ್ನು ಹೊಲದ ಇಳಿತರದ ಕಡೆಗೆ ಹಾಕಬೇಕಾದರೆ ಅಲ್ಲಿಯೇ ಒಡ್ಡಿನ ಎದೆಯಲ್ಲಿ ಅಂದರೆ ಒಡ್ಡಿನ ಒಳಬಾಜೂದಲ್ಲಿ ಮಣ್ಣು ಕಡಿದು ಒಡ್ಡಿಗೆ ಹಾಕಿ ಗೋಡೆಯ

ಹಾಗೆ ಎತ್ತರವಮಾಡಿ ಇಟ್ಟರೆ ಆ ಒಡ್ಡು ಎಂದಿಗೂ ಸಿಂದಿರಲಾರದು. ಹಾಗೂ ಆ ಒಡ್ಡು ಬಲಾತ್ಕಾರವಾಗಿ ನಿಂತ ಕಾಲಕ್ಕಾದರೂ ಆ ಭೂಮಿಯಲ್ಲಿ ನೀರು ಬಹಳವಾಗಿ ನಿಲ್ಲುವದರಿಂದ ತತ್ಕಾಲಕ್ಕೆ ಹದ ಬೆದಿಯ ಮೇಲೆ ಬೇಕಾದ ಸಮಯದಲ್ಲಿ ಬಿತ್ತಲಿಕ್ಕೆ ಬರುವದಿಲ್ಲ ಮತ್ತು ಎರಿಯ ಭೂಮಿಯಾದರಂತೂ ಆ ಒಡ್ಡು ಎಂದಿಗೂ ನಿಂದಿರಲಾರದು. ಒಂದು ಪಕ್ಷದಲ್ಲಿ ಮೊರಡಿ ಮಸಾರಿಗಳಲ್ಲಿ ಹಾಕಿದ ಒಡ್ಡು ಕೆಲವು ದಿವಸ ನಿಂತರೂ ನಿಲ್ಲುವದು. ಆದರೆ ಯಾವ ತರದ ಹೊಲಗಳಿಗಾದರೂ ಒಡ್ಡು ಹಾಕಿದರೆ ನೀರಿನ ತ್ರಾಣವು ಅತ್ಯತ್ಯಷ್ಟವಾದುದರಿಂದ ಪರ್ವತಗಳನ್ನಾದರೂ ಒಡೆದು ಹರಿದು ಹೋಗುವದುಂಟು. ಆದರೆ ತಾವು ಹಾಕಿದ ಒಡ್ಡು ಎಂದಿಗೂ ಒಡೆಯದ ಹಾಗೆ ಒಂದು ಉಪಾಯವನ್ನು ಹೇಳುತ್ತೇನೆ. ಅದೇನೆಂದರೆ ಒಡ್ಡಿನ ಎದೆಯಲ್ಲಿ ಅದರ ಸಮೀಪದಲ್ಲಿಯ ಮಣ್ಣನ್ನು ಕಡಿದು ಒಡ್ಡಿಗೆ ಹಾಕದೆ ಹಿಂದೆ ಹೇಳಿದಂತೆ ಆ ಒಡ್ಡಿಗೆ ದೂರವಾದ ತೆವರು ತನ್ನ ಹೊಲದಲ್ಲಿ ಯಾವ ಕಡೆಗೆ ಇರುವದೋ ಆ ತೆವರನ್ನು ದೊಡ್ಡ ನೇಗಿಲು ಕಟ್ಟಿ ಚನ್ನಾಗಿ ಹೊಡೆದು ಮಣ್ಣು ಮಾಡಿ ಚಕ್ಕಡಿ ಬಂಡಿಗಳ ಮೇಲಿಂದ ತಂದು ಆ ಮಣ್ಣನ್ನು ಒಡ್ಡಿಗೆ ಹಾಕಿ ಒಡ್ಡು ಎತ್ತರವಾದ ಮೇಲೆ ಎದೆ ಒಡ್ಡು ಹಾಕಿ ಎದೆಯನ್ನು ತುಂಬಬೇಕು ಎದೆ ಒಡ್ಡು ತುಂಬಬೇಕಾದರೆ ಹೊಲದಲ್ಲಿಯ ತೆವರು ದೂರವಾಗಿದ್ದರೆ ಚಕ್ಕಡಿಯಿಂದ ತಂದು ತುಂಬಬೇಕು. ಅಥವಾ ತೆವರು ಸಮೀಪದಲ್ಲಿ ಇದ್ದರೆ ಕುಂಟೆಯ ಒಳಬಾಜೂದಲ್ಲಿ ಹಲಗಿಯನ್ನಾಗಲಿ ಕಟ್ಟಿ ಅಥವಾ ತಾಳಿಗೆ ಹಗ್ಗವನ್ನಾದರೂ ಸುತ್ತಿ ಇಲ್ಲವೆ ತಾಳಿಗೆ ತಟ್ಟನ್ನು ಹೊಲಿದು ಮೇಲೆ ಹಗ್ಗವನ್ನು ಸುತ್ತಿ ಕುಂಟೆಯನ್ನು ಹರಗಿದಂತೆ ಮಣ್ಣನ್ನು ಎಳಿಸಿ ತಂದು ಎದೆಯನ್ನು ತುಂಬಿಕೊಳ್ಳಬೇಕು. ಅದರಿಂದ ಮೇಲಿನ ನೀರು ಹರಿದುಬಂದು ಒಡ್ಡಿನ ಎದೆಗೆ ತಾಕಿ ಹಿಂದಕ್ಕೆ ತಿರುಗಿ ಹೊಲದ ಯಾವತ್ತು ಅಂಗಳ ತುಂಬ ಹರಿದಾಡಿ ಆನೆಯ ಎತ್ತರವಾದ ನೀರು ಒಂದು ಗೇಣು ಎತ್ತರವಾಗಿ ತೆಳ್ಳಗೆ ಹೊಲದ ತುಂಬ ಹರವಾದಲ್ಲಿ ನೀರಿನ ತ್ರಾಣವು ಕಡಿಮೆಯಾಗಿ ಸತ್ವವಿಲ್ಲದೆ ಮೆಲ್ಲನೆ ಹರಿದು ಹೋಗುವದರಿಂದ ಹೊಲವನ್ನು ತಂಪು ಮಾಡಿ ತೋಯಿಸುತ್ತದೆ. ಮತ್ತು ಮಂಡು ಬಿಡುತ್ತದೆ. ಇದರಿಂದ ಆ ಭೂಮಿಯು ನೆಲ್ಲು ಬಿತ್ತುವದಕ್ಕೆ ಅತ್ಯುತ್ತಮವಾಗಿದ್ದು ಅದರ ಬೆಳೆಯು ಪ್ರತಿ ವರ್ಷಕ್ಕೆ ಗದ್ದೆಯ ನೆಲ್ಲು ಬೆಳೆಯುವಂತೆ ವಿಶೇಷವಾದ ಬೆಳೆಯು ನಿರಾಯಾಸದಿಂದಾಗುವದು.

ಇಳಿತೆವರಾದ ಭೂಮಿಯು ಎರಿಯಾದರೆಯೂ ಮಸಾರಿಯಾದರೆಯೂ ಕೇಸರಿ ಕೆಂಪು ನೆಲವಾದರೂ ಕರಲು ನೆಲವಾದರೂ ಹಾಳು ನೆಲವಾದರೂ ಬಿಳಿಯ ಕಟಕದ ಭೂಮಿಯಾದರೂ ಉಸುಬಿನ ಭೂಮಿಯಾದರೂ ಮಡಿಯ ನೆಲವಾದರೂ ಮಂಡು ಮಣ್ಣಿನ ಭೂಮಿಯಾದರೂ ಕಲ್ಲು ಭೂಮಿಯಾದರೂ

ಮೇಲೆ ಹೇಳಿದ ಹಾಗೆ ಇಳಿತವರಾಗಿದ್ದರೆ ಅಥವಾ ಹೊಲದ ಮಧ್ಯದಲ್ಲಿ ಹಳ್ಳದ ಹಾಗೆ ತಗ್ಗಾಗಿದ್ದು ಎಡಬಲದ ಬಾಜೂದಲ್ಲಿ ತಿವರಾಗಿದ್ದರೆ ಅಂಥ ಭೂಮಿಗಳಿಗೆ ಆಗತ್ಯವಾಗಿ ಎತ್ತರವಾದ ಒಡ್ಡನ್ನು ಹಿಂದೆ ಹೇಳಿದ ರೀತಿಯಂತೆ ಚನ್ನಾಗಿ ಹಾಕಿಸಿ ಅದರಲ್ಲಿ ಮುಂಗಾರಿಯ ಪ್ರಥಮ ಮಳೆಯು ಬರುವದರೊಳಗೆ ನೇಗಿಲು ಹೊಡೆದು ಹರಗಿ ಹಸನಮಾಡಿ ಇಟ್ಟು ರೋಹಿಣಿ ಮೃಗಶಿರ ಕಾಲದಲ್ಲಿ ನೆಲ್ಲು ಬಿತ್ತಬೇಕು. ಆ ಬೆಳೆಯನ್ನು ತೆಗೆದುಕೊಂಡ ನಂತರ ಆ ಹೊಲದಲ್ಲಿ ಮಡಿಕೆಯ ಹೊಡಿ ಆ ಮಡಿಕಿಗೆ ಬುಕ್ಕಾ ಕಟ್ಟಿ ಕಡಲಿಯನ್ನು ಬಿತ್ತಬೇಕು. ಗೊಬ್ಬರದ ಭೂಮಿಯಾಗಿ ತಂಪು ಇರುವದರಿಂದ ಆ ಕಡಲಿಯು ಅತ್ಯಾಶ್ಚರ್ಯವಾಗಿ ಬೆಳೆಯುವದು. ಹಾಗು ಹೊಳೆಯ ಅವರಿಯಾದರೂ ಮುಳ್ಳು ಜವೆಯಾದರೂ ಬಿತ್ತಿದರೆಯೂ ಬರುತ್ತದೆ. ಅಂದರೆ ಕಡಲಿಯ ಕಾಲಿಗಿ ಮಾತ್ರ ಮುಂದಿನ ವರ್ಷದ ನೆಲ್ಲು ಬೆಳೆಗೆ ಅತಿ ಉಪಯೋಗವನ್ನು ಕೊಡುತ್ತದೆ

ಎರಿಯ ಭೂಮಿಯಲ್ಲಿ ಗರಸು ಹೊರಡುವ ಹಾಗೆ ಇದ್ದು ಒಡ್ಡು ಹಾಕಬೇಕಾದರೆ ಎರಿಯ ಮಣ್ಣಿನಿಂದ ಒಡ್ಡು ಹಾಕಬಾರದು ಎರಿಯ ಭೂಮಿಯಲ್ಲಿ ಗರಸು ಮಣ್ಣಿನಿಂದ ಒಡ್ಡು ಹಾಕುವದು ಉತ್ತಮವು. ಎರಿಯ ಮಣ್ಣಿನಿಂದ ಒಡ್ಡು ಹಾಕಿದರೆ ಅದು ಮಳೆಯಿಂದ ನೆನೆದು ಕರಗಿ ಹೋಗುವದು ಇದಲ್ಲದೆ ಬೀಡಿ ಸೆಳೆದು ರಂಧ್ರಬಿಟ್ಟು ಬೇಸಿಗೆಯ ಕಾಲದಲ್ಲಿ ನೆಲ ಒಣಗಿದ ಹಾಗೆ ಬಿರಬಿರಕಾಗಿದ್ದು ಮಳೆಯಾದಾಗಲೇ ಅದರಲ್ಲಿ ನೀರು ಸೇರಿ ಮಣ್ಣನ್ನು ಕರಗಿಸಿ ಒಡ್ಡು ಒಡೆಯುತ್ತದೆ. ಅದಲ್ಲದೆ ಬೆಳೆಯುವ ಹೊಲದ ಮಂಡು ಮಣ್ಣು ಹೋಗಿ ಗರಸು ತೆರೆದು ಹಳ್ಳ ಬಿದ್ದು ಹೊಲವು ಕೆಡುತ್ತದೆ. ಅದು ಕಾರಣ ಗರಸಿನಿಂದ ಒಡ್ಡು ಹಾಕಿ ಎರಿಯ ಮಣ್ಣಿನಿಂದ ಎದೆಯನ್ನು ತುಂಬಿಕೊಳ್ಳಬೇಕು. ಗರಸು ಇಲ್ಲದಿದ್ದರೆ ಎರಿಯ ಮಣ್ಣಿನಿಂದ ಒಡ್ಡು ಹಾಕಿ ಅದರ ಮೇಲಾದರೂ ಒಂದು ಗೇಣು ಎತ್ತರ ತಳದಿಂದ ಮೇಲಿನ ವರೆಗೆ ಗರಸು ಹಾಕಬೇಕು. ಮತ್ತು ತನ್ನ ಹೊಲದಲ್ಲಿ ಗರಸು ಇಲ್ಲದಿದ್ದರೆ ಸ್ವಲ್ಪ ದೂರಿಂದಾದರೂ ಒಡ್ಡಿನ ಮೇಲೆ ಹಾಕುವ ಪೂರ್ತೆಗೆ ಚಕ್ಕಡಿಯ ಮೇಲಿಂದಾದರೂ ತಂದು ಹಾಕಬೇಕು. ಈ ಪ್ರಕಾರವಾಗಿ ಮಾಡಿದ ಎರಿಯು ಮಂಡು ಬಿಟ್ಟು ನೀರು ನಿಂತು ತಂಪು ಹಿಡಿದು ನೆಲ್ಲು ಹೊಲವಾಗುವದು ಮತ್ತು ಆ ಭೂಮಿಯಲ್ಲಿ ಹಿಂಗಾರಿ ಮುಂಗಾರಿ ಗೋದಿ ಕಡಲೆ ಹತ್ತಿ ಮೊದಲಾದ ಯಾವ ಪದಾರ್ಥಗಳಾದರೂ ಸರ್ವೋತ್ಕೃಷ್ಟ ಬೆಳೆಯಾಗುವದು

ಹೊಲಗಳಲ್ಲಿ ಇಂಥ ಮಹತ್ತರವಾದ ಒಡ್ಡುಗಳನ್ನು ಹಾಕಿಸಬೇಕಾದರೆ ಐಶ್ವರ್ಯವಂತರಾದರೆ ಸಹಜವೇ. ನಿರ್ಲಕ್ಷದಿಂದ ಖರ್ಚು ಮಾಡಿ ಸಂಗಡಲೇ ಅವರು ಅದರ ಫಲವನ್ನು ಉಣ್ಣುವರು.

ಅದಕೆ ದ್ರವ್ಯವನ್ನು ಖರ್ಚು ಮಾಡುವಂಥ ತ್ರಾಣವಿಲ್ಲದ ಬಡಜನರಾದರೂ ಕೂಡ ಧೈರ್ಯದಿಂದ ಸಾಲ ಮಾಡಿ ಹೊಲದ ಸುತ್ತು ಒಡ್ಡನ್ನು ಮತ್ತು ಇಳಿತವರಾದ ಹೊಲವಾದರೆ ದೊಡ್ಡ ಒಡ್ಡನ್ನು ಹಾಕಿಸಬೇಕು ತಾನು ಖರ್ಚು ಮಾಡಿದ ದ್ರವ್ಯದ ಉತ್ಪನ್ನಾರ್ಥವಾಗಿ ದೊಡ್ಡ ಒಡ್ಡಿನಲ್ಲಿಯೂ ಸಣ್ಣ ಒಡ್ಡಿನಲ್ಲಿಯೂ ಹೊಲದ ಸುತ್ತು ಒಡ್ಡಿನಲ್ಲಿಯೂ ಬೇವಿನ ಬೀಜಗಳನ್ನು ಮೃಗಶಿರ ಕಾಲದಲ್ಲಿ ಹೊಸ ಮಣ್ಣು ಹಾಕಿದ ಒಡ್ಡಿನ ಮಣ್ಣು ನೆನೆದು ಹಸಿಯಾಗಿದ್ದರೆ ಎರಡು ಮೊಳಕ್ಕೆ ಒಂದೊಂದು ಬೀಜವನ್ನು ಹಾಕಬೇಕು. ಮತ್ತು ಆ ಬೇವಿನ ಗಿಡಗಳ ರಕ್ಷಣಾರ್ಥವಾಗಿ ಒಡ್ಡಿನ ತಳದಲ್ಲಿ ಒಡ್ಡಿನ ಒಳಬಾಜು ಹೊರಬಾಜುವಿನಲ್ಲಿ ಕಳ್ಳಿಯನ್ನು ಹಚ್ಚಿ ಅದರ ಹಿಂದೆ ಜಾಲಿಯ ಮುಳ್ಳು ಅಥವಾ ಬೋರಿಯ ಮುಳ್ಳು ಹಚ್ಚಿ ಬಿಡಬೇಕು. ಅದರ ಹಿಂದೆ ಹುಚ್ಚು ಕೇದಿಗಿಯ ಹಾಕಿದರಂತೂ ಬಹಳ ಬಂದೋಬಸ್ತು ಆಗುತ್ತದೆ. ಆ ಮೇಲೆ ದನಗಳು ಕುರಿಗಳು ತಿನ್ನದ ಹಾಗೆ ವರ್ಷವರ್ಷಕ್ಕೆ ಬೇಸಿಗೆಯ ಕಾಲದಲ್ಲಿ ಮುಳ್ಳನ್ನು ಹಚ್ಚುತ್ತ ಹೋಗಬೇಕು. ಮತ್ತು ಮಳೆಗಾಲದಲ್ಲಿ ಹೋದ ಹೋದಲ್ಲಿ ಕಳ್ಳಿಯನ್ನು ಹಚ್ಚುತ್ತ ಇರಬೇಕು. ಈ ಪ್ರಕಾರ ಮೂರು ವರ್ಷದ ವರೆಗೂ ಬೆಳಿಸಿ ಆ ಮೇಲೆ ಹನ್ನೆರಡು ವರುಷದ ವರೆಗೆ ಸುಮ್ಮನೆ ಬಿಟ್ಟರೆ ಗಿಡಗಳು ಬಲಿತು ತೊಲೆಗಳಾಗುವವು ಅವುಗಳ ಮಾರಾಟದಿಂದ ಬಹಳ ದ್ರವ್ಯ ಪ್ರಾಪ್ತವಾಗುವದು. ಮತ್ತು ತನ್ನ ಮನೆಯನ್ನು ಕಟ್ಟಿಕೊಂಬುವದಕ್ಕಾದರೂ ನಿರಾಯಾಸದಿಂದ ಕಟ್ಟಿಗೆಗಳಾಗುವವು ಅದು ಕಾರಣ ಹೊಲದ ಸುತ್ತಲೂ ಹೊಲದ ಮಧ್ಯದಲ್ಲಿಯೂ ಹಳ್ಳಗಳಿದ್ದಲ್ಲಿಯೂ ಹೊಲದ ಇಳಿತರದ ಮೈಯ್ಯಲ್ಲಿಯೂ ಒಡ್ಡು ಹಾಕಿಸಿ ಅವುಗಳಲ್ಲಿ ಬೇವಿನ ಬೀಜಗಳನ್ನು ಹಾಕಬೇಕು.

ಹೊಲವು ತಗ್ಗು ತೆವರಾಗಿ ಹಳ್ಳನಾಲಿ ಕೊರಿ ಚೀರಲಗಳು ಇದ್ದರೆ ಅಂಥ ಹೊಲಗಳ ಬೆಳೆಯು ಹೊಲದಲ್ಲೆಲ್ಲ ಒಂದೇ ಸಮವಾಗಿ ಬೆಳೆಯುವದಿಲ್ಲ. ಮತ್ತು ಮಳೆಯಾದರೆ ತೆವರು ಭೂಮಿಯಲ್ಲಿ ನೀರು ಸ್ವಲ್ಪವಾದರೂ ನಿಲ್ಲದೆ ಮಳೆ ಬಡಿದಾಕ್ಷಣವೆ ತಗ್ಗಿನ ಕಡೆಗೆ ಹರಿಯುವದರಿಂದ ಬೇಗನೆ ಹಸಿಯಾಗುವದಿಲ್ಲ ಮತ್ತು ತಗ್ಗು ಭೂಮಿಯು ಹಸಿಯಾಗಿ ತೆವರು ಭೂಮಿಯು ಹಸಿಯಾಗದೆ ಇದ್ದದರಿಂದ ಅಂಥ ಹೊಲಗಳಲ್ಲಿ ಬಿತ್ತಿದ ಸಾಟಿಕೆಗಳು ಕೆಲವು ಸ್ಥಳಗಳಲ್ಲಿ ಒಣಗಿದ ಹಾಗೆ ಅಥವಾ ರೋಗದ ಸಸಿಗಳ ಹಾಗೆ ಆಗಿ ಕೆಟ್ಟು ಹೋಗಿ ಆ ಹೊಲದ ಅರ್ಧ ಬೆಳೆಯು ಕಡಿಮೆಯಾಗುವದು. ಮತ್ತು ಕಲ್ಲು ಭೂಮಿಯಲ್ಲಿ ತೆವರಿದ್ದರಂತೂ ಬಿತ್ತುವ ಹಸಿಯಾಗುವದು ಸಹ ದುರ್ಲಭವು. ಒಂದು ಪಕ್ಷದಲ್ಲಿ ಮರಮಳೆಯಾಗಿ ಪುನಃ ಜಡಿಮಳೆಯಾದರೆ ಸ್ವಲ್ಪ ಹಸಿಯಾಗುತ್ತದೆ. ಮರಮಳೆಯಾದರೆ ನೀರೆಲ್ಲ ಉರುಳಿ ಹೋಗಿ ಯಾವ ಪ್ರಕಾರದ ತೆವರುಗಳಾದರೂ ಚನ್ನಾಗಿ ಹಸಿಯಾಗುವದಿಲ್ಲ.

ಅಂಥ ತೆವರು ಮಣ್ಣನ್ನು ತಗ್ಗಿನ ಕಡೆಗೆ ಎಳಿಸಿ ಸಮತಳ ಮಾಡು ವದರಿಂದ ಹೊಲವೆಲ್ಲ ಒಂದೇ ಸಮವಾಗಿ ಎಷ್ಟೋ ಹಿತಕರವಾಗುವದು ಆದರೆ ತೆವರು ಮಣ್ಣನ್ನು ತಗ್ಗ ಭೂಮಿಗೆ ಎಳಿಸುವ ಸುಲಭವಾದ ಯುಕ್ತಿಯು ಹೇಗಂದರೆ, ಹರಗುವ ಕುಂಟಿಯು ತಾಳಿಗೆ ಜಾಡರ ಲಾಳಿದಟ್ಟೆಯು ಹಾಗೆ ದಂಟುಗಳನ್ನು ಸುಲಿದು ಹುರಿಯಿಂದ ಹೆಣೆದು ತಟ್ಟೆಯು ಹಾಗೆ ಮಾಡಿ ಇಲ್ಲವೆ ಕಟ್ಟಿಗೆಯ ಹಲಗಿಯನ್ನಾದರೂ ಸಣ್ಣ ಸಣ್ಣ ಕಟ್ಟಿಗೆಗಳನ್ನಾದರು ಕಟ್ಟಿ ಅಥವಾ ತಾಳಿಗೆ ಹಗ್ಗವನ್ನಾದರೂ ಸುತ್ತಿ ಇಲ್ಲವೆ ತಾಳಿನ ಪ್ರಮಾಣಕ್ಕೆ ತಟ್ಟನ್ನಾ ದರೂ ಬಿಗಿಯಾಗಿ ಹೊಲಿದು ಮೇಲೆ ಹಗ್ಗವನ್ನು ಸುತ್ತಿ ಕುಂಟಿಯನ್ನು ತಯಾರ ಮಾಡಿ ಇಟ್ಟು ಮೊದಲು ದೊಡ್ಡ ತೆವರಾದರ ದೊಡ್ಡ ನೇಗಲಿಯಿಂದ ಸಣ್ಣ ತೆವರಾದರೆ ಸಣ್ಣ ನೇಗಲಿಯಿಂದ ಹೊಡೆದು ಮಣ್ಣನ್ನು ಮೆತ್ತಗೆ ಮಾಡಿ ಮೇಲೆ ಹೇಳಿದ ಪ್ರಕಾರ ಕುಂಟಿಯು ಕುಡದ ಎದೆಯಲ್ಲಿ ಅಂದರೆ ಆ ಕುಡದ ಒಳಬಾಜುವಿನಲ್ಲಿ ಹಿಂದೆ ಹೇಳಿದ ಹಾಗೆ ತಟ್ಟು ಮೊದಲಾದವುಗಳಲ್ಲಿ ಯಾವ ದನ್ನಾದರೂ ಕಟ್ಟಿ ಎತ್ತುಗಳನ್ನು ಹೂಡಿ ಹೊಲವನ್ನು ಹರಗಿದ ಹಾಗೆ ದೂರಿನ ಮಣ್ಣನ್ನು ಅಲ್ಲಲ್ಲಿಗೆ ಒತ್ತಿಕೊಂಡು ಬಂದು ಸ್ವಲ್ಪ ಸ್ವಲ್ಪ ಮುಂದಕ್ಕೆ ಸಾಗಿ ಸಿಕೊಳ್ಳುತ್ತ ತಗ್ಗಿನ ಕಡೆಗೆ ಭರತಿಯನ್ನು ಮಾಡಿ ಸಮತಳ ಮಾಡಬೇಕು ಕುಂಟಿಯನ್ನು ತೆವರಿನಿಂದ ತಗ್ಗಿನ ವರೆಗೂ ಒಮ್ಮೆಗೆ ಒಯ್ಯಲಾಗದು ಹಾಗೆ ಒಯ್ದರೆ ಮಣ್ಣು ಸೋರಿ ಹೋಗುತ್ತದೆ ಎತ್ತುಗಳಿಗೆ ಬಹಳ ಭಾರವಾಗು ತ್ತದೆ. ಅದು ಕಾರಣ ಸ್ವಲ್ಪ ಸ್ವಲ್ಪ ಸಾಗಿಸುತ್ತ ಸುಲಭದಿಂದ ತೆವರು ಮಣ್ಣು ತಗ್ಗಿಗೆ ಭರತಿಯಾಗಿ ಹೊಲವು ಸಮತಳವಾಗುವದು ಆದರೆ ಇದ ರಿಂದಾಗುವ ಪ್ರಯೋಜನವೇನಂದರೆ, ಯಾವ ಪ್ರಕಾರವಾದ ಭೂಮಿಗಾದರೂ ಅದರ ಸುತ್ತು ಒಡ್ಡುಗಳನ್ನು ಹಾಕಿಸಿ ಅವರ ತೆವರನ್ನು ತಗ್ಗಿಗೆ ಎಳಿಸಿ ಸಮತಳ ಮಾಡಿ ಅದರಲ್ಲಿ ಗೊಬ್ಬರವನ್ನು ಹಾಕಿ ವರುಷ ವರುಷಕ್ಕೆ ಮಡಿ ಕೆಯ ಹೊಡೆದು ಮೆತ್ತಗೆ ಮಾಡಿದಲ್ಲಿ ಮೇಲೆ ಮಳೆಯಾದಾಗಲಿ ಆ ಹೊಲ ವೆಲ್ಲ ಒಂದೇ ಸಮವಾಗಿ ಗೇಣು ಚೋಟು ಮೊಳ ಉದ್ದ ನೀರು ನಿಂತು ಆ ನೀರು ಅಲ್ಲಿಯೇ ಇಮರಿಕೊಳ್ಳುವದರಿಂದ ಉತ್ತಮ ಮಧ್ಯಮ ಕನಿಷ್ಟ ಪ್ರತಿಯ ಭೂಮಿಗಳಲ್ಲಿ ಯಾವ ಭೂಮಿಯಾದರೂ ಮಂಡು ಮಣ್ಣಿನಂತೆ ಆಗಿ ಆ ಹೊಲವು ಮಡಿಯ ನೆಲವಾಗಿ ಕಸುವಿನ ಭೂಮಿಯಾಗಿ ನೆಲ್ಲು ಗೋದಿ ಕಡಲೆ ಬಿಳಿಜೋಳ ಮೆಣಸಿನ ಗಿಡ ಬಳ್ಳೊಳ್ಳಿ ಮತ್ತು ಮುಂಗಾರಿ ಹಿಂಗಾರಿ ಮೊದಲಾದ ಸಕಲ ಪದಾರ್ಥಗಳು ಬೆಳೆಯತಕ್ಕಂಥ ಭೂಮಿಯಾಗುವದು. ಮತ್ತು ಕನಿಷ್ಟಪ್ರತಿಯ ಗರಸು ಭೂಮಿ ಇದ್ದು ತಿದ್ದುವಿಕೆಯಿಂದ ಈ ಪ್ರಕಾ ರವಾಗಿ ಉತ್ತಮ ಭೂಮಿಗೆ ಸಮಾನವಾಗುವದು. ಅದರಲ್ಲಿ ಉತ್ತಮ ಪ್ರತಿಯ ಭೂಮಿಯನ್ನು ಮೇಲೆ ಹೇಳಿದ ಹಾಗೆ ತಿದ್ದಿಕೊಂಡಲ್ಲಿ ಸರ್ವೋತ್ಕೃಷ್ಟವಾದ ಉತ್ತಮೋತ್ತಮ ಭೂಮಿ ಎಂದು ಹೇಳಿಸಿಕೊಳ್ಳುವದು. ಹೀಗೆ ಭೂಮಿಯನ್ನು

ತಿದ್ದಿಕೊಳ್ಳುವದು ರೈತ ಜನರಿಗೆ ಬಹು ಪ್ರಯೋಜನವು ಭೂಮಿಗೆ ತಿದು ವಿಕೆಯೂ ಆರೈಕೆಯೂ ಇಲ್ಲದೆ ವರ್ಷ ವರ್ಷಕ್ಕೆ ಹಂಗಿ ಬಿತ್ತುತ್ತ ಹೋದರೆ ಅದರ ಬೆಳೆಯು ಚನ್ನಾಗಿ ಆಗದೆ ಕೆಲವು ವರ್ಷದಲ್ಲಿ ಉತ್ತಮ ಪ್ರತಿಯ ಭೂಮಿಯಾದರೂ ಕನಿಷ್ಠ ಪ್ರತಿಯ ಗರಸು ಮೊರಡಿಗಳ ಹಾಗಾಗಿ ಹೊಲವೆಲ್ಲ ನಟ್ಟು ಕೂಡಿ ಅದರಲ್ಲಿ ಕಾಡ ಹುಲ್ಲಾದ ಪಶುಗಳ ಆಹಾರವು ಬೆಳೆಯುವದಲ್ಲದೆ ಮನುಷ್ಯರುಗಳಿಗೆ ಯೋಗ್ಯವಾದ ಉತ್ತಮ ಧಾನ್ಯವು ಸ್ವಲ್ಪಾದರೂ ಬೆಳೆಯದ ಹಾಗಾಗಿ ಆ ಭೂಮಿಯು ಯಾವ ಗೃಹಸ್ಥನ ವಶದಲ್ಲಿ ಇರುವದೋ ಅವನನ್ನು ಪೂರಾ ದರಿದ್ರನನ್ನಾಗಿ ಮಾಡಿ ಅಂಥ ಮೈಗಳ್ಳನ ಸ್ವಾಧೀನದಲ್ಲಿ ಇರದೆ ಮತ್ತೊಬ್ಬ ತ್ರಾಣವಂತನಾದ ಬಲವಂತನ ವಶಕ್ಕೆ ಹೋಗುವದು

ಬಲವಂತನಿಗೆ ಭೂಮಿ, ಮತ್ತು ಸತ್ಯವನ್ನು ನಂಬಿ ಬಿಡದಿರುವ ಛಲವಂತನಿಗೆ ಹೊನ್ನು, ವಶವಾಗುವವು ಅದು ಕಾರಣ ಸರ್ವ ಜನರು ಈ ಹೊಸ ಗ್ರಂಥದಲ್ಲಿ ಹೇಳಿದ ಯಾವತ್ತು ಯುಕ್ತಿಗಳನ್ನು ತಿಳಿದು ಹೊಲಗಳನ್ನು ಚನ್ನಾಗಿ ತಿದ್ದಿಕೊಂಡು ಅವುಗಳ ಆರೈಕೆಯನ್ನು ವರುಷ ವರುಷಕ್ಕೆ ಯಥಾಪ್ರಕಾರವಾಗಿ ಕ್ರಮದಿಂದ ನೇಮಕವಾಗಿ ಬೇಸರವಿಲ್ಲದೆ ಮಾಡುತ್ತ ಹೋಗಬೇಕು ಮಾಡಿದವನು ಉಂಡಾನು ಎಂಬ ಗಾದೆಯುಂಟು. ಆದರ ಮನುಷ್ಯರುಗಳಿಗೆ ದೇವರ ಆಜ್ಞೆಯು ಇರುವದೇನೆಂದರೆ ನೀನು ನಿನ್ನ ಹಣೆಯ ಬೆವರು ನೀರನ್ನು ಚಲ್ಲಿ ಈ ಭೂಮಿಯನ್ನು ತೊಯಿಸಿದಿಯಾದರೆ ಆ ಭೂಮಿಯಿಂದ ನಿನಗೆ ಆಹಾರವು ಸಿಕ್ಕುವದೆಂದು ಮನುಷ್ಯರುಗಳನ್ನು ನಿರ್ಮಿಸಿದಾಗಲೆ ಜಗದೀಶ್ವರನು ಕಟ್ಟು ಮಾಡಿರುವನು. ಅದರಿಂದ ಸರ್ವರೂ ತಮ್ಮ ತಮ್ಮ ಉದ್ಯೋಗದಲ್ಲಿ ಕ್ರಮದಿಂದ ನೇಮಕವಾಗಿ ದಿನದಿನಕ್ಕೆ ಹೆಚ್ಚು ಶ್ರಮದಿಂದ ತಮ್ಮ ಹಣೆಯ ಬೆವರು ಭೂಮಿಯಲ್ಲಿ ಬೀಳದೆ ಹೋದರೆ ಅಂಥವರು ಧನಸಂಪನ್ನರಾಗಲಾರರು ಮತ್ತು ಕಷ್ಟದಿಂದ ಫಲ ಉಂಟು ಎಂದ ಹಾಗೆ ತಾವು ಉತ್ತಮ ರೀತಿಯಿಂದ ಕಷ್ಟಪಟ್ಟು ಉತ್ತಮತರದ ಫಲವನ್ನು ಪಡೆದು ಸದಾ ಸೌಖ್ಯವನ್ನು ಹೊಂದಬೇಕು

ಹೊಲದಲ್ಲಿ ಸಣ್ಣ ಸಣ್ಣ ಚೀರಲುಗಳು ಹಳ್ಳಗಳು ಇದ್ದರೆ ಅವುಗಳ ಮುಖಕ್ಕೆ ಕಲ್ಲು ಇದ್ದ ಸ್ಥಲವಾದರೆ ಕಲ್ಲುಗಳನ್ನು ಅಥವಾ ಎರಿಯ ಭೂಮಿಯಾದರೆ ಮುಳ್ಳು ಹೆಂಟಿಗಳನ್ನು ಎತ್ತರವಾಗಿ ಅಲ್ಲಲ್ಲಿಗೆ ಒಟ್ಟಿ ಅದಕ್ಕೆ ಮಣ್ಣು ಭರತೀ ಮಾಡಿ ಆ ಹೆಂಟಿಗಳನ್ನು ಮುಚ್ಚಿ ಆ ಹಳ್ಳದ ಎಡಬಲದ ತೆವರನ್ನು ಮಡಿಕೆಯಿಂದ ಮೆತ್ತಗೆ ಮಾಡಿ ಹಳ್ಳದ ಸರಕಲನ್ನು ಮಣ್ಣಿನಿಂದ ತುಂಬುವದಕ್ಕೆ ಮೇಲೆ ಹೇಳಿದ ರೀತಿಯಂತೆ ಕುಂಟೆಯ ತಾಳಿಗೆ ತಟ್ಟನ್ನು ಹೊಲೆದು ಮೇಲೆ ಹಗ್ಗವನ್ನು ಸುತ್ತಿ ಹರಗಿದ ಹಾಗೆ ಮಣ್ಣು ಎಳಿಸಿ ಹಳ್ಳಗಳನ್ನು ತುಂಬಿಕೊಳ್ಳಬೇಕು.

ಹೊಲಗಳಲ್ಲಿ ದೊಡ್ಡ ಹಳ್ಳಗಳಿದ್ದರೆ ಆ ಹಳ್ಳಗಳನ್ನು ತುಂಬಿಕೊಳ್ಳುವ ಸುಲಭವಾದ ಯುಕ್ತಿಯು ಏನೆಂದರೆ, ಆ ಹಳ್ಳವು ಎಷ್ಟು ಅಗಲವಿರುವದೋ ಅದಕ್ಕೆ ಸರಿಯಾಗುವ ಹಾಗೆ ಕಂಭದ ಗಾತ್ರವಾದ ಹಸಿಯು ಜಾಲಿಯು ಕಟ್ಟಿಗೆಗಳನ್ನಾಗಲಿ ಬಸರಿಯು ಕಟ್ಟಿಗೆಗಳನ್ನಾಗಲಿ ತಂದು ಅವುಗಳಿಗೆ ಹುಗಲನ್ನು ಹೊಡೆದು ಗೇಣು ಒಂದುವರೆ ಗೇಣಿಗೊಂದು ಗೂಟಗಳನ್ನಾಗಲಿ ಮೊಳೆಗಳನ್ನಾಗಲಿ ಕವಲಿನ ಹಾಗೆ ಯಾಸಿಯ ಮೇಲೆ ಹೊಡೆದು ಆ ಹಳ್ಳದಲ್ಲಿ ನಡಿಸುವದು. ಅದು ಹೇಗಂದರೆ ಗರಸು ಮೊದಲಾದ ಗಟ್ಟಿ ಭೂಮಿಯಾದರೆ ಗಜ, ಒಂದು ಕಾಲು ಗಜ, ಒಂದುವರೆ ಗಜದ ತಗ್ಗುಗಳನ್ನು ತೋಡಿ ಎರಡು ಗಜಕ್ಕೆ ಒಂದರಂತೆ ನಿಲ್ಲಿಸಬೇಕು ಮತ್ತು ಎರಿಯ ಭೂಮಿಯಾದರೆ ಒಂದು ಆಳುದ್ದ ಪ್ರಮಾಣ ತಗ್ಗುಗಳನ್ನು ತೆಗೆದು ಕಟ್ಟಿಗೆಗಳನ್ನು ನಿಲ್ಲಿಸಿ ಗರಸು ಮಣ್ಣು ಹಾಕಿ ಹಾರೆಯಿಂದ ಚನ್ನಾಗಿ ಜಡಿದು ಗಟ್ಟಿಯಾಗಿ ನಡಿಸಬೇಕು ಇದರಂತೆ ಹಳ್ಳವು ಸ್ವಲ್ಪ ಅಗಲವಾದರೆ ಎರಡು ಸಾಲು ಅಥವಾ ಬಹಳ ಅಗಲವಾದರೆ ಮೂರು ಸಾಲು ಈ ಪ್ರಕಾರವಾಗಿ ಕಟ್ಟಿಗೆಗಳನ್ನು ನಡಿಸಿ ಯಾಸಿಯ ಮೇಲೆ ಹೊಡೆದ ಕವಿಗಳಲ್ಲಿ ಅಡ್ಡ ಕಟ್ಟಿಗೆಗಳನ್ನು ಹಾಕಿ ಅದಕ್ಕೆ ಆನಿಸಿ ಮುಳ್ಳು ಹೆಂಟಗಳನ್ನು ನಿಲ್ಲಿಸಿ ಅದರ ನಡವಿನ ಸಂದುಗಳಲ್ಲಿ ಬೋರಿಯ ಮುಳ್ಳಿನ ಹೆಂಟಗಳನ್ನು ತುಂಬಿ ತುಳಿದು ಬಿಡಬೇಕು ಮತ್ತು ಆ ಕಂಭಗಳಿಗೆ ಹಿಂದಿನ ಪೈಯ್ಯಿಗೆ ಮುಂದಿನ ಪೈಕಡೆಗೆ ಜೀಟುಗೋಲು ಕೊಟ್ಟ ಹಾಗೆ ಕವಿಗಂಭಗಳನ್ನಾಗಲಿ ಅಥವಾ ಕವಿಗಳಿಲ್ಲದ ಕಟ್ಟಿಗೆಗಳಿಗಾದರೂ ಹುಗುಲು ಹೊಡೆದು ಗೂಟಗಳನ್ನು ಹಾಗಿ ಬಿಗಿಯಾಗುವ ಹಾಗೆ ಮಾಡಿ ಜೀಟುಕೊಟ್ಟು ನಿಲ್ಲಿಸಿ ಗಟ್ಟಿಮಾಡಿ ಬಿಡಬೇಕು ಹೀಗೆ ಮಾಡುವದರಿಂದ ಎಷ್ಟು ದೊಡ್ಡ ಹಳ್ಳವಾದರೂ ನೀರು ಬಸಿದು ಹೋಗಿ ಮಂಡು ಬಿಟ್ಟು ಹಳ್ಳ ಹೂಳುವದು ಹೀಗೆ ಕೆಲವು ಸ್ಥಳಗಳಲ್ಲಿ ಶ್ರೀ ಘನಮುರ ನಿವಾಸ ಮಹಾಪ್ರಭುಗಳ ಅಪ್ಪಣೆಯ ಪ್ರಕಾರಕ್ಕೆ ಮಾಡಿ ಮಹತ್ತರವಾದ ಹಳ್ಳಗಳನ್ನು ಹೂಳಿ ಹೊಲವನ್ನು ಮಾಡಿಕೊಂಡಿದ್ದಾರೆ

ಹೊಲದ ಮಧ್ಯದಲ್ಲಿ ಒಂದಾದರೂ ಗಿಡವಿರಬಾರದು ಅದರಿಂದ ಬೆಳೆಯು ಬಹಳವಾಗಿ ಕೆಡುತ್ತಿರುವದು ಹೇಗೆಂದರೆ ಅದರ ನೆರಳು ಎಷ್ಟು ಭೂಮಿಯಲ್ಲಿ ಸದಾ ಇರುವದೋ, ಅಷ್ಟು ಭೂಮಿಯು ಬೆಳೆಯಾಗದೆ ಇರುವದು ಅದು ಕಾರಣ ಹೊಲದ ಮಧ್ಯದಲ್ಲಿ ಯಾವ ಪ್ರಕಾರದ ಗಿಡಗಳನ್ನಾದರೂ ಬೆಳಿಸಬಾರದು. ಹೊಲದ ನಾಲ್ಕೂ ದಿಕ್ಕಿಗೂ ಬದುವಿನ ಸಮೀಪಕ್ಕೆ ಎಷ್ಟು ಗಿಡಗಳು ಇದ್ದರೆಯೂ ಸಂಶಯವಿಲ್ಲವು. ಮತ್ತು ಕೆಲವು ಜನರು ಹೊಲದ ಮಧ್ಯದಲ್ಲಿ ನೆರಳಿಗೋ ಅಥವಾ ಔಷಧೋಪಾಯಕ್ಕೋ ಉಪಯೋಗ ಬೀಳುವ ಹಾಗೆ ಅಥವಾ ಮತ್ತೇನಾದರೂ ಪ್ರಯೋಜನಕ್ಕೋ ಬರುವ ಹಾಗೆ ಇರುವ

ಗಿಡವನ್ನು ಕಡಿಯಲಾರದೆ ಬೆಳಸಿರುತ್ತಾರೆ. ಅಂಥ ಗಿಡಗಳನ್ನು ಹಾಗೇ ಬಿಟ್ಟರೆ ಯಾರಾದರೂ ಕಡಿದು ಹಾಕಬಹುದೆಂಬ ಭಯದಿಂದ ಅದಕ್ಕೆ ದೇವರ ಮರ ವೆಂದು ಹೆಸರನ್ನಿಟ್ಟಿರುವರು. ಆದರೆ ಬಲ್ಲವರಾದರೆ ಬಹು ಪ್ರಯೋಜನಕ್ಕೆ ಅಥವಾ ಬಹು ಜನರಿಗೆ ನೆರಳಿನ ಆಸ್ಪದಕ್ಕೆ ಬರುವ ಹಾಗೆ ಇದ್ದರೆ ಅಂಥ ಗಿಡಗಳನ್ನು ಉಳಿಸಿ ಯಾವ ಪ್ರಯೋಜನವಿಲ್ಲದ ಗಿಡಗಳನ್ನು ಕಡಿದು ಬಿಡಬೇಕು

ಕಲ್ಲು ಹೊಲಗಳಾದರೆ ಹೊಲದ ಮಧ್ಯದಲ್ಲಿ ಕಲ್ಲುಬಂಡೆಗಳು ಕಾಣುವ ಹಾಗೆ ಮೇಲೆಯಾಗಲಿ ಇಲ್ಲವೆ ಗೇಣು ಒಂದುವರೆ ಗೇಣು ಮಣ್ಣಿನ ಮರೆ ಯಲ್ಲಾಗಲಿ ಇದ್ದರ ಅಂಥ ಕಲ್ಲುಗಳನ್ನು ಹೊಲದ ಮಧ್ಯದಲ್ಲಿ ಇಡಬಾರದು ಆ ಕಲ್ಲುಗಳನ್ನು ದೊಡ್ಡ ಸುತ್ತಿಗೆಯಿಂದ ಚಾನಗಳಿಂದ ಅಥವಾ ಸುರಂಗ ದಿಂದ ಒಡೆದು ಹೊಲದ ಇಳಿಜಾರಿಯ ಕಡೆಗೆ ಬದವು ಹಿಡಿದು ಗೋಡೆಯ ಹಾಗೆ ಚನ್ನಾಗಿ ಕಟ್ಟಬೇಕು. ಮತ್ತು ಆ ಕಲ್ಲುಗಳನ್ನು ವಡ್ಡರ ಭಂಡಿಯ ಮೇಲಿಂದಾಗಲಿ ತಂದು ಬದುವಿಗೆ ಹಾಕಿಸಬೇಕು ಮಣ್ಣಿನ ಮರೆಯಲ್ಲಿ ನೇಗಲಿಗಳಿಗೆ ತಟ್ಟುವಂಥ ಕಲ್ಲುಗಳಿದ್ದರ ಅವುಗಳನ್ನು ಅಗಿದು ಸೂತ್ರಲೂ ಬಯಲು ಮಾಡಿ ಚಾನಗಳಿಂದಾಗಲಿ ಚಮ್ಮಟಿಗೆಯಂಥ ದೊಡ್ಡ ಸುತ್ತಿಗೆ ಯಿಂದಾಗಲಿ ಒಡೆದು ತಂದು ಹೊಲದ ಮೇರೆಗೆ ಹಾಕಬೇಕು. ಹೀಗೆ ಹೊಲದ ಮಧ್ಯದಲ್ಲಿ ಕಲ್ಲುಗಳೂ ಗಿಡಗಳೂ ಇರಬಾರದು.

ಹೊಲದಲ್ಲಿ ಸಣ್ಣ ಸಣ್ಣ ಗುಣಿಗಲ್ಲುಗಳಿದ್ದರೆ ಅವುಗಳನ್ನು ಆರಿಸಿ ಹೊಲದ ಮೇರೆಗಳಿಗಾಗಲಿ ಹಪ್ಪದ ಮುಖಕ್ಕಾಗಲಿ ಹಾಕಬೇಕು ಅಥವಾ ತೀರ ಸಣ್ಣ ಸಣ್ಣ ಕಲ್ಲುಗಳಿದ್ದರ ಆರಿಸಬಾರದು. ಅದು ಹೊಲಕ್ಕೆ ತಂಪು ಮಾಡು ತ್ತದ ಹಿಡಿಕೆ ಅಥವಾ ಹಿಡಿಕೆಗೆ ಮೀರಿದಂಥ ದೊಡ್ಡ ಕಲ್ಲುಗಳಿದ್ದರೆ ಆರಿಸಿ ಹಾಕಬೇಕು. ಆರಿಸಿದಾಗ್ಯಾದರೂ ಹೊಲದ ಮಧ್ಯದಲ್ಲಿ ಕಲ್ಲುಕುಟ್ಟರಿಗಳನ್ನು ಹಾಕಬಾರದು ಆರಿಸಿದ ಕಲ್ಲುಗಳನ್ನು ಹೊಲದ ಮೇರೆಗೆ ಒಡ್ಡಿನ ಹಾಗೆ ಹಾಕಬೇಕು.

ಗುಡ್ಡಗಳ ಕೆಳಗೆ ಕಲ್ಲು ಮಸಾರಿಗಳು ಇಳಿಜಾರಿಯಾಗಿರುವದರಿಂದ ಅಂಥ ಹೊಲಗಳಿಗ ಇಳಿಜಾರಿಯಾದ ಕಡೆಗೆ ಎತ್ತರವಾದ ಒಡ್ಡು ಹಾಕಿಸಿ ಒಡ್ಡಿನ ಎದೆಯನ್ನು ತುಂಬಿಕೊಂಡು ಅದರ ಎಡಬಲಕ್ಕ ಒಡ್ಡು ಹಾಕಿಸಿ ಹೊಲದ ಮಧ್ಯದಲ್ಲಿರುವ ಗುಣಿಗಲ್ಲುಗಳನ್ನು ಆರಿಸಿ ದೊಡ್ಡ ಕಲ್ಲುಗಳಿದ್ದರೆ ಅವುಗಳನ್ನು ಒಡಿಸಿ ಕಡೆಗೆ ಹಾಕಿಸಿ ಗೊಬ್ಬರವನ್ನು ಹಾಕಿ ನೇಗಲಿಯನ್ನಾಗಲಿ ಮಡಿಕೆಯ ನ್ನಾಗಲಿ ಹೊಡೆದು ಹರಗಬೇಕು ಈ ಪ್ರಕಾರ ಹೊಲವನ್ನು ತಿದ್ದಿಕೊಳ್ಳು ವದರಿಂದ ಆ ಹೊಲದಲ್ಲಿ ನೆಲ್ಲು ಬೆಳೆಯುವದು ಮತ್ತು ಮುಂಗಾರಿಯ ಸರ್ವಧಾನ್ಯವು ಎಳ್ಳು ಕಾರೆಳ್ಳು ಮುಂತಾದ ಖರೀಪ ಸಹಿತವಾಗಿ ಮುಂಗಾ ರಿಯ ಸಂಗಡ ಬೆಳೆಯತಕ್ಕಂಥ ಯಾವತ್ತು ಅಕ್ಕಡಿಯ ಧಾನ್ಯಗಳನ್ನು ಬೆಳೆ

ಯುಬಹುದು ಅಚ್ಚ ಎರೆಯ ಭೂಮಿಯಾದರೆ ಬಳ್ಳೊಳ್ಳಿ ಬೆಳೆಯುವವು. ಸ್ವಲ್ಪ ಕಪ್ಪ ಅಥವಾ ಕೇಸರಿ ನೆಲವಾದರೆ ಮೆಣಸಿನಗಿಡ ಸೇಂಗಾ ಮತ್ತು ಹಿಂಗಾರಿಯ ಧಾನ್ಯ ವಟಾಣಿ ಮೊದಲಾದ ಕಟಾಣಿ ಜೀನಸುಗಳು ಕಡ ಲಿಯ ಧಾನ್ಯಗಳು ಇವುಗಳನ್ನು ಬೆಳೆಯಬಹುದು ಗುಡ್ಡದ ವಾರಿಯಾದ ಉಸುಕು ಬೆರಿಕೆಯ ಕೆಂಪು ಮಸಾರಿಗಳಲ್ಲಿ ಒಡ್ಡು ಹಾಕಿಸಿ ಸ್ವಲ್ಪ ನೀರು ನಿಲ್ಲುವ ಹಾಗೆ ಬೆಂಚಿಯನ್ನು ಮಾಡಿದರೆ ಸಂಶಯವಿಲ್ಲದೆ ನೆಲ್ಲು ಬೆಳೆಯು ವದು ಮತ್ತು ಸಮೀಪದಲ್ಲಿ ನೀರಿನ ಆಸ್ಪದವಿದ್ದರೆ ಅಂಥ ಹೊಲಗಳಲ್ಲಿ ಒಡ್ಡಿನ ಸಮೀಪಕ್ಕೆ ಮಾವಿನ ಗಿಡಗಳನ್ನು ಹಚ್ಚಿ ನಾಲ್ಕಾರು ವರುಷ ಸ್ವಲ್ಪ ಆರೈಕೆಯನ್ನು ಮಾಡುತ್ತ ಹೋದರೆ ಗಿಡಗಳು ಮುಂದೆ ಆಯಾಸವಿಲ್ಲದೆ ಫಲ ವಾಗುತ್ತ ವರುಷ ವರುಷಕ್ಕೆ ಆ ಹೊಲದ ತೆರಿಗೆಯನ್ನು ಕೊಟ್ಟು ತನ್ನ ಕುಟುಂಬ ಪೋಷಣೆಯ ಮಾಡುವದು ಮತ್ತು ತನ್ನ ಸತಿಸುತಾದಿಗಳು ಸಹಿತ ಸ್ವೇಚ್ಛಾ ಪ್ರಕಾರ ತಾನು ಉಂಬುವದಕ್ಕೆ ಬರುವದು ಮತ್ತು ಒಡ್ಡುಗಳಲ್ಲಿ ಬೇವಿನ ಬೀಜಗಳನ್ನು ಹಾಕಿದರೆ ಕೆಲವು ವರ್ಷಗಳಲ್ಲಿ ಗಿಡಗಳು ಬಲಿತು ದೊಡ್ಡ ಮರಗಳಾಗಿ ದ್ರವ್ಯೋತ್ಪತ್ತಿಗೆ ಕಾರಣವಾಗುವದು ಮತ್ತು ತನಗೆ ಬೇಕಾದ ಸಾಮಾನುಗಳನ್ನು ಮಾಡಿಕೊಂಬುವದಕ್ಕೂ ಮನೆಯ ಕಟ್ಟಿಕೊಂಬುವದಕ್ಕೂ ಕಟ್ಟಿಗೆಗಳಾಗುವವು

---

# ೪ ನೇ ಪ್ರಕರಣವು.

## ಗೊಬ್ಬರವನ್ನು ಹಾಕುವದು.

ಯಾವತ್ತು ಭೂಮಿಗಳಿಗೆ ಗೊಬ್ಬರವನ್ನು ಹಾಕುವದು ಬಹು ಪ್ರಯೋಜನವಾದದ್ದು. ಮನುಷ್ಯರುಗಳಿಗೆ ಕ್ಷೀರವೂ ಘೃತವೂ ಲವಣಾದಿಗಳೂ ಹ್ಯಾಗೆ ಪುಷ್ಟಿಕರವೋ ಹಾಗೆ ಭೂಮಿಗೆ ಗೊಬ್ಬರವು ಮುಖ್ಯ ಪುಷ್ಟಿಕರವಾಗಿರುವದು. ಭೂಮಿಗೆ ಗೊಬ್ಬರವನ್ನು ಹಾಕುವದರಿಂದ ಆಗತಕ್ಕಂಥ ಫಲವನ್ನೂ ಪ್ರಯೋಜನವನ್ನೂ ಎಷ್ಟು ವರ್ಣಿಸಿದರೂ ತೀರದು ಗೊಬ್ಬರವನ್ನು ಹಾಕುವದರಿಂದ ಕನಿಷ್ಠ ಪ್ರತಿಯಲ್ಲಿ ಕನಿಷ್ಠವೆಂದು ಹೇಳಿಸಿಕೊಳ್ಳುವ ಅನುಪಯೋಗವಾದ ಭೂಮಿಯಾದರೂ ಸಹ ಚನ್ನಾಗಿ ಫಲಿಸುತ್ತದೆ

ಉತ್ತಮ ಮಧ್ಯಮ ಕನಿಷ್ಠಪ್ರತಿಯು ಮೊದಲಾದ ಯಾವ ಪ್ರಕಾರದ ಕಪ್ಪು, ಕರಲು, ಕೆಂಪು, ಬಿಳುಪು, ಕಟಕ, ಕೆಂಪುಮುಸಾರಿ, ಕೇಸರಿ, ಬಳಿಯು, ಮಣ್ಣಿನ ಗರಸು, ಮಸಾರಿ ಹಿಟ್ಟಿಗರಸು, ಸುಣ್ಣದ ಹರಳುಳ್ಳ ಕನಿಷ್ಠ ಮೊರಡಿ, ಹಾಳು ಪೋಳಿ, ಸವಳು ಭೂಮಿ, ಜೌಗಿನ ಭೂಮಿ ಮೊದಲಾದ ಯಾವ ಪ್ರಕಾರದ ಭೂಮಿಗಳಿಗಾದರೂ ಮಡಿ, ಎರಿ, ಒಡ್ಡು ಮಾರಿ ತೋಟ ಪಟ್ಟಿ ಕರೆ ಬೆಂಚ ಮುಂತಾದ ಹಲವು ತರದ ಜಮೀನಗಳಿಗಾದರೂ ಗೊಬ್ಬರವೇ ಮುಖ್ಯ ಪ್ರಯೋಜನವು ಗೊಬ್ಬರವನ್ನು ಹಾಕದೆ ಇದ್ದರೆ ಎಂಥ ಉತ್ತಮ ಭೂಮಿಯಾದರೂ ಚನ್ನಾಗಿ ಬೆಳಯದು ಹಾಗೂ ಮನುಷ್ಯರುಗಳಿಗೆ ಘೃತವು, ಕುದುರೆಗಳಿಗೆ ಕಡಲೆಯು, ಪಶುಗಳಿಗೆ ಹುರಳಿಯು ಪುಷ್ಟಿಕರವಾಗಿದ್ದು ಅವುಗಳಿಗೆ ಹ್ಯಾಗೆ ತ್ರಾಣವನ್ನು ಉಂಟುಮಾಡುತ್ತವೆಯೋ ಹಾಗೆ ಗೊಬ್ಬರವು ಭೂಮಿಯಲ್ಲಿ ಕಲಿತರೆ ಅದರ ಸಾರವನ್ನು ಪುಷ್ಟೀಕರಿಸಿ ಭೂಮಿಗೆ ತ್ರಾಣವನ್ನು ಉಂಟುಮಾಡುತ್ತದೆ ಅದರಿಂದ ಅಂಥ ಭೂಮಿಯಲ್ಲಿ ಬಿತ್ತಿದ ಸಸಿಗಳು ತಾಯಿಯ ಮೊಲೆ ಹಾಲನ್ನು ಕುಡಿಯುವ ಕೂಸುಗಳು ದಿನದಿನಕ್ಕೆ ಕಳೆಯೇರಿ ಬೆಳೆಯುವ ಹಾಗೆ ಬೆಳೆಯುವವು ಹಾಲು ಕೊಡುವ ಸ್ತ್ರೀಯಳು ಪುಷ್ಟಿಯಾಗಿದ್ದರೆ ಕೂಸುಗಳು ಪುಷ್ಟಿಯಾಗಿರುವವು

ಸಕಲ ಧಾನ್ಯವನ್ನು ಬೆಳಿಸುವದಕ್ಕಾದರೂ ಸಮಸ್ತ ಪ್ರಕಾರದ ಫಲಪುಷ್ಪದ ಗಿಡಗಳಿಗಾದರೂ ಕುಸುಮಲತೆಗಳಿಗಾದರೂ ನೆಲ್ಲು ಮುಂತಾದ ಹುಲ್ಲುಧಾನ್ಯಾದಿಗಳಿಗಾದರೂ ಗೊಬ್ಬರವು ಅತ್ಯುತ್ತಮ ಸಾಧನವಾದದ್ದು. ಜೋಳ, ಕಡಲೆ, ತೊಗರಿ ಮೊದಲಾದ ದವ್ಸ ಧಾನ್ಯಗಳಿಗಾದರೂ ಗೊಬ್ಬರವಿಲ್ಲದೆ

ಉತ್ಕೃಷ್ಟ ಬೆಳೆಯಾಗದಾಗಿ ಸರ್ವದಾ ಯಾವತ್ತು ಕೃಷಿಕ ಜನರು ತಮ್ಮ ತಮ್ಮ ಭೂಮಿಗಳಿಗೆ ಗೊಬ್ಬರವನ್ನು ಹಾಕಿಕೊಳ್ಳಬೇಕು. ಫಲವೃಕ್ಷಗಳಿಗೂ ಪುಷ್ಪದ ಗಿಡಗಳಿಗೂ, ತೋಟದಲ್ಲಿ ಬೆಳೆಯುವ ಸರ್ವ ಪದಾರ್ಥಗಳಿಗೂ, ಹಳೆಯ ಗೊಬ್ಬರವನ್ನೇ ಹಾಕಬೇಕು ಏಕೆಂದರೆ ಮೂರು ವರ್ಷಕ್ಕಿಂತ ಹೆಚ್ಚು ಇದ್ದ ಕಳಿತ ಹಳೆಯ ಗೊಬ್ಬರವಾದರೆ ಅದರಿಂದ ಗಿಡಗಳು ಕೆಡದೆ ಚನ್ನಾಗಿ ಫಲಿಸುವವು. ಆದರೆ ಅದೇ ವರ್ಷ ಹಾಕಿದ ಹೊಸ ಗೊಬ್ಬರವನ್ನು ತೋಟ ಗಳಿಗೂ ಯಾವ ಪ್ರಕಾರದ ಗಿಡಮರಗಳಿಗೂ ಹಾಕಬಾರದು ಅದರಿಂದ ಗೊನ್ನೀಹುಳ ಮುಂತಾದ ಹುಳಗಳು ಹುಟ್ಟಿ ಗಿಡ ವೃಕ್ಷಲತೆ ಮೊದಲಾದ ವುಗಳ ಬೇರನ್ನು ಕಡಿದು ಕೆಡಿಸುತ್ತವೆ ಅದು ಕಾರಣ ಮೂರು ವರ್ಷದಾ ಚೆಯ ಹಳೆಯ ಗೊಬ್ಬರವನ್ನೇ ಹಾಕಬೇಕು. ಅದೇ ವರ್ಷದ ಗೊಬ್ಬರವನ್ನು ಗಿಡಗಳಿಗೆ ಹಾಕಬಾರದು. ಮತ್ತು ಕೆಂಪು ಮಣ್ಣುಳ್ಳ ಭೂಮಿಯಾದರೆ ಆ ಭೂಮಿಯಲ್ಲಿ ಗಿಡಗಳನ್ನು ಹಚ್ಚಬೇಕಾದರೆ ಹಾಳು ಮಣ್ಣಿನಂಥ ಹಳೆಯ ಗೊಬ್ಬರವನ್ನು ಹಾಕಬೇಕು ಮತ್ತು ಹಾಳು ಭೂಮಿ, ಮೊರಡಿ, ಗರಸು, ಉಸುಕು, ಸವಳು, ಕರಲು, ಎರಿ, ಕಟಕದ ಭೂಮಿ, ಮಾಂಜರಿ, ಕೇಸರಿ, ಮೊದಲಾದ ಸ್ಥಳಗಳಲ್ಲಿ ಗಿಡಗಳನ್ನು ಹಚ್ಚಬೇಕಾದರೆ ಕೆಂಪು ಮಣ್ಣನ್ನು ಹಾಕಿ ಗಿಡಗಳನ್ನು ಹಚ್ಚಬೇಕು ಗೊಬ್ಬರದಲ್ಲಿ ಎಳ್ಳುಗೊಗ್ಗಿಯ ಗೊಬ್ಬರವು ಎಲ್ಲದರಕಿಂತಲೂ ಬಹಳ ಉಪಯೋಗವೆಂದು ಕಂಡುಬರುತ್ತದೆ.

ಗೊಬ್ಬರವನ್ನು ಎರಿಯ ಹೊಲಗಳಿಗೂ ಮಂಡು ಭೂಮಿಗಳಿಗೂ ಉತ್ತಮ ಪ್ರಕಾರದ ಜಮೀನುಗಳಿಗೂ ಒಂದು ವರುಷ ಗೊಬ್ಬರವನ್ನು ಹಾಕಿದರೆ ನಾಲ್ಕು ವರ್ಷ ಅಥವಾ ಐದು ವರ್ಷದ ವರೆಗೂ ಅದರ ತ್ರಾಣವು ಇದ್ದು ಚನ್ನಾಗಿ ಬೆಳೆಯುತ್ತದೆ ಮಧ್ಯಮ ಪ್ರತಿಯ ಭೂಮಿಗಳಿಗೆ ಮರಡಿ ಗರಸು ಉಸುಕು ಭೂಮಿಗಳಿಗೆ ಗೊಬ್ಬರವನ್ನು ಹಾಕಿದರೆ ಮೂರು ವರುಷದ ವರೆಗೆ ಚನ್ನಾಗಿ ಬೆಳೆದು ಆ ಮೇಲೆ ಸ್ವಲ್ಪ ನಿಸ್ಸಾರವಾಗುವದು. ಅಂಥ ಹೊಲ ಗಳಿಗೆ ಪುನಃ ಗೊಬ್ಬರವನ್ನು ಹಾಕಬೇಕು 'ಹಾಕೋ ಗೊಬ್ಬರ ಬೆಳೆ ನೋಡೋ ಅಬ್ಬರ' ಎಂದು ಗಾದೆಯುಂಟು.

ಗೊಬ್ಬರವನ್ನು ಹಾಕಬೇಕಾದರೆ ಹೊಲಗಳಿಗೆ ನೇಗಿಲವನ್ನೂ ಮಡಿಕೆ ಯನ್ನೂ ಹೊಡೆಯುವಕಿಂತಲೂ ಮೊದಲೇ ಹಾಕಿ ಆ ಮೇಲೆ ಮಡಿಕೆಯ ನ್ನಾಗಲಿ, ನೇಗಿಲಿಯನ್ನಾಗಲಿ ಹೊಡೆಯಬೇಕು.

ಗೊಬ್ಬರವನ್ನು ಹಾಕಿದ ಮೇಲೆ ಹೊಲಗಳಿಗೆ ಸುತ್ತು ಒಡ್ಡನ್ನು ಹಾಕದೆ ಇದ್ದರೆ ಮಳೆಯಾದಾಗ ಆ ನೀರು ಹರಿದು ಹೋದಲ್ಲಿ ಗೊಬ್ಬರದ ಸಾರವೂ

ಭೂಮಿಯ ಸಾರವೂ ವ್ಯರ್ಥವಾಗಿ ಹೋಗುತ್ತವೆ. ಅದರಿಂದ ಸರ್ವರೂ ತಮ್ಮ ತಮ್ಮ ಹೊಲಗಳಿಗೆ ಸುತ್ತು ಒಡ್ಡುಗಳನ್ನು ಹಾಕಿಸಿ ಗೊಬ್ಬರವನ್ನು ಹಾಕಬೇಕು.

ಗೊಬ್ಬರವನ್ನು ಒಂದೇ ವರ್ಷದಲ್ಲಿ ಯಾವತ್ತು ಹೊಲವನ್ನು ತುಂಬಿಸುವದು ಆಗದ ಹಾಗೆ ಇದ್ದರೆ ಪ್ರತಿ ವರ್ಷಕ್ಕೆ ತನ್ನ ತನ್ನ ಕೈಲಾದ ಮಟ್ಟಿಗೂ ಹಾಕುತ್ತ ಹೋಗಬೇಕು ಅಲಕ್ಷ್ಯಮಾಡಿ ಗೊಬ್ಬರ ಹಾಕುವದನ್ನು ಬಿಟ್ಟು ಬಿಡಲಾಗದು. ವಿಶ್ವಪ್ರಯತ್ನದಿಂದ ಮಾರಲಿಕ್ಕೆ ತೆಗೆದುಕೊಂಡಾದರೂ ಗೊಬ್ಬರವನ್ನು ಹಾಕುತ್ತಿರಬೇಕು.

ಕೃಷಿಕರಾದ ಯಾವತ್ತರು ಗೊಬ್ಬರದ ನಿಮಿತ್ತವಾಗಿ ಊರ ಹೊರಗೆ ಗಾವಕೋಸಿನಲ್ಲಿ ಒಂದು ದೊಡ್ಡ ತಗ್ಗನ್ನು ತೆಗೆದು ಅದರಲ್ಲಿ ಬೂದಿ ಕಸ ಸದಿ ಹುಲ್ಲು ಸಗಣಿ ಹಳೇ ಕಣಿಕಿ ಕುಳಬಾಸದ ಸಣ್ಣ ಮಣ್ಣಿನಂಥ ಗೊಬ್ಬರ ಕಾಡಕುರುಳು ಕೋಯಿಲಿ ನಾನಾತರದ ಹುಸಿಯ ತೊಪ್ಪಲ ಸಹ ಆ ತಗ್ಗಿನಲ್ಲಿ ತಮ್ಮ ಕೈಯ್ಯಿಂದಾದಷ್ಟು ಹಾಕುತ್ತ ಮಳೆಗಾಲದಲ್ಲಿ ಮಳೆಯ ನೀರು ಆ ತಗ್ಗಿನಲ್ಲಿ ತುಂಬಿಕೊಂಡು ನಿಲ್ಲುವ ಹಾಗೆ ಮಾಡಿಬಿಟ್ಟರೆ ಅದೆಲ್ಲ ಕೊಳೆತು ಗೊಬ್ಬರವಾಗುತ್ತದ ಆ ಗೊಬ್ಬರ ಒಂದು ವರ್ಷದಲ್ಲಿ ಹೊಲಕ್ಕೆ ಹಾಕುವ ಗೊಬ್ಬರವಾಗುವದು. ಮತ್ತು ಮೂರು ವರ್ಷ ಬಿಟ್ಟರೆ ಚನ್ನಾಗಿ ಕಳಿತು ತೋಟಕ್ಕ ಹಾಕುವ ಗೊಬ್ಬರವಾಗುವದು

ಸಮೀಪದ ಹೊಲಗಳಿಗಾಗಲಿ ದೂರಿನ ಹೊಲಗಳಿಗಾಗಲಿ ಚಕ್ಕಡಿ ಭಂಡಿಗಳಿಂದ ಗೊಬ್ಬರವನ್ನು ಹಾಕುವದು ಸುಲಭವು ಮತ್ತು ಊರಿಗೆ ತೀರ ಸಮೀಪವಾದ ಹೊಲಗಳಿಗ ಗೊಬ್ಬರವನ್ನು ಹಾಕಬೇಕಾದರೆ ಎತ್ತು ಕೋಣಗಳಿಂದ ಹಾಕಿದರೂ ಬರುತ್ತದೆ ಒಂದು ವೇಳೆ ಹೊಲಗಳು ದೂರ ಇರುವದರಿಂದ ಗೊಬ್ಬರವನ್ನು ಹಾಕುವದು ತಪ್ಪಿಂದಾಗದ ಹಾಗೆ ಇವರೆ ಆ ಹೊಲದಲ್ಲಿ ತಗ್ಗು ಭೂಮಿಯಲ್ಲಿ ಒಂದು ದೊಡ್ಡ ತಗ್ಗನ್ನು ಕಡಿಸಿ ಆ ಹೊಲದ ಸದಿಯನ್ನು ಕಾಡ ಕುರುಳನ್ನು ಕೂಯಿಲಿಯನ್ನು ಹಳೆಯವಾಗಿ ಕೊಳೆತ ಕಣಿಕೆಯನ್ನು ಅಥವಾ ಮಣ್ಣು ಕೂಡಿದ ಹೊಟ್ಟನ್ನು ಮತ್ತು ಆ ಹೊಲದ ಸಮೀಪದ ಬೈಲು ವನದಲ್ಲದ್ದ ಯಾವ ಗಿಡದ ತೊಪ್ಪಲನ್ನಾದರೂ ಹಾಗು ಮಾವಿನ ತೋಪು ಮೊದಲಾದ ಮರಗಳ ಕೆಳಗೆ ಉದುರಿ ಬಿದ್ದ ಒಣ ತೊಪ್ಪಲನ್ನು ಮತ್ತು ಕಾಡುಗಿಡಗಳಲ್ಲಿ ಯಾವ ತೊಪ್ಪಲನ್ನಾದರೂ ಕೊಯಿಸಿ ಕೊಯಿಸಿ ಆ ತಗ್ಗಿಗೆ ಹಾಕಿಸಿ ಮೇಲೆ ಸ್ವಲ್ಪ ಮಣ್ಣು ಹಾಕಿ ಆ ತಗ್ಗಿನಲ್ಲಿ ನೀರು ನಿಲ್ಲುವ ಹಾಗೆ ಮಾಡಿಬಿಟ್ಟರೆ ಅವಲ್ಲ ಕೊಳೆತು ಗೊಬ್ಬರವಾಗುವವು.

ಗೊಬ್ಬರದ ಹಾಗೆ ಹೊಲಕ್ಕೆ ತ್ರಾಣವು ಸಾರವು ಮತ್ತು ಉತ್ಪನ್ನವು ಆಗುವ ಹಾಗೆ ಇನ್ನೊಂದು ಸುಲಭವಾದ ಯುಕ್ತಿಯುಂಟು. ಅದೇನಂದರೆ

ಆ ಗೊಬ್ಬರವನ್ನು ಹಾಕುವದಕ್ಕೆ ಅಸಾಧ್ಯವಾದ ಮೇಲು ಅಡವಿಯು ಊರಿಗೆ ಬಹಳ ದೂರದಲ್ಲಿ ಇದ್ದರೆ ಅಂಥ ಹೊಲಗಳಲ್ಲಿ ರೋಹಿಣಿ ಮೃಗಶಿರ ಪ್ರವೇಶ ಕಾಲದಲ್ಲಿ ಹಸಿಯಾದರ ಆ ಸಮಯದಲ್ಲಿ ತೈಲ ಧಾನ್ಯಗಳನ್ನು ಬಿತ್ತಬೇಕು. ತೈಲ ಧಾನ್ಯಗಳೆಂದರೆ ಎಳ್ಳು, ಬಿಳೀ ಎಳ್ಳು, ಎರಡು ತಿಂಗಳದ ಎಳ್ಳು, ಕೆಂಪು ಎಳ್ಳು, ಕಾರೆಳ್ಳು ಅಂದರ ಗೂರಳ್ಳು ಇವುಗಳನ್ನು ಬಿತ್ತಬೇಕು ಅವುಗಳ ಬೆಳೆಯು ಎರಡು ತಿಂಗಳು ಮೂರು ತಿಂಗಳದೊಳಗೆ ಬಂದು ಉತ್ಕೃಷ್ಟವಾಗಿ ತಿಲಧಾನ್ಯಗಳಾಗುವವು. ಆ ಮೇಲೆ ಆ ಬೆಳೆಯನ್ನು ತೆಗೆದುಕೊಂಡು ತದನಂತರ ಹೊಲವನ್ನು ಹರಗಿ ಕಡಲಿಯನ್ನು ಬಿತ್ತಬೇಕು ಮತ್ತು ಆ ತೈಲ ಧಾನ್ಯದ ಕಟ್ಟಿಗೆಗಳನ್ನು ಹೊಲದಲ್ಲಿ ಗೊಬ್ಬರದ ನಿಮಿತ್ಯವಾಗಿ ಮಾಡಿದ ತಗ್ಗಿನಲ್ಲಿ ಹಾಕಿ ಕಾಡ ಕುರುಳು. ಹುಲ್ಲು, ಸದಿ, ಕೊಯಿಲು, ನಾನಾ ತರದ ಬಯಲು ವನದ ಕಾಡ ತೊಪ್ಪಲು, ಇವುಗಳನ್ನು ಅಲ್ಲಿ ತುಂಬಿ ಮೇಲೆ ಸ್ವಲ್ಪ ಮಣ್ಣು ಹಾಕಿ ನೀರು ನಿಲ್ಲುವ ಹಾಗೆ ಮಾಡಿ ಬಿಡಬೇಕು ಅದೆಲ್ಲ ಕೊಳೆತು ಗೊಬ್ಬರವಾಗುವದು. ಅದು ಅತ್ಯುತ್ಕೃಷ್ಟವಾದ ಗೊಬ್ಬರವಾಗುವದು ಮತ್ತು ಆ ಹೊಲಕ್ಕೆ ಕಡಲಿಯನ್ನು ಬಿತ್ತಿದರೆ ಆ ಬೆಳೆಯು ಸರ್ವೋತ್ಕೃಷ್ಟವಾಗಿ ಪ್ರಾಪ್ತಿಸುವದು. ಆದರೆ ತೈಲ ಧಾನ್ಯದ ಕಾಲಿಗೆ ಕಡಲಿಯ ಕಾಲಿಗ ಈ ಎರಡೂ ಕೂಡಿ ಮುಂದಿನ ವರ್ಷಕ್ಕೆ ಗೊಬ್ಬರದ ಹಾಗೆ ತ್ರಾಣವಾಗುವದು ಮತ್ತು ಆ ತಗ್ಗಿನೊಳಗಿನ ಗೊಬ್ಬರವನ್ನು ಹೊಲಕ್ಕ ಹಾಕಿದರ ನಾಲ್ಕು ಐದು ವರುಷದ ವರೆಗೂ ಯಥೇಷ್ಟವಾಗಿ ಬೆಳೆಯಾಗುವದು. ಅದಲ್ಲದೆ ದೂರವಾದ ಎರಿಗಳಿಗೆ ನಾಲ್ಕು ವರುಷಕ್ಕೊಮ್ಮೆ ಮುಂಗಾರಿಯ ಕಾಲದಲ್ಲಿ ಹಿರೇ ಸಣಬು ಹಾಕುವದು. ಅದರ ತೊಪ್ಪಲು ಉದುರಿ ಗೊಬ್ಬರದ ಕಾವಿನಂತೆ ಆಗಿ ವಿಶೇಷ ಬೆಳೆಯು ಆಗುವದು ಕರಿಕೆಯ ಹೊಲಕ್ಕೆ ಸಣಬು ಬಿತ್ತಿದರ ಕರಿಕೆಯು ಅಳಿದು ಹೋಗುವದು ಗೊಬ್ಬರದ ವಿಷಯವಾಗಿ ಒಂದು ಸಣ್ಣ ಇತಿಹಾಸವನ್ನು ಹೇಳುತ್ತೇನೆ.

ಒಂದಾನೊಂದು ಗ್ರಾಮದಲ್ಲಿ ಒಬ್ಬ ಕೃಷಿಕನು ದೇವರನ್ನು ಕುರಿತು ಪ್ರಾರ್ಥನೆಯನ್ನು ಮಾಡುತ್ತ ಬೊಗಸೆಯನ್ನು ಒಡ್ಡಿರಲು ದೇವರು ಪ್ರಸನ್ನನಾಗಿ ಅವನ ಬೊಗಸೆಯಲ್ಲಿ ಅಮೃತವ ನೀಡಲು ಇದನ್ನೇನು ಮಾಡಬೇಕೆಂದು ದೇವರನ್ನು ಕೇಳಿದನು ಆಗಲಾ ದೇವರು ಹೇಳಿದ್ದೇನೆಂದರೆ ಇದು ಅಮೃತವು, ಇದನ್ನು ನಿನ್ನ ಹೊಲಕ್ಕೆ ಒಯ್ದು ಹಾಕಿದರ ಆ ಹೊಲವು ಅತ್ಯುತ್ತಮವಾದ ಸಕಲ ಧಾನ್ಯಾದಿಗಳನ್ನು ಬೆಳೆಯುತ್ತದೆಂದು ಹೇಳಲು ಆ ಗೃಹಸ್ಥನು ತಪ್ಪು ಹೆಜ್ಜೆಯನ್ನಿಡುತ್ತ ಹೊಲಕ್ಕೆ ಹೋಗಬೇಕೆಂದು ಬೊಗಸೆಯಲ್ಲಿ ಅಮೃತವನ್ನು ಹಿಡಿದುಕೊಂಡು ಹೋಗುವದರಲ್ಲಿ ತಿಪ್ಪೆಯಲ್ಲಿ ಎಡವಿ ಬಿದ್ದು ಆ ಅಮೃತವು ಚಲ್ಲಿ ಹೋಯಿತು. ಆಗಲಾ ಕೃಷಿಕನು ಚಿಂತಾತು

ರನಾಗಿ ಪುನಃ ದೇವರನ್ನು ಪ್ರಾರ್ಥಿಸುತ್ತಿರಲು ಪ್ರತ್ಯಕ್ಷನಾಗಿ ಯಾಕೆ ಪ್ರಲಾಪಿಸುವಿ ಎಂದು ಕೇಳಿದನು. ಅದಕ್ಕೆ ಆ ಕೃಷಿಕನು ಅಂದದ್ದು, ಹೇ ದೇವರೇ ನೀನು ಕೊಟ್ಟ ಅನ್ನ ತಪ್ಪು ತಿಪ್ಪೆಯಲ್ಲಿ ಬಿತ್ತು ಎಂದು ಹೇಳಲಾಗಿ, ದೇವರು ಆ ತಿಪ್ಪೆಯನ್ನೆಲ್ಲಾ ಒಯ್ದು ಹೊಲಕ್ಕೆ ಹಾಕು, ಯಾವನು ತಿಪ್ಪೆಯಲ್ಲಿರುವ ಗೊಬ್ಬರವನ್ನು ಹೊಲಕ್ಕೆ ಹಾಕುವನೋ ಅವನ ಹೊಲವು ಯಾವ ಬೀಜವನ್ನು ಬಿತ್ತಿದಾಗ್ಯಾದರೂ ಚನ್ನಾಗಿ ಬೆಳೆಯಾಗುವದೆಂದು ಹೇಳಿ ಬಯಲಾದನು.

ಈ ಇತಿಹಾಸದ ತಾತ್ಪರ್ಯವು, ಕೃಷಿಕರು ಸರ್ವಕಾಲದಲ್ಲಿ ನಿತ್ಯನಿತ್ಯ ಗೊಬ್ಬರವನ್ನು ಕೂಡಿಸುತ್ತ ಹೋಗಿ ವರ್ಷ ವರ್ಷಕ್ಕೆ ಹೊಲಗಳಿಗೂ, ತೋಟಗಳಿಗೂ, ಗದ್ದೆಗಳಿಗೂ, ನೆಲ್ಲು ಹೊಲಗಳಿಗೂ ಹಾಕುತ್ತ ಹೋಗಬೇಕು.

ಈ ಪ್ರಕರಣದ ಮುಖ್ಯ ತಾತ್ಪರ್ಯವು, ಹಲವು ಪ್ರಯತ್ನದಿಂದ ಸರ್ವರೂ ಗೊಬ್ಬರವನ್ನು ಕೂಡಿಸಿ ತಮ್ಮ ಹೊಲಗಳಿಗೂ ತೋಟಗಳಿಗೂ ಕೆರೆ ಕೊರೆಗಳಿಗೂ ಬಂಚಿಗಳಿಗಯೂ ಮಡಿಯ ಹೊಲಗಳಿಗೂ ಎರಿಯ ಹೊಲಗಳಿಗೂ ಹಾಕಬೇಕು ಅಂದರೆ ಕೆಲವು ಕಲವು ಸ್ಥಳಗಳಲ್ಲಿ ಬಹು ಕಠಿಣತರವಾದ ಬಲಿತ ಎರಿಯ ಭೂಮಿಗಳಾದ ಡೋಣೀಸಾಲಿನಲ್ಲಿ ಮತ್ತು ಬೆಳುವಲು ದೇಶದ ಕೆಲವು ಎರಿಗಳಿದ್ದಲ್ಲಿ ಬೆಳೆಗಳು ಚನ್ನಾಗಿ ಬೆಳೆಯುತ್ತ ಇರುವದರಿಂದ ಅವರು ಅನ್ನುವದೇನಂದರೆ ನಮ್ಮ ಹೊಲಗಳಿಗೆ ಗೊಬ್ಬರದ ಪ್ರಯೋಜನವಿಲ್ಲ, ಗೊಬ್ಬರವನ್ನು ಹಾಕಿದರೆ ಬೆಳೆಯುವದಿಲ್ಲವೆಂದು ಹೇಳುತ್ತಾರೆ ಆದರ ಈ ಜನಂಗೆ ಹೇಳುವದೇನಂದರೆ ತಮ್ಮ ತಮ್ಮ ಹೊಲಗಳಲ್ಲಿ ಬಣಿವೆ ಒಟ್ಟಿದಲ್ಲಿ ಕಣದ ಸ್ಥಳದಲ್ಲಿ ಆ ಹೊಲದ ಬೆಳೆಯು ಹ್ಯಾಗೆ ಇರುತ್ತದೆ ಇದನ್ನು ನೋಡಿದರೆ ಆ ಒಣಿವೆಯು ಒಟ್ಟಿದಲ್ಲಿ ಬಿದ್ದಿರುವ ಕಸ ಮೊದಲಾದ ಪದಾರ್ಥಗಳು ಕೊಳೆತು ಗೊಬ್ಬರವಾಗಿರುವದು, ಅದರಿಂದ ಆ ಬಣಿವೆಯ ಸ್ಥಳದಲ್ಲಿಯು ಬೆಳೆಯು ಉತ್ಕೃಷ್ಟವಾಗಿರುವದು ಮತ್ತು ಕಣವನ್ನು ಮಾಡಿದ ಸ್ಥಳದಲ್ಲಿ ತಗ್ಗು ಇದ್ದು ನೀರು ನಿಂತು ತಂಪು ಹಿಡಿದಿರುವದರಿಂದ ಹಾಗು ಅದರಲ್ಲಿ ರವದಿ ಹೊಟ್ಟು ಮೊದಲಾದ ವಿಶೇಷ ಗೊಬ್ಬರವು ಕಲಿತದ್ದರಿಂದ ಎಲ್ಲದಕ್ಕಿಂತಲೂ ಉತ್ಕೃಷ್ಟ ಬೆಳೆಯಾಗಿರುವದನ್ನು ಪ್ರತ್ಯಕ್ಷವಾಗಿ ವರ್ಷ ವರ್ಷ ನೋಡಿ ಮನಗಾಣಬಹುದು.

ಮುಂಗಾರಿಯ ಕಾಲವು ಬರುವದರೊಳಗೆ ಮಡಿಕೆಯನ್ನಾಗಲಿ ನೇಗಿಲೆಯನ್ನಾಗಲಿ ಹೊಡೆದ ಹೊಲಗಳಲ್ಲಿ ಕುರಿಗಳನ್ನು ತರುಬಿದರೆ ಗೊಬ್ಬರಕ್ಕಿಂತಲೂ ಕಸುವು ವಿಶೇಷವಾಗುವದು ಬೇಸಿಗೆಯ ಕಾಲದಲ್ಲಿ ಹೊಲಗಳಿಗೆ ಮಡಿಕೆ ಅಥವಾ ನೇಗಿಲೆಯನ್ನು ಹೊಡೆದು ಆ ಮೇಲೆ ಕುರಿಯ ಹಿಂಡುಗಳನ್ನು ತರುಬಿಸಿದರೆ ಅವುಗಳು ಅಗಲವಾಗಿ ಹರಿಬಿದ್ದು ಹೊಲದಲ್ಲಿ ಮಲಗಿ ಹೊಲದ ತುಂಬ ಮೂತ್ರಿಸಿ ಹಿಕ್ಕೆಯನ್ನು ಹಾಕುತ್ತವೆ. ಅವುಗಳ ಮೂತ್ರದ

ಕಾವಿಸಿಂದ ಹಾಗು ಕುರಿಯ ಗೊಬ್ಬರದಿಂದ ಗೊಬ್ಬರದಕಿಂತಲೂ ವಿಶೇಷವಾಗಿ ಶ್ರಾಣವಾಗುವದು.

ಗೊಬ್ಬರದಲ್ಲಿ ನೆಲ್ಲಿಯ ತೊಪ್ಪಲದ ಗೊಬ್ಬರವು ಯಾಲಕ್ಕಿಯ ಗಿಡಗಳಿಗೆ ಬಹು ಉಪಯೋಗವು. ಮತ್ತು ತೋಟದಲ್ಲಿ ಬೆಳೆಯುವ ಯಾವತ್ತು ಫಲವೃಕ್ಷಗಳಿಗೆ ಅತ್ಯಂತ ಪ್ರಯೋಜನವು. ಪುಷ್ಪದ ಗಿಡಗಳಿಗಾದರೂ ನೆಲ್ಲಿಯ ತೊಪ್ಪಲದ ಗೊಬ್ಬರವು ಬಹಳ ಉಪಯೋಗವು. ಮತ್ತು ಚಿಪ್ಪಲತೊಪ್ಪಲ ನಿರಸಲತೊಪ್ಪಲ, ಹುಲಗಲಿ ತೊಪ್ಪಲ, ಹೊನ್ನಾವರಿ ತೊಪ್ಪಲ, ಮುಂತಾದ ಬಯಲು ವನದಲ್ಲಿದ್ದ ಕಾಡ ತೊಪ್ಪಲುಗಳನ್ನು ತಗ್ಗಿಗೆ ಹಾಕಿ ನೀರು ಬಿಟ್ಟು ಕೊಳಿಸಿ ಕಳಿತ ಗೊಬ್ಬರವನ್ನು ಮಾಡಿದರೆ ತೋಟಗಳಿಗೂ ನೆಲ್ಲು ಹೊಲಗಳಗೂ ಎರಿ ಮಡಿ ಮಸಾರಿ ಕೇಸರಿ ಕರಲು ಸೌಳು ಮೊದಲಾದ ಹೊಲಗಳಿಗಾದರೂ ಉಪಯೋಗವಾಗುವದು ಮತ್ತು ನೀರಿನ ಜೌಗು ಹಿಡಿಯುವಂಥ ಹೊಲಗಳಿಗೆ ವರ್ಷ ವರ್ಷಕ್ಕೆ ಗೊಬ್ಬರವನ್ನು ಹಾಕುತ್ತ ಹೋಗಬೇಕು

# ೫ ನೇ ಪ್ರಕರಣವು.

## ಹೊಲಗಳನ್ನು ಹೂಡಿ ಹರಗುವದು.

ಭೂ ನಿರ್ಮಾಣಕಾಲದಿಂದ ಇವೊತ್ತಿನ ವರೆಗೂ ಕೃಷಿಕರಾದ ಯಾವತ್ತು ಜನರು ಹೊಲಗಳ ವ್ಯವಸಾಯದಲ್ಲಿ ನೇಗಲಿಯನ್ನು ಹೂಡೆದು ಹರಗಿ ಬಿತ್ತುತ್ತಾರೆ ಆದರ ಭೂಮಿಯನ್ನು ಪರೀಕ್ಷಿಸಿ ಅದಕ್ಕೆ ತಕ್ಕ ಹಾಗೆ ಕಷ್ಟ ಮಾಡುವ ಯುಕ್ತಿ ಇಲ್ಲವ ಬೆಳೆಯನ್ನು ಕಡಿಸಿಕೊಳ್ಳುತ್ತಾರೆ ಅಂದರೆ ಎರೆಯ ಭೂಮಿ, ಮಡಿಯ ಭೂಮಿ, ಮಂಡು ಭೂಮಿ ಇಂಥ ಭೂಮಿಗಳಿಗ ಇಲ್ಲಿ ಹೇಳಿದಂತೆ ಸಕಲ ಯುಕ್ತಿಗಳನ್ನು ತಿಳಿದು ಹದದ ಮೇಲೆ ಕಷ್ಟಮಾಡುತ್ತ ಹೋದರೆ ಪ್ರತಿವರ್ಷ ಕೂರಿಗೆಗೆ ಮೂವತ್ತು ಹೇರಿನಂತೆ ತಪ್ಪದೆ ಬೆಳೆಯುವದು. ಕೇಸರಿ ಅಥವಾ ಸ್ವಲ್ಪ ಕಪ್ಪು ಭೂಮಿಯಾಗಿದ್ದರ ಇಂಥ ಹೊಲಗಳಲ್ಲಿ ಪ್ರತಿ ಕೂರಿಗೆಗೆ ಇಪ್ಪತ್ತು ಇಪ್ಪತ್ತೈದು ಹೇರಿನಂತ ಬೆಳೆಯುವದಕ್ಕೆ ಸಂಶಯವಿಲ್ಲ ಮತ್ತು ಮೊರಡಿ, ಮಸಾರಿ, ಉಸುಕು, ಹಾಳು, ಸೌಳು, ಕರಲು, ಗರಸು ಮುಂತಾದ ಕನಿಷ್ಟ ಭೂಮಿಗಳಿಗಾದರೂ ಮೂರು ವರ್ಷಕ್ಕೊಮ್ಮೆ ಗೊಬ್ಬರವನ್ನು ಹಾಕುತ್ತ ಪ್ರತಿವರ್ಷ ಮಡಿಕೆಯನ್ನು ಹೊಡೆದು ಹದದ ಮೇಲೆ ಮೂರು ನಾಲ್ಕು ಸಾಲು ಹರಗುತ್ತ ಚನ್ನಾಗಿ ಹಸಿಯು ನೋಡಿ ಹಾಗು ಹದದ ಕಾಲ ನೋಡಿ ಬಿತ್ತಿದ ಮೇಲೆ ಮೂರು ಸಾಲು ಎಡೆಯ ಹೊಡೆದು ಎರಡು ವೇಳೆ ಸದಿಯ ತೆಗಿಸಿದರೆ ಪ್ರತಿ ಕೂರಿಗಿಗೆ ಹದಿನೈದು ಇಪ್ಪತ್ತು ಹೇರು ಬೆಳೆಯಬಹುದು. ಅಥವಾ ತೀರ ಕನಿಷ್ಠ ಪಕ್ಷದಲ್ಲಿ ಕೂರಿಗೆಗೆ ಹತ್ತು ಹೇರಿನಂತೆ ಬೆಳೆಯುವದಕ್ಕೆ ಏನೂ ಸಂಶಯವಿಲ್ಲ ಅಜಮಾಸು ನಾಲ್ಕು ಎಕರ ಭೂಮಿಗೆ ಒಂದು ಕೂರಿಗ ಭೂಮಿಯಾಗುವದು ಮತ್ತು ಐದು ಬಿಗೆ ಭೂಮಿಗೂ ಕೂರಿಗೆ ಅನ್ನುವರು

ಕೃಷಿಕರಲ್ಲಿ ಸರ್ವ ಜನರು ಯುಕ್ತಿ ಇಲ್ಲದೆ ತ್ರಾಣವಿಲ್ಲದ ಎತ್ತುಗಳಿಂದ ವರ್ಷ ವರ್ಷಕ್ಕೊ ಒಂದು ಸಾಲು ಹರಗಿದರೆ ಹರಗುತ್ತಾರೆ ಇಲ್ಲವಾದರೆ ಹಸಿಯಾದಾಗಲೆ ಹಾಗೇ ಬಿತ್ತಿದರೂ ಬಿತ್ತುತ್ತಾರೆ ಇದಲ್ಲದ ಅನೇಕ ಹೊಲಗಳು ನೂರಾರು ವರ್ಷದಿಂದ ಗೊಬ್ಬರವನ್ನು ಕಾಣದೆ ಇರುವವು ಮತ್ತು ಬೇಸಿಗೆಯಲ್ಲಿ ಭೂಮಿ ಕಾಯ್ದು ಮಳೆಯಾದಾಗಲೇ ಆ ಭೂಮಿಯು ಕಾದ ಮಣ್ಣಿನ ಸಾರವು ಹೊಲದಲ್ಲಿ ಇಮರಿಕೊಂಡರೆ ಆ ಭೂಮಿಯು ಅತಿ ಉತ್ತಮ ಹದಕ್ಕೆ ಬರುವದು ಆ ನೀರು ಹೊಲದಲ್ಲಿ ನಿಲ್ಲುವ ಹಾಗೆ ಒಡ್ಡು ಹಾಕಿಸಿದ ಕಾರಣ ಮೊದಲು ಕಾವಿನ ನೀರು ಹರಿದು ಹೋದರೆ ಆ ಭೂಮಿಯು ರುಚಿಯು

ಹೋಗಿ ಬೆಳೆಗೆ ಉತ್ತೇಜನ ಕೊಡಲಾರದು ಮತ್ತು ಪ್ರತಿ ವರ್ಷಕ್ಕೊ ಮಡಿಕೆಯು ಹೊಡೆದರೆ ಮೇಲಿನ ನಿಸ್ಸಾರವಾದ ಮಣ್ಣು ಕೆಳಗಾಗಿ ಭೂಮಿಯಲ್ಲಿ ರಸವತ್ತಾದ ಕೆಳಗಿನ ಮಣ್ಣು ಮೇಲೆ ಬಂದರೆ ಅದೊಂದು ಪರಿಯಲ್ಲಿ ಬೆಳೆಗೆ ಉತ್ತಮ ಸಾಧನವು, ಇದನ್ನು ತಿಳಿಯದೆ ಕೇದ್ರಿಯಾಗಿ ಹಸನಾದ ಹೊಲಕ್ಕೆ ಮಡಿಕೆಯು ಹೊಡಿಯುವದೇತಕ್ಕೆ ದುಬಾರಿ ಕೆಲಸವೆಂದು ವೈಗಳ್ಳತನದಿಂದ ಹಾಗೆ ಹರಿಗಿ ಬಿತ್ತುವದರಿಂದ ಪ್ರತಿ ಕೂರಿಗೆಗೆ ಒಂದು ಹೇರು ಎರಡು ಹೇರಿನಂತೆ ಬೆಳೆದರೆ ಅಷ್ಟಕ್ಕೆ ಸಂತುಷ್ಟರಾಗುತ್ತಾರೆ ಆದರೆ ಅದರೊಳಗ ಸ್ವಲ್ಪ ಉತ್ತಮ ಭೂಮಿಯಾದರೆ ಕೂರಿಗಗೆ ಮೂರು ಹೇರು ನಾಲ್ಕು ಹೇರಿನಂತೆ ಬೆಳೆದರೆ ಬಹು ಬೆಳೆ ಎಂದು ಸಂತೋಷಿಸತ್ತಾರ ಆದರಲ್ಲಿ ಉತ್ತಮ ಎರಿ ಅಥವಾ ವಂಡು ಭೂಮಿ ಮತ್ತ ಮಡಿಕಟ್ಟ ಭೂಮಿಯಾಗಿ ಕಾಲಿಗಿ ಸಾಮರ್ಥ್ಯದಿಂದ ಹತ್ತು ಹನ್ನೆರಡು ಹೇರಿನಂತೆ ಬೆಳೆದರೆ ಮೀರಿದ ಬೆಳೆ ಎಂದು ಹಿಗ್ಗುತ್ತಾರ

ಕೃಷಿಕರಾದ ರೈತ ಜನರಿಗೆ ಅತಿ ಉತ್ಪನ್ನವಾಗುವಂಥ ಪರೋಪಕಾರವಾದ ಬಹು ಯುಕ್ತಿಗಳನ್ನು ಈ ಹೊಸ ಗ್ರಂಥದಲ್ಲಿ ಲೋಕೋಪಕಾರವಾಗಿ ಬರದಿರುವೆನು ಹೇಗಂದರೆ ತೀರ ಕನಿಷ್ಠ ಭೂಮಿಗೆ ಪ್ರತಿ ಕೂರಿಗೆಗೆ ಹತ್ತು ಹೇರಿನಂತ ಮಧ್ಯಮ ತರದ ಭೂಮಿಗಳಲ್ಲಿ ಪ್ರತಿ ಕೂರಿಗೆಗೆ ಹದಿನೈದು ಇಪ್ಪತ್ತು ಹೇರಿನಂತ ಉತ್ತಮ ಭೂಮಿಯಾದ ಚರೋ ಎರಿ ಮಡಿ ವಂಡು ಮೊದಲಾದ ಭೂಮಿಗಳಿಗೆ ಪ್ರತಿ ಕೂರಿಗಗ ಮೂವತ್ತು ನಾಲ್ವತ್ತು ಹೇರು ಧಾನ್ಯವು ತಪ್ಪದೇ ಬೆಳೆಯುವಂಥ ಉಪಾಯಗಳನ್ನು ಹಾಗು ಯುಕ್ತಿಗಳನ್ನು ಈ ಗ್ರಂಥದಲ್ಲಿ ತಿಳಿಸುತ್ತೇನೆ ಅವು ಹೇಗೆಂದರ—

ಕೃಷಿಕರಾದವರು ತಮ್ಮ ಸ್ವಾಧೀನದಲ್ಲಿದ್ದ ಹೊಲಗಳನ್ನು ಮೊದಲು ಹೇಳಿದಂತ ಒಡ್ಡು ಮೊರಿಗಳಿಂದ ತಿದ್ದುಕೊಂಡು ಹೊಲವನ್ನು ಸಮತಳ ಮಾಡಿ ನಟ್ಟು ಮುಂತಾದ ಮಲಿನಗಳಿಲ್ಲದಂತ ಕಿದ್ರಿ ಮಾಡಿಕೊಂಡು ಗೊಬ್ಬರವನ್ನು ಹಾಕಿಕೊಂಡು ಭೂಮಿಯನ್ನು ನಿರ್ಮಲ ಮಾಡಿಕೊಳ್ಳಬೇಕು ಮತ್ತು ಈ ಪ್ರಕರಣದ ಮುಖ್ಯ ತಾತ್ಪರ್ಯವು ಏನಂದರ ಮಳಯಾದಾಗಲೆ ಮಳೆಯ ನೀರು ಯಾವ ಪ್ರಕಾರದ ಹೊಲವಾದರೂ ಹೊಲದ ತುಂಬಾ ಗೇಣು ಚೋಟು ನೀರಾದರೂ ನಿಂತು ಹೋಗುವ ಹಾಗೆ ಮಾಡಿಕೊಳ್ಳುವದೇ ಕೃಷಿಕ ಜನರ ಜಾಣತನವು ಈ ರೀತಿಯಿಂದ ಹೊಲವನ್ನು ತಿದ್ದಿಕೊಂಬ ವುದೇ ಮುಖ್ಯ ಪ್ರಯೋಜನವು

ಈ ಪ್ರಕಾರ ಕಿದ್ರಿ ಆಗಿ ತಿದ್ದಿಕೊಂಡ ಹೊಲವಾದರೂ ಪ್ರತಿವರ್ಷಕ್ಕೊ ಮಾಡತಕ್ಕ ಮೆಹನತನ್ನು ಮಾಡುವದನ್ನು ಬಿಡಲಾಗದು. ಹೇಗಂದರೆ ಕನಿಷ್ಠ

ಭೂಮಿಗಳಿಗೆ ಮೂರು ವರ್ಷಕ್ಕೊಮ್ಮೆ, ಮಧ್ಯಮ ಭೂಮಿಗಳಿಗೆ ನಾಲ್ಕು ವರ್ಷಕ್ಕೊಮ್ಮೆ, ಉತ್ತಮ ಭೂಮಿಗಳಿಗೆ ಐದು ವರ್ಷಕ್ಕೊಮ್ಮೆ ಚನ್ನಾಗಿ ಗೊಬ್ಬರವನ್ನು ಹಾಕಿಕೊಳ್ಳುತ್ತ ಹೋಗಬೇಕು ಮತ್ತು ಪ್ರತಿವರ್ಷಕ್ಕೂ ಒಂದು ಸಾಲು ಅಥವಾ ಎರಡು ಸಾಲು ಮಡಿಕೆ ಹೊಡೆಯಬೇಕು. ಅದರಲ್ಲಿ ಬೇಸಿಗೆಯಲ್ಲಿ ಮಡಿಕೆಯು ಹೊಡೆದು ಹದಗುವ ಭೂಮಿಯು ಸಣ್ಣ ಎರೆ ಎಂದರೆ ಬಹಳವಾಗಿ ಬೀಡಿ ಸಳೆಯುದಂಥ ತಂಪು ಎರೆಗಳು, ಮತ್ತು ಕೇಸರಿ ಕಲ್ಲ, ಮಡಿಕಟ್ಟು, ಮಂಮುಭೂಮಿ, ಗರಸ ಭೂಮಿ, ಮರಡಿಯ ಪೈಕಿ ಮೃದುವಾದ ಭೂಮಿ, ಕಲ್ಲು ಭೂಮಿಗಳಲ್ಲಿ ಗುಣಿಗಲ್ಲು ಭೂಮಿ ಮೊದಲಾದ ಸ್ವಲ್ಪ ಮೃದುವಾದ ಭೂಮಿಗಳನ್ನು ಪರೀಕ್ಷಿಸಿ ಬೇಸಿಗೆಯಲ್ಲಿ ಎರಡು ಎತ್ತಿನ ಮಡಿಕೆಯು ಹೊಡೆದು ಆ ಹೆಂಟೆಗಳು ಸ್ವಲ್ಪ ಬಿಸಿಲು ತಾಕಿ ಒಡೆಯುವದಕ್ಕೆ ಬಂದಾಗ ಮೂರು ಸಾಲು ಬೇಸಿಗೆಯ ಹರತಿಯನ್ನು ಕಾಳಜಿಯ ಮೇಲೆ ಚನ್ನಾಗಿ ಹರಗಿ ಹೋದಲ್ಲಿ ಕೂಳೆ, ಕಸ, ರವದಿ ಮೊದಲಾದ ಮಲಿನಗಳು ಇಲ್ಲದ ಹಾಗೆ ಹಟ್ಟಿ ಹೊಡೆದು ಆರಿಸಿ ಕಡೆಯಲ್ಲಿ ಗೊಬ್ಬರದ ಸಿವಿತ್ತ್ಯವಾಗಿ ಮಾಡಿದ ತಗ್ಗಿಗೆ ಹಾಕಿಸಿ ಮಳೆಯು ಬರುವದರೊಳಗೆ ಸಿದ್ಧಮಾಡಿ ಇಟ್ಟಿರಬೇಕು ಮತ್ತು ಬಹಳ ಬೀಡಿ ಸೆಳೆಯುವಂಥ ಬಲಾತ್ಕಾರವಾದ ಎರೆಯ ಭೂಮಿಗಳಿಗೂ ಇದಲ್ಲದ ಉಸುಕು ಮಿಶ್ರವಾದ ಗಟ್ಟಿ ಕಲ್ಲ ಉಸುಕು ಮಿಶ್ರವಾದ ಹಾಳು ಹಾಗು ಉಸುಕು ಮಿಶ್ರವಾದ ಕೆಂಪು ಮಸಾರಿ ಮತ್ತು ಉಸುಕು ಭೂಮಿ ಇವುಗಳು ಬಿರುಸಾಗಿರುವದರಿಂದ ಬೇಸಿಗೆಯಲ್ಲಿ ಮಡಿಕೆಯು ಚನ್ನಾಗಿ ಹಾಯುವದಿಲ್ಲವಾದ ಕಾರಣ ಪ್ರಥಮದ ಒಂದು ಅಕಾಲ ಮಳೆಯಾದಾಗಾಗಲಿ ಮತ್ತು ಅಶ್ವಿನ್ಯಾದಿ ಮಳೆಯಾದಾಗಾಗಲಿ ಮೃದುವಾದ ಸಮಯ ನೋಡಿ ಎರಡು ಸಾಲು ಮಡಿಕೆಯು ಹೊಡೆದು ಚನ್ನಾಗಿ ಮೂರು ಸಾಲು ಹರಿಗಿ ತಯಾರು ಮಾಡಿ ಇಟ್ಟು ಭರಣಿಯಿಂದ ಹಿಡಿದು ಆರದ್ರಿ ಪುಷ್ಯ ಪುನರ್ವಸು ವರೆಗೂ ಯಾವ ಮಳೆಯಲ್ಲಿ ಹಸಿಯಾದರೂ ಮುಂಗಾರಿಯನ್ನು ಬಿತ್ತಬೇಕು ಅಷ್ಟರಲ್ಲಿ ಹೊಲವು ನೊಲ್ಲಿ ಅದ ಹಾಗೆ ಹದವನ್ನು ನೋಡಿ ಒಂದು ಸಾಲು ಎರಡು ಸಾಲು ಹರಿಗಿ ತಯಾರು ಮಾಡಿರಬೇಕು ಹುಲ್ಲು ಸದಿಯು ಸಿಕ್ಕಿರುವದಕ್ಕಿಂತ ಮೊದಲೇ ಜಾಗೃತಿಯಿಂದ ಹಸನ ಮಾಡಿ ಇಟ್ಟಿರಬೇಕು

ಹಿಂಗಾರಿಯ ಪದಾರ್ಥಗಳನ್ನು ಬಿತ್ತತಕ್ಕ ಭೂಮಿಯಾದರೆ ಮೊದಲೇ ಆ ಹೊಲವನ್ನು ಈ ಪ್ರಕರಣದ ಐದನೆಯ ಕಲಮಿನಲ್ಲಿ ಹೇಳಿದಂತೆ ಚನ್ನಾಗಿ ತಿದ್ದಿಕೊಂಡು ಕಿರ್ದಿ ಮಾಡಿದ ಹೊಲವಾದರೆ ಒಂದು ವರ್ಷ ಗೊಬ್ಬರವನ್ನು ಹಾಕಿದ್ದರೆ ಮುಂದೆ ಭೂಮಿಯು ಅನುವರಿತು ನಾಲ್ಕು ವರ್ಷ ಹಾಗೇ ಬಿಟ್ಟು ಪ್ರತಿವರ್ಷ ಎರಡು ಸಾಲು ಮಡಿಕೆಯು ಹೊಡೆದು ಬೇಸಿಗೆಯಲ್ಲಿ ಮೂರು

ಸಾಲು ಹರಿಗಿ ಪುನಃ ಮುಂಗಾರಿಯನ್ನು ಬಿತ್ತಿದ ಮೇಲಾಗಲಿ ಅಥವಾ ನೊಲ್ಲಿ ಹುಟ್ಟಿದ ಹಾಗೆ ಹೊರಪು ನೋಡಿ ಮುಂಗಾರಿಯು ಬಿತ್ತುವದಕ್ಕಿಂತ ಮೊದಲೇ ಒಂದು ಸಾಲು ಹರಿಗಿ ಮುಂಗಾರಿಯು ಬಿತ್ತಿದ ಮೇಲೆ ಒಂದು ಸಾಲು ಹರಿಗಿ ಕಾಲಿಗಿಯನ್ನು ನೋಡಿ ಹತ್ತಿಯನ್ನಾಗಲಿ, ಹಿಂಗಾರಿಯು ಧಾನ್ಯವನ್ನಾಗಲಿ ಬಿತ್ತಬೇಕು.

ತೀವ್ರ ಹಸಿಯಾಗದಂಥ ಕರ್ಲ ಪಡಿಭೂಮಿಯನಾದರೆ ಮೊದಲು ಒಂದು ಸಾಲು ಮಡಿಕೆಯ ಹೊಡೆದು ಆ ಮೇಲೆ ಗೊಬ್ಬರವನ್ನು ಹಾಕಿ ಮತ್ತೊಂದು ಸಾಲು ಮಡಿಕೆಯ ಹೊಡೆಯಬೇಕು ತರುವಾಯ ಮೂರು ಸಾಲು ಹರಿಗಿ ಮತ್ತೊಂದು ಸಾಲು ಮಡಿಕೆಯ ಹೊಡೆದು ಬಿಡಬೇಕ. ಆ ಮೇಲೆ ಮಳೆಯಾಗಿ ಸಾಲಿನಲ್ಲಿ ನೀರು ನಿಂತು ತಂಪು ಹಿಡಿದು ಹಸಿಯಾಗುವದು. ಆ ಮೇಲೆ ಸ್ವಲ್ಪ ಹೊರುಪು ನೋಡಿ ಎರಡು ಸಾಲು ಹರಿಗಿ ಬಿತ್ತಬೇಕು. ಆ ಹೊಲಕ್ಕೆ ಮುಂಗಾರಿ ಅಥವಾ ಹಿಂಗಾರಿಯಲ್ಲಿ ಯಾವ ಪದಾರ್ಥವನ್ನಾದರೂ ಬಿತ್ತಿದರೂ ಬರುತ್ತದೆ.

ಮತ್ತು ಗೋದಿಯು ಬಿತ್ತುವ ಹೊಲವನ್ನು ಏಳು ಸಾಲು ಹರಗಬೇಕು. ಹೇಗಂದರೆ ಮೊದಲು ಮಡಿಕೆಯ ಹೊಡೆದು ಚನ್ನಾಗಿ ಮೂರು ಸಾಲು ಬೇಸಿಗೆಯಲ್ಲಿ ಹರಗಬೇಕು ಪುನಃ ಮಳೆಯಾದ ಮೇಲೆ ಹೊಂಬ ಹಸಿಯೊಳಗೆ ಮೂರು ಸಾಲು ಹರಗಬೇಕು ಹೇಗಂದರೆ ಮುಂಗಾರಿಯನ್ನು ಬಿತ್ತುವದರೊಳಗೆ ಒಂದು ಸಾಲು, ಮುಂಗಾರಿಯನ್ನು ಬಿತ್ತಿದ ಮೇಲೆ ಒಂದು ಸಾಲು ಪುನಃ ಹತ್ತಿಯನ್ನು ಬಳಿಜೋಳವನ್ನು ಬಿತ್ತಿದ ಮೇಲೆ ಒಂದು ಸಾಲು ಹೊಂಬ ಹಸಿಯೊಳಗೆ ಹರಿಗಿ ಪುನಃ ಗೋದಿಯು ಬಿತ್ತುವ ಮುಂದೆ ಒಂದು ಸಾಲು ಹರಿಗಿ ಗೋದಿಯನ್ನು ಬಿತ್ತಬೇಕು ಆ ಬೆಳೆಯು ಪ್ರತಿ ಕೂರಿಗೆಗೆ ಮೂವತ್ತು ಹೇರು ಬೆಳೆಯುವದಕ್ಕೆ ಸಂಶಯವಿಲ್ಲ.

ಸ್ವಲ್ಪ ಕಪ್ಪುತರವುಳ್ಳ ಮೊರಡಿ ಪೈಕಿಯ ಭೂಮಿ ಇದ್ದ ಅಂಥ ಭೂಮಿಯಲ್ಲಿ ಗೋದಿಯನ್ನು ಬಿತ್ತಬೇಕಾದರೆ ಉತ್ತರಿಯ ಮಳೆಯು ಪ್ರಾರಂಭವಾಗುವದಕ್ಕಿಂತ ಮೊದಲೇ ಈ ಪ್ರಕರಣದಲ್ಲಿ ಹಿಂದೆ ಹೇಳಿದ ಪ್ರಕಾರ ಏಳು ಸಾಲು ಹರಿಗಿ ಸಿದ್ಧಮಾಡಿ ಇಟ್ಟುಕೊಂಡು ಇದ್ದು ಉತ್ತರಿಯ ಪ್ರವೇಶ ಕಾಲದಲ್ಲಿ ಗೋದಿಯನ್ನು ಬಿತ್ತುವಾಗ್ಗೆ ಕೂರಿಗೆಯ ಹಿಂದೆ ಸಾಲಿಗೊಂಡು ಬುಕ್ಕಾ ಕಟ್ಟಿ ಮೊದಲೇ ಕಸಕಡ್ಡಿಯನ್ನು ಆರಿಸಿ ಚಲೋ ಗೊಬ್ಬರವನ್ನು ಸೋಸಿ ಅಲ್ಲಲ್ಲಿಗೆ ಹಾಕಬೇಕು. ಬಿತ್ತುವ ಸಮಯದಲ್ಲಿ ಆ ಗೊಬ್ಬರವನ್ನು ಉಡಿಯಲ್ಲಿ ಕಟ್ಟಿಕೊಂಡು ಕೂರಿಗೆಯ ಹಿಂದೆ ಅಕ್ಕಡಿಯ ಹಾಕಿದಂತೆ ಮೂರು ಸಾಲಿನ ಕೂರಿಗೆಯಾದರೆ ಮೂರು ಮಂದಿ ನಾಲ್ಕು ತಾಳಿನ ಕೂರಿಗೆಯಾದರೆ ನಾಲ್ಕು ಮಂದಿ ಹುಡುಗರನ್ನಾಗಲಿ ಅಥವಾ ಹೆಂಗಸರನ್ನಾಗಲಿ ಗೊಬ್ಬರ ಹಾಕುವದಕ್ಕೆ ಹಚ್ಚಿ ಮುಂದೆ ಬಿತ್ತುತ್ತ ಹೋದಲ್ಲಿ

ಹಿಂದೆ ಆ ಸಾಲಿನಲ್ಲಿ ಗೊಬ್ಬರ ಬೀಳುತ್ತ ಹೋಗುವ ಹಾಗೆ ಮಾಡಿ ಬಿತ್ತಿ ಬೆಳಸಾಲು ಹೊಡೆದು ಸಾಲು ಮುಚ್ಚಿದ ಮೇಲೆ ಆ ಗೋದಿಯು ಗೊಬ್ಬರದ ಕಸುವಿನಿಂದ ಒಂದೆರಡು ಮಳೆಯಾದರೂ ಕೆಡದೆ ತ್ಯಾಬಿ ಕುಂಕುಮ ಇಟ್ಟಂಗಿ ಮೊದಲಾದ ರೋಗಗಳು ಹಾಯದೆ ಧಾನ್ಯಗಳು ದಪ್ಪಾಗಿ ಪೂರ್ಣ ಹಿಟ್ಟು ತುಂಬಿ ಕೆಂಪು ಬಣ್ಣವಾಗಿ ಮೂರು ತಿಂಗಳೊಳಗೆ ಬರುವವು.

ಗೋದಿ, ಹತ್ತಿ, ಬಿಳಿಜೋಳ ಮೊದಲಾದ ಸರ್ವ ಹಿಂಗಾರೀ ಧಾನ್ಯಗಳನ್ನು ಮತ್ತು ಮುಂಗಾರಿಯ ಕಾಲದಲ್ಲಿ ಬಿತ್ತತಕ್ಕಂಥ ಸಕಲ ಪದಾರ್ಥಗಳ ವಿಷಯವನ್ನು ವಿಸ್ತಾರವಾಗಿ ಮುಂದೆ ಕೆಲವು ಪ್ರಕರಣಗಳಲ್ಲಿ ಬರೆದಿರುವೆನು. ಅದನ್ನು ನೋಡಿ ಅದರ ಹದಬೆದೆಯ ಕಾಲಗಳನ್ನು ಪೈರುಗಳ ಕಾಲಿಗಿಯನ್ನು ಭೂಮಿಯ ಪರೀಕ್ಷೆಯನ್ನು ಚನ್ನಾಗಿ ತಿಳಿದು ಆದರಂತೆ ಉಪಾಯಗಳನ್ನು ಮಾಡಿ ಜಾಣತನದಿಂದ ಬಿತ್ತಿ ಬೆಳೆ ಮಾಡಿಕೊಳ್ಳಬೇಕು.

ಈ ಪ್ರಕರಣದಲ್ಲಿ ಬರೇ ಹರಗುವದನ್ನು ಹೇಳಿದ್ದೇನೆ ಆದರೆ ಕಿರ್ದಿ ಆದ ಹೊಲವಾದರೂ ಪ್ರತಿವರ್ಷ ಮಡಿಕೆಯ ಹೊಡಿಯದೆ ಚನ್ನಾಗಿ ಹರಗದೆ ಮತ್ತು ಭೂಮಿಯ ಅನುವರಿತು ಮೂರು ವರ್ಷ ಅಥವಾ ನಾಲ್ಕು ವರ್ಷಕ್ಕೊಮ್ಮೆ ಗೊಬ್ಬರವನ್ನು ಹಾಕದೆ ಇರಲಾಗದು ಈ ಪ್ರಕಾರ ಪ್ರತಿವರ್ಷಕ್ಕೂ ವ್ಯವಸಾಯ ಮಾಡಬೇಕಾದರೆ ಅಲಗರ್ಜಿ ನಿತ್ರಾಣವಾದ ಎತ್ತುಗಳಿಂದ ಹೊಲದ ಕೆಲಸವು ಸಾಗುವದಿಲ್ಲವಾದ ಕಾರಣ ತ್ರಾಣವುಳ್ಳ ಎತ್ತುಗಳನ್ನು ತೆಗದುಕೊಳ್ಳಬೇಕು. ತ್ರಾಣಹೀನವಾದ ಎಂಟು ಎತ್ತುಗಳನ್ನು ಕಟ್ಟುವದಕ್ಕೆ ತಲೂ ತ್ರಾಣವುಳ್ಳ ನಾಲ್ಕೇ ಎತ್ತುಗಳು ಸಾಕು ಮತ್ತು ಬಲಹೀನವಾದ ನಾಲ್ಕು ಎತ್ತುಗಳನ್ನು ಕಟ್ಟುವದಕ್ಕಿಂತಲೂ ಬಲಿಷ್ಠವಾದ ಎರಡೇ ಎತ್ತುಗಳು ಸಾಕು ಇದನರಿತು ತ್ರಾಣವುಳ್ಳ ಎತ್ತುಗಳನ್ನು ಕಟ್ಟಿ ವೈಗಳ್ಳರಲ್ಲದಂಥ ಬಲವಂತರಾದ ಮನುಷ್ಯರುಗಳನ್ನು ಇಟ್ಟುಕೊಂಡು ಈ ಪ್ರಕರಣದಲ್ಲಿ ಹೇಳಿದಂತೆ ಜಾಗ್ರತನಾಗಿ ಉಪಾಯಗಳನ್ನು ಮಾಡಿ ಹದವರಿತು ಬಿತ್ತಿದರ ಇಲ್ಲಿ ಹೇಳಿದಂತ ಪ್ರತಿ ಕೂರಿಗಿಗೆ ಮೂವತ್ತು ಹೇರು ನಾಲ್ವತ್ತು ಹೇರಿನಂತೆ ಬೆಳೆಯಾಗುವದಕ್ಕೆ ಸಂಶಯವಿಲ್ಲ ಸ್ವಲ್ಪ ಮಧ್ಯಮ ತರದ ಭೂಮಿಯು ಇಪ್ಪತ್ತು ಇಪ್ಪತ್ತೈದು ಹೇರಿನಂತೆ ಮತ್ತು ಸಾಮಾನ್ಯ ಭೂಮಿಯಲ್ಲಿ ಹತ್ತು ಹದಿನೈದು ಹೇರು ಧಾನ್ಯವು ಪ್ರತಿಯೊಂದು ಕೂರಿಗೆ ಭೂಮಿಯಲ್ಲಿ ಬೆಳೆಯಬಹುದು.

# ೬ ನೇ ಪ್ರಕರಣವು.

## ನೆಲ್ಲು ಬಿತ್ತುವದು

ಈ ದಕ್ಷಿಣ ಪ್ರಾಂತದಲ್ಲಿ ನೆಲ್ಲು ಬೆಳೆಯಾಗುವದಕ್ಕೆ ಸಂಶಯವಿಲ್ಲ. ಆದರಲ್ಲಿ ಗದ್ದೆಯ ನೆಲ್ಲು ಕೂರಿಗ ನೆಲ್ಲು ಎಂದು ಎರಡು ಪ್ರಕಾರದ ಬೆಳೆಯನ್ನು ಮಾಡಿಕೊಳ್ಳುತ್ತಾರೆ ಅದರ ಗದ್ದೆಯ ನೆಲ್ಲಿಗೆ ಕಾಲುವೆಯ ನೀರು, ಹಳ್ಳದ ನೀರು, ಹೊಳೆಯ ನೀರು, ಭಾವಿಯ ನೂಟ್ಟೆಯ ನೀರು ಯಾವಾಗಲೂ ಬೇಕಾದಾಗ ಬಿಡುಗಾವಲಿಯಿಂದ ಬಿಡುವದುಂಟು ಬಿಡುಗಾವಲಿ ನೀರಿನ ಭೂಮಿಯಾದರೆ ಪ್ರತಿವರ್ಷಕ್ಕೆ ಎರಡು ಸಾರ ನೆಲ್ಲು ಬೆಳೆಯಾಗುವದು ಗದ್ದೆಯ ನೆಲ್ಲಿನ ಬೆಳೆಯನ್ನು ಎರಡು ಪ್ರಕಾರವಾಗಿ ಮಾಡಿಕೊಳ್ಳುತ್ತಾರೆ ಅದರಲ್ಲಿ ಮೊದಲನೇ ಪ್ರಕಾರವು ಹೇಗೆಂದರೆ—

ನೀರಿನ ಹರಿಯು ಚನ್ನಾಗಿ ಆಗುವಂಥ ಸಮತಳ ಭೂಮಿ ಅಥವಾ ಸ್ವಲ್ಪ ಇಳಿಜಾರಿ ಭೂಮಿ ಇದ್ದು ಆ ಭೂಮಿಯೂ ಮಂಡು ಅಥವಾ ಉಸುಕು ಇಲ್ಲವೆ ಕರಲು ಮತ್ತು ಕೇಸರಿ ಕೆಂಪು ಬೆರಕೆಯಾದ ಉಸುಕಿನ ಭೂಮಿಯು, ಕೆಂಪು ಮಸಾರಿ, ಮೊರಡಿ ಅಥವಾ ಉತ್ತಮ ತರದ ಎರಿ, ಹೊಳೆಯ ಮಡ್ಡಿ, ಮೊದಲಾದ ಭೂಮಿಗೆ ಬಿಡುಗಾವಲಿಯ ನೀರು ಬರುವ ಹಾಗೆ ಇದ್ದರೆ ಆ ಹೊಲಗಳಿಗೆ ಒಡ್ಡು ಹಾಕಿ ಮಧ್ಯಗಲ್ಲಿ ಹಳ್ಳಗಳು ಸಣ್ಣ ಚೀಲಗಳು ಕೊರಿಗಳು ಇವುಗಳನ್ನು ತುಂಬಿಕೊಂಡು ತಗ್ಗು ತವರಾಗಿದ್ದರ ಸಮತಳ ಮಾಡಿಕೊಂಡು ಈ ಪ್ರಕಾರ ತಿದ್ದಿಕೊಂಡು ತದನಂತರ ಕೇದಿಗೆಯು ಮಾಡಿ ಕರಿಕೆ ಮುಂತಾದ್ದನ್ನು ಕಳದು ಹಸನಾದ ಮೇಲೆ ಆ ಹೊಲವನ್ನು ನೆಲ್ಲುಗದ್ದೆಯು ಮಾಡಿಕೊಳ್ಳುವದು ಹೇಗಂದರೆ ಮೊದಲು ಒಂದು ಸಾಲು ಮಡಿಕೆಯು ಹೊಡೆದು ತುಂಬಾ ಗೊಬ್ಬರವನ್ನು ಹಾಕಿ ಪುನಃ ಎರಡು ಸಾಲು ಮಡಿಕ ಹೊಡೆದು ಚನ್ನಾಗಿ ಹರಿಗ ಹಸನಾದ ಮೇಲೆ ಗೇಣು ದೀಡುಗೇಣು ಒಡ್ಡು ಇಟ್ಟು ಆರು ಮಾರು ಉದ್ದವಾಗಿ ಮಾರು ಮೂರು ಅಗಲವಾಗಿ ದೊಡ್ಡ ದೊಡ್ಡ ಮಡಿಗಗಳನ್ನು ಮಾಡಿ ಅದರಲ್ಲಿ ನೀರು ನಿಲ್ಲುವ ಹಾಗೆ ಸಿದ್ಧಮಾಡಿ ಇಟ್ಟು ಮತ್ತೊಂದು ಬೇರೆ ಮಡಿಯನ್ನು ಇದರಂತೆ ಸಿದ್ಧಮಾಡಿ ಮೃಗಶಿರ ಆರದ್ರ ಮಳೆಗಳ ಸಮಯಕ್ಕೆ ಆ ಮಡಿಗಳಲ್ಲಿ ಗೊಬ್ಬರ ಹಾಕಿ ಉತ್ತಮ ತರದ ನೆಲ್ಲು ಬೀಜವನ್ನು ಹಾಕಿ ನೀರು ಬಿಟ್ಟರೆ ಅವು ಮಳೆತು ಸಸಿಗಳಾಗುವವು ಆ ಸಸಿಗಳನ್ನು ಅದೇ ಮಡಿಯಲ್ಲಿ ವರ್ಧನ ಮಾಡಿ ಪುಷ್ಯ ಆಶ್ಲೇಷಾದಿ ಮಳೆಗಳ ಪ್ರವೇಶ

ಕಾಲದಲ್ಲಿ ಮಳೆಯಾದಾಗ ಅವುಗಳನ್ನು ಕಿತ್ತಿತಂದು ಮೊದಲು ಸಿದ್ಧಮಾಡಿದ ಮಡಿಗಳಿಗೆ ತುಂಬಾ ನೀರು ಬಿಟ್ಟು ಹಸಿ ಮಾಡಿ ಈ ಸಸಿಗಳನ್ನು ಹಚ್ಚಿ ಆ ಮಡಿಯಲ್ಲಿ ನೀರು ತುಂಬಿಕೊಂಡು ನಿಲ್ಲುವ ಹಾಗೆ ಮಾಡಿ ಸ್ವಲ್ಪ ದಿವಸದ ಮೇಲೆ ಆ ಹೊಲದಲ್ಲಿ ಸದಿಯು ಹುಟ್ಟುತ್ತ ಹೋದ ಹಾಗೆ ಸದಿಯನ್ನು ತೆಗೆದು ನೀರು ಕಟ್ಟುತ್ತ ಹೋಗಬೇಕು. ಆ ಮೇಲೆ ಕೆಲವು ದಿವಸಕ್ಕೆ ಬತ್ತದ ಪೈರು ಚನ್ನಾಗಿ ಬೆಳೆದು ಕಾಳು ಹುಟ್ಟಿ ಹಾಲು ತುಂಬಿ ಬತ್ತವಾದ ಮೇಲೆ ಕೊಯ್ದು ಹೊರೆಯು ಕಟ್ಟಿ ಕಣಕ್ಕೆ ಒಯ್ದು ಸಿವಡು ಕಟ್ಟಿ, ಬಡಿದು ರಾಶಿಯು ಮಾಡಿದರೂ ಒದಗುತ್ತದೆ ಇದಲ್ಲದೆ ಕಣದಲ್ಲಿ ಹರಿವಿಸಿ ಹುಲ್ಲು ಬಾಡಿದ ಮೇಲೆ ಎತ್ತುಗಳಿಂದ ತುಳಿಸಿ ಹುಲ್ಲನ್ನು ಬತ್ತವನ್ನು ಬೇರೆ ಮಾಡಿಕೊಂಡಾದರೂ ರಾಶಿಯನ್ನು ಮಾಡಿಕೊಳ್ಳಬೇಕು. ಮತ್ತೊಂದು ಪ್ರಕಾರದ ಗದ್ದೆಯು ನೆಲ್ಲನ್ನು ಬೆಳೆ ಮಾಡುವದು ಹೇಗಂದರ -

ಕೆಂಪು, ಮಸಬು, ಸವಳು ಕರಲು, ಕರಕಿಯು ದಡ್ಡು ಮುಂತಾದವಾದರೂ ಆ ಭೂಮಿಗೆ ಹೊಳೆಯು ನೀರಿನ ಕಾಲಿವೆ ಮತ್ತು ಹಳ್ಳಗಳ ಬಿಡ ಗಾವಲಿಗಳಿದ್ದಲ್ಲಿ ಹಾಗೂ ದೊಡ್ಡ ದೊಡ್ಡ ಕರಗಳು ಇದ್ದು ಅವುಗಳ ತುಂಬಿನಿಂದ ನೀರು ಕಾಲಿವೆಯಾಗಿ ಹರಿಯುವ ಸ್ಥಳದಲ್ಲಿ ಅಥವಾ ಬಾವಿಗಳು ಇದ್ದಲ್ಲಿಯಾಗಲಿ ನೆಲ್ಲು ಗದ್ದೆಗಳನ್ನು ಮಾಡಿಕೊಳ್ಳಬೇಕು ಅದು ಹೇಗಂದರ— ಗೊಬ್ಬರ ವಿಶೇಷವಾದರ ಯಾವ ಭೂಮಿಯಲ್ಲಾದರೂ ನೆಲ್ಲು ಬೆಳೆಯುವದು. ಇದಕ್ಕೆ ಸಂಶಯವಿಲ್ಲವು ಗದ್ದೆಯನ್ನು ಮಾಡುವ ಭೂಮಿಯನ್ನು ಮೊದಲು ಗೊಬ್ಬರವನ್ನು ಮಡಿಗಳಿಗೆ ಹಾಕಿ ನೀರು ಬಿಟ್ಟು ನೇಗಿಲುಗಳಿಂದ ಹೊಡೆದು ಆ ಮೇಲೆ ದೊಡ್ಡ ದೊಡ್ಡ ಮಡಿಗಳನ್ನು ಮಾಡಿ ಸುತ್ತಲೂ ಗೇಣು ಒಂದು ವಾಗೇಣು ಒಡ್ಡು ಇಟ್ಟು, ಮಡಿಗಳನ್ನು ಸಿದ್ಧ ಮಾಡಿದ ಮೇಲೆ ಆ ಮಡಿಗಳಲ್ಲಿ ನೀರು ತುಂಬಿಕೊಂಡು ನಿಂತು ಆ ಯಾವತ್ತು ಭೂಮಿಯು ನೆನೆಯುವ ಹಾಗೆ ನೀರು ಕಟ್ಟಬೇಕು

ಬೀಜಗಳನ್ನು ಬೇರೆ ಸಿದ್ಧಮಾಡುವದು ಹೇಗೆಂದರೆ, ಒಂದು ಎಕರೆ ಭೂಮಿಯು ಗದ್ದೆಗೆ ಅಜಮಾಸು ಮೂವತ್ತೆರಡು ಸೇರು ಬೀಜದ ನೆಲ್ಲು ಬೇಕು ಆಗರೆ ಬೀಜವನ್ನು ಕಟ್ಟುವದು ಹೇಗಂದರ ಒಂದು ಎಕರ ಗದ್ದೆಯು ಬೀಜಕ್ಕೆ ಚಚ್ಚೌಕು ನಾಲ್ಕು ಮೊಳ ಅಗಲವಾಗಿ ಗೇಣು ಎತ್ತರವಾದ ಕಟ್ಟಿಗೆಗಳನ್ನು ನಾಲ್ಕೂ ಕಡೆಗೆ ಇಟ್ಟು ನೆಲದ ಮೇಲೆ ಪಿರಸಲ ತೊಪ್ಪಲ, ಚಿಟ್ಟೆಲ ತೊಪ್ಪಲ, ಹಲಗಲಿ ತೊಪ್ಪಲ, ಲಕ್ಕಿ ತೊಪ್ಪಲ, ತೇಗಿನ ತೊಪ್ಪಲ ಇವುಗಳಲ್ಲಿ ಯಾವ ತೊಪ್ಪಲವನ್ನಾಗಲಿ ಸುತ್ತಲೂ ಕಟ್ಟಿಗೆಯ ಒಳವೈಯಲ್ಲಿ ಸಂದು ಸಂದಿಗೆ ಹಾಕಿ ಹಾಗೂ ನೆಲದ ಮೇಲೆ ಎರಡು ಬೆರಳು ನಾಲ್ಕು ಬೆರಳು ಅಥವಾ

ಗೇಣು ಚೋಟು ಉದ್ದ ತೊಪ್ಪಲವನ್ನಾದರೂ ಹರವಿ ಅದರ ಮೇಲೆ ಬೀಜದ ನೆಲ್ಲನ್ನು ತುಂಬಿ ಅದರ ಮೇಲೆ ಮತ್ತೆ ತೊಪ್ಪಲವನ್ನು ಮುಚ್ಚಿ ಅದರ ಮೇಲೆ ಕಲ್ಲುಗಳನ್ನು ಹೇರಿ ನಿತ್ಯದಲ್ಲಿ ಹತ್ತೆಂಟು ಕೊಡ ನೀರನ್ನು ಮೇಲೆ ಮೇಲೆ ಕಾವಾಗುವ ಹಾಗೆ ಹಾಕಬೇಕು. ಅದಲ್ಲದೆ ನೆಲ್ಲು ಹುಲ್ಲಿನ ಮೂಡ ಕಟ್ಟಿ ನೀರಲ್ಲಿ ಎದ್ದಿ ಎದ್ದಿ ಇಟ್ಟರೂ ಸರಿ ಈ ಪ್ರಕಾರ ಮೂರು ದಿವಸದ ವರೆಗೂ ನೀರನ್ನು ಹಾಕುತ್ತ ಇರಬೇಕು ಮತ್ತು ಅಲ್ಪ ಸ್ವಲ್ಪ ಗದ್ದೆಯನ್ನು ಮಾಡಿದ್ದಾದರೆ, ಒಂದು ಹರವಿ ಒಳಗೆ ನೆಲ್ಲು ತುಂಬಿ ಬಾಯಿಗೆ ನೆಲ್ಲು ಹುಲ್ಲನ್ನು ಇಟ್ಟು ಮೂರು ದಿವಸದ ವರೆಗೆ ನೀರನ್ನು ಹಾಕಿ ಒಸಿದು ಡಬ್ಬ ಹಾಕಬೇಕು ಈ ಪ್ರಕಾರ ಮೂರು ದಿವಸ ಇಟ್ಟು ನಾಲ್ಕನೇ ದಿವಸಕ್ಕ ಕಡೆಗ ತಗೆಯಬೇಕು ಅವುಗಳಿಗೆ ಮೊಳಕ ಹಾಯಿದಿರುವವು.

ನಾಲ್ಕನೆಯ ದಿವಸದೊಳಗಾಗಿ ಗದ್ದೆಗಳನ್ನು ಸಿದ್ಧಮಾಡಿಕೊಳ್ಳಬೇಕು. ಹೇಗಂದರೆ ಗದ್ದೆಯ ಭೂಮಿಯಲ್ಲಿ ಆರು ಮಾರು ಉದ್ದ ಮೂರು ಮಾರು ಅಗಲವಾಗಿ ದೊಡ್ಡ ಮಡಿಗಳನ್ನು ಮಾಡಿ ಅದರಲ್ಲಿ ಗೇಣು ಒಂದುವರೆ ಗೇಣು ಒಡ್ಡು ಇಟ್ಟು, ನೀರು ಸಿಲ್ಲುವ ಹಾಗೆ ಒಡ್ಡು ಕಟ್ಟಿ ಕೆಸರೊಳಗೆ ಒಡ್ಡು ಒಡೆಯದ ಹಾಗೆ ಉಳಿಸಿ ಮಡಕೆಯ ಹೊಡೆದು ಗೊಬ್ಬರ ಹಾಕಿ ನೀರು ಬಿಟ್ಟು ಪುನಃ ಮಡಕೆಯ ಹೊಡೆಯಬೇಕು ಮತ್ತು ಅದೇ ಕೆಸರಲ್ಲಿ ಅಲಕು ಹೊಡೆಯಬೇಕು ಅಲಕು ಎಂದರೆ ಜಾಡರು ನೇಯುವ ಹಲಿಗೆಯ ಹಾಗಿರುವ ಕುಂಟೆಯ ದಿಂಡಿಗೆ ಜಂತಿ ಕುಂಟೆ ಹಲ್ಲಿನ ಹಾಗೆ ನಾಲ್ಕು ಬೆರಳು ಅಗಲವಾಗಿ ಮೊನೆಯಾದ ಹಲ್ಲುಗಳನ್ನು ಹತ್ತು ಹನ್ನೆರಡು ಇಪ್ಪತ್ತರ ವರೆಗೂ ಅದರ ಅನುವರಿತು ಹಲ್ಲುಗಳನ್ನು ಹಾಸಿರುವ ಕುಂಟೆಗೆ ಅಲಕು ಕುಂಟೆ ಹಾಗು ಪಲಗೋರು ಎಂಬ ಹೆಸರು ಇಂಥ ಅಲಕು ಪಲಗೋರು ಕುಂಟೆಯಿಂದ ಗದ್ದೆಯ ಮಡಿಗಳಲ್ಲಿ ನೀರು ತುಂಬಿಕೊಂಡು ನಿಂತಿರುವಾಗ್ಗೆ ಗೋರಿಯನ್ನು ಒತ್ತಿ ಸುತ್ತಲು ಇರುವ ಒಡ್ಡನ್ನು ಕೆಡಿಸದೆ ಕೆಸರೊಳಗೆ ಅಲಕು ಹೊಡೆದು ಅಪ್ಪರ ಮೇಲೆ ಮತ್ತೆ ನೀರು ಬಿಟ್ಟು ಮಡಿಗಳಲ್ಲಿ ನೀರು ತುಂಬಿಕೊಂಡು ನಿಂತಿರುವಾಗ್ಗೆ ಗೋರಿಯನ್ನು ಒತ್ತಿ ನೆಲವನ್ನು ಸಮತಳ ಮಾಡಬೇಕು. ಈ ಪ್ರಕಾರದಿಂದ ಯಾವತ್ತು ಮಡಿಗಳನ್ನು ಸಿದ್ಧಮಾಡಿದ ಮೇಲೆ ಆ ಮಡಿಗಳು ತೆಳ್ಳಗೆ ರಾಡಿಯ ಹಾಗೆ ತುಂಬಿಕೊಂಡು ನಿಂತಿರುವವು.

ನಾಲ್ಕನೆಯ ದಿವಸಕ್ಕೆ ಬೀಜದ ನೆಲ್ಲುಗಳು ಮೊಳಕೆಯಾಗಿರುವವು. ಅದರೆ ಬೀಜದ ಮೇಲೆ ಹಾಕಿರುವ ತೊಪ್ಪಲವನ್ನು ತೆಗೆದು ಕಡೆಗೆ ಮಾಡಿ ಒಳಗೆ ಮೊಳಕೆ ಹಾಯಿದಿರುವ ನೆಲ್ಲು ಬೀಜಗಳನ್ನು ಚನ್ನಾಗಿ ವಿರಳ ವಿರಳವಾಗಿ ಒಂದಕ್ಕೊಂದು ಹತ್ತದ ಹಾಗೆ ಗಡ್ಡಿಗಳ ಒಡೆದು ದೊಡ್ಡ ಹೆಡಿಗೆ ಅಥವಾ ಮೊಟ್ಟೆಗಳಲ್ಲಿ ತುಂಬಿಕೊಂಡು ಹೋಗಿ ಚನ್ನಾಗಿ ಬೇರೆ ಬೇರೆ ಮಾಡಿ

ಮುಂದೆ ಮುಂದೆ ಒಬ್ಬನು ಗೋರಿಯಿಂದ ನೆಲವನ್ನು ಒತ್ತುತ್ತ ಮಡಿಯಲ್ಲಿಯ ಕೆಸರನ್ನು ಸಮತಳ ಮಾಡುತ್ತ ಹೋಗಬೇಕು. ಹಿಂದೆ ಕೆಲವರು ಬೀಜಗಳನ್ನು ಚಲ್ಲುತ್ತ ಇರುವದು. ಹೀಗೆ ಯಾವತ್ತು ಗದ್ದೆಗಳಿಗೆ ಬೀಜವನ್ನು ಚಲ್ಲಿದ ಮೇಲೆ ಮರುದಿವಸದ ವರೆಗೂ ನೀರನ್ನು ಬಂದು ಮಾಡಬೇಕು ಮೂರು ದಿವಸಕ್ಕೆ ನಾಟಿಕೆಗಳು ಹಸುರಾಗಿ ಕಾಣಿಸಿಕೊಳ್ಳುವವು ಆ ಮೇಲೆ ನೀರು ಆರಗೊಡದ ಹಾಗೆ ಮೂರು ದಿವಸಕ್ಕೊಮ್ಮೆ ನೀರು ಬಿಡುತ್ತ ಇರಬೇಕು. ಗದ್ದೆಯು ನೆಲ್ಲಿನಲ್ಲಿ ಯಾವಾಗಲೂ ನೀರು ನಿಂತಿರಬೇಕು ಅದೇ ಗಸ್ತೆ ಸ್ವಲ್ಪ ತಂಪು ಇರುವದರೊಳಗೆ ಆರಗೊಡದೆ ನೀರು ಬಿಡಬೇಕು. ಆ ನೆಲವು ಆರಿದರ ಬೀಡಿ ಸೆಳೆದು ನೆಲ್ಲು ಕೆಡುತ್ತಿರುವದು ಆ ಮೇಲೆ ಎಷ್ಟು ನೀರು ಬಿಟ್ಟರೂ ಬೆಳೆಯುದು ಆದ ಕಾರಣ ಯಾವಾಗಲು ಮಡಿಯಲ್ಲಿ ನೀರು ನಿಂತಿರುವ ಹಾಗ ಮಾಡಬೇಕು ಮತ್ತು ಬೀಜಗಳನ್ನು ಚಲ್ಲುವ ವೇಳೆಯಲ್ಲಾದರೂ ಸಸಿಗಳು ಬಹಳ ಅಡುವಾಗಿದ್ದರೆ ಕಿತ್ತಿ ಅಂಗಲಾದಲ್ಲಿ ಹಚ್ಚಬೇಕು

ಬೀಜವನ್ನು ಬಿತ್ತಿದ ಇಪ್ಪತ್ತು ದಿವಸಕ್ಕೆ ಆ ಗದ್ದೆಯಲ್ಲಿ ಸದೆಯನ್ನು ತೆಗಿಸಬೇಕು. ಹೇಗೆಂದರೆ ಮಡಿಗಳಲ್ಲಿ ನೀರು ಸರ್ವದಾ ನಿಂತಿರುವದರಿಂದ ನೆಲವು ಹಾವಸೆಗಟ್ಟಿ ಹಕ್ಕಳಿಯು ಹಾಗಿರುವದು. ಅದನ್ನು ತೆಗೆಯಬೇಕಾದರೆ ಆ ಮಡಿಯಲ್ಲಿ ಕೈ ಬೆರಳುಗಳನ್ನಾಡಿಸಿ ನೆಲ್ಲು ನಾಟಿಕೆಯನ್ನು ಕೀಳದೆ ಕಸವನ್ನು ಮತ್ತು ನೀರೊಳಗೆ ಇರುವ ಹಾವಸಿಯ ಹಕ್ಕಳಿಗಳನ್ನು ತೆಗೆದು ಒಡ್ಡಿಗೆ ಹಾಕುತ್ತ, ಹೀಗೆ ಯಾವತ್ತು ಗದ್ದೆಯ ಸದೆಯನ್ನು ತೆಗಿಸಿ ಹಾವಸಿಯನ್ನು ಕಡೆಗೆ ಹಾಕಬೇಕು ಆ ಮೇಲೆ ಒಂದು ತಿಂಗಳಿಗೆ ಎರಡನೇ ಆವೃತ್ತಿ ಸದೆಯನ್ನು ತೆಗಿಸಿ ಹಾವಸೆಯನ್ನು ತೆಗೆದು ದಂಡೆಗೆ ಹಾಕಬೇಕು. ಮತ್ತು ನೀರು ಆರಗೊಡದ ಹಾಗೆ ತಪ್ಪದೆ ನೀರು ಬಿಡುತ್ತ ಹೋದರೆ ನಾಲ್ಕು ತಿಂಗಳಿಗೆ ನೆಲ್ಲು ಬೆಳೆಯು ಕೈಗೆ ಬರುವದು ಹಾಗು ಈ ಗದ್ದೆಗಳೊಳಗೆ ಮಾಗಿ ಮಳೆಗಾಲ ಬೇಸಿಗೆ ಎಂದು ಮೂರು ಪ್ರಕಾರವು. ಈ ಗದ್ದೆಯ ನೆಲ್ಲು ಮೂರು ವೇಳೆ ಬಿತ್ತಿ ಬೆಳೆ ಮಾಡಿಕೊಳ್ಳುತ್ತಾರೆ ಬೇಸಿಗೆಯ ಗದ್ದಿಗೆ ವಿಶೇಷವಾಗಿ ಗೊಬ್ಬರವನ್ನು ಹಾಕಬೇಕು. ಅಥವಾ ಸೀತಾಫಲದ ತೊಪ್ಪಲು ಹುಲಗಲಿ ತೊಪ್ಪಲು, ಬೆಟ್ಟಲ ತೊಪ್ಪಲು, ಸಿರಸಲ ತೊಪ್ಪಲು, ಮುಂತಾದ ಹಸಿಯ ತೊಪ್ಪಲವನ್ನಾದರೂ ನೆಲ್ಲು ಮಡಿಯಲ್ಲಿ ನೀರು ನಿಂತಿರುವಾಗ್ಗೆ ಹಾಕಿ ಬಿಟ್ಟರೆ ಅದು ಅಲ್ಲೇ ಕೊಳೆತು ಗೊಬ್ಬರದ ಹಾಗೆ ಬೆಳೆಗೆ ಕಾವಾಗಿ ಭೂಮಿಗೆ ತಂಪಾಗಿ ನೀರು ಹೀರುವದಿಲ್ಲವು ಬೇಸಿಗೆಯ ಕಾಲದಲ್ಲಿ ಚನ್ನಾಗಿ ಬೆಳೆಯಾಗುವದು.

ಕೂರಿಗೆ ನೆಲ್ಲು ಯಾವ ದೇಶದಲ್ಲಿಯಾದರೂ ಎಂಥ ಭೂಮಿಯಲ್ಲಾದರೂ ಹೊಳೆಯ ನೀರು ಕೆರಿಯ ನೀರು ಬಿಡುಗಾವಲಿಯ ನೀರು ಇಲ್ಲದೆ

ಒಡ್ಡುಗಳ ಸಹಾಯದಿಂದ ಗೊಬ್ಬರದ ಬಲಾತ್ಕಾರದಿಂದ ಮಳೆಯ ನೀರಿನಿಂದ ಬೆಳೆಯುವದು, ಅದರ ಪೈರನ್ನು ಮಾಡುವದು ಹೇಗಂದರೆ, ಮೊದಲು ನೆಲ್ಲು ಬಿತ್ತುವ ಹೊಲಗಳಿಗೆ ತಮ್ಮ ಶಕ್ತ್ಯನುಸಾರವಾಗಿ ಒಡ್ಡು ಹಾಕಿಸಿ ಗೇಣು ಒಂದುವರೆ ಗೇಣು ನೀರು ನಿಂತು ತಂಪು ಮಾಡುವ ಹಾಗೆ ಎಷ್ಟು ಭೂಮಿ ಯಲ್ಲಿ ನೆಲ್ಲು ಬಿತ್ತಬೇಕೋ, ಅಷ್ಟು ಭೂಮಿಯಲ್ಲಿ ತೆಳ್ಳಗೆ ನೀರು ನಿಲ್ಲುವ ಹಾಗೆ ಮಾಡಿ ವರುಷ ವರುಷಕ್ಕೆ ಗೊಬ್ಬರವನ್ನು ಹಾಕಿ ಎರಡು ಸಾಲು ಮೂರು ಸಾಲು ಮಡಿಕೆಯ ಹೊಡೆದು ಮೂರು ಸಾಲು ಚನ್ನಾಗಿ ಹರಿಗಿ ಸಿದ್ಧಮಾಡಿ ಇಟ್ಟಿರಬೇಕು. ಅಷ್ಟರಲ್ಲಿ ರೋಹಿಣಿ, ಮೃಗಶಿರ, ಆರದ್ರಿ ಕಾಲದಲ್ಲಿ ಯಾವ ಮಳೆಯೂ ಹಸಿ ಮಾಡಿದಾಗ್ಯಾದರೂ ಆ ಹಸಿಯಲ್ಲಿ ಬಿತ್ತುವ ಹದ ನೋಡಿ ಕೂರಿಗೆಯಿಂದ ನೆಲ್ಲು ಬಿತ್ತಬೇಕು ಭೂಮಿಯು ಉತ್ತಮ ಪ್ರಕಾರದ್ದಾಗಿ ಕಸುವಿನ ಭೂಮಿಯಾದರೆ ಪೂರ್ವ ಪಶ್ಚಿಮಕ್ಕೆ ಸಾಲು ಮಾಡಿ ಒಂದಾ ವರ್ತಿ ಬಿತ್ತಿ ಉತ್ತರ ದಕ್ಷಿಣಕ್ಕೆ ಸಾಲು ಮಾಡಿ ಮತ್ತೊಂದಾವರ್ತಿ ಬಿತ್ತ ಬೇಕು ನೆಲ್ಲು ಬಿತ್ತುವದಕ್ಕೆ ನಾಲ್ಕು ತಾಳಿನ ಕೂರಿಗೆಯಿಂದ ಬಿತ್ತು ವದು ಉತ್ತಮವು ಎರಡೆತ್ತರ ಬಿತ್ತಬೇಕಾದರೆ ಎಂಟು ಬೆರಳು ಅಗಲವಾಗಿ ತಾಳು ಹಾಸಬೇಕು ಒಂದೇ ಎತ್ತರ ಬಿತ್ತಬೇಕಾದರ ಹನ್ನೆರಡು ಬೆರಳು ಅಗಲವಾಗಿ ತಾಳು ಹಾಸಬೇಕು ಈ ಪ್ರಕಾರದ ಕೂರಿಗೆಯಿಂದ ಭೂಮಿಯ ಅನುವರಿತು ನೆಲ್ಲು ಬಿತ್ತಿದ ಮೇಲೆ ಕೆಲವು ದಿವಸದಲ್ಲಿ ಅದರೊಳಗೆ ಸದಿ ಹುಟ್ಟುತ್ತ ಹೋದ ಹಾಗೆ ಎರಡು ಮೂರು ವೇಳೆ ಸದಿಯನ್ನು ತಗಿಸಬೇಕು. ಹೀಗೆ ಅದರ ಆರೈಕೆಯನ್ನು ಮಾಡಿವರೆ ಯಥೇಚ್ಛವಾಗಿ ಗದ್ದೇ ನೆಲ್ಲಿನಂತೆ ನೆಲ್ಲು ಬೆಳೆಯಾಗುವದು.

ನೆಲ್ಲು ಬಿತ್ತುವ ಭೂಮಿಯು ಬಹಳ ಕಸುವಿನ ಭೂಮಿಯಲ್ಲದಿದ್ದರೆ ಹಿಂದೆ ಹೇಳಿದ ಹಾಗೆ ಎರಡತ್ತರವಾಗಿ ಬಿತ್ತದೆ ಪೂರ್ವ ಪಶ್ಚಿಮಕ್ಕೆ ಆಗಲಿ ಅಥವಾ ಉತ್ತರ ದಕ್ಷಿಣಕ್ಕೆ ಆಗಲಿ ಸಾಲಾಗಿ ಬಿತ್ತಿ ಅದರ ಆರೈಕೆಯನ್ನು ಮಾಡುವಲ್ಲಿ ಎಡೆಯ ಹೊಡೆಯುವದನ್ನು ಮತ್ತು ಸದಿಯ ತೆಗಿಸುವದನ್ನು ಈ ಪ್ರಕರಣದ ಹಿಂದಿನ ಕಲಮಿನಲ್ಲಿ ಹೇಳಿದ ಹಾಗೆ ಯಥಾ ಪ್ರಕಾರವಾಗಿ ಮಾಡಿ ದರೆ ಚನ್ನಾಗಿ ಅಭಿವೃದ್ಧಿಯನ್ನು ಹೊಂದುತ್ತದೆ

ನೆಲ್ಲು ಬೆಳೆಯನ್ನು ತೆಗೆದುಕೊಂಡು ಆ ಭೂಮಿಯಲ್ಲಿ ಮಡಿಕೆಯ ಹೊಡೆದು ಬುಕ್ಯಾಕಟ್ಟಿ ಕಡಲಿಯನ್ನು ಬಿತ್ತಬೇಕು. ಆ ಕಡಲಿಯ ಬೆಳೆಯಾದರೂ ಚನ್ನಾಗಿ ಆಗುವದು. ಈ ಪ್ರಕಾರವಾಗಿ ಯಾವತ್ತು ದೇಶದಲ್ಲಿ ಯಾವ ಪ್ರಕಾರದ ಭೂಮಿ ಯಲಲ್ಲಾದರೂ ಒಡ್ಡು ಹಾಕಿಸಿ ಸ್ವಲ್ಪ ನೀರು ನಿಲ್ಲುವ ಹಾಗೆ ಮಾಡಿದರೆ ಎರಿಯ ಭೂಮಿಯಲ್ಲಿಯೂ ಉಸುಕು ಭೂಮಿಯಲ್ಲಿಯೂ ಉಸುಕು ಮಿಶ್ರ ವಾದ ಕೆಂಪು ಕರಲು ಹಾಳು ಸವಳು ಕೇಸರಿ ಮೊದಲಾದ ಭೂಮಿಗಳ

ಲ್ಲಿಯೂ ಅಚ್ಚ ಕರಲು ಗುಡ್ಡದ ನಾಡುಗಳಲ್ಲಿಯೂ ಬೆಟ್ಟದ ಪ್ರದೇಶದಲ್ಲಿಯೂ
ಅಚ್ಚುಕರಲು ಸವಳು ಜೋಗು ಮೊದಲಾದ ಭೂಮಿಗಳಲ್ಲಾದರೂ ಸ್ವಲ್ಪ
ಒಡ್ಡು ಹಾಕಿಸಿ ವಂಡು ನಿಲ್ಲುವ ಹಾಗೆ ಮಾಡಿ ಗೊಬ್ಬರವನ್ನು ಹಾಕಿದರೆ
ಯಾವ ಭೂಮಿಯಲ್ಲಾದರೂ ನೆಲ್ಲು ಬೆಳೆಯುವದಕ್ಕೆ ಸಂಶಯವಿಲ್ಲವು.

ಹೊಳೆಯಾಗಲಿ ಕೆರೆಯಾಗಲಿ ಹಳ್ಳದ ತಲೆಪರವು ಕತಿಬಿಗಳು ಮುಂತಾದ
ಸ್ಥಲಗಳಲ್ಲಿ ಕಾವಲಿಯನ್ನು ಮಾಡಿ ಬಿಡುಗಾವಲಿಗಳು ಹರಿಯುತ್ತಿದ್ದರೆ ಅಂಥ
ಪ್ರದೇಶವಲ್ಲಿ ಬತ್ತದ ಗದ್ದೆಗಳನ್ನು ಮಾಡಿಕೊಂಡಿರುವದು ಪೂರ್ವಕಾಲದಿಂದ
ಇವೊತ್ತಿನ ವರೆಗೂ ನಡೆಯುತ್ತಾ ಬಂದಿರುವದು ಅಂದರೆ ಅಂಥ ಸ್ಥಳಗ
ಳಲ್ಲಾದರೂ ಈ ಪ್ರಾಂತದ ಭೂಮಿಯು ಉತ್ತಮವಾದುದರಿಂದ ಕೂರಿಗೆ
ಯಿಂದ ನೆಲ್ಲು ಬಿತ್ತುವದು ಉತ್ತಮವು ಯಾತಕ್ಕಂದರ ಈ ಪ್ರಾಂತದ
ಭೂಮಿಯು ಸ್ವಲ್ಪ ಪ್ರಯತ್ನದಿಂದ ಹಸನಾಗಿ ಕರಿಕೆಯೂ ಹೋಗುತ್ತದೆ.
ಕೆಲವು ದೇಶದಲ್ಲಿ ಎಷ್ಟು ಪ್ರಯತ್ನಮಾಡಿದಾಗ್ಯಾದರೂ ಕರಿಕೆಯು ಹೋಗದೆ
ಇರುವದರಿಂದ ಅನಿರ್ವಾಹ ಪಕ್ಷಕ್ಕೆ ಇಂಥ ಭೂಮಿ ಇದ್ದವರು ಗದ್ದೆಯನ್ನು
ಮಾಡಿಕೊಳ್ಳಲಿಕ್ಕೆ ಬೇಕು. ಈ ದೇಶದ ಭೂಮಿಯು ಹಾಗಲ್ಲ. ಇಲ್ಲಿ ಕೂರಿ
ಗೆಯಿಂದ ನೆಲ್ಲು ಬಿತ್ತುವದೇ ವಿಹಿತವು. ಇದಕ್ಕೆ ಬಹಳ ಶ್ರಮವು ಬೇಕಾ
ಗುವದಿಲ್ಲ ಗದ್ದೆಯ ನೆಲ್ಲಿಗೆ ಶ್ರಮವು ಬಹಳ ಮತ್ತು ಎಲ್ಲ ಠಿಕಾಣಿಯಲ್ಲಿ
ಬೆಳೆಯಾಗುವ ಹಾಗಿಲ್ಲ ಅದಕ್ಕ ಬಿಡುಗಾವಲಿಯ ನೀರಿನ ಹೊರ್ತು ಕಾವಲಿ
ಇಲ್ಲದಲ್ಲಿ ಬೆಳೆಯುವದಿಲ್ಲ. ಈ ಹಿಂದೂ ದೇಶದ ದಕ್ಷಿಣಪ್ರಾಂತವು ಉಷ್ಣ
ಪ್ರದೇಶವಾದ ಕಾರಣ ಈ ದೇಶದ ಯಾವ ಭೂಮಿಯಲ್ಲಾದರೂ ನೆಲ್ಲು
ಬೆಳೆಯುವದಕ್ಕೆ ಸಂಶಯವಿಲ್ಲವು ಅದು ಕಾರಣ ಎರಿಯ ಭೂಮಿಗಳಲ್ಲಿ
ಗುಡ್ಡದ ನಾಡುಗಳಲ್ಲಿ ಬಯಲು ಸೀಮೆಯಲ್ಲಿ ಹೊಲಗಳಲ್ಲಿ ನೆಲ್ಲು ಬಿತ್ತು
ವದನ್ನು ಜನರು ಯತ್ನೈಸದ್ದರಿಂದ ಅಂಥವರು ಜೋಳದಿಂದಲೇ ಜೀವನ
ವನ್ನು ಮಾಡಬೇಕಾಗುತ್ತದೆ.

ಶ್ರೀಮಂತರೂ ಐಶ್ವರ್ಯವುಳ್ಳವರೂ ಎಷ್ಟು ತುಟ್ಟಿಯಾದರೂ ಅಕ್ಕಿ
ಯನ್ನು ಕ್ರಯಕ್ಕೆ ತೆಗೆದುಕೊಂಡು ಉಣ್ಣುತ್ತಾರೇ ಹೊರ್ತು ಬಡಜನರು
ಅಕ್ಕಿಯನ್ನು ಉಣ್ಣಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದಾಗ್ಯೂ ನಿತ್ಯದಲ್ಲು ಅವ
ರಿಗೆ ಅದು ಸಿಕ್ಕುವದು ದುರ್ಲಭವಾಗಿರುವದು ಆದರೆ ಯಾವತ್ತು ಜನರು
ತಮ್ಮ ತಮ್ಮ ಯೋಗ್ಯತೆಯ ಪ್ರಕಾರ ಕೈಲಾದ ಮಟ್ಟಿಗೂ ತಮ್ಮ ಹೊಲಗ
ಳಲ್ಲಿ ಒಡ್ಡು ಹಾಕಿಸಿ ನೆಲ್ಲು ಬೆಳೆಯುವ ಹಾಗೆ ಮಾಡಿಕೊಂಡರೆ ತಮ್ಮ
ತಮ್ಮ ಮನೋರಥವಿದ್ದಂತೆ ಚನ್ನಾಗಿ ಅಕ್ಕಿಯನ್ನು ದಿನಂಪ್ರತಿಯಲ್ಲಿ ಉಣ್ಣ
ಬಹುದು.

ಉಷ್ಣ ಪ್ರದೇಶದಲ್ಲಿ ನೆಲ್ಲು ಬೆಳೆಯು ಚನ್ನಾಗಿ ಆಗುವದರಿಂದ ಈ ಹಿಂದೂ ದೇಶದಲ್ಲಿ ದಕ್ಷಿಣಭಾಗವಾದ ನರ್ಮದಾ ನದಿಯಿಂದ ದಕ್ಷಿಣ ಸಮುದ್ರದ ವರೆಗೂ ಪೂರ್ವ ಪಶ್ಚಿಮ ಸಮುದ್ರದ ಕಡೆಗೂ ಉಷ್ಣ ಪ್ರದೇಶವಾದ ಭೂಮಿಯಾದುದರಿಂದ ಈ ದೇಶದ ಯಾವತ್ತು ಭೂಮಿಗಳಲ್ಲಿ ಸ್ವಲ್ಪ ಮೆಹನತಿಯಿಂದ ತಮ್ಮ ಯೋಗ್ಯತಾನುಸಾರವಾದರೂ ನೆಲ್ಲು ಹೊಲವನ್ನು ಮಾಡಿಕೊಂಡಿದ್ದರೆ ತಮ್ಮ ವಂಶಪರಂಪರೆಯಾಗಿ ಸೌಖ್ಯದಿಂದಿರುವರು. ಆದರೆ ನಮ್ಮ ದೇಶಬಾಂಧವರಾದ ಯಾವತ್ತು ರೈತ ಜನರು ಭೂಮಿಯನ್ನು ತಿದ್ದಿಕೊಂಬುವ ವಿಷಯದಲ್ಲಿ ಕಷ್ಟ ಮಾಡುವ ವಿಷಯದಲ್ಲಿ ಹಿಂಜರಿಯದೆ ತಮ್ಮ ಶ್ರಮದ ಮೇಲೆ ಲಕ್ಷಕೊಡದೆ ಮುಂದೆ ತಮಗೆ ಅನಂತ ಕಾಲದ ವರಗೂ ಆಗುವಂಥ ಸೌಖ್ಯದ ಸ್ಥಿತಿಯಲ್ಲಿಯೂ ಪ್ರಯೋಜನದಲ್ಲಿಯೂ ಲಕ್ಷಕೊಟ್ಟು ಭೂಮಿಯನ್ನು ತಿದ್ದಿಕೊಳ್ಳಬೇಕು

ಸರ್ವ ಜನರು ತಮ್ಮ ಕೈಲಾದ ಮಟ್ಟಿಗೂ ನೆಲ್ಲು ಹೊಲವನ್ನು ಮಾಡಿಕೊಳ್ಳಬೇಕು "ಸರ್ವಾರಂಭೈಃ ಸ್ತಂಡುಲ ಪ್ರಸ್ಥಮೂಲೈಃ" ಎಂಬ ವಾಕ್ಯ ಪ್ರಮಾಣವುಂಟು ಆದರಿಂದ ಸರ್ವ ಶುಭಕಾರ್ಯಗಳಿಗೂ ಸಕಲ ಪ್ರಯೋಜನಗಳಿಗೂ ಗುರುದೈವತಾದಿ ಸರ್ವ ಸಂತೃಪ್ತಿಗೂ ಮುಖ್ಯವಾಗಿ ಸರ್ವರಿಗೂ ಬೇಕಾಗುವದಾದ ರಾಜಾನ್ನವೆಂದು ವರ್ಣಿಸಿಕೊಳ್ಳುವಂಥ ಮನುಷ್ಯರುಗಳ ಭೋಜನ ಸಂಗ್ರಹದಲ್ಲಿ ದಿವ್ಯ ಸಂಗ್ರಹವಾದ ಈ ನೆಲ್ಲು ಅಕ್ಕಿಯು ಬೆಳೆಯನ್ನು ಸರ್ವರೂ ಸಮೃದ್ಧಿಯಾಗಿ ಮಾಡಿಕೊಳ್ಳುವದು ಯುಕ್ತವಾಗಿರುವದು

ಒಂದಾನೊಂದು ಸಮಯಕ್ಕೆ ಹತ್ತಂಟು ವರ್ಷದಲ್ಲಿ ಸ್ವಲ್ಪ ಮಳೆಗಾಲವು ಕಡಿಮೆಯಾದರೆ ಅಥವಾ ಹದದ ಕಾಲಕ್ಕೆ ಮಳೆಯಾಗದ ಮಳೆಯು ಸ್ವಲ್ಪ ತಡೆದರೆ ಒಂದೊಂದು ವರ್ಷ ನೆಲ್ಲು ಬೆಳೆಯು ಕೆಡುತ್ತಿರುವದು ಅದಕ್ಕೆ ಕೆಲವರು ಭಯಸ್ತರಾಗಿ ನೆಲ್ಲು ಬೆಳೆಯುವದಿಲ್ಲವಂದು ಬಿಟ್ಟುಬಿಡುತ್ತಾರೆ ಅಂಥ ಸಮಯದಲ್ಲಿ ನೆಲ್ಲು ಬಿತ್ತಿದ ಹೊಲದಲ್ಲಿ ಭಾವಿ ಇದ್ದರೆ ಮಳೆಯು ತಡೆದ ಸಮಯದಲ್ಲಿ ಒಂದು ವೇಳೆ ಅಥವಾ ಎರಡು ವೇಳೆ ನೀರು ಹಾಸಿದರೆ ನೆಲ್ಲು ಕೆಡದೆ ಕೈಗೆ ಬರುವದು ಮತ್ತು ಆ ನೆಲ್ಲು ಹೊಲದ ಸಮೀಪದಲ್ಲಿ ಹಳ್ಳವಿರಲಿ, ಮತ್ತೇನಾದರೂ ನೀರಿನ ಆಸ್ಪದವಿದ್ದು ಹೊತ್ತು ತಂದು ಹಾಕುವದಕ್ಕೆ ಆಟೋಪವಿದ್ದರೆ ಹೊತ್ತಾದರೂ ಹಾಕಿ ಒಂದಾವರ್ತಿ ಹುಲ್ಲು ಒಣಗುವ ಸಮಯದಲ್ಲಿ ತೋಯಿಸಿ ಬಿಟ್ಟರೆ ಪರಮೇಶ್ವರನ ಕೃಪೆಯಾಗಿ ಮಳೆಯಾದರೂ ಆಗುವದು ಇಲ್ಲವೆ ಬೆಳೆಯಾದರೂ ಆಗುವದು ಆದರೆ ಇಂಥ ಕಾಲಗಳು ಸರ್ವದಾ ಬರುವದಿಲ್ಲ. ಅಕಲ್ಪಿತವಾಗಿ ಬರುತ್ತವೆ. ಇದಕ್ಕೋಸ್ಕರ ಭಯಸ್ತರಾಗದೆ ಸರ್ವದಾ ಪ್ರತಿವರ್ಷಕ್ಕೊಮ್ಮೆ ನೆಲ್ಲು ಬಿತ್ತುತ್ತಲೇ ಬೇಕು. ಯಾರಾದರೂ ತಮ್ಮ ಸ್ವಾಧೀನದಲ್ಲಿ ಇರುವಂಥ ಹೊಲಗ

ಳೊಳಗೆ ಉತ್ತಮ ಭೂಮಿ ಯಾವದದೆಯೋ ಆ ಹೊಲದಲ್ಲಿ ಸ್ವಲ್ಪಾದರೂ ನೆಲ್ಲು ಬೆಳೆಯುವ ಹಾಗೆ ಮಾಡಿಕೊಳ್ಳಬೇಕು ಅದಕ್ಕೆ ಬಹಳ ಶ್ರಮವು ಬೇಕಾಗುವದಿಲ್ಲ. ಮತ್ತು ಅಕಲ್ಪಿತವಾಗಿ ಅರಗಾಲ ಬರಗಾಲಗಳು ಇಲ್ಲವೇ ಮಳೆಯು ತಡೆದು ಆಗುವ ಕಾಲವು ಇಂಥ ಕಾಲಗಳು ಯಾವಾಗಲೂ ಬರುವದಿಲ್ಲ. ಅವು ಅಕಲ್ಪಿತವಾಗಿ ಬರುವವೇ ಹೊರ್ತು ಸರ್ವದಾ ಹಾಗೆ ಆಗುವದಿಲ್ಲ. ಆದು ಕಾರಣ ವಿಪರೀತ ಮತಿಯಿಂದ ಇಂಥ ಉಪಯೋಗ ವಿಲ್ಲದ ದೂರದ ಅಂದೇಶವನ್ನು ತೆಗೆದುಕೊಂಡು ಮನಸ್ಸಿನ ಉತ್ಸಾಹವನ್ನು ಕಡಿಮೆ ಮಾಡಿಕೊಳ್ಳಬಾರದು ಒಂದು ಪಕ್ಷಕ್ಕ ಮುಂಗಾರಿಯು ಮಳೆಯೂ ಕಡಿಮೆಯಾಗಿ ನೆಲ್ಲು ಒಣಗಿದರೆ ಅದನ್ನು ಹರಿಗಿ ಮುಂಡೆ ಹಿಂಗಾರೀ ಮಳೆ ಯಲ್ಲಿ ಕಡಲೆಯನ್ನು ಅಥವಾ ಬಿಳಿಜೋಳವನ್ನು ಬಿತ್ತುವದಕ್ಕೆ ಬರುವದು ಅದು ಕಾರಣ ಆ ಭೂಮಿಯು ವ್ಯರ್ಥವಾಗುವದಿಲ್ಲ ದೇವರು ಹದದ ಮೇಲೆ ಮಳೆಯನ್ನು ಕೊಟ್ಟರ ಎರಡೂ ಬೆಳೆಗಳು ಸಮೃದ್ಧಿಯಾಗುವವು. ಇಲ್ಲವೆ ಒಂದು ಬೆಳೆಗಂತೂ ಸಂಶಯವಿಲ್ಲ ರೈತಜನರು ವಿಪರೀತ ಕಲ್ಪನೆಯಿಂದ ತಮ್ಮೊಳಗೆ ತಾವೇ ಅನಿಷ್ಟ ಚಿಂತನೆಯನ್ನು ಕಲ್ಪಿಸಿಕೊಂಡು ಮಾಡುವ ಕೆಲ ಸವನ್ನು ಬಿಟ್ಟುಬಿಡಲಾಗದು ಒಂದು ವರ್ಷ ನೆಲ್ಲು ಬೆಳೆಯು ಕೆಟ್ಟ ಕಾಲ ಕ್ಕಾದರೂ ಪ್ರತಿವರ್ಷ ಬಿತ್ತುವದನ್ನು ಬಿಡಲಾಗದು

ನೆಲ್ಲು ಬಿತ್ತುವದಕ್ಕೆ ಮೃಗಶಿರ ಮಳೆಗೆ ಹಸಿಯಾದರೆ ಯಾವ ಚರಣ ದಲ್ಲಿಯಾದಂೂ ಬಿತ್ತುವದಕ್ಕೆ ಸಂಶಯ ವಿಲ್ಲವು ಮತ್ತು ಮೃಗಶಿರದಲ್ಲಿ ಹಸಿ ಯಾಗದಿದ್ದರೆ ಆರದ್ರಿಯ ಕಡೆಯ ಚರಣದ ವರೆಗೂ ಕೂರಿಗೆಯಿಂದ ನೆಲ್ಲು ಬಿತ್ತುವದಕ್ಕ ಆತಂಕವಿಲ್ಲ

ನೆಲ್ಲು ಬಿತ್ತುವ ಕಾಲವು ಮೃಗಶಿರ ಮಳೆಯ ನಾಲ್ಕು ಚರಣದಲ್ಲಿ ಬಿತ್ತುವದು ಉತ್ತಮವು ಆರದ್ರಿಯಲ್ಲಿ ಬಿತ್ತುವದು ಸ್ವಲ್ಪ ಮಧ್ಯಮವು ಪುಷ್ಯದಲ್ಲಿ ಬಿತ್ತುವದು ಸಾಮಾನ್ಯವು ಅಸಿವಾರ್ಹ ಪಕ್ಷಕ್ಕೆ ಬಿತ್ತಬೇಕು ಮತ್ತು ಅಲ್ಲಿ ಬಾವಿ ಇದ್ದರೆ ಸಂಶಯವಿಲ್ಲದ ಬಿತ್ತಬೇಕು ಈ ಮಳೆಗಳು ಹಸಿಮಾಡದಿದ್ದರ ಆ ಹೊಲಗಳಿಗೆ ನೆಲ್ಲು ಬಿತ್ತಬಾರದು. ಉಳಿದ ಪದಾರ್ಥ ಗಳನ್ನು ಬಿತ್ತಿಕೊಳ್ಳಬೇಕು

ನೆಲ್ಲು ಬೆಳೆಯನ್ನು ಪೂರ್ವಕಾಲದಿಂದ ಬಿಡುಗಾವಲಿಗಳಿದ್ದಲ್ಲಿ ಸಮುದ್ರದ ಸಮೀಪದಲ್ಲಿ ಕೊಂಕಣದಲ್ಲಿ ಪೂರ್ವ ಪಶ್ಚಿಮ ಗಟ್ಟದ ಕೆಳಗಿನ ಪ್ರದೇಶ ಗಳಲ್ಲಿ ತೆಲುಗಾಣ್ಯದಲ್ಲಿ ಮಲೆಪ್ರಾಂತ ಚೋಳ ಮಂಡಲವಲ್ಲಿ ಗದ್ದೆಗಳನ್ನು ಮಾಡಿ ಬಿತ್ತಿ ಬೆಳೆಯುವ ಸಾಂಪ್ರದಾಯವು ಅದೆ. ಆದರೆ ಮಧ್ಯ ಹಿಂದುಸ್ತಾನ ದಕ್ಷಿಣ ಹಿಂದುಸ್ತಾನದ ಯಾವತ್ತು ಭೂಮಿಯಲ್ಲಿ ಕೂರಿಗಿ

ನೆಲ್ಲು ಬೆಳೆಯುವ ಹಾಗೆ ಇದ್ದ ಕಾಲಕ್ಕೂ ಸರ್ವರೂ ಬೆಳೀ ಮಾಡಿಕೊಳ್ಳುವದಿಲ್ಲ.

ಹಿಂದೆ ಕೆಲವು ಪ್ರಕರಣಗಳಲ್ಲಿ ಹೇಳಿದ ಹಾಗೆ ಒಡ್ಡು ಹಾಕಿಸಿ ಗೊಬ್ಬರವನ್ನು ಹರವಿಸಿ ಅದಕ್ಕೆ ಮಾಡತಕ್ಕ ಯಾವತ್ತು ಸಾಧನದಿಂದ ಭೂಮಿಯನ್ನು ತಿದ್ದಿಕೊಂಡು ಸ್ವಲ್ಪ ನೀರು ನಿಲ್ಲುವ ಹಾಗೆ ಮಾಡಿದರೆ ಯಾವತ್ತು ಬೈಲು ಹೊಲಗಳಲ್ಲ ನೆಲ್ಲು ಬಿತ್ತುವದರಿಂದ ಗದ್ದೆಯು ನೆಲ್ಲಿನ ಹಾಗೆ ಬೆಳೆಯಾಗುವದು ಬಲವಂತರಾದರೆ ಎಷ್ಟಾದರೂ ಮಾಡಿಸುವದಕ್ಕೆ ಸಂಶಯವಿಲ್ಲ. ಎರಡು ಕೂರಿಗಿ ನೆಲ್ಲು ಹೊಲವನ್ನು ಮಾಡಿಕೊಂಡರೆ ಪ್ರತಿವರ್ಷಕ್ಕೂ ಎಂಭತ್ತು ಹೇರು ಮತ್ತು ವಿಶೇಷ ಬೆಳೆಯಾದರ ನೂರು ಹೇರು ನೆಲ್ಲು ಬೆಳೆಯಬಹುದು. ಅಥವಾ ಬಹಳ ಶ್ರಮದಿಂದ ಕೂರಿಗಿ ಎರಡು ಕೂರಿಗಿ ಭೂಮಿಯಲ್ಲಿ ನೀರು ನಿಲ್ಲುವ ಹಾಗೆ ಮಹತ್ತರವಾದ ಒಡ್ಡು ಹಾಕಿಸುವ ತ್ರಾಣವಿಲ್ಲದವರು ತಮ್ಮ ಹೊಲದೊಳಗೆ ಒಂದು ಎಕರೆ ಅಥವಾ ಎರಡು ಎರಡು ಎಕರ ಭೂಮಿಯಷ್ಟಕ್ಕಾದರೂ ನೀರು ನಿಲ್ಲುವ ಹಾಗೆ ಒಡ್ಡು ಹಾಕಿಸಿ ನಲ್ಲು ಬಿತ್ತಿಕೊಳ್ಳಬೇಕು. ಮತ್ತು ತೀರ ನಿತ್ರಾಣಿಗಳಾದ ಬಡವರಾದರೂ ಸಹ ತಮ್ಮ ಹೊಲದ ನಾಲ್ಕೂ ಮೂಲೆಗಳಲ್ಲಿ ಒಂದು ಮೂಲೆಯಲ್ಲಾದರೂ ತಮ್ಮ ಯೋಗ್ಯತೆಯ ಪ್ರಕಾರಕ್ಕೆ ಮೂರು ದಿಕ್ಕಿಗೂ ಗೇಣು ಒಂದುವರೆ ಗೇಣು ಅಥವಾ ಒಂದು ಮೊಳ ಒಡ್ಡು ಇಟ್ಟು ಅದರ ಮಧ್ಯದಲ್ಲಿಯ ಭೂಮಿಯನ್ನು ಸಮತಳ ಮಾಡಿ ಚನ್ನಾಗಿ ಗೊಬ್ಬರ ಹಾಕಿ ಮಡಿಕೆ ಹೊಡೆದು ಎರಡು ಸಾಲು ಮೂರು ಸಾಲು ಚನ್ನಾಗಿ ಹರಿಗಿ ಒಂದು ಬಿಘೆ ಅರ್ಧ ಬಿಘೆಯಾದರೂ ನೆಲ್ಲು ಹೊಲವನ್ನು ಮಾಡಿಕೊಳ್ಳಬೇಕು. ಮತ್ತು ಸಮಸ್ತ ಎರಿಗಳಲ್ಲಿ ನೆಲ್ಲು ಬೆಳೆಯನ್ನು ಮನಗಾಣಬೇಕಾದರೆ ಒಂದು ಉಡಿಯ ಬೀಜವನ್ನು ಹಿಡಿಯುವಷ್ಟು ಭೂಮಿಯನ್ನಾದರೂ ಇದರಂತೆ ಮಾಡಿ ನೆಲ್ಲು ಬಿತ್ತಿ ನೋಡಿದರೆ ಖಾತ್ರಿಯಾಗುವದು ಮುಂದೆ ಬಹಳವಾಗಿ ಬಿತ್ತಬೇಕೆಂಬ ರುಚಿಯು ತನ್ನಿಂದ ತಾನೇ ಹುಟ್ಟುತ್ತದೆ.

ಎರಿಯ ಹೊಲಗಳಲ್ಲಿ ನೆಲ್ಲು ಚನ್ನಾಗಿ ಬೆಳೆಯುತ್ತದೆ. ಅದಕ್ಕೆ ಮಾತ್ರ ಸ್ವಲ್ಪ ಒಡ್ಡು ಹಾಕಿಸಿ ಗೇಣು ಚೋಟು ಅಥವಾ ಎಂಟು ಹತ್ತು ಬೆರಳಾದರೂ ನೀರು ನಿಲ್ಲುವ ಹಾಗೆ ಮಾಡಿದರೆ ಸಾಕು ನೆಲ್ಲು ಹೊಲಕ್ಕೆ ಗೊಬ್ಬರದ ಕಾವು ಹೆಚ್ಚಾದ ಹಾಗೆ ಬೆಳೆಯು ಉತ್ಕೃಷ್ಟವಾಗುವದು. ಅದು ಕಾರಣ ನೆಲ್ಲು ಹೊಲಕ್ಕೆ ಕುರಿಯನ್ನು ತರುಬಿಸುವದು ಗೊಬ್ಬರಹಾಕುವದು ಅಗತ್ಯವಾಗಿದೆ. "ಹಾಕೋ ಗೊಬ್ಬರ ಬೆಳೀ ನೋಡೋ ಅಬ್ಬರ" ಮತ್ತು "ಬಿತ್ತೋ ಬತ್ತ" ಎಂದು ಗಾದೆ ಯುಂಟಾಗಿ ಗೊಬ್ಬರ ವಿಲ್ಲದೆ ನೆಲ್ಲು ಬೆಳೆಯಾಗದಾಗಿ ಯಾವ್ಹಾ

ಗಲೂ ಪ್ರತಿವರ್ಷಕ್ಕೂ ಗೊಬ್ಬರವನ್ನು ಹಾಕಬೇಕು. ಹಾಗು ಹದವರಿತು ಕುರಿಯನ್ನು ತರುಬಿಸಬೇಕು.

ಈ ಪ್ರಕರಣದಲ್ಲಿ ಹೇಳಿದ ಪ್ರಕಾರ ಸರ್ವ ಜನರು ಪ್ರಯತ್ನದಿಂದ ಭೂಮಿಯನ್ನು ತಿದ್ದಿಕೊಂಡು ನೆಲ್ಲು ಬೆಳೆಯನ್ನು ಮಾಡಿಕೊಳ್ಳಬೇಕು. ಹೀಗೆ ಮಾಡದೆ ಭೂಮಿಯಲ್ಲಿ ಬರೀ ಜೋಳವನ್ನೇ ಬಿತ್ತುವದರಿಂದ ಆ ಭೂಮಿಯ ಉತ್ಪನ್ನವು ಕಡಿಮೆಯಾಗಿ ರೈತ ಜನರ ದಾರಿದ್ರ್ಯ ಹಿಂಗದು. ಮೊರಡಿಯ ಭೂಮಿಗಳಲ್ಲಿ ಹಾಗೂ ಉಸುಕು ಭೂಮಿಯಲ್ಲಿ ಕೇಸರಿಗಳಲ್ಲಿ ಕರಲು ಭೂಮಿ ಗಳಲ್ಲಿ ಮುಂಗಾರಿಯು ಹೊರ್ತು ಮತ್ತೇನೂ ಬೆಳಿಯದು. ಅಂಥ ಭೂಮಿ ಯಲ್ಲಾದರೂ ತಿದ್ದುವಿಕೆಯಿಂದ ನೆಲ್ಲು ಬೆಳೆಯುತ್ತದೆ ಮತ್ತು ಕಡಲಿ ಅವರಿ ಮುಳ್ಳುಜವೆ ಮೊದಲಾದ ಇನ್ನೂ ಕೆಲವು ಪದಾರ್ಥಗಳು ಬೆಳೆಯು ವದಕ್ಕೆ ಸಂಶಯವಿಲ್ಲವು.

ನೆಲ್ಲು ಹೊಲವು ಉತ್ತಮ ಭೂಮಿಯಾಗಲಿ ಅಥವಾ ಕನಿಷ್ಠಸ್ಥಿತಿಯ ಭೂಮಿಯಾಗಲಿ ಅದರಲ್ಲಿ ಕುರಿಯನ್ನು ತರುಬುವದು ಅತ್ಯಂತ ಪ್ರಯೋಜನವು. ಮತ್ತು ನೆಲ್ಲು ಬಿತ್ತುವ ಹೊಲಕ್ಕೆ ವರ್ಷವರ್ಷಕ್ಕೂ ಗೊಬ್ಬರ ಹಾಕಿ ಮಡಿ ಕೆಯ ಹೊಡೆದು ಹಂಗಿ ಬಿತ್ತಬೇಕು.

ಮೃಗಶಿರ ಆರದ್ರಿ ಈ ಎರಡು ಮಳೆಗಳು ಹಸಿಮಾಡವೆ ಹೋದರೆ ಆ ಭೂಮಿಗ ಪುಷ್ಯ ಪುನರ್ವಸು ಮಳೆಗಳಲ್ಲಿ ಮುಂಗಾರಿಯನ್ನು ಬಿತ್ತಬೇಕು. ಗೊಬ್ಬರದ ಸೂಕ್ಕಿನಿಂದ ವಿಶೇಷ ಬೆಳೆಯಾಗುವದು.

ಮೃಗಶಿರದಿಂದ ಪುಷ್ಯ ಪುನರ್ವಸು ಮಳೆಗಳ ಅಂತ್ಯದ ವರೆಗೂ ಹಸಿ ಯಾಗದೆ ಅಶ್ಲೇಷ ಮಘಾ ಮಳೆಯಲ್ಲಿ ಹಸಿಯಾದರೆ ಬಹಳವಾಗಿ ನೆಜ್ಜೆಯನ್ನು ಸ್ವಲ್ಪ ಜೋಳವನ್ನು ಕೂಡಿಸಿ ಬಿತ್ತಬೇಕು. ಅಷ್ಟರಲ್ಲಿ ಹಸಿಯಾಗದೆ ಹೋದರೆ ಅದಕ್ಕೆ ಕಡಲಿಯನ್ನು ಬಿತ್ತಬೇಕು

ನೆಲ್ಲು ಬತ್ತವನ್ನು ಎಷ್ಟು ದಿವಸಗಳ ವರೆಗೂ ಕಣಜಗಳಲ್ಲಿ ತುಂಬಿ ಇಟ್ಟರೆ ಕೆಡುವದಿಲ್ಲ. ಹಳೆಯ ಭತ್ತವಾದ ಹಾಗೆ ಅಕ್ಕಿಯೂ ಉತ್ತಮವಾಗಿ ಅನ್ನವೂ ವಿಶೇಷ ರುಚಿಕರವಾಗಿ ಇರುವದು

ಗದ್ದೆಯ ನೆಲ್ಲಿಗೆ ನೀರು ಕಡಿಮೆಯಾದರೆ ಕೆಡುತ್ತಿಹುದು. ಆದರೆ ಗದ್ದೆ ಗಳಲ್ಲಿ ಬೆಳೆದಿರುವ ಸಣ್ಣ ಕಾಳಾದ ಉತ್ತಮ ತರದ ನೆಲ್ಲು ಬೀಜವನ್ನು ತಂದು ಕೂರಿಗೆಯಿಂದ ಬಿತ್ತಿದರ ನೀರು ಬಹಳ ಬೇಕಾಗುವದಿಲ್ಲ. ಯಾವ ಭೂಮಿ ಯಲ್ಲಿಯಾದರು ಮಳೆಗಾಲದಲ್ಲಿ ನೀರು ತಂಸು ಹಿಡಿದಿದ್ದರೆ ಅಷ್ಟಕ್ಕೆ ಬೆಳೆ

ಯುತ್ತದೆ. ಇದಕ್ಕೆ ಗದ್ದೆಯ ನೆಲ್ಲು ಬೀಜವನ್ನಾದರು ಅನೇಕ ಪ್ರಕಾರವಾದ ಸಣ್ಣನಾದ ಗಂಧಶಾಲಿಗಳು ಮುಂತಾದ ಬೀಜಗಳನ್ನು ತಂದು ಕೂರಿಗೆಯಿಂದ ಬಿತ್ತಿ ಬೆಳೆಯುವದಕ್ಕೆ ಏನೇನು ಸಂಶಯವಿಲ್ಲ ಅಥವಾ ಕೂರಿಗಿ ನೆಲ್ಲು ಬೀಜವು ಸಿಕ್ಕರೂ ಅವುಗಳನ್ನು ಉತ್ತಮ ತರದ ಅಕ್ಕಿಯಾದರೆ ಬಿತ್ತಬೇಕು. ಇಲ್ಲವೆ ಗದ್ದೆಯ ನೆಲ್ಲಿನ ಚಲೋ ಬೀಜವನ್ನು ತರಿಸಿ ಬಿತ್ತಬೇಕು. ಕೂರಿಗಿ ನೆಲ್ಲು ಬೀಜವನ್ನು ಗದ್ದೆಯಲ್ಲಿ ಬಿತ್ತಿದರೆ ಗದ್ದೆಯ ನೆಲ್ಲು ಎನಿಸುವದು ಗದ್ದೆಯ ನೆಲ್ಲು ಬೀಜವನ್ನು ಕೂರಿಗೆಯಿಂದ ಹೊಲದಲ್ಲಿ ಬಿತ್ತಿದರೆ ಕೂರಿಗಿ ನೆಲ್ಲು ಎನಿಸುವದು ಆದರೆ ಅಕ್ಕಿಯು ಬದಲಾಗದೆ ಯಾವ ಬೀಜವನ್ನು ಬಿತ್ತಿದರೆ ಅದರಂತೆ ಅಕ್ಕಿಯಾಗುವವು ಅದು ಕಾರಣ ಚಲೋ ಬೀಜವನ್ನೇ ತರಿಸಿ ಪ್ರಯತ್ನಮಾಡಿ ಬಿತ್ತಬೇಕು. ಕೆಲವರು ಇದರ ತಿಳವಳಿಕೆ ಇಲ್ಲದೆ ಕೂರಿಗಿ ನೆಲ್ಲು ಬೀಜ ಬೇರೆ ಗದ್ದೆಯ ನೆಲ್ಲು ಬೀಜ ಕೂರಿಗೆಯಲ್ಲಿ ಬಿತ್ತಲಿಕ್ಕೆ ಬರುವದಿಲ್ಲವೆಂದು ಗಿಡ್ಡಕಾಳು ಧಮ್ಮಕಾಳು ಮೊದಲಾದ ಕನಿಷ್ಟಪ್ರತಿಯ ನೆಲ್ಲು ಬೀಜವನ್ನು ಬಿತ್ತಿ ಅಕ್ಕಿಯನ್ನು ಕೆಡಿಸಿಕೊಳ್ಳುತ್ತಾರೆ ಅದು ಕಾರಣ ಸ್ವಲ್ಪ ಮೆಹನತು ಆದರೂ ಚಿಂತೆ ಇಲ್ಲ ದೂರವಾದರೂ ಹೋಗಿ ಇದ್ದಲ್ಲಿ ಚಲೋ ಗದ್ದೆಯ ನೆಲ್ಲಿನ ಬೀಜವನ್ನು ತಂದು ಬಿತ್ತಬೇಕು.

# ೭ ನೇ ಪ್ರಕರಣವು.

## ಮುಂಗಾರಿಯ ಧಾನ್ಯಗಳು.

ಮುಂಗಾರಿಯ ಧಾನ್ಯವೆಂದರೆ ಮೃಗಪಂಚಕದ ಮಳೆಯಲ್ಲಿ ಬಿತ್ತತಕ್ಕಂಥ ಮುಂಗಾರಿಯ ಜೋಳವು ಮತ್ತು ನೆಲ್ಲು, ನೆಜ್ಜೆ, ನವಣೆ, ರಾಗಿ, ಸಾವಿ, ಬರಗು, ಹಾರಕ, ಎಳ್ಳು, ಸೇಂಗದಬೀಜ ಮತ್ತು ತೊಗರಿ, ಹೆಸರು, ಹುರಳಿ, ಅಲಸಂದಿ, ಅವರಿ, ಬಳ್ಳೊಳ್ಳಿ, ಮೆಣಸಿನಗಿಡ, ಹವೀಜ, ಜೀರಿಗೆ, ಪುಂಡಿ, ಮೆಟಕಿ, ಉದ್ದು, ತಿಂಗಳದ ಅವರೆ, ಸಣಬು ಮೊದಲಾದ ಹದಿನೆಂಟು ಜೀನಸದ ಧಾನ್ಯಗಳಲ್ಲಿ ಕೆಲವು ಧಾನ್ಯಗಳು ಹಾಗು ಮುಂಗಾರಿ ಮತ್ತು ಹಿಂಗಾರಿ ಇವುಗಳ ಮಧ್ಯದ ಅಶ್ಲೇಷ ಮಘಾ ಹುಬ್ಬಿ ಮುಂತಾದ ಕೆಲವು ಮಳೆಗಳಲ್ಲಿ ಬಿತ್ತತಕ್ಕಂಥಾದ್ದಾದ ಹತ್ತಿಯು ಇದು ಹಿಂಗಾರಿ ಮುಂಗಾರಿಗಳ ಮಧ್ಯದ ಬೆಳೆಯು.

ಮುಂಗಾರಿಯ ಧಾನ್ಯವನ್ನು ಬಿತ್ತುವದಕ್ಕೆ ರೋಹಿಣಿ ಮೃಗಶಿರ ಆರದ್ರಿ ಪುಷ್ಯ ಪುನರ್ವಸು ಅಶ್ಲೇಷ ಈ ಆರು ಮಳೆಗಳಲ್ಲಿ ಮುಂಗಾರಿಯನ್ನು ಬಿತ್ತುವದು

ಮೊರಡಿ, ಮಸಬು, ಉಸುಕು, ಬೆರಿಕೆಯಾದ ಮಸಾರಿ, ಗರಸುಮಸಾರಿ, ಕೆಂಪುಮಸಾರಿ, ಕೆಂಪುಮೊರಡಿ, ಕರಲುಭೂಮಿ, ಸವಳುಭೂಮಿ, ಕಟಕದ ಭೂಮಿ ಈ ಪ್ರಕಾರದ ಭೂಮಿಗಳಲ್ಲಿ ಮುಂಗಾರಿಯನ್ನು ಖರೀಪ ಸಹಿತವಾಗಿ ಬಿತ್ತುವದು ಆದರೆ ಈ ಪ್ರಕಾರದ ಯಾವತ್ತು ಭೂಮಿಯು ಹಿಂದೆ ಹೇಳಿದ ಪ್ರಕಾರ ತಿದ್ದುವಿಕೆಯು ಇಲ್ಲದೆ ಹೋದರೆ ಚನ್ನಾಗಿ ಯಾವ ಬೆಳೆಯೂ ಬೆಳೆಯಲಾರದು. ಮತ್ತು ಇಂಥ ಭೂಮಿಗಳಲ್ಲಿ ಗೊಬ್ಬರವನ್ನು ಹಾಕಿದರೆ ಆ ಗೊಬ್ಬರದ ತ್ರಾಣವು ಮೂರು ವರುಷದ ವರೆಗೂ ಇರುವದು. ಆ ಮೇಲೆ ಯಾವಾಗಲೂ ಮೂರು ವರ್ಷಕ್ಕೊಮ್ಮೆ ಗೊಬ್ಬರವನ್ನು ಹಾಕುತ್ತ ವರ್ಷ ವರ್ಷಕ್ಕೂ ಮಡಿಕೆಯನ್ನು ಹೊಡೆದು ಹರಗುತ್ತ ಮುಂಗಾರಿಯ ಧಾನ್ಯವನ್ನು ಬಿತ್ತುತ್ತ ಹೋಗಬೇಕು.

ಊರ ಸಮೀಪದ ಹಾಳು ಮೋಳಿಗಳಲ್ಲಿ ಉಸುಕು ಭೂಮಿಗಳಲ್ಲಿ ಸಜ್ಜಿಯು ವಿಶೇಷವಾಗಿ ಬೆಳೆಯುವದು. ಮತ್ತು ಕೇಸರಿಯಲ್ಲಿ ಸಾವೆಯು,

ನವಣೆಯು, ಕೇಸರಿ ಕವಳಿಯು ಎಳ್ಳು, ಹಾರಕ, ಕಡಲಿ ಮುಂತಾದ ಧಾನ್ಯಗಳು ಮತ್ತು ಮುಂಗಾರಿಯ ಧಾನ್ಯವು ಗೊಬ್ಬರವು ವಿಶೇಷವಾದ ಹಾಗೆಲ್ಲ ಬೆಳೆಯುವವು. ಕಲ್ಲು ಹೊಲಗಳಲ್ಲಿ ಕಪ್ಪು ಮಿಶ್ರಿತವಾದ ಮೊರಡಿಗಳಲ್ಲಿ ಗೊಬ್ಬರ ಹಾಕುವದರಿಂದ ಜೋಳದ ಬೆಳೆಯೂ ಚನ್ನಾಗಿ ಆಗುವದು. ಮತ್ತು ಹಾಳು ಭೂಮಿಗಳಲ್ಲಿ ಸಜ್ಜಿ ಮತ್ತು ಜೋಳವು ಗೊಬ್ಬರ ವಿಶೇಷವಾದರೆ ತಂಬಾಕವು ಬೆಳೆಯುತ್ತದ ಉಸುಕಿನ ಭೂಮಿಯಲ್ಲಿ ಗೊಬ್ಬರವನ್ನು ಹಾಕಿದರೆ ತಂಬಾಕವು ಬೆಳೆಯಬಹುದು.

ಕರಲು ಭೂಮಿಗೆ ಒಡ್ಡು ಹಾಕಿ ಗೊಬ್ಬರವನ್ನ ವಿಶೇಷವಾಗಿ ಹಾಕಿ ಸ್ವಲ್ಪ ನೀರು ನಿಲ್ಲುವ ಹಾಗ ಮಾಡಿದರ ನಲ್ಲು ಬಿತ್ತಬೇಕು ಇಲ್ಲದಿದ್ದರೆ ಆ ಹೊಲಗಳಿಗೆ ಜೋಳವನ್ನು ಬಿತ್ತಬೇಕು ಮತ್ತು ಕೆಂಪು ಮಸಬುಗಳಲ್ಲಿ ಮುಂಗಾರಿಯ ಸರ್ವ ಧಾನ್ಯಗಳು ಬೆಳೆಯುವವು ಉಸುಕು ಮಸಾರಿಗಳಲ್ಲಿ ಖರೀಪ ಧಾನ್ಯಗಳು ವಿಶೇಷವಾಗಿ ಬೆಳೆಯುವವು ನೆಲ್ಲು ನೆಲದಲ್ಲಿ ನೀರು ನಿಲ್ಲುವ ಹಾಗಿದ್ದ ತಗ್ಗು ಭೂಮಿಯು ಮಂಡು ಮಣ್ಣಿನಷ್ಟಕ್ಕೆ ನೆಲ್ಲು ಬಿತ್ತಿ ತೆವರು ಕಟ್ಟು ಮೊದಲಾದ ಉಳಿದ ಭೂಮಿಗೆ ಮುಂಗಾರಿಯನ್ನು ಬಿತ್ತಬೇಕು

ತೀರ ಕನಿಷ್ಠ ಪ್ರತಿಯು ಕಟ್ಟ ಭೂಮಿಯಾದರೆ ಅಂಥ ಭೂಮಿಯಲ್ಲಿ ಗೊಬ್ಬರವನ್ನು ಹಾಕಿ ಮಡಿಕೆಯು ಹೊಡೆದು ಹರಗಿ ಸವೀಜನ್ನು ನೊಪ್ಪ ಮುಂತಾದ್ದನ್ನು ಬಿತ್ತಬೇಕು ಮತ್ತು ಮೊರಡಿಗಳಲ್ಲಿ ಸ್ವಲ್ಪ ಉತ್ತಮ ತರದ ಭೂಮಿಯು ಇದ್ದರೆ ಅಥವಾ ರಸವತ್ತಾಗ ಉಸುಕು ಬೆರಕಿಯು ಭೂಮಿಯಲ್ಲಿ ನೇಂಗದ ಬೀಜವನ್ನು ಬಿತ್ತಬೇಕು ಅಂಥ ಭೂಮಿಯಲ್ಲಿ ಮಡಿಕಯನ್ನು ಹೊಡೆದು ಹರಗಿ ಬಿಳಿಎಳ್ಳು ಬಿತ್ತಬೇಕು ಮತ್ತು ಮೊರಡಿ ಮಸಾರಿಗಳಲ್ಲಿ ಹವೀಜ ಅಜವಾನ ಕಾರಳ್ಳು ಅಂದರೆ ಗೂರೆಳ್ಳು ಬಿತ್ತಬೇಕು.

ಬಿಳಿಯ ಕಟಕದ ಭೂಮಿಯಾದರ ಸ್ವಲ್ಪ ಮಡಿಕಟ್ಟು ಭೂಮಿಯಾಗಿದ್ದು ಅಲ್ಲಿ ಭಾವಿಯ ಆಸ್ಪದವಾಗಿದ್ದರೆ ಅಂಥ ಭೂಮಿಯಲ್ಲಿ ಜೀರಿಗೆ ಬೆಳೆಯುವದು ಸವಳು ಭೂಮಿಗೆ ಗೊಬ್ಬರವನ್ನು ವಿಶೇಷವಾಗಿ ಹಾಕಿದ್ದರೆ ಜೋಳವನ್ನು ಬಿತ್ತಬೇಕು ಅಂಥ ಹೊಲಗಳಿಗೆ ಒಡ್ಡು ಹಾಕಿದ್ದರೆ ನೀರು ನಿಲ್ಲುವಷ್ಟಕ್ಕೊ ನೆಲ್ಲು ಬಿತ್ತಿ ಉಳಿದ ಭೂಮಿಯಲ್ಲಿ ಮುಂಗಾರಿಯನ್ನು ಬಿತ್ತಬೇಕು

ಮುಂಗಾರಿಯನ್ನು ಊರಿಗೆ ಸಮೀಪವಾದ ಕನಿಷ್ಠ ಪ್ರತಿಯು ಭೂಮಿಗಳಾದ ಹಾಳು ಮೋಳಿ, ಗರಸು, ಮಸಬು, ಮೊರಡಿ, ಮಸಾರಿ, ಕಲ್ಲುಭೂಮಿ, ಸವಳು ಭೂಮಿ, ಕರಲು ಭೂಮಿ, ಮುಂತಾದ ಇಂಥ ಕನಿಷ್ಠ ಭೂಮಿಗಳನ್ನು ಚನ್ನಾಗಿ ತಿದ್ದಿ ಗೊಬ್ಬರ ಹಾಕಿ ಕುರಿ ತರುಬಿಕೊಂಡು ಇಂಥ ಭೂಮಿಯಲ್ಲಿ ಮುಂಗಾರಿ

ಯನ್ನು ಬಿತ್ತುವ ಮಳೆಯಲ್ಲಿ ಹಸಿಯಾದರೆ ಸಮಯ ನೋಡಿ ಮುಂಗಾರಿ ಯನ್ನು ಬಿತ್ತಬೇಕು ಮತ್ತು ಈ ಭೂಮಿಗಳ ದರವು ಕಡಿಮೆ ಇದ್ದು ತಿದ್ದು ವಿಕಯಿಂದ ಧಾನ್ಯದ ಬೆಳೆಯು ವಿಶೇಷವಾಗಿ ಉತ್ಪನ್ನವು ಚನ್ನಾಗಿ ಆಗುತ್ತದೆ.

ಮುಂಗಾರಿಯ ಆರು ಮಳೆಗಳಲ್ಲಿ ರೋಹಿಣಿ ಮೃಗಶಿರದಲ್ಲಿ ಮಸಬು ನೊರಡಿ, ಕರಲು ಭೂಮಿಗಳಲ್ಲಿ ಮುಂಗಾರಿಯ ಜೋಳವನ್ನು ಸ್ವಲ್ಪ ಸೆಜ್ಜೆ ಬೆರಸುಗಾಳು ಕೂಡಿಸಿ ಬಿತ್ತಬೇಕು. ಹಾಳು ಮೋಳಿಗಳಿಗೆ ಸೆಜ್ಜೆಯನ್ನು ಬಿತ್ತಬೇಕು ಉಸುಕು ಭೂಮಿಯಲ್ಲಿ ಸೆಜ್ಜೆಯನ್ನು ಬಿತ್ತಬೇಕು ರೋಹಿಣಿ ಮೃಗಶಿರ ಮಳೆಗಳಲ್ಲಿ ಯಾವ ಭೂಮಿಗಳಿಗಾದರೂ ಮುಂಗಾರಿಯ ಜೋಳ ವನ್ನು ಖರೀಸದ ಯಾವತ್ತು ಅಕ್ಕಡಿಯ ಧಾನ್ಯಗಳು ಸಹಿತ ಬಿತ್ತುವದು ಉತ್ತಮವು ಆರದ್ರಿ ಪುಷ್ಯದಲ್ಲಿ ಮಧ್ಯಮವು ಪುನರ್ವಸು ಆಶ್ಲೇಷದಲ್ಲಿ ಸಾಮಾನ್ಯವು ಒಂದು ಪಕ್ಷವಲ್ಲಿ ಉತ್ತಮ ಪ್ರತಿಯ ಅವಲು ಭೂಮಿಯಾ ದರೆ ಅಂಥ ಭೂಮಿಗಳಿಗೆ ಮೃಗಶಿರ ಕಾಲದಲ್ಲಿ ಹಸಿಯಾಗದೆ ಇದ್ದಲ್ಲಿ ಮುಂದ ಪುನರ್ವಸು ಮಳೆಗಳಲ್ಲಿ ಬಿತ್ತಿದರೂ ಸಂಶಯವಿಲ್ಲವು

ಮುಂಗಾರಿಯ ಹೊಲಗಳಲ್ಲಿ ಮತ್ತು ನೆಲ್ಲು ಹೊಲದ ದಂಡೆಯಲ್ಲಿ ರಾಗಿಯನ್ನು ಬಿತ್ತಿದ್ದರ ಊಟಕ್ಕಾದರೂ ಉಪಯೋಗವು ಮತ್ತು ಬುರಬು ರಿಯು ಹತ್ತುವಂಥ ಅವರಿ, ತೊಗರಿ, ಹೆಸರು, ಮಡಿಕೆ, ಹುರಳಿ ಮೊದ ಲಾದ ಧಾನ್ಯಗಳನ್ನು ತುಂಬಿ ಇಡಬೇಕಾದರೆ ರಾಗಿಯನ್ನು ಸಮತೂಕವಾಗಿ ಕಲಿಸಿ ಈ ಧಾನ್ಯಗಳನ್ನು ಕಣಜದಲ್ಲಿ ಗಳಗೆಯಲ್ಲಿ ಗುಮ್ಮಿಗಳಲ್ಲಿ ಇಲ್ಲವೆ ಬುಟ್ಟಿಗಳಲ್ಲಿ ತುಂಬಿ ಮೇಲೆ ಗೇಣು ಚೋಟು ಉದ್ದವಾಗುವ ಹಾಗೆ ರಾಗಿ ಯನ್ನು ಹಾಕಿ ಮೆತ್ತು ಹಾಕಿ ಇಟ್ಟರೆ ಎಷ್ಟು ದಿವಸ ಇದ್ದ ಕಾಲಕ್ಕೂ ಹುಳ ಗಳು ಹತ್ತುವದಿಲ್ಲವು

ಎರಿಯ ಭೂಮಿಗಳಾದ ಉತ್ತಮ ಭೂಮಿಗಳಲ್ಲಿ ಹಿಂಗಾರಿಯನ್ನು ಬಿತ್ತುವದು ಉತ್ತಮವು. ಅಥವಾ ಒಂದು ಪಕ್ಷಕ್ಕೆ ಅಂಥ ಭೂಮಿಗಳಿಗಾ ದರೂ ಈ ಗ್ರಂಥದ ನಾಲ್ಕನೆಯ ಪ್ರಕರಣದಲ್ಲಿ ಹೇಳಿದಂತ ಗೊಬ್ಬರ ವನ್ನು ಹಾಕಿ ಮತ್ತು ಐದನೆಯ ಪ್ರಕರಣದ ಕಲಮುಗಳಲ್ಲಿ ಹೇಳಿ ದಂತೆ ಮಡಿಕಯ ಹೊಡೆದು ಚನ್ನಾಗಿ ಹರಿಗಿ ಮುಂಗಾರಿಯ ಧಾನ್ಯ ವನ್ನು ಬಿತ್ತಬೇಕಾದರೆ ಹಸಿಯಾದ ಸಮಯದಲ್ಲಿ ಹದದ ಮೇಲೆ ಬಿತ್ತಿ ಮೂರು ವೇಳೆ ಎಡೆಯ ಹೊಡೆದು ಎರಡು ವೇಳೆ ಸಮಯವರಿತು ಸದಿಯ ತೆಗಿಸಿದರೆ ಪ್ರತಿ ಕೂರಿಗೆಗೆ ಮೂವತ್ತು ಹೇರಿನಂತೆ ಬೆಳೆಯಾಗುವದು ಮತ್ತು ಎರಿಯಲ್ಲಿ ತಂಪು ಎರಿಯ ಹೊಲವಾದರೆ ಮೊದಲು ಗೊಬ್ಬರವನ್ನು ಹಾಕಿ ಮಡಿಕೆಯ ಹೊಡೆದು ಎರಡು ಸಾಲು ಹರಿಗಿ ಪುನಃ ಒಂದು ಸಾಲು ಮಡಿ

ಕೆಯು ಹೊಡೆದು ಬಿಡಬೇಕು ಆ ಮೇಲೆ ಒಂದು ಮಳೆಯಾಗಿ ಸಾಲಿನಲ್ಲಿ ನೀರು ನಿಂತು ವಿಶೇಷ ತಂಪು ಹಿಡಿದಿರುವದು. ಆ ಹೊಲವನ್ನು ಸ್ವಲ್ಪ ಹೊರಪು ನೋಡಿ ಮತ್ತೊಮ್ಮೆ ಹರಗಿ ಪೂರ್ಣ ಹಸಿಯಾದಾಕ್ಷಣವೇ ಮುಂಗಾರೀ ಕಾಲದಲ್ಲಿ ರೋಹಿಣಿ ಮೃಗಶಿರ ಆರದ್ರಿಯು ಮಳೆಗಳಲ್ಲಿ ಹೊಂಗಲದ ಪ್ರಾಂತದಲ್ಲಿ ಬೆಳೆಯುವ ಕೆಂಪು ಮೋಡಿಯ ಮೇಲಿದ್ದ ಬಳ್ಳೊಳ್ಳಿಯನ್ನು ಬಿತ್ತಬೇಕು. ಅದು ಮಳೆಯ ಸಹಾಯದಿಂದ ಉತ್ಕೃಷ್ಟಬೆಳೆಯಾಗುವದು ಮತ್ತು ಈ ರೀತಿಯಿಂದ ತಯಾರು ಮಾಡಿದ ತಂಪು ಎರೆಯಲ್ಲಿ ಜೀರಿಗೆಯನ್ನಾದರೂ ಬಿತ್ತುವದು. ಜೀರಿಗೆಯನ್ನಾದರೂ ಮುಂಗಾರಿಯ ಕಾಲದಲ್ಲಿ ಬಿತ್ತಬೇಕು. ಹಾಗೆ ಶಾಜೀರಿಗೆಯನ್ನಾದರೂ ಬಿತ್ತಿದರೆ ಬರುತ್ತದೆ. ಅವುಗಳ ಬೀಜಗಳನ್ನು ತರಬೇಕಾದರೆ ಆ ಪದಾರ್ಥಗಳು ಬೆಳೆಯುವ ದೇಶದಲ್ಲಿ ಹೋಗಿ ಮುಗ್ಗು ಹಾಯದಂಥಾ ಹೊಸ ಬೀಜಗಳನ್ನು ತಂದು ಬಿತ್ತಬೇಕು ಯಾತಕ್ಕೆಂದರೆ ಈ ಪದಾರ್ಥಗಳು ಎಲ್ಲ ದೇಶಗಳಲ್ಲಿ ಬೆಳೆದರೆ ಅದರ ಕ್ರಯವು ಕಡಿಮೆಯಾಗುವದೆಂದು ಮುಗ್ಗು ಹಾಕಿ ಬೀಜವನ್ನು ಕೆಡಿಸಿ ಮಾರಾಟಕ್ಕೆ ಕಳುಹಿಸುತ್ತಾರೆ. ಹಾಗು ಬಳ್ಳೊಳ್ಳಿಯ ಬೀಜವನ್ನ ಅಲ್ಲಿ ಹೋಗಿ ತರಬೇಕೆಂಬ ಪ್ರಯೋಜನವಿಲ್ಲ. ಮಾರಾಟಕ್ಕೆ ಬಂದ ಗಡ್ಡೆಗಳನ್ನು ತೆಗೆದುಕೊಂಡು ಬಿತ್ತಿದರೂ ಬೆಳೆಯುತ್ತವೆ. ಈ ಪ್ರಕಾರದ ಬಳ್ಳೊಳ್ಳಿಗಳನ್ನು ಬೆಳವಲ ಸೀಮೆಯ ಕೆಲವು ಪ್ರಾಂತಗಳಲ್ಲಿ ಎರಿಯ ಹೊಲಗಳಲ್ಲಿ ಬಿತ್ತಿ ಬೆಳೆಯುತ್ತಾರೆ.

ಕೇಸರಿಯ ಭೂಮಿಯು ಹಸನಾಗಿ ಸಮತಳವಾಗಿ ಸುತ್ತಲು ದೊಡ್ಡ ಒಡ್ಡು ಇದ್ದರೆ ಅಂಥ ಭೂಮಿಯಲ್ಲಿ ಗೋದಿ, ಹತ್ತಿ, ಕಡಲಿ, ಅಗಸಿ, ಕುಸಿಬಿ, ಬಿಳಿಜೋಳ ಮುಂಗಾರಿ ಮೊದಲಾದ ಯಾವತ್ತು ಪದಾರ್ಥಗಳು ಮತ್ತು ಬಿಳಿ ಎಳ್ಳು, ಹುರಳಿ, ನವಣಿ, ಸಾವಿ, ರಾಗಿ, ನೆಲ್ಲು ಮೊದಲಾದ ಧಾನ್ಯಗಳು ಬೆಳೆಯುತ್ತವೆ ಅದರೊಳಗೆ ಕೇಸರಿ ಭೂಮಿಯ ಸಾವಿಯ ಬೆಳೆಯು ವಿಶೇಷವು. ಅದು ಕಾರಣ ಭೂಮಿಯನ್ನು ಪರೀಕ್ಷಿಸಿ ಅದರ ಲಕ್ಷಣಕ್ಕೆ ಸರಿಯಾಗಿ ಹೊಲದ ಕಾಲಿಗಿಯನ್ನು ತಿಳಿದು ಅವುಗಳಿಗೆ ಸರಿಯಾದ ಬೀಜವನ್ನು ಬಿತ್ತಬೇಕು.

## ನವಣಿ.

ನವಣಿಯು ಮುಂಗಾರಿಯ ಧಾನ್ಯವು. ನವಣಿಯನ್ನು ಕೆಲವು ದೇಶಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ನವಣಿಯ ಬೆಳೆಯು ಕೇಸರಿ ಭೂಮಿಗಳಲ್ಲಿ ಕಪ್ಪು ಭೂಮಿಗಳಲ್ಲಿ ಯಾವ ಪ್ರಕಾರದ ಮಂಡು ಮಣ್ಣು ಇದ್ದ ಮಡಿಯ ಎಲ್ಲ ತರದ ಭೂಮಿಗಳಲ್ಲಿ ತೋಟಪಟ್ಟಿಗಳಲ್ಲಿ ಚನ್ನಾಗಿ ಆಗುತ್ತದೆ. ನವಣಿಗಳೊಳಗೆ ಬೂದರನವಣಿ ಹಾಲುನವಣಿ ಮಾಗಿಯ ನವಣಿ ಕೆಂಪುನವಣಿ

ಕಪ್ಪುನವಣೆ ಎಂದು ಕೆಲವು ತರಗಳುಂಟು. ಅವುಗಳೊಳಗೆ ಬೂದರ ನವಣೆಯು ಉಂಬುವವರಿಗೆ ರುಚಿಯಾಗಿ "ಅಚ್ಚೆ'ರೊಬ್ಬನಿಗೆ ಆರಿದರಿಬ್ಬರಿಗೆ ಮಜ್ಜಿಗೆ ಹಾಕಿದರೆ ಮತ್ತೊಬ್ಬನಿಗೆ" ಎಂದೀ ಪ್ರಕಾರ ಬಡವರಿಗೆ ಬಹಳ ಉಪಯೋಗವು ಮತ್ತು ಹಾಲನವಣೆ ಮಾಗಿಯು ನವಣೆಯು ಅನ್ನವು ರಾಜಾನ್ನದ ಹೊಲಗಳಿಲ್ಲದವರಾದ ಬಡಜನರಿಗೂ ಬಲ್ಲಿದರಿಗಾದರೂ ರಾಜಾನ್ನದ ಹಾಗೆ ಸ್ವಲ್ಪ ಉತ್ತಮ ಮಧ್ಯಮದ ಪ್ರಕಾರ ಹಿತವಾಗಿರುವದು ಅದರಲ್ಲಿ ಹೆಸರು ಬೇಳೆಯನ್ನು ಮಿಶ್ರಮಾಡಿ ಅನ್ನವನ್ನು ಮಾಡಿದ್ದಾದರೆ ನವಣೆಯ ಅನ್ನವು ಬಹು ರುಚಿಯಾಗಿರುವದು ಆದರೆ ನವಣೆಯನ್ನು ಬಹಳ ಬೆಳೆದಿದ್ದರೆ ಬುರಬುರಿ ಎಂಬುವ ಪಕ್ಕದ ಹುಳಗಳು ಹತ್ತುವಂಥ ಕಡಲೆ ಮುಂತಾದ ಕಟಾಣದ ಧಾನ್ಯಗಳಲ್ಲಿ ಮತ್ತು ಖರೀಪದ ಮುಂಗಾರಿಯ ಅಕ್ಕಡಿಯ ಧಾನ್ಯಗಳಾದ ಅವರೆ ಅಲಸಂದಿ ತೊಗರೆ ಹೆಸರು ಹುರಳಿ ಮಡಿಕೆ ಮೊದಲಾದ ಧಾನ್ಯಗಳಲ್ಲಿ ಈ ನವಣೆಯನ್ನು ಸಮತೂಕವಾಗಿ ಕಲಿಸಿ ತುಂಬಿ ಮೇಗೇಣು ಚೋಟಿ ಉದ್ದ ನವಣೆಯನ್ನು ಹಾಕಿ ತುಂಬಿ ಇಟ್ಟರೆ ಅಂಥ ಧಾನ್ಯಗಳು ಎಷ್ಟು ದಿವಸದ ವರೆಗೂ ಇಟ್ಟ ಕಾಲಕ್ಕೂ ಹುಳಗಳು ಹತ್ತುವದಿಲ್ಲವು ಮತ್ತು ಇದರಂತೆ ರಾಗಿಯನ್ನಾದರೂ ಸಾವಿಯನ್ನಾದರೂ ಕಲಿಸಿ ಇಟ್ಟರೂ ಒಳ್ಳೇದೇ ಸರಿ. ಆದರೆ ತಮಗೆ ಬೇಕಾದಾಗ ಹಿಟ್ಟು ಜಲ್ಲಿಸುವ ಸಾಣಿಗೆಯಲ್ಲಿ ಹಾಕಿ ಜಲ್ಲಿಸಿದರೆ ತತ್ಕಾಲಕ್ಕೆ ಒಂದು ತಾಸಿನೊಳಗೆ ಖಾಡಗ ಗಟ್ಟಲೆ ಧಾನ್ಯವನ್ನಾದರೂ ಕಡೆಗೆ ಮಾಡಿಕೊಳ್ಳಬಹುದು

## ಶೇಂಗದ ಬೀಜವನ್ನು ಬಿತ್ತುವ ರೀತಿಯು.

ಎರಿಯ ಭೂಮಿಗಳಲ್ಲಿ ರಸವತ್ತಾದ ಭೂಮಿ ಇದ್ದರೆ ಚನ್ನಾಗಿ ಗೊಬ್ಬರ ಹಾಕಿ ಮಡಿಕೆಯ ಹೊಡೆದು ಹರಿಗಿ ಈ ಪ್ರಕರಣದ ಹಿಂದಿನ ಕಲಮಿನಲ್ಲಿ ತಂಪು ಎರಿಯ ವಿಷಯವಾಗಿ ಹೇಳಿದಂತೆ ಚನ್ನಾಗಿ ಭೂಮಿಯನ್ನು ಸಿದ್ಧಮಾಡಿಕೊಂಡು ಮುಂಗಾರಿಯ ಕಾಲದಲ್ಲಿ ಹಸಿಯಾದಾಗ ಮುಗ್ಗಹಾಯ್ದು ಕೆಡದಂಥ ಚಲೋ ಶೇಂಗದ ಬೀಜವನ್ನು ಮೊದಲೇ ತರಿಸಿ ಇಟ್ಟು ಮೇಲಿಂದ ಮೇಲೆ ಆಗಾಗ್ಗೆ ಒಣಗಿಸುತ್ತ ಇಟ್ಟಿರಬೇಕು. ಅಂಥ ಬೀಜಗಳನ್ನು ಕೂರಿಗಿ ಹಿಂದೆ ಬುಕ್ಕಾ ಕಟ್ಟಿ ನಾಲ್ಕು ಬೆರಳಿಗೊಂದು ಬೀಜ ಬೀಳುವಂತೆ ಬಿತ್ತಬೇಕು. ಇಲ್ಲವೆ ಮಡಿಕೆಯ ಸಾಲು ಹಾಸಿ ಹಿಂದೆ ಬುಕ್ಕಾಕಟ್ಟಿ ಬಿತ್ತಿದರೂ ಬರುತ್ತದೆ. ಈ ಪ್ರಕಾರ ಬಿತ್ತಿದ ಮೇಲೆ ಅವುಗಳಿಗೆ ಯಾವಾಗಲೂ ನೀರು ಬೇಕೆಂಬುವ ಪ್ರಯೋಜನವಿಲ್ಲ ಮುಂಗಾರಿಯ ಮಳೆಯ ಸಹಾಯದಿಂದ ಬೆಳೆಯುವದು. ಅದು ಬಳ್ಳಿಗಳ ಹಾಗೆ ಹಬ್ಬಿ ಅದರ ಬೇರಿನಲ್ಲಿ ನೆಲದೊಳಗೆ ಕಾಯಿಗಳಾಗುವವು. ಅದರ ಬೆಳೆಯು ವಿಶೇಷವು. ಅದರ ಕ್ರಯವು ಚನ್ನಾಗಿ

ಸಿಗುವದು ಅವುಗಳನ್ನು ಆರಿಸಿ ರಾಶಿಯು ಮಾಡಿಕೊಳ್ಳಬೇಕು ಈ ಬೀಜಗಳನ್ನು ಮೃಗಶಿರಕಾಲದಲ್ಲಿ ಬಿತ್ತಬೇಕು ಅದರ ಬೆಳೆಯು ಕಾರ್ತಿಕ ಮಾರ್ಗಶಿರ ಮಾಸಕ್ಕೆ ಬರುವದು. ಮತ್ತ ತೋಟದಲ್ಲಿ ಬಿತ್ತಬೇಕಾದರೆ ಪುಷ್ಯ ಮಾಘಮಾಸದಲ್ಲಿ ಹಿಂಕಟ್ಟು ಬಿತ್ತಿದರೂ ಬರುತ್ತದೆ ಆ ಬೀಜಗಳು ಕೆಂಪಾಗಿ ಮೇಲೆ ನೊಟ್ಟೆ ಸಹಿತ ಗೊಂಚಲುಗಳಾಗಿ ನೆಲದಲ್ಲಿ ಬೇರಿನೊಳಗೆ ಕಾಯಿಗಳಾಗುವವು ಅವುಗಳನ್ನು ಅಗಿದು ರಾಶಿಯು ಮಾಡಿಕೊಳ್ಳಬೇಕಾದರೆ ಸ್ವಲ್ಪ ಇದ್ದರೆ ಗುದ್ದಲಿಯಿಂದ ಅಗಿದು ಕಾಯಿಗಳನ್ನು ಆರಿಸಿಕೊಳ್ಳಬೇಕು ಬಹಳವಾಗಿ ಇದ್ದರ ಮಡಿಕೆಯು ಹೊಡಿದು ಜನ್ನಿಂದಲೇ ಆರಿಸಿ ರಾಶಿಯು ಮಾಡಿಕೊಳ್ಳಬೇಕು ಆ ಬೀಜಗಳನ್ನು ಭಕ್ಷಿಸುವದಕ್ಕೂ ಗಾಣಕ್ಕೆ ಹಾಕಿ ಎಣ್ಣೆಯನ್ನು ಮಾಡವದಕ್ಕೂ ಬರುವದು ಅದರ ಎಣ್ಣೆಯು ದೀವಿಗೆಗೂ ಉಂಬುವದಕ್ಕೂ ಬಟ್ಟೆಗಳನ್ನು ಮತ್ತು ನೂಲನ್ನು ಬಣ್ಣಮಾಡುವದಕ್ಕೂ ಬರತ್ತವ

## ಎರಿಯಲ್ಲಿ ಮೆಣಸಿನ ಗಿಡಗಳನ್ನು ಹಚ್ಚುವ ರೀತಿಯು.

ಎರಿಯಲ್ಲಿ ತಂಪಿನ ಎರಿ ರಸವತ್ತಾದ ಭೂಮಿಯಲ್ಲಿ ಮುಂಗಾರಿಯು ಕಾಲದಲ್ಲಿ ಮೆಣಸಿನ ಗಿಡಗಳನ್ನು ಹಚ್ಚುವದು ಹೇಗಂದರೆ, ಚಲೋ ಬೀಜಗಳನ್ನು ಮುಗ್ಗು ಹಾಯದ ಹಾಗೆ ತಿಂಗಳಿಗೆ ಎರಡು ತಿಂಗಳಿಗೆ ಬಿಸಲಲ್ಲಿ ಒಣಗಿಸುತ್ತ ಚೀಲದಲ್ಲಿ ತುಂಬಿ ಇಟ್ಟಿರಬೇಕು ಗಡಿಗೆಯಲ್ಲಿ ಹರಿವಿಯಲ್ಲಿ ಹಾಕಿ ಇಡಬಾರದು ಆ ಬೀಜಗಳು ಮುಗ್ಗು ಹಾಯಿದಿದ್ದರೆ ಮುಂದ ಮೆಣಸಿನ ಗಿಡಗಳು ತಲೆಗೂಡು ಗಟ್ಟಿ ಎಲೆಗಳು ಮುದುಡಿಕೊಂಡು ಗಿಡಗಳು ಕೆಡುವವು ಅದು ಕಾರಣ ಚಲೋ ಬೀಜಗಳನ್ನು ಮೃಗಶಿರ ಮಳೆಯಲ್ಲಿ ಹಸಿಯಾದರೂ, ಆಗದಿದ್ದರೂ, ಮಡಿ ಮಾಡಿ ಚನ್ನಾಗಿ ಗೊಬ್ಬರ ಹಾಕಿ ನೀರು ಹಾಕಿ ಅಗಿ ಮಾಡಿ ಆ ಅಗಿಗಳನ್ನು ಮಡಿಯಲ್ಲಿಯೇ ನೀರು ಹಾಕಿ ಬೆಳಿಸಬೇಕು ಮುಂದೆ ಪುಷ್ಯ ಪುನರ್ವಸು ಆಶ್ಲೇಷ ಮಳೆಗಳಲ್ಲಿ ಆ ಅಗಿಗಳನ್ನು ಕಿತ್ತಿ ಹಚ್ಚುವದು ಹೇಗೆಂದರೆ, ಈ ಗಿಡಗಳನ್ನು ಹಚ್ಚಬೇಕಾದರೆ ಮುಂದೆ ಆ ಗಿಡಗಳ ಮಧ್ಯದಲ್ಲಿ ಸಣ್ಣ ಕುಡಗಳಿಂದ ಎಡಿಯು ಹರಗುವದಕ್ಕೆ ಅಡಚಣಿಯು ಆಗದ ಹಾಗೆ ಮೊದಲೇ ಜೇತು ನೋಡಿ ಒಂದು ಹುರಿಯನ್ನು ತೆಗೆದುಕೊಂಡು ಅದಕ್ಕೆ ಒಂದುವರಿ ಮೊಳಕ್ಕೆ ಒಂದರಂತೆ ಕಡ್ಡಿಯು ಹಾಕಿ ಗುರ್ತು ಮಾಡಿಕೊಂಡು ಆ ನುಲಿಕೆಯು ಆಚೆಗೊಂದು ಈಚೆಗೊಂದು ಗೂಟವನ್ನು ಹೊಡೆದು ಕಟ್ಟಿ ಆ ಗುರ್ತಿಗೆ ಸರಿಯಾಗಿ ಚೋಟು ತಗ್ಗುಗುವ ಹಾಗೆ ಕೆದರಿ ಅದರಲ್ಲಿ ನೀರು ಹಾಕಿ ಎರಡೆರಡು ಮೆಣಸಿನ ಅಗಿಗಳನ್ನು ಹಚ್ಚಿ ಗಟ್ಟಿಯಾಗಿ ಕೂಡ್ರಿಸಬೇಕು. ಇದರಂತೆ ಗಿಡಗಳು ಯಾಸಿಯಾಗದಂತೆ ಅನರಸ ಚೌರಸ ಸಾಲು ಸಾಲು ಕಾಣುವಂತೆ ಗಿಡ

ಗಳನ್ನು ದಾರ ಹಿಡಿದು ಹಚ್ಚಬೇಕು ಇದರಂತೆ ಹೊಲ ಯಾವತ್ತಕ್ಕು ಗಿಡಗಳನ್ನು ಹಚ್ಚುವದು ಅದ ಮೇಲೆ, ಮುಂದ ಯಾವ ಕಡೆ ಯಿಂದಲೂ ಹರಗಿದರೆ ಬರುವ ಹಾಗೆ ಮಾಡಿ ಬೇಶಿನ ಮೇಲೆ ಯಾಸಿಯಾ ಗದೆ ಯಾವ ಕಡೆಗೆ ನೋಡಿದರೂ ಸಾಲುಗಳೇ ಕಾಣುವ ಹಾಗೆ ಮಾಡಿ ಮುಂದೆ ಸ್ವಲ್ಪ ದಿವಸಕ್ಕೆ ಅದರಲ್ಲಿ ಸದೆಯು ಹುಟ್ಟುತ್ತ ಹೋದರೆ ಒಂದಾ ವರ್ತಿ ಸದೆಯು ತೆಗಿಸಿ ಕೆಲವು ದಿವಸದ ಮೇಲೆ ಮನಿಸಾಲಿನ ಎಡೆಯು ಕುಂಟೇದಿಂಡಿಗೆ ಸಣ್ಣಪಿಳ್ಳಿ ಕುಡಗಳ ಹಾಕಿ ಗಿಡಗಳ ಬೊಡ್ಡಿಯು ನಾಲ್ಕು ಬೆರಳು ಉಳಿಯುವ ಹಾಗೆ ಅನುವರಿತು ಪೂರ್ವ ಪಶ್ಚಿಮಕ್ಕೆ ಒಂದಾವರ್ತಿ ಉತ್ತರ ದಕ್ಷಿಣಕ್ಕೆ ಒಂದಾವರ್ತಿ ಹೀಗೆ ಅವರಷ ಚೌರಸ ಎಡೆಯ ಹರಿಗಿ ದರ ಗಿಡಗಳ ಬೊಡ್ಡಿಗೆ ಮಣ್ಣು ಏರಿ ನೀರು ಕಟ್ಟಿದ ಹಾಗಾಗಿ ವಿಶೇಷ ಬೆಳೆಯಾಗಿ ಒಂದು ಕೂರಿಗಿ ಹೊಲಕ್ಕೆ ನಾಲ್ವತ್ತು ನಗ ಒಣ ಮೆಣಸಿನ ಕಾಯಿಗಳಾಗುವವು ಮತ್ತು ಗೊಬ್ಬರವನ್ನು ಹಾಕಿ ಕುರಿ ತರುಬಿಸಿದರೆ ವಿಶೇಷ ಕಾಯಿಗಳಾಗುವವು ಸ್ವಲ್ಪ ಗೊಬ್ಬರವು ಕಡಿಮೆಯಾಯಿತ್ತಾದರೆ ಇಪ್ಪತ್ತೈದು ಮೂವತ್ತು ನಗ ಒಣ ಮೆಣಸಿನಕಾಯಿಗಳಾಗುವವು ಹಾಗೂ ಗೊಬ್ಬರವಿಲ್ಲದ ಗಿಡಗಳನ್ನು ಹಚ್ಚಿದರ ಕಡಲೀ ಗಿಡಗಳಂತೆ ಗಿಡಗಳಾಗಿ ಅಲ್ಪ ಸ್ವಲ್ಪ ಕಾಯಿಗಳಾಗುವವು. ಈ ಭೂಮಿಗೆ ಗೊಬ್ಬರ ಶಕ್ತಿ ಇದ್ದ ಹಾಗೆ ಕಾಯಿಗಳು ವಿಶೇಷವಾಗುವವು ಎರಿ ಮತ್ತು ಉಸುಕು ಭೂಮಿ ಹಾಗೂ ಚಲೋ ಮಂಡು ಪಡೆಯಾದರೂ ಮಸಾರಿಯಾದರೂ ಕುರಿ ತರುಬಿ ವಿಶೇಷ ಗೊಬ್ಬರ ಹಾಕಿದರೆ ಮಣಸಿನ ಗಿಡಗಳನ್ನು ಹಚ್ಚಬೇಕು ಈ ಮೆಣ ಸಿನ ಗಿಡದ ಕಾಲಿಗಿ ಮುಂದೆ ಮುಂಗಾರಿ ಹಿಂಗಾರಿ ಜೋಳ ನವಣಿ ಉದ್ದು ರಾಗಿ ಮುಂತಾದ ಧಾನ್ಯಗಳಿಗೆ ಬಹು ಉಪಯೋಗವು ಮತ್ತು ಸ್ವಲ್ಪ ನೀರು ನಿಲ್ಲುವ ಹಾಗೆ ಇದ್ದರೆ ನೆಲ್ಲು ಬಿತ್ತುವದಕ್ಕೂ ಬರುತ್ತದ ತೇವರು ಕಟ್ಟು ಭೂಮಿಗೆ ನೆಲ್ಲು ಬಿತ್ತದೆ ಜೋಳವನ್ನು ಮತ್ತು ಉಳಿದಾದ ಪದಾರ್ಥ ವನ್ನು ಬಿತ್ತಬೇಕು. ಹಾಗು ಮೆಣಸಿನ ಗಿಡಗಳನ್ನು ಹರಿಗಿದಷ್ಟು ಉತ್ತ ಮವು ಏಳು ಪೇಳೆ ಎಂಟು ಪೇಳೆಯಾದಷ್ಟೂ ಹರಗಬೇಕು ಬೇಡಿ ಸೆಳೆ ಯುಗೊಡಬಾರದು

## ಬಳ್ಳೊಳ್ಳಿ.

ಎರಿಯ ಹೊಲಗಳಲ್ಲಿ ಮುಂಗಾರಿಯ ಕಾಲದಲ್ಲಿ ಬಳ್ಳೊಳ್ಳಿಯನ್ನು ಬಿತ್ತುವದು ಹೇಗಂದರೆ, ತಂಪಾದ ಎರಿಯ ಹೊಲವನ್ನು ಚನ್ನಾಗಿ ಹೊಡೆದು ಹರಿಗಿ ಗೊಬ್ಬರ ಹಾಕಿ ಸಿದ್ಧ ಮಾಡಿ ದೊಡ್ಡ ದೊಡ್ಡ ಮಡಿಗಳನ್ನು ಮಳೆಯ ನೀರು ಹೋಗದೆ ನಿಲ್ಲುವ ಹಾಗೆ ಸುತ್ತಲೂ ಒಡ್ಡು ಇಟ್ಟು ಮಡಿಗಳನ್ನು

ಮಾಡಿ ಆ ಮಡಿಗಳಲ್ಲಿ ಗೊಬ್ಬರ ಹಾಕಿ ನಾಲ್ಕು ತಾಳಿನ ಕೂರಿಗಿ ದಿಂಡಿಗೆ ಐದು ಆರು ಬೆರಳಿಗೊಂದು ತಾಳು ಹಾಸಿ ಬುಕ್ಕು ಕಟ್ಟಿ ನಾಲ್ಕು ಬೆರಳಿಗೊಂದು ಕಾಳು ಬೀಳುವಂತೆ ಅಥವಾ ಐದು ಬೆರಳು ಆರು ಬೆರಳಿಗೊಂದು ಕಾಳು ಬೀಳುವಂತೆ ಕಡಲೀ ಬಿತ್ತಿ ಶೇಂಗದ ಬಿತ್ತಿಗೆಯು ಹಾಗೆ ಬಿತ್ತಿ ಅದರ ಮೇಲೆ ಹರಿಗಿ ಮತ್ತು ಅಡ್ಡ ಒವ್ಮೆ ಇದರಂತೆ ಬಿತ್ತಿ ಪೂರ್ವ ಪಶ್ಚಿಮ ಉತ್ತರ ದಕ್ಷಿಣಕ್ಕೆ ಅವರಸ ಚವರಸ ಎರಡು ಸಾಲು ಬಿತ್ತಿದಲ್ಲಿ ಸ್ವಲ್ಪಾದರೂ ಭೂಮಿ ಹೋಗದೆ ಚನ್ನಾಗಿ ಬೆಳೆಯುವದು. ಮುಂಗಾರಿಯು ಕಾಲದಲ್ಲಿ ಎರಿಯು ಹೊಲಗಳಲ್ಲಿ ಬಿತ್ತಬೇಕಾದರೆ ಹೊಂಗಲ ಬಳ್ಳೊಳ್ಳಿಯನ್ನೇ ಬಿತ್ತಬೇಕು ಆ ಪೈರು ನಾಲ್ಕುವರೆ ತಿಂಗಳಿಗೆ ಬರುತ್ತದೆ ಅದನ್ನು ತೆಗೆದುಕೊಂಡು ಕಡಲಿಯು ಬಿತ್ತುವ ಹಾಗಿದ್ದರೆ ಬಳ್ಳೊಳ್ಳಿಯು ಮಧ್ಯದಲ್ಲಿ ಮತ್ತೇನಾದರೂ ಹಾಕಬಾರದು ಅಥವಾ ಎರಡು ಬೆಳಿಯು ಮಾಡಿಕೊಳ್ಳುವ ಇಚ್ಛೆ ಇಲ್ಲದಿದ್ದರೆ ಬಳ್ಳೊಳ್ಳಿಯೊಳಗೆ ಗಜಕ್ಕೊಂದರಂತೆ ಹಗ್ಗಕ್ಕ ಗುಬ್ಬಿಯು ಹಾಕಿ ಅವರಸ ಚವರಸ ಸಾಲಾಗುವ ಹಾಗೆ ಮೆಣಸಿನ ಗಿಡಗಳನ್ನಾಗಲಿ ಬದನೆಯು ಗಿಡಗಳನ್ನಾಗಲಿ ಹಚ್ಚಬೇಕು ಮುಂದೆ ಬಳ್ಳೊಳ್ಳಿ ಆಗಿದು ತೆಗೆದುಕೊಂಡ ಮೇಲೆ ಆ ಗಿಡಗಳ ಮಧ್ಯದಲ್ಲಿ ಹರಗುತ್ತ ಹೋದ ಹಾಗೆ ಮೆಣಸಿನ ಕಾಯಿಗಳಾದರೂ ಬದನಿಯು ಕಾಯಿಗಳಾದರೂ ನೀರು ಕಟ್ಟಿದ ಗಿಡಗಳ ಹಾಗೆ ಆಗುತ್ತವೆ ಹಾಗು ಬಳ್ಳೊಳ್ಳಿಯು ಹೊಲದ ಸುತ್ತಮುತ್ತ ಅವುಡಲ ಗಿಡಗಳನ್ನು ಹೀರಿಯು ಬಳ್ಳಿಯನ್ನು ಬೆಂಡಿಯು ಗಿಡಗಳನ್ನು ಹಾಕಬೇಕು ಹೊಲದಲ್ಲಿ ನೀರು ಬಹಳ ನಿಲ್ಲಬಾರದು ಮತ್ತು ನೀರು ನಿಲ್ಲದ ಹಾಗಾಗಬಾರದು ತಂಪು ಎರಿಯಲ್ಲಿ ಚೋಟು ಗೇಣು ನೀರು ನಿಂತು ಅಲ್ಲಿ ಇಮರಿ ಹೋಗುವ ಹಾಗೆ ಮಡಿಗಳನ್ನು ಮಾಡಬೇಕಾದರೆ ನಾಲ್ಕು ಐದು ಮಾರು ಅಗಲ ಹದಿನಾರು ಇಪ್ಪತ್ತು ಮಾರು ಉದ್ದ ಈ ಪ್ರಕಾರ ಮಡಿ ಮಾಡಿ ಗೊಬ್ಬರ ವಿಶೇಷವಾಗಿ ಹಾಕಿ ಇಂಗ್ರೇಜಿ ಬಿಘೆಕ್ಕೆ ಎರಡು ಮಣದ ಅಜಮಾಸು ಬೀಜ ಬಿತ್ತಬೇಕು. ಹಾಗು ಇದರ ಬೆಳೆಯು ಅಜಮಾಸು ಪ್ರತಿ ಬಿಘೆಕ್ಕೆ ಇಪ್ಪತ್ತು ಮಣದಂತೆ ಬಳ್ಳೊಳ್ಳಿ ಹೊರಡುವದು ಬೀಜದ ಹತ್ತು ಪಟ್ಟು ಬೆಳೆಯಾಗುವದಕ್ಕೆ ಸಂಶಯುವಿಲ್ಲ ಮತ್ತು ಗೊಬ್ಬರ ಹಾಕುವಲ್ಲಿ ಮೆಹನತು ಮಾಡುವಲ್ಲಿ ಹಾಗು ಮಳೆ ಸ್ವಲ್ಪ ಹೆಚ್ಚುಕಡಿಮೆ ಆಗುವಲ್ಲಿ ಸ್ವಲ್ಪ ಹೆಚ್ಚುಕಡಿಮೆ ಬೆಳೆಯಾಗುವದು ಹೇಗಾದರೂ ಹುಸಿ ಹೋಗಲಾರದು, ಮತ್ತು ಬಳ್ಳೊಳ್ಳಿ ಒಳಗೆ ಮೆಣಸಿನ ಗಿಡಗಳನ್ನಾಗಲಿ ಬದನಿಯು ಗಿಡಗಳನ್ನಾಗಲಿ ಹಚ್ಚುವದು ಆಗದಿದ್ದರೆ ಆ ಭೂಮಿಗೆ ಗೊಬ್ಬರ ಇರುವದರಿಂದ ಹರಿಗಿ ಸಿದ್ಧ ಮಾಡಿ ಹಸ್ತ ಚಿತ್ತಿ ಸ್ವಾತಿ ಮಳೆಯಲ್ಲಿ ಸವದತ್ತಿ ಕೂರಿಗೆಯಿಂದ ಮೆಂತ ಬಿತ್ತಬೇಕು ಆ ಮೆಂತೇದ ಒಳಗಾದರೂ ನಾಲ್ಕು ಸೇರಿಗೆ ಒಂದು ಸೇರಿ ಸಾಸಿವೆ ಕಲಿಸಿ ಬಿತ್ತಬೇಕು. ಅದು ವಿಶೇಷವಾಗಿ ಬೆಳೆಯಾಗುತ್ತದೆ. ಮತ್ತು ಅದರಲ್ಲಿ ಸದೆಯು ಇದ್ದರೆ ಸದೆಯನ್ನು ತೆಗಿಸಬೇಕು. ಹಾಗು ಅಂಥ ತಂಪು

ಇದ್ದ ಎರಿಗಳಲ್ಲಿ ಗೊಬ್ಬರದ ಸೊಕ್ಕು ಇಲ್ಲದಿದ್ದರೆ ಹಿಂಗಾರಿಯ ಕಾಲದಲ್ಲಿಯಾದರೂ ಅಥವಾ ಮುಂಗಾರಿಯ ಕಾಲದಲ್ಲಿಯಾದರೂ ಸವದತ್ತಿಯ ಕೂರಿಗೆಯಿಂದ ಹವೀಜ ಬಿತ್ತಿದರೆ ಚನ್ನಾಗಿ ಕಾಳುಗಳಾಗುತ್ತವೆ. ಬಹಳ ಮಂಡುತರವಾದ ಭೂಮಿಗಳಲ್ಲಿ ನೀರು ನಿಂತು ಆರಿದ್ವರೆ ಅಂಥ ಭೂಮಿಗಳಲ್ಲಿ ಸಾಸಿವೆ ಬಿತ್ತಿದರೂ ಬರುತ್ತದೆ. ಅಥವಾ ಮೆಂತೇದಲ್ಲಿ ಪಡಿಗೆ ಒಂದು ಸೆರೆ ಸಾಸಿವೆ ಬಿತ್ತಿದರೂ ಬರುತ್ತದೆ.

ಇಂಥ ತಂಪು ಎರಿಗಳಲ್ಲಿ ಜೀರಿಗಿ ಶಾಜೀರಿಗಿ ಸಬ್ಬಸಗಿ ಸೋಪು ಗಜರೀ ಬೀಜಗಳನ್ನಾದರೂ ಬಿತ್ತಿದರೂ ಬರ ತ್ತದೆ. ಇವುಗಳನ್ನು ಮುಂಗಾರಿಯ ಕಾಲದಲ್ಲಿ ಹಿಂದೆ ಹೇಳಿದ ಹಾಗೆ ಭೂಮಿಯನ್ನು ತಯಾರು ಮಾಡಿ ಗೊಬ್ಬರ ಹಾಕಿ ಬಿತ್ತಬೇಕು. ಸೇರು ಆಳತೆಯ ಜೀರಿಗೆಯಲ್ಲಿ ೮ ಸೇರು ಸಣ್ಣ ಉಸುಕನ್ನು ಕಲಿಸಿ ಬಿತ್ತಬೇಕು

---

# ೮ ನೇ ಪ್ರಕರಣವು.

## ಹತ್ತಿಯು ಮತ್ತು ಹಿಂಗಾರಿ ಮುಂಗಾರಿಗಳ ಮಧ್ಯದ ಬೆಳೆಯು.

ಹತ್ತಿಯಲ್ಲಿ ಮುಂಗಾರಿಯ ಹತ್ತಿ ಬೇರೆ ಆದಕ್ಕೆ ಗಂಗಿ ಹತ್ತಿ ಎನ್ನುತ್ತಾರೆ ಮತ್ತು ಜವಾರಿಹತ್ತಿ ವಿಲಾಯತಿಹತ್ತಿ ಎಂದೂ ಎರಡು ತರದ ಹತ್ತಿಗಳನ್ನು ಈ ದೇಶದಲ್ಲಿ ಬೆಳೆಯುತ್ತಾರೆ ಮತ್ತು ಹಲವು ತರದ ಹತ್ತಿಗಳೂ ಉಂಟು. ಅವುಗಳಲ್ಲಿ ಮುಂಗಾರಿಯ ಹತ್ತಿಯ ಅರಳಿಯು ಬಹಳ ಬಿಳುಪು ಆಗಿ ಗಿಡಗಳಿಗೆ ಕಾಯಿಗಳು ಬಹಳ ಮತ್ತು ಆದರ ಬೆಳೆಯು ವಿಶೇಷವು. ಅದರ ಬೆಳೆಯು ಕಾರ್ತಿಕ ಮಾರ್ಗಶಿರ ಮಾಸಕ್ಕೆ ಕೈಗೆ ಬರುವದು ಮುಂಗಾರಿ ಹತ್ತಿಗಳಲ್ಲಿ ಕೆಂಪುಹತ್ತಿ ಗಂಗಿಹತ್ತಿ ಎಂದು ಎರಡು ವಿಧಗಳಿದ್ದರೂ ಅವುಗಳನ್ನು ಮೃಗಶಿರ ಆರದ್ರಿ ಪುಷ್ಯ ಪುನರ್ವಸು ಮಳೆಗಳ ವರೆಗೂ ಮುಂಗಾರಿಯ ಕಾಲಗಳಲ್ಲಿ ಬಿತ್ತುತ್ತಾರೆ. ಇದರ ಬೆಳೆಯು ಕಾರ್ತಿಕ ಮಾರ್ಗಶಿರ ಮಾಸಕ್ಕೆ ಕೈಗೆ ಬರುವದು ಮತ್ತು ಇದರಲ್ಲಿ ಮತ್ತೊಂದು ಪ್ರಕಾರದ ಮರಹತ್ತಿ ಎಂದು, ಕರೀಹತ್ತಿ ಎಂದು ಎರಡು ವಿಧಗಳುಂಟು. ಅವುಗಳನ್ನು ಹೊಲಗಳಲ್ಲಿ ಬಿತ್ತುವದಿಲ್ಲ ತೋಟಗಳಲ್ಲಿ ಮತ್ತು ಜನರು ತಮ್ಮ ತಮ್ಮ ಮನೆಗಳ ಹಿತ್ತಲುಗಳಲ್ಲಿ ಹಾಕುತ್ತಾರೆ ಅವುಗಳು ದೊಡ್ಡ ಮರಗಳಾಗಿ ನಾಲ್ಕೆಂಟು ವರುಷ ಹಾಗೇ ಇದ್ದು ಆ ಮೇಲೆ ಕಾಯಿಗಳಾಗಲಾರಂಭಿಸಿದರೆ ನೀರಿನ ತಂಪು ಇದ್ದ ಹಾಗೆಲ್ಲ ಸದಾ ಕಾಲದಲ್ಲಿ ಕಾಯಿಗಳಾಗಿ ಒಡೆಯುತ್ತಾ ಇರುವವು. ಆದರ ಕಾಯಿಗಳು ದೊಡ್ಡವಾಗಿ ವಿಲಾಯತೀ ಹತ್ತಿಯ ಕಾಯಿಗಳ ಹಾಗೆ ಕಾಯಿಗಳಾಗುವವು. ಇವುಗಳ ಅರಳಿಯು ಬಹಳ ಬಿಳುಪು. ಮತ್ತು ಬಹು ಮೃದುವಾಗಿರುವದು ಈ ಜಾತಿಯ ಮರಹತ್ತಿಗಳಲ್ಲಿ ಸೀಮೆಯ ಹತ್ತಿ ಎಂದು ಮತ್ತೊಂದು ಪ್ರಕಾರವುಂಟು ಆದರೆ ಅದಾದರೂ ದೊಡ್ಡ ಗಿಡವಾಗಿ ಮರಹತ್ತಿ ಕರಿಹತ್ತಿಯ ಗಿಡಗಳಂತೆ ಸರ್ವದಾ ಕಾಯಿಗಳಾಗುತ್ತಾ ಇರುವವು ಈ ಹತ್ತಿಯ ಗಿಡಗಳನ್ನು ತೋಟಗಳಲ್ಲಿ ನೀರಿನ ತಂಪಿಗೆ ಬೆಳೆಸತಕ್ಕದ್ದು ಆದರೆ ಕೆಲವರು ತಮ್ಮ ತಮ್ಮ ಮನೆಯ ಮುಂದೆ ಅಂಗಳದಲ್ಲಿಯಾಗಲಿ ಅಥವಾ ಹಿತ್ತಲುಗಳಲ್ಲಿಯಾಗಲಿ ಒಂದೆರಡು ಮರಗಳನ್ನು ಬೆಳೆಸಿ ಅದರ ಅರಳಿಯಿಂದ ಜನಿವಾರ ಶಿವಧಾರಗಳನ್ನು ಮಾಡುತ್ತಾರೆ. ಈ ಅರಳಿಯ ನೂಲು ಬಹಳ ಸಣ್ಣಾಗುವದು. ಮತ್ತು ಗಟ್ಟಿಯಾಗಿರುವದು. ಹಾಗು ಈ ಹತ್ತಿಯಿಂದ ಆರತಿಯ ಬತ್ತಿಗಳನ್ನು ಮಾಡುತ್ತಾರೆ ದೀವಿಗೆಯ ಬತ್ತಿಗಳನ್ನು ಕಡಲಿ ಬತ್ತಿಗಳನ್ನು ಖಡ್ಡಿ ಬತ್ತಿಗಳನ್ನು ಮಾಡುತ್ತಾರೆ. ಈ ಹತ್ತಿಯು

ಬಹಳ ಉತ್ತಮ ಪ್ರಕಾರದ್ದಾಗಿರುವದರಿಂದ ಇದನ್ನು ಬೆಳಿಸುತ್ತಾರೆ ಹೊಲಗಳಿಗೆ ಮಾತ್ರ ಉಪಯೋಗವಿಲ್ಲವು.

ಹೊಲಗಳಲ್ಲಿ ಬಿತ್ತತಕ್ಕ ಮುಂಗಾರಿಯಹತ್ತಿ ಕೆಂಪುಹತ್ತಿ ಜವಾರಿಹತ್ತಿ ಹಾಗು ವಿಲಾಯತಿಹತ್ತಿ ಈ ನಾಲ್ಕು ಪ್ರಕಾರದ ಹತ್ತಿಯಿಂದ ವರ್ತಕಜನರಿಗೂ ಕೃಷಿಕಜನರಿಗೂ ಕೂಡಾ ಹಿತವಾದದ್ದಾಗಿ ಭೂಮಿಯಲ್ಲಿ ಬೆಳೆಯುವ ಸಕಲ ಫಲವೃಕ್ಷಗಳಲ್ಲಿ ಈ ಹತ್ತಿಯು ಗಿಡವು ಸಣ್ಣದಾದಾಗ್ಯೂ ಭೂಲೋಕದ ಸಮಸ್ತ ಫಲಗಳಲ್ಲಿ ಶ್ರೇಷ್ಠವಾದ ಫಲವಾದುದರಿಂದ ಹಿಂದೆ ಮುಸಲ್ಮಾನರಲ್ಲಿ ಪ್ರಸಿದ್ಧ ಕವಿಗಳಾದ ಸಾಧು ಜನರಲ್ಲಿ ಕಬೀರನು ಮತ್ತು ಅವನ ಮಗನಾದ ಕಮಾಲನು ಈ ಉಭಯತರ ಪ್ರಸಂಗ ಕಾಲಕ್ಕೆ ಒಂದು ದಿನ ಕಬೀರನು ಅಂದದ್ದು.

ಅಂಬೀಕಫಲಂ । ಬಂಧೂಕಬಲಂ ॥
ನದೀಕಜಲಂ । ಸೂರ್ಯೇಕತೇಜಂ ॥

ಎಂದು ನುಡಿಯಲಾಗಿ ಇದರ ಅರ್ಥವೇನೆಂದು ಕಮಾಲನು ಕೇಳಿದನು. ಅದಕ್ಕೆ ಈ ಭೂಲೋಕದ ಹಣ್ಣಿನಲ್ಲಿ ಉತ್ತಮ ಫಲವು ಯಾವದೆಂದರೆ— ಮಾವಿನ ಫಲವು ಶ್ರೇಷ್ಠವಾದದ್ದು. ಮತ್ತು ಸಕಲ ಬಲದಲ್ಲಿ ಅಣ್ಣತಮ್ಮಂದಿರ ಬಲವೇ ಶ್ರೇಷ್ಠವು ಸಕಲ ಜಲದಲ್ಲಿ ನದಿಯ ಜಲವೇ ಶ್ರೇಷ್ಠವು ಹಾಗು ಸರ್ವ ತೇಜಗಳಲ್ಲಿ ಸೂರ್ಯನ ತೇಜವೇ ಶ್ರೇಷ್ಠವು. ಎಂದು ಕಬೀರನು ಹೇಳುತ್ತಿರಲಾಗಿ ಇದನ್ನು ಧಿಃಕ್ಕರಿಸಿ ಕಮಾಲನು ಅಂದದ್ದು

ಕಾಫೇಕಫಲಂ । ಭುಜೇಕಬಲಂ ॥
ನಯನೇಕತೇಜಂ । ಮೇಘೇಕಜಲಂ

ಅವನು ಇದರ ಅರ್ಥವನ್ನು ಹೇಳಿದ್ದೇನಂದರೆ, ಫಲಗಳಲ್ಲಿ ಹತ್ತಿಯ ಫಲವೇ ಶ್ರೇಷ್ಠವು ಬಲದಲ್ಲಿ ತನ್ನ ಭುಜಬಲವೇ ಶ್ರೇಷ್ಠವು. ಉಳಿದ ಬಲವೆಲ್ಲ ನಿಷ್ಪ್ರಯೋಜಕವು ಸರ್ವ ತೇಜದಲ್ಲಿ ನೇತ್ರದ ತೇಜವೇ ಶ್ರೇಷ್ಠವು. ನೇತ್ರದಲ್ಲಿ ತೇಜವಿಲ್ಲದವನಿಗೆ ಸೂರ್ಯನ ತೇಜವೇತಕ್ಕೆ? ಸರ್ವ ಜಲದಲ್ಲಿ ಮೇಘ ಜಲವೇ ಶ್ರೇಷ್ಠವು. ಮೇಘ ಜಲವು ಸಕಲ ಪ್ರಾಣಿಗಳಿಗೆ ಜೀವನಾಧಾರವಾದ ಹಾಗೆ ನದಿಯ ಜಲವು ಜೀವನಾಧಾರವಾಗಬಹುದೇ? ಮೇಘ ಜಲವಿಲ್ಲದಿದ್ದರೆ ನದಿಯ ಜಲವೆಲ್ಲಿರುವದು? ಎಂದು ಹೇಳಿ ಕಬೀರನನ್ನು ಸಮ್ಮತಿಪಡಿಸಿದನು

ಅದು ಕಾರಣ ಭೂಲೋಕದ ಸಮಸ್ತ ಫಲಗಳಲ್ಲಿ ಹತ್ತಿಯ ಫಲವು ಅತ್ಯುತ್ತಮವೆಂದು ಹೇಳತಕ್ಕದ್ದು ಮನುಷ್ಯರುಗಳಿಗೆ ವಸ್ತ್ರ ಭೂಷಣವಿಲ್ಲದ

ದಿದ್ದರೆ ಹತ್ತಿಯು ಬೆಳೆಯು ಚನ್ನಾಗಿ ಆಗಲಾರದು. ಮತ್ತು ಗೊಬ್ಬರವನ್ನು ಹೊಲಕ್ಕೆ ಹಾಕಿದ ವರ್ಷ ಹತ್ತಿಯನ್ನು ಬಿತ್ತಬಾರದು. ಎರಡನೇ ವರ್ಷ ಬಿತ್ತಬೇಕು.

ಒಂದು ವರ್ಷ ಹತ್ತಿಯನ್ನು ಬಿತ್ತಿದ ಹೊಲಕ್ಕೆ ಎರಡನೆಯ ವರ್ಷ ಹತ್ತಿಯನ್ನು ಬಿತ್ತಬಾರದು. ಒಂದು ವರ್ಷ ಎರಡು ವರ್ಷ ಬದಲು ಬದಲು ಮಾಡಿ ಬಿತ್ತುತ್ತ ಹೋಗಬೇಕು. ಮತ್ತು ಕಡಲಿಯನ್ನು ಬಿತ್ತಿದ ಹೊಲಕ್ಕೆ ಹತ್ತಿಯನ್ನು ಬಿತ್ತಬಾರದು. ಹತ್ತಿಯನ್ನು ಬಿತ್ತಿದ ಹೊಲಕ್ಕೆ ಕಡಲಿಯನ್ನು ಬಿತ್ತಬಾರದು.

ಎರಿಯ ಹೊಲವಾದರೆ ಒಂದು ವರ್ಷ ಬಿಳಿಜೋಳವನ್ನು ಬಿತ್ತಬೇಕು ಅಥವಾ ಎರಿಯಲ್ಲಿ ಬಡ ಎರಿಯಾದರೆ ಒಂದು ವರ್ಷ ಮುಂಗಾರಿಯನ್ನು ಬಿತ್ತಬೇಕು. ಹಾಗು ಮುಂಗಾರಿಯಾಗಲಿ ಬಿಳಿಜೋಳವನ್ನಾಗಲಿ ಜೋಳ ವನ್ನು ಬಿತ್ತುವ ವರ್ಷ ಗೊಬ್ಬರವನ್ನು ಹಾಕಿ ಎರಡು ಸಾಲು ಮಡಿಕೆ ಹೊಡೆದು ಮೂರು ಸಾಲು ಚನ್ನಾಗಿ ಹರಿಗಿ ಮತ್ತು ಮಳೆಯಾದ ಮೇಲೆ ಒಂದು ಸಾಲು ಎರಡು ಸಾಲು ನೊಲ್ಲಿಯ ಹರತಿಯ ಹರಿಗಿ ಹೊಲವನ್ನು ಹಸನ ಮಾಡಿ ಜೋಳವನ್ನು ಬಿತ್ತಬೇಕು. ಆ ಮೇಲೆ ಎರಡನೆಯ ವರ್ಷ ಹತ್ತಿಯನ್ನು ಬಿತ್ತಬೇಕು

ಹತ್ತಿಯನ್ನು ಬಿತ್ತುವ ಹೊಲಕ್ಕೆ ಮೊದಲು ಒಂದು ಸಾಲು ಎರಡು ಸಾಲಾ ಗಲಿ ಮಡಿಕೆಯ ಹೊಡೆದು ಮೂರು ಸಾಲು ಬೇಸಿಗೆಯಲ್ಲಿ ಹರಿಗಿ ಮುಂದೆ ಮಳೆಯಾಗಿ ಹೊಲದಲ್ಲಿ ಸದಿಯು ಹುಟ್ಟಿದ ಮೇಲೆ ಆ ಸದಿಯನ್ನು ಬಲಿಯು ಗೊಡದೆ ಹೊರಪು ನೋಡಿ ಎರಡು ಸಾಲು ಹರಿಗಿ ಹತ್ತಿಯನ್ನು ಬಿತ್ತಬೇಕು. ಹಸನಾದ ಕಿರ್ದಿ ಹೊಲವಾದಾಗ್ಯೂ ವರ್ಷ ವರ್ಷಕ್ಕೊ ಮಡಿಕೆ ಹೊಡಿಯು ವದನ್ನು ಬಿಡಲಾಗದು. ಮತ್ತು ಜೋಳವನ್ನು ಬಿತ್ತುವ ವರ್ಷ ಗೊಬ್ಬರ ವನ್ನು ಹಾಕಬೇಕು ಅಥವಾ ಗೊಬ್ಬರವನ್ನು ಹಾಕುವದು ಆಗದಿದ್ದರೆ ಒಂದು ವರ್ಷ ತೈಲ ಧಾನ್ಯವಾದ ಗೂರೆಳ್ಳು ಎಳ್ಳುಗಳನ್ನು ಬಿತ್ತಿ ಎರಡನೆಯ ವರ್ಷ ಜೋಳವನ್ನು ಮೂರನೆಯ ವರ್ಷ ಹತ್ತಿಯನ್ನು ಬಿತ್ತಬೇಕು.

ಕೇಸರಿಭೂಮಿ ಕರಲುಭೂಮಿಯಾಗಿದ್ದರೆ ಆ ಹೊಲಗಳಲ್ಲಿ ಒಂದು ವರ್ಷ ಮುಂಗಾರಿಯ ಜೋಳವನ್ನು ಒಂದು ವರ್ಷ ಹತ್ತಿಯನ್ನು ಬಿತ್ತಬೇಕು. ಅದೇ ಕಾಲಿಗಿಯಾಗಿ ಎರಡೂ ಬೆಳೆಗಳಿಗೂ ಗೊಬ್ಬರದಂತೆ ಪುಷ್ಟಿಯಾಗಿರು ತ್ತದೆ. ಮತ್ತು ನಾಲ್ಕೈದು ವರ್ಷದಲ್ಲಿ ಒಂದು ವೇಳೆಯಾದರೂ ಗೊಬ್ಬರವನ್ನು ಹಾಕಬೇಕು.

ತನಗೆ ಗೊಬ್ಬರವು ಶೀರ ಸಿಕ್ಕದ ಹಾಗಿದ್ದರೂ ಅಥವಾ ಹೊಲವು ದೂರಾಗಿ ತನ್ನಿಂದ ಗೊಬ್ಬರವನ್ನು ಹಾಕುವದು ಆಗದಿದ್ದರೆ ಚಲೋ ಗೊಬ್ಬರವನ್ನು ಖರೀದಿಗೆ ತೆಗೆದುಕೊಂಡು ಅದರಲ್ಲಿಯು ಕಡ್ಡಿ ಕಸವನ್ನು ಆರಿಸಿ ಹೊರಸು ಯಾಸಿಯು ಮೇಲೆ ನಿಲುವಾಗಿ ನಿಲಿಸಿ ಹಾಳು ಮಣ್ಣು ಸೋಸಿದ ಹಾಗೆ ಸೋಸಿ ಬುಕ್ಕದಲ್ಲಿ ಇಳಿಯುವ ಹಾಗೆ ಮಾಡಿ ಹತ್ತೆಂಟು ಭಂಡಿ ಗೊಬ್ಬರವನ್ನು ಹೊಲಕ್ಕೆ ಜೋಳವನ್ನು ಬಿತ್ತುವ ಮುಂದೆ ಒಯ್ದು ಅಲ್ಲಲ್ಲಿಗೆ ಅನುವರಿತು ಗುಂಪಿಯು ಹಾಕಿಸಿ ಕೂರಿಗೆಯು ಹಿಂದೆ ಮೂರು ತಾಳಿನ ಕೂರಿಗೆಯಾದರೆ ಮೂರು ಮಂದಿ, ನಾಲ್ಕು ತಾಳಿನ ಕೂರಿಗೆಯಾದರೆ ನಾಲ್ಕು ಮಂದಿ, ಹುಡುಗರನ್ನಾಗಲಿ ಹೆಂಗಸರನ್ನಾಗಲಿ ಹಚ್ಚಿ ತಾಳಿಗೆ ಬುಕ್ಕಾ ಕಟ್ಟಿ ಅವರ ಉಡಿ ಒಳಗೆ ಗೊಬ್ಬರವನ್ನು ಕಟ್ಟಿಸಿ ಮುಂದೆ ಕೂರಿಗೆಯಿಂದ ಜೋಳವನ್ನು ಬಿತ್ತುತ್ತ ಹೋದ ಹಾಗೆ ಹಿಂದೆ ಸಾಲಿನಲ್ಲಿ ಗೊಬ್ಬರ ಬೀಳುವ ಹಾಗೆ ಬುಕ್ಕದಿಂದ ಗೊಬ್ಬರವನ್ನು ಹಾಕುತ್ತ ಅದರ ಹಿಂದೆ ಕುಂಟೆಯಿಂದ ಬೆಳೆ ಸಾಲು ಹರಿಗಿ ಸಾಲು ಮುಚ್ಚುತ್ತ ಹೋಗಬೇಕು. ಈ ಪ್ರಕಾರ ಹೊಲವನ್ನು ಬಿತ್ತಿದ ಮೇಲೆ ಚನ್ನಾಗಿ ಹದದ ಮೇಲೆ ಮೂರು ಸಾಲು ಎಡಿಯು ಹೊಡೆದು ಒಂದು ಸಾಲು ನಾಟಿಕೆಯು ಸಂದಿನಲ್ಲಿ ಸದೆಯು ತೆಗಿಸಿ ಬಿಟ್ಟರೆ ಮುಂಗಾರಿಯಾದರೆ ಎರಡು ಬೆಳೆಯು ಸರ್ವೋತ್ಕೃಷ್ಟವಾಗುವದು. ಹೇಗಂದರೆ— ಹತ್ತಿಯು ಕಾಲಿಗಿ ಮತ್ತು ಗೊಬ್ಬರದ ಪುಷ್ಟಿಯು ಎರಡರಿಂದ ವಿಶೇಷ ಬೆಳೆಯಾಗುವದು. ಮತ್ತು ಎರಿಯು ಭೂಮಿಯಾದರೆ ಚಿಗಿತ ಬೆಳೆಯು ಇದಕ್ಕಿಂತಲೂ ವಿಶೇಷವಾಗುವದು. ಹಾಗು ಬಿಳಿಜೋಳವಾದರೆ ಒಂದೇ ಬೆಳೆಯಾದರೂ ಬಹಳ ವಿಶೇಷವಾಗಿ ಕಾಳು ದಮ್ಮವಾಗಿ ಶೀವ್ರವೇ ಬೆಳೆಯಾಗಿ ಅದು ಸರ್ವೋತ್ಕೃಷ್ಟವಾಗುವದು. ಅದು ಕಾರಣ ಗೊಬ್ಬರವನ್ನು ಹಾಕುವ ತ್ರಾಣವಿಲ್ಲದವರು ಈ ರೀತಿಯಿಂದ ಬಿತ್ತುವ ಸಮಯದಲ್ಲಿ ಗೊಬ್ಬರವನ್ನು ಹಾಕುವದು. ಈ ಹೊಲವು ಮುಂದಿನ ವರ್ಷ ಹತ್ತಿಯು ಬೆಳೆಗೆ ಪುಷ್ಟಿಯಾಗಿರುವದು.

ಹತ್ತಿಯು ಬಿತ್ತಿದ ಹೊಲಕ್ಕೆ ಮುಂದಿನ ವರ್ಷ ಜೋಳವನ್ನು ಬಿತ್ತುವದೇ ಹಿತವು. ಅಥವಾ ಒಂದು ಪಕ್ಷಕ್ಕೆ ಗೋದಿಯುನ್ನು ಬಿತ್ತಿದರೂ ಸಂಶಯುವಿಲ್ಲವು. ಕಡಲಿ ಅಗಸಿ ಮೊದಲಾದ ಯಾವ ಪದಾರ್ಥವನ್ನಾದರೂ ಹತ್ತಿಯು ಹೊಲಕ್ಕೆ ಬಿತ್ತಲಾಗದು ಯಾತಕ್ಕೆಂದರೆ ಹತ್ತಿಯು ಬೇರು ಭೂಮಿಯಲ್ಲಿ ನೆಟ್ಟಗೆ ಹೋಗುತ್ತದೆ. ಕಡಲಿ ಅಗಸಿಯು ಬೇರಾವರೂ ಭೂಮಿಯಲ್ಲಿ ನೆಟ್ಟಗೆ ಹೋಗುವದರಿಂದ ಅವುಗಳಿಗೆ ಅಡ್ಡ ಬೇರುಗಳು ಇಲ್ಲದ ಕಾರಣ ಹತ್ತಿಯುನ್ನು ಬಿತ್ತಿದ ಹೊಲಕ್ಕೆ ಕಡಲಿ ಅಗಸಿ ಮತ್ತು ಇದರಂತೆ ಬೇರುಗಳು ನೆಟ್ಟಗೆ ಹೋಗುವ ಕುಲವನ್ನು ಬಿಟ್ಟು ಮತ್ತಾವ ಧಾನ್ಯಗಳನ್ನಾದರೂ ಬಿತ್ತ

ಬೇಕು. ಹತ್ತಿಯ ಕಾಲಿಗಿಯು ಜೋಳ ಬಿಳಿಜೋಳ ಮತ್ತು ಗೋದಿಯನ್ನು ಬಿತ್ತುವದಕ್ಕೆ ಉಪಯೋಗವು. ಆದರೆ ಹತ್ತಿಯ ಕಾಲಿಗಿ ಇದ್ದ ಹೊಲದಲ್ಲಿ ಹೆಸರು ಮುಂತಾದ ಧಾನ್ಯಗಳು ವಿಶೇಷ ಬೆಳೆಯುವದಿಲ್ಲ.

## ಹಿಂಗಾರಿ ಧಾನ್ಯದಲ್ಲಿ ಬಿಳಿಜೋಳವು.

ಧಾನ್ಯಗಳಲ್ಲಿ ಬಿಳಿಜೋಳದ ರುಚಿಯು ವಿಶೇಷವು. ಜೋಳದ ಕುಲದಲ್ಲಿ ಈ ಜೋಳವು ಸರ್ವ ಜನರಿಗೆ ಹಿತಕರವು. ಇದರ ಬೆಳೆಯಾದರೂ ವಿಶೇಷವಾಗುವದು. ಮತ್ತು ಮನುಷ್ಯರುಗಳಿಗೂ ಪಶುಗಳಿಗೂ ಉತ್ತಮ ಆಹಾರವು ಈ ಬಿಳಿಜೋಳದ ಪೈರು ಮಾಡುವದು ಹೇಗಂದರೆ ಯಾವತ್ತು ಎರಿಯ ಹೊಲಗಳಿಗೆ ಮತ್ತು ರಸವತ್ತಾದ ತಂಪಿನ ಎರಿಯ ಹೊಲಗಳಿಗೆ ಮುಂಗಾರಿಯಕಿಂತಲೂ ಬಿಳಿಜೋಳವನ್ನು ಬಿತ್ತುವದೇ ಉತ್ತಮವು ಬಿಳಿಜೋಳವನ್ನು ಬಿತ್ತುವ ಎರಿಯ ಹೊಲಗಳಿಗೆ ಗೊಬ್ಬರವನ್ನು ಹಾಕಿ ಮಡಿಕೆಯ ಹೊಡೆದು ಮೂರು ಸಾಲು ಬೇಸಿಗೆಯಲ್ಲಿ ಹರಗಬೇಕು. ಆ ಮೇಲೆ ನೊಲ್ಲಿ ಹುಟ್ಟಿದ ಹಾಗೆ ಒಂದು ಸಾಲು ಎರಡು ಸಾಲು ಒಳಗಡೆಗೆ ಮಳೆಯಾದ ಮೇಲೆ ಹರಗಿರಬೇಕು. ನೊಲ್ಲಿಯ ಹರತಿ ಹರಗಬೇಕಾದರೆ ಹೊರಪು ನೋಡಿ ಸದಿಯು ಹೋಗುವ ಹಾಗೆ ಹರಗಬೇಕು. ಆ ಮೇಲೆ ಬಿತ್ತುವ ಮುಂದೆ ಮತ್ತೊಮ್ಮೆ ಹರಿಗಿ ಬಿತ್ತಬೇಕು. ಬಿಳಿಜೋಳವನ್ನು ಬಿತ್ತುವ ತತಿಯು ಉತ್ತರಿ ಹಸ್ತ ಚಿತ್ತಿ ಸ್ವಾತಿ ವಿಶಾಖಿಯ ವರೆಗೂ ಇರುತ್ತದೆ ಅದರಲ್ಲಿ ಹುಬ್ಬಿಯ ಕಡೆಯ ಎರಡು ಚರಣದಿಂದ ಉತ್ತರಿಯ ಅಂತ್ಯದ ವರೆಗೂ ಬಿತ್ತುವದು ಉತ್ತಮವು. ಹಸ್ತದಲ್ಲಿಯಾದರೂ ಸ್ವಲ್ಪ ಉತ್ತಮವೇ ಸರಿ. ಮತ್ತು ಚಿತ್ತಿಯಲ್ಲಿ ಮಧ್ಯಮವು. ಸ್ವಾತಿಯಲ್ಲಿ ಬಿತ್ತುವದು ಸ್ವಲ್ಪ ಸಾಮಾನ್ಯವು. ಆದಾಗ್ಯೂ ಅಕಲ್ಪಿತವಾಗಿ ಅಲ್ಲಿಯ ವರೆಗೂ ಹಸಿಯಾಗದೆ ಹೋಗದೆ ಅನಿವಾರ್ಯಹ ಪಕ್ಷಕ್ಕೆ ಸ್ವಾತಿ ಮತ್ತು ವಿಶಾಖಿಯಲ್ಲಿಯಾದರೂ ಬಿತ್ತಬೇಕು ಆದಷ್ಟಾಗಲಿ ಭೂಮಿಯನ್ನು ವ್ಯರ್ಥವಾಗಿ ಕಳೆಯಬಾರದು. ಕಾಳಮೇಘಕ್ಕೆ ವಿಶಾಖಾ ಮಳೆಯೇ ಕಡೆಯು. ಮತ್ತು ಹುಬ್ಬೀ ಮಳೆಯಲ್ಲಿ ಕೋಡಮುರಕನ ಜೋಳ ಮುಂತಾದ ಜೋಳವನ್ನು ಬಿತ್ತಬೇಕು.

ಬಿಳಿಜೋಳವನ್ನು ಬಿತ್ತಿದ ಹೊಲಕ್ಕೆ ಹತ್ತಿಯನ್ನು ಬಿತ್ತಬೇಕು. ಆದರೆ ಎರಡು ವರ್ಷ ಬಿಳಿಜೋಳವನ್ನು ಬಿತ್ತಿ ಮೂರನೆಯ ಬೆಳಿಗೆ ಹತ್ತಿಯನ್ನು ಬಿತ್ತಿದರೆ ಹತ್ತಿಯ ಬೆಳೆಯು ಅತಿ ವಿಶೇಷವಾಗುವದು. ಆದರೆ ಈ ಹೊಲಕ್ಕೆ ಹತ್ತಿಯನ್ನು ಬಿತ್ತಿದ ಮೇಲೆ ಮುಂದಿನ ವರ್ಷ ಗೊಬ್ಬರವನ್ನು ಹಾಕುವದಕ್ಕೆ ಅನುಕೂಲವಿಲ್ಲದಿದ್ದರೆ ಎರಡು ವರ್ಷ ಜೋಳವನ್ನು ಒಂದು ವರ್ಷ ಹತ್ತಿಯನ್ನು ಬಿತ್ತುತ್ತ ಹೋಗಬೇಕು.

ಬಿಳಿಜೋಳದಲ್ಲಿಯಾದರೂ ಕುಸಬಿಯ ಅಕ್ಕಡಿಯನ್ನು ಹಾಕಬೇಕು. ಹಾಗು ವಟಾಣಿ ಧಾನ್ಯವೆಂದರೆ ಚಣಿಗಿ ಲಂಕಿ ಬಟ್ಟಿಗಡಲಿ ಕರಿಹೆಸರು ಮೊದಲಾದವುಗಳನ್ನು ಕೂಡಿಸಿ ಬಿತ್ತಬೇಕು ಹಾಗು ಚಲೋ ಹೊಲವಾಗಿದ್ದರೆ ಹಾಗೇ ಬೇರೆ ಬೇರೆ ಬಿತ್ತಿದರೆ ವಿಶೇಷ ಬೆಳೆಯಾಗುವದು. ಬಿಳಿಜೋಳದ ಬೆಳೆಯು ಮತ್ತು ಧಾನ್ಯವು ಮುಂಗಾರಿಯಕಿಂತಲೂ ವಿಶೇಷವಾದದ್ದು. ಇದರ ಬೆಳೆಯಾದರೂ ನಾಲ್ಕು ತಿಂಗಳದೊಳಗೆ ಕೈಗೆ ಬರುವದು. ಮತ್ತು ಭೋಜನಕ್ಕೆ ಹಿತಕರವಾದ ಪದಾರ್ಥವು.

ಉಸುಕು, ಸಡಿಭೂಮಿ, ಮೊರಡಿ, ಮಸಬು ಮುಂತಾದ ಭೂಮಿಗಳಲ್ಲಿ ಕೋಡಮುರಕನ ಜೋಳವನ್ನು ಹುಬ್ಬೀ ಮಳೆಯಲ್ಲಿ ಬಿತ್ತಿದರೆ ಎರಡುವರೆ ತಿಂಗಳಿಗೆ ಬರುತ್ತದೆ ಈ ಕೋಡಮುರಕನ ಜೋಳವನ್ನು ಬಿತ್ತಬೇಕಾದರೂ ಗೊಬ್ಬರವನ್ನು ಹಾಕಿ ಬೇಸಿಗೆಯಲ್ಲಾಗಲಿ ಅಥವಾ ಒಂದು ಮಳೆಯಾದ ಮೇಲಾಗಲಿ ಮಡಿಕೆಯ ಹೊಡೆದು ಕುರಿಗಳನ್ನು ತರುಬಿಸಿ ನಾಲ್ಕು ಸಾಲು ಐದು ಸಾಲು ಚನ್ನಾಗಿ ಹರಗಿ ಬಿತ್ತಿದರೆ ಬೆಳೆಯು ಉತ್ಕೃಷ್ಟವಾಗುವದು

ಬಿಳಿಜೋಳದಲ್ಲಾದರೂ ಬಹಳ ಕುಲಗಳುಂಟು. ಅವುಗಳಲ್ಲಿ ದಮ್ಮ ಕಾಳುಗಳಾದ ಬಿಳಿಯ ಬಣ್ಣದ ಗಟ್ಟಿ ತೆನೆಯ ಬೀಜಗಳು ಅಂಧೇಲೀ ಪ್ರಾಂತದಲ್ಲಿ ಬೆಳೆಯುತ್ತವೆ. ಆ ಜೋಳವು ಬಿಳಿಜೋಳದ ಕುಲದಲ್ಲಿ ಸರ್ವೋತ್ಕೃಷ್ಟವಾಗಿ ನೋಟಕ್ಕೆ ರಂಜನೆಯಾಗಿ ಊಟಕ್ಕೆ ರುಚಿಕರವಾಗಿ ಇರುವದಾದ ಕಾರಣ ಆ ದೇಶದ ಉತ್ತಮ ಬೀಜವನ್ನು ಪ್ರಯತ್ನಿಸಿ ತಂದು ಬಿತ್ತಬೇಕು. ಮತ್ತು ಕೆಲವರು ಆ ದೇಶದ ಬೀಜವು ಈ ದೇಶದಲ್ಲಿ ಬೆಳೆಯುವದಿಲ್ಲವೆನ್ನುತ್ತಾರೆ ಇದರ ಪರೀಕ್ಷೆಯನ್ನು ಯಾರೂ ಮಾಡದೆ ವಿಪರೀತ ತಿಳುವಳಿಕೆಯಿಂದ ಇಂಥ ಸಂಶಯವನ್ನು ಹಿಡಿಯದೆ ಯಾವ ಧಾನ್ಯದ ಬೀಜಗಳಾದರೂ ಯಾವ ದೇಶದಲ್ಲಿಯಾದರೂ ಸರ್ವೋತ್ಕೃಷ್ಟವಾದ ಉತ್ತಮ ಬೀಜಗಳನ್ನು ತಂದು ಹದಬೆದಿಯ ಕಾಲವನ್ನು ತಿಳಿದು ಬಿತ್ತಿದರೆ ಅದರಂತೆ ಉತ್ತಮ ಧಾನ್ಯಗಳಾಗುವವು ಅಥವಾ ಒಂದು ವರ್ಷ ಹದ ತಪ್ಪಿ ಬಿತ್ತೋಣದರಿಂದಾಗಲಿ ಅಥವಾ ಮಳೆಯು ಹೆಚ್ಚುಕಡಿಮೆಯಾಗುವದರಿಂದಾಗಲಿ ಅಥವಾ ಹೊಲವನ್ನು ಹರಗುವದರಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿ ಹದ ತಪ್ಪಿದರಾಗಲಿ ಒಂದು ವರ್ಷ ಬೆಳೆಯದೆ ಹೋದರೆ ಆ ಪದಾರ್ಥಗಳು ನಮ್ಮ ದೇಶದಲ್ಲಿ ಆಗುವದಿಲ್ಲವೆಂದು ಬಿಟ್ಟುಬಿಡಲಾಗದು ಒಂದು ವರ್ಷ ಬೆಳೆಯದಿದ್ದರೂ ಮತ್ತೊಂದು ವರ್ಷವಾದರೂ ಬೆಳೆಯುತ್ತವೆ. ಅದು ಕಾರಣ ಭೂಮಿಗೆ ಬೀಜವನ್ನು ಬಿತ್ತಬೇಕಾದರೆ ಚಲೋ ಬೀಜಗಳನ್ನು ಇದ್ದಲ್ಲಿಂದ ತರಿಸಿ ಬಿತ್ತಬೇಕು. ಯಾವ ಬೀಜಗಳನ್ನು ಬಿತ್ತುವರೋ ಅದರಂತೆ ಧಾನ್ಯಗಳು ಆಗುವವು. ಇದಕ್ಕೆ ಸಂಶಯಪಡಬಾರದು.

## ಗೋಧಿಯು.

ಗೋಧಿಯು ಎಲ್ಲ ಭೂಖಂಡಗಳ ಸಮಸ್ತ ದೇಶಗಳಲ್ಲಿ ಬೆಳೆಯುವದು ಆದರಲ್ಲಿ ಕೆಲಕೆಲವು ದೇಶಸ್ಥರು ಗೋಧಿಯನ್ನು ವಿಶೇಷವಾಗಿ ಬೆಳೆಯುತ್ತಾರೆ ಗೋಧಿಯನ್ನು ಬಿತ್ತುವದಕ್ಕೆ ಮುಖ್ಯವಾಗಿ ಹೊಲವು ಸಮತಳ ಅಥವಾ ತಗ್ಗು ಭೂಮಿಯಾಗಿರಬೇಕು. ಮತ್ತು ಗೋಧಿಯನ್ನು ಬಿತ್ತಿ ಪೈರು ಮಾಡುವ ಕ್ರಮವನ್ನು ಈ ಪ್ರಕರಣದಲ್ಲಿ ಮುಂದಿನ ಕಲಿಮಿನಲ್ಲಿ ಸವಿಸ್ತಾರವಾಗಿ ಹೇಳುವೆವು ಮತ್ತು ಗೋಧಿಯನ್ನು ಬಿತ್ತುವದಕ್ಕೆ ಹೊಲವು ಮಡಿಯ ಭೂಮಿ ಮಂಡು ಭೂಮಿ ಮತ್ತು ಕರಲು. ಭೂಮಿ ನಿರಸಾದ ಎರಿಯ ಭೂಮಿಯಾಗಿದ್ದರೆ ಅತ್ಯುತ್ತಮ ಬೆಳೆಯಾಗುವದು. ಗೋಧಿಯ ಪೈರು ಮಾಡುವದು ಹೇಗೆಂದರೆ—

ಗೋಧಿಯನ್ನು ಬಿತ್ತುವ ಹೊಲವು ಮಡಿಕಟ್ಟು ಅಥವಾ ನಿರಸಾದ ಎರಿಯಾದರೆ ಅಂಥ ಹೊಲವನ್ನು ಎರಡು ಸಾಲು ಮಡಿಕೆ ಹೊಡೆದು ಬೇಸಿಗೆಯಲ್ಲಿ ಮೂರು ಸಾಲು ಹರಗಬೇಕು. ಅದು ಮೊದಲೇ ಗೊಬ್ಬರದ ಸೊಕ್ಕಿನ ಹೊಲವಾದರೆ ಮತ್ತೊಂದು ಸಾಲು ಮಡಿಕೆಯು ಹೊಡೆದು ಹಾಗೇ ಬಿಡಬೇಕು ಆ ಮೇಲೆ ಮುಂಗಾರಿಯ ಪೂರ್ವದ ಮಳೆಯಾಗಿ ಸಾಲಿನಲ್ಲಿ ನೀರು ನಿಂತು ತಂಪು ಹಿಡಿದಿರುವದು. ತದನಂತರ ಹೊರಪು ನೋಡಿ ಚನ್ನಾಗಿ ಒಂದು ಸಾಲು ಹರಗಬೇಕು ಮತ್ತು ಮುಂಗಾರಿಯನ್ನು ಬಿತ್ತಿದ ಮೇಲೆ ಒಂದು ಸಾಲು ಹೊಂಬ ಹಸಿಯೊಳಗೆ ಹರಗಬೇಕು ಪುನಃ ಹತ್ತಿಯನ್ನು ಬಿತ್ತಿದ ಮೇಲೆ ಒಂದು ಸಾಲು ಹರಗಬೇಕು ಈ ಪ್ರಕಾರ ಬೇಸಿಗೆಯಲ್ಲಿ ಮೂರು ಸಾಲು ಮಳೆಯಾದ ಮೇಲೆ ಸಮಯವನ್ನರಿತು ಹೊಂಬಸಿ ಒಳಗೆ ಮೂರು ಸಾಲು ನಾಲ್ಕು ಸಾಲು ಹರಗಿದ ಮೇಲೆ ಗೋಧಿಯನ್ನು ಬಿತ್ತುವ ಸಮಯಕ್ಕೆ ನೊಲ್ಲಿ ಮೊದಲಾದ ಹುಲ್ಲು ಸದಿಯು ನಾಟಿದ್ದರೆ ಮತ್ತೊಂದು ಸಾಲು ಹರಿಗಿ ಗೋಧಿಯನ್ನು ಬಿತ್ತಬೇಕು ಗೋಧಿಯನ್ನು ಬಿತ್ತುವ ಹೊಲವನ್ನು ಹರಗಿದಷ್ಟು ಉತ್ತಮವು. ಏಳು ಸಾಲು ಹರಗಿದರ ಗೋಧಿಯ ಬೆಳೆಯು ವಿಶೇಷವು. ಇನ್ನು ಒಂದು ಸಾಲು ಹೆಚ್ಚಾದರೂ ಚಿಂತೆಯಿಲ್ಲ. ಹದದ ಮೇಲೆ ಹರಗುವಲ್ಲಿ ಕಡಿಮೆ ಮಾಡಬಾರದು

ಕರಲು ಬೆರಿಕೆಯಾದ ಹೊಲಕ್ಕೆ ಮತ್ತು ತೀವ್ರ ಹಸಿಯಾಗದಂಥ ಎಟ್ಟಿ ಕರಲಾದರೆ ಅಂಥ ಹೊಲಕ್ಕೆ ಗೋಧಿಯನ್ನು ಬಿತ್ತಬೇಕಾದರೆ ಮುಂಗಾರಿಯ ಪೂರ್ವದ ಮಳೆಯಾಗುವದಕ್ಕಿಂತ ಮೊದಲೇ ಎರಡು ಎತ್ತಿನ ಮಡಿಕೆಯನ್ನು ಹೊಡೆದು ಹರಗದೆ ಬಿಟ್ಟುಬಿಡಬೇಕು. ಆ ಮೇಲೆ ಒಂದು ಮಳೆಯಾಗಿ ಸಾಲಿನಲ್ಲಿ ನೀರು ನಿಂತು ಸ್ವಲ್ಪ ತಂಪಾಗುವದು. ಪುನಃ ಸ್ವಲ್ಪ ಹೊರಪು ನೋಡಿ ಒಂದು ಸಾಲು ಎರಡು ಸಾಲು ಚನ್ನಾಗಿ ಹರಿಗಿ ಮತ್ತೊಂದು

ಮಡಿಕೆಯು ಹೊಡೆದು ಹರಗದೇ ಹಾಗೆಯೇ ಬಿಟ್ಟುಬಿಡಬೇಕು ಆ ಮೇಲೆ ಮಳೆಯಾಗಿ ಸಾಲಿನಲ್ಲಿ ನೀರು ನಿಂತು ತಂಪಾದರೆ ಹೊಲವು ಚನ್ನಾಗಿ ಹಸಿಯಾಗಿ ತಳಹಸಿ ಕೊಡುವದು ಅದು ಶೀವ್ರ ಒಣಗಲಾರದು ಅಂಥ ಹೊಲಗಳು ಹಸಿಯಾಗುವದೇ ದುರ್ಲಭವು ಹಸಿಯಾದ ಮೇಲೆ ಆರುವದಿಲ್ಲ ಈ ಪ್ರಕಾರ ಎಟ್ಟಿ ಕರಲುಗಳನ್ನು ಪುನಃ ಮುಂಗಾರಿಯನ್ನು ಬಿತ್ತಿದ ಮೇಲೆ ಹದ ನೋಡಿ ಚನ್ನಾಗಿ ಮೂರು ಸಾಲು ಹರಗಬೇಕು ಅದರ ಮೇಲೆ ಮಳೆಯಾಗಿ ವಿಶೇಷ ತಂಪು ಹಿಡಿದಿರುವದು ಮುಂದೆ ಗೋದಿಯನ್ನು ಬಿತ್ತುವ ಸಮಯದಲ್ಲಿ ಹುಲ್ಲು ಸದಿ ನೊಲ್ಲಿ ಮುಂತಾದ ಕಸ ಪದಾರ್ಥಗಳು ಮೊಳೆತಿದ್ದರೆ ಮತ್ತೊಂದು ಸಾಲು ಹಂಗಿ ಬಿತ್ತಬೇಕು ಹಾಗು ಸದಿ ಇಲ್ಲದಿದ್ದರೆ ಹಾಗೇ ಬಿತ್ತಿದರೂ ಬರುತ್ತದೆ

ಒಂದೇ ಸವನಾಗಿ ಹತ್ತು ವರ್ಷದ ವರೆಗೂ ಗೋದಿಯನ್ನು ಬಿತ್ತಿದ ಹೊಲಕ್ಕೆ ಗೋದಿಯನ್ನು ಬಿತ್ತುತ್ತ ಹೋದರೆ ಉತ್ತಮ ಪ್ರಕಾರದ ಎರಿಯ ಹೊಲವಾದರೂ ಕೆಟ್ಟ ಕರಲು ಭೂಮಿಯಾಗುವದು ಅದು ಕಾರಣ ಮೂರು ವರ್ಷದ ವರೆಗೂ ಗೋದಿಯ ಹೊಲಕ್ಕೆ ಗೋದಿಯನ್ನು ಬಿತ್ತಬೇಕು ಆ ಮೇಲೆ ಒಂದು ವರ್ಷ ಜೋಳವನ್ನು ಬಿತ್ತಬೇಕು ಅದರ ಮೇಲೆ ಒಂದು ವರ್ಷ ಹತ್ತಿಯನ್ನಾದರೂ ಅಥವಾ ಬಹು ತಂಪು ಎರಿಯಾದರೆ ಹೊಂಗಲದ ಪೈಕಿ ಸಣ್ಣ ಗಡ್ಡೆಗಳಾದ ಬಳ್ಳೊಳ್ಳಿಯನ್ನು ಬಿತ್ತಬೇಕು ಇಲ್ಲವೆ ಗೊಬ್ಬರವನ್ನು ಹಾಕಿದ್ದರ ಮೆಣಸಿನ ಗಿಡಗಳನ್ನು ಹಚ್ಚಿದರೂ ಬರುತ್ತದೆ. ಅಲ್ಲಿಂದ ಮತ್ತು ಮೂರು ವರ್ಷದ ವರೆಗೂ ಗೋದಿಯನ್ನು ಬಿತ್ತಬೇಕು. ಈ ಪ್ರಕಾರ ಕಾಲಿಗಿಯನ್ನು ಮಾಡುತ್ತ ಹೋಗಬೇಕು ಅದರಲ್ಲಿ ಮುಖ್ಯವಾಗಿ ನೆನಪಿನಲ್ಲಿಡತಕ್ಕದ್ದೇನಾದರೆ ಜೋಳವನ್ನು ಬಿತ್ತುವ ವರ್ಷ ಗೊಬ್ಬರವನ್ನು ಹಾಕಬೇಕು ಆ ಗೊಬ್ಬರದ ತ್ರಾಣವು ಮತ್ತು ಗೋದಿಯ ಕಾಲಿಗಿ ಈ ಎರಡರಿಂದ ಜೋಳವು ಸರ್ವೋತ್ಕೃಷ್ಟವಾಗುವದು. ಮತ್ತು ಜೋಳದ ಹೊಲಕ್ಕೆ ಹತ್ತಿಯನ್ನು ಬಿತ್ತಿದರೆ ಹತ್ತಿಯ ಬೆಳೆಯಾದರೂ ಬಹಳ ವಿಶೇಷವಾಗುವದು ಅದರ ಮೇಲೆ ಮೂರು ವರ್ಷದ ವರೆಗೂ ಗೋದಿಯ ಬೆಳೆಯು ಸರ್ವೋತ್ತಮವಾಗುವದು ಅಥವಾ ಒಂದು ವರ್ಷ ಜೋಳವನ್ನು ಎರಡನೇ ವರ್ಷ ಬಳ್ಳೊಳ್ಳಿ ಅಥವಾ ಮೆಣಸಿನ ಗಿಡಗಳನ್ನು ಮುಂಗಾರಿಯ ಕಾಲದಲ್ಲಿ ಹಚ್ಚಿ ಪುನಃ ಮೂರು ವರ್ಷ ಗೋದಿಯನ್ನು ಬಿತ್ತಿದಾಗ್ಯಾದರೂ ಈ ಯಾವತ್ತು ಬೆಳೆಗಳು ಒಂದಕ್ಕೊಂದು ತ್ರಾಣವಾಗಿ ವಿಶೇಷ ಬೆಳೆಯಾಗುವದು. ಈ ಪ್ರಕಾರ ಯುಕ್ತಿಯಿಂದ ಬಿತ್ತುತ್ತ ಹೋದರೆ ಹೊಲದ ತ್ರಾಣವು ಕಡಿಮೆಯಾಗದೆ ಸರ್ವದಾ ಪ್ರತಿ ವರ್ಷಕ್ಕೂ ಎಲ್ಲ ಪದಾರ್ಥಗಳು ಸಕಲ ಧಾನ್ಯಾದಿಗಳು ಚನ್ನಾಗಿ ಬೆಳೆಯುತ್ತಿರುವವು.

ಮೊರಡಿಯ ಭೂಮಿಯಲ್ಲಿ ಕಪ್ಪು ನೆಲವಿದ್ದರೆ ಅಂಥ ಭೂಮಿಗೆ ಮೊದಲು
ಗೊಬ್ಬರವನ್ನು ಹಾಕಿ ಎರಡು ಎತ್ತಿನ ಮಡಿಕೆಯನ್ನು ಹೊಡೆದು ಚನ್ನಾಗಿ
ಹಿಂದೆ ಹೇಳಿದ ಹಾಗೆ ಬೇಸಿಗೆಯಲ್ಲಿ ಮೂರು ಸಾಲು ಹರಗಬೇಕು ಮತ್ತು
ಮಳೆಯಾದ ಮೇಲೆ ಹೊಂಬಸಿಯಲ್ಲಿ ಮೂರು ಸಾಲು ಹರಗಿದ ಮೇಲೆ
ಉತ್ತರೀ ಮಳೆಯಲ್ಲಿ ಯಾವ ಚರಣದಲ್ಲಿಯಾದರೂ ಗೋದಿಯನ್ನು ಬಿತ್ತ
ಬೇಕು ಆ ಬೆಳೆಯು ಗೊಬ್ಬರದ ಕಾವಿನಿಂದ ಮಳೆಯ ಪೆಟ್ಟು ತಿಂದು
ಸರ್ವೋತ್ಕೃಷ್ಟವಾಗುವದು. ಈ ಭೂಮಿಗಾದರೂ ವರ್ಷವರ್ಷಕ್ಕೂ ಗೊಬ್ಬರ
ವನ್ನು ಹಾಕಿ ಮಡಿಕೆಯ ಹೊಡೆದು ಹರಗಬೇಕು. ಒಂದು ಪಕ್ಷದಲ್ಲಿ ಗೊಬ್ಬ
ರವನ್ನು ಒಂದು ವರ್ಷ ಹಾಕಿದ್ದರೆ ಮುಂದ ಎರಡು ವರ್ಷದ ವರೆಗೂ
ಮಡಿಕೆಯನ್ನು ಹೊಡೆದು ಚನ್ನಾಗಿ ಹರಿಗಿ ಎರಡು ವರ್ಷ ಗೋದಿಯನ್ನು ಒಂದು
ವರ್ಷ ಜೋಳವನ್ನು ಬಿತ್ತುತ್ತ ಹೋಗಬೇಕು ಅಥವಾ ಒಂದು ವರ್ಷ
ಜೋಳವನ್ನು ಒಂದು ವರ್ಷ ಹತ್ತಿಯನ್ನು ಪುನಃ ಎರಡು ವರ್ಷ ಗೋದಿ
ಯನ್ನು ಬಿತ್ತುತ್ತ ಹೋಗಬೇಕು

ಎರಿಯ ಭೂಮಿಗೆ ಮಂಡು ಭೂಮಿಗೆ ಮಡಿಯ ಭೂಮಿಗೆ ಮತ್ತು
ಕರಲಭೂಮಿಗೆ ಗೋದಿಯನ್ನು ಬಿತ್ತಬೇಕಾದರೆ ಹಸ್ತಾ ಮಳೆಯಲ್ಲಿ ಬಿತ್ತ
ಬೇಕು. ಗೋದಿಯ ಬಿತ್ತುವ ತತಿಗೆ ಹಸ್ತಾ ಮಳೆಯೇ ಉತ್ತಮವು.
ಅಥವಾ ಅನಿವಾರ್ಹ ಪಕ್ಷವಾದರೆ ಹಸಿ ಇಲ್ಲದ ಹೋದರೆ ಅಥವಾ ಹಸಿಯಾ
ರದೆ ಹೋದರೆ ಅಡಚಣಿ ಇದ್ದದ್ದಾದರೆ ಚಿತ್ತಿ ಸ್ವಾತಿ ಮಳೆಯಲ್ಲಾದರೂ
ಗೋದಿಯನ್ನು ಬಿತ್ತುವದಕ್ಕೆ ಸಂಶಯವಿಲ್ಲ ಮತ್ತು ಕೆರಿಯ ಮಡಿ ಬೆಂಚಿ
ಗಳಾದರೂ ಹೊಳೆಯ ಮಡಿಗಳಾದರೂ ಸ್ವಾತಿ ವಿಶಾಖಾಗಳಲ್ಲಿ ಬಿತ್ತಿದರೂ
ಬರುತ್ತದೆ.

ಗೋದಿಯನ್ನು ಬಿತ್ತುವಾಗ ಅದರ ಸಂಗಡ ಕುಸಿಬಿ ಅಕ್ಕಡಿಯನ್ನು
ಹಾಕಬೇಕು ಮತ್ತು ಗೋದಿಯ ಸುತ್ತಲೂ ನಾಲ್ಕೂ ಕಡೆಗೂ ಬದುವು
ಹಿಡಿದು ಹೊರವೈಯ್ಯಲ್ಲಿ ಕುಸಿಬಿಯನ್ನು ಮೂರು ಸಾಲು ಬಿತ್ತಬೇಕು ಕುಸಿ
ಬಿಯು ತೈಲ ಧಾನ್ಯಗಳಲ್ಲಿ ವಿಶೇಷವು ಕುಸಿಬಿಯಲ್ಲಿ ಮುಳ್ಳು ಕುಸುಬಿ,
ಬೋಳು ಕುಸಿಬಿ ಎಂದು ಎರಡು ವಿಧಗಳುಂಟು ಬೋಳ ಕುಸಿಬಿಯ
ಹೂವನ್ನು ಆರಿಸಿ ಇಟ್ಟರೆ ಕುಸಂಬಿ ಎನಿಸುವದು ಆದರೆ ರೇಶಿಮೆಯ ಬಣ್ಣಕ್ಕೂ
ನೂಲಿನ ಬಟ್ಟೆಯನ್ನು ಮತ್ತು ಕಾಗದವನ್ನು ಬಣ್ಣ ಮಾಡುವದಕ್ಕೂ ಬರು
ವದು. ಕುಸುಬಿಯ ಹೂವಿನಿಂದ ಮಾಡಿದ ಬಣ್ಣಕ್ಕೆ ಕುಸಂಬಿಯ ಬಣ್ಣವೆ
ನ್ನುತ್ತಾರೆ. ಮತ್ತು ಆರಿಸಿ ಇಟ್ಟ ಹೂವಿಗೆ ಕುಸಂಬಿ ಎನ್ನುವರು. ಮತ್ತು
ಕೆರಿ ಬೆಂಚಿಯ ಅಂಗಳಗಳಲ್ಲಿ ಮಂಡುತರವಾದ ಭೂಮಿಯಾದರೆ ಹಾಗು

ಮಳೆಯ ನೀರು ನಿಂತು ಆರಿ ತಂಪು ಹಿಡಿದಿರುವ ಭೂಮಿಯಾದರೆ ಅಂಥ ಭೂಮಿಯಲ್ಲಿ ಸವತೀಬೀಜ, ಖರಬುಜ, ಕಲ್ಲಂಗಡಿ, ಹೀರಿಯಬೀಜ, ಸಕ್ಕರೀ ಸವತಿ ಮೊದಲಾದವುಗಳನ್ನು ಸ್ವಲ್ಪ ಸ್ವಲ್ಪ ಗೊಬ್ಬರವನ್ನು ಹಾಕಿ ಬಿತ್ತಿದರೆ ವಿಶೇಷ ಫಲವಾಗಿ ರೊಕ್ಕವಾಗುವದು. ಅಥವಾ ಸ್ವಲ್ಪ ತಂಪು ಇದ್ದರೆ ಕಡಲಿಯನ್ನು ಬಿತ್ತಬೇಕು.

## ಕಡಲಿಯು.

ಕಡಲಿಯು ಗೋದಿಯ ಹಾಗೆ ಮೃಷ್ಟಾನ್ನದಲ್ಲಿ ಉತ್ತಮವಾದ ಆಹಾರವು ಕಡಲಿಯನ್ನು ಕುದುರೆಗಳಿಗೆ ತಿನ್ನಿಸಿದರ ಅವುಗಳ ತ್ರಾಣವೂ ಪುಷ್ಟಿಯೂ ಅಧಿಕವಾಗುವದು ಕಡಲಿಯಿಂದ ಬುರಬುರಿ, ಪಡಿ, ಬುಂದೆದದಾಣಿ, ಪುರಾಣಿ ಹುರಕಡಲಿ, ಬೆಲ್ಲಕಡಲಿ, ಉಪ್ಪುಗಡಲಿ, ಹಾಗು ಕರಿಗಡಬು, ಹೂರಣದ ಕಡಬು ಮೊದಲಾದ ಪಕ್ವಾನ್ನಗಳನ್ನು ಮಾಡುತ್ತಾರೆ. ಕಡಲಿಗೆ ಕ್ರಯವಾದರೂ ವಿಶೇಷ ಸಿಕ್ಕುತ್ತದೆ

ಕಡಲಿಯನ್ನು ಪೈರು ಮಾಡುವದು ಹೇಗಂದರೆ, ಎರಿಯ ಭೂಮಿಯಲ್ಲಿಯೂ ನೆಲ್ಲು ಬಿತ್ತಿದ ಹೊಲದಲ್ಲಿಯೂ ವಂಡುಭೂಮಿಯಲ್ಲಿಯೂ ಮಡಿಯ ನೆಲದಲ್ಲಿಯೂ ವಿಶೇಷವಾಗಿ ಕಡಲಿಯ ಬೆಳೆಯಾಗುವದು ಮತ್ತು ಕೇಸರಿ ಭೂಮಿಗಳಲ್ಲಿಯೂ ಮೊರಡಿಗಳಲ್ಲಿಯೂ ಕಪ್ಪು ನೆಲವಿದ್ದರೆ ಅಂಥ ಭೂಮಿಯಲ್ಲಿಯೂ ಕಡಲಿಯನ್ನು ಬಿತ್ತಬೇಕು.

ಕಡಲಿಯನ್ನು ಬಿತ್ತಬೇಕಾದರೆ ಯಾವ ಭೂಮಿಗಾದರೂ ನೇಗಲಿಯನ್ನು ಹೊಡೆದ ವರ್ಷ ಹೊಸ ಮಣ್ಣಾದ ಹೊಲಗಳಿಗೂ, ನಟ್ಟು ಕಡಿಸಿದ ಹೊಲಗಳಿಗೂ, ಎರಿಯ ವಂಡುಗಳಿಗೂ, ಗೋದಿಯನ್ನು ಬೆಳೆಯತಕ್ಕಂಥ ಹತ್ತಿಯನ್ನು ಬೆಳೆಯತಕ್ಕಂಥ ಎರಿಯ ಭೂಮಿ, ಕರಲು ಭೂಮಿ, ಉತ್ತಮತರದ ಕೇಸರಿ, ಮಡಿವಂಡು, ನೆಲ್ಲುಹೊಲ, ಮೊರಡಿಯ ಪೈಕಿ ಕಪ್ಪು ಭೂಮಿ ಇವುಗಳಿಗೂ ಕಡಲಿಯನ್ನು ಬಿತ್ತಬೇಕು. ಮತ್ತು ಕೆಂಪುಕೇಸರಿ ಕರಲಿನಲ್ಲಿ ಕಡಲಿಯನ್ನು ಬಿತ್ತಿದರೆ ಅಗಿ ಸತ್ತು ಕಡಲಿಯ ಬೆಳೆಯು ಚನ್ನಾಗಿ ಆಗುವದಿಲ್ಲ ಇವಲ್ಲದೆ ಮೊರಡಿಯಲ್ಲಿ ಗರಸು ಭೂಮಿಯಲ್ಲಿ ನಟ್ಟು ಕಡಿಸಿದಾಗ್ಯಾದರೂ ಮಡಿಕಿಯನ್ನು ನೇಗಲಿಯನ್ನು ಹೊಡದು ಪಾಗಿಯ ಮಾಡಿದಾಗ್ಯಾದರೂ ಅದಕ್ಕೆ ಕಡಲಿಯನ್ನು ಬಿತ್ತಬಾರದು. ಅಂಥ ಹೊಲಗಳಿಗೆ ಎಳ್ಳು ಕಾರೆಳ್ಳುಗಳನ್ನು ಬಿತ್ತಬೇಕು.

ಕಡಲಿಯ ಬಿತ್ತುವ ಭೂಮಿಯನ್ನಾದರೂ ಗೋದಿಯ ಬಿತ್ತುವ ಭೂಮಿಯ ಹಾಗೆ ಹದದ ಮೇಲೆ ಆರುಸಾಲು ಏಳುಸಾಲು ಹರಗಬೇಕು. ಕಡಲಿಯ

ಕಾಲಿಗೆ ಮುಂದಿನ ವರ್ಷ ಜೋಳಕ್ಕೂ ಗೋದಿಗೂ ಉಪಯೋಗವು. ಕಡಲಿಯನ್ನು ಬಿತ್ತಿದ ಹೊಲಕ್ಕೆ ಪುನಃ ಕಡಲಿಯನ್ನೂ ಹತ್ತಿಯನ್ನೂ ಬಿತ್ತಬಾರದು. ಮತ್ತು ಹತ್ತಿಯ ಬಿತ್ತಿದ ಹೊಲಕ್ಕೆ ಕಡಲಿಯನ್ನು ಬಿತ್ತಬಾರದು ಗೋದಿಯಂತೆ ಕಡಲಿಯ ಹೊಲಕ್ಕಾದರೂ ಕಸಬಿಯ ಅಕ್ಕಡಿಯನ್ನು ಹಾಕಬೇಕು. ಮತ್ತು ಮುಂಗಾರಿಯ ಕಾಲದಲ್ಲಿ ರೋಹಿಣಿ ಮೃಗಶಿರ ಮಳೆಯಲ್ಲಿ ಎಳ್ಳು ಬಿತ್ತಿ ಆ ಬೆಳೆಯನ್ನು ತೆಗೆದುಕೊಂಡು ಆ ಹೊಲಕ್ಕೆ ಪುನಃ ಹಿಂಗಾರಿಯ ಮಳೆಯಲ್ಲಿ ಕಡಲಿಯನ್ನು ಬಿತ್ತಬೇಕು ಇದರಂತೆ ನೆಲ್ಲು ಬೆಳೆಯನ್ನು ನವಣಿಯ ಬೆಳೆಯನ್ನು ಮತ್ತು ಬಳ್ಳೊಳ್ಳಿಯ ಬೆಳೆಯನ್ನು ತೆಗೆದುಕೊಂಡು ಆ ಹೊಲಕ್ಕೆ ಕಡಲಿಯನ್ನು ಬಿತ್ತಬೇಕು

ಅಗಸಿಯು ಹಿಂಗಾರಿಯ ಧಾನ್ಯವು ಎರಿಯ ಭೂಮಿಯಲ್ಲಿ ಮಂಡು ಭೂಮಿಯಲ್ಲಿ ಗೋದಿಯನ್ನು ಬಿತ್ತತಕ್ಕಂಥ ಯಾವತ್ತು ಭೂಮಿಯಲ್ಲಿ ಹಿಂಗಾರಿಯ ಪೈಕಿ ವಿಶಾಖಾ ಮಳೆಯ ವರೆಗೂ ಯಾವ ಮಳೆಯಲ್ಲಿಯಾದರೂ ಬಿತ್ತಬೇಕು. ಅಗಸಿಯನ್ನು ಬಿತ್ತಬೇಕಾದರೆ ಅದರಲ್ಲಿ ಸಣ್ಣ ಉಸುಕು ಅಥವಾ ಸಣ್ಣನ್ನ ಎರಿಯ ಮಣ್ಣನ್ನು ಕಲಿಸಿ ಬಿತ್ತುತ್ತಾರೆ ಅಕಾಲ ಮಳೆಗಳಲ್ಲಿ ಯಾವ ಪದಾರ್ಥವನ್ನು ಬಿತ್ತಿದರೂ ಬೆಳೆಯಾಗಲಾರವು ಕೆಂಪು ಕೇಸರಿ ಮತ್ತು ಕರಲು ಭೂಮಿಯಲ್ಲಿ ಅಗಸಿಯ ಬೆಳೆಯು ವಿಶೇಷ ಬೆಳೆಯಾಗುವದು

ಬಲಾತ್ಕಾರವಾದ ತಂಪು ಎರಿಯಲ್ಲಿ ಮಡಿಕಟ್ಟಿ ಭೂಮಿಯಲ್ಲಿ ಸೋಪು, ಹವೀಜ, ಮೆಂತೆ, ಸಾಸಿವೆ, ಸಬ್ಬಸಗಿ, ಗಜ್ಜರಿ, ಜೀರಿಗಿ, ಶಾಜೀರಿಗಿ, ಹೀರಿಯಬೀಜ, ಸವತಿಯಬೀಜ, ಪುಟ್ಟಿಯಬೀಜ, ಮುಂತಾದವುಗಳನ್ನು ಸ್ವಲ್ಪ ಸ್ವಲ್ಪಾಗಲಿ ಅಥವಾ ಬಹಳವಾಗಲಿ ಬಿತ್ತಬೇಕು ಇಲ್ಲವೆ ಬಿತ್ತುವ ಧಾನ್ಯದಲ್ಲಿ ಸ್ವಲ್ಪ ಸ್ವಲ್ಪ ಕೂಡಿಸಿ ಬಿತ್ತಬೇಕು.

## ಸಣಬು.

ಕೃಷಿಕರಾದ ಜನರುಗಳು ಯಾವತ್ತರೂ ತಮ್ಮ ತಮ್ಮ ಹೊಲಗಳಲ್ಲಿ ರೋಹಿಣಿ ಮೃಗಶಿರ ಕಾಲದಲ್ಲಿ ಎರಿಯಲ್ಲಾಗಲಿ, ಮೊರಡಿ, ಮಸಾರಿ, ಉಸುಕು, ಭೂಮಿಗಳಲ್ಲಾಗಲಿ ಮುಂಗಾರಿಯ ತತಿಯಲ್ಲಿ ಸಣಬು ಬಿತ್ತಿಕೊಳ್ಳಬೇಕು. ಸಣಬಿನ ಬೀಜಗಳು ಸಿರವೂರು, ಹರಸೂರು ಮೊದಲಾಗಿ ಕಲಬುರಿಗೆಯ ಪ್ರಾಂತದಲ್ಲಿ ಮತ್ತು ದರಿಯ ಮೇಲೆ ಕಲ್ಯಾಣ ಸೀಮೆಯಲ್ಲಿ ತಾಂಡೂರು ಹೊಸಪೇಟೆ ಹುಮನಾಬಾದಿಯ ಪ್ರಾಂತದಲ್ಲಿ ಬಹಳವಾಗಿ ಸಿಕ್ಕುತ್ತವೆ. ಈ ದೇಶದಲ್ಲಿ ಕೆಲವರು ಅಂಬಿಗಾರರು ಹೊಳೆಯ ಮಡಿಗಳಲ್ಲಿ ಬಿತ್ತುತ್ತಾರೆ. ಆದರೆ ಆ ಅಂಬಿಗರಾದವರು ಈ ದೇಶದ ರೈತ ಜನರಿಗೆ ಭಯವನ್ನು ಹುಟ್ಟಿಸಿದ್ದೀ

ನಂದರೆ ಕಬ್ಬಲಿಗರೇ ಸಣಬು ಬಿತ್ತಬೇಕು, ಉಳಿದಾದ ಒಕ್ಕಲತನದವರು ಬಿತ್ತಿದರೆ, ಅವರಿಗೆ ಏನಾದರೂ ಕೇಡು ಆಗುವದೆಂದು ಭಯವನ್ನು ಹುಟ್ಟಿಸಿದ್ದರಿಂದ ಯಾರೂ ಬಿತ್ತುವದಿಲ್ಲ ಮೇಲೆ ಹೇಳಿದ ಪ್ರಾಂತಗಳಲ್ಲಿ ಸರ್ವ ಜನರು ಪ್ರತಿವರ್ಷ ತಮ್ಮ ತಮ್ಮ ಹೊಲಗಳಲ್ಲಿ ಬಿತ್ತಿ ಬಹಳವಾಗಿ ಸಣಬು ಬೆಳೆಯುತ್ತಾರೆ ಸಣಬಿನ ನಾರು ಬಹಳ ಉಪಯೋಗವು. ಆ ನಾರು ಪುಂಡಿಯ ನಾರಿನಕಿಂತಲೂ ಬಹಳ ಮೃದುವಾಗಿರುವದು. ಮತ್ತು ರೇಶಿಮೆಯ ಹಾಗೆ ಗಟ್ಟಿಯಾಗಿರುವದು. ಮತ್ತು ಆ ಸಣಬಿನ ಹುರಿಯನ್ನು ನೂಲಿನ ಹಾಗೆ ಎಷ್ಟು ಸಣ್ಣಾದರೂ ಮತ್ತು ಎಷ್ಟು ದಪ್ಪವಾದರೂ ಮಾಡಲಿಕ್ಕೆ ಬರುವದು ಅದರ ಹಗ್ಗಗಳು ನುಣುಪಾಗಿಯೂ ಮೃದುವಾಗಿಯೂ ಗಟ್ಟಿಯಾಗಿಯೂ ಇರುವವು. ಮತ್ತು ಸಣಬಿನಿಂದ ಗೋಣೀತಟ್ಟು, ಹುರಿಹಗ್ಗ, ಕಣ್ಣಿ, ಮಿಣಿ, ಮೊದಲಾದ ಒಕ್ಕಲತನದ ಯಾವತ್ತು ಸಾಮಾನುಗಳನ್ನು ಮಾಡುವದಕ್ಕೆ ಚನ್ನಾಗಿ ಬರುವದು. ಅದರಿಂದ ಮಾಡಿದ ಸಾಮಾನುಗಳು ನಾರಿನ ಸಾಮಾನುಗಳಿಗಿಂತಲೂ ಸುಂದರವಾಗಿ ತಾಳಿಕೆಯಾಗಿ ಇರುವವು. ಮತ್ತು ಸಣಬು ಜವಾರಿ ಚಲೋ ಕಾಗದಗಳನ್ನು ಮಾಡುವದಕ್ಕೂ ಗಚ್ಚಿನ ಹದಕ್ಕೂ ಬರುತ್ತದೆ.

ಸಣಬು ಬಿತ್ತಿದ ಹೊಲದಲ್ಲಿ ಕರಿಕಿಯನ್ನು ಇರಗೊಡದೆ ಅಳಿದು ಬಿಡುವದು ಅದರ ತೊಪ್ಪಲವು ಹೊಲದಲ್ಲಿ ಇಬ್ಬೆರಳು ನಾಲ್ಕುಬೆರಳು ದಪ್ಪವಾಗಿ ಉದರಿದ್ದಲ್ಲಿ ಅದು ಗೊಬ್ಬರದಕಿಂತಲೂ ಹೆಚ್ಚು ಸೊಕ್ಕಾಗಿರುವದು. ಆ ಭೂಮಿಯಲ್ಲಿ ಬಿಳಿಜೋಳ ಮುಂತಾದ ಸಕಲ ಧಾನ್ಯಗಳನ್ನು ಬಿತ್ತಿದಲ್ಲಿ ಉತ್ಕೃಷ್ಟ ಬೆಳೆಯಾಗುವದು

ಸಣಬಿನ ನಾರು ಬಿಡಿಸಬೇಕಾದರೆ ಮೊದಲು ಬೀಜವಾದ ಮೇಲೆ ಕಟ್ಟಿಗೆಗಳನ್ನು ಕೊಯ್ದು ಸಿವಡು ಕಟ್ಟಿ ಸ್ವಲ್ಪ ಒಣಗಿದ ಮೇಲೆ ಬೀಜಗಳನ್ನು ತೆಗೆದುಕೊಂಡು ಆ ಕಟ್ಟಿಗೆಗಳನ್ನು ಹೊರಿಯ ಕಟ್ಟಿ ಇಟ್ಟಿರಬೇಕು ಆ ಮೇಲೆ ಆ ಕಟ್ಟಿಗೆಗಳಲ್ಲಿ ಒಂದೊಂದು ದಿವಸದಲ್ಲಿ ತಮ್ಮಿಂದ ಬಿಡಿಸುವದಾಗುವಷ್ಟು ಅಜಮಾಸು ನೋಡಿ ಅಷ್ಟು ಹೊರೆ ಕಟ್ಟಿಗೆಗಳನ್ನು ನೀರಿನಲ್ಲಿ ನೆನೆಹಾಕಿ ನಾಲ್ಕು ದಿನ ಬಿಡಬೇಕು ಅಷ್ಟರಲ್ಲಿ ಕಟ್ಟಿಗೆಗಳು ನೆನೆದಿದ್ದರೆ .ಐದನೆಯ ದಿವಸ ಪ್ರಾತಃಕಾಲದಿಂದ ಯಾವತ್ತು ಕಟ್ಟಿಗೆಗಳನ್ನು ಕಡೆಗೆ ತೆಗೆದು ತಮ್ಮ ಕೈಯ್ಯಲ್ಲಿ ಒಂದು ಹಿಡಿ ಕಟ್ಟಿಗೆಗಳನ್ನು ತೆಗೆದುಕೊಂಡು ನಡುವೆ ಮುರಿದು ಎಳೆದರೆ ಆ ಹಿಡಿಕಟ್ಟಿಗೆಯ ನಾರು ಒಮ್ಮೆಗೆ ಬರುವದು. ಪುಂಡಿಯ ಕಟ್ಟಿಗೆಯ ನಾರಿನ ಹಾಗೆ ಒಂದೊಂದೇ ಕಟ್ಟಿಗೆಯನ್ನು ಬಿಡಿಸುವ ಪ್ರಯೋಜನವಿಲ್ಲವು. ಒಂದು ಪಕ್ಷದಲ್ಲಿ ನಾಲ್ಕು ದಿವಸಕ್ಕೆ ಕಟ್ಟಿಗೆಗಳು ನೆನೆಯದಿದ್ದರೆ ಐದು ದಿವಸ ಬಿಟ್ಟು ಆರನೆಯ ದಿವಸ ಬಿಡಿಸಬೇಕು. ಮೈಮರೆತು ನೀರಿನಲ್ಲಿ ಒಂದು ದಿವಸ ಹೆಚ್ಚು ಇಟ್ಟರೆ ನಾರು ಕೊಳೆಯುವದು. ಅದನ್ನು

ನೀರಿನಲ್ಲಿ ಹಾಕಿದ ಮೇಲೆ ನಾಲ್ಕು ದಿವಸಕ್ಕೆ ನೋಡಿ ಕಟ್ಟಿಗೆ ನೆನೆದಿದ್ದರೆ ಬಿಡಿಸಲಿಕ್ಕೆ ಆರಂಭಮಾಡಬೇಕು.

ಈ ಸಣಬಿನಿಂದ ಹಗ್ಗ, ಕಣ್ಣಿ, ಮಿಣಿ ಮೊದಲಾದ ಯಾವತ್ತು ಗಳೇದ ಸಾಮಾನುಗಳು ಆಗುವವು. ಜತ್ತಿಗಿ ಬಾರಕೋಲು ಮೊದಲಾಗಿ ಈ ಸಣಬಿನಿಂದ ಮಾಡಿದರೆ ಚನ್ನಾಗಿ ಆಗುತ್ತವೆ ಸಾಮಾನುಗಳಿಲ್ಲದೆ ಭೂಮಿಯು ವ್ಯವಸಾಯವು ಸಾಗುವದಿಲ್ಲವಾದ ಕಾರಣ ಚರ್ಮದ ಸಾಮಾನುಗಳನ್ನು ಚರ್ಮದ ಮಿಣಿಗಳನ್ನು ಮಾಡಿಸಬೇಕಾಗುತ್ತದೆ. ಹಾಗೆ ಮಾಡದೆ ಯಾವತ್ತು ಸಾಮಾನುಗಳನ್ನು ಸಣಬಿನಿಂದ ಮಾಡಿದರ ಚರ್ಮದ ಪ್ರಯೋಜನ ಬೀಳುವದಿಲ್ಲವು. ಪುಂಡಿಯ ನಾರಿನಕಿಂತಲೂ ಸಣಬಿನ ನಾರು ತೊಳೆದಷ್ಟು ಬಿಳುಪಾಗುವದು, ಮೃದುವಾಗುವದು. ಅದು ಕಾರಣ ಚನ್ನಾಗಿ ತೊಳೆಯಬೇಕು.

## ಮಂಡು ಭೂಮಿಗಳ ವಿಷಯವು.

ಮಂಡು ಭೂಮಿಗಳಲ್ಲಿ ಅನೇಕ ಪ್ರಕಾರಗಳುಂಟು ಆ ಭೂಮಿಗಳಲ್ಲಿ ಉತ್ಕೃಷ್ಟವಾಗಿ ಬೆಳೆಯತಕ್ಕಂಥ ಪದಾರ್ಥಗಳನ್ನು ಧಾನ್ಯಾದಿಗಳನ್ನು ಬೇರೆ ಬೇರೆ ಭೂಮಿಯನ್ನು ನೋಡಿ ಬಿತ್ತುವದನ್ನು ತಿಳುಹಿಸುತ್ತೇವೆ. ಕಪ್ಪು ಕೇಸರಿ ಕರಲು ಮಂಡು ಇದ್ದು ಆ ಭೂಮಿಗೆ ನೀರಿನ ಆಸ್ಪದವಿದ್ದರೆ ಕಬ್ಬು ಕುಂಬಳ ಕಾಯಿಗಳು ವಿಶೇಷವಾಗಿ ಬೆಳೆಯುತ್ತವೆ.

(೧) ಕೆಂಪು ಕೇಸರಿ ಕರಲು ಇದ್ದು ಆ ಭೂಮಿ ಮಂಡು ಭೂಮಿಯಾದರೆ ಆದರಲ್ಲಿ ಅಗಸಿ ನೆಲ್ಲು ಬೆಳೆಯುತ್ತವೆ ಮತ್ತು ಕಡಲಿ ಬೆಳೆಯುತ್ತದೆ. ಆದರೆ ನೆಟೆ ಹಾಯ್ದು ಅಗಿ ಸತ್ತು ಗಿಡಗಳು ಒಣಗುತ್ತವೆ ಈ ಭೂಮಿಯಲ್ಲಿ ಒಂದೊಂದು ಗಿಡಗಳು ಉಳಿದರೆ ಅಬ್ಬರವಾಗಿ ಕಾಣಿಸುತ್ತವೆ ಆದಾಗ್ಯೂ ಕೆಂಪು ಕೇಸರಿ ಕರಲು ಮಂಡಿಗೆ ಕಡಲಿಯು ಉಪಯೋಗವಿಲ್ಲವು.

(೨) ಕಪ್ಪು ಕೇಸರಿ ಮಂಡು ಹೊಲಗಳಿಗೆ ಮುಂಗಾರಿಯ ಬೆಳೆಯು ಮಧ್ಯಮವು, ಬಿಳಿಜೋಳದ ಬೆಳೆಯು ಉತ್ತಮವು.

(೩) ಎರಿಯ ಭೂಮಿಯ ಮಂಡು ಹೊಲಗಳಲ್ಲಿ ಗೋದಿ ಕಡಲಿ ಉತ್ಕೃಷ್ಟ ಬೆಳೆಯಾಗುವದು

(೪) ಕೆಂಪು ಮಣ್ಣಿನ ಮಂಡು ಭೂಮಿಯಲ್ಲಿ ನೆಲ್ಲು, ಕಬ್ಬು, ಅಗಸಿ, ಬಿಳಿಜೋಳಗಳು ಚನ್ನಾಗಿ ಬೆಳೆಯುವವು. ಮತ್ತು ನಾನಾಪ್ರಕಾರದ ಗಿಡಗಳು ಬಳ್ಳಿಗಳು ವಿಶೇಷವಾಗಿ ಬೆಳೆಯುವವು.

(೫) ಹಾಳು ನೆಲದ ಮಡಿಯ ಭೂಮಿಗಳಲ್ಲಿ ಉಳ್ಳಿಗಡ್ಡೆ ಮೆಣಸಿನ ಗಿಡ ನವಣಿ ಕೆಂಜೋಳಗಳು ವಿಶೇಷ ಬೆಳೆಯುತ್ತವೆ.

(೬) ಕಪ್ಪು ಭೂಮಿಯಲ್ಲಿ ಕೆಂಪು ಹರಳು ಮಿಶ್ರವಾದ ಭೂಮಿಯಿದ್ದರೆ ಆ ಭೂಮಿಯಲ್ಲಿ ಹತ್ತಿಯ ಬೆಳೆಯು ಬಹು ವಿಶೇಷವಾಗಿರುವದು.

(೭) ಕಪ್ಪು ಭೂಮಿ ಸಣ್ಣಮಣ್ಣಿನ ನೆಲವಾಗಿ ಬಹಳವಾಗಿ ಬೀಡಿ ಸೆಳೆಯದಂಥ ಹೊಲವಾದರೆ ಹತ್ತಿಯ ಬೆಳೆಯು ವಿಶೇಷವಾಗುವದು.

ಈ ಪ್ರಕಾರವಾಗಿ ಯಾವತ್ತು ಧಾನ್ಯಾದಿಗಳನ್ನು ಬಿತ್ತುವ ಭೂಮಿಯನ್ನು ಅವುಗಳ ವ್ಯವಸಾಯವನ್ನು ಮಾಡುವ ಕ್ರಮಗಳನ್ನು ಹೇಳಿದ್ದೇನೆ. ಇದರಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿ ಕಾಣಬಂದರೆ ಕೃಷಿಜ್ಞಾನ ಪರಿಣಿತರಾದ ಕುಶಲರುಗಳು ತಿಳಿಸಿದರೆ ಅವರ ಉಪಕಾರವನ್ನು ಸ್ಮರಿಸಿ ಎರಡನೇ ಸಾರೆ ಅದನ್ನು ತಿದ್ದಿಕೊಂಡು ಬರೆಯುವೆನು.

## ಸಿರಂಜಿಯನ್ನು ಬಿತ್ತುವದು.

ಸಿರಂಜಿಯನ್ನು ಬಿತ್ತುವ ಭೂಮಿಯು ಕಪ್ಪು ಇರಬೇಕು. ಮತ್ತ ಮಂಡು ನೆಲವಾದಷ್ಟು ಉತ್ತಮವು. ಹಾಗು ಎರಿಯಲ್ಲಿ ಮೊಳಕಾಲುದ್ದವಾದರೂ ಮಣ್ಣು ಇರಬೇಕು. ಅದರ ಕೆಳಗೆ ಗರಸು ಅಥವಾ ಕಟಕ ಇದ್ದರೂ ಚಿಂತೆ ಇಲ್ಲ ಮಣ್ಣು ಇದ್ದಷ್ಟು ಚಲೋದು. ಮತ್ತ ಗೇಣು ಚೋಟಿ ಮಣ್ಣಿನ ಕೆಳಗೆ ಗರಸು ಇದ್ದರೆ ಅಂಥ ಭೂಮಿಯಲ್ಲಿ ಸಿರಂಜಿ ಬೆಳೆಯುವದಿಲ್ಲ. ಕಪ್ಪು ಭೂಮಿ ಇದ್ದು ಬೀಡಿ ಸೆಳೆಯದಂಥ ಸಣ್ಣ ಎರಿ ಅಥವಾ ಕೇಸರಿ ಭೂಮಿಗಳಲ್ಲಾದರೂ ಬೆಳೆಯುತ್ತದೆ.

ಸಿರಂಜಿಯ ಬಿತ್ತುವ ಭೂಮಿಯನ್ನು ಮೊದಲು ಚನ್ನಾಗಿ ನಟ್ಟು ಕಡಿಸಿ ಕರಿಕಿ ಕಣಿಗಿ ಮೊದಲಾದದ್ದು ಇಲ್ಲದ ಹಾಗೆ ನಿರ್ಮಲ ಮಾಡಿ ಖಾಸ ಕರದು ತಿಳಿಭೂಮಿಯಾಗುವ ಹಾಗೆ ಹರಿಗಿ ಮೊದಲು ಎಳ್ಳು ಬಿತ್ತಿ ಎಳ್ಳು ಕಾಲಿಗೆಯ [illegible] ಆ ಎಳ್ಳು ಬೆಳೆಯನ್ನು ತೆಗೆದುಕೊಂಡು, ಪುಷ್ಯ ಅಥವಾ ಪುನರ್ವಸು ಆಶ್ಲೇಷಾ ಮಳೆಗಳಲ್ಲಿ ನಾಲ್ಕು ತಾಳಿನ ಕೂರಿಗೆಯಿಂದ ಅವರಸ ಚವರಸ ಸಾಲಾಗುವ ಹಾಗೆ ಬಿತ್ತಿ ಬೆಳೆಸಾಲು ಹೊಡೆದು ಮೇಲೆ ಹೆಟ್ಟಾ ಹೊಡೆದು ಅದು ನಾಟಿದ ಮೇಲೆ ಕೆಲವು ದಿವಸ ಬಿಟ್ಟು ಸದಿಯನ್ನು ತೆಗಿಸಿ ಬಿಡಬೇಕು. ಅದು ನಾಟುವದಕ್ಕೆ ಹದಿನೈದು ದಿವಸ ಬೇಕು. ಆ ಮೇಲೆ ಎರಡು ತಿಂಗಳು ಬಿಟ್ಟು ಕುರಿಪೆಯಿಂದ ಸ್ವದೆ ತೆಗಿಸಿ ಬೀಡಿ ಇದ್ದರೆ

ಮುಚ್ಚಬೇಕು. ಎರಡು ವೇಳೆ ಮೂರು ವೇಳೆ ಉಗಾದಿಯವರೆಗೂ ಸದಿಯನ್ನು ತೆಗಿಸಬೇಕು ಬೀಡಿ ಸೆಳೆಯದ ಹಾಗೆ ಮೇಲೆ ಸದೆಯ ತೆಗಿಸಿ ಬೀಡಿ ಸೆಳೆದಿದ್ದರೆ ಮುಚ್ಚುತ್ತ ಹೋಗಬೇಕು ಹೀಗೆ ಮೂರು ನಾಲ್ಕು ವೇಳೆ ಸದೆಯ ತೆಗಿಸಿ ಬೀಡಿ ಸೆಳೆದರೆ ಮಣ್ಣು ಮುಚ್ಚುತ್ತ ಚನ್ನಾಗಿ ಸದೆಯ ತೆಗಿಸಿ ಒಂದುವರೆ ವರುಷದ ವರೆಗೂ ಬಿಟ್ಟುಬಿಡಬೇಕು ಮಾತ್ತು ವರುಷ ವರುಷಕ್ಕೂ ಅದರ ಕಾಯಿಗಳಾಗುವವು ಆ ಕಾಯಿಗಳನ್ನು ಆರಿಸಿ ಬೀಜ ಮಾಡಿಕೊಂಬುವದು ಹೇಗೆಂದರೆ—

ಸಿರಂಜಿ ಕಾಯಿಗಳು ಬೀಜಕ್ಕೆ ಬಂದ ಲಕ್ಷಣವನ್ನು ತಿಳಿಯಬೇಕಾದರೆ ಆ ಕಾಯಿಗಳು ಹಸರು ಹೋಗಿ ಕಪ್ಪಾಗುವವು ಕಪ್ಪಾದ ಕೂಡಲೆ ಕಾಯಿಗಳನ್ನು ಆರಿಸಿ ಆ ಹಸೇಕಾಯಿಗಳನ್ನು ಕಣಕ್ಕೆ ಹಾಕಿ ಮೇಟಿಯ ಕಟ್ಟಿಗೆಯ ಸುತ್ತಲೂ ಸುರಿವಿ ಎತ್ತುಗಳನ್ನು ಕಟ್ಟಿ ಆಗಿಂದಾಗ್ಗೆ ತಿರಿವಿ ಹಾಕುತ್ತ ರಾಡಿ ಒಡೆಯುವ ತನಕ ಹಸಿಯ ಕಾಯಿಗಳನ್ನು ತುಳಿಸಿ ಆ ಮೇಲೆ ಮೇಟಿಗೆ ಏರಿಸದೆ ತೆಪ್ಪಗೆ ನಾಲ್ಕು ಬೆರಳು ಪಿಂಡವಾಗಿ ಹೌರಗೆ ಹೂವಿನ ಹಾಗೆ ಹರಗಬೇಕು ಅವರೊಳಗೆ ತುಳಿದಾಡಬಾರದು ಅದರ ಮೇಲೆ ಕಕ್ಕಿಯ ಕೊಲ್ಲೆಗಳನ್ನಾಗಲಿ ಮತ್ತಾವತರದ ತೊಪ್ಪಲವನ್ನಾಗಲಿ ತಂದು ಗಾಳಿ ಆಡದ ಹಾಗೆ ತುಂಬಾ ಮುಚ್ಚಬೇಕು. ಅದರ ಮೇಲೆ ಎಂಟು ದಿವಸ ಅಥವಾ ಒಂಭತ್ತು ದಿವಸ ಬಿಡಬೇಕು ಬೇಸಿಗೆಯ ಕಾಲವಾದರೆ ಎರಡು ದಿವಸ ಅಥವಾ ಮೂರು ದಿವಸಕ್ಕೊಮ್ಮೆ ನೀರು ಸಿಂಪಡಿಸಬೇಕು. ಹಾಗೆ ಏಳು ದಿವಸಕ್ಕೆ ನೋಡಬೇಕು ಕಳಿತಿದ್ದರೆ ಅದರ ಮೇಲೆ ನೀರು ಹಾಕಿ ತೊಪ್ಪಲ ತೆಗೆಯಬೇಕು ಇಲ್ಲದಿದ್ದರೆ ಎಂಟು ದಿವಸ ಒಂಬತ್ತು ದಿವಸದ ವರೆಗೂ ಬಿಟ್ಟು ಮೇಲೆ ಮೇಲೆ ನೋಡುತ್ತಿರಬೇಕು ಅದು ಕಳಿತಾಕ್ಷಣವೇ ಮೇಲೆ ನೀರು ಹಾಕಿ ತೊಪ್ಪಲು ತೆಗೆದು ಕೇಸರಿಯೋಪಾದಿಯಲ್ಲಿ ತುಳಿದು ಹದಮಾಡಿ ಅದನ್ನು ದೊಡ್ಡ ಮಡುಗಳಿರುವ ಹರಿಯುವ ಹಳ್ಳಗಳಿದ್ದಲ್ಲಿ ಒಯ್ದು ತೊಳೆಯಬೇಕು ಅದನ್ನು ತೊಳೆಯುವದು ಹೇಗಂದರೆ—ಈಚಲ ಕಟ್ಟಿಗೆಯಿಂದಾದರೂ ಅಥವಾ ಲಕ್ಕಿಯ ಕಟ್ಟಿಗೆಯಿಂದಾದರೂ ಇಲ್ಲವೆ ಕರಕಲ ಕಟ್ಟಿಗೆಯಿಂದಾದರೂ ಸುತ್ತಲು ಎರಡುಗೇಣು ಅಂಚು ಇಟ್ಟು ಎರಡು ಮೊಳ ಅಗಲವಾದ ಹರಗೋಲಿನ ಆಕೃತಿಯುಳ್ಳ ಬುಟ್ಟಿಯನ್ನು ಬೀಜ ಚಲ್ಲದ ಹಾಗೆ ಗಟ್ಟಿಯಾಗಿ ಹೆಣೆದು ಮಡುವಿದ್ದಲ್ಲಿಗೆ ಹೋಗಿ ನೀರೊಳಗೆ ಎದ್ದಿ ತೊಳೆಯಬೇಕು. ಅದು ಹೇಗೆಂದರೆ ಆ ಬುಟ್ಟಿಯಲ್ಲಿ ಈ ಸಿರಂಜಿ ಕಾಯಿಗಳನ್ನು ತುಳಿಸಿ ಹದ ಮಾಡಿದ್ದನ್ನು ಹಾಕಿ ಆ ಬುಟ್ಟಿಯನ್ನು ನಾಲ್ಕು ಮಂದಿ ಹಿಡಿದು ನೀರೊಳಗೆ ಎದ್ದಿ ಕೈಯ್ಯಾಡಿಸಿ ಮಜ್ಜಿಗೆಯನ್ನು ಕಡೆದ ಹಾಗೆ ಬುಟ್ಟಿಯನ್ನು ನೀರೊಳಗೆ ಮುಳುಗಿಸಿ ಕದಡಿದರೆ ಒಳಗಿನ ಕಸರು ಮೇಲಕ್ಕೆ ಬರುವದು. ಆ ಮೇ

ಮೂರು ನಾಲ್ಕು ವೇಳೆ ಕೈಯ್ಯಾಡಿಸಿ ಬುಟ್ಟಿಯನ್ನು ನೀರೊಳಗೆ ಮುಳುಗಿಸಿ ನಾಲ್ಕು ಬೆರಳು ನೀರು ಬುಟ್ಟಿಯ ಮೇಲೆ ಇರುವ ಹಾಗೆ ಮುಳುಗಿಸಿದರೆ ಮೇಲೆ ಕಸರು ಬರುವದು. ಅದನ್ನು ಪಾರಿಮಾಡಿ ಹೀಗೆ ನಾಲ್ಕು ಐದು ವೇಳೆ ಚನ್ನಾಗಿ ತೊಳೆದು ಆ ಮೇಲೆ ಬೀಜಗಳು ನಿರ್ಮಲವಾದದ್ದು ನೋಡಿ ಕಡೆಗೆ ಹಾಕಿ ಯಾವತ್ತು ಬೀಜಗಳನ್ನು ತೊಳೆಯುವದು ಆದ ಮೇಲೆ ಮನೆಗೆ ತಂದು ಮಾಳಿಗೆಯ ಮೇಲೆ ತಟ್ಟನ್ನಾಗಲಿ ಗುಡಾರವನ್ನಾಗಲಿ ಹಾಸಿ ಅದರ ಮೇಲೆ ಈ ಬೀಜಗಳನ್ನು ತೆಳ್ಳಗೆ ಅಂಗಲಾಗಿ ಹರಿವಿ ಮೇಲಿಂದಮೇಲೆ ಕೈಯ್ಯಾಡಿಸುತ್ತ ಚನ್ನಾಗಿ ಬಿಸಲಲ್ಲಿ ಒಣಗಿಸುತ್ತ ಹದಿನೈದು ದಿವಸದ ವರೆಗೂ ಚನ್ನಾಗಿ ಒಣಗಿಸಬೇಕು ಸ್ವಲ್ಪ ಹಸಿ ಇದ್ದರೆ ನಾಟಿಕೆ ಹಾಯ್ದು ಬೀಜಗಳು ಕೆಡುವವು ಮತ್ತು ಆಗಿಂದಾಗ್ಗೆ ಕೈಯ್ಯಾಡಿಸದಿದ್ದರೆ ಮುಗ್ಗು ಹಾಯ್ದು ಹೋಗುವವು ಅದು ಕಾರಣ ಜಾಗ್ರತೆಯಿಂದ ಚನ್ನಾಗಿ ಒಣಗಿಸಿ ತುಂಬಿ ಇಟ್ಟುಕೊಳ್ಳಬೇಕು. ಆ ಬೀಜಗಳು ಬಹಳ ಅಗ್ಗವಾದರೆ ಒಂದು ರೂಪಾಯಕ್ಕ ೧೨ ಸೇರು ಮಾರುವವು. ಸರ್ವದಾ ಆರು ಸೇರು ೮ ಸೇರು ಇರುವವು. ಬಹಳ ತುಟ್ಟಿಯಾದರೆ ಒಂದು ರೂಪಾಯಕ್ಕೆ ಮೂರುಸೇರು ನಾಲ್ಕು ಸೇರಿನಂತೆ ಸಹ ಮಾರುತ್ತವೆ.

ಮತ್ತು ಸಿರಂಜಿ ಎಂಬದು ಆ ಗಿಡದ ಬೇರು ಮತ್ತು ಆ ಬೇರಿನ ಎಲ್ಲ ಅಡ್ಡಕಡ್ಡಿ ಸಹ ನೂಲನ್ನು ಕೆಂಪು ಬಣ್ಣ ಮಾಡುವದಕ್ಕೆ ಬರುತ್ತದೆ. ಅದರಿಂದ ಅದರ ಬೇರುಗಳಿಗೆ ಸಿರಂಜಿ ಎನ್ನುತ್ತಾರೆ.

ಈ ಗಿಡಗಳನ್ನು ಒಂದುವರೆ ವರ್ಷ ಬೆಳಸಿ ಅಗಿದರೆ ಅದರ ಬೇರುಗಳು ಸಣ್ಣ ಇದ್ದು ಅವರ ಬಣ್ಣವು ಬಹಳ ಕೆಂಪಾಗುತ್ತದೆ. ಅದಕ್ಕೆ 'ರೇಜೆ' ಎಂಬರು. ಅದು ಬಹಳ ತುಟ್ಟಿಯಾಗಿ ಮಾರುವದು. ಆ ಬೇರುಗಳು ಎಷ್ಟು ಸಣ್ಣ ಇದ್ದಷ್ಟು ಧಾರಣೆ ವಿಶೇಷ ಬರುವದು. ಅಂದರೆ ಅದು ಎಳೆದಾಗಿರುವದರಿಂದ ಬಹಳ ಹೊರಡುವದಿಲ್ಲವು.

ಮೂರು ವರ್ಷದ ವರೆಗೂ ಆ ಗಿಡಗಳನ್ನು ಹಾಗೆ ಬೆಳಸಿ ಆ ಮೇಲೆ ಕಡಿದರೆ ಪುಷ್ಕಳ ಸಿರಂಜಿ ಹೊರಡುವದು. ಅದರ ಬೇರುಗಳು ಬಲಿತು ಬಹಳ ದಪ್ಪವಿರುವದರಿಂದ ಅದರ ಕ್ರಯವು ಸ್ವಲ್ಪ ಕಡಿಮೆ ಇರುವದು. ಆದಾಗ್ಯೂ ಬದಕು ಬಹಳ ಹೊರಡುವದರಿಂದ ಮೂರು ವರ್ಷದ ವರೆಗೂ ಗಿಡಗಳನ್ನು ಬೆಳಸಿ ಆ ಮೇಲೆ ಕಡಿಯುತ್ತಾರೆ. ಅದನ್ನು ಕಡಿಸುವದು ಹೇಗಂದರೆ, ಅದನ್ನು ಅಗಿಯುವ ಕಾಲದಲ್ಲಿ ನಿತ್ಯನಿತ್ಯ ಎಷ್ಟು ಅಗಿಸಬೇಕಾಗುವದೋ ಅಷ್ಟು ಗಿಡಗಳನ್ನು ಕೊಯ್ದು ಹಾಕಿ ಮಡ್ಡಿಯನ್ನು ಅಗಿದ ಹಾಗೆ ಒಂದು ಮೊಳ ತಗ್ಗು ಇಟ್ಟು ನಟ್ಟು ಕಡಿದ ಹಾಗೆ ಕಡಿಯುತ್ತಾ ಹೋಗಬೇಕು. ಮತ್ತು ಅವು

ಗಳ ಬೇರು ಸ್ವಲ್ಪಾದರೂ ಉಳಿಯದ ಹಾಗೆ ಆರಿಸುತ್ತ ಬೇರಿನ ತೂಕದ ಮೇಲೆ ಒಂದು ಮಣಕ್ಕೆ ಎರಡು ಆಣೆಯಂತೆ ಕೂಲಿಯ ಕೊಡಬೇಕು ಹಾಗು ಒಂದೊಂದು ಬೇರು ದಪ್ಪಾಗಿದ್ದು ಆದು ಎರಡು ಮೊಳದ ಪರಿಯಂತರ ಭೂಮಿಯ ಒಳಗೆ ಹೋಗಿರುವದು ಅಂಥ ಬೇರುಗಳನ್ನು ಪಡದ ಒಳಗೆ ಗೇಣು ಒಂದುವರೆ ಗೇಣು ಕುಣಿಯನ್ನು ಹೊಡೆದು ಗುದ್ದಲಿಯ ನಿಲು ಹಾಕಿ ಮೇಟಿ ಸ್ವಲ್ಪಾದರೂ ತುದಿಯ ಬೇರು ಸಹ ಭೂಮಿಯಲ್ಲಿ ಉಳಿಯದ ಹಾಗೆ ತಗೆಯಬೇಕು. ಆದರಲ್ಲಿ ಸಣ್ಣನ್ನ ಅಡ್ಡ ಬೇರುಗಳು ಮತ್ತು ಎಳಿಯದಾದ ಒಂದುವರೆ ವರ್ಷದ ಬೇರು ರೇಜೆ ಎನಿಸುವದು ಆದು ಬಹಳ ತುಟ್ಟಿಯಾ ರುವದು. ಸಿರಂಜಿಯ ಬೇರು ದಪ್ಪವಾದ ಹಾಗೆ ಧಾರಣಿ ಕಡಿಮೆ ಇರು ವದು. ಆದಾಗ್ಯೂ ಬದುಕು ಬಹಳ ಹೊರಡಬೇಕೆಂದು ಎರಡು ಮೂರು ವರ್ಷದ ವರೆಗೂ ಬೆಳಿಸಿ ಕಡಿಯುತ್ತಾರೆ ಆ ಬೇರುಗಳನ್ನು ಯಾವತ್ತು ಆರಿಸಿ ಹೊರೆಯ ಕಟ್ಟಿ ಹೊತ್ತು ತಂದು ಕೂಲಿಯವರು ಹಾಕುತ್ತಾರೆ ಆ ಮೇಲೆ ಕೂಲಿ ಹೆಂಗಸರನ್ನು ಹಚ್ಚಿ ದಪ್ಪಾದ ಬೇರುಗಳನ್ನು ಗೇಣು ಚೋಟಿ ಉದ್ದ ಇಟ್ಟು ಕೊರೆದು ಮೂರು ಪ್ರಕಾರದ ರಾಶಿಯನ್ನು ಬೇರೆಬೇರೆ ಮಾಡಬೇಕು. ತುದಿಯ ಸಣ್ಣನ್ನ ಬೇರುಗಳು ರೇಜೆ ಎನಿಸುವದು. ಮಧ್ಯದ ಬೇರು ರಾಶಿ ಎನಿಸುವದು. ದಪ್ಪಾದ ಬೇರು ಕಿರಿದು ಪೈಕಿ ರಾಶಿ ಎನಿಸುತ್ತದೆ. ಈ ಕಿರಿ ರಾಶಿಯ ದಪ್ಪ ಬೇರಿನಕ್ಕಿಂತ ರೇಜೆಯ ಧಾರಣಿ ಇಮ್ಮಡಿ ಇರುವದು. ಆದನ್ನು ಚನ್ನಾಗಿ ಬಿಸಿಲಲ್ಲಿ ಹಾಕಿ ಒಣಗಿಸಿ ಒಟಾರಗಳಲ್ಲಿ ತುಂಬಿ ಇಟ್ಟು ರಂಗು ನೋಡಿ ಮಾರಾಟ ಮಾಡುತ್ತಾರೆ ಆ ಸಿರಂಜಿಯ ಧಾರಣಿ ರೇಜಯುಂಟು. ಮಣಕ್ಕೆ ನಾಲ್ವತ್ತರಿಂದ ಐವತ್ತರ ವರೆಗೂ ಇರುತ್ತದೆ ಮತ್ತು ರಾಶಿ ಸಿರಂಜ ಮೂವತ್ತು ಮೂವತ್ತೈದು ರೂಪಾಯಕ್ಕೆ ಎಂಟು ಮಣ ಮಾರುತ್ತಾರೆ

ಸಿರಂಜಿಯ ಬಿತ್ತಿದ ಹೊಲಕ್ಕೆ ಜೋಳ ಬಿತ್ತಬೇಕು. ಎರಡನೆಯ ವರ್ಷ ಕರಿಎಳ್ಳು ಅಥವಾ ಕೆಂಪುಎಳ್ಳು ಬಿತ್ತಬೇಕು. ಮೂರನೆಯ ವರ್ಷ ಮತ್ತೂ ಸಿರಂಜಿಯನ್ನು ಬಿತ್ತಬೇಕು ಈ ಪ್ರಕಾರ ಆದರ ಕಾಲಿಗಿ ಮಾಡಿ ಬಿತ್ತುತ್ತ ಹೋಗಬೇಕು ಈ ಸಿರಂಜಿ ಬೀಜಗಳು ಹರಸೂರು, ಶಿರವೂರು, ಮೊದ ಲಾಗಿ ಕಲಬುರಿಗಿಯ ಪ್ರಾಂತದಲ್ಲಿ ಮತ್ತು ಅವಸೆ, ಲಾತೂರ, ನಿಲಂಗಿ, ರೇಣಾಪೂರ ಮೊದಲಾದ ಮಹಾರಾಷ್ಟ್ರ ಪ್ರಾಂತದಲ್ಲಿ ಬಹಳ ದೊರೆಯುತ್ತದೆ.

ಸಿರಂಜಿಯ ಬೀಜವನ್ನು ಬಿತ್ತುವದು ಗೋದಿಯ ಬಿತ್ತಿಕೆಯಕ್ಕಿಂತಲೂ ಸ್ವಲ್ಪ ಅಂಗಲವಾಗಿ ನಾಲ್ಕು ಬೆರಳು ಅಂತರಕ್ಕೊಂದು ಬೀಜ ಬೀಳುವಂತೆ ಬಿತ್ತಬೇಕು. ಹಮ್ಮಚೌಕ ಮೂವತ್ತೆರಡು ಮಾರು ಭೂಮಿಗೆ ನಾಲ್ವತ್ತೆಂಟು ಸೇರು ಬೀಜವನ್ನು ಬಿತ್ತಬೇಕು. ಹಾಗು ಈ ಬೀಜವನ್ನು ಬಿತ್ತುವದಕ್ಕೆ

ಒಂಭತ್ತು ಘೂಟು ಅಂದರೆ ಒಂದು ವಾರು ಆಗುವದು. ಆ ವಾರಿಗೆ ಇಂಗ್ಲೀಷ ರೀತಿಯಿಂದ ಒಂದು ಯಾರ್ಡವೆಂಬರು. ಮತ್ತು ಹನ್ನೊಂದು ವಾರು ಉದ್ದ ಹನ್ನೊಂದು ವಾರು ಅಗಲ ಇಷ್ಟು ಭೂಮಿಗೆ ಒಂದು ಗುಂಟೆ ಎಂಬರು. ಆದರೆ ಒಂದು ಗುಂಟೆ ಭೂಮಿಗೆ ಐದುವರೆ ಸೇರು ಬೀಜವನ್ನು ಬಿತ್ತಬೇಕು.

## ನೀಲಿಯ ಬೀಜವನ್ನು ಬಿತ್ತುವದು.

ನೀಲಿಯ ಬೀಜವನ್ನು ಜರಾಯತ ಪೈಕಿ ಯಾವ ಭೂಮಿಯಲ್ಲಿ ಯಾದರೂ ಬಿತ್ತಿದರೂ ಬೆಳೆಯುತ್ತದೆ ಆ ನೀಲಿಯ ಬಿತ್ತುವ ಹೊಲವನ್ನಾದರೂ ಹಿಂದೆ ಐದನೆಯ ಪ್ರಕರಣದಲ್ಲಿ ಹೇಳಿದಂತೆ ಎರಡು ಸಾಲು ಮೂರು ಸಾಲು ಮಡಿಕಿಯ ಹೊಡೆದು ಚನ್ನಾಗಿ ಹರಿಗಿ ಹಸನಮಾಡಿ ನೀಲಿಯ ಬೀಜಪನ್ನು ತರಿಸಿ ಮುಂಗಾರಿಯ ಕಾಲದಲ್ಲಿ ಚೋಟಿಗೊಂದು ಬೀಜ ಬೀಳುವಂತೆ ಬಿತ್ತಿ ಹೆಟ್ಟಾ ಹೊಡೆದು ಬಿಡಬೇಕು ಅದು ನಾಟಿದ ಮೇಲೆ ಕೆಲವು ದಿವಸ ಬಿಟ್ಟು ಸದಿಯನ್ನು ತೆಗಿಸಬೇಕು ಮೂರು ನಾಲ್ಕು ತಿಂಗಳ ತನಕ ವರ್ಧನ ಮಾಡಿ ಆ ಮೇಲೆ ತೊಪ್ಪಲವನ್ನು ಕೊಯಿದು ನೀಲಿಯ ಮಾಡುವದು ಹೇಗಂದರೆ—

ಮೊದಲೆ ತಮ್ಮ ತಮ್ಮ ಅನುವರಿತು ಎಂಟು ವಾರು ಅಗಲ ನಾಲ್ಕು ಕಡೆಗೂ ಚೌಕು ಇಟ್ಟು ಟೊಂಕಮಟ ಉದ್ದವಾದ ಗಚ್ಚಿನ ಹೌದನ್ನು ಮಾಡಿಸಿ ಆ ಹೌದಿನಲ್ಲಿ ಈ ತೊಪ್ಪಲವನ್ನು ಕೊಯ್ದು ಹಾಕಿ ಅದರಲ್ಲಿ ನೀರು ಹಾಕಿ ಎಂಟು ದಿನ ಹತ್ತು ದಿನ ಕೊಳೆಯಲಿಕ್ಕೆ ಹಾಕಿ ಆ ತೊಪ್ಪಲವೆಲ್ಲ ಕೊಳೆತುಬರಲು ಮೇಲಕ್ಕೆ ತೇಲುವದಾದರೆ ಒಳಗೆ ಇಳಿದು ಕಾಲಿನಿಂದ ತುಳಿದು ಆ ನೀರಿನಲ್ಲಿ ತೊಪ್ಪಲವೆಲ್ಲ ಮಿಶ್ರವಾಗಿ ರಾಡಿಯಾಗುವ ಹಾಗೆ ಆದ ಮೇಲೆ ಅದನ್ನು ಬಿದಿರ ಬುಟ್ಟಿಯನ್ನು ದೊಡ್ಡ ಹಂಡೇದ ಬಾಯ ಮೇಲೆ ಇಟ್ಟು ಸೋಸಿಕೊಂಡು ರಾಡಿಯಂಥ ನೀರು ಹಂಡೇದಲ್ಲಿ ಹಾಕಿ ಮೇಲಿನ ಕಡ್ಡಿ ಕಸ ತೆಗೆದು ಆ ಹಂಡೆಯನ್ನು ವಲಿಯ ಮೇಲೆ ಇಟ್ಟು ನೀರು ಮಂದವಾಗುವ ಹಾಗೆ ಕುದಿಸಿ ಬೇರೆ ಒಂದು ಸ್ಥಳದಲ್ಲಿ ಗೇಣು ಒಂದುವರೆ ಗೇಣು ಒಡ್ಡು ಇಟ್ಟು ಮಡಿಗಳ ಮಾಡಿ ಅದರಲ್ಲಿ ನಾಕಾರು ಬೆರಳುದ್ದ ತುಂಬಾ ಬೂದಿಯನ್ನು ಹರಿವಿ ಅದರ ಮೇಲೆ ಅರಿವೆಯ ಹಾಕಿ ಆ ಕುದಿದ ನೀಲಿಯ ರಸವನ್ನು ಅದರಲ್ಲಿ ಸುರುವಿ ಬಿಟ್ಟರೆ ಅದು ನೀರೆಲ್ಲ ಬಸಿದು ಅಲ್ಲೇ ಆರಿ ಅರಗಿನ ಹಲ್ಲಿಯ ಹಾಗೆ ಗಟ್ಟಿಯಾಗಿರುವದು ಅದನ್ನು ತೆಗೆದುಕೊಂಡರೆ ಅದು ಉತ್ತಮ ಪೈಕೀ ನೀಲಿ ಎನಿಸುವದು. ಆ ನೀಲಿ ಐವತ್ತು ಅರುವತ್ತು ರೂಪಾಯಕ್ಕೆ ಒಂದು ಮಣದಂತೆ ಮಾರುವದು. ಮತ್ತು ಆ ಗಿಡಗಳು ಪುನಃ ಚಿಗಿತು ತೊಪ್ಪಲ ಆದ ಹಾಗೆ ಎರಡು ವೇಳೆ ಮೂರು

ವೇಳೆ ಪೂರ್ವದಂತೆ ಹೌದಿನಲ್ಲಿ ಹಾಕಿ ಕೊಳಿಸಿ ಕುದಿಸಿ ಮಾಡಿದ ನೀಲಿಯು ಮಧ್ಯಮ ರಾಶಿಯಾಗುವದು ಪುನಃ ಮೂರನೆಯ ಸರ್ತಿ ಮಾಡಿದ್ದು ಕಿರಿದು ನೀಲಿಯಾಗುವದು ಈ ಪ್ರಕಾರ ಗಂಗಾಖೇಡದ ಎರಿಯ ಪ್ರಾಂತದಲ್ಲಿ ಮತ್ತು ಮೂಡಲು ದೇಶದ ಪಡಟೂರು ಪ್ರಾಂತದಲ್ಲಿ ಕೃಷಿಕರು ಮಾಡುತ್ತಾರ. ಇದು ಯಾವ ದೇಶದಲ್ಲಿಯಾದರೂ ಆಗುವದು.

ಇಲ್ಲಿಯ ವರೆಗೂ ಜಿರಾಯತ ಪೈಕಿ ಬೈಲು ಭೂಮಿಯ ವ್ಯವಸಾಯವನ್ನು ಮಾಡುವಲ್ಲಿ ಸಕಲ ಯುಕ್ತಿಗಳನ್ನು ಕೃಷಿಕೃತ್ಯದ ಸಕಲ ನೀತಿಗಳನ್ನು ಮತ್ತು ಭೂಮಿಯ ತಿದ್ದುವಿಕೆಯಲ್ಲಿ ಒಡ್ಡು ವಾರಿಯನ್ನು ಹಾಕಿ ಹಳ್ಳನಾಲು ಚೀರಲಗಳನ್ನು ತುಂಬಿಕೊಂಡು ತೆಗ್ಗು ತೆವರು ಸಮತಳ ಮಾಡಿಕೊಂಬುವದನ್ನು ಮತ್ತು ಯಾವ ಧಾನ್ಯಗಳನ್ನು ಬಿತ್ತುವ ಕಾಲದಲ್ಲಿ ಮುಂಗಾರಿ ಹಿಂಗಾರಿ ಸರ್ವ ಧಾನ್ಯಗಳನ್ನು ಬಿತ್ತುವದಕ್ಕೆ ಹೊಲಗಳನ್ನು ಹರಿಗಿ ಸಿದ್ಧಮಾಡಿಕೊಂಬುವ ರೀತಿಯನ್ನು ಗೊಬ್ಬರ ಹಾಕುವದನ್ನು ಗೊಬ್ಬರದಿಂದಾಗುವ ಪ್ರಯೋಜನವನ್ನು ಮತ್ತು ಸಕಲ ಧಾನ್ಯಗಳನ್ನು ಬಿತ್ತುವ ಹದಬಿದಿಗಳನ್ನು ಹೇಳಿದ್ದೇನೆ.

ಆದರೆ ಜಿರಾಯತ ಪೈಕಿ ಎರಿಯ ಭೂಮಿ ಇದ್ದವರು ಭಾಗ್ಯಶಾಲಿಗಳು. ಎರಿಯ ಭೂಮಿಯಲ್ಲಿ ಹಿಂಗಾರಿ ಮುಂಗಾರಿ ಮೊದಲಾದ ಸಮಸ್ತ ಫಲ ಪದಾರ್ಥಗಳು ಸಕಲ ಧಾನ್ಯಾದಿಗಳು ಬೆಳೆಯುತ್ತವೆ ಮತ್ತು ಎರಿಯ ಭೂಮಿಗೆ ಶ್ರಮವಾದರೂ ಕಡಿಮೆಯಾಗಿರುವದು ಈ ಭೂಮಿಯ ಉತ್ಪನ್ನವು ವಿಶೇಷವಾಗಿರುವದು ಆದು ಕಾರಣ "ಎರಿಯನ್ನು ಮಾಡಿದವನೇ ದೊರೆಯಾಗುವನು" ಎಂಬ ಗಾದೆಯುಂಟು. ಆ ಮಾತು ನಿಶ್ಚಯವೇ ಸರಿ. ಆದಕ್ಕೆ ಇನ್ನೊಂದು ವಿಘ್ನ ಉಂಟು ಅದೇನಂದರೆ ಎರಿಯ ಮಾಡಿದವನೇ ಧೊರೆ ಎಂಬದು ಸುಭಿಕ್ಷಕಾಲವಾದರೆ ಹಾಗೇ ಸರಿ "ಎರಿ ಮಳೆಯಾಗದಿದ್ದರೆ ಬಾಯ ತೆರಿ" ಎಂಬ ಗಾದೆ ಇರುವದರಿಂದ ಕೃಷಿಮಾಡಿದವರಿಗೆ ಅರಗಾಲ ಬರಗಾಲಗಳು ಇರಬಾರದು. ಯಾತಕ್ಕದಂರೆ "ಕೃಷಿತೋ ನಾಸ್ತಿ ದುರ್ಭಿಕ್ಷಾ" ಎಂದು ಪುರಾಣ ವಾಕ್ಯ ಉಂಟಾಗಿ ಕೃಷಿಮಾಡಿದವರಿಗೆ ದುರ್ಭಿಕ್ಷಾದಿಗಳಿಲ್ಲವೆಂಬುವ ಮಾತು ಜಿರಾಯತ ಸಂಬಂಧವಾದ ಹೊಲಗಳ ವ್ಯವಸಾಯ ಮಾಡುವ ಕೃಷಿಕರಿಗೆ ಸಾರ್ಥಕವಾಗುವದಿಲ್ಲ ಅದು ಕಾರಣ ಮುಂದೆ ಬಾಗಾಯತವೆನಿಸುವ ತೋಟಗಳನ್ನು ಮಾಡುವ ಸಕಲ ಯುಕ್ತಿಗಳನ್ನು ಈ ಗ್ರಂಥದಲ್ಲಿ ಎರಡನೆಯ ಭಾಗವಾಗಿ ಹೇಳುತ್ತೇನೆ. ಮತ್ತು ಎರಿಯ ಮಾಡಿದವನು ಬರಗಾಲವನ್ನು ಬಯಸುತ್ತಾನೆ. ತೋಟ ಮಾಡಿದವನು ಶುಭಕಾಲ ಬಯಸುತ್ತಾನೆ ಆದರೀತಿ "ಯಥಾಭಾವ ಸ್ತಥಾಸಿದ್ಧಿ ಸತ್ಯಂ ಸತ್ಯಂ ನಸಂಶಯ" ಎಂದು ಉಂಟಾಗಿ

ಎರಿಯ ಮೊದಲಾದ ಹೊಲಗಳ ವ್ಯವಸಾಯವನ್ನು ಮಾಡುವರು. ಶಿವಕೃಪೆಯಿಂದ ಸಕಲ ಧಾನ್ಯಾದಿಗಳು ಸಮೃದ್ಧಿಯಾಗಿ ಬೆಳೆಯುತ್ತ ಕೆಲವು ವರ್ಷಗಳಲ್ಲಿ ಸಹಸ್ರಾವಧಿ ಖಂಡಗ ಧಾನ್ಯಗಳು ಮನೆಯಲ್ಲಿ ಸಿಲುಕು ಬಿಳೋಣ ಆ ಧಾನ್ಯಗಳನ್ನು ನೋಡಿ ಈ ಧಾನ್ಯಗಳು ಎಂದು ಪ್ರಿಯವಾದಾವು, ಇವುಗಳನ್ನು ಎಂದು ಮಾರಿ ರೊಕ್ಕವನ್ನು ಮಾಡೇನು ಎಂದು, ಎದುರು ನೋಡುತ್ತಿರುವಲ್ಲಿ ದೇವರು ಅವರಂತೆ ಅವರ ಅನಿಷ್ಟ ಚಿಂತನೆಯ ದೋಷಕ್ಕೆ ತಕ್ಕ ಶಿಕ್ಷೆಯನ್ನು ಮಾಡಬೇಕೆಂದು ಅರಗಾಲ ಬರಗಾಲಂಗಳನೊಡ್ಡಿದಲ್ಲಿ ಧಾನ್ಯ ಸಂಗ್ರಹವಿದ್ದವರು ಮೊದಲು ಸಂತೋಷಿಸಿ ನಮ್ಮ ಮನೋರಥವು ಕೈಗೂಡಿತೆಂದು ಬಹಳ ಪ್ರಿಯವಾದ ಕಾಲದಲ್ಲಿ ಧಾನ್ಯವನಲ್ಲಾ ಮಾರಿ ನಾಲ್ಕಾರು ತಿಂಗಳ ಪೂರ್ತಿ ತಮಗೆ ಬೇಕಾದಷ್ಟು ಇಟ್ಟುಕೊಂಡಿರುವರು ಅಷ್ಟರಲ್ಲಿ ಮುಂದಿನ ವರ್ಷ ಸ್ವಲ್ಪ ಮಳೆಯು ತಡೆದರೆ ಬಿಸಲು ಕಾಲದಲ್ಲಿ ಗುಬ್ಬಿಯ ಮರಿಯು ಬಾಯ ತೆರೆದ ಹಾಗೆ ಬಾಯನ್ನು ತರೆವರು ಅಷ್ಟರಲ್ಲಿ ದೇವರಿಗೆ ಕರುಣ ಹುಟ್ಟಿ ಮಳೆಬೆಳೆಗಳನ್ನು ಸಮೃದ್ಧಿಯಾಗಿ ಕೊಟ್ಟರೆ ಉತ್ತಮವು. ಇಲ್ಲದಾದರೆ ತಾನು ಬರಗಾಲದಲ್ಲಿ ಸಂಪಾದಿಸಿದ ದ್ರವ್ಯವೆಲ್ಲ ಹೊಟ್ಟೆಗೆ ಸಾಲವಾಗಿ ಗೋಳಾಡುತ್ತ ಅನ್ನವನ್ನು ಕಾಣದಾಗುವರು

ತೋಟವನ್ನು ಮಾಡಿದವನು ಸರ್ವದಾ ಶುಭಕಾರ್ಯವನ್ನೇ ಬಯಸುತ್ತಿರುವನು ಒಂದು ಪಕ್ಷದಲ್ಲಿ ಅರಗಾಲ ಬರಗಾಲಂಗಳು ಬಂದರೆ ತಕ್ಕಷ್ಟು ಪೂರ್ತಿಗಾದರೂ ನೀರು ಹಾಸಿ ಸಕಲ ಧಾನ್ಯಗಳನ್ನು ಬೆಳೆ ಮಾಡಿಕೊಂಡು ತನ್ನ ಪಶುಗಳನ್ನು ಮತ್ತು ಸತಿಸುತಾದಿಗಳನ್ನು ಪಾಲನಮಾಡಿಕೊಳ್ಳುತ್ತಾನೆ. ಅದು ಕಾರಣ "ತೋಟವನ್ನು ಮಾಡಿದವನು ಕೋಟಲೆಗೊಳ್ಳನು" ಎಂಬ ಗಾದೆಗೆ ಸರಿಯಾಗಿ ಮತ್ತು "ಕೃಷಿತೋನಾಸ್ತಿ ದುರ್ಭಿಕ್ಷಾ" ಎಂಬ ಪುರಾಣ ವಾಕ್ಯಕ್ಕೆ ಅನುಸಾರವಾಗಿ ಸೌಖ್ಯದಿಂದಿರುವನು ತೋಟವನ್ನು ಮಾಡುವ ಕೃಷಿಕ ಜನರುಗಳಿಗೆ ಅರಗಾಲ ಬರಗಾಲಂಗಳ ಭಯವಿಲ್ಲವು

ಅದು ಕಾರಣ ಇಲ್ಲಿಯ ವರೆಗೂ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥದ ಮೊದಲನೇ ಭಾಗವನ್ನು ಸಮಾಪ್ತ ಮಾಡಿ ಮುಂದೆ ಇದಕ್ಕಿಂತಲೂ ಕೋಟಿಭಾಗ ವಿಶೇಷವಾದ ಉತ್ಪನ್ನವಾಗುತ್ತ ಸದಾ ಸೌಖ್ಯದಿಂದಿದ್ದು ಸಮಸ್ತ ಫಲಪದಾರ್ಥಾದಿಗಳಾದಿಯಾದ ಧನಧಾನ್ಯ ಸಂಪನ್ನವಾಗಲೆಂದು ಕೃಷಿಕ ಜನರ ಹಿತಕ್ಕಾಗಿ ಈ ಗ್ರಂಥದಲ್ಲಿ ಮುಂದೆ ಎರಡನೇ ಭಾಗವೆಂಬ ಬಾಗಾಯತ ಎಂದೆನಿಸುವ ತೋಟದ ವ್ಯವಸಾಯವನ್ನು ಮಾಡುವ ಕ್ರಮವನ್ನು ಸಕಲ ದೇಶದ ರೈತರಾದ ಕೃಷಿಕ ಜನರುಗಳ ಹಿತಕ್ಕಾಗಿ ಹೇಳಬೇಕಾಗಿದೆ. ಯಾತಕ್ಕೆಂದರೆ ತೋಟವನ್ನು ಮಾಡಿದವನು ಕೋಟ್ಯಾಧಿಕಾರಿಯಾಗುವನು.

ತೋಟದಿಂದ ಸಂಸಾರದ ಕೋಟಲೆ ಹೋಗುವನು. ಅದು ಕಾರಣ ಕೃಷಿಕರಾದವರು ಘನತೋಟವನ್ನು ಮಾಡದೆ ಧನಸಂಪನ್ನನಾಗಲಾರರು.

ಇತೀ ಶ್ರೀಮತ್ಪರಮ ನಿರಂಜನ ಲೀಲಾವತಾರ ನೂತನಲ್ಲಮ ಪ್ರಭು ಸ್ವರೂಪಿಗಳಾದ ಶ್ರೀ ಘನಮಠನಿವಾಸ ನಾಗಭೂಷಣ ಶಿವಯೋಗಿಗಳೆಂಬ ಮಹಾ ಪ್ರಭುಗಳ ಅಪ್ಪಣೆಯ ಮೇಲಿಂದ ಸಿದ್ಧರಾಮಪ್ಪ ಕುನ್ನಾಳ ಮುಕ್ಕಾಮ ಬೆಕ್ಕಿನಾಳ ಈತನಿಂದ ರಚಿಸಲ್ಪಟ್ಟ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಲೋಕ ಹಿತವಾದ ಗ್ರಂಥದ ಪ್ರಥಮ ಭಾಗ ಸಮಾಪ್ತ ಮಂಗಳಮಂ

# ೨ ನೇ ಭಾಗ.

## ೯ ನೇ ಪ್ರಕರಣವು.

### ತೋಟದ ಭೂಮಿಯ ತಿದ್ದುವಿಕೆಯು

ಮತ್ತು

### ಭಾವಿಯನ್ನು ಕಡಿಸುವ ಯುಕ್ತಿಯು.

ತೋಟದಿಂದ ಗ್ರಾಮಪುರಗಳಿಗೆ ಶೋಭಾಯಮಾನವು ಮತ್ತು ಸಕಲ ಪುರಾಣಗಳಲ್ಲಿ ಇತಿಹಾಸದಲ್ಲಿ ರಘುವಂಶಾದಿ ಪಂಚಕಾವ್ಯ ವೊದಲಾದ ಸಂಸ್ಕೃತ ನಾಟಕಾಲಂಕಾರ ಪುರಾಣ ಮುಂತಾದ ಗ್ರಂಥಗಳಲ್ಲಿ ವೃಷಭೇಂದ್ರ ವಿಜಯ, ರಾಜಶೇಖರ, ಶಬರಶಂಕರವಿಲಾಸ, ಬಸವಪುರಾಣಾದಿ ವಸ್ತುಕ ವರ್ಣಕ ಮಹಾಕಾವ್ಯ ಮುಂತಾದ ಕನ್ನಡ ಗೀರ್ವಾಣಾದಿ ಉದ್ಗ್ರಂಥಗಳಲ್ಲಿ ಮತ್ತು ಎಳೆಂದೂರ ಷಡಕ್ಷರ ದೇವರು, ಭೀಮಕವಿ, ಬಾಣ, ಮಯೂರ, ಕಾಳಿದಾಸ ಮುಂತಾದ ಮಹಾ ಶಿವಕವಿಗಳು ವರ್ಣಿಸಿರುವಂಥ ಭೂವರ್ಣನೆ ಶೈಲವರ್ಣನೆ ಪುರವರ್ಣನೆ ಇವುಗಳಿಗೆ ಮುಖ್ಯವಾದ ಉದ್ಯಾನವೆಂಬ ವನ ವರ್ಣನೆಯು ಶೃಂಗಾರತರವಾಗಿ ಶೋಭಿತವಾಗಿರುವದು ಆದು ಕಾಣ ರಾಜರುಗಳಿಗೆ ಸುಖಭೋಗಾಸ್ಪದವಾಗಿ ಮಾಡಲ್ಪಟ್ಟ ಉದ್ಯಾನವು ಹಲವು ಪ್ರಕಾರದ ಫಲವೃಕ್ಷಗಳಿಂದಲೂ ಪುಷ್ಪವಾಟಿಕೆಯಿಂದಲೂ ನೆಳಲುಗಳಿಂದಲೂ ಮನಕ್ಕೆ ಮನೋಹರವಾಗಿ ಅದಲ್ಲದೆ ಸಪ್ತಸಂತಾನಕ್ಕೆ ಮುಖ್ಯವಾಗಿ ಲಕ್ಷ್ಮೀ ಆಲಯವಾಗಿರುವದರಿಂದ ರಸಿಕ ಜನರಿಗೆ ಕೆಲವು ಮುಖದಿಂದ ಯೋಗಿಗಳಿಗೆ ಕೆಲವು ಮುಖದಿಂದ ಭುಕ್ತಾಪೇಕ್ಷಿತರಿಗೆ ಕಲವು ಮುಖದಿಂದ ಪಥಾಶ್ರಿತರಿಗೆ ಕೆಲವು ಮುಖದಿಂದ ಪಶುಪಕ್ಷಿ ಪ್ರಾಣಿಗಳಿಗೆ ಕೆಲವು ಮುಖದಿಂದ ಭ್ರಮರಾದಿ ಪತಂಗ ಪ್ರಾಣಿಗಳಿಗೆ ಕೆಲವು ಮುಖದಿಂದ ವಿರಹಿಗಳಿಗೆ ಕೆಲವು ಮುಖದಿಂದ ಶುಕಪಿಕರಾಜಹಂಸ ಮಯೂರ ಚಕ್ರವಾಕ ಚಾತಕ ಪಕ್ಷಿಗಳಿಗೆ ಕೆಲವು ಮುಖದಿಂದ ನೋಟಕ್ಕೆ ರಂಜನೆಯಾಗಿ ಊಟಕ್ಕೆ ಯುಕ್ತವಾಗಿ ಸಕಲ ಸುಖಸಂಪದ ಸ್ಥಾನೀಭೂತವಾಗಿ ಶುಭಲಕ್ಷ್ಮಿಯ ನಿಜನಿಳಯವೆನಿಸಿ ವರ್ಣಿಸಿ ಕೊಳ್ಳಲ್ಪಟ್ಟು ಸರ್ವ ಶುಭಶೋಭನವಾಗಿರುವದರಿಂದ ತೋಟವು ಕೃಷಿಕ ಜನರಿಗೆ ಸಕಲಸಂಪತ್ಪ್ರದವಾಗಿರುತ್ತಿಹುದು. ಇಂತಪ್ಪ ಯುಕ್ತಿಗಳನ್ನು ತಿಳಿದು ಇಂಥ ತೋಟವನ್ನು ಮಾಡಿಸಿ ಸುಖ ಪಡಬೇಕಾದರೆ ರಾಜಬುದ್ಧಿಯುಳ್ಳ

ರಾಜಕೃಷಿಕರಾದವರಿಗೆ ಅಪೇಕ್ಷೆ ಹುಟ್ಟುತ್ತಿರುವದು. ಅಂಥ ಬುದ್ಧಿಯು ಸರ್ವರಿಗೆ ಹುಟ್ಟಿ ಸಮಸ್ತ ಕೃಷಿಕರು ರಾಜಬುದ್ಧಿಯುಳ್ಳವರಾಗಲೆಂದು ಮತ್ತು ಜಗತ್ತೆಲ್ಲ ಸಂಪತ್ತನ್ನು ಹೊಂದಲೆಂದು ಆಶೆಯುಳ್ಳವನಾಗಿ ನಾನು ಈ ಗ್ರಂಥವನ್ನು ನಿರ್ಮಿಸಿ ಇದರಲ್ಲಿ ತೋಟವನ್ನು ಮಾಡುವ ಸಕಲ ಯುಕ್ತಿಗಳನ್ನು ಪ್ರಯೋಜನಗಳನ್ನು ಸಕಲ ಫಲಪದಾರ್ಥಗಳ ಸಂಪತ್ತನ್ನು ಪ್ರತ್ಯಕ್ಷವಾಗಿ ಕಣ್ಣು ಕಾಣುವ ಹಾಗೆ ಮಾಡಿಕೊಳ್ಳತಕ್ಕಂಥ ಅತಿ ಸುಲಭವಾದ ಪ್ರಯುಕ್ತಿಗಳನ್ನು ಇಲ್ಲಿ ವಿಸ್ತಾರವಾಗಿ ಬರೆದಿರುವೆನು ಇದನ್ನು ಓದುವದಕ್ಕೆಯೂ ಕೇಳುವದಕ್ಕೆಯೂ ತಿಳಿಯುವದಕ್ಕೆಯೂ ದೇವರು ಸಮಸ್ತರ ಹೃದಯದಲ್ಲಿ ಜ್ಞಾನವನ್ನು ಕೊಟ್ಟಿದ್ದಾನೆ ಆದು ಕಾರಣ ಇದನ್ನು ತಿಳಿದುಕೊಳ್ಳುವ ವಿಷಯದಲ್ಲಿ ಬೇಸರಪಡಬಾರದು. ಒಂದು ವೇಳೆ ತತ್ಕಾಲಕ್ಕೆ ಇದರಲ್ಲಿ ಹೇಳಿದಂತೆ ಮಾಡಿಕೊಳ್ಳುವ ತ್ರಾಣವಿಲ್ಲದಿದ್ದರೆ ತಿಳಿದುಕೊಂಬುವದಕ್ಕಾದರೂ ತ್ರಾಣವಿಲ್ಲವೇ? ಈ ಯಾವತ್ತು ವಿಷಯಗಳನ್ನು ಚನ್ನಾಗಿ ಓದಿ ನೋಡಿ ತಿಳಿದರೆ ಮುಂದೆ ತನಗೆ ತ್ರಾಣವಾದಾಗಲಾದರೂ ಮಾಡಿಕೊಳ್ಳುವ ಬುದ್ಧಿಯು ಹುಟ್ಟುವದು. ಓದಿ ತಿಳಿಯುವದಕ್ಕೆ ಬೇಸರ ಮಾಡಿಕೊಂಡರ ಬಂದ ಲಕ್ಷ್ಮಿಯನ್ನು ಹಿಂದಿರುಗಿ ಕಳುಹಿಸಿದ ಹಾಗಾಗುವದು ಆದು ಕಾರಣ ಸರ್ವರೂ ಈ ಗ್ರಂಥವನ್ನು ಚನ್ನಾಗಿ ಓದಿ ತಿಳಿಯಬೇಕು

ಉದಕದ ಆಸ್ಪದವಿದ್ದ ಭೂಮಿಗಳಿಗೆ ಒಡ್ಡುಗಳನ್ನು ಬಲಿಸಿ ಸಮತೂಕಕ್ಕೆ ತಂದು ಹಿಂದೆ ಮೊದಲನೆಯ ಭಾಗದ ಮೂರನೆಯ ಪ್ರಕರಣದಲ್ಲಿ ಹೇಳಿದಂತೆ ಸಕಲ ಯುಕ್ತಿಗಳಿಂದ ಭೂಮಿಯನ್ನು ತಿದ್ದಿಕೊಂಡರೆ ಮಳೆಯಿಂದ ಬಿದ್ದ ನೀರು ಸುತ್ತಲೂ ಮಾಡಿರುವ ಒಡ್ಡುಗಳ ಸಹಾಯದಿಂದ ಅಲ್ಲೇ ಇಮುರಿಕೊಂಡು ಮಂಡು ಬಿಡುವದು ಒಂದು ವೇಳೆ ಮರ ಮಳೆಯಾಗಿ ನೀರು ಹೆಚ್ಚಾದರೆ ಕೋಡಿಗಳ ಮುಖಾಂತರವಾಗಿ ನೀರು ನಿಃಶಕ್ತಿಯಿಂದ ಹೋಗುವದಲ್ಲದೆ ಒಂದೇ ಕೊರಕಲು ಬಿದ್ದು ಒಡ್ಡನ್ನು ಒಡೆದು ಕೆಡಿಸದ ಹಾಗೆ ಯುಕ್ತಿಯಿಂದ ಒಡ್ಡು ಹಾಕಿಸಿ ಸಮತಳ ಮಾಡಿ ತಿದ್ದಿಕೊಂಬುವದನ್ನು ಕೃಷಿಕರಾದ ಬುದ್ಧಿಶಾಲಿಗಳಿಗೆ ಯುಕ್ತವಾದದ್ದು

ಈ ಪ್ರಕಾರ ತಿದ್ದುವಿಕೆಯಿಂದ ಸಿದ್ಧ ಮಾಡಿದ ಭೂಮಿಯಾಗಿ ಚಲೋ ಉದಕವು ಹೊರಡುವ ಹಾಗಿದ್ದರೆ ಅದನ್ನು ಜಲಶಿಲ್ಪಿಯ ಪ್ರಮಾಣದಿಂದ ಪರೀಕ್ಷಿಸಿ ಯಾವ ಸ್ಥಲದಲ್ಲಿ ಸಮೀಪದಲ್ಲಿ ಅತ್ಯಾಯಾಸವಿಲ್ಲದೆ ನೀರು ಬೀಳುವ ಹಾಗೆ ಇದೆಯೋ ಅಂಥ ಸ್ಥಳವನ್ನು ಪರೀಕ್ಷಿಸಿ ಭಾವಿಯನ್ನು ಅಗಿಸಬೇಕು.

ತೋಟದ ಶಬ್ದವು ಫಲಪ್ರದವಾದದ್ದು ಮುಖ್ಯವಾಗಿ ಪ್ರತ್ಯಕ್ಷ ಫಲವನ್ನು ಕಾಣಬೇಕೆಂಬ ರಾಜಬುದ್ಧಿಯುಳ್ಳ ಕೃಷಿಕರುಗಳು ತೋಟವನ್ನು ಮಾಡಿದ್ದಾ

ದರೆ ಅವರಿಗೆ ಈ ತೋಟವು ಸಪ್ತ ಸಂತಾನದ ದಿವ್ಯಫಲವನ್ನು ತತ್ಕಾಲಕ್ಕೆ ವರುಷ ಆರುತಿಂಗಳು ಮೂರು ತಿಂಗಳು ವರ್ಷ ಎರಡು ವರ್ಷ ನಾಲ್ಕು ಐದು ಹತ್ತು ಎಂಟು ವರ್ಷಗಳೊಳಗೆ ಫಲವನ್ನು ಕೊಡುತ್ತಿಹುದಾದ ಕಾರಣ ಸಕಲ ಭೂಮಿಯ ವ್ಯವಸಾಯವನ್ನು ಮಾಡುವವರಗಿಂತಲೂ ತೋಟದ ವ್ಯವಸಾಯವನ್ನು ಮಾಡುವವನೇ ಮುಖ್ಯಸ್ಥನಾಗುವನು. ಆದರೆ ತೋಟವನ್ನು ಮಾಡುವವರು ಕಿರಿದೋಟವನ್ನು ಮಾಡಲಾಗದು. ಇದರ ವಿಷಯದಲ್ಲಿ ಕೆಲವು ನೀತಿಯ ಗ್ರಂಥಗಳುಂಟು ಅವುಗಳಲ್ಲಿ ಒಂದನ್ನು ಇಲ್ಲಿ ಹೇಳುತ್ತೇನೆ

"ಕಿರಿದೋಟಂ ಕಡೆವಳ್ಳಿ ಬೀದಿಮನೆ ಮುಂಗೈಯ್ಯಾ
ರ್ಭಟಂ ಸಾಲದ ಧೊರೆ ಗಾರ್ಯಂ ಘೃತವಿಲ್ಲದೂ
ಟದ ಸುಖಂ ಮುಗ್ಧಾಂಗನಾಸಂಗಮಂ ಬರಿಗೈಯ್ಯಂ
ಸುರಿದಂದವ್ವೈ ಹರಹರಾ ಶ್ರೀಚನ್ನಸೋಮೇಶ್ವರಾ ॥

ಎಂದು ಪಾಲ್ಕುರಿಕೆಯ ಸೋಮಾರಾಧ್ಯರೆಂಬ ಮಹಾ ಪ್ರಸಿದ್ಧ ಶಿವಕವಿಗಳು ಹೇಳಿದ್ದಾರೆ. ಅದು ಕಾರಣ ವಿಶಾಲವಾದ ಭೂಮಿಯಲ್ಲಿ ತೋಟವನ್ನು ಮಾಡುವದರಿಂದ ನಾನಾ ಪ್ರಕಾರದ ಫಲಪುಷ್ಪಗಳನ್ನು ಸುರಸವಾದ ಪದಾರ್ಥಗಳನ್ನು ಸರ್ವಕಾಲದಲ್ಲಿ ಸಮೃದ್ಧಿಯಾಗಿ ಬೆಳೆಯುತ್ತ ತನಗೂ ಪರರಿಗೂ ಅನಂತ ರೀತಿಯಿಂದ ಸೌಖ್ಯವನ್ನೂ ದ್ರವ್ಯವನ್ನೂ ಪುಣ್ಯಸಂಗ್ರಹವನ್ನೂ ಕೀರ್ತಿಯನ್ನೂ ಕೊಡುವದಾಗಿ ಪಥಿಕರ ವಿಶ್ರಾಂತಿಯನ್ನು ತಣಿಸುವದಾಗಿ ಸಮಸ್ತ ಜನರ ನೇತ್ರಕ್ಕೂ ಮನಸ್ಸಿಗೂ ಆನಂದವನ್ನು ಹುಟ್ಟಿಸುತ್ತಿರುವದು.

ತೋಟವನ್ನು ಮಾಡುವ ಅಪೇಕ್ಷೆಯುಳ್ಳವರು ಮೊದಲು ತಮ್ಮ ಸ್ವಾಧೀನದಲ್ಲಿದ್ದ ಹೊಲದಲ್ಲಿ ಅಥವಾ ಅದರ ಬಳಿಯಲ್ಲಿ ಸರ್ವದಾ ನೀರು ಇರುವಂಥ ಹಳ್ಳದ ಆಸ್ಪದವಿದ್ದರೆ ಆ ಹಳ್ಳದ ಸಮೀಪದಲ್ಲಿದ್ದ ತಮ್ಮ ಭೂಮಿಯಲ್ಲಿ ಬಾವಿಯನ್ನು ತೆಗಿಸಬೇಕು. ಅಥವಾ ಹಳ್ಳದ ಆಸ್ಪದವಿಲ್ಲದಿದ್ದರೆ ಆ ಭೂಮಿಯ ನಾಲ್ಕೂ ದಿಕ್ಕನ್ನು ಚನ್ನಾಗಿ ಪರೀಕ್ಷಿಸಿ ನೋಡಿ ಆ ಭೂಮಿಯು ತಲೆಯ ಮೇಲೆ ನೂರಡಿಯಾಗಲಿ ಅಥವಾ ಎತ್ತರ ಭೂಮಿಯಾಗಲಿ ಇದ್ದರೆ ಅಂಥ ಹೊಲದಲ್ಲಿ ಮೇಲಗಡೆಯನ್ನು ಬಿಟ್ಟು ಕೆಳಭಾಗದಲ್ಲಿ ಅಂದರೆ ಇಳಿಜಾರಿಯ ಕಡೆಗೆ ತಗ್ಗು ಭೂಮಿಯಲ್ಲಿ ಜಲಶಿಲ್ಪಿಯ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ನೀರಿನ ಸೂಚನೆಯ ಗಿಡಗಳನ್ನು ಅಥವಾ ಹುತ್ತುಗಳನ್ನು ಇಲ್ಲವೆ ಹುಲ್ಲು ಕರಿಕೆಯನ್ನು ಮತ್ತು ಕೊಳೆತ ಎಲೆಗಳನ್ನು ಮದಿಯ ಹುಲ್ಲು ಆಪು ಬಹು ದಿವಸದ ದಾಗಡಿಯ ಬಳ್ಳಿಗಳನ್ನು ಅಥವಾ ತುಂಗಿ ಮೊದಲಾದ ಅನೇಕ ಸೂಚನೆಗಳಲ್ಲಿ ಒಂದಾ

ದರೂ ಪೂರ್ಣ ಜಲದ ಸೂಚನೆಯಾದ ಮಾಲಿಕೆಯ ಗಿಡಗಳು ಯಾವ ಸ್ಥಳದಲ್ಲಿ ಕಾಣುತ್ತವೆಯೋ ಅಂಥ ಸ್ಥಳದಲ್ಲಿ ಬಾವಿಯನ್ನು ತೆಗಿಸಬೇಕು. ಆ ಬಾವಿಯ ಮಣ್ಣನ್ನು ಹೊಲದ ಮೇರೆಯಲ್ಲಿ ತಗ್ಗು ಭೂಮಿಯಿಂದ ಹೊಲದ ಎತ್ತರ ಭೂಮಿಯವರೆಗೂ ಮೊಟ್ಟೆಯ ನೀರಿನ ಹರಿಯು ಚನ್ನಾಗಿ ಆಗುವ ಹಾಗೆ ಕಾವಲಿಯ ಒಡ್ಡನ್ನು ಹಾಕಿಸಬೇಕು. ಹೇಗೆಂದರೆ ಕೆಳಗೆ ಬರೆದ ಚಿತ್ರವನ್ನು ನೋಡಬೇಕು



ಬಾರಿ ಮತ್ತು ಕಾವಲಿ ಕಟ್ಟುವ ಪದ್ಧತಿ

ಹೊಲದಲ್ಲಿ ಇಳಿಜಾರಿಯ ಭೂಮಿಯ ಕಡೆಗೆ ಭಾವಿಯ ಕಡಿಸಿ ತೆವರು ಭೂಮಿಗೆ ನೀರು ಏರುವ ಹಾಗೆ ಬಾರಿಯನ್ನೂ ಕಾವಲಿಯನ್ನೂ ಮಾಡಿಕೊಳ್ಳುವ ಯುಕ್ತಿಯನ್ನು ಇಲ್ಲಿ ಬರೆದಿರುವ ಚಿತ್ರದ ಮೇಲಿಂದ ತಿಳಿಯತಕ್ಕದ್ದು. ಹೀಗೆ ತಗ್ಗು ಭೂಮಿಯಲ್ಲಿ ಭಾವಿಯನ್ನು ತಗಿಸುವದು ಬಹಳ ಸುಲಭವು ಇದರ ಕಾವಲಿಯನ್ನು ಕಟ್ಟುವದಕ್ಕೂ ಹಾಗೂ ಒಂದು ವೈ ಕಡೆಗೆ ಒಡ್ಡು ಹಾಕಿಸುವಲ್ಲಿಯೂ ಬಹಳ ಪ್ರಯಾಸಬೇಕಾಗುವದಿಲ್ಲ. ಭಾವಿಯ ಸಮೀಪದಲ್ಲಿ ಮಾತ್ರ ಬಾರಿಯ ಬಳಿಯಲ್ಲಿ ಆ ಹೊಲದ ಎತ್ತರ ಭೂಮಿಯ ಸಮತೂಕಕ್ಕೆ ಎಷ್ಟು ಎತ್ತರ ಬೇಕಾಗುವದೋ ಅಷ್ಟು ಎತ್ತರ ಒಡ್ಡು ಹಾಕಿಸುವಲ್ಲಿ ಮೊಟ್ಟೆಯ ಬಳಿಯಲ್ಲಿ ಸ್ವಲ್ಪ ಎತ್ತರವಾಗುವದು. ಬರಬರುತ್ತ ಎತ್ತರ ಭೂಮಿಯ ಕಡೆಗೆ ತೀರ ಹೌರಗಾಗುತ್ತವೆ. ಕಡೆಗೆ ಒಂದು ಗೇಣು ಎತ್ತರ ಒಡ್ಡು ಬೇಕಾಗುವದು. ಹೀಗೆ ಮಾಡುವದು ಬಹಳ ಸುಲಭವಾದ ಯುಕ್ತಿಯು.

ಹೀಗಿರಲಾಗಿ ಜನರು ದಡ್ಡತನದಿಂದ ಹೊಲದ ಕೆಳಗಡೆಯ ಭಾಗದಲ್ಲಿ ಭಾವಿ
ಯನ್ನು ತೆಗಿಸಿದರೆ ಎತ್ತರ ಭೂಮಿಗೆ ನೀರು ಏರುವದಿಲ್ಲವೆಂದು ಯೋಚಿಸಿ
ಎತ್ತರ ಭೂಮಿಯಲ್ಲಿ ಭಾವಿಯನ್ನು ತೆಗಿಸುತ್ತಾರೆ. ಅಂಥ ಸ್ಥಳದಲ್ಲಿ ಭಾವಿ
ಯನ್ನು ತಗಿಸುವದು ಎಷ್ಟೋ ದುರ್ಲಭವಾಗುವದು ಅದು ಹೇಗೆಂದರೆ— ಆ
ಸ್ಥಲದೊಳಗೆ ಸಮೀಪದಲ್ಲಿ ನೀರು ಬೀಳುವದಿಲ್ಲ ಅದಲ್ಲದೆ ಅಂಥ ಸ್ಥಲದಲ್ಲಿ
ಕಲ್ಲಾದರೂ ಹತ್ತುವದು ಅನೇಕ ಪ್ರಯಾಸದಿಂದ ಕಲ್ಲನ್ನು ಒಡಿಸಿ ಬಹಳ
ತಗ್ಗಾಗುವ ಹಾಗೆ ಮಾಡಿ ಭಾವಿಯನ್ನು ಕಡಿಸುವದಕ್ಕೆ ಬಹಳ ದ್ರವ್ಯವೂ
ಖರ್ಚಾಗುವದು ಆದಾಗ್ಯೂ ಸುಲಭದಿಂದ ನೀರು ಬೀಳುವದು ದುರ್ಲಭವೇ
ಸರಿ ಅಥವಾ ನೀರು ಬಿದ್ದರೂ ಬೇಸಿಗೆಯಲ್ಲಿ ನೀರು ಸಾಲದೇ ಹೋಗುವದು.
ಎಷ್ಟೋ ಜನರು ಕಲ್ಲು ಬೀಳುವ ವರೆಗೂ ಭೂಮಿಯನ್ನು ಕಡಿಸಿ ಕಲ್ಲು
ಬಿದ್ದಾಕ್ಷಣವೇ ಆದನ್ನು ಬಿಟ್ಟು ಹಾಳು ಭಾವಿಯಾಗಿ ಮಾಡಿಕೊಂಡು ಖರ್ಚು
ಮಾಡಿದ ದ್ರವ್ಯವನ್ನು ವ್ಯರ್ಥವಾಗಿ ಕಳೆದುಕೊಳ್ಳುತ್ತಾರೆ ಅಂಥ ಭಾವಿ
ಯನ್ನು ಬಹು ಶ್ರಮದಿಂದ ಅಗಿಸುತ್ತಿರಲಾಗಿ ನೀರು ಬೀಳುವವು. ಆದರೆ
ಬೇಸಿಗೆಯಲ್ಲಿ ನೀರು ಸಾಲವು ಅಷ್ಟು ತಗ್ಗಾಗಿರುವ ಭಾವಿಗೆ ಕಲ್ಲು ಕಟ್ಟಿ
ಸಬೇಕಾದರ ಎಷ್ಟೋ ದ್ರವ್ಯವು ಖರ್ಚು ಆಗಿ ಬಹಳ ಶ್ರಮಪಟ್ಟು ಭಾವಿ
ಯನ್ನು ತಯಾರು ಮಾಡುವಷ್ಟಕ್ಕ ಬೇಸರಗೊಳ್ಳುವರು. ಮುಂದೆ ತೋಟವು
ಸಂಭ್ರಮಕ್ಕೆ ಬರುವ ಹಾಗೆ ಮಾಡಬೇಕಾದರೆ ಆಯಾಸ ತೋರಿ ಮನೋ
ಲ್ಲಾಸವೆಲ್ಲ ಕಡಿಮೆಯಾಗುವದು ಇಂಥ ತೊಂದರೆಗಳು ಪ್ರಾರಂಭ ಕಾಲಕ್ಕೆ
ಪ್ರಾಪ್ತಿಸಿದ್ದರಿಂದ "ಮೊದಲಲ್ಲಿ ಕಾಲು ಜಾರಿ ಕೈಕಾಲು ನೊಂದವನು
ಮರದ ತುದಿಗೇರುವ ಪರಿ ಎಂತು" ಎಂಬ ನಾಣ್ಣುಡಿಯಂತೆ ಈ ಬೇಸರ
ದಿಂದ ಮುಂದೆ ತೋಟವನ್ನು ಶೃಂಗಾರಕ್ಕೆ ತಂದು ಸುಖವನ್ನು ಹೊಂದಬೇ
ಕೆಂಬ ಇಚ್ಛೆಯು ಹುಟ್ಟದೆ ಹೋಗುತ್ತದೆ

ಹೊಲದ ತಳಭಾಗದಲ್ಲಿಯೇ ಭಾವಿಯನ್ನು ತಗಿಸಿ ಮೇಲಣ ತೆವರಿಗೆ
ನೀರು ಮುಟ್ಟುವ ಹಾಗೆ ಕಾವಲಿಯ ಒಡ್ಡನ್ನು ಎತ್ತರವಾಗಿ ಹಾಕಿಸುವ
ದೊಂದೇ ಸ್ವಲ್ಪ ಮಾತ್ರ ಪ್ರಯಾಸವು ಆದಾದರೂ ಬಹಳ ಸುಲಭದಿಂದಾ
ಗುವದು ಮತ್ತು ನೀರು ಸಮೀಪದಲ್ಲಿ ಬೀಳುವವು, ಭಾವಿಗೆ ಕಲ್ಲು ಕಟ್ಟಿ
ಸುವದಂತೂ ಅತ್ಯಂತ ಸುಲಭವು. ಅದು ಸ್ವಲ್ಪ ದ್ರವ್ಯದ ಖರ್ಚಿನಿಂದಾಗು
ವದು. ಮತ್ತು ಕಾವಲಿಯ ನೀರು ಹೋಗುವದಕ್ಕೆ ಒಡ್ಡು ಹಾಕುವ ವಿವ
ರವನ್ನು ಬಲ್ಲವರಾಗಿದ್ದರೆ ಭಾವಿಯ ಸಮೀಪದಲ್ಲಿ ಎತ್ತರ ಮಾಡಿ ಹೋಗುತ್ತ
ಹೋಗುತ್ತ ತಿಗಟೆಯಿಂದ ತೂಗಿ ಸ್ವಲ್ಪ ಸ್ವಲ್ಪ ಇಳಿಸುತ್ತ ನೀರಿನ ಕಾವ
ಲಿಯನ್ನು ಚನ್ನಾಗಿ ಮಾಡಿ ಬಿಟ್ಟರೆ ಯಾವ ಕಡೆಗೆಯಾದರೂ ನಿಲ್ಲದೇ ನೀರು
ನಡೆಯುವದು.

ಒಂದು ವೇಳೆಗೆ ಅದು ತಿಳಿಯದೆ ಇದ್ದರೆ ಮೇಲಣ ಎತ್ತರ ಭೂಮಿಗೂ ಮೊಟ್ಟೆಯ ಬಾರಿಯ ನೀರು ಬೀಳುವ ಹೌದಿಗೂ ಆಚೆಯ ಕಡೆಗೂ ಈಚೆಯ ಕಡೆಗೂ ಎರಡು ಕಂಭಗಳನ್ನು ನಿಲ್ಲಿಸಿ ಆಚೆಗೊಂದು ಈಚೆಗೊಂದು ನುಲಿಕೆಯನ್ನಾಗಲಿ ಹುರಿಯನ್ನಾಗಲಿ ಅಥವಾ ದಾರವನ್ನಾಗಲಿ ಮೊಟ್ಟೆಯ ಕಡೆಗೆ ಎತ್ತರ ಮಾಡಿ ಆ ನೀರು ತೇಲಿದ ಒಡ್ಡಿನ ಕಾವಲಿಯು ಇಳಿತರವಾಗುವಂತೆ ಅದರ ಬಳಿಯಲ್ಲಿ ಒಂದೊಂದು ಗೂಟವನ್ನು ಹೊಡೆದು ಅದಕ್ಕೆ ದಾರಗಳನ್ನು ಕಟ್ಟಿ ಆ ನೂಲಿನ ಬರಾಬರಿಯಾಗುವ ಹಾಗೆ ಒಡ್ಡು ಹಾಕಿಸಿದರೆ ಮೊದಲು ಮೊಟ್ಟೆಯ ಬಳಿಯಲ್ಲಿ ಒಂದು ಆಳು ದೀಡ ಆಳುದ್ದ ಒಡ್ಡು ಇದ್ದರೆ ಬರುತ್ತ ಬರುತ್ತ ಮೊಳಕಾಲುದ್ದ ಮೊಳದುದ್ದ ಒಡ್ಡು ಆಗುವದು ಅದೇ ತಲೆಗಾವಲಿಯಿಂದ ಕೆಳಗಡೆಗೆ ನೀರು ಆತಂಕವಿಲ್ಲದೆ ಸಾಗುವದು.

ಇದಲ್ಲದೆ ಮೇಲು ಗಡೆಗೆ ಎತ್ತರ ಭೂಮಿಯಲ್ಲಿ ಬಾವಿಯನ್ನು ತೆಗಿಸಿದರೆ ಒಂದಾಳುದ್ದಕ್ಕೆ ಇರುವ ನೀರು ನಾಲ್ಕಾಳುದ್ದಕ್ಕೆ ಬೀಳುವವು ಅದರಿಂದ ಕೆಳಗಡೆಗೆ ಬಾವಿಯನ್ನು ಕಡಿಸುವದು ಎಷ್ಟು ಸುಲಭವಾದದ್ದನ್ನು ನೀವೇ ನೋಡಿರಿ. ಮತ್ತು ಮೇಲಿನ ತೆವರಿನ ಮಣ್ಣು ಕೆಳಗಡೆಯ ಕಾವಲಿಯ ಒಡ್ಡಿಗೆ ತಟ್ಟನಿಂತು ವಂಡು ಆಗುತ್ತದೆ.

ಜಲಶಿಲ್ಪಿಯ ಸೂಚನೆಯಲ್ಲಿ ಸ್ವಲ್ಪ ನೀರಿನ ಪರೀಕ್ಷೆಯನ್ನು ಇಲ್ಲಿ ಕಾಣಿಸುವೆನು ಅದಕ್ಕೆ ಬಹಳ ವಿಸ್ತಾರವಾದ ಒಂದು ಪುಸ್ತಕ ಉಂಟು. ಅದನ್ನು ಚನ್ನಾಗಿ ತಿಳಿಯಬೇಕೆಂಬುವವರು ತರಿಸಿಕೊಂಡು ನೋಡಬೇಕು. ಅದನ್ನೆಲ್ಲ ಇಲ್ಲಿ ಬರೆಯಬೇಕಾದರ ಗ್ರಂಥಬಾಹುಲ್ಯವಾಗುವದಾದ ಕಾರಣ ಇಲ್ಲಿ ಸಂಕ್ಷೇಪವಾಗಿ ಬರೆಯುತ್ತೇನೆ ಹೇಗಂದರ ತೋಟವನ್ನು ಮಾಡತಕ್ಕ ಭೂಮಿಯು ಚನ್ನಾಗಿ ಇದ್ದು ಅದರ ತಲೆಯ ಮೇಲೆ ಎತ್ತರ ಮೊರಡಿ ಅಥವಾ ಕೆರೆ ಇಲ್ಲವೆ ಅದರ ಆಸ್ಪದದಲ್ಲಿ ಹಳ್ಳವಿದ್ದು ತಾನು ಮಾಡತಕ್ಕಂಥ ಹೊಲವು ಹಳ್ಳದ ದಂಡೆಯಾಗಿ ಅಥವಾ ಇಳಿಜಾರಿಯ ಭೂಮಿಯಾಗಿ ಅದರ ಸಮೀಪದಲ್ಲಾದರೂ ನೀರು ಕಾಣಿಸಿಕೊಂಡಿದ್ದರೂ ಅಥವಾ ಕಾಣಿಸಿಕೊಳ್ಳದೇ ಇದ್ದರೂ ಅಂಥ ಭೂಮಿಯಲ್ಲಿ ಸಬಳವಾದ ಬನ್ನಿಯ ಮರದ ಬೊಡ್ಡಿಯು ಹಾಗು ಬಹಳ ದಿವಸದ ದಾಗಡಿಯಬೇರು ಬಳ್ಳಿಕರಿಕೆಯಬೇರು ಮೇದಿಯ ಹುಲ್ಲು ಹಸುರಾಗಿದ್ದ ಎಕ್ಕೆಯ ಗಿಡದ ಬೇರು ಆಪು ದೊಡ್ಡತುಂಗಿಯ ಹುಲ್ಲು ಮುಂತಾದ ಹುಲ್ಲುಗಳು ಬಳ್ಳಿಗಳು ಗಿಡಗಳು ಹಸುರಾಗಿದ್ದದ್ದನ್ನು ನೋಡಿ ಮೊದಲು ಸ್ವಲ್ಪ ಮಾತ್ರವಾಗಿ ಸೇದಿಯ ಭಾವಿಯ ಹಾಗೆ ಅಗಿದು ನೋಡುವದು. ಅಲ್ಲಿ ವಿಶೇಷವಾಗಿ ನೀರು ಕಾಣಬಂದಲ್ಲಿ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಬಾವಿಗಳನ್ನು ಅಗಲವಾಗಿ ತೆಗಿಸುವದು. ಆ ಬಾವಿಯನ್ನು

ತೆಗಿಸುವಲ್ಲಿ ದರಿಯು ಗಟ್ಟಿಯಾಗಿ ಇದ್ದದ್ದಾದರೆ ಬಹಳ ಉತ್ತಮವೇ ಸರಿ. ಇಲ್ಲವಾದರೆ ಆ ಸ್ಥಳದಲ್ಲಿ ಮೃದುವಾದ ಮಣ್ಣು ಉಸುಕು ಅಥವಾ ಕಟಕು ಇಲ್ಲವೆ ಎರಿಯ ಮಣ್ಣು ಮೊದಲಾದ ಮೃದುವಾದ ಮಣ್ಣು ಹೊರಟು ದರಿಯು ನಿಲ್ಲದ ಹಾಗಾಗಿ ಬಾವಿಯನ್ನು ಕಟ್ಟಲಿಕ್ಕೆ ಬಾರದ ಹಾಗೆ ಇದ್ದರೆ ಅಂಥ ಬಾವಿಗಳನ್ನು ಕಟ್ಟುವಂಥ ಯುಕ್ತಿಗಳನ್ನು ಈ ಪ್ರಕರಣದಲ್ಲಿ ಮುಂದೆ ಸವಿಸ್ತಾರವಾಗಿ ಬರೆಯುವೆನು

ನೀರು ಇಲ್ಲದ ಭೂಮಿಯಲ್ಲಿ ಜಿರಾಯತ ಸಂಬಂಧವಾಗಿ ಬಯಲು ಹೊಲಗಳಲ್ಲಿ ಸಕಲ ಧಾನ್ಯಾದಿಗಳನ್ನು ಬಿತ್ತಿ ಬೆಳೆ ಮಾಡಿಕೊಳ್ಳುವ ಸಕಲ ಯುಕ್ತಿಗಳನ್ನು ಬಹು ಪ್ರಕಾರ ವಿಸ್ತಾರವಾಗಿ ಪ್ರಥಮ ಭಾಗದ ಎಂಟು ಪ್ರಕರಣಗಳ ವರೆಗೂ ಹೇಳಿರುವೆನು ಈ ಒಂಬತ್ತನೆಯ ಪ್ರಕರಣದಿಂದ ಬಾಗಾಯತ ಸಂಬಂಧವಾಗಿ ತೋಟಗಳನ್ನು ಮಾಡಿ ಸಕಲ ಪದಾರ್ಥಗಳನ್ನು ಬೆಳೆ ಮಾಡಿಕೊಳ್ಳುವದಕ್ಕೋಸ್ಕರ ಅತ್ಯಾಶ್ಚರ್ಯವಾದ ಸುಲಭ ಯುಕ್ತಿಗಳನ್ನು ವಿಸ್ತಾರವಾಗಿ ಮುಂದೆ ಹೇಳುವೆನು

ನೀರು ಇರುವ ಹಳ್ಳದ ದಂಡೆಗೆ ತಮ್ಮ ಸ್ವಂತದ ಹೊಲಗಳಿದ್ದರೆ ಅಂಥ ಜನರು ತಮಗೆ ಬಹು ಲಾಭವೆಂದು ತಿಳಿಯಬೇಕು “ಹಳ್ಳದ ಹೊಲನಾಗಿ ಬೆಪ್ಪನ್ನೆರಡೆತ್ತಾಗಿ ಮೆಳ್ಳಿ ಎಡಗಣ್ಣ ಸೊಸೆಯಾಗಿ ಆ ಮನೆಗೆ ಬಳ್ಳದಲಿ ಹೊನ್ನ ಸರ್ವಜ್ಞ” ಎಂದು ಸರ್ವಜ್ಞ ಮೂರ್ತಿಯ ವಾಕ್ಯವಿರುವದರಿಂದ ಹಳ್ಳದ ಹೊಲಗಳಿದ್ದವರು ತೋಟವನ್ನು ಮಾಡಿ ಧನಸಂಪನ್ನರಾಗಬೇಕು. ಹಳ್ಳದ ಬಳಿಯಲ್ಲಿ ದರಿಯು ಗಟ್ಟಿಯಾಗಿ ಇದ್ದದ್ದಾದರೆ ಮೊಟ್ಟೆಯ ಬಾರಿಯನ್ನು ಬಂದೋಬಸ್ತು ಕಟ್ಟಿಸಿ ಆ ಭೂಮಿಯ ಕರಿಕೆ ಕಣಿಗೆಯ ನಟ್ಟನ್ನು ಚನ್ನಾಗಿ ತೆಗೆದು ಹಸನ ಮಾಡಿ ಹಿಂದೆ ಹೇಳಿದ ಹಾಗೆ ಭೂಮಿಯನ್ನು ತಿದ್ದಿಕೊಂಡು ಸಮತಳ ಮಾಡಬೇಕು ಆ ಹೊಲವು ಹಳ್ಳದ ದಂಡೆಯನ್ನು ಹಿಡಿದು ಸಮನಿದ್ದರಂತೂ ಉತ್ತಮವೇ ಸರಿ ಅಥವಾ ಹಳ್ಳ ಮೇಲಾಗಿ ಹೊಲವು ಕೆಳಗಾಗಿದ್ದರಂತು ಅತ್ಯುತ್ತಮವೇ ಸರಿ ಅಥವಾ ಹಳ್ಳ ಕೆಳಗಾಗಿ ಹೊಲವು ಮೇಲಾಗಿದ್ದು ತೆವರಾಗಿದ್ದರೆ ಆ ಹೊಲದ ಬಗಲಲ್ಲಾದರೂ ಅಥವಾ ಹೊಲದ ಮಧ್ಯದಲ್ಲಾದರೂ ತಗ್ಗು ಭೂಮಿಯ ಕಡೆಗೆ ಬಾವಿಯನ್ನು ಕಡಿಸಿ ಮೊಟ್ಟೆಯ ನೀರು ಹರಿಯುವ ಪ್ರಮಾಣಕ್ಕೆ ಹಿಂದೆ ಹೇಳಿದ ಹಾಗೆ ಎತ್ತರವಾಗಿ ಒಡ್ಡನ್ನು ಹಾಕಿಸಿ ನೀರು ನಡಿಸುವದು ಕಡೆಯಲ್ಲಿ ಎತ್ತರವಾಗಿ ಕಾವಲಿಯನ್ನು ಮಾಡಿ ನೀರು ಕಾವಲಿಯ ಮುಖವು ಎತ್ತರ ಭೂಮಿಗಿಂತಲೂ ಎರಡು ಬೆರಳು ಅಥವಾ ನಾಲ್ಕು ಬೆರಳು ಎತ್ತರವಾಗಿದ್ದರೆ ಸಾಕು. ಅಂಥ ಕಾವಲಿಯಿಂದ ಆ ಹೊಲದಲ್ಲೆಲ್ಲ ಯಾವ ಕಡೆಗಾದರೂ ನೀರು ಏರುವದು.

ಆ ಮೇಲು ಕಾವಲಿಯಿಂದ ಆ ಹೊಲವೆಲ್ಲ ಯಾವಕಡೆಗಾದರೂ ಕೆಳಭಾಗಕ್ಕೆ ಎಷ್ಟು ದೂರವಾದರೂ ಚನ್ನಾಗಿ ನೀರು ನಡೆಯುವದು ಇದಲ್ಲದೆ ಹೊಲದ ಕೆಳಗಡೆಯಲ್ಲಿ ಒಡ್ಡನ್ನು ಹಾಕಿಸಿದರೆ ಕಾವಲಿಗಾದರೂ ಉಪಯೋಗವಾಗುವದು. ಮತ್ತು ಮೇಲುಗಡೆಯಿಂದ ಬಿದ್ದು ಹೋಗುವ ನೀರು ಒಡ್ಡಿಗೆ ತಟ್ಟಿ ನಿಂತು ವಂಡು ಬಿಡುವದರಿಂದ ಹೊಲವು ಸಮತಳಕ್ಕೆ ಬರುವದು ಈ ಎರಡು ಪ್ರಯೋಜನಕ್ಕೆ ಆಸ್ಪದವಾಗುವ ಹಾಗೆ ಒಡ್ಡನ್ನು ಹಾಕಿಸುವದು ಅದಲ್ಲದೆ ಕೆಳಗಿನಿಂದ ಮೇಲು ಕಾವಲಿಯನ್ನು ಹಾಕುವದು ದಡ್ಡತನವೆಂದು ಕೆಲವು ಮೂರ್ಖರು ನುಡಿಯುವರು ಯಾತಕ್ಕಂದರೆ ಆ ಕಾವಲಿಯ ಒಡ್ಡು ಹೊಸ ಮಣ್ಣಾದುದರಿಂದ ನೀರು ನುಂಗುವದು ಎಂದು ಊಹಿಸುತ್ತಾರೆ ಅವರ ಮಾತಾದರೂ ಸಹಜವೇ ಸರಿ ಆದರೆ ಆ ಒಡ್ಡು ನೀರು ನುಂಗಿ ನಾಲ್ಕು ಮೂರು ತಿಂಗಳಲ್ಲಿ ಮಣ್ಣು ಕೂತು ಗಟ್ಟಿಯಾಗುವದು ಮತ್ತು ಅದು ಹಸಿಯಾದರೆ ಸರ್ವದಾ ತಂಪು ಹಿಡಿದಿರುವದು. ಅದು ಕಾರಣ ಆ ಕಾವಲಿ ಒಡ್ಡಿನ ತಳದಲ್ಲಿ ಕೆಲವು ಗಿಡಗಳನ್ನು ಹಾಕಬೇಕು ಹೇಗೆಂದರೆ ಮುಂಭಾಗದಲ್ಲಿ ನಿಂಬಿಯ ಗಿಡಗಳನ್ನು ಮತ್ತು ಕಾವಲಿಯ ಹಿಂಭಾಗದಲ್ಲಿ ತೆಂಗಿನ ಗಿಡಗಳನ್ನು ಹಚ್ಚಿ ಬಿಟ್ಟರೆ ಆ ಗಿಡಗಳಿಗೆ ನೀರು ಕಟ್ಟುವ ಪ್ರಯೋಜನವಿಲ್ಲದೆ ಕಾವಲಿಯ ತಂಪಿಗೆ ತಮ್ಮಿಂದ ತಾವೇ ಬೆಳೆಯುವವು.

ಹಳ್ಳವಿಲ್ಲದಿದ್ದರೂ ಕೂಡ ತಗ್ಗು ಭೂಮಿಯಾಗಿ ಇಳಿಜಾರಿಯಿಂದಿದ್ದು ಕೆಳಭಾಗದಲ್ಲಿ ನೀರು ಬೀಳುವದಕ್ಕೆ ಸಂಶಯವಿಲ್ಲವೆಂಬುವಂತೆ ತೋರಿದರೆ ಅಂಥ ಸ್ಥಲದಲ್ಲಿ ಬಾವಿಯನ್ನು ಅಗಿಸುವದು. ಆ ಬಾವಿಯನ್ನು ಅಗಿಸುವಾಗ್ಗೆ ಭೂಮಿಯ ಪರೀಕ್ಷೆಯ ಮೇಲೆ ಸವಿನೀರು ಸೌಳುನೀರು ಬೀಳುವದನ್ನು ತಿಳಿಯಬೇಕು. ಹೇಗಂದರೆ ಸೌಳು ಎರಿಯಲ್ಲಿ ಮತ್ತು ಬಲವತ್ತಾದ ಎರಿಯಲ್ಲಿ ಸೌಳು ನೀರು ಬೀಳುವವು. ಮತ್ತು ಎರಿಯ ಭೂಮಿಯಾದರೂ ಅಲ್ಲಿ ಸವಿ ನೀರಿನ ಹಳ್ಳವಿದ್ದರೆ ಆ ಹಳ್ಳದ ಆಸ್ಪದದಲ್ಲಿ ಬಾವಿಯ ತೆಗಿಸಿದರೆ ಸವಿನೀರು ಬೀಳುವವು ಮತ್ತು ಸಣ್ಣ ಎರಿಯಲ್ಲಿ ಗರಸು ಹೊರಟರೆ ಸವಿ ನೀರು ಬೀಳುವವು. ಕೆಂಪು ಗರಸು ಇದ್ದರೆ ಸವಿನೀರು, ಕಾವಿಯ ಕಲ್ಲು ಕಣಿ ಹೊರಟರೆ ಸವಿನೀರು, ಕೆಂಪು ಅಥವಾ ಕಪ್ಪು ಮಾಂಜರಿ ಭೂಮಿಯಲ್ಲಿ ಸವಿನೀರು ಬೀಳುವವು. ಬಿಳಿಯ ಕಟಕ ಹೊರಟರೆ ಸವಿನೀರು ಬೀಳುವವು. ಬಿರಸು ಭೂಮಿಯಲ್ಲಿ ಹಾಗು ಸೌಳು ನೀರಿನ ಹಳ್ಳಗಳು ಇರುವ ಎರಿಯ ಭೂಮಿಯಲ್ಲಿ ಸೌಳು ನೀರು ಹೊರಡುವವು. ಹಳದೀ ಬಣ್ಣದ ಮಣ್ಣು ಹೊರಟರೆ ಉಪ್ಪು ಸೌಳುನೀರು ಬೀಳುವವು. ಹಾಳು ಭೂವಿಯಲ್ಲಿ ಬರೇ ಸವಳು ನೀರು ಬೀಳುವವು. ಈ ಪರೀಕ್ಷೆಯನ್ನು ತಿಳಿದು ಬಾವಿಯನ್ನು ತೆಗಿಸಬೇಕು. ಮತ್ತು ಕಟ್ಟು ಸೌಳು ಭೂಮಿಯಲ್ಲಿ ಸೌಳು ನೀರು ಬೀಳು

ವವು. ಅತಿ ಸೌಳು ನೀರಿನಲ್ಲಿ ಯಾವ ಬೆಳೆಯಾದರೂ ಆಗುವದಿಲ್ಲವು ಆದರೆ ಸ್ವಲ್ಪ ಸಾಧಾರಣ ಪೈಕಿ ಸೌಳಾಗಿ ಸವಿ ನೀರಿನಂತೆ ಅಡಿಗೆಯು ಮಾಡುವ ದಕ್ಕೂ ಪಶುಗಳು ಕುಡಿಯುವದಕ್ಕೂ ಉಪಯೋಗಿಸುವಂಥ ನೀರು ಬಿದ್ದರೆ ಅದರಿಂದ ಯಾವ ಬೆಳೆಯಾದರೂ ಆಗುವದು. ಹಾಗು ಸವಿ ನೀರಿಗೆ ಆತಂಕ ವಿಲ್ಲದೆ ಸಮಸ್ತ ಪದಾರ್ಥಗಳು ಬೆಳೆಯುವವು ಸೌಳು ನೀರಿಗೆ ನವಣೆಯು ಹೊರ್ತು ಮತ್ತೇನೂ ಬೆಳೆಯಲಾರದು. ಮತ್ತು ಸೌಳು ಕರಲುಗಳಾದ ಭೂಮಿಯಲ್ಲಿ ಸವಿ ನೀರು ಹೊರಟರೆ ಅಂಥ ಭೂಮಿಗೆ ಗೊಬ್ಬರ ವಿಶೇಷ ವಾದರೆ ಸ್ವಲ್ಪ ಬೆಳೆಯುವದು. ಅಂಥ ಭೂಮಿಯಲ್ಲಿ ಸೌಳು ನೀರಾದರೆ ಏನೇನೂ ಬಳೆಯಲಾರದು.

ಈ ಪ್ರಕಾರವಾದ ಸೂಚನೆಗಳಲ್ಲಿ ಸವಿ ನೀರು ಬೀಳುವ ಭೂಮಿಯನ್ನು ನೋಡಿ ಬಾವಿಯು ಕಡಿಸಬೇಕು. ಮತ್ತು ಆ ಬಾವಿಯನ್ನು ತೆಗಿಸುವಲ್ಲಿ ದರಿಯು ಗಟ್ಟಿಯಾಯಿತ್ತಾದರೆ ಬಹಳ ಉತ್ತಮವೇ ಸರಿ ಇಲ್ಲವೆ ಆ ಸ್ಥಲ ದಲ್ಲಿ ಉಸುಕು ಬಿದ್ದರೆ ಮತ್ತು ಯಾವ ಪ್ರಕಾರದ್ದಾಗಲಿ ಮೃದುವಾದ ಮಣ್ಣು ಕಟಕು ಹೇಡಿಗರಸು ಸೌಳುಗರಸು ಮೊದಲಾದ ಮಣ್ಣು ಹೊರಟು ಎರಿಯು ನಿಲ್ಲದ ಹಾಗಾಗಿ ಬಾವಿಯನ್ನು ಕಟ್ಟಲಿಕ್ಕೆ ಬಾರದ ಹಾಗಾದರೆ ಅಂಥ ಬಾವಿಯನ್ನು ಕಟ್ಟುವಂಥ ಸುಲಭವಾದ ಯುಕ್ತಿಗಳನ್ನು ಹೇಳುತ್ತೇನೆ.

ಉಸುಕು ಭೂಮಿಯಲ್ಲಿ ಬಾವಿಯನ್ನು ಆಗಿಸಬೇಕಾದರೆ ಆ ಭಾವಿಯು ದಂಡೆಯು ಕತ್ತರಿಸಿ ಅಗಿಯುವವರ ಮೇಲೆ ಬಿದ್ದೀತೆಂಬುವ ಭಯದಿಂದ ಮೊದಲೇ ಒಹು ಯುಕ್ತಿಯಿಂದ ಮರಳಿಯು ಆಕಾರನಾಗಿ ಮೇಲೆ ಬಹಳ ಅಗಲವಾಗಿ ಬಳದಿಗೆ ಆಗುವ ಹಾಗ ದಂಡೆಯನ್ನು ಮುರಿದು ಕಡಿಸುತ್ತ ಬೇಸಿಗೆಯು ಕಾಲದಲ್ಲಿಯಾದರೂ ಮಹಾ ನೀರು ನಿಲ್ಲುವ ಹಾಗೆ ಇರುವ ನೀರಿನ ಬಲಾತ್ಕಾರವನ್ನು ನೋಡಿ ನೀರಿನ ಬಳಿಯಲ್ಲಿ ಗಟ್ಟಿ ದರಿ ಸಿಕ್ಕಿದರೆ ಅದರ ಮೇಲೆ ಬಾಲಗಲ್ಲುಗಳನ್ನು ಹಾಕಿ ಸ್ವಲ್ಪ ಸ್ವಲ್ಪ ಚಾಲೂ ಬಿಡುತ್ತ ಗಲ್ಲು ಕಟ್ಟಿಸುವದು. ಅಥವಾ ತಳ ದರಿ ಗಟ್ಟಿದೊರೆಯದೆ ಇದ್ದರೆ ಜಾಲಿಯು ಮರಗಳನ್ನಾಗಲಿ ಹುಣಸೆಯು ಮರಗಳನ್ನಾಗಲಿ ಬಸರಿಯು ಮರಗಳನ್ನಾಗಲಿ ಕಡಿದು ತಂದು ಅದರಲ್ಲಿ ಜಾಲಿಯು ಕಟ್ಟಿಗೆಗಳಾದರೆ ತೋಟಿಯನ್ನು ತೆಗೆದು ಹಾಕಬೇಕು. ಅದರಲ್ಲಿ ಚಚ್ಚೌಕು ಒಂದು ಮೊಳದ ಪಿಂಡಾದ ತೊಲೆಗ ಳನ್ನು ಕೆತ್ತಿ ತುದಿಗೆ ಕತ್ತರಿಯಾಗುವ ಹಾಗೆ ಜೋಡಿಸಿ ಚೌಕೋನಿಯಾಗಿ

ತಯಾರು ಮಾಡಿ ಕೀಲು ಜಡಿದು ಬಂದೋಬಸ್ತು ಮಾಡಬೇಕು ಹೇಗಂದರೆ ಕೆಳಗೆ ಬರೆದಿರುವ ಚಿತ್ರವನ್ನು ನೋಡಬೇಕು



ತೊಟ್ಟಿಲ ಸಾಚೆ.

ಈ ಪ್ರಕಾರ ದೊಡ್ಡ ದೊಡ್ಡ ನಾಲ್ಕು ತೊಲೆಗಳಿಂದ ಕಟ್ಟಿಗೆಯ ಸಾಚೆಯನ್ನು ಈ ಚಿತ್ರದ ಮಧ್ಯದಲ್ಲಿ ಕಾಣಿಸುವ ಬಿಳಿಯ ಬಣ್ಣದ ಚಿತ್ರದಂತೆ ಚೌಕೋನಿಯಾಗಿ ತಯಾರು ಮಾಡಿ ಉಸಿಕಿನಲ್ಲಿ ವರತಿಯ ಆಕಾರವಾಗಿ ಬೇಸಿಗೆಯ ಕಾಲದಲ್ಲಿ ಬಹಳ ತಗ್ಗು ಆಗುವ ಹಾಗೆ ತೆಗಿಸುತ್ತ ಹೋದಲ್ಲಿ ನೀರಿನ ಪ್ರವಾಹವು ತೆಗೆಯಗೊಡದ ಹಾಗೆ ಆದರೆ ಅದಕ್ಕೆ ಒಂದೇ ದಿವಸ ಬಹಳ ಮಂದಿಯನ್ನು ಜಮಾಯಿಸಿ ಹತ್ತೆಂಟು ಗೂಡೆ ಹಚ್ಚಿ ಬಹು ಶೀವ್ರವಾಗಿ ನೀರು ಜಮಾಯಿಸಗೊಡದ ಹಾಗೆ ನೀರನ್ನು ಉಸಕನ್ನು ತೆಗಿಸುತ್ತ ಹೋಗಿ ಬಹಳ ತಗ್ಗು ಮಾಡಿ ನಾಲ್ಕು ಮೊಟ್ಟೆಯ ನೀರು ದುರಸ್ತು ಆದಾವು ಎಂಬುವ ಅಜಮಾಸು ಕಾಣಬಂದರೆ ಎರಡು ಮೊಟ್ಟೆಯ ನೀರು ನಿಂತಾವು ಎಂದು ತಿಳಿದು ನಿರ್ಧರಿಸಿ ಮತ್ತು ಎರಡು ಮೊಟ್ಟೆಯ ನೀರಿನ ಅಜಮಾಸು ಕಾಣಿಸಿದರೆ ಒಂದು ಮೊಟ್ಟೆಗೆ ನೀರು ದುರಸ್ತಾಗುವದು. ಈ ಪ್ರಕಾರ ಮಹಾ ನೀರಿನ ಅಜಮಾಸು ನೋಡಿದಾಕ್ಷಣವೇ ಆ ನೀರನ್ನು ಶೀವ್ರವಾಗಿ ತೆಗೆದು ಆ ಭೂಮಿಗೆ ಎಷ್ಟು ಮೊಟ್ಟೆಯ ನೀರು ಬೇಕೋ ಅದಕ್ಕೆ ಇಮ್ಮಡಿ ನೀರು ಆಗುವ ಹಾಗೆ ಬಹು ಶೀವ್ರವಾಗಿ ಉಸಕನ್ನು ನೀರನ್ನು ತೆಗಿಸಿ ಈ ಚೌಕು ತೊಟ್ಟಿಲ ತೊಲೆಗಳನ್ನು ಜೋಡಿಸಿ ಕೀಲು ಜಡಿದು ನೂರಾರು ಆಳುಗಳನ್ನು ಜಮಾಯಿಸಿ ಆ ಸಾಚೆಯನ್ನು ಬಾವಿಯ ತರದ ಉಸಿಕಿನ ಮೇಲೆ ವಾರಿಯಾಗದಂತೆ ಇಡಬೇಕು.

ಈ ಸಾಚಿಯನ್ನು ಬಾವಿಯ ತಳದ ಉಸುಕಿನ ಮೇಲೆ ಇಟ್ಟು ಅದರ ಮೇಲೆ ಬಾಳಗಲ್ಲುಗಳನ್ನು ಹಾಕಿ ಚಾಲೂ ಬಿಡುತ್ತ ಮೂರು ದಿಕ್ಕಿಗೂ ಹೀಗೆಯೇ ಹಿಂಜೋಲಿಯಾಗುವ ಹಾಗೆ ಆ ದಿವಸವೇ ಸುತ್ತಲು ನಾಲ್ಕೂ ಕಡೆಗೂ ಗಜ ಎರಡು ಗಜ ಕಟ್ಟಿ ಬಿಡಬೇಕು ಆ ಮೇಲೆ ಮೊಳಕ್ಕೆ ಒಂದು ತರವನ್ನು ಗೇಣು ಚಾಲೂ ಬಿಡುತ್ತ ಮೂರು ದಿಕ್ಕಿಗೂ ಹೀಗೆ ಹಿಂಜೋಲಿಯಾಗುವ ಹಾಗೆ ಕಟ್ಟಿಸುವದು. ಮೊಟ್ಟೆಯ ಕಡೆಗೆ ಆರು ಮೊಳ ಏಳು ಮೊಳ ಅಗಲವಾಗಿ ತುಟಿಗಚ್ಚು ಹಾಗು ಒರಿಗಚ್ಚಿನಿಂದ ಸ್ವಲ್ಪ ಹಿಂಜೋಲಿಯಾಗಿ ಒಂದೇ ಸಮವಾಗಿ ಕಟ್ಟಿ ಕುದುರೆಗಲ್ಲುಗಳನ್ನು ನೀರಿನ ತೂಕದ ಬರೋಬರೀ ನೋಡಿ ಇಡುವದು. ಇದರಂತೆ ಕಟ್ಟಿದರೆ ಉಸುಕಿನ ಬಾವಿಯು ಎಂದಿಗೂ ಬೀಳುವದಿಲ್ಲ ಇದರ ವಿಷಯಕ್ಕೆ ಉಸುಕಿನಲ್ಲಿ ಮಹಾ ನೀರು ಇರುವದರಿಂದ ಬೇಕಾದಷ್ಟು ಮೊಟ್ಟೆಯನ್ನು ಮಾಡಿಕೊಳ್ಳಬೇಕು. ಒಂದು ವೇಳೆಗೆ ಆದಷ್ಟು ಸಾಕೆಂದು ಮಾಗಿ ಮಳೆಗಾಲದಲ್ಲಿ ನೀರು ಸ್ವಲ್ಪವಿಶೇಷ ಕಾಣಿಸೋಣ ಅಂಥ ಸಮಯದಲ್ಲಿ ಬಾವಿಯನ್ನು ಕಲ್ಲು ಹಾಕಿ ಕಟ್ಟಿ ಮುಂದೆ ಬೇಸಿಗೆಯ ಕಾಲದಲ್ಲಿ ನೀರು ಸಾಲದ ಹಾಗಾಗೋಣ ಒಳಗಿನ ಉಸುಕು ತೆಗಿಸುತ್ತಾರೆ ಆ ಕ್ಷಣಕ್ಕೆ ತಳದ ಸಾಚಿ ಸ್ವಲ್ಪ ವಾರಿಯಾದಾಕ್ಷಣವೇ ಬಾವಿಯ ಕಲ್ಲುಗಳು ಸರಿದು ಬಿದ್ದು ಬಾವಿ ಮುಚ್ಚಿಹೋಗುವದು ಅಥವಾ ಬಾರಿ ಬೀಳುವದು ಅದು ಕಾರಣ ಇಂಥ ಉಸುಕಿನ ಬಾವಿಗಳಿಗೆ ಕಲ್ಲು ಕಟ್ಟಿಸಬೇಕಾದರೆ ಮಹಾಬೇಸಿಗೆಯ ಕಾಲದಲ್ಲಿ ಮಹಾ ನೀರು ಕಾಣುವ ಹಾಗೆ ಬಹಳ ತಗ್ಗಾಗುವ ಹಾಗೆ ಉಸುಕನ್ನು ನೀರನ್ನು ತೆಗಿಸುತ್ತ ಹೋಗಿ ಏಕಕಾಲಕ್ಕೆ ಬಹಳ ಮಂದಿಯನ್ನು ಜಮಾಯಿಸಿ ಈ ಸಾಚಿಯನ್ನು ತಳದ ಉಸುಕಿನ ಮೇಲೆ ವಾರಿಯಾಗದಂತೆ ಇಟ್ಟು ಆ ಕ್ಷಣವೇ ಬಾಲಗಲ್ಲುಗಳಿಂದ ಸ್ವಲ್ಪ ಕಟ್ಟಿಸಿ ಬಿಡಬೇಕು ಆ ಮೇಲೆ ಹಿಂದೆ ಹೇಳಿದ ಪ್ರಕಾರ ಕಟ್ಟಿಕೊಂಡು ಮೊಟ್ಟೆಯ ಬಾರಿಯನ್ನು ಮಾಡಿಕೊಳ್ಳಬೇಕು

ಉಸುಕು ಭೂಮಿ, ಎರಿಯ ಭೂಮಿ, ಕರಲು ಭೂಮಿ, ಹಾಳು ಭೂಮಿ, ಹಿಟ್ಟು ಗರಸು ಮುಂತಾದ ಭೂಮಿಗಳಲ್ಲಿ ಮಹಾ ನೀರು ಬೀಳುವ ಹಾಗೆ ಆಸ್ಪದವಿದ್ದು ಅಂಥ ಸ್ಥಳದಲ್ಲಿ ಬಾವಿಯನ್ನು ಕಡಿಸುತ್ತಿರಲಿಕ್ಕೆ ದರಿಯು ಚನ್ನಾಗಿ ಹೊರಡದೆ ಇದ್ದರ ಅಂಥ ಬಾವಿಗಳನ್ನು ಕಟ್ಟಿಸುವ ಯುಕ್ತಿಯು ತಿಳಿಯದೇ ಗಟ್ಟಿ ದರಿಯನ್ನು ಹುಡುಕುತ್ತ ಎತ್ತರ ಭೂಮಿಯಲ್ಲಿ ಕಲ್ಲು ಭೂಮಿಯಲ್ಲಿ ಬಾವಿಯನ್ನು ತೆಗಿಸಿ ವ್ಯರ್ಥ ಶ್ರಮಪಡುತ್ತಾರೆ ಇದಲ್ಲದೆ ಪೂರ್ವದಲ್ಲಿ ತೆಗಿಸಿದ ಬಾವಿಯು ಮಹಾ ನೀರು ಉಳ್ಳದ್ದಾದರೂ ಆದನ್ನು ವ್ಯರ್ಥವಾಗಿ ಕೆಡಿಸಿ ಬಿಡುತ್ತಾರ. ಹಾಗು ಒಂದು ಪಕ್ಷದಲ್ಲಿ ದರಿ ನಿಲ್ಲದಂಥ ಬಾವಿಗಳಿಗೆ ವಿಚಾರವರಿಯದೆ ಕೆಲವರು ಅದ್ವರವಾಗಿ ಹಂದರ ಬಾರಿಯನ್ನು ಮಾಡಿಸಿ ಮೊಟ್ಟೆಯ

ಸಾಗಿಸುವಲ್ಲಿ ವರುಷ ಒಂದುವರೆ ವರುಷ ಅಥವಾ ಎರಡು ವರುಷದಲ್ಲಿ ಕಟ್ಟೆಗೆಗಳು ಮಣ್ಣು ತಿಂದು ನಿಃಸ್ಸಾರವಾಗಿ ಬಾರಿ ಬಿದ್ದು ಕಡ್ಡಿಗಳು ಸಡಿದು ಎತ್ತುಗಳು ಮನುಷ್ಯರುಗಳು ಇಜಾ ಆಗುತ್ತವೆ.

ಎರಿಯಭೂಮಿ, ಕರಲುಭೂಮಿ, ಸವಳುಭೂಮಿ, ಹಿಟ್ಟಿಗರಸು, ಉಸುಕುಭೂಮಿ, ಹಾಳು, ಮೋಳಿ, ಜೌಗಿನಭೂಮಿ ಇಂಥ ಸ್ಥಲಗಳಲ್ಲಿ ಸವಿನೀರು ಬೀಳುವ ಹಾಗೆ ತಿಳಿಯಬಂದರೆ ಸ್ವಲ್ಪ ದ್ರವ್ಯದ ಖರ್ಚಿನಿಂದ ಸುಲಭವಾಗಿ ಮೊಟ್ಟೆಯ ಬಾರಿಯು ದುರಸ್ತು ಆಗಿ ನೂರಾರು ವರ್ಷದ ವರೆಗೂ ಎಷ್ಟು ದಿವಸದ ವರೆಗೂ ಬಹು ಕಾಲದ ವರೆಗೂ ಯಾವ ಭಯವಿಲ್ಲದೆ ಮೊಟ್ಟೆಯು ಸಾಗುವ ಯೋಜನೆಯನ್ನು ಹೇಳುತ್ತೇನೆ

ಮೊದಲು ಬಾವಿಯನ್ನು ತೆಗಿಸಿ ಆ ಬಾವಿಯ ನಾಲ್ಕೂ ಮೂಲಿಗೂ ಬಾವಿಯು ಎಷ್ಟು ಉದ್ದವಿರುವದೋ ಅಷ್ಟು ಉದ್ದವಾದ ನಾಲ್ಕು ಜಾಲಿಯ ತೊಲೆಗಳನ್ನು ಅಥವಾ ಹುಣಸಿಯ ತೊಲೆಗಳನ್ನು ತಂದು ಅವುಗಳಿಗೆ ಕೆಳಗೂ ಮೇಲೆಯೂ ಹುಗಲು ಹೊಡೆದು ಮತ್ತು ಕಂಭಗಳಿಗೆ ಒಂದೊಂದು ಗಜ ಅರ್ಧ ಗಜ ಪ್ರಮಾಣಕ್ಕೆ ಒಂದೊಂದು ಮಳಿಗಳನ್ನಾಗಲಿ ಅಥವಾ ಕಟ್ಟೆಗೆಯ ಗೂಟಗಳನ್ನಾಗಲಿ ಯಾಸಿಯ ಮೇಲೆ ಹೊಡೆದು ತಯಾರು ಮಾಡಿ ಆ ಭಾವಿಯ ಮಧ್ಯದಲ್ಲಿ ಅಟ್ಟವನ್ನು ಕಟ್ಟಿ ಈ ನಾಲ್ಕೂ ಕಂಭಗಳನ್ನು ಅಟ್ಟಕ್ಕೆ ಆನಿಸಿ ಮೂಲಿಯಲ್ಲಿ ನಿಲ್ಲಿಸಿ ಆ ನಾಲ್ಕೂ ಕಂಭಗಳಿಗೂ ತಳದಲ್ಲಿ ಹೊಡೆದಿರುವ ದೊಡ್ಡ ಹುಗಲುಗಳಲ್ಲಿ ನಾಲ್ಕು ದುರಸ್ತಾದ ಹಲ್ಲುಗಳನ್ನು ಹಾಕಬೇಕು. ಮತ್ತು ಆ ಕಂಭದ ಮೇಲುದುದಿಯಲ್ಲಿ ನಾಲ್ಕು ಅಡ್ಡ ಹಲ್ಲುಗಳನ್ನು ಹಾಕಿ ಬಿಗಿ ಮಾಡಿ ಚೌಕು ತೊಟ್ಟಿಲದೋಪಾದಿಯಲ್ಲಿ ಈ ಕಟ್ಟಿಗೆಯ ಸಾಚೆಯು ತಯಾರಾಗಿ ನಿಂತ ಮೇಲೆ ಆ ಕಂಭಗಳಿಗೆ ಯಾಸಿಯ ಮೇಲೆ ಹೊಡೆದಿರುವ ಒಂದೊಂದು ಗೂಟಗಳಲ್ಲಿ ಒಂದೊಂದು ಅಡ್ಡ ಹಲ್ಲಿನಂಥ ಬಲಿಷ್ಠವಾದ ಕಟ್ಟಿಗೆಗಳನ್ನು ನಾಲ್ಕೂ ಕಡೆಗೂ ಗೂಟಗಳಲ್ಲಿ ಸೇರಿಸಿ ತಳದಿಂದ ಮೇಲಿನ ವರೆಗೂ ಅಡ್ಡ ಹಾಕಬೇಕು ಇದರ ಮೇಲೆ ಅಡ್ಡ ಹಲ್ಲಿನ ಹಿಂದೆ ದೊಡ್ಡ ಕಲ್ಲು ಬಂಡೆಯನ್ನು ನಿಲ್ಲಿಸಿದರೂ ಒಳ್ಳೇದೇ. ಆ ಬಂಡಿ ದೊರೆಯದೆ ಇದ್ದರ ಜಂತಿಯ ಹರವಿದ ಹಾಗೆ ಕಟ್ಟಿಗೆಗಳನ್ನಾಗಲಿ ಸಂದು ಇಲ್ಲದ ಹಾಗೆ ಜೋಡಿಸಿ ಅದರ ಹಿಂದೆ ಹತ್ತಿಯ ಕಟ್ಟಿಗಳಲ್ಲಿ ಜವಾರಿ ಹತ್ತೀ ಕಟ್ಟಿಗೆಯ ಹೊರೆಗಳನ್ನಾಗಲಿ ಸಣ್ಣ ಸಣ್ಣ ಬರಲು ಹೊರೆಗಳನ್ನಾಗಲಿ ಮತ್ತಾವ ತರದ ಕಟ್ಟಿಗೆಗಳನ್ನಾದರೂ ಹಾಕಿ ಅದರ ಹಿಂದೆ ಕುಣಿಗಲ್ಲುಗಳನ್ನು ಗರಸು ಮಣ್ಣನ್ನು ಭರೀಮಾಡಬೇಕು. ಹೀಗೆ ಮಾಡಿ ನೀರಿನೊಳಗೆ ಮುಳುಗಿದ ಕಟ್ಟಿಗೆಗಳನ್ನು ಬಿಟ್ಟು ಮೇಲೆ ತೆರೆದಿರುವ ಕಟ್ಟಿಗೆಯ ಕಂಭಗಳಿಗೂ ಅಡ್ಡ ಹಲ್ಲುಗ

ಳಿಗೂ ರಾಳ ಎಣ್ಣೆ ಮೇಣ ಹುರಮುಂಜನ್ನು ಕುದಿಸಿ ಹಚ್ಚಬೇಕು ಈ ಪ್ರಕಾರ ವರ್ಷಕ್ಕೊಮ್ಮೆ ಕುದಿಸಿ ಹಚ್ಚುತ್ತ ಹೋದರೆ ಕಟ್ಟಿಗೆಯು ಕಂಭಗಳು ಕೆಡುವದಿಲ್ಲ ಆದರೆ ಈ ಪ್ರಕಾರ ಮಾಡಿದ ಚೌಕು ತೊಟ್ಟಿಲದ ಸಾಚಿಯನ್ನು ಮತ್ತು ಅಡ್ಡ ಹಲ್ಲುಗಳನ್ನು ಕವಲು ಮೊಳಿಗಳನ್ನು ಸಹ ಹಾಕಿ ತಯಾರು ಮಾಡಿದಂತೆ ಈ ಚಿತ್ರದಲ್ಲಿ ತೋರಿಸಿದ್ದೇನೆ.



ಸಾಚಿ.

ಈ ಪ್ರಕಾರ ಇಲ್ಲಿ ತೋರಿಸಿದ ಚಿತ್ರದಂತೆ ನಾಲ್ಕು ಕಂಭಗಳು ಅಡ್ಡ
ಹಲ್ಲುಗಳು ಮೊಳೆಗಳು ತಳದ ಹಲ್ಲುಗಳು ಮತ್ತು ಮೇಲುದುದಿಯು ಹುಗಲುಗ
ಳಲ್ಲಿ ಸೇರಿಸಿದ ಪಿಂಡಾದ ಹಲ್ಲುಗಳು ಈ ಯಾವತ್ತೂ ಕಟ್ಟಿಗೆಗಳನ್ನು ಜೋಡಿಸಿ
ಕಡೆಯಲ್ಲಿ ಕಳಾಸು ಮಾಡಿ ಅವುಗಳಿಗೆ ಗುರುತದ ಅಂಕಿಗಳನ್ನು ಹಾಕಿ
ಕೊಂಡು ಬಿಚ್ಚಿ ಬೇರೆ ಬೇರೆ ಮಾಡಿ ಹಿಂದೆ ಹೇಳಿದ ಹಾಗೆ ಒಂದೊಂದೇ
ಕಟ್ಟಿಗೆಗಳನ್ನು ಬಾವಿಯು ಮಧ್ಯದಲ್ಲಿ ಹಾಕಿದ ಅಟ್ಟಕ್ಕೆ ಅನಿಸಿ ನಿಲ್ಲಿಸಿ ಅವು
ಗಳ ಗುರುತದ ಪ್ರಕಾರ ಕಳಾಸು ನೋಡಿ ಜೋಡಿಸಿ ತಯಾರು ಆದ ಮೇಲೆ
ಗಟ್ಟಿಯಾಗಿ ಬಿಗಿಮಾಡಿ ಹಿಂದೆ ಹೇಳಿದ ಪ್ರಕಾರ ಭರತಿಯನ್ನು ಮಾಡಿ
ಬಂದೋಬಸ್ತು ಮಾಡಬೇಕು.

ನೆಲದ ಬರಾಬರಿ ಅಥವಾ ನೆಲದಕಿಂತಲೂ ಎತ್ತರವಾದರೂ ಇರುವ
ಚೌಕು ತೊಟ್ಟಿಲದ ವರೆಗೂ ಹಿಂದೆ ಹೇಳಿದ ಹಾಗೆ ಗಟ್ಟಿಯಾಗಿ ಭರತಿ
ಮಾಡಿದ ಮೇಲೆ ಮೊಟ್ಟೆಯು ಬಾರಿಯನ್ನು ಮಾಡುವ ಕಡೆಗೆ ಉದ್ದವಾದ
ಬಹಳ ಪಿಂಡವಾದ ಒಂದು ದೊಡ್ಡ ಬಸರೀ ತೊಲೆಯನ್ನು ಅಡ್ಡ ಹಾಕಿ
ಅದರ ಭಾರವು ಎಡಬಲದ ನೆಲದ ಮೇಲೆ ಬೀಳುವ ಹಾಗೆ ಮಾಡಿ ತೊಟ್ಟಿ
ಲದ ಮೇಲುದುದಿಯಲ್ಲಿ ಹಾಕಿದ ಅಡ್ಡ ಹಲ್ಲಿಗೆ ಹೊಂದಿಕೆಯಾಗಿ ಹಾಕ
ಬೇಕು ಬಲಾತ್ಕಾರವಾದ ಅಡ್ಡ ತೊಲೆಯನ್ನು ತೊಟ್ಟಿಲದ ಮೇಲಿನ ಹಲ್ಲಿಗೆ
ಹೊಂದಿಕೆಯಾಗಿ ಹಾಕಿದ ಮೇಲೆ ಏಳು ಎಂಟು ಮೊಳ ಉದ್ದವಾದ ದಪ್ಪಾದ
ಎರಡು ಬಸರಿಯು ಕಟ್ಟಿಗೆಗಳನ್ನು ತಂದು ಆ ಕಟ್ಟಿಗೆಗಳಿಗೆ ಮೂಗುತಿಯು
ಕಲ್ಲಿನ ಹಾಗೆ ದೊಡ್ಡ ಹುಗಲು ಹೊಡೆದು ಆ ಬಾವಿಯು ಮೇಲೆ ಆ ತೊಟ್ಟಿ
ಲ್ಲದ ಹೊಂದಿಗೆ ಅಡ್ಡ ಹಾಕಿದ ಬಲಾತ್ಕಾರವಾದ ಕಟ್ಟಿಗೆಯ ಮೇಲೆಯೂ
ತೊಟ್ಟಿಲದ ಅಡ್ಡ ಹಲ್ಲಿನ ಮೇಲೆಯೂ ಕೂಡ್ರುವ ಹಾಗೆ ಅಜಮಾಸು ನೋಡಿ
ನೀರಿನ ತೂಕಕ್ಕೆ ಬರಾಬರಿ ಇರುವ ಹಾಗೆ ಅಲ್ಲಿ ಇಟ್ಟು ಗುರ್ತು ಮಾಡಿ
ತೊಟ್ಟಿಲದ ಅಡ್ಡ ಹಲ್ಲನ್ನು ಮತ್ತೂ ಮೇಲಿನ ಅಡ್ಡ ತೊಲೆಯನ್ನು ಬಿಗಿ
ಹಿಡಿದು ಕೂಡ್ರುವ ಹಾಗೆ ಒಂದೊಂದು ಮೊಳದ ಗೂಟಗಳನ್ನು ಎರಡು ಬಸ
ರಿಯು ಮೂಗತಿ ಕಟ್ಟಿಗೆಗಳ ಮುಂದಿನ ತುದಿಗೆ ಹೊಡೆಯಬೇಕು ಮೂಗತೀ
ಕಟ್ಟಿಗೆಗಳಿಗೆ ಹಸಿಯು ಬಸರೀ ಕಟ್ಟಿಗೆಗಳನ್ನು ಹಾಕಬೇಕೆಂದು ಹೇಳಿದ ಕಾರ
ಣವೇನಂದರೆ ಮೂಗತೀ ಕಟ್ಟಿಗಿಗೆ ಹಸಿಯು ಬಸರಿಯು ಕಟ್ಟಿಗೆಗಳನ್ನು ಹಾಕಿ
ಮೊಟ್ಟೆಯನ್ನು ಸಾಗಿಸಿದರೆ ನೀರಿನ ತಂಪಿಗೆ ಆ ಕಟ್ಟಿಗೆಗಳು ಚಿಗಿತು ಅಲ್ಲಲ್ಲಿ
ಬೇರು ಬಿಟ್ಟು ಕೆಡದೇ ಇರುವವು. ಎಷ್ಟು ದಿವಸ ಇದ್ದ ಕಾಲಕ್ಕೂ ಮೊಟ್ಟೆ
ನಡೆದರೆ ಆ ಕಟ್ಟಿಗೆಗಳಿಗೆ ಯಾವ ಭಯವಿಲ್ಲವು ಮತ್ತು ಆ ಕಟ್ಟಿಗೆಗಳ ಹಿಂದೆ
ಒಂದೊಂದು ಹುಗಲು ಹೊಡೆದು ಬಾರಿಯು ಹಿಂದಿನ ಮೈಯ್ಯಲ್ಲಿ ಆ ಹುಗ
ಲಿನ ಬರಾಬರಿ ಗುರ್ತು ಮಾಡಿ ಅದೇ ಸ್ಥಲದಲ್ಲಿ ಹಾರಿಯಿಂದ ಅಗಿದು

ಂದು ಕಟ್ಟಿಗೆಯನ್ನು ಮೇಲಿನ ತುದಿಯನ್ನು ಕೆತ್ತಿ ನೆಲದಲ್ಲಿ ನಡಿಸಿ ಗರಸು
ಮಣ್ಣು ಹಾಕಿ ಜಡಿದು ಆ ಕಟ್ಟಿಗಿಗೆ ಈ ಬಸರಿಯ ಮೂಗತೀ ಕಟ್ಟಿಗೆ
ಯನ್ನು ಸಿಗಹಾಕಿದಲ್ಲಿ ಬಾವಿಯಲ್ಲಿ ನಿಲ್ಲಿಸಿದ ಚೌಕು ತೊಟ್ಟಿಲದ ಸಾಚಿ
ಯನ್ನು ಬಿಗಿಹಿಡಿದು ಮುಂಜೋಲಿಯು ಹಿಂಜೋಲಿಯು ಆಗದ ಹಾಗೆ
ಆಗುತ್ತದೆ ಅದು ಕಾರಣ ಎರಡೂ ಮೂಗುತಿ ಕಟ್ಟಿಗೆಗಳನ್ನು ಈ ಪ್ರಕಾರ
ಬಂದೋಬಸ್ತು ಮಾಡಿ ಹಾಕಬೇಕು. ಅದರ ಮೇಲೆ ಕಲ್ಲು ಕಟ್ಟಿ ಬಾರಿ
ಯನ್ನು ಎಷ್ಟು ಎತ್ತರ ಮಾಡಬೇಕೋ ಆ ತೂಕಕ್ಕೆ ಸರಿಯಾಗಿ ಕಟ್ಟಿಕೊಂಡು
ಾ ಮೇಲೆ ಮೊಟ್ಟೆಯ ಬಾರಿಯ ಬಚ್ಚಲ ಹೌದನ್ನು ಕಾವಲಿಯನ್ನು ಚನ್ನಾಗಿ
ನೀರು ಸೋರದಂತೆ ಮಾಡಿಕೊಂಡು ಅದರ ಮೇಲೆ ಸಂದುಗಚ್ಚು, ಭರಿಗಚ್ಚು,
ಕುಟಿಗಚ್ಚು ಮೊದಲಾದದರಿಂದ ಬಿಗಿಮಾಡಿ ಯಾತದ ಕಂಭವನ್ನು ನಿಲ್ಲಿಸಿ
ಾಲಿಯನ್ನು ಕದರನ್ನು ಹಾಕಿ ಮತ್ತು ಹಿಂಜೋಲಿಯಾಗದಂತೆ ಯಾತದ
ಕಂಭಗಳೆರಡಕ್ಕೂ ಕವಿಗಂಭದಿಂದ ಒತ್ತುಗೋಲನ್ನು ಕೊಟ್ಟು ಬಿಗಿಮಾಡಿ
ಮೊಟ್ಟೆಯನ್ನು ಸಾಗಿಸಬೇಕು.

ಈ ಪ್ರಕಾರದ ಬಾವಿಯನ್ನು ಮಾಡಿಕೊಳ್ಳುವದಕ್ಕೆ ಹಿಂದೆ ಹೇಳಿದ
ಕಟ್ಟಿಗೆಯ ಸಾಚಿಯನ್ನು ನೋಡಿ ತಿಳಿಯುವದಕ್ಕೋಸ್ಕರ ಇಲ್ಲಿ ತಯಾರಾದ
ಬಾರಿ ಸಹಿತ ಬರೆದ ಚಿತ್ರವನ್ನು ನೋಡಿ ತಿಳಿಯಬೇಕು.

ಈ ಚಿತ್ರದಲ್ಲಿ ಬಾವಿಯ ಆಕೃತಿಯಾದ ಕಟ್ಟಿಗೆಯ ಚೌಕು ತೊಟ್ಟಿಲವು
ಕೆಳದ ಹಲ್ಲು ಮೇಲಿನ ಹಲ್ಲು ಮತ್ತು ಕವಲು ಮೊಳೆಗಳು ಅವುಗಳಲ್ಲಿ
ಸೇರಿಸಿದ ಅಡ್ಡ ಹಲ್ಲುಗಳು ಮೂಗುತಿ ಕಟ್ಟಿಗೆಗಳು ಸಹ ಕಾಣುವ ಹಾಗೆ
ತಯಾರ ಆದ ಬಾರಿ ಯಾತ ಸಹಿತವಾಗಿ ಬರೆದು ತೋರಿಸಿದ್ದೇನೆ ಇದನ್ನು
ನೋಡಿ ತಿಳಿಯಬೇಕು

ಈ ಪ್ರಕಾರವಾಗಿ ಬಾರಿಯನ್ನು ಸಿದ್ಧಮಾಡಿಕೊಂಡು ಮೊಟ್ಟೆಯನ್ನು
ಸಾಗಿಸುವದು. ಆದರೆ ಈ ಚೌಕು ತೊಟ್ಟಿಲದ ನಾಲ್ಕು ಕಂಬಗಳಲ್ಲಿ ಮೊಟ್ಟೆಯ
ಬಾರಿಯ ಕಡೆಗೆ ಇರುವ ಎರಡು ಕಂಬಗಳು ಬಹಳ ಬಲಾತ್ಕಾರವಾಗಿ
ಇರಬೇಕು. ಅಂದರೆ ಈ ಸಾಚಿಯು ಕಟ್ಟಿಗೆಯಿಂದ ಮಾಡಿದ್ದಾದರೆ ಅದು
ನೀರಿನ ತಂಪಿನಿಂದ ಎಷ್ಟು ದಿವಸವಾದ ಕಾಲಕ್ಕೂ ಕಬ್ಬೇರಿ ಕೆಡದೆ ಇರು
ವದು. ಮತ್ತು ಎತ್ತುಗಳಿಗೂ ಮನುಷ್ಯರುಗಳಿಗೂ ಭಯವಿಲ್ಲದೆ ಬಾರಿ
ಬೀಳದೆ ಬಾವಿ ಕೆಡದೆ ಒಳಗೆ ಮಣ್ಣು ಸೇರದೆ ಚನ್ನಾಗಿ ಸುತ್ತಲಿಂದ ನಿರ್ಮಲ
ವಾದ ನೀರು ಬಸಿದು ಬರುತ್ತಾ ಇರುವದು.



ಸಿದ್ಧವಾಡಿದ ಬಾರಿ ಮತ್ತು ಸಾಚೆ.

ಈ ಕಟ್ಟಿಗೆಯ ಸಾಚೆ ಕಂಬಗಳು ಮತ್ತು ಹಲ್ಲುಗಳು ನೀರೊಳಗೆ ಇರುವದರಿಂದ ಅವುಗಳು ಕೆಡವೆ ಮತ್ತು ಹುಳ ಹತ್ತದೆ ಮತ್ತು ಹಸಿಯ ಕಟ್ಟಿಗೆಗಳು ನೀರಲ್ಲಿ ಇರುವದರಿಂದ ಲಡ್ಡಿ ಹಾಯದೆ ಕೆಚ್ಚಿನಂತೆ ಆಗಿ ಇರುವವು ಹಾಗು ನೀರು ಬಿಟ್ಟು ಮೇಲೆ ತೆರೆದಿರುವ ಕಟ್ಟಿಗೆಗಳು ಹುಳ ಹತ್ತಿ ಕೆಡದ ಹಾಗೆ ಅವುಗಳಿಗೆ ಎಣ್ಣೆ ರಾಳ ಹುರಮಂಜನ್ನು ಕುದಿಸಿ ಹಚ್ಚಬೇಕು. ಅಥವಾ ಡಾಂಬರವನ್ನಾಗಲಿ ರೋಗಂಧವನ್ನಾಗಲಿ ಹಚ್ಚಿದರೂ ಬರುತ್ತದೆ. ಹೀಗೆ ನಾಲ್ಕಾರು ವರ್ಷಕ್ಕೊಮ್ಮೆ ಹಚ್ಚಿದರೆ ಆ ಕಟ್ಟಿಗೆಗಳಿಗೆ ಹುಳ ಹತ್ತದೆ ಮತ್ತು ಮಳೆಯ ನೀರಿನಿಂದಾದರೂ ಲಡ್ಡಿ ಹಾಯದೆ ಆ ಕಟ್ಟಿಗೆಗಳು ಕೆಡದೆ ಇರುವವು.

ಇದನ್ನು ಬರೆಯುವದರಿಂದ ಮತ್ತು ಬಾಯಿಂದ ಹೇಳುವದರಿಂದ ಬಹಳವಾಗಿ ತೊಂದರೆಯಂತೆ ಕಾಣಿಸುವದು ಆದಾಗ್ಯೂ ಮಾಡಿಕೊಂಬುವದಕ್ಕೆ ತೀರ ಆಯಾಸವಿಲ್ಲದೆ ಬಹಳ ದ್ರವ್ಯದ ಖರ್ಚು ಇಲ್ಲದೆ ಅತಿ ಸುಲಭದಿಂದಾಗುತ್ತದೆ.

ನೀರು ಬಹಳವಾಗಿದ್ದು ಆ ನೀರು ಸವಿಯಾಗಿದ್ದ ಕಾಲಕ್ಕೂ ಗಟ್ಟಿದರಿಯು ಸಿಕ್ಕದ ಹಾಗೆ ಇರುವದರಿಂದ ಬಾವಿಯನ್ನು ಮಾಡಿಕೊಳ್ಳದೆ ಬಿಟ್ಟಿರುವರು ಅಂಥ ಸ್ಥಲದಲ್ಲಿ ಈ ಪ್ರಕರಣದಲ್ಲಿ ಹೇಳಿದ ಪ್ರಕಾರಕ್ಕೆ ಕಟ್ಟಿಗೆಗಳ ಸಹಾಯದಿಂದ ಬಾವಿಯನ್ನು ಮಾಡಿಕೊಂಡರ ನಿರಾಯಾಸದಿಂದಾಗುವದು.

ಉಸುಕು ನೆಲದಲ್ಲಿ ಬಾವಿಯನ್ನು ತೆಗಿಸಬೇಕಾದರ ಹಳ್ಳದಲ್ಲಿ ಒರತೆಯನ್ನು ತೆಗೆಯುವಾಗ್ಗೆ ಕೆದರುತ್ತ ಹೋದ ಹಾಗೆಲ್ಲ ನೀರಿನ ಧಡಿಕೆಗೆ ಉಸುಕು ಜರಿದು ಬಂದು ತುಂಬುತ್ತಿರುವುದು ಮತ್ತು ಅಗಿಯುತ್ತ ಹೋದ ಹಾಗೆ ದಂಡೆಯು ಕೊರೆದು ಅಗಿಯುವವರ ಮೇಲೆಯೂ ಬೀಳುವದು. ಅಂಥ ಭೂಮಿಯಲ್ಲಿ ಬಾವಿಯನ್ನು ಅಗಿಸುವದು ದುರ್ಲಭವು. ಅದರಿಂದ ಅಂಥ ಸ್ಥಲಗಳಲ್ಲಿ ಬಾವಿಯನ್ನು ಕಟ್ಟಿಕೊಂಬುವದಂತೂ ಮಹಾ ಪ್ರಯಾಸವು ಆದರ ಅಂಥ ಭೂಮಿಯಲ್ಲಿ ಒಂದು ಗಜದ ಕೆಳಗೆ ಮಹಾ ನೀರು ಇರುವಂಥ ಭೂಮಿಯು ಬಹಳ ಇದ್ದು ಆ ನೆಲದಲ್ಲಿ ತೆಂಗು ಅಡಿಕೆ ಮಾವು ಹಲಸು ಮೊದಲಾದ ನಾನಾ ಪ್ರಕಾರದ ಫಲವೃಕ್ಷಗಳು ಅತ್ಯುತ್ತಮವಾಗಿ ಬೆಳೆದು ಒಂದೊಂದು ಹೊಲಕ್ಕೆ ವರ್ಷವರ್ಷಕ್ಕೆ ಸಹಸ್ರಾವಧಿ ರೂಪಾಯಿಗಳ ಉತ್ಪನ್ನವಾಗುವಂಥ ಹೊಲಗಳಿದ್ದು ಬಾವಿಯನ್ನು ಮಾಡಿಕೊಳ್ಳುವ ಯುಕ್ತಿ ತಿಳಿಯದೆ ಅಂಥ ಭೂಮಿಯಲ್ಲಿ ಜೋಳವನ್ನೂ ಸಜ್ಜೆಯನ್ನೂ ಹುರಳಿಯನ್ನೂ ಹುಲ್ಲು ಧಾನ್ಯಗಳನ್ನೂ ಬಿತ್ತಿ ವರ್ಷಕ್ಕೆ ಹತ್ತು ಹದಿನೈದು ಇಪ್ಪತ್ತು ರೂಪಾಯಿಗಳ ಉತ್ಪನ್ನವಾದರೆ ಅಷ್ಟಕ್ಕೆ ಸಂತುಷ್ಟರಾಗಿ ಭೂಮಿಯ ಉತ್ಪನ್ನವನ್ನು ಕೆಡಿಸಿಕೊಂಡು ದಾರಿದ್ರ್ಯವನ್ನು ಭೋಗಿಸುತ್ತಿರುವರು

ಅಂಥ ಉಸುಕು ಭೂಮಿಯಲ್ಲಿ ಬಾವಿಯನ್ನು ಅಗಿಸಬೇಕಾದರೆ ಮೊದಲು ನೀರು ಕಾಣಿಸಿಕೊಳ್ಳುವ ವರೆಗೂ ವರತಿಯ ಆಕೃತಿಯಾಗಿ ಅಡ್ಡಗಲವಾಗಿ ಕಡಿಸಬೇಕು ಆ ಮೇಲೆ ಹಿಂದೆ ಹೇಳಿದ ಪ್ರಕಾರ ಕಟ್ಟಿಗೆಯ ಸಾಚೆಯನ್ನು ತಯಾರು ಮಾಡಿಸಿ ಕಳಾಸು ಮಾಡಿ ಜೋಡಿಸಿ ಆ ಕಂಭಗಳನ್ನು ಹಲ್ಲುಗಳನ್ನು ಗುರ್ತು ಮಾಡಿಕೊಂಡು ಅವುಗಳನ್ನೆಲ್ಲ ಬಿಚ್ಚಿ ಕಡೆಗೆ ತೆಗೆದು ಒಂದೊಂದೇ ಕಂಭವನ್ನು ಬಾವಿಯೊಳಗೆ ಇಳಿಯ ಬಿಟ್ಟು ಹಿಂದೆ ಹೇಳಿದ

ಹಾಗೆ ಬಾವಿಯ ಮಧ್ಯದಲ್ಲಿ ಅಟ್ಟವನ್ನು ಕಟ್ಟಿ ಈ ಕಂಭಗಳ ಹುಗುಲುಗಳಿಗೆ ಹಲ್ಲುಗಳನ್ನು ಜೋಡಿಸಿ ಕೀಲು ಜಡಿದು ತುದಿಗೆ ಹಗ್ಗವನ್ನು ಕಟ್ಟಿ ದಂಡೆಯ ಮೇಲೆ ಎದುರಿಗೆ ನಿಂತು ಜಗ್ಗಿ ಎಳೆದುಕೊಂಡು ಅಟ್ಟಕ್ಕೆ ಆನಿಸಿ ನಿಲ್ಲಿಸಿ ಯಾವತ್ತು ಹಲ್ಲುಗಳನ್ನು ಹಾಸಿ ಒಂದಕ್ಕೊಂದು ಬಿಗಿ ಮಾಡಿ ನಾಲ್ಕು ದಿಕ್ಕಿಗೂ ಕೀಲುಗಳನ್ನು ಜಡಿದು ಮಧ್ಯದಲ್ಲಿ ಒಂದು ಕಂಭವನ್ನು ನಿಲ್ಲಿಸಿ ಆ ಕಂಭಕ್ಕೆ ನಾಲ್ಕು ಮೂಲಿಗಳಿಂದ ಒಂದೊಂದು ಹಲ್ಲನ್ನು ಹುಗಲು ಹೊಡೆದು ಸಿಕ್ಕಿಸಿ ಬಿಗಿಯಾದ ಮೇಲೆ ನಡುವೆ ಕಟ್ಟಿದ ಅಟ್ಟವನ್ನು ಬಿಚ್ಚಿ ತೆಗೆದು ಒಳಗಿನ ಉಸುಕನ್ನು ನೀರನ್ನು ತಗೆಯುತ್ತ ಹೋದ ಹಾಗೆ ಈ ಕಟ್ಟಿಗೆಯ ತೊಟ್ಟಿಲವು ಒಳಿಯಕ್ಕೆ ಇಳಿಯುವದು ಬಸಿ ನೀರು ಬಸಿದು ಬರುವಾಗ್ಗೆ ಅವರ ಸಂಗಡ ದಂಡೆಯ ಉಸುಕು ಒಳಗೆ ಸೇರದ ಹಾಗೆ ದಂಟಿನ ತಟ್ಟಿಯನ್ನಾಗಲಿ ಬಿದಿರು ಚಾಪೆಯನ್ನಾಗಲಿ ಹತ್ತಿಯ ಕಟ್ಟಿಗೆಯ ತಟ್ಟಿಯನ್ನಾಗಲಿ ಹುಸಿ ಭರತಿಗೆ ಉಸುಕು ಒಳಗೆ ಸೇರದ ಹಾಗೆ ಈ ನಾಚೆಯದ ಬೆನ್ನ ಹಿಂದೆ ಕಟ್ಟಿದರೆ ಒಳಗೆ ಉಸುಕು ಸೇರದೆ ನೀರು ಬಸಿಯುತ್ತ ಇರುವದು ಹತ್ತೆಂಟು ಆಳುಗಳನ್ನು ಹಚ್ಚಿ ಉಸುಕನ್ನು ನೀರನ್ನು ತೆಗೆಯುತ್ತ ಹೋದ ಹಾಗೆ ನಾಚೆಯು ಇಳಿಯುತ್ತ ಇರುವದು ಮತ್ತು ನೀರು ಹೆಚ್ಚಾಗುತ್ತ ಬಂದ ಹಾಗೆ ಹತ್ತೆಂಟು ಗೂಡೆಯನ್ನಾದರೂ ಹಚ್ಚಿ ಮತ್ತು ನೂರಾರು ಕೊಡಗಳಿಂದಾದರೂ ನೀರು ತೆಗೆಯುತ್ತ ಉಸುಕು ತಗೆಯುತ್ತ ಹೋಗಿ ಕಟ್ಟು ಬೇಸಿಗೆಯಲ್ಲಿ ಮಹಾ ನೀರು ಆಗುವ ವರೆಗೂ ತಗಿಸಿ ನಾಲ್ವಾರು ಮೊಟ್ಟೆಗೆ ನೀರು ಸರಿಯುವ ಹಾಗಾದಾಗಲೆ ಅಜಮಾಸು ನೋಡಿ ಹಿಂದ ಹೇಳಿದ ಪ್ರಕಾರ ಸಣ್ಣಸಣ್ಣ ಕಟ್ಟಿಗೆಗಳನ್ನು ಆನಿಸಿ ನಿಲ್ಲಿಸಿ ಅವರ ಹಿಂದೆ ಜವಾರಿ ಹತ್ತಿಯ ಕಟ್ಟಿಗೆಯ ಹೊರೆಗಳನ್ನು ತುಳಿದು ಮೂರು ದಿಕ್ಕಿಗೂ ಮಣ್ಣು ದಬ್ಬಿ ತುಳಿದು ಚನ್ನಾಗಿ ಗಟ್ಟಿಯಾಗುವ ಹಾಗೆ ಭರತಿಯ ಮಾಡಿ ಮೊಟ್ಟೆಯ ಬಾರಿಯ ಕಡೆಗ ಮಣ್ಣು ಭರತಿ ಹಾಕದೆ ಗುಣಿಗಲ್ಲುಗಳನ್ನು ಅಥವಾ ಗರಸು ಮಣ್ಣನ್ನು ಹಾಕಿ ಆಗಾಗ್ಗೆ ತುಳಿದು ಜಡಿದು ಬಂದೋಬಸ್ತಿಗಾಗಿ ಮುಂದ ಕುಸಿ ಬೀಳದ ಹಾಗೆ ಚನ್ನಾಗಿ ಭರತಿಯನ್ನು ಮಾಡಿ ಈ ಪ್ರಕರಣದ ಹಿಂದಿನ ಕಲಮುಗಳಲ್ಲಿ ಹೇಳಿದಂತೆ ಮೊಟ್ಟೆಯ ಬಾರಿಯನ್ನು ತಯಾರು ಮಾಡಿ ಮೊಟ್ಟೆಯನ್ನು ಸಾಗಿಸಬೇಕು

ಒಂದು ಪಕ್ಷಕ್ಕೆ ಗರಿಯು ಸಿಲ್ಲದಂಥ ಭೂಮಿಯಲ್ಲಿ ಭೂಮಿಯು ಬಹಳ ಉತ್ತಮ ಪ್ರತಿಯದು ಇದ್ದು ಅಲ್ಲಿ ನೀರು ಸ್ವಲ್ಪ ಇರುವದಾಗಿ ದೊಡ್ಡ ದೊಡ್ಡ ಸೆಲೆಗಳಿಲ್ಲದೆ ಬಸಿ ನೀರು ಬರುವ ಹಾಗಿದ್ದರ ಅಂಥ ಸ್ಥಲದಲ್ಲಿ ಬಾವಿಯನ್ನು ತೆಗಿಸಬೇಕಾದರೆ ಬಾವಿಯನ್ನು ಬಹಳ ಅಗಲವಾಗಿ ಹೊಂಡದ ಹಾಗೆ

ಕಡಿಸಿ ಆ ಬಾವಿಯ ತಳದ ಅಂಗಳವು ಸಣ್ಣ ಕೆರೆಯಂತೆ ಆಗುವ ಹಾಗೆ ಮಾಡಿಸಿ ಕಡ್ಡಿಯನ್ನು ಮುರಿದು ಬಳದಿನ ಮೇಲೆ ಒರತೆಯ ಆಕಾರವಾಗಿ ಬಹಳ ಬಸಿನೀರು ಬಸಿದು ಬಂದು ನಿಲ್ಲುವ ಹಾಗೆ ಮಾಡಿ ತಾನು ಮೊಟ್ಟೆಯ ಕಟ್ಟುವ ಸ್ಥಳದಲ್ಲಿ ಒಂದು ಕಡೆಗೆ ಮೇಲೆ ಹೇಳಿದಂತೆ ನಾಲ್ಕು ಕಟ್ಟೆಗೆಯ ಕಂಭಗಳಿಂದ ಹಲ್ಲು ಸಹಿತ ತಯಾರು ಮಾಡಿದ ಒಂದು ತೊಟ್ಟಿಲದೋಪಾ ದಿಯ ಸಾಚೆಯನ್ನು ನಿಲ್ಲಿಸಿ ಅದರ ನಾಲ್ಕೂ ಕಡೆಗೂ ನೇದಿಯ ಅರಿಯ ನ್ನಾಗಲಿ ಅಥವಾ ಸಣ್ಣ ಸಣ್ಣ ಕಟ್ಟೆಗೆಗಳನ್ನಾಗಲಿ ನಿಲ್ಲಿಸಿ ಆ ಸಾಚೆಯದ ಮೂರು ದಿಕ್ಕಿಗೂ ಆಸಿಸಿ ನಿಕ್ಷಿಸಿದ ಅರಿಗಳಾಗಲಿ ಅಥವಾ ಕಟ್ಟಗೆಗಳಾಗಲಿ ಬೀಳದಂತೆ ದೊಡ್ಡ ದೊಡ್ಡ ಕಲ್ಲುಗಳನ್ನು ಒಣ ಕಲ್ಲ ಗೋಡೆಯಂತೆ ಸಾಚೆ ಯದ ಸುತ್ತಲೂ ಒಟ್ಟ ಮೊಟ್ಟೆಯ ಬಾರಿಯನ್ನು ಮಾಡಿಕೊಳ್ಳುವ ಕಡೆಗೆ ಈ ಪ್ರಕರಣದಲ್ಲಿ ಹೇಳಿದಂತೆ ಚನ್ನಾಗಿ ಗುಣಿಗಲ್ಲುಗಳನ್ನು ಗರಸು ಮಣ್ಣನ್ನು ಹಾಕಿ ಜಡಿದು ಕೂಡ್ರಿಸಿ ತಳಿದು ಗಟ್ಟಿ ಮಾಡಿ ಹಿಂದ ಹೇಳಿದ ಪ್ರಕಾರ ಮೂಗುತಿ ಕಟ್ಟೆಗೆಗಳನ್ನು ಹಾಕಿ ಬಾರಿಯನ್ನು ಕಟ್ಟಿಕೊಳ್ಳಬೇಕು ಈ ಪ್ರಕಾರ ಮಾಡಿದರ ಬಾವಿಯು ಮೂರು ದಿಕ್ಕಿಗೂ ಕೆರೆಯ ಹಾಗೆ ಬಯಲಾಗಿದ್ದು ಮಧ್ಯದಲ್ಲಿ ಬಾರಿಯು ಬಾವಿಯು ಒಂದೊಂಬಸ್ತು ಆಗಿದ್ದು ಸುತ್ತಲೂ ಕೆರೆ ಯಲ್ಲಿ ನೀರು ನಿಂತಹಾಗೆ ಮೂರು ಕದಗೂ ನೀರು ನಿಂತಿರುವದು ಆದ ರಿಂದ ಒಂಗು ಮೊಟ್ಟೆಗೆ ನೀರಿನ ಅಡಚಣಿಯು ಎಂದಿಗೂ ಆಗದ ಹಾಗೆ ಆಗು ತ್ತದೆ ಮತ್ತು ಮಹಾ ನೀರು ಇರುವ ಸ್ಥಳದಲ್ಲಿ ದರಿಯು ನಿಲ್ಲದೆ ಇದ್ದರ ಅಂಥ ಬಾವಿಗಳನ್ನು ಕಟ್ಟಬೇಕಾದರೆ ಸಾಚಯದ ಬೆನ್ನ ಹಿಂದ ನಾಲ್ಕು ದಿಕ್ಕಿಗೂ ಭರತಿಹಾಕಿ ಗಟ್ಟಿಮಾಡಿಕೊಳ್ಳುವದನ್ನು ಹಿಂದೆ ಹೇಳಿದ್ದೇನೆ ಇಲ್ಲಿ ಬಸಿನೀರಿನ ಬಾವಿಯನ್ನು ಕೆರಯ ಹಾಗ ಕಡಿಸಿ ಒಂದು ಕಡೆಗೆ ತೊಟ್ಟಿಲ ದಾಕಾರವಾದ ಕಟ್ಟೆಗೆಯ ಸಾಚೆಯನ್ನಿಟ್ಟು ಮೊಟ್ಟೆಯ ಬಾರಿಯನ್ನು ಮಾಡಿ ಕೊಂಡು ಮೂರು ದಿಕ್ಕಿಗೂ ಒಣಕಲ್ಲುಗಳನ್ನು ಗೋಡೆಯನ್ನ ಕಟ್ಟಿದ ಹಾಗೆ ಒಟ್ಟಿ ಮೊಟ್ಟೆಯ ಬಾರಿಯ ಎದುರಿಗೆ ಕವಲು ಇದ್ದ ಉದ್ದವಾದ ತೊಲೆಗ ಳನ್ನು ಜೀಟುಗೋಲು ಕೊಟ್ಟ ಹಾಗೆ ನೀರೊಳಗೆ ಬಡ್ಡಿಯನ್ನು ಇಟ್ಟು ಗಟ್ಟಿ ಯಾಗಿ ಜೀಟು ಕೊಟ್ಟು ಆ ತೊಟ್ಟಿಲಕ್ಕೆ ಬಿಗಿಮಾಡಿ ಮೊಟ್ಟೆಯನ್ನು ಸಾಗಿ ಸಿಕೊಳ್ಳಬೇಕು ಅಂಥ ಬಾವಿಯು ಹೇಗಿರುವದಂದರ ಕೆಳಗೆ ಬರೆದ ಚಿತ್ರ ವನ್ನ ನೋಡಬೇಕು ಇಲ್ಲಿ ಕಟ್ಟೆಗೆಯ ಸಾಚೆಯನ್ನು ಒಂದು ಕಡೆಗೆ ಮೊಟ್ಟೆಯ ಬಾರಿಯನ್ನು ಮತ್ತು ಮೂರು ದಿಕ್ಕಿಗೂ ಒಟ್ಟಿದ ಒಣಕಲ್ಲುಗಳನ್ನು ಅದರ ಸುತ್ತಲೂ ನಿಲ್ಲುವ ನೀರನ್ನ ಮತ್ತು ತೊಟ್ಟಿಲಕ್ಕೆ ಜೀಟುಕೊಟ್ಟ ತೊಲೆಗ ಳನ್ನು ಬರೆದು ತೋರಿಸಿ ಇದೆ



**ಸಾಚಿ ಅದ್ದ ಬಾವಿ.**

ಈ ಪ್ರಕಾರ ಅಗಲವಾಗಿ ಕೆರೆಯ ಹಾಗೆ ಭೂಮಿಯನ್ನು ಅಗಿದು ಒಂದು ಕಡೆಗೆ ಈ ತ್ತೊಟ್ಟಿಲನ್ನು ನಿಲ್ಲಿಸಿ ಅದರ ಹಿಂದ ಮೂರು ಕಡೆಗೆಯೂ ಕಲ್ಲುಗಳನ್ನು ಒಟ್ಟಿ ಮೊಟ್ಟೆಯ ಬಾರಿಯ ಕಡೆಗೆ ಚನ್ನಾಗಿ ದಂಡೆಯ ವರೆಗೂ ಕಲ್ಲುಗಳಿಂದಾಗಲಿ ಅಥವಾ ಗರಸು ಮಣ್ಣಿನಿಂದಾಗಲಿ ಭರತಿಯನ್ನು ತುಂಬಿ ಅದರ ಮೇಲೆ ಹಿಂದೆ ಹೇಳಿದ ಹಾಗೆ ಬಲಾತ್ಕಾರವಾದ ಅಡ್ಡ ತೊಲೆಯನ್ನು ಹಾಕಿ ಆದರ ಮೇಲೆ ಹಸಿಯ ಬಸರೀ ಕಟ್ಟಿಗೆಗಳಿಗೆ ದೊಡ್ಡ ಹುಗುಲು ಹೊಡೆದು ಹಾಗು ಹಿಂದೆ ಮುಂಡೆ ಗೂಟಗಳನ್ನು ಹೊಡೆದು ನೀರಿನ ತೂಕವನ್ನು ನೋಡಿ ಅಡ್ಡ ತೊಲೆಯ ಮೇಲಿಂದ ಹಿಂದಕ್ಕೆ ಭೂಮಿಯ ಮೇಲೆ ಭಾರ ಬೀಳುವ ಹಾಗೆ ಮೂಗತೀ ಕಟ್ಟಿಗೆಗಳನ್ನು ಹಾಕಿ ಅದರ ಮೇಲೆ ನೀರು ಏರುವ ತೂಕಕ್ಕೆ ಸರಿಯಾಗಿ ಕಲ್ಲು ಕಟ್ಟಿ ಮೊಟ್ಟೆಯ ನೀರು ಬೀಳುವ ಹೌದನ್ನು ತಯಾರು ಮಾಡಿ ಯಾತವನ್ನು ನಿಲ್ಲಿಸಿ ಮೊಟ್ಟೆಯನ್ನು ಸಾಗಿಸಿ

ಕೊಳ್ಳಬೇಕು. ಮತ್ತು ಆ ಕಟ್ಟಿಗೆಯು ತೊಟ್ಟಿಲು ಸರಿಯದ ಹಾಗೆ ಬಿಗಿಯಾಗಿ ದೊಡ್ಡ ಕಂಭಗಳನ್ನು ಹಿಂದಿನ ಚಿತ್ರದಲ್ಲಿ ತೋರಿಸಿದ ಹಾಗೆ ಮೊಟ್ಟಿಗೆ ಎದುರಾಗಿರುವ ತೊಟ್ಟಿಲದ ಕಂಭಗಳಿಗೆ ಬಿಗಿಯಾಗಿ ಜೀಟು ಕೊಟ್ಟು ನಿಲ್ಲಿಸುವದು. ಮತ್ತು ಸಂಶಯವಾದರೆ ಮೂಗತಿ ಕಟ್ಟಿಗೆಗಳ ತುದಿಗೆ ದೊಡ್ಡ ಹುಗಲು ಹೊಡೆದು ಮೊಟ್ಟೆಯ ಬಾರಿಯು ಹಿಂದೆ ಭೂಮಿಯಲ್ಲಿ ಕಟ್ಟಿಗೆಗಳನ್ನು ಹೂಳಿ ಆದರ ತುದಿಯನ್ನು ಕೆತ್ತಿ ಈ ಮೂಗತೀ ಕಟ್ಟಿಗೆಗಳನ್ನು ಅದಕ್ಕೆ ಸಿಕ್ಕಿಸಿದರೆ ಮುಂದಕ್ಕೆ ಜೋಲಿಯಾಗದ ಹಾಗೆ, ಇರುವದು

ಸರ್ವೋತ್ಕೃಷ್ಟವಾಗಿ ಮಹಾ ನೀರು ಇರುವ ಭೂಮಿಯಲ್ಲಿ ಹತ್ತೆಂಟು ಮೊಟ್ಟಿಗೆ ನೀರು ಸರಿಯದ ಹಾಗಿರುವ ಸ್ಥಳದಲ್ಲಿ ದರಿಯು ಗಟ್ಟಿಯಾಗಿರದಿದ್ದರೆ ಅಂಥ ಸ್ಥಳದಲ್ಲಿ ಸಣ್ಣ ಸರೋವರದ ಹಾಗೆ ಅಗಲವಾಗಿ ಬಾವಿಯನ್ನು ಕಡಿಸಬೇಕು. ಆ ಬಾವಿಯನ್ನು ಕಟ್ಟುವದಕ್ಕೆ ಈ ಪ್ರಕರಣದಲ್ಲಿ ಇಲ್ಲಿಯವರೆಗೂ ಹೇಳಿದಂತೆ ಕಟ್ಟಿಗೆಯ ಸಾಚೆಯನ್ನು ಹತ್ತೆಂಟು ಅಥವಾ ಬೇಕಾದಷ್ಟು ಕಂಭಗಳನ್ನು ತಯಾರು ಮಾಡಿ ತನಗೆ ಎಷ್ಟು ಮೊಟ್ಟೆಯನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯು ಅದಯೋ ಅಷ್ಟು ಕಂಭಗಳ ಸಾಚೆಯನ್ನು ತಯಾರು ಮಾಡಿಕೊಳ್ಳಬೇಕು. ನಾಲ್ಕು ಕಂಭಗಳ ಸಾಚೆಯಾದರೆ ಒಂದೇ ಮೊಟ್ಟೆಯೇ ಸರಿ ಮತ್ತು ಒಂಬತ್ತು ಕಂಭಗಳ ಸಾಚೆಯನ್ನು ತಯಾರು ಮಾಡಿದರ ನಾಲ್ಕು ಮೊಟ್ಟೆಗೂ ಎರಡು ಮೊಟ್ಟೆಗೂ ಬರುತ್ತದೆ ಹದಿನಾರು ಕಂಭಗಳಾದರೆ ಆರು ಮೊಟ್ಟೆಗಳು ಅಥವಾ ಎಂಟು ಮೊಟ್ಟೆಗಳಾಗುತ್ತವೆ ಈ ಪ್ರಕಾರ ತನಗೆ ಬೇಕಾದಷ್ಟು ಮೊಟ್ಟೆಯನ್ನು ಮಾಡಿಕೊಳ್ಳುವದಕ್ಕೆ ಬರುತ್ತದೆ. ಮುಂದಿನ ಈ ಚಿತ್ರದಲ್ಲಿ ಬಹಳ ಕಂಭಗಳಿದ್ದು ನೀರಿನ ಮಧ್ಯದಲ್ಲಿ ಮತ್ತು ಹೊರವಳಿಯದಲ್ಲಿ ಕಂಭಗಳಿರುತ್ತವೆ ಎರಡು ಅಥವಾ ನಾಲ್ಕು ಮೊಟ್ಟೆಗಳನ್ನು ಮಾಡಬೇಕಾದರೆ ಒಂಬತ್ತು ಕಂಭಗಳು ಬೇಕು ಎಂಟು ಅಥವಾ ಆರು ಮೊಟ್ಟೆಗಳಿಗೆ ಹದಿನಾರು ಕಂಭಗಳು ಬೇಕಾಗುತ್ತವೆ ಅದರಂತೆ ಮುಂದಿನ ಬರೆದ ಚಿತ್ರವನ್ನು ನೋಡಿ ತಿಳಿಯತಕ್ಕದ್ದು

ಈ ಚಿತ್ರದಲ್ಲಿ ತೋರಿಸಿದಂತೆ ನೀರಿನ ಮಧ್ಯದಲ್ಲಿಯೂ ಹೊರವಳಿಯಲ್ಲಿಯೂ ಕೆಲವು ಕಂಭಗಳಿಗೆ ಹಿಂದೆ ಹೇಳಿದಂತೆ ಮೇಲು ಹುಗಲು ತಳದ ಹುಗಲುಗಳನ್ನು ಹೊರವಳಿಯಲ್ಲಿ ಬಾವಿಯ ದಂಡೆಯ ಕಡೆಗೆ ಇರುವ ನಾಲ್ಕು ದಿಕ್ಕಿನ ಯಾವತ್ತು ಕಂಭಗಳಿಗೆ ಹುಗಲನ್ನೂ ಗೂಟಗಳನ್ನೂ ಹೊಡೆದು ಪಿಂಡವಾದ ಹಲ್ಲನ್ನು ಅಡ್ಡ ಹಲ್ಲುಗಳನ್ನು ಹಾಕುವ ಹಾಗೆ ಕಡೆಯಲ್ಲಿ ಯಾವತ್ತು ಸಾಚೆಯನ್ನು ತಯಾರು ಮಾಡಿ ಕಳಾಸು ಮಾಡಿಕೊಂಡು ಗುರ್ತು ಮಾಡಿ ಅವುಗಳನ್ನು ಬಿಚ್ಚಿ ಬೇರೆ ಬೇರೆ ಮಾಡಿ

ಅಗಲವಾಗಿ ಕಡಿಸಿದ ಬಾವಿಯ ಮಧ್ಯದಲ್ಲಿ ಯಾವತ್ತು ಕಂಭಗಳನ್ನು ಒಂದೊಂದೇ ಒಯ್ದು ಇಟ್ಟು ಮಧ್ಯದಲ್ಲಿ ಹಿಂದೆ ಹೇಳಿದ ಹಾಗೆ ಅಟ್ಟವನ್ನು ಕಟ್ಟಿ ಆ ಕಂಭಗಳನ್ನು ಚೌಕೋನಿಯಾಗಿ ಸಾಲು ಸಾಲಾಗಿ ನಿಲ್ಲಿಸಿ ಅವುಗಳ ಕೆಳಗೂ ಮೇಲೆಯೂ ಇರುವ ಹುಗುಲುಗಳಲ್ಲಿ ಪಿಂಡವಾದ ತಳದ ಹಲ್ಲುಗಳನ್ನು ಮೇಲಿನ ಹಲ್ಲುಗಳನ್ನು ಸೇರಿಸಿ ಬಿಗಿಮಾಡಿ ಚೌಕು ತೊಟ್ಟಿಲದಂತೆ ತಯಾರು ಮಾಡಿ ಹೊರವಳಿಯಲ್ಲಿ ನಾಲ್ಕು ದಿಕ್ಕಿಗೂ ಎಷ್ಟು ಕಂಭಗಳಿವೆಯೋ ಅಷ್ಟು ಕಂಭಗಳಿಗೆ ಕವಲಿನಂತೆ ಯಾಸಿಯ ಮೇಲೆ ಹೊಡೆದಿರುವ ಗೂಟಗಳಲ್ಲಿ ಅಡ್ಡ ಹಲ್ಲುಗಳನ್ನು ಹಾಕಬೇಕು ಹಾಗು ಒಳಮೈಯಲ್ಲಿ ನೀರಿನ ಮಧ್ಯದಲ್ಲಿ ಇರುವ ಕಂಭಗಳಿಗೆ ಅಡ್ಡ ಹಲ್ಲುಗಳನ್ನು ಹಾಕುವ ಪ್ರಯೋಜನವಿಲ್ಲ ಮತ್ತು ಹೊರಮೈಯಲ್ಲಿ ಸುತ್ತಲೂ ಬಾವಿಯ ದಂಡೆಯ ಕಡೆಗೆ ನಾಲ್ಕು ದಿಕ್ಕಿಗೂ ಎಷ್ಟು ಕಂಭಗಳಿರುತ್ತವೆಯೋ ಅವುಗಳಿಗೆ ಅಡ್ಡ



ಹೆಚ್ಚು ಬಾರಿಗಳಿದ್ದ ಬಾವಿ.

ಹಲ್ಲುಗಳನ್ನು ಹಾಕಿ ಆ ಅಡ್ಡ ಹಲ್ಲುಗಳ ಹಿಂದೆ ಹೊಂದಿಕೆಯಾಗಿ ಕಲ್ಲು ಅರಿಗಳನ್ನಾಗಲಿ ಅಥವಾ ಕಟ್ಟಿಗೆಯ ತುಂಡುಗಳನ್ನಾಗಲಿ ಸಂದು ಇಲ್ಲದ ಹಾಗೆ ನಿಲ್ಲಿಸಿ ಅದರ ಹಿಂದ ಜವಾರಿಯ ಹತ್ತಿಯ ಕಟ್ಟಿಗೆ ಅಥವಾ ಹುಣಸಿಯ ಬರಲುಗಳನ್ನು ಸಣ್ಣ ಸಣ್ಣ ಹೊರೆಗಳನ್ನು ಕಟ್ಟಿ ಹಾಕಿ ಅದರ ಹಿಂದ ಕಟ್ಟಿಗೆಯ ಸಾಚಿಗೆ ಬಿಗಿಯಾಗುವ ಹಾಗೆ ಗುಣಿಗಲ್ಲುಗಳನ್ನು ಅಥವಾ ಗರಸು ಮಣ್ಣನ್ನು ಹಾಕಿ ಗಟ್ಟಿಯಾಗಿ ಜಡಿದು ಭರತಿಯನ್ನು ಮಾಡುತ್ತ ಈ ಪ್ರಕಾರ

ಬಾವಿಯ ತಳದಿಂದ ಭೂಮಿಯ ಸಮ ಆಗುವ ವರೆಗೂ ಮೂರೂ ದಿಕ್ಕಿಗೂ ಹೀಗೆಯೇ ಗಟ್ಟಿಯಾಗಿ ಭರಿಯನ್ನು ತುಂಬಿಕೊಳ್ಳಬೇಕು. ಮತ್ತು ಮೊಟ್ಟೆಯ ಬಾರಿಗಳನ್ನು ಯಾವ ಕಡೆಗೆ ಹೋಗಿವೆಯೋ ಆ ಕಡೆಗೆ ಕಲ್ಲುಗಳನ್ನೇ ಭರತಿಯ ಮಾಡಿ ಹಿಂದೆ ಹೇಳಿದ ಪ್ರಕಾರಕ್ಕೆ ಅಡ್ಡ ತೊಲೆಗಳನ್ನು ಬಸರಿಯ ಹಸಿಯ ತುಂಡುಗಳನ್ನು ಬಹಳ ಪಿಂಡವಾಗಿದ್ದಷ್ಟನ್ನು ನೋಡಿ ತಂದು ಕಟ್ಟಿಗೆಯ ಸಾಚಿಯ ಮೇಲಿನ ಹಲ್ಲಿಗೆ ಹೊಂದಿಕೆಯಾಗುವ ಹಾಗೆ ಭೂಮಿಯ ಮೇಲೆ ಅಡ್ಡ ಇಟ್ಟು ಅದರ ಮೇಲೆ ಗಜ ಒಂದುವರೆ ಗಜ ಕಲ್ಲು ಕಟ್ಟಿಕೊಂಬುವ ಹಾಗೆ ಇದ್ದರೆ ನೀರಿನ ಕಾವಲಿಯ ತೂಕಕ್ಕೆ ಸರಿಯಾಗುವ ಹಾಗೆ ಕಟ್ಟಿ ಅದರ ಮೇಲೆ ಏಳು ಮೊಳ ಅಥವಾ ಎಂಟು ಮೊಳ ಉದ್ದವಾದ ದಪ್ಪಾದ ಹಸಿಯ ಬಸರಿಯ ಕಟ್ಟಿಗೆಗಳನ್ನು ಪ್ರತಿಯೊಂದು ಮೊಟ್ಟೆಗೆ ಎರಡೆರಡರಂತೆ ಎಷ್ಟು ಮೊಟ್ಟೆ ಮಾಡಿಕೊಳ್ಳುವದದೆಯೋ ಅಷ್ಟು ತೊಲೆಗಳನ್ನು ತಂದು ಅವುಗಳಿಗ ಮೂಗತೀ ಕಲ್ಲಿನ ಹಾಗೆ ದೊಡ್ಡ ಹುಗಲು ಹೊಡೆದು ಮತ್ತು ಮುಂದಿನ ಮೋರಿಗೆ ಒಂದು ಗೂಟವನ್ನು ಹಿಂದಿನ ಮೋರಿಗೆ ಒಂದೊಂದು ಹುಗಲನ್ನು ಹೊಡೆದು ಹಿಂದಿನ ವೈಯ್ಯಲ್ಲಿ ಕಟ್ಟಿಗೆಗಳನ್ನು ನಡಿಸಿ ಭೂಮಿಯಲ್ಲಿ ಹೂಳಿ ಅವುಗಳಿಗೆ ಈ ಮೂಗುತಿ ಕಟ್ಟಿಗಗಳನ್ನು ಹಾಕುವ ಹಾಗೆ ಮಾಡಿ ಪ್ರತಿಪೂಂದು ಅಂಕಣಕ್ಕೆ ಒಂದೊಂದು ಮೊಟ್ಟೆಯಂತ ಬಾರಿಯನ್ನು ಕಟ್ಟುವ ಯೋಚನೆ ಇದ್ದ ಹಾಗೆ ನೀರಿನ ತೂಕವನ್ನು ನೋಡಿ ಕುಮರಗಲ್ಲು ಹಾಕಿದ ಹಾಗ ಈ ಬಸರೀ ಕಟ್ಟಿಗಗಳನ್ನು ಅಡ್ಡ ತೊಲೆಯ ಮೇಲೆ ಉದ್ದವಾಗಿ ಇಟ್ಟು ಅದರ ಮೇಲೆ ಹಾವನ್ನು ಬಾರಿಯನ್ನು ಕಟ್ಟಿಕೊಂಡು ಮೊಟ್ಟೆಯನ್ನು ಸಾಗಿಸುವದು ಹೀಗ ತನ್ನ ಇಚ್ಛಾನುಸಾರವಾಗಿ ಬೇಕಾದಷ್ಟು ಮೊಟ್ಟೆಗಳನ್ನು ಮಾಡಿಕೊಳ್ಳಲಿಕ್ಕ ಬರುವದು

ಅರ್ಥಶಕ್ತಿಯುಳ್ಳವರಾದರೆ ನಾಲ್ಕೂ ಕಡಿಗೆಯೂ ಈ ಕಟ್ಟಿಗೆಯ ಚೌಕು ತೊಟ್ಟಿಲನ್ನು ಹಾಗೇ ಇಟ್ಟು ಸುತ್ತಲೂ ಚನ್ನಾಗಿ ಕಲ್ಲು ಕಟ್ಟಿಕೊಂಡರೆ ಎಷ್ಟು ವರ್ಷವಾದ ಕಾಲಕ್ಕೂ ಬಾವಿಯೂ ಬಾರಿಯೂ ಕಡದೆ ದುರಸ್ತಾಗಿ ಇರುವದು ಒಂದು ವೇಳೆಗೆ ಕಲ್ಲುಗಳಿಂದ ಕಟ್ಟಿರುವ ತ್ರಾಣವು ಇಲ್ಲದಿದ್ದರೆ ಈ ಕಟ್ಟಿಗೆಗಳಿಂದ ಮಾಡಿದ್ದಾದರೂ ಎಷ್ಟು ವರುಷವಾದರೂ ಕೆಡದೇ ಇರುವದು ಆದರೆ ನೀರಿನ ಮೇಲೆ ತೆರೆದಿರುವ ಯಾವತ್ತು ಕಟ್ಟಿಗೆಗಳಿಗೆ ಮಳೆಯ ನೀರು ಪತ್ತಿ ಕೆಡದ ಹಾಗೆ ರಾಳ ಎಣ್ಣೆ ಮೇಣ ಹುರಮುಂಜುಗಳನ್ನು ಕುದಿಸಿ ವರ್ಷ ವರ್ಷಕ್ಕೂ ಹಚ್ಚುತ್ತ ಹೋಗಬೇಕು.

ಅಷ್ಟರಲ್ಲಿ ತನಗಾದರೂ ತನ್ನ ಮಕ್ಕಳಿಗಾದರೂ ದೇವರು ತ್ರಾಣವನ್ನು ಅರ್ಥಶಕ್ತಿಯನ್ನು ಕೊಟ್ಟಿದ್ದಾದರೆ ಆ ಕಟ್ಟಿಗೆಯ ಸಾಚಿಯನ್ನು ಹಾಗೆಯೇ

ಉಳಿಸಿ ಅದರ ಹಿಂದೆ ಹಾಕಿದ ಭರತಿಯ ಮಣ್ಣನ್ನು ಕಿತ್ತಿ ತೆಗೆದು ಕಲ್ಲುಗಳನ್ನು ಕಟ್ಟಿಸುವದಕ್ಕೆ ಏನೂ ಅಡಚಣಿ ಆಗುವದಿಲ್ಲ.

ಕೆಲವು ತ್ರಾಣವಿಲ್ಲದಂಥ ಬಡಜನರಾಗಿದ್ದು ಅವರ ಹೊಲದಲ್ಲಿ ನೀರಿನ ಆಸ್ಪದವಿದ್ದರೆ ಬಾವಿಯನ್ನು ತೆಗಿಸಿ ಅದನ್ನು ಕಟ್ಟಿಸುವ ತ್ರಾಣವಿಲ್ಲದಾದರೆ ಲಕ್ಕಿಯ ಬರಲುಗಳನ್ನು ಆ ಬಾವಿಯ ಒಳಗೆ ಸುತ್ತಲೂ ನಡಿಸಿ ಬಾರಿಯನ್ನು ಮಾಡಿಕೊಳ್ಳುವ ಸುಲಭವಾದ ಯುಕ್ತಿ ಏನಂದರ ಉದ್ದ ಇರುವ ಬಲಾತ್ಕಾರವಾದ ಲಕ್ಕಿಯ ಬರಲುಗಳನ್ನು ತಂದು ತಳ ಇಲ್ಲದ ಗಳಿಗೆಯ ಹಾಗೆ ಗುಮ್ಮಿಯ ಹಾಗೆ ಕಣಜಿನ ಹಾಗೆ ಹೆಣೆಯಬೇಕಾದರ ಕಡೆಯಲ್ಲಿ ಒಂದು ಸ್ಥಲದಲ್ಲಿ ಸುತ್ತಲೂ ದುಂಡಾಕೃತಿಯಾಗಿ ಬಸರಿಯ ಕಟ್ಟಿಗೆಗಳನ್ನು ನಡಿಸಿ ಆ ಗಳಗಳಿಗೆ ಸಣ್ಣನ್ನನಾದರೂ ಲಕ್ಕಿಯ ಬರಲುಗಳಿಂದ ಚನ್ನಾಗಿ ಹೆಣೆದು ಗಳಗಿಯ ಹಾಗೆ ಮಾಡಿ ಹತ್ತೆಂಟು ಮಂದಿ ಹಿಡಿದು ಎತ್ತಿಕೊಂಡು ಹೋಗಿ ವರತಿಯ ಆಕಾರವಾಗಿ ತೆಗೆದಿರುವ ಬಾವಿಗಾದರೂ ನಾಲ್ಕಾರು ಗೂಡೆ ಹಚ್ಚಿ ನೀರು ತೆಗೆದು ಒಳಗಿನ ಉಸಕನ್ನಾಗಲಿ ಅಥವಾ ಮಣ್ಣನ್ನಾಗಲಿ ತಗೆದು ಬಹಳ ತಗ್ಗಾಗುವ ಹಾಗೆ ಮಾಡಿದ ಬಾವಿಯೊಳಗೆ ಈ ಲಕ್ಕಿ ಬರಲಿನಿಂದ ಹೆಣೆದಿರುವ ಗುಮ್ಮಿಯನ್ನು ಇಟ್ಟು ಸುತ್ತಮುತ್ತಲು ತೊಪ್ಪಲ ಹೊರೆಗಳನ್ನು ಹಾಕಿ ಮಣ್ಣು ಭರತಿ ಮಾಡಿದಲ್ಲಿ ಆ ಲಕ್ಕಿಯ ಭರಿಗಳು ಚಿಗಿತು ಎಷ್ಟು ದಿವಸವಾದ ಕಾಲಕ್ಕೂ ಬಾವಿಯು ಕೆಡದೆ ಇರುವದು ಈ ಪ್ರಕಾರ ಭರತಿ ಮಾಡಿಕೊಂಡು ಮೇಲೆ ಹಸಿಯ ಬಸರಿಯ ತೊಲೆಯನ್ನು ತಂದು ಅಡ್ಡಹಾಕಿ ಮತ್ತು ಹಸಿಯ ಬಸರಿಯ ಕಟ್ಟಿಗೆಗಳಿಂದ ಹಿಂದೆ ಹೇಳಿದ ಹಾಗೆ ಮೂಗುತಿ ಕಟ್ಟಿಗೆಗಳನ್ನು ತಯಾರು ಮಾಡಿ ಹಾಕಿ ಬಾರಿಯನ್ನು ಕಟ್ಟಿಕೊಂಡು ಮೊಟ್ಟೆಯನ್ನ ಸಾಗಿಸಬೇಕು ಹೀಗೆ ಮಾಡಿದ ಬಾವಿಯಾದರೂ ಸಹಸ್ರಾವಧಿ ವರುಷದ ವರೆಗೂ ಕೆಡದೆ ಇರುವದು ಮತ್ತು ಒಳಮಗ್ಗಲಿನಲ್ಲಿ ಅಂದರೆ ಬಾವಿಯ ಒಳಮೈಯಲ್ಲಿ ಲಕ್ಕಿಯ ಬರಲುಗಳು ಚಿಗಿತು ಬಾವಿಯನ್ನ ಮುಚ್ಚೀತೆಂಬುವ ಸಂಶಯವಾದರೆ ವರುಷ ವರುಷಕ್ಕೂ ಒಳಗಿನ ಬರಲುಗಳನ್ನು ಕೊಯ್ಯುತ್ತ ಹೋಗಬೇಕು ಇದು ಬಹಳ ಸುಲಭವು. ಈ ಪ್ರಕಾರದ ಬಾವಿಗಳನ್ನು ಉಸುಕು ಭೂಮಿಯಲ್ಲಿಯೂ ದರಿಯು ನಿಲ್ಲದಂಥ ಯಾವ ಪ್ರಕಾರದ ಭೂಮಿಯಲ್ಲಿಯೂ ಮಾಡಿಕೊಳ್ಳಬೇಕು.

ಈ ಪ್ರಕಾರ ಬಾವಿಯನ್ನು ಕಟ್ಟುವ ವಿಷಯದಲ್ಲಿ ಅನಂತ ಪ್ರಕಾರವಾದ ಸುಲಭ ಯುಕ್ತಿಗಳನ್ನು ತಿಳುಹಿಸಿದ್ದೇನೆ. ಈ ರೀತಿಯಿಂದ ದರಿಯು ನಿಲ್ಲದ ಸ್ಥಲಗಳಲ್ಲಿ ಬಾವಿಯನ್ನು ಮಾಡಿಕೊಳ್ಳುವದಕ್ಕೆ ಆಯಾಸವಿಲ್ಲದೆ ಬಹಳ ದ್ರವ್ಯದ ಖರ್ಚು ಇಲ್ಲದೆ ಸ್ವಲ್ಪ ಗುಣದಿಂದಲೆ ಸ್ವಲ್ಪ ಮೆಹನತಿಯಿಂದ

ಆ ಭಾವಿಯು ಸಿದ್ಧವಾಗಿ ದುರಸ್ತಿನಿಂದ ಕೆಲಸ ನಡಿಸುವದಕ್ಕೆ ಉಪಯೋಗವಾಗಿರುತ್ತದೆ

ಭಾವಜ್ಞರಾದರೆ ಇದನ್ನ ಚನ್ನಾಗಿ ತಿಳಿದು ಈ ಪ್ರಕಾರದಿಂದ ಬಾವಿಯನ್ನು ಮಾಡಿಕೊಳ್ಳಬೇಕು ಆದರ ಉತ್ಪನ್ನದಿಂದ ಸಕಲೈಶ್ವರ್ಯವಾಗುವದು. ಈಗಲೂ ನಾವು ನೋಡುವಲ್ಲಿ ಎಷ್ಟೋ ಹಳ್ಳಗಳು ನೀರಿನಿಂದ ಪೂರ್ಣವಾಗಿ ಪ್ರವಹಿಸುತ್ತಿದ್ದು ಆ ನೀರು ಸವಿಯಾಗಿದ್ದಾಗ್ಯೂ ಅಂಥ ಹಳ್ಳದ ದಂಡೆಯಲ್ಲಿರುವ ಅನಂತಕೋಟಿ ಹೊಲಗಳೆಲ್ಲ ತೋಟಗಳಾಗಿರುವ ಹಾಗೆ ಅತ್ಯುತ್ತಮ ಪ್ರಕಾರದ ಭೂಮಿಯಾಗಿದ್ದರೂ ಅದರ ಉಪಯೋಗವನ್ನು ಮಾಡಿಕೊಳ್ಳುವಂಥ ಜ್ಞಾನವಿಲ್ಲದೆ ಇರುವರು ಅಂಥ ಹಳ್ಳದ ದಂಡೆಯಲ್ಲಿ ಇರುವ ಹೊಲಗಳನ್ನೇ ನಾಲ್ಕಾರು ಕೂಡಿಗಿ ಭೂಮಿಯಷ್ಟು ನೀರು ಏರುವ ಹಾಗೆ ಬಾರಿಯನ್ನು ಎತ್ತರಿಸಿ ಕಟ್ಟಿ ಘನತೋಟವನ್ನು ಮಾಡಿಕೊಂಡರೆ ಈ ಭೂಮಿಯು ಎಷ್ಟು ಸಂಭ್ರಮಕ್ಕೆ ಬರುವದು? ಮತ್ತು ಅಂಥ ತೋಟವನ್ನು ಮಾಡಿದರೆ ಪ್ರತಿಒಬ್ಬನಿಗೆ ವರ್ಷಕ್ಕೆ ನಾಲ್ಕಾರು ಸಹಸ್ರ ರೂಪಾಯದ ಉತ್ಪನ್ನಕ್ಕೆ ಕಡಿಮೆ ಇಲ್ಲ. ಇಂಥ ತೋಟಗಳನ್ನು ಮಾಡಿಕೊಳ್ಳಲಾರದೆ ಅಜ್ಞಾನದಿಂದ ದರಿದ್ರರಾಗಿ ಕೆಲವರಿರುವರು ಮತ್ತು ಕೆಲವು ಸಂಶಯದ ಆಲೋಚನೆಗಳನ್ನು ಕಲ್ಪಿಸಿಕೊಂಡು ತೋಟವನ್ನ ಮಾಡದೆ ಬಿಟ್ಟವರು ಕೆಲವರು ಉಂಟು ಆದರೆ ಅಂಥವರ ವಿಪರೀತ ಬುದ್ಧಿಯ ಸಂಶಯಗಳಲ್ಲಿ ಕೆಲವನ್ನು ಇಲ್ಲಿ ಹೇಳುತ್ತೇನೆ.

ಹಳ್ಳದ ಕಡೆಯ ಭೂಮಿಯು ತಗ್ಗಾಗಿದ್ದು ಮೇಲುಗಡೆಯ ಹೊಲದ ಭೂಮಿ ಎಲ್ಲ ಎತ್ತರವಾಗಿರುವದರಿಂದ ಹಳ್ಳದ ದಂಡೆಯಲ್ಲಿ ಭಾವಿಯನ್ನು ತೆಗಿಸಿದರೆ ಎತ್ತರ ಭೂಮಿಗೆ ನೀರು ಏರುವದಿಲ್ಲವೆಂಬ ಸಂಶಯ ಒಂದು. ಮತ್ತು ಎತ್ತರ ಭೂಮಿಯಲ್ಲಿ ಬಾವಿಯನ್ನು ಕಡಿಸಿದರೆ ಸಮೀಪದಲ್ಲಿ ನೀರು ಬೀಳುವದಿಲ್ಲವೆಂಬುವದು ಎರಡನೆಯದು. ಊರಿಗೆ ದೂರವಾಗಿ ಮತ್ತು ಸಮೀಪವಾಗಿ ತೋಟಗಳನ್ನು ಮಾಡಿದರೆ ಸಮೀಪದ ತೋಟಗಳಿಗೆ ಹಗಲೂ ರಾತ್ರೀ ದನಗಳ ಉಪದ್ರವು. ಮತ್ತು ದೂರಿನ ತೋಟಗಳಿಗೆ ರಾತ್ರಿಯ ಕಾಲದಲ್ಲಿ ಕಳ್ಳರ ಭಯವು. ಈ ರೀತಿಯಿಂದ ಹಗಲು ರಾತ್ರಿ ಕಾಯುವದಕ್ಕೆ ಕಷ್ಟವಾಗುತ್ತದೆ ಎಂಬುವದು ಮೂರನೆಯದು. ಮತ್ತು ತೋಟಗಳನ್ನು ಮಾಡಿದರೆ ಆ ಭೂಮಿಯ ಉತ್ಪನ್ನವು ವಿಶೇಷವಾಗಲಾರಂಭಿಸಿದರೆ ಆ ಭೂಮಿಗೆ ಸರಕಾರದವರು ಹೆಚ್ಚು ತೆರಿಗೆಯನ್ನು ತೆಗೆದುಕೊಂಡಾರು ಎಂಬುವದು ನಾಲ್ಕನೆಯದು ಇಂಥ ವಿಪರೀತ ಕಲ್ಪನೆಗಳು ಇನ್ನೂ ಅನೇಕ ಉಂಟು. ಆದರೆ ಈ ಸಂಕಲ್ಪ ಪ್ರಾಣಿಗಳು ದೂರದ ಅಂದೇಶವನ್ನು ಮನದಲ್ಲಿ ಊಹಿಸಿ ಮಾಡಿ ಉಣ್ಣಲಾರದೆ ಯಥೇಷ್ಟವಾಗಿ ನೀರು ಇದ್ದು ಸಕಲ ಪದಾರ್ಥಾದಿಗಳನ್ನು ಬೆಳೆಯುವಂಥ ಭೂಮಿ ಇದ್ದರೂ ಕೃಷಿಜ್ಞಾನ ಪರಿಣತರಿಲ್ಲದ ಕಾರಣ

ದರಿದ್ರರಾಗಿ ಅರಗಾಲ ಬರಕಾಲಗಳಲ್ಲಿ ಮಾಡಿಕೊಂಡು ಉಣ್ಣುವ ಬುದ್ಧಿ ಹುಟ್ಟದೆ ಪಶುಗಳಂತೆ ಜ್ಞಾನಶೂನ್ಯರಾಗಿ ಶುನಿ ಸೂಕರ ಮಾರ್ಜಾಲ ಗಾರ್ದಭಾದಿ ಪ್ರಾಣಿಗಳಂತೆ ಉಣ್ಣದ ಆಹಾರಗಳನ್ನು ಉಂಡು ಸತ್ತುಹೋಗುವರು

ಊರಿಗೆ ಸಮೀಪವಾಗಿ ಅಥವಾ ದೂರವಾಗಿ ಇರುವ ತೋಟಗಳನ್ನು ಕಾಯುವದಕ್ಕೆ ಭಯಪಡುತ್ತಾರೆ. ಯಾತಕ್ಕೆಂದರೆ 'ಊರ ಮುಂದಿನ ಹೊಲ ಮಾಡಬೇಡ, ಸಣ್ಣ ಮನುಷ್ಯನಲ್ಲಿ ಸಾಲ ತರಬೇಡ, ನಿಜಪ್ರಿಯಳಲ್ಲದ ಪಾತಿವ್ರತ್ಯ ಗುಣವಿಲ್ಲದ ಸತಿಯರಲ್ಲಿ ನಿಜವ ಹೇಳಬೇಡ, ದಾರಿಯಲ್ಲಿ ಹೋಗುತ್ತ ಗಜಲಿಕಡ್ಡಿಯ ಹಿಡಿಯಬೇಡ' ಎಂದು ಕೆಲವರು ಲೌಕಿಕ ನೀತಿಯನ್ನು ಹೇಳುತ್ತಾರೆ. ಅದರಲ್ಲಿ ಊರ ಮುಂದಿನ ಹೊಲಕ್ಕೆ ಮತ್ತು ಊರಿಗೆ ದೂರವಿರುವ ಹೊಲಕ್ಕೆ ಕಳ್ಳರ ಭಯವು ಮತ್ತು ತುಡುಗು ದನಗಳ ಉಪದ್ರವವೇ ಹೊರ್ತು ಮತ್ತೇನು ಇಲ್ಲ. ಇದಕ್ಕೆ ಬೇಲಿಯನ್ನು ಬಂದೋಬಸ್ತು ಮಾಡಿದರಾಯಿತು. ಮತ್ತು ಧರ್ಮ ಶಾಲಿಗಳು ಕಳ್ಳರು ಒಯ್ಯುದಕ್ಕೆ ಸಂಶಯಪಡುವದಿಲ್ಲ. ಹೇಗಂದರೆ ಧೂಪದ ಹೇರು ಕಳ್ಳರು ಒಯ್ದರೆ ದೇವರಿಗೆ ಮುಟ್ಟೀತೆಂಬ ಗಾದೆಯಂತೆ ಬೆಳೆದ ಫಲಪದಾರ್ಥಾದಿಗಳಲ್ಲಿ ಹತ್ತೆಂಟು ಒಯ್ದರೆ ಇವರ ಭಾಗ್ಯವೇನು ಕಡಿಮೆಯಾಗುವದಿಲ್ಲ ಇಂಥ ಉಪಯೋಗವಿಲ್ಲದ ವಿಪರೀತ ಸಂಶಯವನ್ನು ಮಾಡಿಕೊಳ್ಳುವದನ್ನು ಬಿಟ್ಟರೆ ತಿರುಕರಿಗೆ ಅಂಜಿ ಹಬ್ಬವನ್ನು ಬಿಟ್ಟಂತೆ ಆಗುವದು ಕಳ್ಳರಿಗಂಜಿ ಬೆಳೆ ಮಾಡಿಕೊಂಬುವದನ್ನು ಬಿಟ್ಟರೆ ತನಗೇ ಕೇಡು ಒಯ್ದರೆ ಒಯ್ಯಲಿ ಎಂದು ಮಾಡಿದರೆ ತನಗೆ ಕೇಡಿಲ್ಲವು. ಹೇಗೆಂದರೆ ಕರಿಕೆಯ ತಿಂದ ಕತ್ತೆ ಸತ್ತುಹೋಗುವದಲ್ಲದೆ ಕರಿಕೆಯು ಚಿಗಿತು ಮೊದಲಿನಂತೆ ಆಗುವದು. ಅದು ಕಾರಣ ಕನ್ನ ಕಳ್ಳ ಕೆಡುವನಲ್ಲದೆ ಮಾಡಿ ಉಣ್ಣುವ ಭಾಗ್ಯ ಕೆಡದು. ಇದನ್ನು ತಿಳಿದು ಮಾಡುವದನ್ನು ಬಿಡಲಾಗದು.

ಜಗದ್ರಕ್ಷಕನಾದ ಪರಮೇಶ್ವರನು ಈ ಜನರ ರಕ್ಷಣಾರ್ಥವಾಗಿ ಅಲ್ಲಲ್ಲಿಗೆ ಯಾವತ್ತು ಭೂಮಿಯಲ್ಲಿ ಉಂಟುಮಾಡಿದ ಹಳ್ಳಗಳನ್ನು ಅವುಗಳಲ್ಲಿ ಹರಿಯುವ ನಿರ್ಮಲವಾದ ನೀರಿನ ಪ್ರವಾಹವನ್ನು ವ್ಯರ್ಥವಾಗಿ ಕಳೆದುಬಿಟ್ಟು ತಮ್ಮ ತಮ್ಮ ಹೊಲಗಳು ಉತ್ತಮ ಭೂಮಿಯಾಗಿದ್ದರೂ ಹಳ್ಳದ ದಂಡೆಯಲ್ಲಿ ಬಾವಿಯನ್ನು ಕಡಿಸಿದರೆ ಉಸುಕು ಬೀಳುವದು, ಹಾಗು ದರಿಯು ಗಟ್ಟಿ ಹೊರಡುವದಿಲ್ಲವೆಂದು ಕಲ್ಪಿಸಿ, ಯುಕ್ತಿಯಿಲ್ಲದೆ ಕೃಷಿಜ್ಞಾನ ಹೀನರಾಗಿ ತಮ್ಮ ಸೌಖ್ಯವನ್ನು ಕಡಿಮೆಮಾಡಿಕೊಳ್ಳುವರು.

ಇಂಥ ತೊಂದರೆಗಳು ಪರಿಹಾರವಾಗುವಂಥ ಯುಕ್ತಿಗಳನ್ನು ಬಹು ತರದ ನೀತಿಗಳನ್ನು ಕೃಷಿಜ್ಞಾನ ವಿಷಯವಾಗಿ ಅನಂತರೀತಿಯಿಂದ ಸರ್ವರಿಗೂ

ಬೋಧೆಯಾಗುವ ಹಾಗೆ ಒಂದೊಂದು ಮಾತನ್ನು ಹತ್ತತ್ತು ವೇಳೆಯಾದರೂ ಬೇಸರವಿಲ್ಲದೆ ಈ ಗ್ರಂಥದಲ್ಲಿ ಬರೆದು ತಿಳುಹಿಸಿದ್ದೇನೆ. ಓದುವವರು ಮಾತ್ರ ಬೇಸರಪಡಬಾರದು. ಆದರೆ ಈ ಪ್ರಕರಣದಲ್ಲಿ ಮಾತ್ರ ಹಳ್ಳದ ದಂಡೆಯಲ್ಲಿ ಮತ್ತು ತೋಟದ ಮಧ್ಯದಲ್ಲಿ ಬಾವಿಯನ್ನು ತೆಗಿಸುವದನ್ನು ಮೊಟ್ಟೆಯ ಬಾರಿಯನ್ನು ಕಟ್ಟಿಸುವದನ್ನು ಹೊಲದ ಎತ್ತರ ಭೂಮಿಗೆ ನೀರು ಏರುವ ಉಪಾಯಗಳನ್ನು ಹಾಗು ದರಿಯು ಗಟ್ಟಿ ಹೊರಡದ ಸ್ಥಲವಾದರೆ ಅಂಥ ಬಾವಿಗಳದ್ದಲ್ಲಿ ಕಟ್ಟಿಗೆಗಳ ಸಹಾಯದಿಂದ ಬಾರಿಯನ್ನು ಮಾಡಿಕೊಳ್ಳುವ ಸುಲಭವಾದ ಯುಕ್ತಿಗಳನ್ನು ಹೇಳಿದ್ದೇನೆ. ಮತ್ತು ಎತ್ತರ ಭೂಮಿಗೆ ನೀರು ಏರುವ ತೂಕವನ್ನು ನೋಡಿ ಎತ್ತರವಾಗಿ ಬಾರಿಯನ್ನು ಕಟ್ಟಿಸಿ ಒಂದು ಕಡೆಯಲ್ಲಿ ಮೇಲುಗಾವಲಿಯ ಒಡ್ಡನ್ನು ಎತ್ತರ ಭೂಮಿಯ ವರೆಗೂ ನೀರು ಸರಳವಾಗಿ ನಡೆಯುವ ತೂಕಕ್ಕೆ ಸರಿಯಾಗಿ ಮಾಡಿಸಿದರೆ ಅದೇ ಕಾವಲಿಯಿಂದ ಯಾವತ್ತು ಹೊಲವೆಲ್ಲ ನೀರು ಏರುವದು ಈ ಪ್ರಕಾರ ಮಾಡುವದಕ್ಕೆ ದ್ರವ್ಯವೂ ಶ್ರಮವೂ ಬಹಳ ಬೇಕಾಗುವದಿಲ್ಲ ಇದರ ವಿಷಯದಲ್ಲಿ ಹಿಂದೆ ಇದೇ ಪ್ರಕರಣದಲ್ಲಿ ಚಿತ್ರ ಸಹಿತ ವಿಸ್ತಾರವಾಗಿ ಹೇಳಿಯದೆ. ಮತ್ತು ಉಸುಕು ನೆಲದಲ್ಲಿ ದರಿಯು ನಿಲ್ಲದಂಥ ಯಾವತ್ತು ಭೂಮಿಗಳಲ್ಲಿಯೂ ಕಟ್ಟಿಗೆಯ ಸಹಾಯದಿಂದ ಬಾವಿಯನ್ನು ಮಾಡಿಕೊಳ್ಳಬೇಕು.

ಲೋಕೋಪಕಾರವಾದ ಯಾವತ್ತು ಸುಲಭವಾದ ನೀತಿಯನ್ನು ಪ್ರಕಟಿಸುವ ಈ ಕೃಷಿಜ್ಞಾನವನ್ನು ಸರ್ವರೂ ಲಕ್ಷಕೊಟ್ಟು ಗ್ರಹಿಸಿ ಇದರಿಂದ ಭೂಮಿಯಲ್ಲಿ ಹುಟ್ಟಿ ಬೆಳೆಯುವ ಸರ್ವ ಪದಾರ್ಥ ಸಾಧಕ ಬುದ್ಧಿಯನ್ನು ಊಹಿಸಿ ಆದರಂತೆ ಸರ್ವ ಪ್ರಯತ್ನಗಳನ್ನು ಯತ್ನಿಸಿದರೆ ಮಹದೈಶ್ವರ್ಯವನ್ನು ಹೊಂದಿ ಸುಖಿಗಳಾಗಬಹುದು.

ತೋಟವನ್ನು ಮಾಡುವವರು ಮೊದಲು ಬೇಲಿಯನ್ನು ಬಂದೋಬಸ್ತು ಮಾಡಬೇಕು. ಮೂರು ನಾಲ್ಕು ವರ್ಷ ಸ್ವಲ್ಪ ಜಾಗ್ರತೆಯಿಂದ ಮೆಹನತು ಮಾಡಿದರೆ ಮುಂದೆ ಅನಂತ ಕಾಲದ ವರೆಗೆ ಆ ಬೇಲಿಯನ್ನು ಚಿಂತೆ ಇಲ್ಲದ ಹಾಗೆ ಮಾಡಿಕೊಳ್ಳಬೇಕು. ಇದಲ್ಲದೆ ತೋಟವನ್ನು ಮಾಡುವವರು ಕಿರಿದೋಟವನ್ನು ಮಾಡಲಾಗದು ಅದರಿಂದ ಆಳು ದಂಡವಾಗುವದು. ಸ್ರಾಪ್ತಿಯೂ ಕಣ್ಣಿಗೆ ಕಾಣಿಸುವದಿಲ್ಲ. ವಿಶಾಲವಾದ ಭೂಮಿಯಲ್ಲಿ ತೋಟವನ್ನು ಮಾಡಿದರ ಸಕಲ ಸಂಭ್ರಮವನ್ನು ಕಾಣಬಹುದು. ಮತ್ತು ದ್ರವ್ಯದ ಸ್ರಾಪ್ತಿಯಾದರೂ ವಿಶೇಷವಾಗುವದು.

# ೧೦ ನೇ ಪ್ರಕರಣವು.

## ಕೃಷಿಕಾರ್ಯಗಳನ್ನು ವಿಶ್ವಾಸಪೂರ್ವಕವಾಗಿ ಮಾಡುವದು.

ಕೃಷಿಕ ಜನರು ಯಾವತ್ತರಿಗೂ ಮುಖ್ಯವಾದದ್ದೇ ತೋಟದ ವ್ಯವಸಾಯವು. ಆದುದರಿಂದ ಈ ಪ್ರಕಾರವಾಗಿ ಒಡ್ಡುಗಳನ್ನು ಹಾಕುವ ಯುಕ್ತಿಗಳನ್ನು ಗೊಬ್ಬರದ ಉಪಯೋಗವನ್ನು ಮತ್ತು ಬಾವಿಯನ್ನು ತೆಗಿಸುವದನ್ನು ಬಾವಿಗಳನ್ನು ಕಟ್ಟುವ ಯೋಜನೆಗಳನ್ನು ನೀರಿನ ಪರೀಕ್ಷೆಯನ್ನು ಮತ್ತು ಸಕಲ ಧಾನ್ಯಾದಿ ಪದಾರ್ಥಗಳನ್ನು ಬಿತ್ತಿ ಬೆಳಿಯುವದನ್ನು ಜನರ ಕಲ್ಯಾಣಾರ್ಥವಾಗಿ ಹಿಂದೆ ವಿಸ್ತಾರವಾಗಿ ಹೇಳಿದ್ದೇನೆ

ಮತ್ತು ಕೃಷಿಜ್ಞಾನಾಪೇಕ್ಷಿತರಾದ ಕುಶಲಮತಿಗಳು ಈ ಸಕಲ ಯುಕ್ತಿಗಳನ್ನು ಓದಿನೋಡಿ ಅಥವಾ ಕರ್ಣಮುಖದಲ್ಲಿ ಚನ್ನಾಗಿ ಕೇಳಿ, ಅನೇಕ ಪ್ರಕಾರವಾಗಿ ಊಹಿಸಿ ತಿಳಿಯತಕ್ಕದ್ದು ಅದು ಹೇಗೆಂದರೆ ತಾಳಮರವನ್ನು ಏರುವ ಮನುಷ್ಯನನ್ನು ಎಲ್ಲಿಯು ವರೆಗೂ ಎತ್ತಬಹುದು? ಅದರೊಳಗೆ ಕೆಳಗ ಇದ್ದವನನ್ನು ಕೈಯ್ಯಿಂದ ಮೇಲಕ್ಕೆ ಎತ್ತಿ ಹಿಡಿದು ಆ ಗಿಡವನ್ನು ಏರುವದಕ್ಕೆ ತಾನು ಆಶ್ರಯನಾಗಿ ಕೈಯ್ಯು ನಿಲುಕುವ ವರೆಗೂ ಎತ್ತುತ್ತಾನೆ. ಮತ್ತು ಸ್ವಲ್ಪು ದೂರ ಏರುವ ವರೆಗೂ ಕೆಳಗೆ ನಿಂತು ಬಾಯಿಂದ ಯುಕ್ತಿಗಳನ್ನು ಹೇಳುತ್ತಿರುವಲ್ಲಿ ಆ ಮರವನ್ನು ಏರುವವನು ತಾನೇ ಊಹಿಸಿ ಯುಕ್ತಿಯಿಂದ ಏರಿದಲ್ಲಿ ಆ ಗಿಡದ ಫಲವನ್ನು ಪಡೆದುಕೊಳ್ಳುವನು. ಅದರಂತೆ ಇಲ್ಲಿ ಹೇಳಿರುವ ಸಕಲ ಯುಕ್ತಿಗಳನ್ನು ಕೇಳಿದಾಗಲೆ ತಾನು ಜಾಗ್ರತೆಯಿಂದ ಊಹಿಸಿ ಈ ಕೃಷಿಕೃತ್ಯದ ಸಕಲ ಮರ್ಮವನ್ನು ತಿಳಿದು ಅನೇಕ ಪ್ರಕಾರದ ಯುಕ್ತಿಯಿಂದ ಕೃಷಿಜ್ಞಾನ ಪರಿಣತನಾಗಬೇಕು.

ಇತರ ದೇಶನಿವಾಸಿಗಳಲ್ಲಿ ಕೆಲ ಕೆಲವರು ಅನೇಕ ಪ್ರಕಾರದ ಯುಕ್ತಿಯಿಂದ ಬಹು ಬುದ್ಧಿಶಾಲಿಗಳಾದ ಕೃಷಿಕರು ವಿಧ ವಿಧದ ಪೈರುಗಳನ್ನು ಫಲಪದಾರ್ಥಾದಿಗಳನ್ನು ಸಕಲ ರಸ ರಸಾಯನಾದಿಯಾದ ಔಷಧದ ಗಿಡಮೂಲಿಕೆಗಳನ್ನು ಬಿತ್ತಿ ಬೆಳೆಯುತ್ತಿರುವ ಪದಾರ್ಥವಿಜ್ಞಾನವನ್ನು ತಮ್ಮ ಬುದ್ಧಿಶಕ್ತಿಯಿಂದ ಗ್ರಹಿಸುವವರಾಗಿ ಮತ್ತು ಅನೇಕ ಪ್ರಕಾರವಾದ ತಮ್ಮ ಸ್ವಂತ ಭೂಮಿಗಳನ್ನು ಹಸನ ಮಾಡಿ ಒಡ್ಡು ವಾರಿ ತೋಟ ಬಾವಿಗಳನ್ನು ಮಾಡಿ ಸಕಲೈಶ್ವರ್ಯಗಳನ್ನು ಪಡೆದು ಸುಖಿಸುವರು ಯಾತಕ್ಕೆಂದರೆ ಭೂಮಿಯಿಂದ ಹುಟ್ಟುವ ಸಕಲ ಪದಾರ್ಥಗಳಿಗಾದರೂ ಕ್ರಯ ಉಂಟಾದ ಪ್ರಯುಕ್ತ ಸರ್ವತ್ರಾಣಿಯಾದ ಪರಮೇಶ್ವರನು ತನ್ನ ಅಪಾರ ಮಹಿಮೆಯ ಸಾಮರ್ಥ್ಯದಿಂದ

ಸಕಲ ದ್ರವ್ಯವನ್ನು ಭೂಮಿಯ ಮರೆಯಲ್ಲಿ ಅಡಗಿಸಿದ್ದಾನೆ ಎಂದು ಹಿಂದೆ ಹೇಳಿಯದೆ ಇದಲ್ಲದೆ ದೇವರ ಮಹಿಮೆಯಿಂದ ನಿರ್ಮಿತವಾದ ಈ ಭೂಮಿಯ ವರ್ಣನೆಯನ್ನು ವರ್ಣಿಸುವದು ಅಸಾಧ್ಯವಾಗಿದೆ ಹೇಗಂದರೆ ಈ ಭೂಮಿಯಿಂದ ಸಕಲ ವೃಕ್ಷಗಳನ್ನು ಬೆಳೆಯ ಮಾಡಿರುವದು ಅತ್ಯಾಶ್ಚರ್ಯವಾದದ್ದಾಗಿದೆ. ಒಂದು ಚಿಕ್ಕದಾದ ಆಲದ ಬೀಜದಿಂದ ಅತ್ಯದ್ಭುತವಾದ ವಿಶಾಲೋನ್ನತವಾದ ಮರವಾಗಿರುವದನ್ನು ಸರ್ವರೂ ನೋಡುತ್ತಿರುವರು ಈ ಪ್ರಕಾರವಾಗಿ ಮಿತಿ ಇಲ್ಲದ ವೃಕ್ಷಾದಿಗಳು ಮಹತ್ತರವಾಗಿ ಬೆಳೆದು ವಿಧವಿಧದ ವರ್ಣಾಕಾರಂಗಳುಳ್ಳ ಎಲೆಗಳಿಂದಲೂ ಪುಷ್ಪಗಳಿಂದಲೂ ಫಲಗಳಿಂದಲೂ ವಿಚಿತ್ರ ರಂಜನೆಯಾಗಿ ಹೀಗೆ ಕಾಣಿಸುವ ಸಕಲ ವೃಕ್ಷಂಗಳು ಬೀಜಗಳಲ್ಲಿಯೂ ಭೂಗರ್ಭದಲ್ಲಿಯೂ ಇಲ್ಲದೆ ಮಣ್ಣು ನೀರುಗಳೆರಡರ ಸಾರವೇ ಗಟ್ಟಿಗೊಂಡು ಬೀಜದ ಮರೆಯಿಂದ ಜಗದೀಶ್ವರನ ಆಜ್ಞೆಯ ಪ್ರಕಾರ ಮೊಳಕೆಯಾಗಿ ಎಲೆಯಾಗಿ ಗಿಡವಾಗಿ ಮರವಾಗಿ ಪುಷ್ಪವಾಗಿ ಫಲವಾಗಿ ಆಕಾಶವನ್ನು ತುಂಬಿಕೊಂಡಿರುವ ಹಾಗೆ ವಿಶಾಲೋನ್ನತವಾಗಿ ಜನರ ದೃಷ್ಟಿಗೆ ಕಾಣಬರುತ್ತವೆ ಇಂಥ ಆಶ್ಚರ್ಯಕರವಾದ ಜಗತ್ ಸೃಷ್ಟಿಯನ್ನು ಮಾಡಿದ ಸರ್ವಜ್ಞಮೂರ್ತಿಯಾದ ಪರಮೇಶ್ವರನು ಈ ಭೂಮಿಯನ್ನು ದ್ರವ್ಯಮಯವಾಗಿ ನಿರ್ಮಿಸಿರುವನು ಅದರಿಂದ ಇದಕ್ಕೆ ರತ್ನಗರ್ಭೆ ಎಂಬ ನಾಮವು ಸಾರ್ಥಕವಾಗಿದೆ ಆದರೆ ಪರಮೇಶ್ವರನು ಮನುಷ್ಯರುಗಳಿಗೋಸ್ಕರ ಈ ದಿವ್ಯ ಭೂಮಿಯನ್ನು ನಿರ್ಮಿಸಿ ಸಕಲ ಪದಾರ್ಥಾದಿಗಳನ್ನು ಬೆಳೆಯುವ ಹಾಗೆ ಮಾಡಿ ಇವರ ಹೃದಯದಲ್ಲಿ ಜ್ಞಾನವನ್ನು ಬುದ್ಧಿಯನ್ನು ಉಂಟುಮಾಡಿರುವದರಿಂದ ಈ ಭೂಮಿಯಲ್ಲಿ ಬೀಜವನ್ನು ಬಿತ್ತಿ ಅದರ ಫಲವನ್ನು ಪಡೆಯತಕ್ಕಂಥ ದಿವ್ಯ ಬೋಧನೆಯಾದ ಈ ಕೃಷಿಜ್ಞಾನದಲ್ಲಿ ಪರಿಣತರಾದರೆ ಇದನ್ನು ಬಲ್ಲವರಾದ ಜನರುಗಳಿಗೆ ಭೂಮಿಯ ವ್ಯವಸಾಯದಲ್ಲಿ ತೋಟಕ್ಕೆ ಸರಿಯಾಗಿ ಫಲವನ್ನು ಕೊಡವಂಥಾದ್ದು ಮತ್ತಾವದೂ ಇಲ್ಲವಾದ ಕಾರಣ ತೋಟದ ಕೃತ್ಯವೇ ಮುಖ್ಯವಾದದ್ದು ತೋಟಗಳನ್ನು ಮಾಡುವವರು ಧರ್ಮಶಾಲಿಗಳಾಗಿದ್ದಾದರೆ ಅಂಥವರುಗಳಿಗೆ ತಮ್ಮ ತಮ್ಮ ಸುನಿಷ್ಠೆಯಿಂದ ಸಕಲೈಶ್ವರ್ಯವು ವರ್ಧನವಾಗುತ್ತಿಹುದು. "ಉದ್ಯೋಗಂ ಪುರುಷಲಕ್ಷಣಂ ಧರ್ಮಂ ವರ್ಧತಿ ವರ್ಧತಿ" ಎಂದ ಹಾಗೆ ಧರ್ಮದಿಂದ ಸಕಲ ಪದಾರ್ಥಂಗಳು ಬೆಳೆಯುತ್ತ ಸಕಲ ಸಂಪತ್ತು ಅಭಿವೃದ್ಧಿಹೊಂದುವದು.

ಅನಿಷ್ಟ ಕರ್ಮಿಗಳು ತಮ್ಮ ಮನದಲ್ಲಿ ಅನಿಷ್ಟ ಚಿಂತನೆಯನ್ನು ಕಲ್ಪಿಸಿ ಸಂಶಯಪಡುತ್ತಿಹರು. ಹೇಗಂದರ ಮುಂದೆ ಮಳೆಯಾಗುವದೋ ಇಲ್ಲವೋ ಅಥವಾ ಬಹಳ ದಿವಸವೆಂದರೆ ನಾಲ್ಕಾರು ವರ್ಷಕ್ಕೆ ಅಥವಾ ಹತ್ತೆಂಟು ವರ್ಷಕ್ಕೆ ಫಲವಾಗುವಂಥ ಅಡಿಕೆ ತೆಂಗು ಮಾವು ಬಾಳೆ ಮೊದಲಾದ ಫಲ

ವೃಕ್ಷಗಳನ್ನು ಬೆಳಸಬೇಕಾದರೆ ಅಲ್ಲಿಯು ವರೆಗೂ ಬದಕುವವರಾರು, ಆ ಫಲ ವೃಕ್ಷಗಳನ್ನು ಬೆಳಿಸಿ ನಾವೇ ಆ ಫಲಗಳನ್ನು ಉಂಬುವೆವೆಂಬುವದಕ್ಕೆ ಭರವಸವೇನು, ಇದಲ್ಲದೆ ತೋಟವನ್ನು ಬಾವಿಯನ್ನು ಮಾಡಬೇಕಾದರೆ ಅದು ಸಿದ್ಧಿಗೆ ಹೋಗುವ ವರೆಗೂ ನಾವು ಜೀವದಿಂದಿರುವದಕ್ಕೆ ನಮ್ಮ ಆಯುಃಷ್ಯವು ನಮ್ಮ ಸ್ವಾಧೀನವದೆಯೋ ಇಷ್ಟು ಶ್ರಮವನ್ನು ಮತ್ತು ಸಂಕಟವನ್ನು ಹೊಂದುವದು ಯಾಕೆ, ಎಂದು ದುರ್ವೈರಾಗ್ಯದಿಂದ ಸುಮ್ಮನೆ ಇದ್ದಕ್ಕಿದ್ದ ಹಾಗೆ ಬೈಲು ಭೂಮಿಯಲ್ಲಿ ಹುಲ್ಲು ಧಾನ್ಯ ಮುಂತಾದ ಕೆಲವು ಬೀಜಗಳನ್ನು ಹರಿಗಿ ಬಿತ್ತಿದಲ್ಲಿ, ಆದರ ಆಗಲಿ, ಹೋದರೆ ಹೋಗಲಿ, ಎಂಬ ಮನೋಭಾವವನ್ನು ತಾಳಿ, ಸರ್ವ ಕೆಲಸಗಳಲ್ಲಿ ಸಂಶಯ ಮುಂದುಗೊಂಡಿರುವದರಿಂದ "ಯಥಾ ಭಾವಸ್ತಥಾ ಸಿದ್ಧಿಃ" ಎಂದ ಹಾಗೆ ಅವರವರ ಭಾವದಂತೆ ದೇವರಾದರೂ ಆವರಿಗೆ ಮಳೆ ಬೆಳೆಗಳನ್ನು ಕೊರತೆಯ ಮಾಡಿ ಕೊಡುತ್ತಿಹನಾಗಿ, ಯಾರಾದರೂ ಹೊಲವು ಬೆಳೆಯುವದೋ ಇಲ್ಲವೋ, ಮಳೆಯು ಆಗುವದೋ ಇಲ್ಲವೋ, ಎಂಬ ಸಂಶಯವನ್ನು ಮನದಲ್ಲಿ ಹಿಡಿಯದೆ ಸಮಸ್ತರು ಮಹತ್ತರವಾದ ಘನ ಕಾರ್ಯಂಗಳಿಗೆ ಆರಂಭಿಸಬೇಕಾದರೆ ಬುದ್ಧಿಶಾಲಿಗಳಾದ ಕುಶಲಮತಿಯುತರಾದ ಸರ್ವಜ್ಞಸಮರ್ಥರಾದ ತನ್ನ ಹಿತಕಾರಿಗಳಾದ ಅಥವಾ ಲೋಕೋಪಕಾರಿಗಳಾದ ಸರ್ವ ಜೀವದಯಾಪಾರಿಗಳಾದ ಸತ್ಯಪಾಸಮುದ್ರೋಪಮಾನರಾದ ದಯಾರಸಭರಿತಕಾರುಣ್ಯಮೂರ್ತಿಗಳಾದ ಗುರುಹಿರಿಯರಿಂದ ಆಲೋಚನೆಯನ್ನು ಕೇಳಿ ಅವರ ವಾಕ್ಯವನ್ನು ವಿಶ್ವಾಸಿಸಿ ಸಕಲಾರಂಭವನ್ನು ಪ್ರಾರಂಭಿಸಬೇಕು.

"ಆತ್ಮಬುದ್ಧಿ ಸುಖಶ್ಚೈವ । ಗುರುಬುದ್ದಿ ವಿಶೇಷತಃ ।
ಪರಬುದ್ಧಿ ವಿನಾಶಾಯ । ಸ್ತ್ರೀಬುದ್ಧಿ ಪ್ರಳಯಂಗತಃ ॥

ಇದರ ಸಾರಾಂಶವೇನಂದರೆ "ಆತ್ಮಬುದ್ಧಿ ಸುಖಶ್ಚೈವ" ಎಂಬಲ್ಲಿ ಜೀವಾತ್ಮನಿಗೂ ಆತ್ಮನೆಂಬರು, ಪರಮಾತ್ಮನಿಗೂ ಆತ್ಮನೆಂಬರು, ಅವುಗಳಲ್ಲಿ ಜೀವಾತ್ಮ ಮತ್ತು ಪರಮಾತ್ಮರುಗಳಿಗೆ ಭೇದವೇನಂದರೆ ಅನ್ಯರಿಗೆ ಘಾತವಾಗಿ ತನಗೆ ಸುಖವಾಗಬೇಕೆಂಬ ಕಾರ್ಯಾಪೇಕ್ಷೆಯ ಬುದ್ಧಿಯನ್ನುಂಟುಮಾಡುವದೇ ಜೀವಾತ್ಮ ವರ್ತನೆಯು ಇದಲ್ಲದೆ ತನಗೂ ಪರರಿಗೂ ಸುಖವಾಗತಕ್ಕಂಥ ಕಾರ್ಯಾಪೇಕ್ಷೆಯ ಬುದ್ಧಿಯನ್ನುಂಟುಮಾಡುವದೇ ಪರಮಾತ್ಮ ವರ್ತನೆಯು. ಇವುಗಳಲ್ಲಿ ಜೀವಾತ್ಮ ಬುದ್ಧಿಯನ್ನು ಲಕ್ಷಕ್ಕೆ ತಾರದೆ ಅದನ್ನು ನಷ್ಟಮಾಡಬೇಕು. ಈ ಜೀವನಬುದ್ಧಿಯಿಂದ ತನಗೆ ಕೇಡಾಗುವದಲ್ಲದೆ ಹಿತವಾಗಲರಿಯದು. ಇದರ ವಿಷಯದಲ್ಲಿ ಶೃತಿ ಸ್ಮೃತಿ ಪುರಾಣೇತಿಹಾಸಂಗಳಲ್ಲಿ ಅನ್ಯ ದ್ರವ್ಯಾಪಹರಣ ಅನ್ಯ ಸ್ತ್ರೀಕಾಂಕ್ಷೆ ಅನ್ಯಥಾ ಚಿಂತನೆ ಇವುಗಳಿಂದ ತಾವು ಸುಖಿಗಳಾಗಿರಬೇಕೆಂದು ಯತ್ನಿಸಿದ ಅನಂತಕೋಟಿ ಜನರು ಈ ಲೋಕದ

ಮತ್ತು ಪರಲೋಕದ ಸೌಖ್ಯವನ್ನು ಕೂಡಾ ಕಳೆದುಕೊಂಡು ತಾವು ಸದಾ ದುಃಖಿಗಳಾಗಿದ್ದು ಆ ದುಃಖವು ಜನ್ಮಜನ್ಮಾಂತರಕ್ಕೂ ಬಿಡದಾಗಿ ಭೋಗಿಸಿದ ಅನಂತ ಇತಿಹಾಸದ ದೃಷ್ಟಾಂತಗಳನ್ನು ಹೇಳಿರುವದಾಗಿ ಇಲ್ಲಿ ಸ್ವಲ್ಪ ಸೂಚಿಸುವೆನು ಏನಂದರೆ ಜಮದಗ್ನಿಯನ್ನು ಕೊಂದು ಅವನಲ್ಲಿರುವ ಕಾಮಧೇನುವನ್ನು ತೆಗೆದುಕೊಂಡು ಸ್ವೇಚ್ಛಾಪ್ರಕಾರ ಸುಖವನ್ನು ಭೋಗಿಸಬೇಕೆಂಬ ದುರಾಲೋಚನೆಯುಳ್ಳ ಜೀವನ ಬುದ್ಧಿಯಿಂದ ಕೆಟ್ಟು ಹೋದ ಕಾರ್ತವೀರ್ಯನೆಂಬ ರಾಜನು ಪರಶುರಾಮನ ಶಸ್ತ್ರಕ್ಕೆ ಈಡಾಗಿ ಆ ಪರಶುರಾಮನ ಕೈಯ್ಯಿಂದ ತನ್ನ ಕುಲಕೋಟಿ ಕ್ಷತ್ರಿಯರ ವಂಶವನ್ನು ನಾಶಪಡಿಸಿದನೆಂಬುದು ಜಗತ್ಪ್ರಸಿದ್ಧವಾಗಿದೆ ಇಂಥ ಅನರ್ಥಗಳನ್ನು ಭೋಗಿಸಿ ಜೀವನ ಬುದ್ಧಿಯಿಂದ ಕೆಟ್ಟು ಹೋದ ಅನಂತ ರಾಜರುಗಳ ಕಥೆಗಳು ಕೋಟ್ಯಾವಧಿಗಳುಂಟು. ಗ್ರಂಥಬಾಹುಲ್ಯವಾಗುವದೆಂದು ಸ್ವಲ್ಪದರಲ್ಲಿ ಇಲ್ಲಿ ಸೂಚಿಸಿದ್ದೇನೆ ಮತ್ತು ಹಿಂದಿನ ದೃಷ್ಟಾಂತಗಳಲ್ಲದೆ ಈಗಲಾದರೂ ಅನ್ಯರಿಗೆ ಘಾತ ಮಾಡಿ ತಾವು ಸುಖದಿಂದಿರಬೇಕೆಂದು ಯತ್ನಿಸುತ್ತಿರುವ ಜನರು ನಮ್ಮ ಕಣ್ಣೆದುರಿನಲ್ಲಿ ಸುಖವನ್ನು ಕಾಣದೆ ಕೈದು ಮೊದಲಾದ ದುಃಖಗಳನ್ನು ಅನುಭವಿಸುತ್ತಿರುವದನ್ನು ಎಲ್ಲರೂ ನೋಡುತ್ತಿರುವರು ಹೀಗೆ ಅವರವರ ದುರಾಲೋಚನೆಯಂತೆ ಜಗದೀಶ್ವರನು ಅವರವರಿಗೆ ತಕ್ಕ ಶಿಕ್ಷೆಯನ್ನು ಮಾಡುವನು. “ಅನ್ಯಥಾ ಚಿಂತಯೇತ್ಕಾರ್ಯಂ । ದ್ರವ್ಯಮನ್ಯತ್ರಚಿಂತಯೇತ್ ॥ ವಿಷಚೂರ್ಣ ಪ್ರಯೋಗೇನ । ವೇಶ್ಯಾಮಾತಾ ವಿನಶ್ಯತಿ” ಇದರ ಅರ್ಥ. ತನ್ನ ಮಗಳ ಸಂಗದಲ್ಲಿದ್ದ ಬ್ರಾಹ್ಮಣನಿಗೆ ಪುಷ್ಪದಲ್ಲಿ ವಿಷಚೂರ್ಣವನ್ನು ಸೇರಿಸಬೇಕೆಂದು ಕೊಳವೆಯಲ್ಲಿ ತುಂಬಿ ನಿದ್ರಾಸಮಯದಲ್ಲಿ ಅವನ ಪೃಷ್ಠದಲ್ಲಿಟ್ಟು ಊದಿ ಅವನನ್ನು ಕೊಂದು ತಾನು ಸುಖಿಯಾಗಿರಬೇಕೆಂದು ವೇಶ್ಯಾ ಸ್ತ್ರೀಯಳ ಮಾತೆಯು ಯತ್ನಿಸುವಲ್ಲಿ ಅವನ ಅಪಾನವಾಯುವಿನಿಂದ ವಿಷಚೂರ್ಣವು ಅವಳ ದೇಹದಲ್ಲಿ ಪ್ರಯೋಗವಾಗಿ ಅವಳೇ ಮರಣವನ್ನು ಹೊಂದಿದಳು ಅದು ಕಾರಣ ತನ್ನ ಸುಖದ ನಿಮಿತ್ಯವಾಗಿ ಅನ್ಯರಿಗೆ ಕೇಡಾಗತಕ್ಕಂಥ ಆಲೋಚನೆಯನ್ನು ಮಾಡುವದೇ ಜೀವಾತ್ಮಬುದ್ಧಿ ಎನಿಸುತ್ತದೆ ಅದಲ್ಲದೆ ತನ್ನೊಬ್ಬನ ಸುಖಕ್ಕೋಸ್ಕರ ತಾನೊಂದು ಘನಕಾರ್ಯವನ್ನು ಮಾಡಿದರೆ ಅದರಿಂದ ಅನಂತ ಪ್ರಾಣಿಗಳಿಗೆ ಹಿತವಾಗತಕ್ಕಂಥ ಬುದ್ಧಿ ಯಾವದದೆಯೋ ಆ ಬುದ್ಧಿಯೂ ಆತ್ಮಬುದ್ಧಿ ಎನಿಸುತ್ತದೆ. ಹೇಗೆಂದರೆ ನಮ್ಮ ರಾಜರು ಮಾಡಿಸಿದ ಲೋಹಮಾರ್ಗ ನೆಲಮಾರ್ಗ ಉಗೆಬಂಡಿ ಉಗೆ ಹಡಗಗಳು ಹೀಗೆ ವಿಚಿತ್ರತರವಾದ ಅನಂತ ಪ್ರಕಾರದ ಮಹತ್ಕಾರ್ಯಗಳನ್ನು ಮೊದಲು ತಮ್ಮ ಹಿತಕ್ಕಾಗಿ ಮಾಡಿಸಿದ್ದು ಈಗ ಲೋಕಹಿತವಾಗಿವೆ. ಇದರಂತೆ ಯಾರಾದರೂ ದೊಡ್ಡ ಬುದ್ಧಿಯುಳ್ಳವರಾಗಿ ತಮ್ಮ ಹಿತಕ್ಕೋಸ್ಕರ ಬಾವಿಯನ್ನು ತೆಗಿಸಿ ಸಂಭ್ರಮಯುಕ್ತವಾದ ಘನ ತೋಟಗಳನ್ನು ಮಾಡಿಸಿದರೆ, ಅದರಿಂದ ಬಹಳ ಪ್ರಾಣಿಗಳಿಗೂ ಬಹು ಪ್ರಕಾರದಿಂದ

ಹಿತವಾಗುತ್ತಿರುವದು. ಇಂಥ ಸುಖಮಯವಾದ ಆತ್ಮಬುದ್ಧಿಯೂ ಸುಖವೆಂದು ಹೇಳಲ್ಪಟ್ಟಿತು ಮತ್ತು ಆತ್ಮಜ್ಞಾನಿಗಳಾದ ಮಹಾಋಷಿಗಳು ಸ್ವಾತ್ಮಜ್ಞಾನದಿಂದ ಬ್ರಹ್ಮಾನಂದ ಸೌಖ್ಯವನ್ನು ಪಡೆದು ಶಿಷ್ಯ ಪ್ರಶಿಷ್ಯ ಪ್ರವಾಹಗಳಿಂದ ಸರ್ವಸಿದ್ಧ್ಯರ್ಥವಾಗಿ ಸಕಲ ವೇದಾರ್ಥವನ್ನು ಬೋಧಿಸಿ ಅನೇಕ ಗ್ರಂಥಾರ್ಥಗಳನ್ನು ನಿರ್ಮಿಸಿ ಸಕಲ ಇತಿಹಾಸಗಳ ದೃಷ್ಟಾಂತಗಳಿಂದ ಪುಣ್ಯದ ಬೆಳವಿಗೆಯನ್ನು ಹೆಚ್ಚಿಸಿ ಜಗದ್ಧಿತವನ್ನು ಮಾಡಿದರು

"ಗುರುಬುದ್ಧಿರ್ವಿಶೇಷತಃ" ಎಂಬಲ್ಲಿ ತನ್ನ ಹಿತದಲ್ಲಿ ಅತ್ಯಾಪೇಕ್ಷೆ ಇಲ್ಲದೆ ಯಾವಾಗಲೂ ಜಗದ್ಧಿತವಾಗಲೆಂಬ ಕಾಂಕ್ಷೆಯಿಂದ ಲೋಕ ಹಿತವಾದ ಲೋಕೋಪಕಾರಿಗಳಾಗಿ ಧನ-ಕನಕ ಪುತ್ರ-ಪೌತ್ರ-ವಸ್ತು-ವಾಹನಾದಿ ಸಕಲೈಶ್ವರ್ಯವನ್ನು ಯಾವತ್ತರಿಗೂ ತಮ್ಮ ಧ್ಯಾನ ಪೂಜಾ ನಮಸ್ಕಾರಾದಿಗಳ ಮುಖಾಂತರ ಭಕ್ತರಿಗೆ ಸಕಲ ಸಂಪತ್ಕರವಾಗಲೆಂದು ಅನಂತರೀತಿಯಿಂದ ಸೌಖ್ಯವನ್ನು ಕೊಡುವಂಥ ತಪೋನೈಷ್ಠಿಯುಳ್ಳ ಶಾಪಾನುಗ್ರಹ ಸಾಮರ್ಥ್ಯಯುತರಾದ ದಿವ್ಯಯೋಗಿಗಳೇ ಲೋಕೋಪಕಾರಿಗಳಾದುದರಿಂದ ಅವರೇ ಜಗದ್ಗುರುಗಳು ಹೇಗಂದರೆ "ಕ್ಷೇತ್ರಜ್ಞೋ ಜಂಗಮೋ ಗುರುಃ" ಎಂದುಂಟಾಗಿ ಮತ್ತು "ಜಂಗಮಂ ಜಂಗದಾರಾಧ್ಯಂ। ಜಂಗಮಂಚ ಜಗತ್ಪತಿಃ। ಜಂಗಮಂಚ ಜಗತ್ಪೂಜ್ಯಂ। ಜಗತ್ಪಾವನ ಜಂಗಮಃ" ಎಂದುಂಟಾಗಿ ಇಂತಪ್ಪ ಗುರುಸ್ವರೂಪಿಗಳಾದ ಶಿವನ ಸದ್ರೂಪ ಲೀಲಾಮೂರ್ತಿಗಳಾದ ಜ್ಞಾನಜಂಗಮವು ಹೇಳುವಂಥ ಬುದ್ಧಿಯು ವಿಶೇಷವೆಂದು ಹೇಳಲ್ಪಟ್ಟಿತ್ತು. ಅದಲ್ಲದೆ ಲೌಕಿಕರಲ್ಲಿಯಾದರೂ ಗುರುಹಿರಿಯರಂದುಂಟು ಅವರ ಪುಣ್ಯದಲ್ಲಿ ಏನೋ ಸ್ವಲ್ಪ ಕೊರತೆಯಾದುದರಿಂದ ಸಂಸಾರಿಗಳೆನಿಸಿದರು ಅವರಾದರೂ ಲೋಕ ಹಿತೋಪಕಾರಿಗಳಾದರೆ ಯತಿಗಳಿಗೆ ಸರಿ ಎನ್ನಬಹುದು. ಲೌಕಿಕರಲ್ಲಿಯು ಕೆಲವರು ಯತಿಗಳು ರಾಜರುಗಳು ಪುಣ್ಯಶಾಲಿಗಳೆಂದು ಬಹು ಜನರು ಸ್ತುತಿಸುವದುಂಟು ಇಂಥ ಪುಣ್ಯಶಾಲಿಗಳಾದ ಗುರುಹಿರಿಯರು ಹೇಳುವ ಬುದ್ಧಿಯು ಗುರುಬುದ್ಧಿ ಎನಿಸುತ್ತದೆ ಮತ್ತು ಗುರುಬುದ್ಧಿಯಿಂದ ನಿಜಮುಕ್ತಿಯನ್ನು ಹಡೆದವರಾರೆಂದಡೆ ಗುರುಭಕ್ತಯ್ಯ, ಗುರುಭಕ್ತಾಂಡಾರಿಯರು ಉರಿಲಿಂಗಪೆದ್ದಯ್ಯಗಳು ಮುಂತಾದ ಗುರುಭಕ್ತಿನಿಷ್ಠರು ಅದರಿಂದ "ಗುರುಬುದ್ಧಿರ್ವಿಶೇಷಿತಃ" ಎಂದೆನಿಸುತ್ತದೆ

"ಪರಬುದ್ಧಿರ್ವಿನಾಶಯ" ಎಂಬಲ್ಲಿ ಜೀವಸಬುದ್ಧಿಯುಳ್ಳ ಖಲ ಜನರು ಹೇಳುವ ಬುದ್ಧಿಯು ಕೇಳಿದವನನ್ನು ನಾಶಪಡಿಸುವದು. ಅದು ಕಾರಣ "ಪರಬುದ್ಧಿರ್ವಿನಾಶಾಯ" ಎಂದು ಹೇಳಬೇಕಾಯಿತು.

"ಸ್ತ್ರೀಬುದ್ಧಿ ಪ್ರಳಯಂಗತಃ" ಎಂಬಲ್ಲಿ "ಸ್ತ್ರೀಯಂಚ ಪಾಪಂಚ ನಕಿಂಚದೂರಂ" ಎಂಬ ಶಾಸ್ತ್ರ ಪ್ರಮಾಣ ಉಂಟು ಪಾಪವೇ ಒಂದು

ನಾದಂತೆ ಹಿಂದೆ ಅನಂತ ಜನ್ಮಾಂತರಗಳಲ್ಲಿಯು ಪಾಪವನ್ನೆಲ್ಲ ಕೂಡಿ ರಾಶಿ ಯಾಗಿ ಕರಗಿ ಎರಗಿ ಪುಥ್ಥಳಿಯ ಮಾಡಿ ಒಪ್ಪವಿಟ್ಟಂತೆ ವಿಲಾಸವುಯುವಾದ ಶೋಭೆಯನುಳ್ಳ ರೂಪದಿಂದ ರಂಜಿಸುತ್ತ ಮಲದಲ್ಲಿ ಕುಟಿಲ ಮಾತಿನಲ್ಲಿ ಪ್ರೇಮವುಳ್ಳವರಾಗಿ ಅಂತರಂಗದಲ್ಲಿ ತನ್ನ ಸುಖವೇ ಸುಖವಲ್ಲದೆ ಅನ್ಯ ಸುಖವನರಿಯದವರಾಗಿ, ಕೆಟ್ಟ ಕೋತಿ ವನವನೆಲ್ಲ ಕೆಡಿಸಿತೆಂಬ ಗಾದೆಯಂತೆ ತಾವು ದುರ್ಮಾರ್ಗಿಗಳಾದುದರಿಂದ ವಿಷ ಮಿಶ್ರ ಭಕ್ಷಪಾಯಸದಂತೆ ಮೇಲೆ ರಂಜನೆಯಾಗಿ ವಿನಯೋಪಚಾರ ದೈನ್ಯಾದಿಗಳಿಂದ ಒಲಿಸಿ ಪುರುಷರನು ವಶ ಮಾಡಿಕೊಂಡು ತನ್ನ ಅಜ್ಞಾನ ಮಾಯಾ ಸಾಮರ್ಥ್ಯದಿಂದ ಧರ್ಮಾಧರ್ಮಂ ಗಳ ಮರಿಸಿ ತನ್ನ ಹಿತಕ್ಕಾಗಿ ಪುರುಷನಿಗೆ ಮುಂದಾಗ ವ ದುಃಖವನರಿಯದ ಹೇಳುವ ಬುದ್ಧಿಯೇ ಪ್ರಳಯವೆನಿಸುವದು ಹೇಗೆಂದರೆ, "ನೋಡಿದರೆ ಮನವ ಮಾತಾಡಿದರೆ ಧನವನೊಡಗೂಡಿದರೆ ಪ್ರಾಣಗಳ ಸೆಳೆದುಕೊಂಬುವದು ಮಾಡ ವಾರದನೆ ಮಾಡಿಸಿ ಕಡೆಗೆ ಯಮಭಟರ ತಾಡನೆಗೆ ಹಿಡಕೊಟ್ಟು ಕೊಲ್ಲಿಪು ದರಿಂದ ಧರಿಯೊಳೀ ಹೆಣ್ಣು ರಾಕ್ಷಸಿಯಲ್ಲವಿನ್ನಂಟೆ" ಎಂದು ಸರ್ಪಭೂಷಣ ಕವಿಗಳು ಕೈವಲ್ಯ ಕಲ್ಪವಲ್ಲರಿ ಗ್ರಂಥವಲ್ಲಿ ಹೇಳಿದ್ದಾರೆ ಈ ಮಾತು ನಿಜವೇ ಸರಿ. ಮತ್ತು ಸ್ತ್ರೀಣಾಂ ಪ್ರತ್ಯಕ್ಷ ರಾಕ್ಷಸೀ ಎಂದುಂಟಾಗಿ ಇಂತಪ್ಪ ಪಾಪರೂ ಪಗಳಾದ ಜೀವನ ಬುದ್ಧಿಯುಳ್ಳ ಪಾಪಿಗಳಾದ ಮಾಯಾ ಸ್ತ್ರೀಯರ ಬುದ್ಧಿ ಯನ್ನು ಕೇಳಿದವನಿಗೆ ಈ ಲೋಕ ಪರಲೋಕದ ಸುಖವು ತಪ್ಪಿ ದುರ್ಗ ತಿಗಿಳಿವನಾದುದರಿಂದ "ಸ್ತ್ರೀಬುದ್ಧಿಃ ಪ್ರಳಯಾಂತಕಃ" ಎಂದು ಹೇಳಲ್ಪಟ್ಟಿತ್ತು

ಆದರೆ ಪುಣ್ಯ ಪುಂಜರೂಪಾಗಿ ಸಕಲ ಧರ್ಮಾಧರ್ಮ ವಿಚಾರಪರ ರಾಗಿ ದುರ್ಮಾಯಾಜಾಡ್ಯವಿಲ್ಲದ ಶಿವಾಂಶೀಭೂತರಾದ ಸದ್ಭಕ್ತ ಸತಿಯರು ಜ್ಞಾನವಂತರಾದ ಕಾರಣ ಅವರು ಹೇಳುವ ಬುದ್ಧಿಯೂ ಗುರುಬುದ್ಧಿ ಎನಿ ಸುವದು ಹೇಗಂದರೆ ಅಕ್ಕ ಮಹಾದೇವಿಯರು, ಮುಕ್ತಾಯಕ್ಕಗಳು, ಅಕ್ಕನಾಗಮ್ಮಗಳು, ನೀಲಲೋಚನ ತಾಯಿಗಳ, ಕಲ್ಯಾಣಮ್ಮ, ಪ್ರೌಢವತಿ ಯರು ಮೊದಲಾದ ಏಳನೂರೆಪ್ಪತ್ತು ಅಮರಗಣಂಗಳ ಸತಿಯರು ಶಿವನ ಸೌಭಾಗ್ಯಸಾಕಾರ ಲೀಲಾಮೂರ್ತಿಗಳಾದುದರಿಂದ ಇಂತಪ್ಪ ಜ್ಞಾನಸ್ವರೂಪಿ ಗಳಾದ ಶಿವಸಂಜಾತರಾದ ಸರ್ವ ಜೀವ ದಯಾಪಾರಿಗಳಾದ ಗುರುಲಿಂಗ ಜಂಗಮದಲ್ಲಿ ಭಕ್ತಿಯುಳ್ಳ ಮಹಾಜ್ಞಾನ ಭಕ್ತೆಯರು ಸ್ತ್ರೀಯರಾದರೂ ಶಿವ ಶಕ್ತಿ ಸ್ವರೂಪಿಗಳಾದುದರಿಂದ ಇಂಥವರು ಹೇಳುವ ಬುದ್ಧಿಯು ಗುರುಬುದ್ಧಿ ಎನಿಸುತ್ತದೆ ಅದು ಕಾರಣ ಜಗದೋಪಕಾರ ನಿಮಿತ್ಯವಾಗಿ ಭೂಲೋಕದಲ್ಲಿ ಅವತರಿಸಿ ಪ್ರಸಂಗಿಸಿದ ವಾಕ್ಯಗಳೆಲ್ಲ ಗುರುವಚನಂಗಳಲ್ಲಿ ಸೇರ್ಪಡೆಯಾಗಿಪ್ಪ ವಾಗಿ ಈ ಲೋಕದಲ್ಲಿ ಜೀವನ ವರ್ತನೆಯುಳ್ಳ ಸರ್ವ ಮಾಯಾ ಜೀವಿಗಳಾದ ಪಾಮರ ಸ್ತ್ರೀಯರಂತೆ ಎಂದು ತಿಳಿಯಲಾಗದು ಲೋಕದವರು ತಮ್ಮ

ದುರ್ಮಾರ್ಗ ವರ್ತನದಿಂದ ಶರಣ ಸತಿಯರನ್ನು ಸಾಮಾನ್ಯ ಸತಿಯರೆಂದು ತಿಳಿದರೆ ರೌರವ ನರಕವೇ ಪ್ರಾಪ್ತಿಸುವದು.

ಅದು ಕಾರಣ ಪರಬುದ್ಧಿ ಸ್ತ್ರೀ ಬುದ್ಧಿಯನ್ನು ಕೇಳದೆ ಸ್ವಬುದ್ಧಿಯಿಂದ ಲಾದರೂ ಇಲ್ಲವೇ ಗುರುಹಿರಿಯರು ಹೇಳುವ ವಾಕ್ಯ ಪ್ರಮಾಣದಿಂದಲಾದರೂ ನಂಬುಗೆಯಿಂದ ಸುನಿಷ್ಠೆಯಿಂದ ಕೃಷಿಕೃತ್ಯವನ್ನು ಮಾಡುವದಕ್ಕೆ ಪ್ರಾರಂಭಿಸಿ ಘನಕಾರ್ಯಗಳನ್ನು ಮಾಡುವದಕ್ಕ ಧೈರ್ಯವನ್ನು ತಾಳಿ ಆಯಾ ಕೆಲಸಕ್ಕೆ ಪ್ರಾರಂಭಿಸಬೇಕು. ಕಾರ್ಯದ ಶುಭಸೂಚನೆ ಏನಂದರೆ "ಮನೋತ್ಸವ್ಯಂತು ಮಾಂಡವ್ಯಂ" ಎಂದು ಮಾಂಡವ್ಯ ಮುನಿಯ ವಾಕ್ಯ ಉಂಟು ಇದಲ್ಲದೆ "ಪುಣ್ಯಮೇಕೋ ಮಹಾಬಂಧುಃ ಪಾಪಮೇಕೋ ಮಹಾರಿಪುಃ ಅಸಂತೋಷಂ ಮಹಾವ್ಯಾಧಿಃ ಧೈರ್ಯಂ ಸರ್ವತ್ರಸಾಧನಂ" ಎಂಬ ನೀತಿಯಂತೆ ಸಂತೋಷ ದಿಂದ ಧೈರ್ಯಶಾಲಿಯಾಗಿ ಶಿವಾಜ್ಞೆ ಎಂದು ಸಕಲ ಹಿತವಾದ ಸರ್ವಕೆಲಸ ಗಳನ್ನು ನಡಿಸಬೇಕು ಇದರಲ್ಲಿ ಸಂಶಯ ಮುಂದುಗೊಂಡು ವಿಪರೀತ ಕಲ್ಪನೆಯಿಂದ ಮನೋಲ್ಹಾಸವನ್ನು ಕಡಿಮೆ ಮಾಡಿಕೊಳ್ಳಲಾಗದು

ನಾನು ಸ್ಥಿರಜೀವಿ ಎಂದು ತಿಳಿದು ವಿದ್ಯಾಭ್ಯಾಸವನ್ನು ಉದ್ಯೋಗವನ್ನು ಮಾಡಬೇಕು, ಅಸ್ಥಿರಜೀವಿ ಎಂದು ಧರ್ಮಾರ್ಥವನ್ನು ಕೊಡಬೇಕು ಎಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ಅದು ಕಾರಣ ಮನೆಗಳನ್ನು ಬಾವಿ ಗಳನ್ನು ಕೆರೆಗಳನ್ನು ತೋಟಗಳನ್ನು ಮತ್ತು ಕೋಟಿ-ಕೊತ್ತಲು ಶಿವಾಲಯ ಧರ್ಮಶಾಲೆ ಸಪ್ತಸಂತಾನಕ್ಕೆ ಮುಖ್ಯವಾದ ಮಹತ್ಕಾರ್ಯಗಳನ್ನು ಮಾಡ ಬೇಕಾದರೆ ಮೊದಲಿಗೆಯೇ ನಾವು ಅಸ್ಥಿರ ಜೀವಿಗಳೆಂದರೆ ಇಂಥ ಕೆಲಸಗಳು ಆಗಲಾರವು. ಅದರಿಂದ ಸಮಸ್ತ ಘನಕಾರ್ಯಂಗಳಿಗೆ ಪ್ರಾರಂಭಿಸಬೇಕಾದರೆ ನಾನು ಸ್ಥಿರಜೀವಿ ಎಂದು ತಿಳಿದು ಕೆಲವು ವರುಷಗಳ ವರೆಗೂ ಶ್ರಮಪಟ್ಟು ಸಾಧಿಸಿದ್ದೇ ಉಂಟಾದರೆ ಮುಂದೆ ಅನಂತ ಪ್ರಕಾರದ ಸೌಖ್ಯವನ್ನು ಹೊಂ ದುವೆವೆಂದು ಮಾಡಿ ಸಾಧಿಸಿ ಸುಖವನ್ನು ಹೊಂದಬೇಕು.

ತಾನು ಗಳಿಸಿದ ದ್ರವ್ಯವನ್ನು ಪರೋಪಕಾರದ ವಿಷಯವಾಗಿ ಧರ್ಮಾರ್ಥ ಕಾರ್ಯಕ್ಕೆ ಖರ್ಚು ಮಾಡುವಲ್ಲಿ ತಾನು ಅಸ್ಥಿರ ಜೀವಿ ಎಂದು ತಿಳಿದು ನಾಳೆ ಧರ್ಮವ ಕೊಡುವದಕ್ಕೆ ನಾಳಿನ ವರೆಗೂ ಬದುಕಿರುವದಕ್ಕೆ ಭರವಸವೇನು? "ಅಸ್ಥಿರಂ ಜೀವತೆ ಲೋಕೇ ಅಸ್ಥಿರಂ ಧನಯೌವ್ವನಂ । ಅಸ್ಥಿರಂ ಪುತ್ರದಾ ರಾಚ । ಧರ್ಮಕೀರ್ತಿದ್ವಯಂ ಸ್ಥಿರಂ ॥ ಎಂದುಂಟಾಗಿ ಜೀವನವು ಧನವು ಶಾಶ್ವತವಲ್ಲವೆಂಬುದಾಗಿ ಕೊಡಬೇಕೆಂಬ ಮನವು ದ್ರವ್ಯವು ಇದ್ದ ಕಾಲದ ಲ್ಲಿಯೇ ಧರ್ಮವನ್ನು ಕೊಟ್ಟು ಸತ್ಕೀರ್ತಿಯನ್ನು ಪುಣ್ಯವನ್ನು ಸಂಪಾದಿಸಿಕೊ ಳ್ಳಬೇಕು.

ಇದಲ್ಲದೆ ಪುಣ್ಯ ತೀರದಾಗಿ ದ್ರವ್ಯ ಹೋಗದು. ಅದು ಕಾರಣ ತ್ಯಾಗ ಭೋಗಾದಿಗಳನ್ನು ಬಿಡಲಾಗದೆಂದು ನಿಜಗುಣಶಿವಯೋಗಿಗಳ ವಾಕ್ಯ ಉಂಟಾಗಿ ತಾನು ಅನ್ನ ವಸ್ತ್ರ ಮೊದಲಾದ ಭೋಗಗಳನ್ನು ಮತ್ತು ತನಗೆ ಸರ್ವ ಹಿತೋಪಸಾಧನವಾದ ಸತ್ಕೀರ್ತಿ ಪ್ರದವಾದ ತ್ಯಾಗ ಗುಣವನ್ನು ಬಿಡಲಾಗದು ಸರ್ವದಾ ತಾನು ಧರ್ಮಿಷ್ಠನಾಗಿದ್ದಾದರೆ ಸಕಲ ಸಂಪದ್ವರ್ಧನವಾಗುವದು.

ಆದರೆ ಸರ್ವರು ತಮ್ಮ ತಮ್ಮ ಸ್ವಂತ ಭೂಮಿಗಳಲ್ಲಿ ತೋಟವನ್ನು ಮಾಡಿಕೊಳ್ಳುತ್ತಿದ್ದರೆ ಕ್ಷಾಮಕಾಲವನ್ನಾದರೂ ಸೌಖ್ಯಕಾಲದಂತೆ ಸುಖದಿಂದ ಕಳೆಯುವರಾಗಿ ಎಲ್ಲ ಕಾಲದಲ್ಲಿಯೂ ಸತಿಸುತಾದಿ ಬಂಧು ಜನರಿಗೆ ಕಲ್ಯಾಣ ಮಾಡುತ್ತ ಸಾಧು ಸತ್ಪುರುಷರುಗಳಿಗೆ ದಾನಧರ್ಮಗಳನ್ನು ಕೊಡುತ್ತ ಪರೋಪಕಾರವನ್ನು ಮಾಡುತ್ತ ಸಕಲ ಸಂಭ್ರಮದಿಂದಲಿರುತ್ತಿಹರು

"ಕೃಷಿತೋನಾಸ್ತಿ ದುರ್ಭಿಕ್ಷ" ಎಂಬ ವಾಕ್ಯ ಉಂಟಾಗಿ ಅಂಥ ಕೃಷಿಕೃತ್ಯದಲ್ಲಿ ಅರಗಾಲ ಬರಗಾಲಂಗಳಲ್ಲಿಯಾದರೂ ಬೆಳೆಯಾಗಿ ಸದಾ ಕಾಲದಲ್ಲಿ ದುರ್ಭಿಕ್ಷವಿಲ್ಲವೆನಿಸಬೇಕಾದರೆ ತೋಟದ ಕೃತ್ಯವೇ ಮುಖ್ಯವು ಅಂಥ ಯುಕ್ತಿಶಾಲಿಯಾದ ತೋಟಾಧಿಕಾರಿಗೆ ಅರಗಾಲ ಬರಗಾಲ ಸೌಖ್ಯಕಾಲಂಗಳಾದರಯೂ ಒಂದೇ ಪ್ರಕಾರವಾಗಿ ಸುಖವನ್ನು ಕೊಡುತ್ತಿಹುದು "ಮಾಡಿದವನು ಉಂಡಾನು" "ಮಾಡದವನು ಬೇಡಿ ಉಂಡಾನು" ಎಂಬ ನಾಣ್ಣುಡಿಯುಂಟು. ಇದಲ್ಲದೆ "ಮಾಡಿ ಉಣ್ಣೋ ಬೇಕಾದಷ್ಟು, ಬೇಡಿ ಉಣ್ಣೋ ನೀಡಿದಷ್ಟು" ಎಂದು ಪ್ರಮಾಣ ಉಂಟಾಗಿ ಮೈಗಳ್ಳತನದಿಂದ ಭೂಮಿಯ ವ್ಯವಸಾಯವನ್ನು ಮಾಡದೆ ಇದ್ದವನು ಯಾಚಕವೃತ್ತಿಯಿಂದ ಜೀವನವನ್ನು ಮಾಡಬೇಕಾಗುತ್ತದೆ ಮತ್ತು ಗೃಹಸ್ಥನಾದವನು ಮರಣವನ್ನು ಹೊಂದುವ ಹಾಗೆ ಇದ್ದರೆಯೂ ದೇಹಿ ಎಂದು ಬೇಡಲಾಗದು. ಇದಲ್ಲದೆ "ಗೃಹಸ್ಥಾಶ್ರಮದ ನೀತಿಯಲ್ಲಿ ಯಾಚನೆಗಿಂದ ಲಘುತನವುಂಟೇ" ಎಂಬ ನಿಜಗುಣ ವಾಕ್ಯವಿರುವದರಿಂದ ಗೃಹಸ್ಥರಾದವರು ಸತ್ಯ ಶುದ್ಧ ಕಾಯಕದಿಂದ ಮಾಡಿ ಉಣ್ಣಬೇಕಲ್ಲದೆ ಬೇಡಿ ಉಣ್ಣಲಾಗದು. "ಆಳಾಗಿ ಮಾಡಿ ಅರಸಾಗಿ ಉಣ್ಣಬೇಕು" ಎಂದು ಲೋಕದ ಗಾದೆಯುಂಟು ಮತ್ತು "ಹಾಕದ ಕೈ ಉಣ್ಣದ ಬಾಯಿ" ಎಂಬ ಹಾಗೆ ಭೂಮಿಯಲ್ಲಿ ಬೀಜವನ್ನು ಹಾಕದೆ ಬಾಯಿಗೆ ತುತ್ತು ಬಾರದು. ಇದನ್ನು ತಿಳಿದು ಸಮಸ್ತರೂ ಮೈಗಳ್ಳತನವನ್ನು ಬಿಟ್ಟು ಸ್ವಲ್ಪ ಕಾಲ ಕಷ್ಟ ಮಾಡಿ ಅನಂತ ಕಾಲದ ವರೆಗೂ ತಮ್ಮ ಪುತ್ರ ಪೌತ್ರರೆಲ್ಲರೂ ಪರಿಣಮಿಸುವಕ್ಕೆ ತೋಟದ ವ್ಯವಸಾಯವೇ ಮುಖ್ಯವಾದದ್ದು

# ೧೧ ನೇ ಪ್ರಕರಣವು.

## ತೋಟದ ಪೈರನ್ನು ಮಾಡುವ ರೀತಿಯು.

ತೋಟವನ್ನು ಮಾಡುವ ಭೂಮಿಯನ್ನು ಹಿಂದೆ ಹೇಳಿದ ಪ್ರಕಾರ ತಿದ್ದಿಕೊಂಡು ಸುತ್ತಲೂ ಒಡ್ಡು ಹಾಕಿಸಿ ಮೊದಲು ಬೇಲಿಯನ್ನು ಬಂದೋಬಸ್ತು ಚನ್ನಾಗಿ ಮಾಡಿಕೊಳ್ಳಬೇಕು. ಬೇಲಿ ಇಲ್ಲದ ತೋಟದ ಪೈರು ಒಂದಾದರೂ ಆಗಲಾರದು

## ಬೇಲಿಯು.

ತೋಟವನ್ನು ಮಾಡತಕ್ಕ ವಿಶಾಲವಾದ ಭೂಮಿಯಲ್ಲಿ ಸಮೃದ್ಧಿಯಾಗಿ ಸವಿನೀರು ಬೀಳುವ ಸ್ಥಲವನ್ನು ಪರೀಕ್ಷಿಸಿ ಅಂಥ ಸ್ಥಲದಲ್ಲಿ ಮೊದಲು ಬಾವಿಯನ್ನು ತಗಿಸಿ ಮೊಟ್ಟೆಯು ಸಾಗುವ ಹಾಗೆ ಮಾಡಿಕೊಂಡು ತದನಂತರ ಆ ತೋಟದ ಸುತ್ತಲೂ ಹಾಕಿಸಿದ ಒಡ್ಡಿನ ಹೊರಗಿನ ಮೈಯಲ್ಲಿ ಮೃಗಶಿರ ಕಾಲದಲ್ಲಿ ಹಸಿಯಾದ ಸಮಯವನ್ನು ನೋಡಿ ಸಾಲಾಗಿ ಕಳ್ಳಿಯನ್ನು ಹಚ್ಚಬೇಕು ಮತ್ತು ಒಡ್ಡಿನ ಹೊರಗಿನ ಮೈಯ್ಯಲ್ಲಿ ಕಳ್ಳಿಯ ಹಿಂದೆ ಹುಚ್ಚುಕೇದಗೆಯನ್ನು ಹಚ್ಚಿ ಆ ಕೇದಗೆಯ ಹೊಂದಿಗೆ ಸೀಗಿಯ ಬೀಜವನ್ನು ಗಜ ಎರಡು ಗಜಕ್ಕೆ ಒಂದೂಂದರಂತೆ ಹಾಕಿ ಅದರ ಹಿಂದೆ ಚನ್ನಾಗಿ ಜಾಲಿಯ ಮುಳ್ಳನ್ನು ಅಥವಾ ಜೋರಿಯ ಮುಳ್ಳನ್ನು ಅಥವಾ ಇಂಗಳದ ಮುಳ್ಳನ್ನು ಇದರಲ್ಲಿ ಯಾವ ಪ್ರಕಾರದ ಮುಳ್ಳುಗಳನ್ನು ಹಚ್ಚಿ ಬಂದೋಬಸ್ತು ಮಾಡಬೇಕು.

ಹುಚ್ಚು ಕೇದಗೆ ಎಂದರೂ ಚಾಗಮುಟ್ಟಿ ಎಂದರೂ ಗಾಯದೆರಿ ಎಂದರೂ ಒಂದೇ ಪರ್ಯಾಯವು ಈ ಕೇದಗೆಯನ್ನು ಮತ್ತು ಸೀಗಿಯ ಬೀಜಗಳನ್ನು ಒಡ್ಡಿನ ಹೊರಮೈಯ್ಯಲ್ಲಿರುವ ಕಳ್ಳಿಯ ಹೊಂದಿಗೆ ಹಾಕಿದ ಮೇಲೆ ಒಡ್ಡಿನ ಒಳಮೈಯಲ್ಲಿ ತಗ್ಗಿನ ಹಾಗೆ ಸರವು ಕಡಿದು ಮೊಟ್ಟೆಯ ನೀರು ಹೋಗುವ ಹಾಗೆ ಮಾಡಿ ಮೃಗಶಿರಕಾಲ ಪ್ರವೇಶದಾರಂಭದಿಂದ ಮಳೆಗಾಲದಲ್ಲಿ ಗಟ್ಟಿ ಬಿದರು ಪೊಳ್ಳು ಬಿದರು ಸಣ್ಣ ಸೀಬಿನ ಬಿದರು ಈ ಪ್ರಕಾರ ಬಿದರು ಬೀಜಗಳನ್ನು ಬೇರೆ ಬೇರೆ ಮಲೆಸೀಮೆಯಿಂದಾಗಲಿ ಶ್ರೀಶೈಲ ಪ್ರಾಂತದಿಂದಾಗಲಿ ಪೂರ್ವದಲ್ಲಿಯೇ ತರಿಸಿ ಇಟ್ಟುಕೊಂಡಿದ್ದು ಸರವಿನಲ್ಲಿ ಬೇರೆ ಬೇರೆ ಬೀಜಗಳನ್ನು ಹಾಕಿ ನೀರು ಬಿಡುತ್ತಿರಬೇಕು. ಈ ಬಿದರು ಬೀಜಗಳನ್ನು ಹಾಕಿಸುವದು ಬಹಳ ಪ್ರಯೋಜನವು ಒಂದು ವೇಳೆ ಬಿದರು ಬೀಜಗಳು ದೊರಿಯದೇ ಇದ್ದರೆ ಹೆಬ್ಬೇವಿನ ಬೇರುಗಳನ್ನು ತಂದು ಮೊಳ-ಮೊಳದ ತುಂಡು

ಮಾಡಿ ತೋಟದ ಸುತ್ತಲೂ ಒಡ್ಡಿನ ಒಳಮೈಯಲ್ಲಿ ಕಡಿಸಿರುವ ಸರವಿನಲ್ಲಿ ಕಣಗಿಲಭರಿಂಗಳನ್ನು ಹಚ್ಚಿದ ಹಾಗೆ ಎರಡೂ ಕಡೆಯ ಮೋರೆಯನ್ನು ಮಣ್ಣಿನಲ್ಲಿ ಮುಚ್ಚಿ ಮಧ್ಯದಲ್ಲಿ ಸ್ವಲ್ಪ ತೆರೆದು ಬಿಡುವದು. ಹೀಗೆ ತೋಟದ ಸುತ್ತಲೂ ಹಚ್ಚಬೇಕು. ಅವುಗಳಿಗಾದರೂ ವರುಷಾರು ತಿಂಗಳು ನೀರು ಬಿಡುತ್ತಿರಬೇಕು. ಅಥವಾ ಹೆಬ್ಬೇವಿನ ಬೇರುಗಳಾದರೂ ದೊರೆಯದೆ ಇದ್ದಲ್ಲಿ ಅರಬೇವಿನ ಬೀಜಗಳನ್ನಾದರೂ ಹಾಕುವದು ಅರಬೇವಿಗೆ ಗರುಡಬೇರೆಂಬ ಹೆಸರು.

ಒಡ್ಡಿನ ಮಧ್ಯದಲ್ಲಿ ಹಸಿಯಾದ ಸಮಯವನ್ನು ನೋಡಿ ಬೇವಿನ ಬೀಜಗಳನ್ನು ಬೇಸಿಗೆಯ ಕಾಲದಲ್ಲಿ ಬಹಳವಾಗಿ ಆರಿಸಿ ಇಟ್ಟು ಮುಗ್ಗು ಹಾಯದ ಹಾಗೆ ಬಿಸಲಲ್ಲಿ ಚನ್ನಾಗಿ ಒಣಗಿಸಿ ಇಟ್ಟು ಭೂಮಿಯಲ್ಲಿ ಹಾಕುವ ಸಮಯದಲ್ಲಿ ಒಂದು ದಿವಸ ಸವಿನೀರಿನಲ್ಲಿ ನೆನೆ ಇಟ್ಟು ಒಡ್ಡಿನ ಮಣ್ಣು ಹಸಿಯಾದ ಸಮಯದಲ್ಲಿ ರೋಹಿಣಿ, ಮೃಗಶಿರ, ಆರದ್ರಿ, ಪುಷ್ಯ, ಪುನರ್ವಸು ಮಳೆಗಳ ಕಾಲದಲ್ಲಿ ಹಾಕಬೇಕು. ಆ ಬೇವಿನ ಬೀಜಗಳನ್ನು ಒಡ್ಡಿನ ತಲೆಯ ಮೇಲೆ ಎರಡು ಮೊಳಕ್ಕೊಂದರಂತೆ ಹಾಕಬೇಕು ಮುಂದೆ ಅವುಗಳನ್ನು ಕುರಿಗಳು ತಿನ್ನದ ಹಾಗೆ ಬಂದೋಬಸ್ತು ಮಾಡಬೇಕು. ಒಂದು ವರ್ಷ ಮೆಹನತು ಮಾಡಿದರೆ ಕಳ್ಳಿಯು ಕೇದಗೆಯು ಸೀಗಿಯ ಬಳ್ಳಿಯು ಹಬ್ಬಿ ಕಳ್ಳಿಯ ಹೊರಮೈಯ್ಯಲ್ಲಿ ಬಂದೋಬಸ್ತು ಆಗುವದು. ಮತ್ತು ಎರಡು ಮೂರು ವರುಷದ ವರೆಗೂ ದನಗಳು ಕುರಿಗಳು ಕೆಡಿಸದ ಹಾಗೆ ಹೊರಮೈಯ್ಯಲ್ಲಿ ಮುಳ್ಳನ್ನು ಹಚ್ಚುತ್ತಿರಬೇಕು ಮತ್ತು ಮಳೆಗಾಲ ಸಮಯದಲ್ಲಿ ಅಂಗಲಾದಲ್ಲಿ ಕಳ್ಳಿಯನ್ನು ಕೇದಗೆಯನ್ನು ಮತ್ತು ಸೀಗಿಯ ಬೀಜವನ್ನು ಹಚ್ಚಬೇಕು. ಈ ಪ್ರಕಾರ ಮೂರು ವರ್ಷ ಅಥವಾ ನಾಲ್ಕು ವರ್ಷ ಬೇಲಿಯನ್ನು ಪರಾಮರಿಸುತ್ತ ಬಿದರು ಬೀಜಗಳನ್ನು ಹಾಕಿದ್ದರೆ ಆಗಾಗ್ಗೆ ಹದದ ಮೇಲೆ ಸ್ವಲ್ಪ ಸ್ವಲ್ಪ ನೀರು ಬಿಡುತ್ತ ಆರೈಕೆಯನ್ನು ಮಾಡುತ್ತ ಹೋದರೆ ಅಷ್ಟರಲ್ಲಿ ಬಿದುರು ಬಲಿಯುವದು ಕಳ್ಳಿಯು ಚನ್ನಾಗಿ ಚಿಗಿತು ಬಲಾತ್ಕಾರವಾಗುವದು. ಸೀಗಿಯ ಬಳ್ಳಿಯು ವಿಸ್ತಾರವಾಗಿ ಹಬ್ಬಿ ದನಕರ ಕುರಿಗಳಿಗೆ ಮಾರ್ಗವಿಲ್ಲದಂತೆ ಕಳ್ಳಿಯನ್ನು ಮುಚ್ಚಿಕೊಳ್ಳುವದು. ಅದು ಮುಳ್ಳಿನ ಪದಾರ್ಥವಾದುದರಿಂದ ಮನುಷ್ಯರಿಗಾದರೂ ಒಳಗೆ ಬರುವದಕ್ಕೆ ಅಸಾಧ್ಯವಾಗುವದು. ಮತ್ತು ಹೊರಮೈಯ್ಯಲ್ಲಿ ಹಚ್ಚಿರುವ ಕೇದಿಗೆಯು ಬಲಿತು ದೊಡ್ಡ ದೊಡ್ಡ ಎಲೆಗಳಿಂದ ತುದಿಯ ಮುಳ್ಳುಗಳಿಂದ ಬೇಲಿಯು ಬಲವತ್ತರವಾಗುವದು. ಮತ್ತು ನೋಟರಂಜನೆಗಾದರೂ ಶೋಭಾಯಮಾನವಾಗಿ ಕಾಣುವದು. ಮತ್ತು ಮೂರು ನಾಲ್ಕು ವರ್ಷದಾಚೆಗೆ ವರ್ಷ ವರ್ಷಕ್ಕೂ ಮುಳ್ಳು ಕಡಿದು ಹಚ್ಚಬೇಕೆಂಬುವ ಶ್ರಮವು ಎಂದಿಗೂ ಇಲ್ಲದ ಹಾಗೆ ಆಗುವದು ಮತ್ತು ಕೆಲವು ವರ್ಷಕ್ಕೆ ಸೀಗೀಕಾಯಿಗಳಾಗಲಾರಂಭಿಸಿದರೆ ವರ್ಷ

ವರ್ಷಕ್ಕೊ ಅದರ ಕ್ರಿಯವು ಸಿಕ್ಕುವದು ಮತ್ತು ಒಡ್ಡಿನ ಒಳವೈಯಲ್ಲಿ ರುವ ಬಿದರು ಬಲಿತು ಉತ್ಪನ್ನನಾಗಿ ತೋಟದ ಸುತ್ತಲೂ ಕೋಟೆಯು ಕಟ್ಟಿದ ಹಾಗೆ ಆಗುವದು. ಮತ್ತು ವರ್ಷ ವರ್ಷಕ್ಕೊ ಎಷ್ಟು ಬಿದರುಗಳನ್ನು ಕಡಿ ದರೂ ಮತ್ತೂ ಹುಟ್ಟುತ್ತ ಸವೆಯದ ಹಾಗಾಗಿ ಅನೇಕ ಕೆಲಸಗಳಿಗೆ ಉಪ ಯೋಗಿಸುವ ಬಿದರು ನಿರಾಯಾಸದಿಂದ ಹುಟ್ಟುತ್ತ ನೀರು ಇಲ್ಲದೆ ಬೆಳೆಯು ತ್ತಿರುವದು ಮತ್ತು ಬೇಲಿಯಂತೂ ಯಾತಕ್ಕೂ ಅಸಕೊಳ್ಳದ ಹಾಗಾಗಿ ಕಳ್ಳ ದನಗಳಿಗೂ ಕುರಿಗಳಿಗೂ ಕಳ್ಳ ಜನರುಗಳಿಗೂ ಅಸಾಧ್ಯವಾಗಿ ಸುತ್ತಲೂ ಮಾರ್ಗವಿಲ್ಲದಂತೆಯಾಗುವದು ಬಾಗಿಲವನ್ನು ಬಂದೋಬಸ್ತು ಮಾಡಿ ಬಿಟ್ಟರೆ ರಾತ್ರಿ ಹಗಲು ಕಾಯಬೇಕೆಂಬುವ ಭಯವು ಇಲ್ಲದೇ ಹೋಗುವದು

ಮೊದಲು ಬೇಲಿಯು ಚನ್ನಾಗಿ ದುರಸ್ತು ಆಗುವ ಹಾಗೆ ಮಾಡಿದ ಮೇಲೆ ತೋಟದ ಪೈರು ಮಾಡುವದಕ್ಕೆ ಪ್ರಾರಂಭಿಸಬೇಕು. ಬಾವಿಯನ್ನು ಮೊದಲೇ ತಗಿಸಿ ಅದನ್ನು ಹಿಂದೆ ಹೇಳಿದ ಹಾಗೆ ಚನ್ನಾಗಿ ಕಟ್ಟಿಕೊಂಡು ಮೊಟ್ಟೆಯನ್ನು ಸಾಗಿಸಬೇಕು ಮತ್ತು ತೋಟವನ್ನು ಮಾಡುವ ಭೂಮಿಯಲ್ಲಿ ಅಣುಮಾತ್ರವಾದರೂ ಕರಿಕೆಯು ಕಣಿಗೆಯು ಜೇಕು ಇದಲ್ಲದೆ ಮುಳಗಲಕಂಟಿ ಹಾಗು ಮೊದಿಯ ಹುಲ್ಲು ಮತ್ತು ತುಂಗಿಯ ಹುಲ್ಲು ಈ ಪ್ರಕಾರದ ನಟ್ಟು ಗಳಿದ್ದರೆ ಒಂದು ಬೆಳೆಯಾದರೂ ಚನ್ನಾಗಿ ಆಗಲಾರದು. ಅದು ಕಾರಣ ಎಷ್ಟು ಶ್ರಮವಾದರೂ ಬಿಡವೆ ಗಜ ಎರಡು ಗಜದ ಪರಿಯಂತರಕ್ಕೂ ಬೇರುಗಳು ಹೋಗಿದ್ದರೂ ಅಲ್ಲಿಯವರೆಗಾದರೂ ಅಗಿದು ತೆಗೆದು ಚನ್ನಾಗಿ ಬೇರುಗಳನ್ನು ಆರಿಸಿ ಹಾಕಬೇಕು ಜೇಕು ಮೊದಲಾದದ್ದು ಇದ್ದರೆ ನೇಗಿಲೆಯನ್ನು ಹೊಡೆದು ಅದರ ಗಡ್ಡಿಗಳು ಒಂದೂ ಉಳಿಯದ ಹಾಗೆ ಆರಿಸಬೇಕು ಮತ್ತು ಮೊದ ಲವೇ ಕಿರ್ದಿಯಾಗಿದ್ದ ಹೊಲವಾದರ ಆ ಭೂಮಿಯನ್ನು ಒಂದು ಸಾಲು ನೇಗಿಲೆಯನ್ನು ಹೊಡೆದು ಚನ್ನಾಗಿ ಗೊಬ್ಬರವನ್ನು ಹಾಕಿ ಮತ್ತೊಂದು ಸಾಲು ನೇಗಿಲೆಯನ್ನು ಹೊಡೆದು ಎರಡು ಸಾಲು ಮೂರು ಸಾಲು ಚನ್ನಾಗಿ ಹರಿಗಿ ಪುನಃ ಗೊಬ್ಬರ ಹಾಕಿ ಮಡಿಕೆಯ ಹೊಡೆದು ಹರಿಗಿ ಸಿದ್ಧಮಾಡಿಕೊಂಡರೆ ಆ ಭೂಮಿಯಲ್ಲಿ ಬೇಕಾದ ಪದಾರ್ಥಗಳನ್ನು ಮಾಡಿಕೊಳ್ಳಲಿಕ್ಕೆ ಬರುವದು.

## ಮಾವಿನ ಗಿಡಗಳು.

ಭೂಮಿಯಲ್ಲಿ ಬೆಳೆಯುವ ಸಕಲ ಪೈರುಗಳಲ್ಲಿ ಫಲದ ವೃಕ್ಷಂಗಳೇ ವಿಶೇ ಷವು ಅದರಲ್ಲಿ ತೋಟಾಧಿಕಾರಿಯಾದ ಮುಖ್ಯಸ್ತನಿಗೆ ಸರ್ವದಾ ಸುಖಪ್ರದ ವಾದ ಫಲದ ವೃಕ್ಷಗಳಲ್ಲಿ ಮಾವಿನ ವೃಕ್ಷವು ವಿಶೇಷವು ಆ ಮಾವಿನ ವೃಕ್ಷ ಗಳು ಶೃಂಗಾರಕ್ಕೆ ಶೋಭಿತವಾಗಿ ಬೇಸಿಗೆಯ ಕಾಲದಲ್ಲಿ ಮಾರ್ಗಸ್ಥರಾದ

ಜನರುಗಳ ಶ್ರಮವನ್ನು ತಣಿಸಿ ವಿಶ್ರಾಂತಿಯನ್ನು ಕೊಡುವ ತಂಪಾದ ನೆಳಲುಳ್ಳವಾಗಿ ನೋಟಕ್ಕೆ ರಮಣೀಯವಾಗಿ ಊಟಕ್ಕೆ ಯುಕ್ತವಾದ ಮಾಧುರ್ಯವಾದ ಸುರಸಯುಕ್ತ ಫಲವುಳ್ಳವುಗಳಾಗಿ ಜನರಿಗೂ ಪ್ರಿಯಕರವಾಗಿರುವದರಿಂದ ಮಾವಿನ ವೃಕ್ಷಗಳಿಲ್ಲದ ತೋಟವು ಶೃಂಗಾರವಾಗಿ ಕಾಣಿಸದ ಕಾರಣ ತೋಟಗಳಲ್ಲಿ ಸರ್ವರೂ ಮಾವಿನ ಮರಗಳನ್ನು ಬೆಳಿಸಬೇಕು ಅದರಿಂದ ತೋಟಕ್ಕೆ ಶೋಭೆಯುಂಟಾಗುತ್ತದೆ.

ತೋಟಗಳಲ್ಲಿ ಮಾವಿನ ಮರಗಳನ್ನು ಬೆಳಿಸಬೇಕಾದರೆ ತೋಟದ ಮಧ್ಯಭಾಗದ ಉತ್ತಮ ಭೂಮಿಯಲ್ಲಿ ಬೆಳಿಸದ ಆ ತೋಟದ ಬೇಲಿಯ ಸಮೀಪದಲ್ಲಿ ನಾಲ್ಕೂ ದಿಕ್ಕಿಗೂ ಸುತ್ತು ಒಡ್ಡಿನ ಒಳಮೈಯಲ್ಲಿ ಬೆಳಿಸಬೇಕು. ಮಧ್ಯಭಾಗದ ಭೂಮಿಯಲ್ಲಿ ಬೇಕಾದ ಪದಾರ್ಥಗಳನ್ನು ಬೆಳೆಮಾಡಿಕೊಳ್ಳಬೇಕು

ಮಾವಿನ ಮರಗಳನ್ನು ಹಚ್ಚುವದು ಹೇಗಂದರೆ, ತೋಟವಲ್ಲಿ ಅಗಲವಾಗಿ ಒಂದು ದೊಡ್ಡ ಮಡಿಯನ್ನು ಮಾಡಿ ಸುತ್ತಲೂ ಗೇಣು ಒಂದೂವರೆ ಗೇಣು ಒಡ್ಡು ಇಟ್ಟು ಆ ಮಡಿಯಲ್ಲಿ ಉಸುಕನ್ನು ಮಣ್ಣನ್ನು ಕೆಮ್ಮಣ್ಣನ್ನು ಇಲ್ಲವೆ ಅಲ್ಲಿ ಇದ್ದ ಮಣ್ಣನ್ನು ಸಣ್ಣ ಮಳಲು ಉಸುಕನ್ನು ಸಮ ಬೆರಿಕೆ ಮಾಡಿ ಕಲಿಸಿ ಸಿದ್ಧಮಾಡಿಟ್ಟು ಮಾವಿನ ಹಣ್ಣಿನ ಹಂಗಾಮವು ಬರುವದರೊಳಗಾಗಿ ತಯಾರು ಮಾಡಿಕೊಂಡು ಆ ಮಡಿಯಲ್ಲಿ ಬೀಜವನ್ನು ಹಾಕಬೇಕಾದರೆ ಉತ್ತಮತರದ ಸವಿಯಾದ ಮಾವಿನ ಹಣ್ಣುಗಳನ್ನು ತಂದು ಅವುಗಳನ್ನು ಹಿಂಡಿಕೊಂಡು ಆ ಬೀಜಗಳನ್ನು ನೀರಿನಿಂದ ತೊಳೆದರೂ ಅಥವಾ ತೊಳೆಯದೆ ಹಾಗೆಯಾದರೂ ಅದೇ ದಿವಸ ಅಥವಾ ನಾಲ್ಕಾರು ದಿವಸಗಳಲ್ಲಿಯಾದರೂ ಆ ಬೀಜವು ಹನಿಯಾರಿ ಗಿಟಕು ಹಾಯುದಕ್ಕಿಂತ ಮೊದಲೇ ಬೇರೆ ಬೇರೆ ಗೇಣು ಗೇಣು ಅಂತರವಾಗಿ ಪ್ರತಿಯೊಂದು ಬೀಜವನ್ನು ಆ ಮಡಿಯಲ್ಲಿ ಅಡ್ಡ ಇಟ್ಟು ಅವುಗಳ ಮೇಲೆ ನಾಲ್ಕು ಬೆರಳುದ್ದ ಹಳೆಯ ಗೊಬ್ಬರವನ್ನು ಹಾಕಿ ಆ ಮಡಿಯ ತುಂಬಾ ನೀರು ಹಾಕಿ ಬಿಡಬೇಕು. ಆ ಬೀಜಗಳು ಹಾಗೇ ಹಸಿ ಹಿಡಿದುಕೊಂಡು ಇದ್ದು ಮುಂದೆ ಕಾಲಮಳೆ ಎನಿಸುವ ರೋಹಿಣ್ಯಾದಿ ಮುಂಗಾರಿಯ ಮಳೆಯಾದ ಮೇಲೆ ಮೊಳಿಕೆಯೊಡೆದು ಚನ್ನಾಗಿ ನಾಟಿಕೊಳ್ಳುವವು ಮುಂದೆ ಆ ಅಗಿಗಳು ಮಳೆಗಾಲದಲ್ಲಿ ಅದೇ ಮಡಿಯೊಳಗೆ ಬೆಳೆದು ಅಭಿವೃದ್ಧಿ ಹೊಂದುತ್ತಿರುವವು.

ಆ ಮೇಲೆ ತೋಟದ ಸುತ್ತಲೂ ಬೇಲಿಯ ಸಮೀಪಕ್ಕೆ ಇಪ್ಪತ್ತುನಾಲ್ಕು ಮೊಳಕ್ಕೆ ಒಂದರಂತೆ ಹಮಚೌಕು ಗಜದ ಪ್ರಮಾಣ ಅಗಲ ಹಾಗೂ ಒಂದು ಗಜ ತಗ್ಗಾಗಿರುವ ತಗ್ಗುಗಳನ್ನು ಅಗಳಿಸಿ ಅದರಲ್ಲಿ ಕೆಮ್ಮಣ್ಣನ್ನು ಸಣ್ಣ ಉಸುಕನ್ನು ಸಮ ಬೆರಿಕೆಯಾಗಿ ಕಲಿಸಿ ಭರ್ತಿ ಮಾಡಬೇಕು. ಅಥವಾ ಕೆಮ್ಮಣ್ಣು

ಸಿಗದ ಪಕ್ಷಕ್ಕೆ ಅಲ್ಲಿದ್ದ ಮಣ್ಣನ್ನು ಉಸುಕನ್ನು ಸಮನಾಗಿ ಕಲಿಸಿ ತುಂಬಿ
ಸಿದ್ಧಮಾಡಿ ಇಟ್ಟು ಮುಂದೆ ಉತ್ತರಿಯ ಮಳೆಯ ಪ್ರವೇಶ ಕಾಲಕ್ಕೆ ಆ
ಕುಣಿಗಳಿಗೆ ಮೊಟ್ಟೆಯ ನೀರು ಬಿಟ್ಟು ಹಸಿ ಮಾಡಬೇಕು. ಮತ್ತು ಆ ಅಗಿ
ಗಳ ಸುತ್ತಲೂ ಮಣ್ಣು ಗಡ್ಡೆಗಳನ್ನು ಹಾಗೆಯೇ ಉಳಿಸಿ ಅವುಗಳ ಅಡ್ಡ
ಬೇರು ಅಥವಾ ಉದ್ದ ಬೇರುಗಳು ಹರಿಯದ ಹಾಗೆ ಮಣ್ಣು ಗಡ್ಡೆಯನ್ನು
ಉಳಿಸಿ ಆ ಮಣ್ಣು ಗಡ್ಡೆಯು ಒಡೆಯದ ಹಾಗೆ ಅದಕ್ಕೆ ಬಾಳೆಯ ಸೊಪ್ಪಿ
ಯಿಂದ ಅಥವಾ ಮತ್ತಾವದಾದರೂ ಬಳ್ಳಿಗಳಿಂದ ಬಿಗಿದು ಸುತ್ತಿ ತೆಗೆದು
ಕೊಂಡು ಬಂದು ಮೊದಲು ಸಿದ್ಧಮಾಡಿದ ಕುಣಿಗಳಲ್ಲಿ ಈ ಗಡ್ಡೆಯು ಹಿಡಿ
ಯುವ ಹಾಗೆ ಕೆದರಿ ಗಡ್ಡೆಸಹಿತ ಅಗಿಯನ್ನು ತಗ್ಗಿನಲ್ಲಿ ಇಟ್ಟು ಮೇಲೆ ಒಂದು
ಹೆಡಿಗೆ ಹಳೆಯ ಗೊಬ್ಬರವನ್ನು ಹಾಕಿ ಚನ್ನಾಗಿ ಬಗಲು ತುಳಿದು ಗಟ್ಟಿ
ಯಾಗಿ ಕೂಡ್ರಿಸಬೇಕು ಹಾಗು ನಾಲ್ಕು ಕೊಡ ನೀರು ನಿಲ್ಲುವ ಹಾಗೆ ಸುತ್ತಲೂ
ಒಡ್ಡು ಕಟ್ಟಿ ಎಂಟು ದಿವಸ ಹಾಗೇ ಬಿಟ್ಟು ಪ್ರತಿವೊಂದು ಕುಣಿಗೆ ಒಂದು
ಕೊಡದಂತೆ ನೀರು ಹಾಕಬೇಕು. ಮೊಟ್ಟೆಯ ನೀರಿನ ಕಾಲಿವೆ ಇದ್ದರೆ ಆ
ಮಡಿಯು ತುಂಬುವ ಹಾಗೆ ನೀರು ಬಿಟ್ಟರೂ ಸಂಶಯವಿಲ್ಲ ಆ ಮೇಲೆ
ಎಂಟು ದಿವಸ ಬಿಟ್ಟು ಪ್ರತಿಯೊಂದು ಮಡಿಗೆ ಒಂದೊಂದು ಹೆಡಿಗೆ ಸಣ್ಣ
ಉಸುಕನ್ನು ಹರವಿ ನೀರು ಹಾಕಬೇಕು ಆ ಮೇಲೆ ಸಂಕ್ರಾಂತಿಯ ವರೆಗೂ
ಹದದ ಮೇಲೆ ಭೂಮಿ ಆರಿದ ಹಾಗೆ ಒಂದೆರಡು ವೇಳೆ ನೀರು ಬಿಡುತ್ತಾ
ಮುಂದೆ ಬೇಸಿಗೆಯ ಕಾಲದಲ್ಲಿ ನೀರು ಮೇಲೆ ಮೇಲೆ ಉಣಿಸುವದಕ್ಕೆ ಅಡ
ಚಣೆ ಇಲ್ಲದಂತೆ ತೋಟದಲ್ಲಿ ಮೊಟ್ಟೆಯ ನೀರಿನ ಕಾಲಿವೆ ಇದ್ದರೆ ಆಗಾಗ್ಗೆ
ನೀರು ಉಣಿಸುತ್ತ ಹೋದರೂ ಸಂಶಯವಿಲ್ಲ

ಮತ್ತು ಮಡಿಗಳಲ್ಲಿ ಮಾವಿನ ಅಗಿಗಳನ್ನು ಬೆಳಿಸಿ ಕಿತ್ತಿ ಹಚ್ಚದೆ ಹಾಗೆಯೇ
ಬೀಜವನ್ನು ಹಾಕಿ ಗಿಡವನ್ನು ಮಾಡುವದು ಹೇಗಂದರೆ, ಇಪ್ಪತ್ತುನಾಲ್ಕು
ಮೊಳಕ್ಕೊಂದು ಗಜದ ಪ್ರಮಾಣ ಚಚ್ಚೌಕು ತಗ್ಗಾಗಿರುವ ಕುಣಿಗಳನ್ನು
ಅಗಿಸಿ ಸಿದ್ಧಮಾಡಿ ಅದರಲ್ಲಿ ಹಿಂದೆ ಹೇಳಿದ ಪ್ರಕಾರ ಉಸುಕನ್ನು ಮಣ್ಣನ್ನು
ಸಮ ಬೆರಿಕೆಯಾಗಿ ತುಂಬಿದ ಮೇಲೆ ಮಾವಿನ ಹಣ್ಣುಗಳನ್ನು ಹಿಂಡಿಕೊಂಡು
ಹಸಿಯಾರದೆ ಇದ್ದ ಬೀಜಗಳನ್ನು ತಯಾರು ಮಾಡಿ ತಗ್ಗಿನಲ್ಲಿ ಅಡ್ಡ ಇಟ್ಟು
ಮೇಲೆ ಒಂದು ಹೆಡಿಗೆ ಹಳೇ ಗೊಬ್ಬರವನ್ನು ಹಾಕಿ ನೀರನ್ನು ಹಾಕಿ ಬಿಡ
ಬೇಕು. ಅದು ಹಾಗೇ ಹಸಿಹಿಡಿದುಕೊಂಡು ಇದ್ದು ಮಳೆಯಾದ ಮೇಲೆ
ಮೊಳಿಕೆ ಒಡೆದು ಅಗಿಯು ಹೊರಗ ಕಾಣಿಸಿಕೊಂಡು ದಿನದಿನಕ್ಕೆ ಅಭಿವೃದ್ಧಿ
ಯನ್ನು ಹೊಂದುತ್ತ ಇರುತ್ತಿರುವವು

ಆ ಸಸಿಗಳು ಅಭಿವೃದ್ಧಿ ಹೊಂದಿದ ಹಾಗೆ ಕೆಲವು ದಿವಸಕ್ಕೆ ಆ ಸಸಿ
ಗಳ ಸುತ್ತಲೂ ಸ್ವಲ್ಪ ಅಗುಳಿಸಿ ಉಸುಕನ್ನು ಮಡಿಮಡಿಗೆ ಹರಹಿಸಿ ನೀರು

ಬಿಡುತ್ತ ಹೋಗಬೇಕು- ಉಸುಕು ಹಾಕುವದರಿಂದ ಬೇಡಿ ಸೆಳೆಯದೆ ತಂಪು ಆರದೆ ಹಸಿ ಹಿಡಿದುಕೊಂಡಿರುವದು.

ಇದಲ್ಲದೆ ಮಾವಿನ ಬೀಜಗಳು ಬಹಳ ಒಣಗಿದ್ದರೆ ಅವುಗಳು ಗಟಕು ಹಾಯಿದಿರುವವು. ಅಂಥ ಬೀಜಗಳನ್ನು ಹಾಗೇ ಹಾಕಿ ಅಗಿ ಮಾಡಿದರೆ ಕೆಲವು ದಿವಸಕ್ಕೆ ಕೆಟ್ಟು ಹೋಗುವವು ಆದರೆ ಒಣಗಿದ ಬೀಜಗಳನ್ನು ಭೂಮಿಯಲ್ಲಿ ಹಾಕಬೇಕಾದರೆ ಎಂಟು ದಿವಸ ಸವಿ ನೀರಿನಲ್ಲಿ ನೆನೆ ಇಟ್ಟು ಆ ಬೀಜಗಳನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧ ಮಾಡಿದ ಕುಣಿಯಲ್ಲಿ ಇಟ್ಟು ಹಿಂದಿನ ಕಲಮಿನಲ್ಲಿ ಹೇಳಿದ ಪ್ರಕಾರ ವ್ಯವಸಾಯದಿಂದ ಬೆಳೆ ಮಾಡಿಕೊ ಳ್ಳಬೇಕು

ಮಾವಿನ ಸಸಿಗಳು ಮಳೆಗಾಲದಲ್ಲಿ ಅಭಿವೃದ್ಧಿ ಹೊಂದಿ ಬೆಳೆಯುತ್ತಿರ ಲಾಗಿ ತೋಟದಲ್ಲಿ ಮೊಟ್ಟೆಯು ನೀರು ಬಿಡುವದಕ್ಕೆ ಏನೇನು ಅಡಚಣಿ ಇಲ್ಲದ ಹಾಗೆ ಇದ್ದರೆ ಅದಕ್ಕೆ ಮಳೆಯು ತಡೆದ ಸಮಯದಲ್ಲಿ ಆಗಾಗ್ಗೆ ನೀರು ಉಣಿಸಿದರೂ ಉತ್ತಮವೇ ಸರಿ ನೀರು ಹಾಕುತ್ತ ಹೋದ ಹಾಗೆ ಗಿಡಗಳು ವಿಸ್ತಾರವಾಗಿ ಪಲ್ಲೈಸುವವು ಆದಾಗ್ಯೂ ನೀರನ್ನಾದರೂ ಅತಿಯಾಗಿ ಬಿಡದೆ ಬೇರು ಕೊಳೆಯದ ಹಾಗೆ ಸಮಯವರಿತು ಹದದ ಮೇಲೆ ನೀರು ಬಿಡಬೇಕು ಮತ್ತು ಬೊಡ್ಡಿಯಲ್ಲಿ ಹುಲ್ಲು ಸದಿ ಕರಿಕೆ ಜೇಕು ಮೊದ ಲಾದ ಕಸ ಪದಾರ್ಥಗಳು ಮೊಳೆತಿದ್ದರೆ ಅವುಗಳನ್ನು ಆಗಾಗ್ಗೆ ತೆಗೆಯುತ್ತ ಬಿಗಿಯಾದ ಮಣ್ಣನ್ನು ಕುರಿಪೆಯಿಂದ ಕೆತ್ತಿ ಮೇಲೆ ಮೇಲೆ ಕೈಯ್ಯಾಡಿಸಿ ಸ್ವಲ್ಪ ಸೈಲು ಮಾಡುತ್ತ ಇರಬೇಕು.

ಮಾವಿನ ಸಸಿಗಳಾದರೂ ಧೂಳು ಕೆಸರು ಕೂತರೆ ಎಲೆಗಳು ಮುದುಡಿ ಕೊಂಡು ಗಿಡಗಳು ಕೆಡುವವು ಮತ್ತು ಆ ಗಿಡಗಳು ಬೆಳೆಯುವದಕ್ಕೂ ಆತಂಕ ಮಾಡುತ್ತವೆ. ಅದರಿಂದ ಆಗಾಗ್ಗೆ ಅವುಗಳ ಎಲೆಯ ಮೇಲಾದರೂ ಸ್ವಲ್ಪ ನೀರನ್ನು ಹಾಕಿ ತೊಳೆದು ನಿರ್ಮಲ ಮಾಡುತ್ತಿರಬೇಕು ಯಾವ ಗಿಡಗಳಾದರೂ ಸಣ್ಣ ಸಸಿಗಳಿರುವಾಗ್ಗೆ ನಿರ್ಮಲತ್ವವು ಬಹಳ ಪ್ರಯೋಜನವು.

### ತೋಟಗಳಲ್ಲಿ ಮಾವಿನ ಮರಗಳನ್ನು ಬೆಳಿಸುವದು.

ಹೊಲಗಳಲ್ಲಿಯಾದರೂ ತೋಟಗಳಲ್ಲಿಯಾದರೂ ನಾಲ್ಕೂ ಕಡೆಯಲ್ಲಿ ಸುತ್ತಲೂ ಒಡ್ಡುಗಳ ಬಳಿಯಲ್ಲಿ ಮತ್ತು ಬೇಲಿಯ ಸಮೀಪದಲ್ಲಿ ಮಾವಿನ ಗಿಡಗಳನ್ನು ಹಾಕಬೇಕಲ್ಲದೆ ಅವಲು ಭೂಮಿ ಇದ್ದ ಹೊಲಗಳಲ್ಲಾಗಲಿ ತೋಟ ಗಳಲ್ಲಿಯಾಗಲಿ ಉತ್ತಮ ಪ್ರಕಾರದ ಮಡಿಯ ಭೂಮಿ ಮಂಡು ಭೂಮಿ

ಮುಂತಾದ ವಿಶೇಷ ಭೂಮಿ ಇದ್ದರೆ ಅಂಥ ಭೂಮಿಯಲ್ಲಿ ನಾನಾ ಪ್ರಕಾರದ ಫಲ ಪದಾರ್ಥಗಳು ಬೆಳೆಯುತ್ತವೆ, ಅಂಥ ಭೂಮಿಯಲ್ಲಾಗಲಿ ತುಂಬಾ ಮಾವಿನ ಗಿಡಗಳನ್ನು ಹಚ್ಚಬಾರದು ಈ ಗಿಡಗಳ ನೆರಳಿನಲ್ಲಿ ಮತ್ತಾವ ಪದಾರ್ಥಗಳು ಬೆಳೆಯುವದಿಲ್ಲ ಅದು ಕಾರಣ ತೋಟಗಳಲ್ಲಿ ಮಾವಿನ ಗಿಡಗಳನ್ನು ಸುತ್ತಲೂ ಬೆಳಿಸಿ ಮಧ್ಯದಲ್ಲಿ ನಾನಾ ವಿಧದ ಹಲವು ಪ್ರಕಾರದ ಫಲ ಪದಾರ್ಥಗಳನ್ನು ಯಥಾ ಪ್ರಕಾರ ಬೆಳೆ ಮಾಡಿಕೊಳ್ಳಬೇಕು

ಮಾವಿನ ಗಿಡಗಳಿಲ್ಲದ ತೋಟಗಳು ಶೃಂಗಾರದಿಂದ ಶೋಭಿಸುವದಿಲ್ಲ ವಾದುದರಿಂದ ಮಾವಿನ ಗಿಡಗಳನ್ನು ಬೆಳಿಸದ ಇರಲಾಗದು ತೋಟಗಳಿಲ್ಲ ದವರಾದರೂ ತಮ್ಮ ತಮ್ಮ ಹೊಲಗಳಲ್ಲಿಯೂ ಸುತ್ತಲೂ ಬದುವಿನ ಸಮೀ ಪಕ್ಕೆ ಮಾವಿನ ಮರಗಳನ್ನು ಬೆಳಸಬೇಕು ಹಾಗೂ ಆ ಹೊಲದ ಸಮೀ ಪದಲ್ಲಿ ನೀರು ಇದ್ದರೆ ನಾಕು, ಉಸುಕು ಕೆಮ್ಮಣ್ಣನ್ನು ತಗ್ಗಿಗೆ ಭರೀ ಮಾಡಿ ದರೆ ಎರಿಯ ಭೂಮಿ ಕಟಕು ಭೂಮಿ ಕರಲು ಕೇಸರಿ ಹಾಳು ಮೊದಲಾದ ಯಾವ ಭೂಮಿಯಲ್ಲಿಯಾದರೂ ಮಾವಿನ ಗಿಡಗಳು ಬೆಳೆಯುತ್ತವೆ ಅವು ಗಳ ಸುತ್ತು ನಾಲ್ಕೈದು ವರುಷದ ವರೆಗೂ ದನಗಳೂ ಕುರಿಗಳೂ ತಿನ್ನದ ಹಾಗೆ ಸುತ್ತಲೂ ಕಟ್ಟಿಗೆಗಳನ್ನಾಗಲಿ ತಳವಿಲ್ಲದ ಗಳಿಗೆಗಳನ್ನಾಗಲಿ ಇಟ್ಟು ಅವುಗಳ ಹಿಂದೆ ಮುಳ್ಳು ಹಚ್ಚಿ ಬಂದೋಬಸ್ತು ಮಾಡಬೇಕು ಮತ್ತು ಆ ಗಿಡಗಳನ್ನು ಬೆಳಿಸಬೇಕಾದರೆ ಬಹಳ ದ್ರವ್ಯದ ಖರ್ಚು ಬೇಕಾಗುವದಿಲ್ಲ, ಬಹಳ ಶ್ರಮವಾ ದರೂ ಇಲ್ಲ ಹೊಲದಲ್ಲಿ ಭಾವಿ ಇಲ್ಲದಿದ್ದರೆ ಒಂದು ಕೋಣವನ್ನು ಒಂದು ಕಪಾಲಿಯನ್ನು ಮತ್ತು ಒಂದು ಆಳನ್ನು ಅದಕ್ಕೆ ಇಟ್ಟು ಬಿಟ್ಟರೆ ನಾಲ್ಕೈದು ವರ್ಷಕ್ಕೆ ಫಲಗಳಾಗುವವು ಆಮೇಲೆ ಯಾವ ಶ್ರಮವಾದರೂ ಇಲ್ಲದೆ ತಮ್ಮಿಂದ ತಾವೇ ಬೆಳೆಯುತ್ತ ವರ್ಷ ವರ್ಷಕ್ಕೂ ಫಲವಾಗುತ್ತ ಇರುವವು ಮತ್ತು ಹೊಲಗಳಲ್ಲಿ ಬದುವಿನ ಸಮೀಪಕ್ಕೆ ಮಾವಿನ ಮರಗಳನ್ನು ಬೆಳಿಸಬೇಕಾದರೆ ಇಪ್ಪತ್ತನಾಲ್ಕು ಅಥವಾ ಮೂವತ್ತು ಮೊಳಕ್ಕೆ ಒಂದರಂತೆ ಚಚ್ಚೌಕ ಒಂದು ಗಜ ಅಗಲ ಒಂದು ಗಜ ತಗ್ಗಾಗಿರುವ ಕುಣಿಗಳನ್ನು ತೆಗಿಸಿ ಕೆಂಪು ಮಣ್ಣನ್ನು ಸಣ್ಣ ಉಸುಕನ್ನು ಭರೀ ಮಾಡಿ ತುಂಬಿ ಈ ಪ್ರಕರಣದ ಹಿಂದಿನ ಕಲಮುಗಳಲ್ಲಿ ಹೇಳಿದಂತೆ ಪ್ರಯತ್ನ ಮಾಡಿ ಬೆಳೆ ಮಾಡಿಕೊಳ್ಳಬೇಕು

ಮಾವಿನ ತೋಪುಗಳೆಂದರೆ ಸಾಲು ಸಾಲಾಗಿ ನಾಲ್ಕು ಮಾರು ಅಥವಾ ಐದು ಮಾರಿಗೆ ಒಂದೊಂದು ಗಿಡಗಳು ಯಾವ ಕಡೆಯಿಂದ ನೋಡಿದರೂ ಸಾಲಾಗಿ ಕಾಣುವ ಹಾಗೆ ಕುಣಿಗಳನ್ನು ಅಗಳಿಸಿ ಹಿಂದೆ ಹೇಳಿದ ಪ್ರಕಾರ ಬರೇ ಮಾವಿನ ವನವನ್ನು ಮಾಡಿಸಬೇಕಾದರೆ ತೋಟದ ಭೂಮಿಯಲ್ಲಿ ಯಾದರೂ ಊರಿಗೆ ಸಮೀಪವಾಗಿರುವ ಕನಿಷ್ಠ ಪ್ರತಿಯ ಭೂಮಿಯಲ್ಲಿಯಾದರೂ

ಮಾವಿನ ವನವನ್ನು ಮಾಡಿಕೊಳ್ಳಬೇಕು ಈ ಮಾವಿನ ವನದ ಮಧ್ಯಭಾಗದಲ್ಲಿ ಒಂದು ಚೌಕಿಯನ್ನಾಗಲಿ ಇಲ್ಲವೆ ಒಂದು ವಿಸ್ತಾರವಾದ ಮಂದಿರವನ್ನಾಗಲಿ ಅಥವಾ ಒಂದು ಧರ್ಮಶಾಲೆಯನ್ನಾಗಲಿ ಕಟ್ಟಿಸಿ ಅದರ ಬಳಿಯಲ್ಲಿ ಒಂದು ಸೇದಿಯು ಬಾವಿಯನ್ನು ಸರ್ವಲೋದಕದ ಉದ್ದಿಶ್ಯವಾಗಿ ಮಾಡಿಸಬೇಕು.

ಮಾವಿನ ವನದಲ್ಲಿ ಗಿಡಗಳನ್ನು ಬೆಳಸುವ ಕಾಲದಲ್ಲಿಯೋ ಅವುಗಳ ಸಂಗಡ ಹಲಸಿನ ಮರ ಕೆಲವು ಹುಣಿಸೆಯ ಮರ ನೇರಿಲ ಮರ ನೆಲ್ಲಿಯ ಗಿಡ ಮತ್ತು ನಾಲ್ಕಾರು ವರುಷದ ಮೇಲೆ ನೀರಿಲ್ಲದೆ ಫಲವಾಗುವಂಥ ಕೆಲವು ತರದ ಫಲವೃಕ್ಷಗಳನ್ನು ಬೆಳಸಬೇಕು ತೋಟಗಳಲ್ಲಾದರೂ ಅತ್ಯುತ್ತಮ ತರದ ಮಂಡು ಭೂಮಿಯಲ್ಲಿ ಮಾವಿನ ವನವನ್ನು ಮಾಡದ ಆ ತೋಟದ ಭೂಮಿಯಲ್ಲಿ ಯಾವ ಕಡೆಗೆ ಸಾಮಾನ್ಯತರದ ಭೂಮಿ ಅದೆಯೋ ಅಲ್ಲಿ ಒಂದು ಭಾಗದಲ್ಲಿ ಈ ಪ್ರಕಾರ ಮಾವಿನ ವನವನ್ನು, ಮತ್ತು ಮೊಟ್ಟೆಯ ನೀರು ಏರದಂಥ ಭೂಮಿ ಇದ್ದರೆ, ಒಂದು ಭಾಗದಲ್ಲಿ ಗೋಡಂಬಿಯ ವನವನ್ನು, ಬೇರೊಂದು ಭಾಗದಲ್ಲಿ ಪೇರಲ ವನವನ್ನು, ಮತ್ತು ಸರ್ವದಾ ನೀರು ಏರುವ ಭೂಮಿಯಲ್ಲಿ ಒಂದು ಕಡೆಗೆ ಲಿಂಬಿಯ ವನವನ್ನು, ಒಂದು ಕಡೆಗೆ ತಂಗು ಬಾಳಿಯನ್ನು ಮತ್ತೊಂದು ಕಡೆಗೆ ಅಡಿಕೆಯ ಗಿಡವನ್ನು ಎಲೆಯ ಬಳ್ಳಿಗಳನ್ನು ಅಲ್ಲಲ್ಲಿಗೆ ತಾರತಮದಿಂದ ಕಿತ್ತಳೆ ಹೇರಳೆ ದ್ರಾಕ್ಷೆ ಮೊದಲಾದ ಅನಂತ ಪ್ರಕಾರದ ಫಲವೃಕ್ಷಗಳ ಸಮುದಾಯವನ್ನು ಮಾಡಿಕೊಳ್ಳಬೇಕು ಇಲ್ಲಿ ಮಾವಿನ ಮರಗಳನ್ನು ಬಳಸುವದನ್ನು ಹೇಳುತ್ತೇನ ಅದು ಹೇಗಂದರೆ—

ತೋಟಗಳಲ್ಲಿಯಾಗಲಿ ಅಥವಾ ಹೊಲಗಳಲ್ಲಿಯಾಗಲಿ ಕನಿಷ್ಠ ಪ್ರತಿಯ ಭೂಮಿಗಳಿದ್ದು ಅವುಗಳ ಉತ್ಪನ್ನವು ಕಡಿಮೆಯಾಗುತ್ತ ಇದ್ದಲ್ಲಿ ಅಂಥ ಭೂಮಿಯಲ್ಲಿ ಭಾವಿ ಇದ್ದು ಮೊಟ್ಟೆಯ ನೀರು ಏರಿ ಹೋಗುವ ಹಾಗಿದ್ದರೂ ಸರಿ, ಅಥವಾ ನೀರು ಇಲ್ಲದ ಇದ್ದರೂ ಸರಿಯೇ, ಅಂಥಲ್ಲಿ ಮತ್ತು ಆ ಭೂಮಿ ಮಾಂಜರಿಯಾಗಲಿ ಎರಿಯಾಗಲಿ ಅಥವಾ ಮೃದುವಾದ [illegible] ಹಾಳು ಭೂಮಿ ಕೆಂಪು ಮಸಾರಿ ಕಮ್ಮಣ್ಣಿನ ಮೊರಡಿ ಎಡ್ಡದ ಕೆಳಗೆ ಇರುವ ಭೂಮಿ ಗುಡ್ಡದ ಮಾರಿ ಕೇಸರಿ ಕಪ್ಪು ಮೊರಡಿ ಉಸುಕು ಭೂಮಿ, ಎರಿಯ ಭೂಮಿ ಮುಂತಾದ ಭೂಮಿಗಳಲ್ಲಿ ಮಂಡು ಮುಂತಾದ ಮಡಿಯ ನೆಲವನ್ನು ಬಿಟ್ಟು ಹಾಗು ನೆಲ್ಲು ಬೆಳೆಯುವಂಥ ತಗ್ಗು ನೆಲವಾದರೂ ಇದ್ದರೆ ಅಂಥ ಭೂಮಿ ಎಷ್ಟು ಇರುವದೋ ಅಷ್ಟು ಬಿಟ್ಟು, ಉಳಿದ ಯಾವತ್ತು ಕನಿಷ್ಠ ಭೂಮಿಯಲ್ಲಿ ತಗ್ಗಾಗಿದ್ದರೂ ತೆವರಾಗಿದ್ದರೂ ಹಳ್ಳದ ಸಮ[illegible]ಗಿದ್ದರೂ ಅಥವಾ ಹಳ್ಳಗಳಿಲ್ಲದಿದ್ದರೂ ಆ ಭೂಮಿಯ ತಲೆಯು ಮೇಲು ಯಾವ ದಿಕ್ಕಿಗಾದರೂ ಎತ್ತರ ಮೊರಡಿಯು ಇದ್ದರ ಉತ್ತಮವೇ ಸರಿ, ಇಲ್ಲದಿದ್ದರೆ ಸಮತಳವಾದರೂ

ಆಗಲಿ ಅಂಥ ನೆಲದಲ್ಲಿ ಐದು ಗಜದ ಕೆಳಗಾದರೂ ನೀರು ಇದ್ದರೆ ಸಾಕು, ಅಥವಾ ಇನಕ್ಕೂ ಸಮೀಪದಲ್ಲಿ ನೀರು ಹೊರಡುವ ಭೂಮಿಯಾದರಂತೂ ಪ್ರಯೋಜನವೇ ಸರಿ, ಇಂಥ ಭೂಮಿಯಲ್ಲಿ ಮಾವಿನ ಗಿಡಗಳು ಅತ್ಯುತ್ಕೃಷ್ಟ ಬೆಳೆಯಾಗುತ್ತವೆ ಅದರಲ್ಲಿ ಗಿಡಗಳ ಬೇರುಗಳು ಹತ್ತೆಂಟು ವರ್ಷದೊಳಗೆ ತಳದಲ್ಲಿ ನೀರಿನ ತಂಪಿಗೆ ಮಟ್ಟಿದರೆ ವಿಸ್ತಾರವಾಗಿ ಬೆಳೆಯುತ್ತ ಎಷ್ಟು ವರ್ಷದ ವರೆಗಾದರೂ ಕೆಡದೆ ವರ್ಷ ವರ್ಷಕ್ಕೆ ಫಲವಾಗುತ್ತಾ ಇರುವವು ಅದರಲ್ಲಿ ಅವುಗಳ ಬೇರು ನೀರಿಗೆ ಮುಟ್ಟದೆ ಇದ್ದರೂ ಐದು ಗಜದ ಕೆಳ ಗಾದರೂ ನೀರು ಇರುವ ಭೂಮಿಯಲ್ಲಿ ಗಿಡಗಳು ಕೆಡವೆ ಇದ್ದು ಫಲಿಸು ವವು ನೀರು ಬಹಳ ದೂರ ಇರುವ ತೆವರು ಕಟ್ಟು ಭೂಮಿಯಲ್ಲಿ ಮಾವಿನ ಗಿಡಗಳನ್ನ ಬೆಳಿಸಿದರೆ ಕೆಲವು ವರ್ಷಕ್ಕೆ ಸಿಡಿ ಹಾಯ್ದು ಒಣಗಿ ಹೋಗುವವು ಅಥವಾ ಒಂದು ವರ್ಷಕ್ಕೆ ಇಂಥ ಭೂಮಿಯಲ್ಲಿಯಾದರೂ ಮಾವಿನ ಗಿಡ ಗಳನ್ನು ಬೆಳಸಬೇಕಾದರೆ ಆ ಗಿಡಗಳಿಗೆ ಮಳೆಗಾಲದಲ್ಲಿಯಾದರೂ ಬೇರಿಗೆ ನೀರಿನ ತಂಪು ಚನ್ನಾಗಿ ಮುಟ್ಟುವ ಹಾಗೆ ತಲೆಯ ಮೇಲೆ ಒಡ್ಡು ಹಾಕಿ ಮೇಲುಗಡೆಯಲ್ಲಿ ಸ್ವಲ್ಪ ನೀರು ನಿಂತು ತಂಪಾಗುವ ಹಾಗೆ ಮಾಡಿದರೆ ಅದ ರಿಂದಲಾದರೂ ಗಿಡಗಳು ಕೆಡುವದಿಲ್ಲ

ಆದರೆ ಕನಿಷ್ಠ ಪ್ರತಿಯ ಭೂಮಿಗಳಲ್ಲಿ ನೀರಿನ ಆಸ್ಪದವು ಸಮೀಪ ದಲ್ಲಿ ಇದ್ದರೆ ಅಂಥ ನೆಲಗಳಿಗೆ ಯಾವತ್ತು ನೆಲವೆಲ್ಲ ಔರಸ ಚೌರಸ ಸಾಲು ಸಾಲಾಗಿ ಇಪ್ಪತ್ತುನಾಲ್ಕು ಮೊಳಕ್ಕ ಒಂದೊಂದು ತಗ್ಗನ್ನು ಹಿಂದೆ ಹೇಳಿದ ಹಾಗೆ ತೆಗಿಸಿ ಅದರಲ್ಲಿ ಮಣ್ಣನ್ನು ಉಸುಕನ್ನು ಸಮವಾಗಿ ಕಲಿಸಿ ಭರ್ತೀ ಮಾಡಬೇಕು ಮತ್ತು ಉಸುಕು ಬೆರಿಕೆಯಾದ ಮಸಬು ಭೂಮಿ ಯಾದರೆ ಆ ಭೂಮಿಗೆ ಕೆಮ್ಮಣ್ಣು ಉಸುಕನ್ನ ಕಲಿಸಿ ಹಾಕುವ ಪ್ರಯೋಜ ನವಿಲ್ಲ. ಎರಿಯ ಭೂಮಿ ಅಥವಾ ಕೆಂಪು ಮಣ್ಣು ಇಲ್ಲದ ಭೂಮಿಯಾದರೆ ಅಂಥ ಭೂಮಿಗೆ ಕೆಮ್ಮಣ್ಣನ್ನ ಉಸುಕನ್ನು ಕೂಡಿಸಿ ಹಾಕಬೇಕು ತರು ವಾಯ ಆ ತಗ್ಗಿನಲ್ಲಿ ನೀರು ಹಾಕಿ ಹಸೀ ಮಾಡಿ ಇಟ್ಟು ಮಾವಿನ ಬೀಜ ಗಳನ್ನು ಹಿಂದೆ ಹೇಳಿದ ಪ್ರಕಾರ ಆ ಕುಣಿಗಳಲ್ಲಿ ಅಡ್ಡ ಇಟ್ಟು ಅದರ ಮೇಲೆ ನಾಲ್ಕು ಬೆರಳುದ್ದವಾಗುವ ಹಾಗೆ ಪ್ರತಿಯೊಂದು ಕುಣಿಗೆ ಒಂದು ಹಿಡಿಗೆಯಂತೆ ಹಳೇ ಗೊಬ್ಬರವನ್ನು ಹಾಕಿ ಪ್ರತಿ ಒಂದಕ್ಕೆ ಒಂದೊಂದು ಕೊಡ ದಂತೆ ನೀರನ್ನು ಹಾಕಿ ಬಿಡಬೇಕು ಆ ಮೇಲೆ ಹಿಂದ ಈ ಪ್ರಕರಣದಲ್ಲಿ ಹೇಳಿ ದಂತೆ ಆರೈಕೆಯನ್ನು ಮಾಡುತ್ತ ಹೋಗಬೇಕು.

ಬೈಲು ಭೂಮಿಯಲ್ಲಿ ಈ ಪ್ರಕಾರ ಗಿಡಗಳನ್ನು ಬೆಳಸಬೇಕಾದರೆ ಪ್ರತಿ ಯೊಂದು ಗಿಡದ ಸುತ್ತು ಮುತ್ತು ಕಳ್ಳಿಯನ್ನು ಹಚ್ಚಬೇಕು ಅಥವಾ ತಳ ಇಲ್ಲದ ಗಳಿಗೆಗನ್ನಾಗಲಿ ಹಾಕಬೇಕು ಅಥವಾ ಅವರ ಸುತ್ತಲು ದನಗಳು

ಮುಟ್ಟಿದ ಹಾಗೆ ಕಟ್ಟಿಗೆಯ ಚೌಕು ತೊಟ್ಟಿಲವನ್ನು ಒಂದು ಆಳುದ್ದ ಪ್ರಮಾಣವಾಗಿ ಮಾಡಿಸಿ ಇಡಬೇಕು. ಇಲ್ಲವೆ ಆ ಗಿಡಗಳ ಸುತ್ತಲೂ ಕಟ್ಟಿಗೆಗಳನ್ನು ನಡಿಸಿ ಸುತ್ತಲೂ ಬರಿಗಳಿಂದ ಹೆಣೆದು ಮೃಗ ಪಶು ಕುರಿಗಳು ಮುಟ್ಟಿದ ಹಾಗೆ ಬಲಾತ್ಕಾರ ಮಾಡಿ ಮತ್ತು ಆ ಮಾವಿನ ವನದ ಸುತ್ತು ಮತ್ತು ಹೊರ ಮೈಯ್ಯಲ್ಲಿ ಬೇಲಿಯನ್ನೂ ಕಳ್ಳಿಯನ್ನೂ ದುರಸ್ತು ಮಾಡಿರಬೇಕು ಹೀಗೆ ಯಥಾ ಪ್ರಕಾರ ಹಿಂದೆ ಹೇಳಿದ ಹಾಗೆ ಆರೈಕೆಯನ್ನು ಮಾಡುತ್ತ ಹೋದರೆ ಮಳೆಗಾಲದಲ್ಲಿ ಗಿಡಗಳು ಮಳೆಯ ನೀರಿಗೆ ಬೆಳೆಯುವವು. ಆ ಮೇಲೆ ಉತ್ತರಿಯ ಮಳೆಯ ಪ್ರವೇಶ ಕಾಲದಲ್ಲಿ ಆ ಗಿಡಗಳ ಸುತ್ತಲೂ ಅಗತಿಯನ್ನು ಮಾಡಿಸಿ ಪ್ರತಿಯೊಂದು ಮಡಿಗೆ ಒಂದು ಹೆಡಿಗೆ ಸಣ್ಣ ಉಸುಕನ್ನು ಹಾಕಿಸಿ ಗಿಡಕ್ಕೆ ಒಂದು ಕೊಡದಂತೆ ನೀರು ಹಾಕಿಸಿ ಆ ಗಿಡದ ಕೆಳಗೆ ಬೊಡ್ಡೆಯಲ್ಲಿ ಪ್ರತಿಯೊಂದು ಮಡಿಗೆ ಒಂದೊಂದು ಹೊಸ ಗಡಿಗೆಯಲ್ಲಿ ನೀರು ತುಂಬಿ ಇಡಬೇಕು ಮತ್ತು ಗಿಡದ ಬೊಡ್ಡೆಯಲ್ಲಿ ನೀರು ತುಂಬಿ ಇಡದಿದ್ದರೆ ಸಂಕ್ರಾಂತಿಯಿಂದ ಪ್ರತಿಯೊಂದು ಗಿಡಕ್ಕೆ ಎರಡು ಕೊಡದಂತೆ ನೀರು ಹಾಕಿ ಬಿಟ್ಟರೆ ಶಿವರಾತ್ರಿಯ ವರೆಗೂ ನೀರು ಬೇಕಾಗುವದಿಲ್ಲ. ಆ ಮೇಲೆ ಪ್ರತಿ ತಿಂಗಳಿಗೆ ಎರಡು ವೇಳೆಯಂತೆ ಒಂದು ತಿಂಗಳು, ತಿಂಗಳಿಗೆ ನಾಲ್ಕು ವೇಳೆಯಂತೆ ಒಂದು ತಿಂಗಳು, ಮತ್ತು ತಿಂಗಳಿಗೆ ಎಂಟು ವೇಳೆಯಂತೆ ಎರಡು ತಿಂಗಳು ಈ ಪ್ರಕಾರ ನೀರು ಹಾಕುವದರೊಳಗೆ ಮಳೆಗಾಲವು ಬರುವದು. ಹೀಗೆ ಸುಲಭದಿಂದ ಮಾವಿನ ಗಿಡಗಳು ಸಹಸ್ರಾವಧಿಯಾದರೂ ಬೆಳೆಯುವವು. ಮಾವಿನ ವನವನ್ನು ಬೆಳಿಸುವವರು ಆ ಮಾವಿನ ಗಿಡಗಳನ್ನು ಹಾಕುವಾಗ ಅವುಗಳ ಸಂಗಡ ಹುಣಿಸೆಯ ಮರಗಳನ್ನು ಹಲಸಿನ ಮರಗಳನ್ನು ಬೋರಿಯ ಮರಗಳನ್ನು ನೀರಲ ಮರಗಳನ್ನು ಮತ್ತು ನೆಲ್ಲಿಯ ಮರಗಳನ್ನು ಹಾಗು ಬೆಳವಲ ಮರಗಳನ್ನು ಅಲ್ಲದೆ ನಾಲ್ಕಾರು ವರ್ಷದ ಮೇಲೆ ನೀರಿಲ್ಲದೆ ಮಾವಿನ ಮರಗಳಂತೆ ಫಲವಾಗುವಂಥ ಅತ್ಯುತ್ತಮ ಫಲವೃಕ್ಷಗಳನ್ನು ಹಾಕಬೇಕು ಅವುಗಳಿಗೂ ಮಾವಿನ ಗಿಡಗಳಂತೆ ಆರೈಕೆಯನ್ನು ಮಾಡಬೇಕು ಮತ್ತು ನೆಳಲಿಗೂ ಶೋಭೆಗೂ ಆಲ ಅತ್ತಿ ಬಸರಿ ಆಶೋಕ ಪಾಲಾಸ ಕಂಚಾಳ ದಾಳಿಂಬ ಮೊದಲಾದ ಕೆಲವು ವೃಕ್ಷಗಳನ್ನು ತಾರತಮ್ಯದಿಂದ ಅಲ್ಲಲ್ಲಿಗೆ ಹಾಕಿ ನಾಲ್ಕು ಅಥವಾ ಐದು ವರುಷಗಳ ವರೆಗೆ ನೀರು ಹಾಕಿ ಪರಾಮರಿಸುತ್ತ ಹೋದರ ಮುಂದೆ ಕೆಲವು ಕಾಲದ ವರೆಗೆ ನೀರು ಇಲ್ಲದೆ ಮತ್ತಾವ ಆರೈಕೆ ಇಲ್ಲದೆ ತಮ್ಮಿಂದ ತಾವೇ ಮಳೆಯ ಸಹಾಯದಿಂದ ಬೆಳೆದು ವರ್ಷ ವರ್ಷಕ್ಕೂ ಫಲಗಳನ್ನು ಕೊಡುತ್ತಾ ಇರುವವು

ಕೆಲವು ವರ್ಷಗಳ ವರೆಗೆ ಪ್ರತಿ ವರ್ಷ ವೈಶಾಖ ಮಾಸದಲ್ಲಿ ಆ ಗಿಡಗಳಿಗೆ ಸವೆ ಮೊದಲಾದ ಮಲಿನಗಳನ್ನು ತೆಗಿಸುತ್ತ ಕೆಳಗೆ ಉದುರಿದ ತೊಪ್ಪ

ಲಗಳನ್ನು ಬಳಿದು ಗೊಬ್ಬರದ ನಿಮಿತ್ತವಾಗಿ ಮಾಡಿದ ತಗ್ಗಿಗೆ ಹಾಕಿಸುತ್ತ ಆ ಗಿಡಗಳ ಸುತ್ತಲೂ ಆಗತಿಯನ್ನು ಮಾಡಿಸಿ ಗಿಡದ ಬೊಡ್ಡಿಯಲ್ಲಿ ಮಳೆಯ ನೀರು ನಿಲ್ಲುವ ಹಾಗೆ ಮಡಿಯನ್ನು ಮಾಡಿಸಿದರೆ ಅಷ್ಟರಿಂದಲೇ ತಂಪು ಹಿಡಿದು ಫಲವಾಗುತ್ತಿರುವವು ಮಾವಿನ ಗಿಡಗಳಿಗಾದರೂ ಹೀಗೆ ಮಾಡುವದರಿಂದ ತಂಪು ಹಿಡಿದು ಮಳೆಗಾಲದಲ್ಲಿ ಚಿಗಿತು ತಳಿರಾಗಿ ಮಾಗಿಯಲ್ಲಿ ಹೂವಾಗಿ ಕಾಯಿಗಳಾಗುವವು.

## ಉದ್ಯಾನ ವನವು.

ಗ್ರಾಮ ಪುರಗಳ ಸಮೀಪದ ಬಹಿರ್ಭಾಗದಲ್ಲಿ ಅಥವಾ ಸ್ವಲ್ಪ ದೂರ ನಾದರೂ ಪುರಗಳಿಗೆ ಸಮೀಪವಾಗಿ ಬರ ಹೋಗುವದಕ್ಕೆ ಅತಿ ಆಯಾಸವಾಗದ ಹಾಗೆ ಇರುವ ವಿಶಾಲವಾದ ಭೂಮಿಯಲ್ಲಿ ಮಹಾ ನೀರಿನ ಆಸ್ಪದ ವಿರುವಲ್ಲಿ ಅಥವಾ ಹಳ್ಳದ ದಂಡೆಯಲ್ಲಿ ಹತ್ತೆಂಟು ಮೊಟ್ಟೆಗಳನ್ನು ಅಥವಾ ನಾಲ್ಕಾರು ಭಾವಿಗಳನ್ನು ಮಾಡಿಕೊಳ್ಳುವದಕ್ಕೆ ಬರುವ ಹಾಗೆ ಇರುವ ಭೂಮಿಯನ್ನು ದೊಡ್ಡ ಬುದ್ಧಿಯುಳ್ಳ ರಾಜ ಕೃಷಿಕರು ಮತ್ತು ಐಶ್ವರ್ಯವಂತರಾದವರು ಇದಲ್ಲದೆ ರಾಜರುಗಳು ಮತ್ತು ಅಂಥ ಭೂಮಿಯುಳ್ಳ ಕೃಷಿಕರಾದವರು ಉದ್ಯಾನ ವನವೆಂಬ ಶೃಂಗಾರದ ತೋಟವನ್ನು ಮಾಡಿಕೊಳ್ಳಬೇಕು. ಆದರೆ ಉದ್ಯಾನ ವನವು ಬಹಳವಾಗಿ ಮಾವಿನ ವನದಿಂದ ಶೋಭಿಸುವದು. ಆದರೆ ಆ ಭೂಮಿಯಲ್ಲಿ ಸ್ವಲ್ಪ ಸಾಮಾನ್ಯತರದ ಮಧ್ಯಮ ಪ್ರತಿಯ ಭೂಮಿಯಲ್ಲಿ ಆ ವಿಶಾಲವಾದ ತೋಟದ ಹತ್ತೆಂಟು ಭಾಗಗಳಲ್ಲಿ ಒಂದು ಭಾಗದೊಳಗೆ ಔರಸ ಚೌರಸ ಸಾಲು ಸಾಲಾಗಿ ಮಾವಿನ ಗಿಡಗಳನ್ನು ಅವುಗಳ ಸಂಗಡ ಕೆಲವು ನಾನಾ ತರದ ಫಲವೃಕ್ಷಗಳನ್ನು ಮತ್ತು ಪಾಲಾಶ ಕಂಚಾಳ ಸಂಪಿಗೆ ಪಾದರಿ ತಪಸಿ ಬಿಟ್ಟದಾವರ ದೇವಗಣಿಗಿಲ ಅಗರು ದೇವದಾರು ಸುರಹೊನ್ನೆ ನಾಗಸಂಪಿಗೆ ಕೋಲಸಂಪಿಗೆ ವನಸಂಪಿಗೆ ಮೊದಲಾದ ಪುಷ್ಪದ ಮರಗಳನ್ನು ಆಲ ಅತ್ತಿ ಬಸರಿ ತೇಗು ಹೆದ್ದೇಗು ಮತ್ತಿ ಕರಿಮತ್ತಿ ಬೀಟಿ ಅಶೋಕ ಪಿನ್ನಿವಾಲ ಮೊದಲಾದ ನೆಳಲುಳ್ಳ ವೃಕ್ಷಗಳನ್ನು ತಾರತಮ್ಯದಿಂದ ಸಾಲು ಸಾಲಾಗಿ ಹಚ್ಚಬೇಕು ಆ ಮಾವಿನ ವನದ ಮಧ್ಯಭಾಗದಲ್ಲಿ ಪ್ರವಾಸಿಕರು ಇಳಿಯುವದಕ್ಕೆ ಒಂದು ಧರ್ಮಶಾಲೆಯನ್ನು ಮತ್ತು ಅದರ ಬಳಿಯಲ್ಲಿ ಒಂದು ಬಾವಿಯನ್ನು ಮಾಡಿಸಿರಬೇಕು

ವಿಶಾಲವಾದ ಭೂಮಿಯಲ್ಲಿ ಉದ್ಯಾನ ವನವೆಂಬ ಘನವಾದ ತೋಟವನ್ನು ಮಾಡಿಸುವವರು ಮೊದಲು ಸುತ್ತಲೂ ಮಾವಿನ ಗಿಡಗಳನ್ನು ಹಾಕಿ ಮತ್ತು ಆ ತೋಟದ ಹತ್ತೆಂಟು ಭಾಗಗಳೊಳಗೊಂದು ಭಾಗದಲ್ಲಿ ಮಾವಿನ ವನವನ್ನು ಮಾಡಿಕೊಂಡು ಅದಕ್ಕೆ ಸಮೀಪವಾಗಿ ಮೊಟ್ಟೆಯ ನೀರಿನ ಕಾಲುವೆ

ಇಷ್ಟದಲ್ಲಿ ತೆಂಗಿನ ವನವನ್ನು ಮಾಡಿಕೊಳ್ಳಬೇಕು. ಹಾಗು ಅಡಿಕೆಯನ್ನೂ ಎಲೆಯ ಬಳ್ಳಿಯನ್ನೂ ಬೇರೊಂದು ಕಡೆಗೆ ಮಾಡಿಸಿ ಮತ್ತೊಂದು ಭಾಗದಲ್ಲಿ ಬಾಳೆಯ ವನವನ್ನು ಇನ್ನೊಂದು ಕಡೆಗೆ ನಿಂಬಿಯ ವನವನ್ನು ಬೇರೊಂದು ಭಾಗದಲ್ಲಿ ಪೇರಲ ವನವನ್ನು ಇವಲ್ಲದೆ ಮತ್ತೊಂದು ಕಡೆಗೆ ಅಂಜೀರವನ್ನು ಹಾಗು ಬಾಳೆಯ ಮಧ್ಯದಲ್ಲಿ ಯಾಲಕ್ಕಿಯ ಗಿಡಗಳನ್ನು ಒಂದು ಕಡೆಗ ತೋಟದ ಮಧ್ಯಭಾಗದಲ್ಲಾಗಲಿ ಪುಷ್ಪ ವನದ ಮಧ್ಯಭಾಗದಲ್ಲಾಗಲಿ ದ್ರಾಕ್ಷಿಯ ಮಂಟಪಗಳನ್ನು ಸುರುವಾರದ ಗಿಡಗಳನ್ನು ಪಪ್ಪಯಿ ಗಿಡಗಳನ್ನು ಹಾಗು ಮತ್ತೊಂದು ಕಡೆಗೆ ಕಬ್ಬನ್ನು ಇನ್ನೊಂದು ಕಡೆಗೆ ನೆಲ್ಲನ್ನು ಬಿತ್ತುವ ಪಡಗಳನ್ನು ಬೇರೆ ಬೇರೆ ತಾರತಮ್ಯದಿಂದ ಮಾಡಿಸಿ ಹಾಗು ವನದ ಶೃಂಗಾರ ಸಂಭ್ರಮಕ್ಕಾಗಿ ವಿಸ್ತಾರವಾದ ಮಂದಿರವನ್ನು ಒಂದು ಭಾಗದಲ್ಲಿ ಮಾಡಿಸಿ ಅದರ ಸುತ್ತಲೂ ಪುಷ್ಪ ವನವನ್ನು ಕೆಲವು ತರದ ಫಲವೃಕ್ಷಗಳನ್ನು ಕುಲಕ್ಕೆ ಹತ್ತಂಟು ಬೆಳಿಸುತ್ತ ಶೋಭೆಗೋಸ್ಕರ ಕೆಲವು ತೆಂಗಿನ ಮರಗಳನ್ನು ಕೆಲವು ಅಡಿಕೆಯ ಗಿಡಗಳನ್ನು ಅಲ್ಲಲ್ಲಿಗೆ ಒಂದೊಂದರಂತೆ ಮಾಡಿಸುತ್ತ ಆ ಪುಷ್ಪ ವನವನ್ನು ಅತಿ ಚಾತುರ್ಯದಿಂದ ಸಂಭ್ರಮವಾಗಿ ಕಾಣುವಂತೆ ಮಾಡಿಸಿ ಆ ಪುಷ್ಪ ವನದ ಸಮೀಪದಲ್ಲಿ ಬಿಲ್ವ ವನವನ್ನು ಅದರ ಮಧ್ಯಭಾಗದಲ್ಲಿ ಒಂದು ಚಾಕಿಯನ್ನು ಅತಿ ಚಾತುರ್ಯತರವಾಗಿ ಕಟ್ಟಿಸಿ ಅದರ ಸಮೀಪವಾಗಿ ಒಂದು ನೇಡಿಯ ಬಾವಿಯನ್ನು ಮಾಡಿಸಿ ಇಷ್ಟು ತಾರತಮ್ಯದಿಂದ ಸಕಲ ವೃಕ್ಷಾದಿಗಳನ್ನು ಏಕ ಕಾಲದಲ್ಲಿ ಮಾಡಿಸಿ ಮತ್ತು ಕೆಲವು ಭಾಗವ ಭೂಮಿಯನ್ನು ಹಾಗ ಉಳಿಸಿ ಒಂದು ಕಡೆಗೆ ಕಾಯಿಪಲ್ಲೆಯ ಜೀನಸುಗಳನ್ನು ಮತ್ತೊಂದು ಕಡೆಗೆ ಗೆಣಸಿನ ಬಳ್ಳಿಯನ್ನು ಬೇರೊಂದು ಕಡೆಗೆ ಉಳ್ಳಿಯನ್ನು ಬಳ್ಳೊಳ್ಳಿಯನ್ನು ಹಾಗು ಒಂದು ಭಾಗದಲ್ಲಿ ಕಸಕಸಿಯನ್ನು ಮತ್ತೊಂದು ಕಡೆಗೆ ಮೆಂತ ಸಾಸಿವೆ ಜೀರಿಗೆ ಶಾಜೀರಿಗೆ ಕೋತಂಬರಿ ಗಜ್ಜರಿ ಮೂಲಂಗಿ ಮೊದಲಾದ ಪದಾರ್ಥಗಳನ್ನು ಮಾಡಿಸಿ ಬೇರೊಂದು ಕಡೆಗೆ ಅರಿಷಣವನ್ನು ಮಣಸಿನಕಾಯಿ ಗಿಡಗಳನ್ನು ಇನ್ನೊಂದು ಕಡೆಗೆ ಬದನಿಯ ಗಿಡಗಳನ್ನು ಮತ್ತೊಂದು ಕಡೆಗೆ ಗೋವಿನ ಜೋಳವನ್ನು ಮುಳ್ಳುಜವೆಯನ್ನು ರಾಗಿಯನ್ನು ಅಲ್ಲವನ್ನು ಬೇರೆ ಬೇರೆ ಹಲವು ಪ್ರಕಾರದ ಫಲ ಪದಾರ್ಥಾದಿ ಸಂಗ್ರಹಗಳನ್ನು ಕಾಲವರಿತು ಬಿತ್ತಿ ಬೆಳೆಯುವ ಭೂಮಿಯನ್ನು ಬೇರೊಂದು ಕಡಗ ಮಾಡಿಸಿ ತದನಂತರ ಸಕಲ ದೇಶಗಳಲ್ಲಿ ಅಲ್ಲಲ್ಲಿ ಬೇರ ಬೇರ ಒಂದೊಂದು ದೇಶಗಳಲ್ಲಿ ಇರುವಂಥ ವಿಚಿತ್ರತರವಾದ ಫಲವೃಕ್ಷಗಳ ಬೀಜಗಳನ್ನು ಮತ್ತು ಸುಂದರವಾದ ಪುಷ್ಪದ ಜಾತಿಯ ಬೀಜಗಳನ್ನು ಅಥವಾ ಅಗಿಗಳನ್ನು ಇಲ್ಲವೆ ಕೊಲ್ಲೆಗಳನ್ನು ಅಥವಾ ಅಂಟುಗಳನ್ನು ತರಿಸಿ ತಾರತಮ್ಯದಿಂದ ಹಾಕುತ್ತ ಅವುಗಳ ಆರೈಕೆಯನ್ನು ಜಾಗ್ರತೆಯಿಂದ ಮಾಡಿಸುತ್ತಿರಬೇಕು. ಹಾಗು ನಾನಾ ಪ್ರಕಾರದ ರೋಗಿಗಳಿಗೆ ಚಿಕಿತ್ಸೆಯಾದ ಔಷದ ಮೂಲಿಕೆಗಳನ್ನೆಲ್ಲ ಅನೇಕ ದೇಶಗ

ಳಿಂದ ಯತ್ನಿಸಿ ತರಿಸಿ ಬೇರೊಂದು ಕಡೆಗೆ ಹಾಕಿಸುತ್ತಿರಬೇಕು. ಈ ಪ್ರಕಾರವಾಗಿ ಮಾಡಿದ ಉದ್ಯಾನ ವನಗಳು ಘನ ಸಂಭ್ರಮವಾಗಿ ರಂಜಿಸುತ್ತ ಭೂಲಕ್ಷ್ಮಿಯ ದ್ರವ್ಯಾಲಯದಂತೆ ಶ್ರೀ ಲಕ್ಷ್ಮಿಯ ರತ್ನಾಭರಣದ ಪೆಟ್ಟಿಗೆಯಂತೆ ಇದ್ದು ಮಂಗಲಕರವಾಗಿ ಮನೋಹರವಾಗಿ ನೋಟ ರಂಜನೆಯಾಗಿ ಊಟಕ್ಕೆ ಯುಕ್ತವಾಗಿ ಸಕಲ ಫಲ ಪದಾರ್ಥಾದಿಗಳನ್ನು ಸದಾ ಕಾಲದ ಸಂಭ್ರಮದಿಂದ ಬೆಳೆಯುತ್ತ ದ್ರವ್ಯಮಯವಾಗಿ ಇಂಥ ತೋಟಾಧಿಕಾರಿಯಾದ ರಾಜ ಬುದ್ಧಿಯುಳ್ಳ ರಾಜಕೃಷಿಕರ ವಂಶಪರಂಪರೆಯಾಗಿ ಅವರವರ ಕುಟುಂಬವನ್ನು ಪಾಲನ ಮಾಡುತ್ತ ಅರಗಾಲಂಗಳಲ್ಲಿ ಬರಗಾಲಂಗಳಲ್ಲಿ ಮತ್ತು ಸೌಖ್ಯ ಕಾಲಂಗಳಲ್ಲಿ ಒಂದೇ ಶಿಸ್ತಾಗಿ ಅವರಿಗೆ ದುರ್ಭಿಕ್ಷಾದಿ ಭಯಗಳು ಎಂದಂದಿಗೂ ಇಲ್ಲದಂತೆ ಆಗಿರುವದರಿಂದ "ಕೃಷಿತೋ ನಾಸ್ತಿ ದುರ್ಭಿಕ್ಷ" ಎಂಬ ವಾಕ್ಯವು ಸಾರ್ಥಕವಾಗುವದು. ಆದರೆ ಕೃಷಿಕರಾದವರು ಇಂಥ ತೋಟವನ್ನು ಮಾಡಿಸಬೇಕಾದರೆ ಹವುರಾಗುತ್ತದೆ. ಅದಕ್ಕೆ ಹಳ್ಳದ ದಂಡೆಯಲ್ಲಿ ಹತ್ತೆಂಟು ಕೂರಿಗೆ ಹೊಲವಿದ್ದರೆ ಸಾಕು, ಅಂಥ ಭೂಮಿ ಇದ್ದವನಿಗೆ ಈ ಪ್ರಕಾರದ ತೋಟವನ್ನು ಮಾಡಿಸುವದಕ್ಕೆ ದ್ರವ್ಯವಾದರೂ ಶ್ರಮವಾದರೂ ಬಹಳ ಬೇಕಾಗುವದಿಲ್ಲ ವ್ಯರ್ಥವಾಗಿ ಲಕ್ಷ್ಯವಿಲ್ಲದ ಲಗ್ನ ಶೋಭನಾದಿಗಳಿಗೆ ಹತ್ತೆಂಟು ಸಾವಿರ ರೂಪಾಯಿ ದ್ರವ್ಯವನ್ನು ಹಾಳು ಮಾಡುತ್ತಾರೆ ಇಂಥ ತೋಟಕ್ಕೆ ಅಷ್ಟು ದ್ರವ್ಯವಾದರೆ ಸಾಕು, ವರ್ಷಕ್ಕೆ ಹತ್ತೆಂಟು ಸಹಸ್ರ ರೂಪಾಯದ ಉತ್ಪನ್ನವಾಗುವದು

ಈ ಪ್ರಕಾರದ ಘನ ತೋಟವನ್ನು ಮಾಡಬೇಕಾದರೆ ಹತ್ತೆಂಟು ಮೊಟ್ಟೆಗೆ ನೀರು ಸಾಕಾಗುವಂಥ ನೀರಿನ ಬಲಾತ್ಕಾರವುಳ್ಳ ಭೂಮಿಯಲ್ಲಿ ಮೊದಲು ಬಾವಿಯನ್ನ ಯುಕ್ತಿಯ ಮೇಲಿಂದ ಕಡಿಸಿ ಬಾರಿಯನ್ನು ಸಿದ್ಧಮಾಡಿಸುತ್ತ ಒಡ್ಡುಗಳನ್ನು ಮತ್ತು ಮೇಲು ಕಾವಲಿಯ ಒಡ್ಡನ್ನು ಹಾಕಿಸಿ ಹಿಂದೆ ಹೇಳಿದ ಪ್ರಕಾರ ಬಿದಿರು ಬೀಜಗಳನ್ನು ಬೇವಿನ ಬೀಜಗಳನ್ನು ಹಾಕಿ ಕಳ್ಳಿಯನ್ನು ಸೀಗೆಯ ಬೀಜವನ್ನ ಕೇದಗಿಯನ್ನು ಮತ್ತು ಮುಳ್ಳನ್ನು ಹಚ್ಚಿ ಬೇಲಿಯನ್ನ ಬಂದೋಬಸ್ತು ಮಾಡಿ ಆ ತೋಟದ ಎಲ್ಲ ಭೂಮಿಯಲ್ಲಿ ಸುತ್ತುಗಟ್ಟಿ ಬೇಲಿಯ ಸಮೀಪಕ್ಕೆ ಇಪ್ಪತ್ತನಾಲ್ಕು ಮೊಳಕ್ಕೆ ಒಂದರಂತೆ ಮಾವಿನ ಗಿಡಗಳನ್ನು ಹಾಕಿ ಮಧ್ಯದಲ್ಲಿರುವ ಭೂಮಿಯನ್ನು ಹಾಗೇ ಉಳಿಸಿ ಅದರಲ್ಲಿ ಹಿಂದೆ ಹೇಳಿದ ಪ್ರಕಾರ ಒತ್ತಟ್ಟಿಗೆ ಒಂದು ಭಾಗದಲ್ಲಿ ಮಾವಿನ ವನವನ್ನು ಮಾಡಿಕೊಳ್ಳಬೇಕು

ತೋಟದ ಯಾವತ್ತು ಭೂಮಿಯಲ್ಲಿ ಬೇರೆ ಬೇರೆ ಕೆಲವು ಕೆಲವು ಭಾಗಗಳಲ್ಲಿ ತೆಂಗು ಬಾಳೆ ಅಡಿಕೆ ಎಲೆಯಬಳ್ಳಿ ನಿಂಬಿ ಪೇರಲ ಗೋಡಂಬಿ ಅಂಜೀರು ಪುಷ್ಪವನ ಬಿಲ್ವವನ ಮೊದಲಾದ ವನಗಳನ್ನ ಬೇರೆ ಬೇರೆ ಮಾಡಿಕೊಳ್ಳಬೇಕು.

ಬೇರೆ ಮತ್ತೊಂದು ಭಾಗದಲ್ಲಿ ಕಬ್ಬು ನೆಲ್ಲು ಗೆಣಸು ಗಜ್ಜರಿ ಉಳ್ಳಿ ಬಳ್ಳೊಳ್ಳಿ ಕಾಯಿಪಲ್ಲೆ ಕಸಕಸಿ ಮೆಂತೆ ಸಾಸಿವೆ ಜೀರಿಗೆ ಶಾಜೀರಿಗೆ ಕೋತಂಬರಿ ಮೂಲಂಗಿ ಅಲ್ಲ ಅರಿಷಿಣ ಮೆಣಸು ಮೆಣಸಿನಗಿಡ ಬದನಿಯಗಿಡ ಗೋವೇದ ಜೋಳ ಮುಳ್ಳುಜಪಿ ರಾಗಿ ನವಣಿ ಮೊದಲಾದ ಪದಾರ್ಥಗಳನ್ನು ಬೇರೆ ಬೇರೆ ಮಾಡಿಕೊಳ್ಳಬೇಕಾದರೆ ಅವುಗಳ ಹದವನ್ನು ಕಾಲವನ್ನು ಭೂಮಿಯನ್ನು ಋತುವನ್ನು ಬೆದೆಯನ್ನು ಪರೀಕ್ಷಿಸಿ ಬಿತ್ತಿ ಬೆಳೆ ಮಾಡಿಕೊಳ್ಳಬೇಕು

ಈ ಯಾವತ್ತು ವನಗಳ ವೃಕ್ಷಗಳನ್ನು ಮತ್ತು ಸಕಲ ಪದಾರ್ಥಗಳನ್ನು ಬೆಳೆ ಮಾಡಿಕೊಳ್ಳುವ ಸಕಲ ಯುಕ್ತಿಗಳನ್ನು ಮುಂದ ಈ ಪ್ರಕರಣದಲ್ಲಿ ಬೇರೆ ಬೇರೆ ವಿಸ್ತಾರವಾಗಿ ತಿಳುಹಿಸುವೆನು

ಈ ಪ್ರಕಾರ ಈ ಗ್ರಂಥದಲ್ಲಿ ಬರೆದಿರುವ ಸಕಲ ಯುಕ್ತಿಗಳನ್ನು ಸಕಲ ದೇಶಗಳಲ್ಲಿ ಭೂಪವಿತ್ರಾರ್ಥವಾಗಿ ಸಂಚಾರ ಮಾಡುತ್ತ ಅಲ್ಲಲ್ಲಿಯ ಕೃಷಿಕರು ಸಕಲ ಪದಾರ್ಥಗಳನ್ನು ಬಿತ್ತಿ ಬೆಳೆಯುವ ಸರ್ವ ಸಾಧನಗಳನ್ನ ನೋಡಿ ತಾವು ಸರ್ವಜ್ಞ ಮೂರ್ತಿಗಳಾದುದರಿಂದ ಸಮಸ್ತ ಯುಕ್ತಿಗಳನ್ನು ಹಲವು ಪ್ರಕಾರದ ಭೂಮಿಯ ಗುಣ ಪರೀಕ್ಷೆಯನ್ನು ಸಕಲ ಬೀಜಗಳ ಪರೀಕ್ಷೆಯನ್ನು ಋತು ಕಾಲಗಳನ್ನು ಮಳೆಯ ಹದದ ಕಾಲಗಳನ್ನು ಮತ್ತು ಭೂಮಿಯ ಹದ ಬೆದೆಗಳನ್ನು ಚನ್ನಾಗಿ ತಿಳಿದವರಾದ ಶ್ರೀ ಘನಮಠ ನಿವಾಸ ನಾಗಭೂಷಣ ಮಹಾಶಿವಯೋಗಿಗಳಿಂದಲೂ ಕೆಲವು ಸರ್ವ ಲಕ್ಷಣ ಸಂಪನ್ನರಾದ ರಾಜಕೃಷಿಕರುಗಳಿಂದಲೂ ಸಕಲ ಮರ್ಮವನ್ನು ತಿಳಿದು ಲೋಕ ಹಿತೋಪಕಾರಾರ್ಥವಾಗಿ ಶ್ರೀಗಳವರ ಅಪ್ಪಣೆಯ ಮೇಲಿಂದ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥವನ್ನು ರಚಿಸಿ ಇದನ್ನೆಲ್ಲ ಇಷ್ಟು ವಿಸ್ತಾರವಾಗಿ ನನ್ನ ಹಿತಕ್ಕೋಸ್ಕರ ಹೇಳದೆ ಈ ಭೂಮಿಯಲ್ಲಿರುವ ಯಾವತ್ತು ಸಕಲ ದೇಶದ ಕೃಷಿಕ ಜನರ ಕಲ್ಯಾಣಾರ್ಥವಾಗಿ ಹೇಳಿರುವೆನು. ಯಾವತ್ತರು ಈ ಗ್ರಂಥವನ್ನು ಮನಸ್ಸುಗೊಟ್ಟು ಓದಿ ಇದರ ಸಾರವನ್ನು ಗ್ರಹಿಸಿ ಅದರಂತೆ ಮಾಡಿಕೊಂಡರೆ ಅವರಿಗೆ ಅನಂತ ಮುಖದಿಂದ ಸೌಖ್ಯವಾಗುವದು ಮತ್ತು ಇದರಲ್ಲಿ ಹೇಳಿರುವ ಸಕಲ ನೀತಿಗಳನ್ನು ತಿಳಿವರೆ ಜ್ಞಾನೋದಯಕ್ಕೆ ಕಾರಣವಾಗುವದು. ಅದು ಕಾರಣ ಕೃಷಿಕ ಜನರುಗಳಲ್ಲಿ ಬಾಲಕರು ಯೌವ್ವನಸ್ಥರು ವೃದ್ಧರು ಪ್ರೌಢಮತಿಗಳು ಕುಶಲರು ಮುಗ್ಧರು ವಿದಗ್ಧರು ಮೊದಲಾದ ಯಾವತ್ತರು ತಿಳಿಯುಕ್ಕದ್ದು. ಮತ್ತು ಇದನ್ನು ಓದಿ ತಿಳಿಯುತಕ್ಕವರು ಓದಿ ತಿಳಿಯುತಕ್ಕದ್ದು. ಓದುವ ತ್ರಾಣವಿಲ್ಲದವರು ಕೇಳಿ ತಿಳಿಯುತಕ್ಕದ್ದು. ಯಾತಕ್ಕಂದರೆ ಈ ಗ್ರಂಥವು ಸಕಲ ಸುನೀತಿಯುಕ್ತವಾಗಿ ಭೋಗ ಮೋಕ್ಷ ಪ್ರಸಾದ ಮಯವಾಗಿ ಇರುವದು.

## ತೆಂಗಿನ ವನವು.

ಗಾದೆಃ "ತೆಂಗು ಬಿತ್ತಿದವನು । ಗಂಡು ಹಡದವನು ದರಿದ್ರನಲ್ಲವು"

ತೆಂಗಿನ ಮರವು ಹುಲ್ಲಿನ ಜಾತಿಯದು. ತೆಂಗಿನ ಸಿಪ್ಪೆಯ ನಾರಿನಿಂದ ಸೇದುವ ಹಗ್ಗ ಮೊದಲಾದವುಗಳನ್ನು ಮಾಡುತ್ತಾರೆ. ಅದರ ಎಲೆಗಳನ್ನು ಹೆಣೆದು ಮನೆ ಮಾಡುಗಳಿಗೆ ಹೊದಿಸುತ್ತಾರೆ. ಮತ್ತು ಅವುಗಳಿಂದ ಚಾಪೆಯನ್ನು ಹೆಣೆಯುತ್ತಾರೆ ಅದರ ಕಡ್ಡಿಗಳಿಂದ ರಜ ಹೊಡಿಯುವ ಸಿವಡುಗಳನ್ನು ಮಾಡುತ್ತಾರೆ ತೆಂಗಿನಕಾಯಿ ರುಚಿಕರವಾದದ್ದು. ಅದು ಎಳೆಯದಾಗಿರುವಾಗ್ಗೆ ಅದರಲ್ಲಿ ನೀರು ತುಂಬಾಗಿದ್ದು ಬಲಿಯುತ್ತ ಬಲಿಯುತ್ತ ಇಂಗುತ್ತದೆ. ಮೇಲೋಗರ ಮುಂತಾದ ಭೋಜನ ಪದಾರ್ಥಗಳಲ್ಲಿ ಅದನ್ನು ಬೆರಿಸುತ್ತಾರೆ. ಎಳೆಗಾಯಿಗಳಿಗೆ ಎಳನೀರೆಂದು, ನೀರು ಸ್ವಲ್ಪವಾದರೂ ಇಲ್ಲದ ಕಾಯಿಗಳಿಗೆ ಗಿಟಕು ಮತ್ತು ಕೊಬ್ಬರಿ ಎಂದು ಹೇಳುತ್ತಾರ ಆ ಕೊಬ್ಬರಿಯನ್ನು ಗಾಣದಲ್ಲಿ ಹಾಕಿಸಿ ಎಣ್ಣೆಯನ್ನು ಇಳಿಸಿ ವಡಿಗಾರಿಗ ಮುಂತಾದ ಕಜ್ಜಾಯಗಳಿಗೂ ದೀಪಕ್ಕೂ ಪ್ರಯೋಗಿಸುತ್ತಾರೆ. ತೆಂಗಿನ ಮರದ ಬೊಡ್ಡಿಯು ಉನ್ನತವಾಗಿ ದಪ್ಪವಾಗಿರುವದರಿಂದ ಆ ಕಟ್ಟಿಗೆಗಳನ್ನು ತೊಲೆಗಳಂತೆ ಮನೆಗಳಿಗಾದರೂ ಹಾಕುತ್ತಾರೆ. ಅದರ ಬೇರುಗಳಿಂದ ಬೀಸಣಿಕೆಗಳನ್ನು ಮಾಡುತ್ತಾರೆ ಇನ್ನೂ ಅನೇಕ ಪ್ರಕಾರದಿಂದ ಅದರ ಎಲ್ಲ ಅಂಶಗಳು ಮನುಷ್ಯರುಗಳಿಗೆ ಪ್ರಯೋಜನವಾಗಿವೆ.

ಮರಜಾತಿಗಳಲ್ಲಿ ಸರ್ವದಾ ಸುಖಪ್ರದವಾದದ್ದು ಯಾವದೆಂದರೆ ಸಕಲ ಫಲವೃಕ್ಷಗಳು, ಆ ಫಲವೃಕ್ಷಂಗಳಲ್ಲಿ ಸರ್ವಸಾಧನೋಪಯೋಗವಾಗಿ, ದ್ರವ್ಯದ ಪ್ರಾಪ್ತಿಯು ವಿಶೇಷವಾಗಿ, ಅತ್ಯಂತ ರುಚಿಕರವಾಗಿ, ರಮಣೀಯವಾಗಿ, ಶೃಂಗಾರ ಶೋಭಿತವಾಗಿ, ಸರ್ವದಾ ಫಲಪ್ರದವಾಗಿ, ಇರುವಂಥ ತೆಂಗಿನ ವೃಕ್ಷವು ಇದ್ದು, ಇದು ಈ ಭೂಮಿಯಲ್ಲಿ ಬೆಳೆಯುವ ಸಕಲ ಫಲವೃಕ್ಷಗಳಲ್ಲಿ ಮಾನ್ಯವಾಗಿ ಅತ್ಯುತ್ತಮ ಫಲ ಕೊಡುವದಾಗಿರುವದರಿಂದ ಭೂಲೋಕದಲ್ಲಿ ಕಲ್ಪವೃಕ್ಷವೆಂದು ವರ್ಣನೆಗೆ ಬಂದಿರುವದು ಮತ್ತು ತೋಟಗಳಿಗೆ ಶೃಂಗಾರ ಶೋಭಿತವಾಗಿರುವದು.

ತೆಂಗಿನ ಗಿಡಗಳನ್ನು ಬಹಳವಾಗಿ ಬೆಳಿಸಿದವನು ಎಂದಿಗೂ ದರಿದ್ರನಾಗಲಾರನು. ಆದರೆ ಈ ತೆಂಗನ್ನು ಬೆಳೆ ಮಾಡುವದು ಹೇಗಂದರೆ ತೋಟವನ್ನು ಮಾಡುವದಕ್ಕೆ ಉಪಯೋಗಿಸುವಂಥ ಯಾವ ಪ್ರಕಾರದ ಭೂಮಿಗಳಲ್ಲಿಯಾದರೂ ಈ ವೃಕ್ಷವು ಬೆಳೆಯುವದು. ಅದರಲ್ಲಿ ಈ ಗಿಡವು ಉತ್ತಮವಾಗಿ ನಿರಾಯಾಸದಿಂದ ಬೆಳೆಯತಕ್ಕಂಥ ಭೂಮಿಯನ್ನು ಪರೀಕ್ಷಿಸುವದು ಹೇಗಂ

ದರೆ ಉಸುಕು ಪಡಿಭೂಮಿಯಲ್ಲಿ ಉದಕವು ವಿಶೇಷವಾಗಿರುವ ಭೂಮಿಗಳಲ್ಲಿ, ಉಸುಕು ಭೂಮಿಯಲ್ಲಿ, ಉಸುಕು ಮಿಶ್ರವಾದ ಯಾವ ತರದ ಭೂಮಿಯಲ್ಲಿ ಯಾದರೂ ಮತ್ತು ಕೆಂಪು ಮಣ್ಣಿನ ಭೂಮಿಯಲ್ಲಾದರೂ ಆ ಭೂಮಿಯ ಕೆಳಗೆ ಒಂದು ಗಜ ಅಥವಾ ಎರಡು ಗಜ ಇಲ್ಲವೆ ಮೂರು ಗಜ ನಾಲ್ಕು ಗಜ ಅಥವಾ ಐದು ಗಜ ಕೆಳಗಾದರೂ ಬಹಳ ಕಠಿಣವಿಲ್ಲದೆ ಮೃದುವಾಗಿದ್ದು ಬೇಸಿಗೆಯ ಕಾಲದಲ್ಲಿ ಸಹ ನೀರಿನ ತಂಪು ಇರುವ ಭೂಮಿಯಾಯಿತ್ತಾದರೆ ಉತ್ತಮವು. ಹೇಗೆ ಹೇಗೆ ತಂಪು ಮೇಲೆ ಇರುವದೋ ಹಾಗೆ ಆ ಭೂಮಿ ಯಲ್ಲಿ ಈ ವೃಕ್ಷಗಳು ಉತ್ತರೋತ್ತರವಾಗಿ ಬೆಳೆಯುವವು. ಒಂದು ಪಕ್ಷದಲ್ಲಿ ನೀರು ಬಹಳ ದೂರ ಇರುವ ಭೂಮಿಯಾದರೆ ಅಂಥ ಭೂಮಿಯಲ್ಲಿ ಒಡ್ಡನ್ನು ಬಲಿಸಿ ನೀರು ನಿಂತು ತಂಪು ಹಿಡಿಯುವ ಹಾಗೆ ಮಾಡಬೇಕು ಒಂದು ಪಕ್ಷ ದಲ್ಲಿ ಎರಿಯ ಭೂಮಿಗೆ ಕಲ್ಲು ಇಲ್ಲದ ನೆಲವಾದರೆ ಆರು ಗಜದ ಕೆಳಗಾದರೂ ನೀರಿನ ತಂಪು ಇದ್ದರೆ ಅಂಥ ಭೂಮಿಯಲ್ಲಿ ತೆಂಗಿನ ಮರವನ್ನು ಬೆಳಸುವ ದಕ್ಕೆ ಸಂಶಯವಿಲ್ಲ.

ತೆಂಗಿನ ಗಿಡಗಳನ್ನು ಹಚ್ಚುವ ಭೂಮಿಯು ಬಹು ವಿಶಾಲವಾಗಿರಬೇಕು ಆದರಲ್ಲಿ ಹಳ್ಳದ ದಂಡೆಯಾಗಿದ್ದರೂ ತಗ್ಗು ಭೂಮಿಯಾಗಿದ್ದರೂ ನೀರಿನ ತಂಪು ವಿಶೇಷವಾಗಿರುವ ಭೂಮಿಯಾದರೆ ಬಹು ಪ್ರಯೋಜನವು. ಮತ್ತು ಉಸುಕುಪಡಿಭೂಮಿಯಾಗಿ ಒಂದು ಗಜದ ಕೆಳಗಾದರೂ ನೀರು ಇರುವ ಭೂಮಿಯಾದರೆ ಅತ್ಯುತ್ತಮವು. ಸಿಂದಿಯ ಮರಗಳು ಬೆಳೆಯತಕ್ಕಂಥ ಭೂಮಿ ಯಾದರೆ ತಂಪಿನ ಮರಗಳು ಚನ್ನಾಗಿ ಬೆಳೆಯುವವು. ಹಾಗು ಬಿಡಂಗಾವಲಿಯ ನೀರು ಹರಿಯುತ್ತಿದ್ದರೆ ಯಾವ ತರವ ಭೂಮಿಯಲ್ಲಾದರೂ ತೆಂಗಿನ ಮರವು ಬೆಳೆಯುತ್ತದೆ

ತೆಂಗಿನ ವೃಕ್ಷಗಳನ್ನು ಬೆಳಸಿ ತೋಟದಲ್ಲಾಗಲಿ ಅಥವಾ ಉದ್ಯಾನ ವನಗಳಲ್ಲಾಗಲಿ ತೆಂಗಿನ ವನವನ್ನು ಮಾಡಿಕೊಂಬುವದು ಹೇಗೆಂದರೆ, ಮೊದಲು ಬೀಜದ ಕಾಯಿಗಳನ್ನು ತರಬೇಕಾದರೆ ಆ ಗಿಡವು ನಾಲ್ವತ್ತು ಐವತ್ತು ವರುಷದ ಹಳೆಯ ಗಿಡವಾಗಿದ್ದು ಅದರ ಕಾಯಿಗಳು ಹಣ್ಣಾಗಿ ತಾವೇ ತುಂಬು ಉಚ್ಚಿ ಉದುರಿ ಬಿದ್ದಿರಬೇಕು ಅಂಥ ಕಾಯಿಗಳು ಬೀಜದಕಾಯಿಗಳೆನಿಸುವವು. ಎಳೆಯ ಗಿಡದ ಕಾಯಿಗಳನ್ನು ಮತ್ತು ಹಳೆಯ ಗಿಡವಾಗಿದ್ದರೂ ಎಳೆಯ ಕಾಯಿಗಳನ್ನು ತರಲಾಗದು ಅವುಗಳು ಬೀಜಕ್ಕೆ ಉಪಯೋಗವಲ್ಲ. ಆದರೆ ಹಳೆಯ ಗಿಡದಲ್ಲಿ ಹಣ್ಣಾಗಿ ಉದುರಿದ ಕಾಯಿಗಳನ್ನು ಮೇಲಿನ ಸೊಪ್ಪೆ ಸಹಿತ ಹಾಗೆಯೇ ತಂದು ಕೂಡಿಸಿಡಬೇಕು. ತನ್ನ ಭೂಮಿ ಯಾವತ್ತಕ್ಕೂ ಸಾಕಾ ಗುವ ಹಾಗೆ ಸಹಸ್ರಾವಧಿ ಬೀಜದ ಕಾಯಿಗಳನ್ನು ತರಬೇಕಲ್ಲದೆ ಸ್ವಲ್ಪ

ಕಾಯಿಗಳನ್ನು ತರಬಾರದು. ಅಥವಾ ತನ್ನ ತೋಟದ ಭೂಮಿಯು ಬಹಳ ವಿಶಾಲವಿಲ್ಲದಾದರೆ ನೂರಾರು ಕಾಯಿಗಳನ್ನಾದರೂ ತರಬೇಕು. ಹತ್ತೆಂಟು ಗಿಡಗಳನ್ನು ಹಚ್ಚಿದರೆ ಅಷ್ಟರ ಪೂರ್ತಿಗೆ ಸಂಭ್ರಮವಾಗಿರುವದಲ್ಲದೆ ಅದರಿಂದ ತನಗೆ ದ್ರವ್ಯದ ಪ್ರಾಪ್ತಿಯು ಕಾಣಿಸದು ಯಾವನಾದರೂ ತಾನು ತೋಟದ ವ್ಯವಸಾಯದಿಂದ ಧನಸಂಪನ್ನನಾಗಬೇಕಾದರೆ ಬಹಳ ವೃಕ್ಷಗಳನ್ನು ಬೆಳಸಿದಲ್ಲಿ ತನಗೆ ಅತ್ಯಂತ ಸೌಖ್ಯ ಉಂಟಾಗುವದು ಅದರಲ್ಲಿ ಮುಖ್ಯವಾಗಿ ಇನ್ನೂರು ಅಥವಾ ಸಣ್ಣ ತೋಟಗಳಾದರೆ ನೂರು ಗಿಡಗಳನ್ನು ಬೆಳಸಬೇಕು ಹತ್ತೆಂಟು ಗಿಡಗಳಿಂದ ಶೋಭಾಯಮಾನವಷ್ಟೇ ಅಲ್ಲದೆ ಉತ್ಪನ್ನಕ್ಕಲ್ಲವು ಆದರೆ ಕೆಲವರು ಶೃಂಗಾರ ರಂಜನೆಗೆ ಮಾತ್ರ ಕೆಲವು ಗಿಡಗಳನ್ನು ಹಚ್ಚುವರು.

ತನಗೆ ಇದ್ದಷ್ಟು ಭೂಮಿಯಲ್ಲಿ ಒಂದು ಭಾಗಕ್ಕೆ ಬೇಕಾಗುವಷ್ಟು ಬೀಜದ ಕಾಯಿಗಳನ್ನು ತಂದು ಫಲ ಮಾಡುವ ಪರಿಯಾಯವು ಹೇಗಂದರೆ ಆ ಕಾಯಿಗಳು ಸ್ವಲ್ಪ ಒಣಗಿ ದೋರ ಹಸಿ ಇದ್ದರೂ ಸರಿಯೇ, ಅಥವಾ ಪೂರಾ ಒಣಗಿದ್ದರೂ ಸರಿಯೇ, ಇಂಥ ಕಾಯಿಗಳನ್ನು ಹದಿನೈದು ಇಪ್ಪತ್ತು ದಿವಸ, ಸವಿನೀರಿನಲ್ಲಿ ನೆನೆ ಇಟ್ಟು ಆ ಮೇಲೆ ಒಂದು ನೆಲ್ಲು ಗದ್ದೆಯ ಮಡಿಯ ಹಾಗೆ ಮಡಿ ಮಾಡಿ ಸುತ್ತಲೂ ಚೌಕಾಗಿ ಸ್ವಲ್ಪ ಒಡ್ಡು ಇಟ್ಟು ಕೆಸರು ಉಸುಕು ಸಮವಾಗಿ ಕಲಿಸಿ ತೆಳ್ಳಗಾದ ಕೇಸರಿಯೋವಾದಿಯಲ್ಲಿ ಹದ ಮಾಡಿ ಸವಿನೀರಿನಲ್ಲಿ ನೆನೆದಿರುವ ಸೊಪ್ಪೆ ಸಹಿತ ಬೀಜದ ಕಾಯಿಗಳನ್ನು ಆ ಮಡಿಯಲ್ಲಿ ಅಡ್ಡ ಇಡುವದು. ಮತ್ತು ತುಂಬು ಮೇಲಾಗಿ ಅಥವಾ ತುಂಬು ಕೆಳಗಾಗಿ ಇಡದೆ ಮಾವಿನ ಬೀಜಗಳಂತೆ ಈ ತೆಂಗಿನ ಕಾಯಿಗಳನ್ನಾದರೂ ಮೇಲಿನ ಸೊಪ್ಪೆ ಸಹಿತ ಅಡ್ಡ ಇಡಬೇಕು. ನಿಲವು ಊರಿದರೆ ಅದರಲ್ಲಿ ನೀರು ತುಂಬಿ ಕೊಳೆತು ಹೋಗುವದು ಅದು ಕಾರಣ ಅಡ್ಡ ಇಟ್ಟು ಅದರ ಬಾಯಿತುದಿಗೆ ಸ್ವಲ್ಪ ಉಪ್ಪನ್ನು ಹಾಕಿ ಮೇಲೆ ಒಂದು ಬೆರಳುದ್ದ ಅಥವಾ ಇಬ್ಬೆರಳು ನಾಲ್ಕು ಬೆರಳುದ್ದವಾದರೂ ಸಣ್ಣ ಉಸುಕನ್ನು ಹಾಕಿ ಬಿಡಬೇಕು ನಾಲ್ಕು ಬೆರಳಿನಕಿಂತಲೂ ಹೆಚ್ಚಿಗೆ ಉಸುಕು ಹಾಕಿದರೆ ಭಾರವಾಗುತ್ತದೆ. ಮತ್ತು ನೀರಿನ ಹನಿಯಾರದಂತೆ ಮೇಲೆ ಮೇಲೆ ನೀರು ಬಿಡಬೇಕು. ಈ ಪ್ರಕಾರ ಜೋಪಾನ ಮಾಡಿದರೆ ಮೂರು ತಿಂಗಳಷ್ಟಕ್ಕೆ ಹೊರಗೆ ಸಸಿ ಒಡೆದು ಹುಸಿ ಹೋಗದಂತೆ ಚನ್ನಾಗಿ ಸಸಿಗಳಾಗುವವು. ಆ ಮೇಲೆ ಆರು ತಿಂಗಳ ಅಥವಾ ಒಂದು ವರ್ಷ ಪರ್ಯಂತರವಾಗಿ ಆ ಸಸಿಗಳನ್ನು ಮಡಿಯಲ್ಲಿಯೇ ಬೆಳಸಿ ಅವುಗಳು ವರ್ಧನವಾದ ಮೇಲೆ ಕಿತ್ತಿ ಹಚ್ಚಬೇಕು.

ತೆಂಗಿನ ವನವನ್ನು ಮಾಡುವವರು ತಮ್ಮ ತೋಟದ ಭೂಮಿಯ ಒಂದು ಭಾಗದಲ್ಲಿ ನಾಲ್ಕು ಮಾರಿಗೆ ಒಂದೊಂದು ಗಿಡವನ್ನು ಹಚ್ಚುವದು. ಹೇಗಂ

ದರೆ ನಾಲ್ಕು ಮಾರಿಗೆ ಒಂದರಂತೆ ಚಚ್ಚೌಕು ಒಂದುವರೆ ಗಜ ಅಗಲ ಒಂದುವರೆ ಗಜ ಉದ್ದವಾದ ಮತ್ತು ಒಂದುವರೆ ಗಜ ತಗ್ಗು ಆಗುವ ಹಾಗೆ ಔರಸ ಚೌರಸ ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣಕ್ಕೆ ಸಾಲು ಸಾಲಾಗಿ ಕಾಣುವ ಹಾಗೆ ಸಹಸ್ರ ಅಥವಾ ಐದುನೂರು ಇಲ್ಲವೆ ನಾನೂರು ಮಟ್ಟಿಗೂ ತಗ್ಗುಗ ಳನ್ನು ತೆಗಿಸಿ ಆ ತಗ್ಗುಗಳಲ್ಲಿ ಉಸುಕು ಕೆಮ್ಮಣ್ಣು ಸಮನಾಗಿ ಕಲಿಸಿ ತುಂಬಿ ಭರೀಮಾಡಿ ಯಾವತ್ತು ತಗ್ಗುಗಳನ್ನು ತಯಾರು ಮಾಡಬೇಕು. ಒಂದು ಪಕ್ಷ ದಲ್ಲಿ ಸಿಕ್ಕದೇ ಹೋದರೆ ಮೊರಡಿಯ ಸೋರ ಮಣ್ಣಾದರೂ ಮತ್ತು ಸಣ್ಣ ಉಸುಕನ್ನು ಅಲ್ಲಿ ಇದ್ದ ಮಣ್ಣನ್ನು ಸಮನಾಗಿ ಕಲಿಸಿ ಭರೀಮಾಡಿ ಅದಕ್ಕೆ ನೀರು ಬಿಟ್ಟು ಹಸೀ ಮಾಡಿ ಯಾವತ್ತು ತಗ್ಗುಗಳನ್ನು ಈ ಪ್ರಕಾರ ತಯಾರು ಮಾಡಿದ ಮೇಲೆ ಆ ವರುಷದ ಸಸಿಗಳನ್ನು ಗಡ್ಡೆ ಸಹಿತವಾಗಿ ಅಗಿದು ತಂದು ಈ ತಗ್ಗಿನಲ್ಲಿ ಗಡ್ಡೆ ಹಿಡಿಯುವ ಹಾಗೆ ಕೆದರಿ ಅದರ ತಳಕ್ಕೆ ಸ್ವಲ್ಪ ಉಪ್ಪು ಮೊಸರನ್ನು ಚಲ್ಲಿ ಆದರ ಮೇಲೆ ಈ ಸಸಿಯನ್ನು ನಿಲ್ಲಿಸಿ ಸುತ್ತಲೂ ಬಗಲು ಗಟ್ಟಿಯಾಗಿ ತುಳಿದು ನೀರು ಉಣಿಸುವದು. ಈ ಪ್ರಕಾರ ಯಾವತ್ತು ತಗ್ಗು ಗಳಲ್ಲಿ ಸಸಿಗಳನ್ನು ಹಚ್ಚಿ ಅವುಗಳಿಗೆ ನೀರು ಬಿಡುತ್ತ ಹೋಗಬೇಕು ಈ ಪ್ರಕಾರ ತೆಂಗಿನ ವನವನ್ನು ಮಾಡಿ ಆ ತೋಟದ ಮತ್ತೊಂದು ಭಾಗದಲ್ಲಿ ಅಡಿಕೆಯ ವನವನ್ನು ಮಾಡಬೇಕು ಆ ಅಡಿಕೆಯ ಗಿಡಗಳ ಬೊಡ್ಡಿಯಲ್ಲ ಎಲೆಯ ಬಳ್ಳಿಗಳನ್ನು ಹಚ್ಚಿ ಅಡಿಕೆಯ ವನದೊಳಗೆ ಎಲೆದೋಟವನ್ನು ಮಾಡಿ ದರೂ ಬರುತ್ತದೆ.

## ಅಡಿಕೆಯ ವನವು

ಅಡಿಕೆಯ ಗಿಡಗಳು ಮಲಸೀಮೆಯಲ್ಲಿ ವಿಶೇಷವಾಗಿ ಬೆಳಿಸುತ್ತಾರೆ ಆದರೆ ಯಾವ ಭೂಮಿಯಲ್ಲಾದರೂ ಮತ್ತು ಯಾವ ದೇಶದಲ್ಲಾದರೂ ನೀರು ವಿಶೇಷವಾಗಿರುವ ತೋಟಗಳಲ್ಲಿ ಅಡಿಕೆಯ ಗಿಡಗಳು ಚನ್ನಾಗಿ ಬೆಳೆಯು ತ್ತವೆ ಹಾಗು ಅಡಿಕೆಯ ವ್ಯಾಪಾರವು ಅರಳಿಯ ವ್ಯಾಪಾರದಂತೆ ದ್ರವ್ಯೋ ತ್ಪತ್ತಿಗೆ ಕಾರಣವಾದದ್ದು ಅಡಿಕೆಯ ಗಿಡಗಳನ್ನು ಬೆಳಿಸಿದ ಕೃಷಿಕರು ಧನ ಸಂಪನ್ನರಾಗುವರು. ಇಪ್ಪತ್ತೈದು ಕೂರಿಗೆಯಲ್ಲಿ ಬೆಳೆದ ಅರಳಿಯ ಕ್ರಯದ ಕಿಂತಲೂ ಹೆಚ್ಚು ಹಣವು ಒಂದು ಕೂರಿಗೆ ಭೂಮಿಯಲ್ಲಿ ಬೆಳೆದ ಅಡಿಕೆಯ ಉತ್ಪನ್ನಕ್ಕೆ ಸರಿಯಾಗದು ಅಡಿಕೆಯ ಗಿಡಗಳನ್ನು ಬೆಳಿಸುವಲ್ಲಿ ಹತ್ತೆಂಟು ವರ್ಷ ಶ್ರಮವಲ್ಲದೆ ಆ ಮೇಲೆ ಆಯಾಸವಿಲ್ಲದೆ ವರ್ಷ ವರ್ಷಕ್ಕೂ ಫಲವಾ ಗುತ್ತ ಚನ್ನಾಗಿ ದ್ರವ್ಯೋತ್ಪತ್ತಿಯನ್ನು ಮಾಡುತ್ತ ಇರುವಲ್ಲಿ ಇವುಗಳನ್ನು ಬೆಳಿಸಿದವನು ಸೌಖ್ಯದಿಂದಿರುತ್ತಿಹನು.

ಅಡಿಕೆಯ ಗಿಡಗಳನ್ನು ಬೆಳೆಸುವ ವಿವರವು ಹೇಗಂದರೆ, ಸ್ವಲ್ಪ ಮಾತ್ರ ಹಸಿಯಾಗಿ ಬಲಿತ ಹಣ್ಣುಗಳಾಗಿರುವ ಅರಿಷಿಣ ಬಣ್ಣದ ಅಡಿಕೆಯ ಹಣ್ಣುಕಾಯಿಗಳನ್ನು ಮೇಲಿನ ಸೊಪ್ಪಿನೆರಸಿ ತಂದು ಒಂದು ದೊಡ್ಡ ಮಡಿಯನ್ನು ಮಾಡಿ ಆ ಮಡಿಯಲ್ಲಿ ಕೆಮ್ಮಣ್ಣನ್ನು ಗೊಬ್ಬರವನ್ನು ಸಮಬೆರಿಕೆಯಾಗಿ ತುಂಬಿ ತೆಳ್ಳಗೆ ಹರವಿ ಸುತ್ತ ಒಡ್ಡು ಕಟ್ಟಿ ಮಡಿಯಲ್ಲಿ ನೀರು ನಿಲ್ಲುವ ಹಾಗೆ ಮಾಡಿ ಅಡಿಕೆಯ ಬೀಜಗಳನ್ನು ನಾಲ್ಕು ಬೆರಳು ಅಂತರವಾಗಿ ಆ ಮಡಿಯಲ್ಲಿ ಅಡ್ಡ ಇಟ್ಟು ಅದರ ಮೇಲೆ ಸ್ವಲ್ಪ ಮಾತ್ರ ಮಣ್ಣನ್ನು ಹರಹಿ ನೀರ ತೇವು ಆರಗೊಡದೆ ನೀರ ಬಿಟ್ಟಲ್ಲಿ ಎರಡು ಮೂರು ತಿಂಗಳಿಗೆ ಸಸಿ ಹೊರಡುವದು. ಆ ಸಸಿಗಳನ್ನು ನಾಲ್ಕಾರು ತಿಂಗಳು ವರುಷಾವಧಿಯಾದರೂ ಹಾಗೆಯೇ ಬಿಟ್ಟು ನೀರು ಹಾಕುತ್ತ ಮಡಿಯಲ್ಲಿ ಸಸಿಗಳನ್ನು ವರ್ಧನ ಮಾಡಬೇಕು. ಅಥವಾ ಅಡಿಕೆಯ ಗಿಡಗಳನ್ನು ಬೆಳೆಸಬೇಕಾದರೆ ಮೊದಲು ನಾಲ್ಕು ಮೊಳ ಅಥವಾ ಐದು ಮೊಳ ಅಂತರವಾಗಿ ಚಚ್ಚೌಕು ಒಂದುವರೆ ಮೊಳ ಅಗಲ ಒಂದು ಕಾಲುಮೊಳ ತಗ್ಗಾಗಿರುವ ಕುಣಿಗಳನ್ನು ಸಾಲು ಸಾಲಾಗಿ ತಯಾರು ಮಾಡಿಸಿ ಅದರಲ್ಲಿ ಕೆಮ್ಮಣ್ಣನ್ನು ಉಸುಕನ್ನು ಮತ್ತು ಸ್ವಲ್ಪ ಹಳೆಯ ಗೊಬ್ಬರವನ್ನು ಕಲಿಸಿ ತಗ್ಗಿಗೆ ಭರೀ ಮಾಡಿ ನೀರು ಬಿಟ್ಟು ಅದು ಸ್ವಲ್ಪ ಹಸಿಯು ಬಿಗಿಯುವ ಹದಕ್ಕೆ ಬಂದಾಗ ಈ ಸಸಿಗಳನ್ನು ಗಡ್ಡೆ ಸಹಿತ ಬೇರು ಹರಿಯದ ಹಾಗೆ ಅಗಿದು ತೆಗೆದು ಆ ತಗ್ಗುಗಳಲ್ಲಿ ಗಡ್ಡಿ ಮುಳುಗುವ ಹಾಗೆ ಸ್ವಲ್ಪ ಕೆದರಿ ಸಸಿಗಳನ್ನು ನಿಲ್ಲಿಸಿ ಅವಕ್ಕೆ ಕೆಮ್ಮಣ್ಣನ್ನು ಹಳೆಯ ಗೊಬ್ಬರವನ್ನು ಕೂಡಿಸಿ ಹಾಕಿ ಗಟ್ಟಿಯಾಗಿ ತುಳಿದು ಕೂಡ್ರಿಸಿ ನೀರು ಬಿಡುವದು. ಇದಲ್ಲದೆ ಈ ಅಡಿಕೆಯ ಸಸಿಗಳಿಗೆ ವಿಶೇಷವಾಗಿ ಗಾಳಿ ತಗಲದ ಹಾಗೆ ಸುತ್ತಲೂ ಗೇಣಗೊಂದು ಚೊಗಚಿಯ ಗಿಡವನ್ನು ಆರು ಬೆರಳು ಅಂತರವಾಗಿ ಸಡೇದ ಗಿಡಗಳನ್ನು ಹಾಕಿದರೆ ಸುತ್ತಲೂ ಚಾಟಾಗಿ ಗಾಳಿಯು ಭಾರವನ್ನು ಹಿಡಿಯುತ್ತವೆ. ಹಾಗು ಅಡಿಕೆಯ ಸಸಿಗಳಿಗೆ ಚಿಕ್ಕದಾದ ಎಳೆಯ ಸಸಿಯು ವರ್ಧನವಾಗುವ ಸಮಯದಲ್ಲಿ ಬಹಳವಾಗಿ ಬಿಸಿಲಾದರೂ ತಾಕದ ಹಾಗೆ ಮಾಡಬೇಕು. ಗಾಳಿಯೂ ಬಿಸಿಲೂ ತಾಕಿದರೆ ಈ ಸಸಿಗಳು ತೀವ್ರವಾಗಿ ವರ್ಧನವಾಗಲಾರವು ಈ ಪ್ರಕಾರ ಯತ್ನದಿಂದ ತೆಂಗು ಅಡಿಕೆ ಹಾಕಿ ಅದರಂತೆ ನೀರು ಬಿಡುತ್ತ ಹೋದರೆ ಹತ್ತು ಹನ್ನೆರಡು ವರುಷಕ್ಕೆ ಅಡಿಕೆಯ ಗಿಡಗಳು ಫಲಕ್ಕೆ ಬರುವವು.

ಅಡಿಕೆಯ ವನದ ಸುತ್ತಲೂ ಶೋಭೆಗಾಗಿ ಕೆಲವು ತೆಂಗಿನ ಗಿಡಗಳನ್ನು ಹಚ್ಚಿದರೆ ಶೃಂಗಾರವಾಗಿ ಕಾಣುವವು ಆದರೆ ತೆಂಗಿನ ಗಿಡಗಳಿಗೆ ಗೊಬ್ಬರವು ಅಣುಮಾತ್ರವಾದರೂ ಕಲಿಯಬಾರದು ಆ ಗೊಬ್ಬರದ ವಾಸನೆಗೆ ತೆಂಗಿನ ಮರಕ್ಕೆ ಹುಳ ಹತ್ತಿ ಗರಿಗಳನ್ನು ಕತ್ತರಿಸುವವು. ಆ ತೆಂಗಿನ ಗಿಡದ

ಬೊಡ್ಡೆಯಲ್ಲಿ ಗೊಬ್ಬರವಿದ್ದರೆ ಹುಳಗಳು ಹುಟ್ಟಿ ಬೇರುಗಳನ್ನು ಕಡಿಯುತ್ತವೆ. ಅದು ಕಾರಣ ತೆಂಗಿನ ಗಿಡಗಳಿಗೆ ಗೊಬ್ಬರವನ್ನು ಹಾಕಬಾರದು.

ಅಡಿಕೆಯ ಸುಗ್ಗಿ ಯಾವಾಗಲೆಂದರೆ ಆಶ್ವೀಜ ಮೊದಲಾಗಿ ಪುಷ್ಯ ಮಾಸದ ವರೆಗೂ ಅಡಿಕೆಯ ಸುಗ್ಗಿಯು. ಆ ಅಡಿಕೆಯ ಕಾಯಿಗಳನ್ನು ಕೊಯಿದು ಹದಕ್ಕೆ ಹಾಕುವದು ಹೇಗಂದರೆ, ಸ್ವಲ್ಪ ಎಳೆ ಕಾಯಿಗಳಿರುವ ಗೊನೆಗಳನ್ನು ಮತ್ತು ಹಣ್ಣಾದ ಗೊನೆಗಳನ್ನು ಕುಡುಗೋಲುಗಳನ್ನು ಹಾಕಿಸಿ ಮಾಡಿದ ದೋಟಿಯ ಕೋಲಿನಿಂದ ಕೊಯಿದು ಕಾಯಿಯ ಮೇಲಿನ ಸೊಪ್ಪೆಯನ್ನು ಸುಲಿದು ಹಂಡೇದಲ್ಲಿ ನೀರು ಹಾಕಿ ಕಾಯಲಿಟ್ಟು ಆ ನೀರಿನಲ್ಲಿ ಹದವನ್ನು ಹಾಗಬೇಕು. ಹೇಗಂದರೆ ಮೊದಲೇ ಒರಳಲ್ಲಿ ವೀಳೆಯದ ಎಲೆ ಅಡಿಕೆ ಕಾಚು ಸುಣ್ಣ ಇವುಗಳನ್ನು ಹದದ ಮೇಲೆ ಹಾಕಿ ಕುಟ್ಟಿ ಚನ್ನಾಗಿ ರುಬ್ಬಿ ಸಣ್ಣಾದ ಮೇಲೆ ಎಲೆಯ ಮೇಲೆ ಇಟ್ಟಿರುವ ಹಂಡೇದಲ್ಲಿರುವ ನೀರಿನಲ್ಲಿ ಹಾಕಿ ಕೆಳಗೆ ಉರಿಯನ್ನು ಹಚ್ಚುವದು. ಆ ನೀರು ಶಾವಿಗೆ ಎಸರಿನ ಹಾಗೆ ಹದಕ್ಕೆ ಬಂದಾಗ ಈ ಹಸಿಯ ಅಡಿಕೆಗಳನ್ನು ಮೂರು ನಾಲ್ಕು ಪ್ರಕಾರದ ಬೇರೆ ಬೇರೆ ಸೊಪ್ಪೆಯನ್ನು ಸುಲಿದು ಇಟ್ಟಿರಬೇಕು. ಹೇಗಂದರೆ, ಬಲಿತ ಅಡಿಕೆಗಳು ಬೇರೆ, ಸ್ವಲ್ಪ ಎಳೆದಾದ ಅಡಿಗೆ ಬೇರ, ಮತ್ತು ತೀರ ಎಳೆದಾದ ಅಡಿಕೆಗಳು ಬೇರೆ, ಮತ್ತು ಕೊರೆದ ಹೋಳುಗಳು ಬೇರೆ, ಈ ಪ್ರಕಾರ ಮೊದಲೇ ಬೇರೆ ಬೇರೆ ಸೊಪ್ಪೆಯನ್ನು ಸುಲಿದು ಇಟ್ಟಿರಬೇಕು ಆ ಹಂಡೆಯೊಳಗಿನ ನೀರು ಶಾವಿಗೆ ಎಸರಿನ ಹಾಗೆ ಹೊಯಿದಾಡುವಾಗ ಸೊಪ್ಪೆಯನ್ನು ಸುಲಿದ ಹಸಿಯ ಅಡಿಕೆಗಳನ್ನು ಸುರುವಿ ಕುದಿಸಬೇಕು ಕುದಿಯುವಲ್ಲಿ ಆ ಅಡಿಕೆಗಳು ಹದಕ್ಕೆ ಬಂದದ್ದು ಹೇಗಂದರೆ ಆ ನೀರು ತೊಗರಿಯ ಕಟ್ಟಿನ ಹಾಗೆ, ಹುರುಳಿಯ ಕಟ್ಟಿನ ಹಾಗೆ, ಕೆಂಪಾಗಿ ಸ್ವಲ್ಪ ಮಂದವಾಗಬೇಕು ಮತ್ತು ಆ ಅಡಿಕೆಯು ಕುದಿದು ಮೃದುವಾಗಬೇಕು. ಈ ಹದಕ್ಕೆ ಬಂದಾಗಲೇ ಇಳಿಸಿ ಆ ನೀರನ್ನು ಬಸಿದುಕೊಂಡು ಒತ್ತಟ್ಟಿಗೆ ಇಟ್ಟಿರಬೇಕು. ಹಾಗೂ ಕುದಿಸಿದ ಅಡಿಕೆಯನ್ನು ಬಿದಿರು ಚಾಪೆಯ ಮೇಲೆ ತೆಳ್ಳಗೆ ಹರವಿ ಏಳು ದಿವಸ ಚನ್ನಾಗಿ ಒಣಗಿಸಬೇಕು ಅವು ಒಣಗಿದ ಮೇಲೆ ಮೊದಲು ಕುದಿಸಿದ ಬಿಸಿಯ ರಸವನ್ನು ಅಡಿಕೆಯ ಮೇಲೆ ಚಿಮುಕು ಹೊಡೆದು ಚನ್ನಾಗಿ ಒರಸಿದರೆ ಬಣ್ಣವಾಗುವವು. ಮತ್ತು ಆ ಬಸಿದ ರಸವು ಆರಿ ಗಟ್ಟಿಯಾಗಿ ಅರಗಿನ ಹಲ್ಲೆಯ ಹಾಗೆ ಆಗಿದ್ದರೆ ಅದನ್ನು ಹಾಗೇ ಇಟ್ಟುಕೊಂಡಿದ್ದು ಯಾವಾಗ್ಗೆ ಅಡಿಕೆಗೆ ಬಣ್ಣ ಮಾಡಬೇಕಾಗುವದೋ ಆ ಸಮಯಕ್ಕೆ ಬಿಸಿ ನೀರನ್ನು ಶಾವಿಗೆ ಎಸರಿನ ಹಾಗೆ ಕಾಸಿ ಅದರಲ್ಲಿ ಆ ಹಲ್ಲೆಯನ್ನು ಹಾಕಿ ಸ್ವಲ್ಪ ಕುದಿಸಿದರೆ ಅದು ಕರಿಗಿ ನೀರಾಗುವದು. ಆ ನೀರನ್ನು ಒಣಗಿದ ಅಡಿಕೆಯ ಮೇಲೆ ಚಿಮುಕು ಹೊಡೆದು ಸಮರಸವಾಗುವ ಹಾಗೆ ಒರಸಿದರೆ

ಚನ್ನಾಗಿ ಬಣ್ಣವಾಗುವದು. ಮತ್ತು ಮಾರಾಟಕ್ಕೆ ರಂಜನೆಯಾಗಿ ಕಾಣಿಸುವದು ಹಾಗು ಅಡಿಕೆಯ ಒಗರು ಹೋಗಿ ರುಚಿಯಾಗುವದು. ಬಣ್ಣ ಹಾಕಿದ ಅಡಿಕೆಯು ಹತ್ತುವದಿಲ್ಲ.

ಬಹಳ ಬಲಿತ ಹಣ್ಣಾದ ಅಡಿಕೆಗಳು ಬೆಟ್ಟೆಯಾಗುವವು. ಮಧ್ಯ ಎಳಕಾದರೆ ರಾಶಿ ಚಿಕ್ಕಣಿಯಾಗುವವು. ಬಹಳ ಎಳಕು ಅಡಿಕೆಗಳನ್ನು ಕುದಿಸಿದರೆ ಚಲೋ ಚಿಕ್ಕಣಿಯಾಗುವವು. ಮತ್ತು ಹಸಿಯು ಅಡಿಕೆಗಳಲ್ಲಿ ಮಧ್ಯ ಎಳಕು ಮತ್ತು ಬಹಳ ಎಳಕಾದ ಅಡಿಕೆಗಳನ್ನು ಸಣ್ಣಾಗಿ ಕೊರೆದು ಚೂರು ಮಾಡಿ ಕುದಿಸುತ್ತಾರೆ. ಅದರಲ್ಲಿ ಚತುರ್ಭಾಗ ಕೊರಪ, ಲವಂಗ ಚೂರು, ಮೋಡಿ, ಅಣ್ಣಾವಾರ ದೇಶಾವಾರ ಎಂದು ಬೇರ ಬೇರೆ ರಾಶಿಗಳನ್ನು ಮಾಡುತ್ತಾರೆ. ಆದರೆ ದೇಶಾವಾರಕ್ಕೆ ಹದವನ್ನು ಹಾಕುವದು ಮತ್ತೊಂದು ಪ್ರಕಾರವದೆ. ಹೇಗಂದರೆ, ಹಸಿಯು ಅಡಿಕೆಗಳಲ್ಲಿ ಎಳೆಯು ಅಡಿಕೆಗಳನ್ನು ಕೊರೆದು ತಯಾರಾದ ಮೇಲೆ ಒಂದು ಹಂಡೇದಲ್ಲಿ ನೀರು ಹಾಕಿ ಅದರೊಳಗೆ ನೀರಲ ತೊಗಟೆಯನ್ನು ಹಾಕಿ ಚನ್ನಾಗಿ ಕುದಿಸಿ ಆ ಕುದಿಯುವ ನೀರೂಳಗೆ ಈ ದೇಶಾವಾರದ ಅಡಿಕೆಯನ್ನು ಹಾಕಿ ಮತ್ತು ಎಲೆ ಕಾಚು ಸುಣ್ಣ ಅಡಿಕೆಯನ್ನು ಒರಳಿನಲ್ಲಿ ರುಬ್ಬಿ ಹಾಕಿ ಹದಕ್ಕೆ ಬರುವ ವರೆಗೂ ಕುದಿಸಿ ಹದಕ್ಕೆ ಬರೋಣ ಬಸಿದುಕೊಂಡು ಆ ಬಸಿದ ಎಸರನ್ನು ಹಾಗೇ ಇಟ್ಟುಕೊಂಡು ಕುದಿಸಿದ ಅಡಿಕೆಗಳನ್ನು ಬಿದಿರು ಚಾಪಯ ಮೇಲೆ ತಳ್ಳಗೆ ಹರಹಿ ಬಿಸಲಲ್ಲಿ ಒಣಗಿಸಬೇಕು ಏಳು ದಿವಸ ಬಿಸಲಲ್ಲಿ ಒಣಗಿದ ಮೇಲೆ ಬಸಿದ ರಸವನ್ನು ಚಿಮುಕು ಹೊಡೆದು ಚನ್ನಾಗಿ ಒರಿಸಿ ಬಣ್ಣ ಮಾಡಿದರೆ ಅವು ದೇಶಾವಾರವೆನಿಸುವವು

ಅಡಿಕೆಯ ವನವನ್ನು ಮತ್ತು ತೆಂಗಿನ ವನವನ್ನು ಬೆಳಸಿ ಅವುಗಳ ಉತ್ಪನ್ನವನ್ನು ಮಲಸೀಮೆಯವರು ಮಾಡಿಕೊಂಡು ಪರಿಣಾಮಿಗಳಾಗಿರುವದನ್ನು ಕಂಡಾಗ್ಯಾದರೂ ಈ ದೇಶದಲ್ಲಿ ಎಲ್ಲರೂ ಮಾಡಿಕೊಳ್ಳಲಾರರು ಯಾತಕ್ಕಂದರೆ ಈ ಅಡಿಕೆ ತೆಂಗು ಯಾಲಕ್ಕಿ ಅಲ್ಲ ಅರಿಷಣ ಮೆಣಸು ಜೀರಿಗೆ ಶಾಜೀರಿಗೆ ಮೊದಲಾದ ಈ ಯಾವತ್ತು ಪದಾರ್ಥಗಳು ಈ ದೇಶದಲ್ಲಿ ಬೆಳೆಯುವದಿಲ್ಲವೆಂದು ತಿಳಿಯುತ್ತಾರ ಹೀಗೆ ತಿಳಿಯಲಾಗದು ನೀರು ಸಮೃದ್ಧಿಯಾಗಿರುವ ಉಸುಕು ಪಡಿಯ ಮಸಬು ಭೂಮಿಗಳಲ್ಲಿ ಮತ್ತು ಉಸುಕು ಮಿಶ್ರವಾದ ಯಾವ ಭೂಮಿಯಲ್ಲಿಯಾದರೂ ಈ ಪದಾರ್ಥಗಳು ಸಂಶಯವಿಲ್ಲದೆ ಬೆಳೆಯುತ್ತವೆ.

ತೆಂಗಿನ ಗಿಡಗಳು ಅಡಿಕೆಯ ಗಿಡಗಳು ಸಣ್ಣ ಸಸಿಗಳಿದ್ದು ವರ್ಧನವಾಗುವ ಸಮಯದಲ್ಲಿ ಅವುಗಳಿಗೆ ಸದಾ ಕಾಲದಲ್ಲಿ ತಂಪು ಇರಬೇಕು.

ಮತ್ತು ಉನ್ನತವಾಗಿ ಬೆಳೆಯುವವರೆಗೂ ಅವು ಎಳೆದಾಗಿರುವಾಗ ಗಾಳಿಯೂ ಬಿಸಲೂ ತಾಕದೆ ಚಾಟೆಸಿಂದ ನೆರಳಲ್ಲಿ ಬೆಳೆದರೆ ತೀವ್ರವೇ ವರ್ಧನವಾಗಿ ತೆಂಗಿನ ಗಿಡಗಳು ಐದು ವರ್ಷಕ್ಕೆ ಫಲಕ್ಕೆ ಬರುವವು ಅಡಿಕೆಯ ಗಿಡಗಳು ಎಂಟು ವರ್ಷಕ್ಕೆ ಫಲವಾಗುವವು. ಅದು ಕಾರಣ ತೆಂಗಿನ ಸಸಿಗಳನ್ನು ಅಡಕಿಯ ಸಸಿಗಳನ್ನು ಹಚ್ಚುವಾಗಲೇ ಅವುಗಳ ಮಧ್ಯದಲ್ಲಿ ಪೇರಲ ಗಿಡಗಳನ್ನು ಮತ್ತು ಅಂಗಲಾದಲ್ಲಿ ಸಡೇದ ಗಿಡಗಳನ್ನು ಚೊಗಚಿಯ ಗಿಡಗಳನ್ನು ಹಾಗೂ ನುಗ್ಗಿಯ ಗಿಡಗಳನ್ನು ಹಾಕಬೇಕು. ಈ ಅಡಕೆಯ ವನದ ಸುತ್ತಲೂ ಒಳವೈಯಲ್ಲಿ ನಾಲ್ಕು ಬೆರಳಿಗೊಂದು ಸಡೇದ ಗಿಡಗಳನ್ನು ಹಾಕಿ ಅವುಗಳ ಹಿಂದೆ ಗೇಣಿಗೊಂದು ಚೊಗಚಿಯ ಗಿಡಗಳನ್ನು ಹಾಕಿ ಅವುಗಳ ಹಿಂದೆ ಮೊಳಕ್ಕೆ ಒಂದರಂತೆ ನುಗ್ಗಿಯ ಗಿಡಗಳನ್ನು ಹಾಗು ಆ ನುಗ್ಗಿಯ ಗಿಡದ ಮಧ್ಯದಲ್ಲಿ ಔಡಲ ಗಿಡವನ್ನು ಹಾಕಿದರೆ ಸುತ್ತು ಚಾಟಾಗಿ ಈ ಗಿಡಗಳು ಎರಡು ಮೂರು ತಿಂಗಳಲ್ಲಿ ಉನ್ನತವಾಗಿ ಗಾಳಿಯ ಭಾರವನ್ನು ಹಿಡಿಯುತ್ತವೆ. ಮತ್ತು ಮಧ್ಯದಲ್ಲಿ ಹಾಕಿದ ಪೇರಲ ಗಿಡಗಳು ಮತ್ತು ಅವುಗಳ ಸಂದಿನಲ್ಲಿ ಇರುವ ಸಡೇದ ಗಿಡಗಳು ತೀವ್ರವೇ ವರ್ಧನವಾಗಿ ಉನ್ನತವಾಗಿ ಬೆಳೆದು ಅಡಕಿಯ ಸಸಿಗಳಿಗೂ ತೆಂಗಿನ ವನದಲ್ಲಿಯೂ ಇದರಂತೆ ಮಾಡಿಸಿದರೆ ತೆಂಗಿನ ಸಸಿಗಳಿಗೆ ನೆರಳಾಗಿ ಗಾಳಿಯೂ ಬಿಸಲೂ ತಾಕದೆ ಚನ್ನಾಗಿ ತಂಪಿನಲ್ಲಿ ಬೆಳೆದು ತೀವ್ರವೇ ವರ್ಧನವಾಗುತ್ತವೆ. ಹಾಗು ತೆಂಗಿನ ವನದಲ್ಲಿ ಮತ್ತು ಅಡಿಕೆಯ ವನದಲ್ಲಿ ಸಸಿಗಳಿಗೆ ನೆರಳಾಗುತ್ತ ಮತ್ತು ತೆಂಗು ಅಡಕಿಯ ಗಿಡಗಳು ಫಲಕ್ಕೆ ಬರುವದರೊಳಗೆ ಈ ಪೇರಲ ಗಿಡಗಳು ನೀರು ವಿಶೇಷವಾದ ಹಾಗೆಲ್ಲ ಎರಡು ವರ್ಷ ಅಥವಾ ಮೂರು ವರ್ಷಕ್ಕೆ ಫಲವಾಗುವವು. ಆಮೇಲೆ ತೆಂಗಿನ ಗಿಡಗಳು ಅಡಿಕೆಯ ಗಿಡಗಳು ಉನ್ನತವಾಗಿ ಮೇಲಕ್ಕೆ ಬೆಳೆದು ಫಲವಾಗುವ ವರೆಗೂ ಈ ಪೇರಲ ಗಿಡಗಳು ವರ್ಷಕ್ಕೆ ಎರಡು ಸಾರೆ ಫಲವಾಗುತ್ತ ಇರುವವು

ತೆಂಗಿನ ಗಿಡಗಳು ಅಡಿಕೆಯ ಗಿಡಗಳು ಉನ್ನತವಾದ ಮೇಲೆ ಸುತ್ತಲೂ ಇರುವ ಗಿಡಗಳನ್ನು ಉಳಿಸಿ ಮಧ್ಯದಲ್ಲಿ ಇರುವ ಸಡೇದ ಗಿಡಗಳನ್ನು ಪೇರಲ ಗಿಡಗಳನ್ನು ಕಡಿದು ಆ ಭೂಮಿಯನ್ನು ಹಸನ ಮಾಡಿ ಮುಂದೆ ನೆಲ್ಲು ಬಿತ್ತಿ ಬೆಳೆ ಮಾಡಿಕೊಂಡರೂ ಬರುವದು. ಇಲ್ಲವೇ ಮತ್ತೇನಾದರೂ ಬೆಳೆ ಮಾಡಿಕೊಂಡರೂ ಬರುತ್ತದೆ

ತೆಂಗಿನ ಗಿಡಗಳ ಮಧ್ಯದಲ್ಲಿ ಮತ್ತು ಅಡಿಕೆಯ ಗಿಡಗಳ ಮಧ್ಯದಲ್ಲಿ ಪೇರಲ ಗಿಡಗಳನ್ನು ಸಡೇದ ಗಿಡಗಳನ್ನು ಹಾಕುವದು ಬಿಟ್ಟು ಮತ್ತೆ ಯಾವ ಗಿಡಗಳನ್ನಾದರೂ ಹಾಕುವದಕ್ಕೆ ಬರುವದಿಲ್ಲ. ಏಕಂದರೆ ಈ ತೆಂಗಿನ ಸಸಿಗಳು ಎಳೆದಾಗಿದ್ದು ವರ್ಧನವಾಗಿ ಫಲಕ್ಕೆ ಬರುವ ವರೆಗೂ ಗೊಬ್ಬರದ ವಾಸನೆ ಬೀಳ

ಬಾರದು. ಅದರಿಂದ ಗಿಡಗಳು ಕೆಡುವವು. ಈ ಪೇರಲ ಗಿಡಗಳಿಗೂ ಸಡೇದ ಗಿಡಗಳಿಗೂ ಗೊಬ್ಬರ ಬೇಕಾಗುವದಿಲ್ಲ. ಮತ್ತು ಈ ಗಿಡಗಳು ಶೀವ್ರವೇ ವರ್ಧನವಾಗಿ ಸಸಿಗಳಿಗೆ ನೆರಳಾಗುತ್ತವೆ ಅದು ಕಾರಣ ತೆಂಗಿನ ವನದ ಮಧ್ಯದಲ್ಲಿ ಮತ್ತು ಅಡಿಕೆಯ ವನದ ಮಧ್ಯದಲ್ಲಿ ಪೇರಲ ಗಿಡಗಳನ್ನು ಸಡೇದ ಗಿಡಗಳನ್ನು ಹಾಕತಕ್ಕದ್ದು

ಚನ್ನಾಗಿ ನೀರು ಬಿಡುವದರಿಂದ ತೆಂಗಿನ ಗಿಡಗಳು ಆರು ವರುಷಕ್ಕೆ ಫಲವಾಗಲಾರಂಭಿಸಿ ಎಂಟು ವರ್ಷ ಚನ್ನಾಗಿ ಕಾಯಿಗಳಾಗುವವು. ಆದಾಗ್ಯೂ ಗಿಡಗಳು ಬಲಿಯುವ ವರೆಗೂ ನೀರು ಕಡಿಮೆಯಾದರೆ ಕಾಯಿಗಳು ಉದುರು ವವು ತೆಂಗಿನ ಗಿಡಗಳು ಬಲಿತ ಮೇಲೆ ಮುಂದೆ ನೀರಿಲ್ಲದಿದ್ದರೂ ಮಳೆಯ ನೀರಿನಿಂದ ಫಲವಾಗುತ್ತಿರುವವು ಅಡಿಕೆಯ ಗಿಡಗಳು ಎಂಟು ಹತ್ತು ವರ್ಷಕ್ಕೆ ಕಾಯಿಗಳಾಗಲಾರಂಭಿಸಿ ಹನ್ನೆರಡು ವರ್ಷಕ್ಕೆ ಚನ್ನಾಗಿ ಫಲವಾಗು ವವು ತೆಂಗು ಮತ್ತು ಅಡಿಕೆಯ ಗಿಡಗಳಿಗೆ ಚನ್ನಾಗಿ ಆರ್ದ್ರತೆಯಾದರೆ ಮತ್ತು ಈ ಗಿಡದ ಬೇರುಗಳು ನೀರಿನ ತಂಪಿಗೆ ಮುಟ್ಟಿದರೆ ಐದು ವರ್ಷಕ್ಕೆ ಕಾಯಿ ಗಳಾಗಲಾರಂಭಿಸುವವು. ಮತ್ತು ಭೂಮಿಯ ಗುಣದಿಂದ ಒಂದು ವರ್ಷ ಹೆಚ್ಚು ಕಡಿಮೆಯಾಗಿ ಕಾಯಿಗಳಾಗುತ್ತ ಗಿಡಗಳು ಉನ್ನತವಾಗುತ್ತ ಇದ್ದು ಯಾವತ್ತು ಗಿಡಗಳು ಕಾಯಿಗಳಾಗುತ್ತ ಇದ್ದು ಮುಂದೆ ಕೆಲವು ವರ್ಷದ ಮೇಲೆ ನೀರಿಲ್ಲದಿದ್ದರೂ ಫಲವಾಗುತ್ತಿರುವವು ಮತ್ತು ಉದ್ಯಾನವನವೆಂಬ ಘನ ತೋಟವನ್ನು ಮಾಡಿಸುವಂಥ ಸಂಪತ್ತುಳ್ಳ ಕೃಷಿಕರಾದರೆ ಮತ್ತು ಐಶ್ವರ್ಯವುಳ್ಳ ಧನಪತಿಗಳಾದರೆ ಇಲ್ಲವೆ ಐಶ್ವರ್ಯವುಳ್ಳ ರಾಜ್ಯಸಂಪದಸ್ಥ ರಾದರೆ ಹಾಗು ಮಹದೈಶ್ವರ್ಯವುಳ್ಳ ಭೂಪತಿಗಳಾದರೆ ಇಂಥ ಸಂಭ್ರಮ ವಾದ ತೋಟದಲ್ಲಿ ತೆಂಗು ಅಡಿಕೆಯ ವನಗಳ ಸಮೀಪದಲ್ಲಿ ಬಾಳೆಯ ವನವನ್ನು ಮಾಡಿಕೊಳ್ಳಬೇಕು ಬಾಳೆಯು ಸದ್ಯಕ್ಕೆ ಫಲವನ್ನು ಕೊಡುತ್ತದೆ ಅದು ಕಾರಣ ಬಡವರಾದರೂ ಬಲ್ಲಿದರಾದರೂ ತಮ್ಮ ತೋಟಗಳಲ್ಲಿ ಬಾಳೆಯ ವನವನ್ನು ಮಾಡಿಕೊಳ್ಳಬೇಕು "ಬಾಳೆ ಇದ್ದವನು ಭಾಗ್ಯವಂತನು"

## ಬಾಳೆಯ ವನವು.

ಕೃಷಿಕ ಜನರಿಗೆ ಸದ್ಯಕ್ಕೆ ಫಲವಾಗುವಂಥ ಯೋಜನೆಗೆ ತಕ್ಕದ್ದಾದ ಬಾಳೆಯ ಫಲವು ಬಡವರಿಗಾದರೂ ಬಲ್ಲಿದರಿಗಾದರೂ ದ್ರವ್ಯೋತ್ಪತ್ತಿಗೂ ಸೌಖ್ಯ ಭೋಜನಕ್ಕೂ ಕಾರಣವಾದದ್ದು ಅದರಿಂದ "ಹಾಕೋ ಬಾಳೆ" ಎಂಬ ಗಾದೆಯುಂಟಾಯಿತು. "ಬಡವನಿಗೆ ಬಾಳೆ, ಬಲವಂತನಿಗೆ ಕಬ್ಬು" ಎಂಬ ಗಾದೆ ಇರುವದು. ಈ ಬಾಳೆಯ ವನವನ್ನು ಮಾಡಿಕೊಳ್ಳುವವರು ಸಹಸ್ರಾವಧಿ ಗಿಡಗಳನ್ನು ಹಚ್ಚಬೇಕಲ್ಲದೆ ಹತ್ತೆಂಟು ಅಥವಾ ನೂರಾರು ಗಿಡ

ಗಳನ್ನುಹಚ್ಚಿದರೆ ಶೋಭೆಯಾಯಿತಲ್ಲದೆ ಸೌಖ್ಯ ತೋರದು. ಮತ್ತು ದ್ರವ್ಯದ ಪ್ರಾಪ್ತಿಯೂ ಕಾಣಿಸದು. ಅಲ್ಪ ಸ್ವಲ್ಪ ಫಲಗಳಾದರೆ ಅದರ ಖರ್ಚಿಗೆ ಸರಿ ಹೋಗದು.

ಬಾಳೆಯ ವನವನ್ನು ಮಾಡುವ ಭೂಮಿಗೆ ಮೊದಲು ಗೊಬ್ಬರವನ್ನು ಬಲಾತ್ಕಾರವಾಗಿ ಹಾಕಿ ದೊಡ್ಡ ನೇಗಿಲು ಕಟ್ಟಿ ಚನ್ನಾಗಿ ಮೂರು ಸಾಲು ಹೊಡೆದು ಆಮೇಲೆ ದೊಡ್ಡ ಕುಂಟೆಯಿಂದ ಚನ್ನಾಗಿ ಹರಗಿ ಪುನಃ ಗೊಬ್ಬರ ಹಾಕಿ ಚನ್ನಾಗಿ ಹರಿಗಿ ಆಮೇಲೆ ಐದು ಮೊಳಕ್ಕೊಂದು ಅಥವಾ ನಾಲ್ಕು ಮೊಳಕ್ಕೊಂದು ಗಿಡಗಳು ನಿಲ್ಲುವ ಹಾಗೆ ಅಜಮಾಸು ನೋಡಿ ಮಡಿಗಳನ್ನೂ ಕಾವಲಿಯನ್ನೂ ಚನ್ನಾಗಿ ಮಾಡಿಕೊಂಡು ಪ್ರತಿಯೊಂದು ಮಡಿಯ ಮಧ್ಯ ಭಾಗದಲ್ಲಿ ಗೇಣು ಒಂದುವರೆ ಗೇಣು ಚಚ್ಚೌಕ ಅಗಲ ಮತ್ತು ಒಂದೂ ಕಾಲು ಮೊಳ ತಗ್ಗಾಗಿರುವ ತಗ್ಗುಗಳನ್ನು ತಗಿಸಿ ಅವುಗಳಲ್ಲಿ ಗೇಣುದ್ದ ಹಳೆಯ ಗೊಬ್ಬರವನ್ನು ಹಾಕಿ ಆರು ತಿಂಗಳದ ಬಾಳೆಯ ಸಸಿಗಳನ್ನು ತೆಗ್ಗಿನಲ್ಲಿ ನಿಲ್ಲಿಸಿ ಮೇಲೆ ಹಳೆಯ ಗೊಬ್ಬರವನ್ನು ಹಾಕಿ ಚನ್ನಾಗಿ ಬಗಲು ತುಳಿದು ಗಟ್ಟಿಯಾಗಿ ಸಸಿಗಳನ್ನು ಕೂಡ್ರಿಸಿ ನೀರು ಕಟ್ಟಬೇಕು ಆಮೇಲೆ ತಪ್ಪದಂತೆ ಎಂಟು ದಿವಸಕ್ಕೆ ಎರಡು ವೇಳೆ ನೀರು ಕಟ್ಟುತ್ತ ಹೋಗಬೇಕು ಮಳೆಗಾಲ ಸಮಯದಲ್ಲಿ ಅನುವರಿತು ಮಳೆಯಾಗುತ್ತ ಹೋದರೆ ನೀರು ಕಟ್ಟುವ ಪ್ರಯೋಜನವಿಲ್ಲ ಬಾಳೆಯ ವನಕ್ಕಾದರೂ ಗಾಳಿ ತಗಲದ ಹಾಗೆ ಸೂತ್ತಲೂ ಪಡೇದ ಗಿಡಗಳನ್ನು ಚೊಗಚಿಯ ಗಿಡಗಳನ್ನು ನುಗ್ಗಿಯ ಗಿಡಗಳನ್ನು ಮತ್ತು ಔಡಲ ಗಿಡಗಳನ್ನು ಹಾಕಿ ಸುತ್ತಲೂ ಚಾಟಾಗುವ ಹಾಗೆ ಮಾಡಬೇಕು ಔಡಲ ಗಿಡಗಳ ಬೊಡ್ಡೆಯಲ್ಲಿ ಚಳ್ಳವರಿಯ ಬೀಜವನ್ನು ಹಾಕಿ ಆ ಬಳ್ಳಿಯನ್ನು ಔಡಲ ಗಿಡಗಳಿಗೆ ಹಬ್ಬಿಸಬೇಕು ಅವು ಚಳಿಗಾಲಕ್ಕೆ ವಿಶೇಷವಾಗಿ ಕಾಯಿಗಳಾಗುವವು ಮತ್ತು ಅಲಸಂದಿಯ ಬೀಜಗಳನ್ನಾದರೂ ಹಾಕಬೇಕು.

ಬಾಳೆಯ ಗಿಡಗಳನ್ನು ಹಚ್ಚಿದ ಒಂಬತ್ತು ತಿಂಗಳಿಗೆ ಫಲವಾಗಲಾರಂಭಿಸಿ ಒಂದು ವರ್ಷಕ್ಕೆ ಹಣ್ಣಾಗುವವು ಆ ಮೇಲೆ ಸದಾ ಸರ್ವದಾ ಹಣ್ಣುಗಳಾಗುತ್ತ ಮೂರು ನಾಲ್ಕು ವರ್ಷದ ವರೆಗೂ ದಿನಂಪ್ರತಿಯಲ್ಲಿ ಕೊಯ್ದರೂ ಸವೆಯದಂತೆ ಫಲವಾಗುತ್ತಿರುವವು ಈ ಬಾಳೆಯ ಫಲವು ಸರ್ವ ಜನರಿಗೂ ಸಕಲ ಶುಭಕಾರ್ಯಗಳಿಗೂ ಉಪಯೋಗವುಳ್ಳದ್ದಾಗಿ ಭೋಜನಕ್ಕೂ ಫಲಾಹಾರಕ್ಕೂ ಅತ್ಯಂತ ರುಚಿಕರವಾಗಿ ಬ್ರಾಹ್ಮಣಾದಿ ಜನರಿಗೆ ಭೋಜನಕ್ಕೆ ಎಲೆಗಳು ಅತ್ಯಂತ ಪ್ರಯೋಜನವಾಗಿ ಪ್ರಿಯಕರವಾಗಿ ನೋಟರಂಜನೆಯಾಗಿ ರಂಭಾಫಲವೆಂದು ಹೇಳಿಸಿಕೊಳ್ಳುವದಾಗಿ ಕವಿಜನರ ಉಪಮೆಗೆ ಶೋಭಾಯಮಾನವಾಗಿ ಒಪ್ಪುವದು. ಅದು ದ್ರವ್ಯಕ್ಕೆ ಆಸ್ಪದವಾಗಿರುವದರಿಂದ "ಬಾಳಿಯನ್ನು ಹಾಕಿದವನು ಬಾಳಿಯಾನು" "ಬಾಳಿ ಇದ್ದವನ ಬಾಳುವೆ

ಉತ್ತಮ” ಎಂಬ ಗಾದೆಗಳುಂಟು. ಆದರೆ ಈ ಬಾಳೆಯನ್ನು ಹಚ್ಚಿ ಅದರ ಆರೈಕೆಯನ್ನು ಮಾಡುವದಕ್ಕೆ ಬಹಳ ಶ್ರಮವು ಬೇಕಾಗುವದಿಲ್ಲ. ಹಾಗು ಒಂದು ವರುಷದೊಳಗೆ ಹದಿನಾರು ಇಪ್ಪತ್ತು ವೇಳೆ ನೀರು ಕಟ್ಟಿದರೆ ಅಷ್ಟ ರಿಂದಲಾದರೂ ಬೆಳೆಯುವವು. ಹೇಗಂದರೆ ಮೃಗಶಿರಕಾಲ ಪ್ರಾರಂಭದಿಂದ ಆಗಾಗ್ಗೆ ಮಳೆಯಾಗುತ್ತ ಹೋದರೆ ಮಳೆಗಾಲದಲ್ಲಿ ನಾಲ್ಕು ತಿಂಗಳು ನೀರು ಕಟ್ಟುವ ಪ್ರಯೋಜನವಿಲ್ಲದೆ ಮಳೆಯ ಸಹಾಯದಿಂದ ಬೆಳೆಯುವದು ಅಥವಾ ಮಳೆಯು ಒಂದೊಂದು ಸಮಯದಲ್ಲಿ ತಡೆದರೆ ಒಂದೆರಡು ವೇಳೆ ನೀರು ಕಟ್ಟಿಸಿಕೊಳ್ಳುವದು ಚಳಿಗಾಲದಲ್ಲಿ ನಾಲ್ಕು ತಿಂಗಳು ಇಬ್ಬನ್ನಿಯ ಸಹಾಯ ದಿಂದ ಬೆಳೆಯುವಲ್ಲಿ ಸಮಯವರಿತು ಅಷ್ಟಷ್ಟು ವೇಳೆ ನೀರು ಬಿಡುವದು. ಸಂಕ್ರಾಂತಿಯಿಂದ ಶಿವರಾತ್ರಿಯ ವರೆಗೂ ಪ್ರತಿ ತಿಂಗಳಿಗೆ ನಾಲ್ಕು ವೇಳೆ ಅಥವಾ ಮಳೆಗಾಲ ಕಡಿಮೆಯಾಗಿ ಭೂಮಿಯ ತಂಪು ಇಲ್ಲದಾದರೆ ಸಮಯ ವರಿತು ಆರು ವೇಳೆಯಂತೆ ಕೆಲವು ದಿವಸ ಆಮೇಲೆ ತಿಂಗಳಿಗೆ ಎಂಟು ವೇಳೆಯಂತೆ ಮೃಗಶಿರಕಾಲ ಪರಿಯಂತರಕ್ಕೂ ನೀರು ಬಿಡುತ್ತ ಹೋದರೆ ಸಾಕು, ಇಷ್ಟರಿಂದಲೇ ಯಾವತ್ತು ಗಿಡಗಳು ಸಮೃದ್ಧಿಯಾಗಿ ಬೆಳೆದು ಸರ್ವದಾ ಫಲವಾಗುತ್ತ ಇರುವವು ಹಾಗೂ ನೀರು ವಿಶೇಷವಾಗಿದ್ದು ಆಗಾಗ್ಗೆ ನೀರು ಬಿಡುವದಕ್ಕೆ ತೋಂದರೆ ಇಲ್ಲದಿದ್ದರೆ ಹದದ ಮೇಲೆ ಭೂಮಿ ಆರಿ ಬೀಡಿ ಸೆಳೆಯದ ಹಾಗೆ ನೋಡಿ ಆಗಾಗ್ಗೆ ನೀರು ಕಟ್ಟುವುದು ಅತ್ಯುತ್ತಮವೇ ಸರಿ. ತೆಂಗು ಬಾಳೆ ಅಡಿಕೆ ಮಾವು ಮೊದಲಾಗಿ ಈ ಗಿಡಗಳಿಗೆ ಎಷ್ಟಾದರೂ ನೀರು ಸಮೃದ್ಧಿಯಾದಷ್ಟು ವಿಶೇಷವು ಆದರೆ ನೀರನ್ನು ಯಾವ ಕಾಲದಲ್ಲಿ ಎಷ್ಟು ದಿವಸಕ್ಕೆ ಬಿಡಬೇಕೆಂಬ ಹದವನ್ನು ತಿಳಿದು ಹಸಿಯಾರಗೊಡದಂತೆ ನೀರು ಬಿಡುತ್ತ ಹೋಗಬೇಕು. ಆದರೆ ಈ ಯಾವತ್ತು ವೃಕ್ಷಗಳ ಕೆಳಗೆ ಮಡಿಗಳಲ್ಲಿ ಹುಲ್ಲು ನಾಟಿಕೆಯು ಕರಿಕೆಯು ಜೇಕು ಒಣಗಿದ ಎಲೆಗಳ ಸದಿಯು ಬಿದ್ದು ಮಲಿನವಾಗದಂತೆ ಆಗಾಗ್ಗೆ ಅವುಗಳನ್ನೆಲ್ಲ ತೆಗೆದು ಹಸನ ಮಾಡಿ ನಿರ್ಮಲ ವಿರುವ ಹಾಗೆ ಮಾಡಬೇಕು.

ಬಾಳೆಯ ಕುಲದಲ್ಲಿ ಗುಜರಾಥಿ, ರಸಬಾಳೆ, ಸುಗಂಧಿ, ಕರಿಬಾಳೆ, ಕಲ್ಯಾಣಿ, ಬೂದಿಬಾಳೆ, ಸೊನ್ನಿಬಾಳೆ, ಏಣುಬಾಳೆ, ಎಂದು ಈ ಪ್ರಕಾರ ಹಲವು ವಿಧವಾದ ಬಾಳೆಯ ಕುಲಗಳುಂಟು. ಇವುಗಳೆಲ್ಲ ತೋಟಗಳಲ್ಲಿ ಬೆಳೆಯತಕ್ಕವು. ಮತ್ತು ಕಾಡಬಾಳೆ ಎಂಬುದೊಂದು ಬಾಳೆಯ ಕುಲವು ಅರ ಣ್ಯದಲ್ಲಿ ಹಾಗು ಶ್ರೀಶೈಲಾದಿ ಪರ್ವತಂಗಳಲ್ಲಿ ಪರ್ವತಗಳ ಪ್ರದೇಶಗಳಲ್ಲಿ ಕರಿಮಲಿ ಪ್ರಾಂತದಲ್ಲಿ ಮಲೆಸೀಮೆಯಲ್ಲಿ ತಮ್ಮಿಂದ ತಾವೇ ಬೆಳೆದು ಹಣ್ಣು ಗಳಾಗಿ ಉದುರಿ ಬೀಳುತ್ತವೆ. ಅವುಗಳು ಋಷಿಗಳ ಆಹಾರವು ಅವುಗಳನ್ನು ತೋಟಗಳಲ್ಲಿ ಬೆಳಸುವದಿಲ್ಲ.

ತೋಟಗಳಲ್ಲಿ ಬೆಳಿಸತಕ್ಕ ಬಾಳೆಯ ಎಲ್ಲ ಕುಲಗಳಲ್ಲಿ ಗುಜರಾಥಿಯ ಬಾಳೆಯ ಗಿಡಗಳನ್ನು ಹಚ್ಚಿದರೆ ನೋಟಕ್ಕೆ ಬಹಳ ಶೋಭಾಯಮಾನವು. ಮತ್ತು ಎಲೆಗಳು ಸುಂದರವಾಗಿಯೂ ಬಹಳ ಅಗಲಾಗಿಯೂ ಮೃದುವಾಗಿಯೂ ಇರುವವು ಗಿಡಗಳು ಬಹಳ ಉನ್ನತವಾಗಿ ಬೆಳೆಯದಿದ್ದರೂ ಅದರ ದಿಂಡು ಬಹಳ ದಪ್ಪಾಗಿಯೂ ನುಣುಪಾಗಿಯೂ ಇರುವದು ಈ ಗುಜರಾಥಿಯ ಬಾಳಿಗೆ ಸಮಯವರಿತು ಎಂಟು ದಿವಸಗಳಲ್ಲಿ ಎರಡು ವೇಳೆ ನೀರು ಕಟ್ಟಬೇಕಾಗುವದು ಈ ಕುಲದ ಬಾಳೆಯನ್ನು ಹಚ್ಚಿದ ಮೇಲೆ ಎಂಟು ಹತ್ತು ವರುಷದ ವರೆಗೂ ಗಿಡಗಳು ಕೆಡದೆ ಸರ್ವದಾ ಕಾಯಿಗಳಾಗುತ್ತ ಇದ್ದು ಅದರ ಕಾಯಿಗಳು ಸಣ್ಣನಾದಾಗ್ಯೂ ಗೊನೆಗಳು ದೊಡ್ಡವಾಗಿ ಗೊಬ್ಬರದ ಸೊಕ್ಕು ಇದ್ದ ಹಾಗೆ ಇನ್ನೂರರ ಮಟ್ಟಿಗೂ ಕಾಯಿಗಳಾಗಿ ಬಹಳ ರುಚಿಕರವಾಗಿರುವವು. ಆದರೆ ಕೆಲವರು ಈ ಗುಜರಾಥಿಯ ಬಾಳಿಯ ಕಾಯಿಗಳು ಸಣ್ಣವೆಂದು ತಿಳಿದು ಕೆಲವರು ಈ ಕುಲದ ಬಾಳೆಯನ್ನು ಹಚ್ಚದೆ ಇತರವಾದ ಕರಿಬಾಳಿ, ಬೂದಿಬಾಳಿ, ಏಣು ಬಾಳಿ ಈ ಗಿಡಗಳ ಕಾಯಿಗಳು ದೊಡ್ಡವೆಂದು ಹಚ್ಚುತ್ತಾರೆ ಈ ಗಿಡಗಳು ಮೂರು ವರುಷದ ವರೆಗೂ ಚನ್ನಾಗಿ ಕಾಯಿಗಳಾಗಿ ಮೂರು ವರುಷದ ಮೇಲೆ ಗಿಡಗಳು ಕೆಟ್ಟು, ಕಾಯಿಗಳು ಸಣ್ಣವಾಗಿ ಮತ್ತು ಬಹಳ ಕಡಿಮೆಯಾಗುವವು ಅದು ಕಾರಣ ಮೂರು ವರುಷದ ಮೇಲೆ ಆ ಗಿಡಗಳನ್ನು ಕಡಿದು ಆ ಭೂಮಿಯನ್ನು ನೆಗಿಲೆಯಿಂದ ಹೊಡೆದು ಹರಗಿ ಹಸನ ಮಾಡಿ ಚನ್ನಾಗಿ ಗೊಬ್ಬರವನ್ನು ಹಾಕಿ ಆ ಭೂಮಿಗೆ ಅರಿಷಣ ಮೆಣಸಿನ ಗಿಡ ಇವುಗಳನ್ನು ಹಚ್ಚಿ ಎರಡನೇ ವರ್ಷ ಕಬ್ಬು ಹಾಕಿ ಮೂರನೇ ವರ್ಷ ನೆಲ್ಲು ಬಿತ್ತುವದು ಈ ಬಾಳೆಯ ಗಿಡಗಳನ್ನು ಕಡಿಯುವದಕ್ಕಿಂತ ಮೊದಲೇ ಮತ್ತೊಂದು ಭಾಗದಲ್ಲಿ ಭೂಮಿಯನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧ ಮಾಡಿ ಈ ಬಾಳೆಯ ಸಸಿಗಳಲ್ಲಿ ಆರು ತಿಂಗಳದ ಸಸಿಗಳನ್ನು ಕಿತ್ತಿ ಹಚ್ಚಿ ಮೊದಲಿನಂತೆ ನೀರು ಬಿಡುತ್ತ ಹೋಗಬೇಕು

ಉದ್ಯಾನ ವನದಲ್ಲಿ ಆಗಲಿ ಮತ್ತು ಶೃಂಗಾರ ತೋಟಗಳಲ್ಲಿ ಆಗಲಿ ಬಡಜನರು ಮಾಡಿದ ಒಂದು ಮೊಟ್ಟೆ ನೀರಿನ ಸಣ್ಣ ತೋಟಗಳಲ್ಲಾದರೂ ಬಾಳೆಯ ವನವನ್ನು ಮುರಿದು ಬಿಡಬಾರದು. ಮೂರು ವರ್ಷಕ್ಕೊಮ್ಮೆ ಮತ್ತೊಂದು ಭಾಗದಲ್ಲಿ ತಯಾರು ಮಾಡಿ ಅದು ಫಲಕ್ಕೆ ಬಂದ ಮೇಲೆ ಈ ಹಳೆಯ ಬಾಳೆಯನ್ನು ಕಡಿದು ಒಂದು ವರ್ಷ ಅರಿಷಣ ಮೆಣಸಿನ ಗಿಡಗಳನ್ನು ಎರಡನೇ ವರ್ಷ ಕಬ್ಬನ್ನು ಹಚ್ಚಿ ಮೂರನೆಯ ವರ್ಷ ನೆಲ್ಲು ಬಿತ್ತಿ ಆ ನೆಲ್ಲು ಬೆಳೆಯನ್ನು ತೆಗೆದುಕೊಂಡು ಭೂಮಿಯನ್ನು ಹಸನ ಮಾಡಿ ಚನ್ನಾಗಿ ಹಳೆಯ ಗೊಬ್ಬರವನ್ನು ಹಾಕಿ ಪುನಃ ಬಾಳೆಯನ್ನು ಹಚ್ಚಬೇಕು.

ಇದನ್ನು ಹೆಚ್ಚಿದ ವರ್ಷಕ್ಕೆ ಹಳೆಯ ಬಾಳೆಯನ್ನು ಕಡಿಯಬೇಕು ಈ ಪ್ರಕಾರ ಸದಾ ಸರ್ವದಾ ಬಾಳೇಕಾಯಿಗಳು ಇರುವಂತೆ ಮಾಡಿಕೊಂಬುವುದು ಕೃಷಿಕ ಜನರ ಜಾಣತನವು.

ಈ ಪ್ರಕಾರದ ಉದ್ಯಾನ ವನವನ್ನು ಮತ್ತು ಶೃಂಗಾರದ ತೋಟವನ್ನು ಮಾಡಿಸುವ ಇಚ್ಛೆಯುಳ್ಳವರಾದ ರಾಜರುಗಳು ಶ್ರೀಮಂತರು ಜಮೀನುದಾರರು ನಾಡಗೌಡರು ದೇಸಾಯರು ದೇಶಪಾಂಡೆಯರು ಪ್ರಧಾನರು ದಿವಾನರು ವಜೀರರು ಉಮರಾವರು ಸರದಾರರು ಸುಭೇದಾರರು ವಕೀಲರು ಕಾರಕೂನರು ಮತ್ತು ಜಹಗೀರದಾರರು ಇದಲ್ಲದೆ ಮಹದೈಶ್ವರ್ಯವುಳ್ಳ ಸಾವುಕಾರರು ಹಾಗು ಸಂಪತ್ತುಳ್ಳ ಗೌಡರು ಶಾನಭೋಗರು ಮತ್ತು ದೊಡ್ಡ ಬುದ್ಧಿಯುಳ್ಳ ಧೈರ್ಯಶಾಲಿಗಳಾದ ರಾಜಕೃಷಿಕರು ಪರಮ ಸಂಭ್ರಮವಾದ ಮಾವಿನ ವನವನ್ನು ತೆಂಗಿನ ವನವನ್ನು ಅಡಿಕೆಯ ವನವನ್ನು ಬಾಳೆಯ ವನವನ್ನು ವಿಶಾಲವಾಗಿ ಮಾಡಿಕೊಂಡು ಸೌಖ್ಯ ಪಡತಕ್ಕದ್ದು. ಶೋಭೆಗಾಗಿ ಹತ್ತೆಂಟು ಅಥವಾ ನೂರಾರು ಗಿಡಗಳನ್ನು ಬೆಳಸದೆ ಈ ಗಿಡಗಳನ್ನೆಲ್ಲ ಸಹ ಸ್ರಾವಧಿ ಹಾಕಿಸಬೇಕಲ್ಲದೆ ಅಲ್ಪ ಸ್ವಲ್ಪ ಮಾಡುವದರಿಂದ ಏನೇನು ರುಚಿ ತೋರದು. ದ್ರವ್ಯದ ಪ್ರಾಪ್ತಿಯಾದರೂ ವಿಶೇಷ ಕಾಣಿಸದು.

ಈ ಉದ್ಯಾನ ವನದ ಮಧ್ಯಭಾಗದಲ್ಲಾಗಲಿ ಅಥವಾ ಬೇರೊಂದು ಕಡೆಗೆ ಊರಿಗೆ ದೂರವಿಲ್ಲದೆ ಮತ್ತು ತೀರ ಸಮೀಪವಿಲ್ಲದೆ ಗ್ರಾಮ ಪುರಗಳ ಬಹಿರ್ಭಾಗಕ್ಕೆ ಸ್ವಲ್ಪ ಅಂತರವಾಗಿ ಹರಿಯುವ ನೀರಿನ ಪ್ರವಾಹವುಳ್ಳ ದಂಡೆಯಲ್ಲಿ ಅಥವಾ ನದಿಯ ತಟಾಕದಲ್ಲಿ ಧರ್ಮ ನಿಮಿತ್ಯವಾಗಿ ಪುಣ್ಯ ವನವೆಂಬ ವನಾಂತರವನ್ನು ಮಾಡಿಸಿದರೆ ಸ್ವರ್ಗಾದಿ ಭೋಗಸಂಪದವೂ ಸಪ್ತ ಸಂತಾನಕ್ಕೆ ಬೀಜ ರೂಪವಾದ ದಿವ್ಯ ಪುಣ್ಯವೂ ಸಂಪ್ರಾಪ್ತಿಸುವವು ಹಾಗೂ ಇಹದಲ್ಲಿ ಸಂಭ್ರಮವೂ ಸತ್ಕೀರ್ತಿಯೂ ದೊರಿಕೊಂಬುವುವು. ಆದ ಕಾರಣ ರಾಜಬುದ್ಧಿಯುಳ್ಳ ರಾಜಕೃಷಿಕರು ಇಂಥ ಸತ್ಪುಣ್ಯಮಯವಾದ ವನಾಂತರವನ್ನು ಶಾಸ್ತ್ರೋಕ್ತ ಪ್ರಮಾಣದಿಂದ ಮಾಡಿ ಪುಣ್ಯವನ್ನು ಕೀರ್ತಿಯನ್ನು ಸಂಪಾದಿಸಿಕೊಳ್ಳಬೇಕು. ಈ ಪುಣ್ಯವನ್ನು ಮಾಡಿಸಿದ ಘನಪುಣ್ಯದ ಸಂಪತ್ತು ಸಪ್ತ ಜನ್ಮಾಂತರದ ವರೆಗೂ ಅಷ್ಟಮಹದೈಶ್ವರ್ಯಯುಕ್ತವಾಗಿ ಕೊರತೆ ಇಲ್ಲದೆ ರಾಜಭೋಗವನ್ನು ಉಣಿಸುವದು. ಆದದರಿಂದ ಈ ಪುಣ್ಯ ವನದಿಂದ ಇಹ ಲೋಕ ಪರಲೋಕಗಳಲ್ಲಿ ಮಹದೈಶ್ವರ್ಯ ಪ್ರಾಪ್ತಿಸುವದು ಈ ವನವನ್ನು ಮಾಡಬೇಕಾದರೆ ಶಾಸ್ತ್ರ ಸೂಕ್ತ ಪ್ರಮಾಣದಿಂದ ಮಾಡಿಸಬೇಕು.

ಉದ್ಯಾನ ವನದಲ್ಲಿ ಮಾಡಿಕೊಳ್ಳತಕ್ಕ ಕೆಲವು ತರದ ವೃಕ್ಷಗಳನ್ನು ಎಲೆದೋಟವನ್ನು ಕೆಲವು ಫಲವೃಕ್ಷಗಳನ್ನು ಹಾಗು ಕಬ್ಬು ನೆಲ್ಲು ಮೊದಲಾದ

ವುಗಳನ್ನು ಇನ್ನೂ ಕೆಲವು ಪದಾರ್ಥಗಳನ್ನು ಹಾಗು ಮುಂದೆ ಕೆಲವು ಪ್ರಕರಣ ಗಳಲ್ಲಿ ವಿಸ್ತಾರವಾಗಿ ಹೇಳುವೆನು ಆದರಂತೆ ಈ ಉದ್ಯಾನವನದ ಒಂ ದೊಂದು ಭಾಗದಲ್ಲಿ ಬೇರೆ ಬೇರೆ ಮಾಡಿಕೊಳ್ಳಬೇಕು.

ಸಕಲ ಜನರಲ್ಲಿ ಕೃಷಿಕರೆಲ್ಲರೂ ಯಾವತ್ತರು ಇಂಥ ಸಂಭ್ರಮವಾದ ಘನ ವನಾಂತರಗಳನ್ನು ಮಾಡಲಾರರು ಆದರೆ ಅಷ್ಟು ವಿಶಾಲವಾದ ಭೂಮಿಯು ಒಂದೇ ಕಡೆಗೆ ನೀರಿನ ಆಸ್ಪದವಿದ್ದಲ್ಲಿ ಇಲ್ಲದಿದ್ದರೆ ಮತ್ತು ಸ್ವಲ್ಪ ಸ್ವಲ್ಪ ಭೂಮಿ ಇದ್ದವರಾದರೂ ನಾಲ್ಕು ಮೊಟ್ಟೆ ಅಥವಾ ಎರಡು ಮೊಟ್ಟೆ ಇಲ್ಲವೆ ಒಂದೇ ಮೊಟ್ಟೆಯು ಪೂರ್ತಿಗಾದರೂ ನೀರು ಇರುವ ಭೂಮಿಯು ಎಷ್ಟು ಇರುವದೋ ಅಷ್ಟಷ್ಟರ ಪೂರ್ತಿಗಾದರೂ ಬೇರೆ ಬೇರೆ ಒಂದೊಂದು ತೋಟವನ್ನು ಮಾಡಿಕೊಳ್ಳಬೇಕು ಒಂದು ಕೂರಿಗೆ ಭೂಮಿಗೆ ನೀರು ಏರುವ ಹಾಗೆ ಇದ್ದರೆ ಅದಕ್ಕೆ ಸಾವಿರ ತೆಂಗಿನ ಗಿಡಗಳು ಆಗುವವು ಮತ್ತು ಸಾವಿರ ಅಥವಾ ಬಹಳ ಅಂತರವಾಗಿ ಹಾಕಿದರೆ ಎಂಟು ನೂರು ಮಾವಿನ ಗಿಡಗಳು ಆಗುವವು ಹಾಗು ಅಡಿಕೆಯ ಗಿಡಗಳು ಪ್ರತಿಯೊಂದು ಕೂರಿಗೆಗೆ ಅಥವಾ ೪ ಎಕರೆ ಭೂಮಿಗೆ ಐದು ಸಾವಿರ ಮತ್ತು ಬಾಳೆಯಾದರೂ ಐದು ಸಾವಿರ ಗಿಡಗಳಾಗುವವು. ಈ ಅನುವರಿತು ಮೂರು ಮೂರು ಅಂತರ ವಾಗಿ ಹಾಕತಕ್ಕ ಗಿಡಗಳು ಯಾವತ್ತು ಸಾಕಳಿ ಅಳತಿ (ಒಂದು ಸಾಕಳಿ ಅಂದರೆ ೪೯. ಮೊಳ) ಯಿಂದ ಒಂದು ಸಾಕಳಿ ಅಗಲ ಹಾಗು ಹತ್ತು ಸಾಕಳಿ ಉದ್ದ ಅಳೆದರೆ ಈಗಿನ ಪೈಮಾಸಿ ಪ್ರಕಾರ ಒಂದು ಎಕರೆ ಆಗುವದು. ಆದರೆ ನಮ್ಮ ದೇಶದಲ್ಲಿ ಎರಡು ಎತ್ತುಗಳಿಂದ ಒಂದು ಕೂರಿಗೆಯಲ್ಲಿ ಎಂಟು ತಾಸಿನ ವರೆಗೂ ಬಿತ್ತುವಷ್ಟು ಭೂಮಿಗೆ ಒಂದು ಕೂರಿಗೆ ಭೂಮಿ ಎಂಬುವ ರೂಢಿ ಉಂಟು. ಒಂದು ಕೂರಿಗೆಗೆ ಸುಮಾರು ನಾಲ್ಕು ಎಕರೆಯಾಗುತ್ತದೆ

ಈ ಸಾಕಳಿ ಅಳತೆಯು ಆಕಾರಕ್ಕೆ ಒಂದು ಎಕರೆ ಭೂಮಿಯಲ್ಲಿ ೨೫೦ ತೆಂಗಿನ ಗಿಡಗಳು ಮತ್ತು ಪ್ರತಿಯೊಂದು ಎಕರೆ ಭೂಮಿಗೆ ಸಾವಿರ ಅಡಿಕೆಯ ಗಿಡಗಳು ಮತ್ತು ಬಾಳೆಯನ್ನು ಹಾಕಿದರೆ ಸಾವಿರ ಬಾಳೆಯ ಗಿಡಗಳು ಮತ್ತು ಮಾವಿನ ಗಿಡಗಳನ್ನು ಹಾಕಿದರೆ ಇನ್ನೂರು ಅಥವಾ ಇನ್ನೂರುಐವತ್ತು ಗಿಡ ಗಳಾಗುವವು ಹಾಗು ಒಂದು ಕೂರಿಗೆ ಭೂಮಿಯಲ್ಲಿ ಸಾವಿರ ಮಾವಿನ ಗಿಡ ಗಳು ಅಥವಾ ತೆಂಗಿನ ಗಿಡಗಳನ್ನು ಹಾಕಿದರೆ ಸಾವಿರ ತೆಂಗಿನ ಗಿಡಗಳು ಇಲ್ಲವೆ ಅಡಿಕೆಯ ಗಿಡಗಳನ್ನು ಹಚ್ಚಿದರೆ ಒಂದು ಕೂರಿಗೆ ಸಾವಿರ ಅಡಿಕೆಯ ಗಿಡಗಳು ಹಾಗು ಬಾಳೆಯನ್ನು ಹಾಕಿದರೆ ಸಾವಿರ ಬಾಳೆಯ ಗಿಡಗಳು ಈ ಪ್ರಕಾರ ಐದು ಮೊಳ ಐದುವರೆ ಮೊಳ ಅಂತರವಾಗಿ ಒಂದೊಂದು ಗಿಡವನ್ನು ಹಚ್ಚಿದರೆ ಯಾವ ಗಿಡಗಳಾದರೂ ಕೂರಿಗೆಗೆ ಸಾವಿರ ಗಿಡಗಳಾಗು ವವು. ಇದು ಈಗಿನ ಪೈಮಾಷೆಯ ಸಾಕಳಿ ಅಳತಿಯು.

ಆದರೆ ಕೃಷಿಕರು ಯಾವತ್ತರೂ ಹಳ್ಳದ ದಂಡೆಯಲ್ಲಾಗಲಿ ಮತ್ತಾವ ಭೂಮಿಯಲ್ಲಾಗಲಿ ಸವಿ ನೀರು ಬೀಳುವ ಮಹಾ ನೀರಿನ ಸ್ಥಳವನ್ನು ಪರೀಕ್ಷಿಸಿ ಭಾವಿಯನ್ನು ಕಡಿಸಿ ನೀರಿನ ಬಲಾತ್ಕಾರವಿದ್ದಂತೆ ನಾಲ್ಕು ಮೊಟ್ಟೆ ಅಥವಾ ಎರಡು ಮೊಟ್ಟೆಯ ಬಾರಿಯನ್ನಾದರೂ ತಯಾರ ಮಾಡಿಕೊಳ್ಳಬೇಕು. ಅಥವಾ ಮಹಾ ನೀರು ಇಲ್ಲದೆ ನೀರಿನ ಬಲಾತ್ಕಾರವು ಕಡಿಮೆ ಇದ್ದರೆ ಒಂದೊಂದು ಮೊಟ್ಟೆಯ ಬಾರಿಯನ್ನಾದರೂ ಮಾಡಿಕೊಂಡು ಆ ನೀರಿಗೆ ಸರಿಯಾಗುವಷ್ಟು ಭೂಮಿಯನ್ನಾದರೂ ತೋಟವನ್ನು ಮಾಡಿಕೊಳ್ಳಬೇಕು.

ಒಂದೇ ಮೊಟ್ಟೆಯ ಭಾವಿಯಾದರೂ ತೋಟನ್ನು ಮಾಡುವವರು ಬಾರಿಯನ್ನು ಕಟ್ಟುವಾಗ್ಗೆ ಭೂಮಿಯ ತೂಕವನ್ನು ನೋಡಿ ಮೊದಲಿಗೇ ಸ್ವಲ್ಪ ಎತ್ತರವಾಗಿ ಕಟ್ಟಿಕೊಂಡರೆ ಆರು ಎಕರೆ ಭೂಮಿಗೆ ನೀರು ಸಾಕಾಗುವದು ಅಷ್ಟು ಭೂಮಿಯಲ್ಲಾದರೂ ಸಮನಾಗಿ ಆರು ಭಾಗಗಳನ್ನು ಮಾಡಿ ಆ ಭೂಮಿಯಲ್ಲಿ ನೀರು ಏರುವ ಭೂಮಿ ಯಾವತ್ತಕ್ಕೂ ಸುತ್ತು ಒಡ್ಡನ್ನು ನಾಲ್ಕು ಕಡೆಗೂ ಹಾಕಿಕೊಂಡು ಆ ಸುತ್ತು ಒಡ್ಡಿನ ಹೊರವೈಯಲ್ಲಿ ಕಳ್ಳಿಯನ್ನು ಸೀಗಿಯ ಬೀಜವನ್ನು ಕೇದಿಗೆಯನ್ನು ಹಚ್ಚಿ ಅದರ ಹಿಂದೆ ಮುಳ್ಳನ್ನು ಹಚ್ಚಿ ಬೇಲಿಯನ್ನು ಬಂದೋಬಸ್ತು ಮಾಡಬೇಕು ಒಡ್ಡಿನ ಮೇಲುಭಾಗದಲ್ಲಿ ಅಂದರೆ ಒಡ್ಡಿನ ತಲೆಯ ಮೇಲೆ ಬೇವಿನ ಬೀಜಗಳನ್ನು ಹಾಕಿ ಮತ್ತು ಒಡ್ಡಿನ ಒಳವೈಯಲ್ಲಿ ಸರವು ಕಡಿದು ಮೊಟ್ಟೆಯ ನೀರು ಸುತ್ತಲೂ ನಾಲ್ಕು ಕಡೆಗೂ ಹೋಗುವ ಹಾಗೆ ಮಾಡಿ ಅದರಲ್ಲಿ ಬಿದಿರು ಬೀಜಗಳನ್ನು ಹಾಕಿ ಹಾಗೂ ಬಿದಿರಿನ ಒಳವೈಯಲ್ಲಿ ಇಪ್ಪತ್ತುನಾಲ್ಕು ಮೊಳಕ್ಕೆ ಒಂದರಂತೆ ಮಾವಿನ ಗಿಡಗಳನ್ನು ಹಾಕಿ ಉಳಿಯುವ ಚೌಕು ಭೂಮಿ ಯಾವತ್ತರಲ್ಲಿ ಆರು ಭಾಗಗಳನ್ನು ಮಾಡಿ ಒಂದು ಭಾಗದಲ್ಲಿ ಒಂದು ಎಕರ ಅಜಮಾಸು ಭೂಮಿಯಲ್ಲಿ ತೆಂಗಿನ ಗಿಡಗಳನ್ನು ನಾಲ್ಕು ಮಾರಿಗೆ ಒಂದರಂತೆ ೨೦೦ ಅಥವಾ ೨೫೦ ಗಿಡಗಳನ್ನು ಔರಸ ಚೌರಸ ಸಾಲು ಸಾಲಾಗುವ ಹಾಗೆ ಹಾಕಬೇಕು. ಅವುಗಳ ಮಧ್ಯದಲ್ಲಿ ಪೇರಲೆ ಗಿಡಗಳನ್ನು ಮತ್ತು ಅಂಗಲಾದಲ್ಲಿ ಸಡೇದ ಗಿಡಗಳನ್ನು ಹಾಕಬೇಕು ಮತ್ತು ತೆಂಗಿನ ಗಿಡಗಳಿಗಾದರೂ ಎಳೆಯ ಸಸಿಗಳು ವರ್ಧನವಾಗುವ ಕಾಲದಲ್ಲಿ ಗಾಳಿಯೂ ಬಿಸಿಲೂ ತಾಕದ ಹಾಗೆ ಸುತ್ತಲೂ ತೆಂಗಿನ ವನದ ಹೊರವಳಯದಲ್ಲಿ ನಾಲ್ಕು ಬೆರಳಿಗೊಂದರಂತೆ ಸಡೇದ ಗಿಡಗಳನ್ನು ಅದರ ಹಿಂದೆ ಗೇಣಿಗೊಂದು ಚೊಗಚೆಯ ಗಿಡವನ್ನು ಅವುಗಳ ಹಿಂದೆ ಮೊಳಕ್ಕೊಂದರಂತೆ ನುಗ್ಗಿಯ ಗಿಡಗಳನ್ನು ಆ ನುಗ್ಗಿಯ ಗಿಡಗಳ ಸಂದಿನಲ್ಲಿ ಔಡಲ ಗಿಡಗಳನ್ನು ಹಾಕಿ ನೀರು ಬಿಡುತ್ತ ಹೋಗಬೇಕು. ಆ ತೆಂಗಿನ ವನದ ಎದುರಿಗೆ ಒಂದು ಎಕರೆ ಅಜಮಾಸು ಭೂಮಿಯಲ್ಲಿ ಒಂದು ಭಾಗಕ್ಕೆ ಅಡಿಕೆಯ ಗಿಡಗಳನ್ನು ಮಾರಿಗೊಂದರಂತೆ ಸಾವಿರ

ಗಿಡಗಳನ್ನು ಹಚ್ಚಿ ಅವುಗಳ ಮಧ್ಯದಲ್ಲಾದರೂ ಪೇರಲ ಗಿಡಗಳನ್ನು ಹಾಗು ಸುತ್ತಲಾದರೂ ತೆಂಗಿನ ಗಿಡದ ಸುತ್ತಲೂ ಹಾಕಿದ ಹಾಗೆ ಸಡೇದ ಗಿಡಗಳನ್ನು ಅವುಗಳ ಹಿಂದೆ ಚೊಗಚಿಯ ಗಿಡಗಳನ್ನು ಅವುಗಳ ಹಿಂದೆ ನುಗ್ಗಿಯ ಗಿಡಗಳನ್ನು ಅವುಗಳ ಸಂದಿನಲ್ಲಿ ಹಿಂದೆ ಹೇಳಿದ ಹಾಗೆ ಹಾಕಿಸಿ ಸುತ್ತಲೂ ಗಾಳಿ ತಗಲದ ಹಾಗೆ ಮಾಡಬೇಕು. ಅಡಿಕೆಯ ಗಿಡಗಳ ಮಧ್ಯದಲ್ಲಾದರೂ ತೆಂಗಿನ ವನದಲ್ಲಿ ಹಾಕಿದ ಹಾಗೆ ಅಡಿಕೆಯ ಗಿಡ ಮತ್ತು ಪೇರಲ ಗಿಡಗಳ ಮಧ್ಯ ಸಂದಿನಲ್ಲಿ ಸಡೇದ ಗಿಡಗಳನ್ನು ಹಾಕಬೇಕು. ಅವುಗಳು ಎರಡು ಮೂರು ತಿಂಗಳಲ್ಲಿ ಉನ್ನತವಾಗಿ ಸಸಿಗಳಿಗೆ ನೆರಳಾಗುತ್ತದೆ. ತಂಗು ಅಡಿಕೆಯ ಎಳೆಯ ಸಸಿಗಳಿಗೆ ನೆರಳು ನೀರುಗಳ ತಂಪು ವಿಶೇಷವಾದ ಹಾಗೆಲ್ಲ ತೀವ್ರವೇ ಬೆಳೆದು ಫಲಕ್ಕೆ ಬರುವವು ಹಾಗು ಎಲೆಯ ಬಳ್ಳಿಗಳಿಗಾದರೂ ಗಾಳಿ ತಗಲದ ಹಾಗೆ ತಂಪಾಗುವ ಹಾಗೆ ಸಡೇದ ಗಿಡಗಳನ್ನು ಬಹಳವಾಗಿ ಹಾಕಬೇಕು ಆ ಎಲೆಯ ಬಳ್ಳಿಯನ್ನು ಹಚ್ಚುವ ರೀತಿಯನ್ನು ಇದೇ ಪ್ರಕರಣದಲ್ಲಿ ಮುಂದೆ ಬರೆಯುವೆನು ಅದರಂತೆ ಮಾಡಿಕೊಳ್ಳಬೇಕು.

ಒಂದೇ ಮೊಟ್ಟೆಯ ಬಾವಿಯಾದರೂ ಆರು ಎಕರೆ ಅಜಮಾಸ ಭೂಮಿಗೆ ನೀರು ಸಾಕಾಗುವದರಿಂದ ಅದರಲ್ಲಿ ಒಂದು ಎಕರೆ ಭೂಮಿಗೆ ತೆಂಗಿನ ವನವನ್ನು ಮತ್ತೊಂದು ಎಕರೆ ಭೂಮಿಯಲ್ಲಿ ಅಡಿಕೆಯ ವನವನ್ನು ಇನ್ನೊಂದು ಎಕರೆ ಭೂಮಿಯಲ್ಲಿ ಎಲೆತೋಟವನ್ನು ಹಾಗು ಮತ್ತೊಂದು ಎಕರೆ ಭೂಮಿಗೆ ಬಾಳೆಯ ವನವನ್ನು ಈ ಪ್ರಕಾರವಾಗಿ ತೋಟದ ನಾಲ್ಕು ಮೂಲಿಯಲ್ಲಿ ನಾಲ್ಕು ಎಕರೆ ಭೂಮಿಯಲ್ಲಿ ನಾಲ್ಕು ವನಗಳನ್ನು ಮಾಡಿ ಮಧ್ಯದಲ್ಲಿ ಎರಡು ಎಕರೆ ಭೂಮಿಯನ್ನು ಹಾಗೆಯೇ ಉಳಿಸಿ ಅದರಲ್ಲಿ ಕಬ್ಬು ನೆಲ್ಲು ಅಲ್ಲ ಅರಿಷಿಣ ಮೆಣಸು ಮೆಣಸಿನಕಾಯಿ ಗಿಡ ಬದನೆ ಮೊದಲಾದ ಕಾಯಿಪಲ್ಲೆ ಉಳ್ಳಿ ಬಳ್ಳೊಳ್ಳಿ ಗೆಣಸು ಮೊದಲಾದ ಪದಾರ್ಥಗಳನ್ನು ಕಾಲವರಿತು ಹದಬೆದೆಗಳನ್ನು ತಿಳಿದು ಬೆಳೆ ಮಾಡಿಕೊಳ್ಳಬೇಕು

ಈ ಪ್ರಕಾರ ಸಣ್ಣ ತೋಟವಾದಾಗ್ಯೂ ಇದರ ಉತ್ಪನ್ನದ ಅಜಮಾಸನ್ನು ಸ್ವಲ್ಪ ಸೂಚಿಸುವೆನು ಇಂಥ ತೋಟವನ್ನಾದರೂ ಮಾಡಿಸಬೇಕಾದರೆ ಒಂದು ವರ್ಷದ ವರೆಗೂ ಅದರ ಉತ್ಪನ್ನವೇನೂ ತೋರದೆ ತನ್ನ ಸ್ವಂತ ಹಣವೇ ಅಷ್ಟಷ್ಟು ಖರ್ಚಾಗುತ್ತಿರುವದು ಆದರೆ ಮೊದಲು ಕೃಷಿಕರಾದವರು ಕಾಯಶಕ್ತಿಯಿಂದ ಬುದ್ಧಿ ಶಕ್ತಿಯಿಂದ ಮತ್ತು ದ್ರವ್ಯಶಕ್ತಿಯಿಂದ ವರ್ಷ ಆರು ತಿಂಗಳು ಪ್ರಯತ್ನ ಮಾಡಿ ತೋಟವನ್ನು ಮಾಡಿಕೊಂಡು ಹಿಂದೆ ಹೇಳಿದ ಪ್ರಕಾರ ಯಾವತ್ತು ವೃಕ್ಷಗಳನ್ನು ಹಲವು ಪ್ರಕಾರದ ಸಸಿಗಳನ್ನು ಹಚ್ಚಿದ

ಮೇಲೆ ಮೂರು ತಿಂಗಳಿಗೆ ಪ್ರಾರಂಭವಾಗಿ ಸ್ವಲ್ಪ ಸ್ವಲ್ಪ ರುಚಿಯನ್ನು
ತೋರಿಸುತ್ತ ಬರುತ್ತ ಬರುತ್ತ ವರ್ಷ ಎರಡು ವರ್ಷಕ್ಕೆ ಸ್ವಲ್ಪ ವಿಶೇಷವಾಗಿ
ಕಾಣುವದು. ಹಾಗು ನಾಲ್ಕು ಐದು ವರ್ಷಕ್ಕೆ ಮತ್ತೂ ವಿಶೇಷವಾಗುವದು.
ಮುಂದೆ ಹತ್ತು ಹನ್ನೆರಡು ವರ್ಷಕ್ಕೆ ಬಹಳ ಉತ್ಪನ್ನವು ಕೈಗೆ ಬರಲಾರಂ
ಭಿಸಿ ವಂಶಪರಂಪರೆಯಾಗಿ ಪ್ರತಿ ವರ್ಷಕ್ಕೆ ಎರಡು ಸಾವಿರ ರೂಪಾಯದ
ಕ್ಕಿಂತಲೂ ಹೆಚ್ಚು ಉತ್ಪನ್ನವು ಕೈಗೆ ಬರುತ್ತ ಮತ್ತು ತೋಟದಲ್ಲಿ ಬೆಳೆದಿರುವ
ನಾನಾ ಪ್ರಕಾರದ ಫಲಪದಾರ್ಥಗಳನ್ನು ಉಂಡು ಪರಿಣಾಮಿಸುತ್ತ ಇರುವರು

ಒಂದೇ ಮೊಟ್ಟೆಯ ಸಣ್ಣ ತೋಟವಾದರೂ ತಿಂಗಳು ಹದಿನೈದು ದಿವ
ಸಕ್ಕೆ ಕೆಲವು ಪ್ರಕಾರದ ಪಲ್ಲೆಯು ಕೈಗೆ ಬರುವದು ಹೇಗಂದರೆ ಬಾಳೆಯ
ಗಿಡದ ಮಧ್ಯದಲ್ಲಿರುವ ಭೂಮಿಯು ವ್ಯರ್ಥವಾಗದಂತೆ ಆದರಲ್ಲಿ ಆ ಬಾಳೆಯ
ಗಿಡಗಳು ಉನ್ನತವಾಗುವದರೊಳಗೆ ಒಂದೆರಡು ಬೆಳೆಯನ್ನು ಮಾಡಿಕೊಳ್ಳ
ಬೇಕು. ಮತ್ತು ಕಬ್ಬಿನೊಳಗೆ ಕೆಲವು ಪಲ್ಲೇದ ಜಿನಸುಗಳನ್ನು ಬೆಂಡಿಯ
ಗಿಡವನ್ನು ಹಾಕಬೇಕು ಬಾಳೆಯಲ್ಲಿ ಮೆಂತೆ, ಹರಿವೇ ಪಲ್ಲೆ, ಚಕೋತ್ರಿನಪಲ್ಲೆ
ಹಾಗೂ ರಾಜಗಿರಿಯ ಪಲ್ಲೆ, ಹುಳಿಚೀಕನ ಪಲ್ಲೆ ಈ ಪ್ರಕಾರ ಪಲ್ಲೆಯ ಜೀನ
ಸುಗಳನ್ನು ಮತ್ತು ಕೆಲವು ಮಡಿಗಳಲ್ಲಿ ಕೋತಂಬರಿಯ ಬೀಜವನ್ನು ಹಾಕ
ಬೇಕು. ಮತ್ತು ಕಬ್ಬಿನೊಳಗೆ ಪುಂಡೀಪಲ್ಲೆ ಬೆಂಡಿಯ ಗಿಡಗಳನ್ನು ಹಾಕಬೇಕು.
ಇವುಗಳು ೧ ತಿಂಗಳು ೧। ತಿಂಗಳೊಳಗೆ ಕೈಗೆ ಬರುವವು ಈ ಬಾಳೆಯ
ಮಧ್ಯದಲ್ಲಿರುವ ಪಲ್ಲೆಗಳನ್ನು ತೆಗೆದುಕೊಂಡು ಆ ಭೂಮಿಯನ್ನು ಹಸನ
ಮಾಡಿ ಪುನಃ ಗೊಬ್ಬರ ಹಾಕಿ ಉಳ್ಳಿ ಬಳ್ಳೊಳ್ಳಿಯನ್ನು ಹಾಕಬೇಕು ಮತ್ತು
ಕಬ್ಬಿನಲ್ಲಿರುವ ಪುಂಡಿಯಪಲ್ಲೆಯನ್ನು ಕಿತ್ತಿಕೊಂಡು ಬೆಂಡಿಯ ಗಿಡಗಳನ್ನು
ಹಾಕಬೇಕು. ಆ ಮೇಲೆ ಮೂರು ನಾಲ್ಕು ತಿಂಗಳ ವರೆಗೂ ಬೆಂಡಿಯ ಕಾಯಿ
ಗಳಾಗುತ್ತಿರುವವು ಹಾಗು ಮೂರು ತಿಂಗಳು ನಾಲ್ಕು ತಿಂಗಳಷ್ಟಕ್ಕೆ ಉಳ್ಳಿ
ಬಳ್ಳೊಳ್ಳಿಗಳು ಕೈಗೆ ಬರುವವು ಅಷ್ಟರಲ್ಲಿ ಕಬ್ಬು ಬಾಳೆ ಉನ್ನತವಾಗು
ವವು. ಈ ಉಳ್ಳಿ ಬಳ್ಳೊಳ್ಳಿಯು ಕೈಗೆ ಬರುವಷ್ಟಕ್ಕೆ ಅರಿಷಿಣ ಮೆಣಸಿನ
ಗಿಡಗಳನ್ನು ಹಚ್ಚಿದರೆ ಅಷ್ಟಕ್ಕೆ ಮೆಣಸಿನ ಕಾಯಿಗಳಾಗುವವು ಆ ಮೇಲೆ
ಹಾಕಿದ ಎಂಟು ದಿವಸಗಳಷ್ಟಕ್ಕೆ ಅರಿಷಿಣದ ಬೆಳೆಯು ಬರುವದು ಮತ್ತು
ಉಳಿದ ಎರಡು ಎಕರೆ ಬೈಲು ಭೂಮಿಯಲ್ಲಿ ಉಳ್ಳಿಯನ್ನು ಅದರ ಮಧ್ಯ
ದಲ್ಲಿ ಕಸಕಸಿಯನ್ನು ಹಾಕಿದ್ದರೆ ಮೂರು ನಾಲ್ಕು ತಿಂಗಳಿಗೆ ಕೈಗೆ ಬರು
ವವು. ನೆಲ್ಲು ಬಿತ್ತಿದ್ದರೆ ನಾಲ್ಕು ತಿಂಗಳಿಗೆ ಬರುವದು. ಬದನಿಯು ಮೂರು
ತಿಂಗಳಿಗೆ ಕಾಯಿ ಆಗಲಾರಂಭಿಸಿ ಎಂಟು ತಿಂಗಳ ವರೆಗೂ ಕಾಯಿಗಳಾಗು
ತ್ತಿರುವವು. ಒಂದು ವರ್ಷದೊಳಗೆ ಇಷ್ಟು ಉತ್ಪನ್ನವು ಕೈಗೆ ಬರುವದು.
ಆ ಮೇಲೆ ಬಾಳಿಯು ಫಲವಾಗಲಾರಂಭಿಸಿದರೆ ಪ್ರತಿಯೊಂದು ಗಿಡಕ್ಕೆ ಒಂದು

ರೂಪಾಯದಕ್ಕಿಂತ ಹೆಚ್ಚು ಉತ್ಪನ್ನವಾಗುತ್ತ ಮೂರು ವರ್ಷದ ವರೆಗೂ ಫಲವಾಗುತ್ತ ಇರುವದು. ಅಷ್ಟರಲ್ಲಿ ಭೂಮಿಯ ಸಮೀಪದಲ್ಲಿ ಕಾವಲಿಯ ಒಡ್ಡಿನ ತಳಭಾಗದ ತಂಪಿನಲ್ಲಿರುವ ನಿಂಬಿಯ ಗಿಡಗಳು ಮತ್ತು ತೆಂಗು ಅಡಿಕೆಯ ಮಧ್ಯದಲ್ಲಿರುವ ಪೇರಲ ಗಿಡಗಳು ಫಲವಾಗುವವು ಐದು ವರ್ಷಕ್ಕೆ ತೆಂಗಿನ ಗಿಡಗಳು ಫಲಕ್ಕೆ ಬರುವವು ಮತ್ತು ತೋಟದ ಸುತ್ತಲೂ ಇರುವ ಮಾವಿನ ಗಿಡಗಳು ಫಲವಾಗುವವು ಎಂಟು ಹತ್ತು ವರ್ಷಕ್ಕೆ ಅಡಿಕೆಯ ಗಿಡಗಳು ಫಲಕ್ಕೆ ಬರುವವು. ಇದಲ್ಲದೆ ಎಲೆಯ ಬಳ್ಳಿಯಾದರೂ ಬಾಳೆಯಂತೆ ಹಚ್ಚಿದ ಒಂದು ವರ್ಷಕ್ಕೆ ಮಾರಾಟಕ್ಕೆ ಪ್ರಾರಂಭವಾಗುವದು

"ತೋಟವನ್ನು ಮಾಡದೆ ಕೋಟಲೆ ಹೋಗದು" ಎಂಬ ಗಾದೆಗೆ ಅನುಸಾರವಾಗಿ ಯುಕ್ತಿಯಿಂದ ಹದದ ಮೇಲೆ ಇಲ್ಲಿ ಹೇಳಿದ ಪ್ರಕಾರ ತೋಟದ ವ್ಯವಸಾಯವನ್ನು ಮಾಡಿಕೊಂಡರೆ ಆರು ಎಕರೆ ಭೂಮಿಯಲ್ಲಿ ಪ್ರತಿ ವರ್ಷಕ್ಕೂ ಎರಡು ಸಾವಿರ ರೂಪಾಯದ ಉತ್ಪನ್ನಕ್ಕೆ ಕಡಿಮೆಯಾಗದು. ಹೇಗಂದರ ತೋಟದ ವ್ಯವಸಾಯಕ್ಕೆ ಆರಂಭ ಮಾಡಿ ಎರಡು ಮೂರು ತಿಂಗಳಷ್ಟರಲ್ಲಿ ಯಾವತ್ತು ಗಿಡಗಳನ್ನು ಕೆಲವು ಪ್ರಕಾರ ಫಲ ಪದಾರ್ಥಾದಿಗಳನ್ನು ಹಿಂದೆ ಹೇಳಿದ ಪ್ರಕಾರ ಮಾಡಿಕೊಂಬುವುದು ಆದರಲ್ಲಿ ಒಂದು ಎಕರೆ ಭೂಮಿಯಲ್ಲಿ ಬಾಳೆಯನ್ನು ಒಂದು ಎಕರೆ ಭೂಮಿಯಲ್ಲಿ ಎಲೆಯ ಬಳ್ಳಿಯನ್ನು ಹಚ್ಚಿದ್ದರೆ ಬಾಳೆಯು ಒಂದು ವರ್ಷಕ್ಕೆ ಫಲವಾಗಲಾರಂಭಿಸಿ ಪ್ರತಿ ವರ್ಷಕ್ಕೂ ಸಾವಿರಾರು ರೂಪಾಯದ ಉತ್ಪನ್ನವು ಆಗುವದು ಎಲೆಬಳ್ಳಿಯಲ್ಲಿ ಕರೆ ಎಲೆ ಆದರೆ ಒಂದು ವರ್ಷಕ್ಕೆ ಸಾವಿರಾರು ರೂಪಾಯದ ಉತ್ಪನ್ನವು, ಬಿಳೀ ಎಲೆಯಾದರೆ ಪ್ರತಿ ವರ್ಷಕ್ಕೆ ಅದರ ಉತ್ಪನ್ನವು ಐದುನೂರು ರೂಪಾಯಕ್ಕಿಂತ ಕಡಿಮೆಯಾಗದು. ಇದಲ್ಲದೆ ಕಬ್ಬು ನಲ್ಲು ಅರಿಷಿಣ ಮೆಣಸಿನಕಾಯಿ ಉಳ್ಳಿ, ಬಳ್ಳೊಳ್ಳಿ ಕಸಕಸಿ ಜೀರಿಗೆ ಶಾಜೀರಿಗೆ ಅಲ್ಲ ಮೆಣಸು ಬದನೆಕಾಯಿ ಈ ಯಾವತ್ತು ಉಳಿದಾದ ಕಾಯಿಪಲ್ಲೆ ಯಾವತ್ತರ ಉತ್ಪನ್ನವು ಬೇರೆ ಇದ್ದು ಮೂರು ವರ್ಷಕ್ಕೆ ಮಾವಿನ ಹಣ್ಣು ಎಂಟು ಹತ್ತು ವರ್ಷಕ್ಕೆ ಅಡಿಕೆ ತೆಂಗು ಮೊದಲಾದ ಫಲಗಳು ಯಾವತ್ತು ಕೈಗೆ ಬಂದ ಮೇಲೆ ಪ್ರತಿ ವರ್ಷಕ್ಕೂ ಆ ತೋಟದ ಖರ್ಚು ಮತ್ತು ಮನೆಯ ಖರ್ಚು ಹಾಗು ಸರಕಾರದ ತೆರಿಗೆ ಮುಂತಾದ್ದು ಹೋಗಿ ಎರಡು ಸಹಸ್ರ ರೂಪಾಯದ ಉತ್ಪನ್ನ ಕಡಿಮೆಯಾಗದು. ಅದು ಕಾರಣ ಕೃಷಿಕರಾದವರು ತೋಟವನ್ನು ಮಾಡದೆ ಧನ ಸಂಪನ್ನರಾಗಲಾರರು.

ಬಹಳವಾಗಿ ಕೃಷಿಕ ಜನರೆಲ್ಲರೂ ತಿಳಿದಿರುವದೇನಂದರೆ ಎರಿಯ ಭೂಮಿಗೆ ಸರಿಯಾಗಿ ತೋಟದ ಉತ್ಪನ್ನವು ಆಗದೆನ್ನುತ್ತಾರೆ ಆದರೆ ಎರಿಯ ಭೂಮಿಯಲ್ಲಿಯೂ ಈ ಆರು ಎಕರೆ ಭೂಮಿಗೆ ಹತ್ತಿಯನ್ನು ಅಥವಾ ಗೋದಿ

ಯನ್ನು ಬಿತ್ತಿದರೆ ಐವತ್ತು ಆರುವತ್ತು ಅಥವಾ ಅತಿ ವಿಶೇಷ ಬೆಳೆಯಾದರೆ ನೂರು ರೂಪಾಯದಕಿಂತಲೂ ಹೆಚ್ಚಿಗೆ ಬೆಳೆಯಲಾರದು ಅದರಲ್ಲಿ ಆರಗಾಲ ಬರಗಾಲಂಗಳಾದರೆ ಬಿತ್ತಿದ ಬೀಜ ತಿರುಗುವದಿಲ್ಲ.

ತೋಟದ ವಿಷಯವಾಗಿ ಒಂದೇ ಮೊಟ್ಟೆಯ ನೀರಿಗೆ ಇಷ್ಟು ಸಂಭ್ರಮವಾಗುವದು ಹತ್ತೆಂಟು ಮೊಟ್ಟೆಯ ನೀರು ಉಂಬುವಷ್ಟು ಭೂಮಿಯನ್ನೆಲ್ಲ ಈ ಪ್ರಕಾರ ಯುಕ್ತಿಯಿಂದ ತೋಟವನ್ನು ಮಾಡಿದರೆ ಎಷ್ಟು ಸಂಭ್ರಮವಾಗಬಹುದು, ಮತ್ತು ಅದರ ಪ್ರಾಪ್ತಿಯು ಎಷ್ಟಾದೀತು ನೀವೇ ತಿಳಿಯತಕ್ಕದ್ದು.

ಮಲೆ ಸೀಮೆಯವರು ಇಂಥ ತೋಟಗಳನ್ನು ಮಾಡಿಸಿ ಸಂಪತ್ತನ್ನು ಪಡೆದು ಧರ್ಮಯುತರಾಗಿರುವದರಿಂದ "ಇಕ್ಕೇರಿ ಸೀಮೆಯವರು ಇಕ್ಯಾರು, ಎರೆದಾರು" ಎಂಬ ಗಾದೆ ಹುಟ್ಟಿತು. ಈ ದೇಶದ ಕೃಷಿಕರು ಮಾಡುವ ಯುಕ್ತಿ ಇಲ್ಲದ ಕೃಷಿ ಧರ್ಮದಿಂದ ತಮಗೆ ಸಾಲದಾದರೆ ಪರರಿಗೆ ಕೊಡುವದೆಂತು ಎಂದ ಹಾಗೆ ಕೃಷಿಜ್ಞಾನ ಪರಿಣಿತರಲ್ಲದವರು ಮಾಡಲಾರದೆ ಕೆಡುವರು

ತೋಟವನ್ನು ಮಾಡುವವರು ಈ ಪ್ರಕಾರ ಯುಕ್ತಿಯಿಂದ ತೋಟದ ವ್ಯವಸಾಯವನ್ನು ಮಾಡುವವರಾದರೆ ಅವರವರ ವಂಶಪರಂಪರೆಯಾಗಿ ಸೌಖ್ಯದಿಂದಿರುವರು. ಮತ್ತು ತೆಂಗಿನ ಗಿಡಗಳು ಅಡಿಕೆಯ ಗಿಡಗಳು ಉನ್ನತವಾಗಿ ಮೇಲಕ್ಕೆ ಬೆಳೆದು ಫಲವಾಗುತ್ತ ಇರುವಲ್ಲಿ ಆ ತೆಂಗು ಅಡಿಕೆಯ ಮಧ್ಯದಲ್ಲಿರುವ ಪೇರಲ ಗಿಡಗಳನ್ನು ಸಡೇದ ಗಿಡಗಳನ್ನು ಕಡಿದು ಆ ಭೂಮಿಯನ್ನು ಚನ್ನಾಗಿ ಹಸನು ಮಾಡಿ ಆ ತೆಂಗಿನ ಗಿಡಗಳ ಮಧ್ಯದಲ್ಲಿ ನೆಲ್ಲು ಬಿತ್ತಿದರೆ ನೆಲ್ಲು ಬೆಳೆಯುವ ವರ್ಷಕ್ಕೆ ಎರಡು ಬೆಳೆಯಾಗುವವು ಆ ತಂಪಿಗೆ ತೆಂಗು ಅಡಿಕೆಯ ಫಲವಾಗುತ್ತ ಇರುವವು ಅದು ಕಾರಣ "ತೆಂಗು ಬಿತ್ತಿದವನ್ನು ಗಂಡು ಹಡೆದವನು ದರಿದ್ರನಾಗಲಾರನು" ಎಂಬುದು ನಿಶ್ಚಯವಾಗಿದೆ

ಇಂಥ ತೋಟವನ್ನು ಮಾಡುವವರಿಗೆ ಮೊದಲಿಗೆ ವರ್ಷಾರು ತಿಂಗಳ ವರೆಗೂ ಸ್ವಲ್ಪ ಶ್ರಮವಾಗಿ ಕಾಣಿಸುವದು ಆದಾಗ್ಯೂ ಮುಂದೆ ತಾವು ತಮ್ಮ ಆಪ್ತರಿಷ್ಟರು ಮತ್ತು ತಮ್ಮ ಪುತ್ರ ಮಿತ್ರ ಕಳತ್ರ ಸಮಸ್ತ ಬಂಧು ಬಾಂಧವರಾದಿಯಾಗಿ ಎಲ್ಲರೂ ಉಂಡುಟ್ಟು ಪರಿಣಾಮಿಸುತ್ತಾ ತಮ್ಮ ವಂಶ ಪರಂಪರೆಯಾಗಿ ರಾಜಕುಮಾರರಂತೆ ಸಕಲೈಶ್ವರ್ಯ ಸಂಪನ್ನರಾಗಿ ಸುಖವನ್ನು ಅನುಭವಿಸುವರು.

ಆದರೆ ತೋಟವನ್ನು ಮಾಡುವವರು ಎರಡು ನಾಲ್ಕು ಮೊಟ್ಟೆ ಸಾಗುವ ಹಾಗೆ ನೀರಿನ ಬಲಾತ್ಕಾರವನ್ನು ನೋಡಿ ಬಾವಿಯನ್ನು ತಗಿಸಿ ಹಿಂದೆ ಹೇಳಿದ ಪ್ರಕಾರ

ಯಾವತ್ತು ಫಲವೃಕ್ಷಗಳನ್ನು ಮಾವಿನ ಬನವನ್ನು ಮತ್ತು ತೆಂಗು ಅಡಿಕೆಯ ವನಗಳನ್ನು ನಿಂಬಿಯ ಬನವನ್ನು ಬಾಳೆಯ ವನವನ್ನು ಎಲೆಯ ಬಳ್ಳಿಗಳನ್ನು ಮತ್ತು ಅಂಜೀರು ದ್ರಾಕ್ಷ ದಾಳಿಂಬ ಸೀತಾಫಲ ರಾಮಫಲ ಪಪಾಯಿ ಮೊದಲಾದ ಅನಂತ ಪ್ರಕಾರದ ಫಲವೃಕ್ಷಗಳನ್ನು ಬೇರೆ ಬೇರೆ ಒಂದೊಂದು ಭಾಗದಲ್ಲಿ ಮಾಡಿಸಿ ಕೆಲವು ಭಾಗದ ಭೂಮಿಯನ್ನು ಹಾಗೆ ಉಳಿಸಿ ಕಬ್ಬು ನೆಲ್ಲು ಕಾಯಿಪಲ್ಲೆ ಅಲ್ಲ ಅರಿಶಿನ ಜೀರಿಗೆ ಮೆಂತೆ ಕಸಕಸಿ ಉಳ್ಳಿ ಬಳ್ಳೊಳ್ಳಿ ಗೆಣಸು ಗಜ್ಜರಿ ಮೊದಲಾದ ಇನ್ನೂ ಅನಂತ ಪ್ರಕಾರದ ಚಿಲ್ಲರ ಫಲಪದಾರ್ಥಗಳನ್ನು ಜವಿ, ಗೋಧಿ ವೇದ ಜೋಳ, ರಾಗಿ, ನವಣೆ ಮೊದಲಾದ ಕೆಲವು ತರದ ಧಾನ್ಯಾದಿಗಳನ್ನ ಸಮಯ ಮರಿತು ಬಿತ್ತಿ ಬೆಳೆ ಮಾಡಿಕೊಂಡು ಪರಿಣಾಮಿಸಬೇಕು ಇಂಥ ವಿಶಾಲವಾದ ತೋಟವನ್ನು ಮಾಡಲಾರದೆ "ಎರಿಯನ್ನು ಮಾಡಿದವನೇ ಧೊರಿ" ಎಂದು ಅಡ್ಡ ಹರಗಿ ಉದ್ದ ಬಿತ್ತಿದರೆ ಆದಷ್ಟಾಗಲಿ ಇಷ್ಟೇ ಸಾಕೆಂದು ಅರಗಾಲ ಬರಗಾಲಂಗಳಲ್ಲಿ ಬಾಯಿ ಬಿಡುತ್ತ ಅನಿಷ್ಟ ಚಿಂತನೆಯಿಂದ ಕೆಟ್ಟು ಹೋಗುವರು.

## ಜಿರಾಯತ ಭೂಮಿಯ ವಿಷಯ.

"ಎರಿಯನ್ನು ಮಾಡದೆ ಧೊರೆಯಾಗಲಾರನು" ಎಂಬುದಕ್ಕೆ ಕಾರಣವೇನಂದರೆ ಅದೊಂದು ಪರಿಯಾಯಕ್ಕೆ ನಿಶ್ಚಯವೇ ಸರಿ ಆದಾಗ್ಯೂ ಎಂಥ ಬಲವತ್ತಾದ ಎರೆಯಾದರೂ ತೋಟದ ಉತ್ಪನ್ನಕ್ಕೆ ಶತಾಂಶದಲ್ಲಿ ಒಂದಂಶವಾಗದು. ಅದು ಕಾರಣ ಕೃಷಿಕರಾದವರು ಜಾಣತನದಿಂದ ಯುಕ್ತಿಯ ಮೇಲೆ ಹೌರಾಗುವ ಹಾಗೆ ತೋಟ ಮಾಡಿ ಸದಾ ಸೌಖ್ಯವನ್ನು ಹೊಂದಬೇಕು ಮತ್ತು ಬೈಲ ಭೂಮಿಯ ಜಿರಾಯತ ವ್ಯವಸಾಯದ ಪೈಕಿ ರಸವತ್ತಾದ ಎರಿಯ ಭೂಮಿಯೇ ಉತ್ತಮವು. ಅದಕ್ಕೆ ದೇವರು ಹದದ ಮೇಲೆ ಮಳೆಯನ್ನು ಕೊಟ್ಟರೆ ಗೋದಿ ಹತ್ತಿ ಅಗಸಿ ಎಳ್ಳು ಕಡಲೆ ನೆಲ್ಲು ನವಣೆ ಸಾವಿ ಮುಂಗಾರಿ ಬಿಳಿಜೋಳ ಕುಸಿಬಿ ಹೆಸರು ತೊಗರಿ ಅವರಿ ಅಲಸಂದಿ ಮಟಿಕಿ ಚಣಿಗಿ ಲೆಂಕಿ ವಟಾಣಿ ಬಟಗಡಲೆ ಮೊದಲಾದ ಸಕಲ ಧಾನ್ಯಾದಿಗಳಲ್ಲಿ ಮುಂಗಾರಿ ಹಿಂಗಾರಿ ಸಹಿತ ಬೆಳೆಯುವವು ಮತ್ತು ಜೀರಿಗೆ ಮೆಂತೆ ಸಾಸಿವೆ ಬಳ್ಳೊಳ್ಳಿ ಸೊಪ್ಪು ಮೊದಲಾದ ಪದಾರ್ಥಗಳು ಬೆಳೆಯುವವು ಹಾಗೂ ಮಳೆಯು ಒಂದೊಂದು ಸಮಯದಲ್ಲಿ ತಡೆದ ಕಾಲಕ್ಕಾದರೂ ಚಿತ್ತಿ ಸ್ವಾತಿಯ ಮಳೆಗಳ ಕಾಲದಲ್ಲಾದರೂ ಹಸಿಯಾದರೆ ಕೆಲವು ಪದಾರ್ಥಗಳನ್ನು ಎರಿಯ ಭೂಮಿಯಲ್ಲಿ ಬಿತ್ತಿ ಬೆಳೆಯಬಹುದು. ಮತ್ತು ಅಲ್ಲಿಯ ವರೆಗೂ ಮಳೆಯು ತಡೆದರೆ ಉಳಿದಾದ ಭೂಮಿಯಲ್ಲಿ ಇದರಂತೆ ಬಿತ್ತಿ ಬೆಳೆ ಮಾಡಿಕೊಳ್ಳುವದು ಆಗುವದಿಲ್ಲವಾದ ಕಾರಣ, ಜಿರಾಯತದಲ್ಲಿ ಎರಿಯ ಭೂಮಿಯೇ ಉತ್ತಮವು.

ಆದಾಗ್ಯೂ ಅದು ತೋಟದ ಸಮಾನವಾಗಲರಿಯದು. ಬಾಗಾಯತ ಭೂಮಿ ಇದ್ದವರಿಗೆ ಯಾವ ಕಾಲಕ್ಕಾದರೂ ಬರಗಾಲವೇ ಇಲ್ಲ. ಮತ್ತು ಮಳೆಯು ತಡೆದು ಕಾಲಗಳನ್ನು ತಪ್ಪಿಸುತ್ತಾ ಬಂದರೆ ಅಂಥ ಅರಗಾಲ ಬರಗಾಲಂಗಳ ಸೂಚನೆಯು ಕಾಣಬಂದರ ಕೃಷಿಕ ಜನರು ಯುಕ್ತಿಯಿಂದ ತೋಟ ಪಟ್ಟಿಗಳಲ್ಲಾಗಲಿ ಅಥವಾ ಹಳ್ಳದ, ದಂಡೆಯಲ್ಲಿರುವ ಭೂಮಿಗಳಲ್ಲಿ ಎರಿಯಾಗಲಿ ಮಸಬಾಗಲಿ ಉಸುಕು ಭೂಮಿ ಮೊರಡಿ ಮೊದಲಾದ ಯಾವ ಭೂಮಿಗಳಲ್ಲಾಗಲಿ ನೀರಿನ ಆಸ್ಪದವಿದ್ದರೆ ಮಡಿಕಟ್ಟಿ ಜೋಳದ ಬೀಜವನ್ನು ತರಿಸಿ ಬಿತ್ತಿ ನೀರು ಹಾಕುವ ಹಾಗೆ ಮಾಡಬೇಕು

ಯಾವ ಕಾಲಗಳಲ್ಲಿ ಬಿತ್ತ ಬೇಕೋ ಆ ಹದವನ್ನು ತಪ್ಪಿಸಬಾರದು "ಬದಿ ಬಂದ ಕಾಲದಲ್ಲಿ ಜೀಲಿಯಲ್ಲಿ ಚಲ್ಲಿದರೂ ಬೆಳೆಯುತ್ತದ" ಎಂಬ ಪ್ರಮಾಣ ಉಂಟು. "ಹದ ತಪ್ಪಿದರೆ ಇನಿತು ತಪ್ಪುವವು" ಎಂಬ ಪದವಲ್ಲಿ ಬಳೆಯುವ ಭೂಮಿಯ ಬದೆಯು ತಪ್ಪಿದರೆ ಬೆಳೆಯು ತಪ್ಪುವದೆಂದು ನಿಜ ಗುಣಯೋಗಿಗಳು ಹೇಳಿದ್ದಾರೆ ಬದೆಯ ಕಾಲದಲ್ಲಿ ಒಂದು ಪಕ್ಷಕ್ಕೆ ಹಸಿಯು ಇಲ್ಲದಿದ್ದರೂ ಒಣ ಭೂಮಿಯಲ್ಲಾದರೂ ಬೀಜವನ್ನು ಬಿತ್ತಬೇಕು ಅಷ್ಟರಲ್ಲಿ ನಾಲ್ಕೆಂಟು ದಿವಸಗಳಲ್ಲಿ ಮಳೆಯಾದರೆ ಉತ್ತಮವು ಇಲ್ಲದಾದರ ಏನಾದರೂ ಪ್ರಯತ್ನ ಮಾಡಿ ಒಂದೆರಡು ವೇಳೆ ನೀರು ಉಣಿಸುವ ಯೋಜನೆಯನ್ನ ಮಾಡಬೇಕು

ಬದೆ ಬಂದ ಕಾಲದಲ್ಲಿ ಬಿತ್ತುವದಕ್ಕೆ ಆ ಭೂಮಿಯೂ ಹಸಿಯೂ ಬಿಗದಿದ್ದರೆ ಮಡಿಕೆಯಿಂದ ಬಿತ್ತಬೇಕು ಹೇಗೆಂದರೆ ಮೊದಲು ಬಿತ್ತುವ ಬೀಜಗಳಲ್ಲಿ ಒಂದೊಂದು ದಿವಸ ಬಿತ್ತುವಷ್ಟು ಬೀಜವನ್ನು ರಾತ್ರಿಯ ಕಾಲದಲ್ಲಿ ತೊಯಿಸಿ ನೀರು ಬೆವರು ಮಾಡಿ ಹಸಿಯ ಅರಿವೆಯಲ್ಲಿ ಕಟ್ಟಿ ಇಡಬೇಕು ಮುಂದಿವಸ ಎರಡು ಎತ್ತಿನ ಮಡಿಕಗಳನ್ನು ಹೂಡಿ ಅವುಗಳ ಹಿಂದೆ ಬುಕ್ಕಾ ಕಟ್ಟಿ ಕಡಲೆಯ ಬಿತ್ತಿಗೆಯಂತೆ ಕೈ ಸಡಿಲು ಬಿಡದೆ ಭೂಮಿಯ ತೂಕವನ್ನು ನೋಡಿ ಬೀಜವನ್ನು ಬಿತ್ತಬೇಕು ಅವಲು ಭೂಮಿಯಾದರ ಪ್ರತಿ ಕೂರಿಗೆ ಎಂಟು ಸೇರಿನಂತ ಸ್ವಲ್ಪ ಮಧ್ಯಮ ಪೈಕಿ ಆದರೂ ಪ್ರತಿ ಕೂರಿಗೆ ಏಳು ಸೇರು ಆರು ಸೇರಿನಂತ ಬಿತ್ತಬೇಕು ಮುಂದೆ ಸ್ವಲ್ಪ ನಾಟಕೊಂಡು ಬೆಳೆಯು ಕಾಣಬಂದು ಅದಕ್ಕಾದರೂ ಮಳೆಯು ಬೇಕೆಂಬುವ ಅಜಮಾಸು ತೋರಿದರೆ ಮತ್ತು ಆ ಸಮಯಕ್ಕೆ ಮಳೆಯು ಆಗುವ ಸೂಚನೆಯು ಕಾಣದಿದ್ದರೆ ತೋಟಗಳಾದರಂತೂ ನೀರು ಬಿಡುವದಕ್ಕೆ ಅಡಚಣೆ ಇರುವದಿಲ್ಲ. ಅಥವಾ ಹಳ್ಳದ ದಂಡೆಯ ಹೊಲವಾದರೆ ಅಥವಾ ಹೊಳೆಯ ದಂಡೆಯ ಹೊಲವಾದರೆ ಒಂದಾವರ್ತಿ ಅಂಗಳನ್ನು ಹಚ್ಚಿ ನೀರು ಹೊತ್ತಾ

ದರೂ ಹಾಕಿ ಹೊಲವನ್ನು ತೊಯಿಸಿ ಬಿಟ್ಟರೆ ಮುಂದೆ ಆಯಾಸವಿಲ್ಲದೆ ಬೆಳೆಯಾಗುವದು. ಒಂದು ವೇಳೆಗೆ ತೀರ ಹಸಿಯಾಗದೆ ಹೋಗಿ ಆ ಸಮಯದಲ್ಲಿ ಬಿತ್ತುವ ಬಿದೆಯ ಕಾಲವು ಸಮನಿಸಿದ್ದರೆ ಮೊದಲಾದರೂ ಒಂದು ಸರ್ತಿ ನೀರು ಹೊತ್ತಾದರೂ ಹಾಕಿ ಹೊಲವನ್ನು ತೊಯಿಸಿ ಬಿಟ್ಟರೆ ಹಸಿಯಾಗುವದು ಈ ಪ್ರಕಾರ ಹಸಿ ಮಾಡಿ ತನ್ನ ಕೈಲಾದಷ್ಟು ಭೂಮಿಯನ್ನಾದರೂ ಕೂರಿಗೆಯಿಂದ ಬಿತ್ತಿಕೊಳ್ಳಬೇಕು. ಯಾತಕ್ಕೆಂದರೆ ಒಂದೊಂದು ಸಮಯದಲ್ಲಿ ಪರಮೇಶ್ವರನು ಈ ಜನರು ಪ್ರಯತ್ನ ಮಾಡಿ ಬೆಳೆಮಾಡಿಕೊಳ್ಳುವರೋ ಇಲ್ಲವೋ ಇದರ ಪರೀಕ್ಷೆಯನ್ನು ನೋಡಬೇಕೆಂದು ಅರಗಾಲ ಬರಗಾಲಂಗಳ ಬರಮಾಡಿದಲ್ಲಿ ಆ ಸಮಯಕ್ಕೆ ಬಿತ್ತದಕಿಂತ ಮೊದಲೇ ಭೂಮಿಯನ್ನು ತೊಯಿಸಿಕೊಂಡು ಮೊದಲಿನಂತೆ ಬೀಜಗಳನ್ನು ರಾತ್ರಿಯಲ್ಲಿ ತೊಯಿಸಿಬಿಟ್ಟು ಕೂರಿಗೆಯಿಂದ ಬಿತ್ತಿದರೆ ಅದರ ಮೇಲಿಂದಾದರೂ ತಕ್ಕಷ್ಟು ಬೆಳೆಯಾಗುವದು ಎರಡು ಮೂರು ರೂಪಾಯಿ ಖರ್ಚು ಮಾಡಿ ಹಳ್ಳ ಅಥವಾ ಹೊಳೆಯ ದಂಡೆಯ ಹೊಲಗಳಿದ್ದವರು ಇಪ್ಪತ್ತೈದು ಆಳು ಹಚ್ಚಿದರೆ ಒಂದು ಬಿಘೆ ಭೂಮಿ ಹಸಿಯಾಗುವದು ೧೦೦—೧೨೫ ಆಳುಗಳಾದರೆ ಒಂದು ಕೂರಿಗೆ ಭೂಮಿ ತೊಯ್ದು ಬಿತ್ತುವ ಹಸಿಯಾಗಿ ಗೇಣು ದೀಡಗೇಣು ಭೂಮಿ ಹಸಿಯಾಗುವದು. ಆಮೇಲೆ ಬಿತ್ತುವದಕ್ಕೆ ಸಂಶಯವಿಲ್ಲ. ಇಷ್ಟು ಪ್ರಯತ್ನ ಮಾಡಿದರೆ ಮೂರು ನಾಲ್ಕು ತಿಂಗಳಿಗೆ ತನ್ನ ಕುಟುಂಬದ ಪೂರ್ತಿಗಾದರೂ ತಕ್ಕಮಟ್ಟಿಗೆ ಸಾಕಾಗುವಷ್ಟು ಧಾನ್ಯ ಬರುವದು ಇಷ್ಟು ಪ್ರಯತ್ನ ಮಾಡುತ್ತಿರಲಿಕ್ಕೆ ಪರಮೇಶ್ವರನಿಗೆ ಕರುಣ ಹುಟ್ಟುತ್ತಿರಲಿಕ್ಕೆ ಮಳೆಯಾದರೂ ಆಗುವದು. ಅಥವಾ ಅಷ್ಟು ಪೂರ್ತಿಗಾದರೂ ಬೆಳೆಯಾದರೂ ಆಗುವದು.

ಕೆಲವರು ಹೀಗೆ ಸಂಕಲ್ಪವನ್ನು ಊಹಿಸುವರು ಏನೆಂದರೆ ಈ ಪ್ರಕಾರ ಭೂಮಿಯನ್ನು ತೊಯಿಸಿ ಹಿಂದ ಯಾರೂ ಬಿತ್ತಲಿಲ್ಲ. ಈಗಲಾದರೂ ಯಾರೂ ಮಾಡುವದಿಲ್ಲ ಇಂಥ ತೊಂದರೆ ಯಾರಿಗೆ ಬೇಕು? ಮಳೆಯಾದರೆ ಬಿತ್ತಿದರೆ ಬಂದೀತು ಎಂದು ಪರಾನ್ನಾಪೇಕ್ಷೆ ಮಾಡಿ ಹಸಿದು ಬಾಗಿಲ ಮುಂದೆ ನಿಂತಿರುವ ಹೀನ ಜನರಂತೆ ಮಳೆಯನ್ನು ಎದುರು ನೋಡುತ್ತ ಪ್ರಯತ್ನ ಹೀನರಾಗಿ ನಮ್ಮ ಹಿರಿ ಹಿರಿಯರು ಮಾಡದಂಥ ಪ್ರಯತ್ನವನ್ನು ನಾವೇಕೆ ಮಾಡಬೇಕು? ಹೀಗೆ ಮಾಡುವದು ನಮ್ಮಲ್ಲಿ ವಾಯಾ ಇಲ್ಲ, ಎಂದು ಸಂಕಲ್ಪಿಸಿಕೊಳ್ಳುವರು. ಆದರೆ ಲೌಕಿಕರು ತಮ್ಮ ಅನುವು ಬಂದ ಹಾಗೆ ಮಾಡುತ್ತಾರೆ ಆದರೆ ತಮ್ಮ ಹಿರಿಯರಲ್ಲಿ ಒಬ್ಬನೂ ಅಜ್ಞಾನಿಯಾಗಿ ಅಥವಾ ಕುಲಹೀನನಾಗಿ ಅಥವಾ ನೀಚನಾಗಿ ಜಾರನಾಗಿ ಕಳ್ಳನಾಗಿ ಇದ್ದರೆ ಅವನ ಮಕ್ಕಳು ಕುಶಲಮತಿಗಳಾದರೆ ಅವರು ನಮ್ಮ ಹಿರಿಯರ ನಡತೆ ಎಂದು ವರ್ತಿಸುವದಿಲ್ಲ. ಮತ್ತು ತಮ್ಮ ಹಿರಿಯರು ಸದಾಚಾರಿಗಳಾಗಿದ್ದರೆ ಮಕ್ಕಳು ದುರ್ಜನರಾಗಿ ಜಾರತ

ಮೊದಲಾದ ದುಷ್ಕೃತ್ಯಂಗಳನ್ನು ಮಾಡುವದನ್ನು ನಮ್ಮ ಹಿರಿಯರು ಸದಾಚಾರಿಗಳೆಂದು ಬಿಡುವದಿಲ್ಲ. ಇವಲ್ಲದೆ ನೆರೆಹೊರೆಯವರೂ ಊರವರೆಲ್ಲರೂ ಹೀಗೆ ಮಾಡಿ ಬಿತ್ತಿ ಬೆಳೆಯುವದಿಲ್ಲ, ನಾನೊಬ್ಬನೇ ಹೀಗೆ ಪ್ರಯತ್ನ ಮಾಡಿದರೆ ಯಾರಾದರೂ ಹಾಸ್ಯ ಮಾಡಿಯಾರು ಎಂದು ನಾಚುತ್ತಾರೆ ಆದರೆ ಊರವರು ಅನ್ನವಿಲ್ಲದೆ ಉಪವಾಸದಿಂದಿರುತ್ತಿರಲು ಅವರನ್ನು ನೋಡುತ್ತ ನೋಡುತ್ತ ತಾವು ಉಂಡುಟ್ಟು ಪರಿಣಾಮಿಸುವದಕ್ಕೆ ನಾಚುವದಿಲ್ಲವು, ಮಾಡಿಕೊಂಡು ಉಂಬುವದಕ್ಕೆ ಮಾತ್ರ ನಾಚುತ್ತಾರೆ. ಇದು ಎಂಥ ಅವಿವೇಕತ್ವವು? ಕೆಲವರು ದ್ರವ್ಯವಿದ್ದವರು ಏನಾದರೂ ಒಂದು ಮಾರ್ಗ ತೆಗೆದರೆ ಹಿಂದಿನವರು ಒಬ್ಬರನ್ನೊಬ್ಬರು ನೋಡಿ ಮಾಡಿಕೊಳ್ಳುತ್ತಾರೆ ಹೀಗೆ ಮಾಡದೆ "ಊರ ಗೂಡ ಗೋವಿಂದ" "ಪರಶಿಯ ಕೂಡ ಪರಾಕು" ಎಂದ ಹಾಗೆ ಊರವರ ಹಾದಿಯನ್ನು ನೋಡದೆ ತನಗೆ ದೇವರು ತ್ರಾಣಕೊಟ್ಟ ಪೂರ್ತಿಗಾದರೂ ವಿವೇಕದಿಂದ ಏನಾದರೂ ಒಂದು ಯುಕ್ತಿ ಹುಡುಕಿ ಮಾರ್ಗ ತೆಗೆಯಬೇಕು. "ಊರ ಕೂಡ ಸುಲಿಸಿಕೊಂಡರೆ ಜಾತ್ರೆಗೆ ಹೋದಷ್ಟು ಸಂತೋಷ" ಎಂದ ಹಾಗೆ ಆಗಬಾರದು ಅಜ್ಞಾನಿಗಳನ್ನು ನೋಡಿ ಅಜ್ಞಾನಿಯಾಗಿ ತ್ರಾಣವಿದ್ದರೂ ತಾವು ಮಾಡಲಾರದೆ ಕೆಡುವರು. ಕೆಲವರು ಜ್ಞಾನವಿಲ್ಲದೆ ಕೆಡುವರು ಕೆಲವರು ತ್ರಾಣವಿಲ್ಲದೆ ಕೆಡುವರು ಹಾಗು ಇಲ್ಲದ್ದು ಬೇಡಿದರೆ ಎಲ್ಲಿಂದ ಬರುವದು, ಪರಮೇಶ್ವನು ಕೊಟ್ಟದ್ದರಲ್ಲಿಯೇ ಏನಾದರೊಂದು ಮಾರ್ಗ ತೆಗೆದು ಬಿತ್ತಿ ಬೆಳಿ ಮಾಡಿಕೊಂಡು ಸೌಖ್ಯ ಪಡಬೇಕು ಹಾಗು ಕೂರಿಗೆ, ಎರಡು ಕೂರಿಗೆ, ಬಿಘೆ, ಅರ್ಧ ಬಿಘೆ ಭೂಮಿಯನ್ನಾದರೂ ತನ್ನ ಕೈಯ್ಯಿಂದಾದಷ್ಟು ತೊಯಿಸಿ ಬಿತ್ತಿಕೊಂಡರೆ ಅಷ್ಟೇ ತನ್ನ ಪ್ರಾಣ ಹೋಗುವ ಸಮಯಕ್ಕೆ ಆಧಾರವಾಗುವದು ಇಷ್ಟು ಅರಿಯದ ಎತ್ತು ಎಮ್ಮೆ ಕತ್ತೆ ಕುದುರೆ ಕೋಣ ಕುರಿ ಮೊದಲಾದ ಮೃಗ ಪಕ್ಷಿ ಪಶು ಪ್ರಾಣಿಗಳಂತೆ ಬುದ್ಧಿ ಸಾಹಸವಿಲ್ಲದೆ ಅರಗಾಲ ಬರಗಾಲಂಗಳಲ್ಲಿ ಅನ್ನವಿಲ್ಲದೆ ಮರಣ ಹೊಂದುತ್ತಾರೆ ಹೀಗೆ ಮಾಡದೆ ಪ್ರಯತ್ನ ಮುಖದಿಂದ ಕೆಲವು ತೋಟಗಳಿದ್ದವರು ನೀರುಜೋಳ ಮಡಿಕಟ್ಟಿ ಜೋಳಗಳನ್ನು ಬಿತ್ತಿ ಬೆಳೆ ಮಾಡಿಕೊಳ್ಳುವರು ಮತ್ತು ರಾಜಬುದ್ಧಿಯು ಳ್ಳಂಥ ಕೃಷಿಜ್ಞಾನ ಪ್ರವೀಣರು ತಮ್ಮ ಹೊಲದ ಮೇಲುಗಡೆಯಲ್ಲಿ ಹಳ್ಳದಲ್ಲಿ ಉಸುಕಿನ ಒಡ್ಡು ಹಾಕಿಸಿ ಹೊಲಕ್ಕೆ ನೀರು ಏರುವ ಹಾಗೆ ಮಾಡಿ ಒಂದಾವರ್ತಿಯಾದರೂ ಹೊಲವು ತೊಯ್ದು ಹಸಿಯಾದರೆ ಸಾಕೆಂದು ಹೊಲವನ್ನು ಚನ್ನಾಗಿ ತೋಯಿಸಿ ನೆಲ್ಲು ಬಿತ್ತುವ ಬಿದೆಗಾಲವನ್ನು ತಪ್ಪಿಸದೆ ಹದಬಿವೆಯ ಮೇಲೆ ನೆಲ್ಲು ಬಿತ್ತಿ ಬೆಳೆ ಮಾಡಿಕೊಳ್ಳುವರು

ಜನರು ಹಳ್ಳಗಳಲ್ಲಿ ಹೊಳೆಗಳಲ್ಲಿ ಬಾವಿಗಳಲ್ಲಿ ನೀರು ಇದ್ದು ಯುಕ್ತಿಯಿಂದ ಮಾಡಿಕೊಂಡು ಉಣ್ಣಲಾರದೆ ಮಳೆಯ ಹಾದಿಯನ್ನೇ ನೋಡುತ್ತ ಬಿತ್ತುವ ಕಾಲವನ್ನು ತಪ್ಪಿಸಿಕೊಂಡು ಕಷ್ಟಪಟ್ಟು ಗೋಳಾಡುವರು.

ಮಾಡಿ ಉಂಬುವ ಯುಕ್ತಿ ಇಲ್ಲದೆ ಕೆಲವು ಅಧಮರು ಕಳವು ಮಾಡಿ ಮಾರ್ಗ ಸುಲಿದು ಸಾಲ ಮಾಡಿ ಒಬ್ಬರಿಗೆ ಘಾತ ಮಾಡಿ, ವಂಚಿಸಿ ಕಪಟ ಮಾಡಿ ಮೋಸಗೊಳಿಸಿ ವಿಶ್ವಾಸಘಾತ ಮಾಡಿ ನೀಚರಾಗಿ ರಾಜರಿಂದ ಶಿಕ್ಷೆಯನ್ನು ಹೊಂದಿ ಅವಮಾನದಿಂದ ತಿರುಕರೆನಿಸಿ ಹರಕರೆನಿಸಿ ಲೋಕದವರೆಲ್ಲರಿಂದ ದೂಷಿಸಿಕೊಂಬುತ್ತ ಭೂಮಿಗೆ ಭಾರವಾಗಿ ಕಡೆಯಲ್ಲಿ ಅನ್ನ ಕಾಣದೆ ಮರಣ ಹೊಂದುತ್ತಾರೆ ಇದು ಅಜ್ಞಾನತನದಿಂದ ಹಾಗು ವೈಗಳ್ಯತನದಿಂದ ಮಾಡಲಾರದ ಫಲವು.

ಇದಲ್ಲದೆ ಹಳ್ಳದ ಆಸ್ಪದದಲ್ಲಿ ಹೊಲಗಳಿದ್ದವರು ಬಿತ್ತುವ ಕಾಲಕ್ಕೆ ಮಳೆಯು ತಡೆದ ಸಮಯವು ಕಾಣಬಂದರೆ ಆ ಹದದ ಕಾಲವನ್ನು ತಪ್ಪಿಸಬಾರದೆಂದು ಅಷ್ಟರ ಪೂರ್ತೆಗಾದರೂ ನಾಲ್ಕೈರು ದಿವಸ ಅಥವಾ ಹತ್ತೆಂಟು ದಿವಸ ಭಾವಿಯು ದುರಸ್ತಾಗಿ ನಿಂತರೆ ಸಾಕೆಂದು ಹಿಂದೆ ಹೇಳಿದ ಹಾಗೆ ಬಹಳ ಅಗಲವಾಗಿ ಒರತೆಯು ಆಕಾರವಾಗಿ ಹೊಲದ ದಂಡೆಯು ಹೊಂದಿಗೆ ಒಂದು ಆಳು ದೀಡಾಳುದ್ದವಾದರೂ ಉಸುಕನ್ನು ತೆಗಿಸಿ ಅದರಲ್ಲಿ ಕಟ್ಟಿಗೆಯು ಚೌಕು ತೊಟ್ಟಿಲ ಸಾಚೆಯನ್ನು ಹಿಂದೆ ಹೇಳಿದ ಪ್ರಕಾರ ಮಾಡಿಸಿ ಅದರೊಳಗಿಟ್ಟು ಆದಕ್ಕಾದರೂ ಲಕ್ಕಿಯ ಬರಲುಗಳನ್ನಾಗಲಿ ಮತ್ತಾವ ತರದ ಬರಲುಗಳನ್ನಾಗಲಿ ತಂದು ಗಳಿಗೆಯನ್ನು ಹೆಣೆದ ಹಾಗೆ ಆ ಸಾಚೆಯ ತೊಟ್ಟಿಲಕ್ಕಾದರೂ ಹೆಣೆದು ಹಿಂದೆ ಉಸುಕು ದಬ್ಬಿ ಬಂದೋಬಸ್ತು ಭರತಿಯು ಮಾಡಿ ಮೊಟ್ಟೆಯು ಕಡೆಗೆ ಸ್ವಲ್ಪ ಗಟ್ಟಿಮಾಡಿ ಅಡ್ಡ ತೊಲೆ ಹಾಗು ಮೂಗುತಿ ಕಟ್ಟಿಗೆಯನ್ನು ಹಾಕಿ ಅಷ್ಟರ ಪೂರ್ತೆಗೆ ಜಿಗಿಯಾದ ಕರಲು ಮಣ್ಣನ್ನಾದರೂ ಒರಿಸಿ ಮೊಟ್ಟೆಯನ್ನು ಸಾಗಿಸಿ ಹೊಲವನ್ನು ತೋಯಿಸಿ ಬಿತ್ತಿಕೊಳ್ಳಬೇಕು ಇಲ್ಲವೆ ಹಿಂದೆ ಹೇಳಿದ ಪ್ರಕಾರ ತಳ ಇಲ್ಲದ ಗಳಿಗೆಯ ಹಾಗೆ ಬರೇ ಲಕ್ಕಿಯ ಬರಲು ಅಥವಾ ಕರಕಲ ಬರಲು ಅಥವಾ ಯಾವ ಪ್ರಕಾರದ ಬರಲುಗಳಿಂದಾದರೂ ಸುತ್ತಲೂ ಕೋಲು ನಡಿಸಿ ಕಣಜವನ್ನು ಹೆಣೆದ ಹಾಗೆ ಬರಲುಗಳಿಂದ ಹೆಣೆದು ಆ ಉಸುಕಿನ ಮಧ್ಯದಲ್ಲಿ ಮಾಡಿದ ಬಾವಿಯಲ್ಲಿ ನಿಲ್ಲಿಸಿ ಹಿಂದೆ ಹೇಳ್ಗಿದ ಪ್ರಕಾರ ಬಾರಿಯನ್ನು ತಯಾರು ಮಾಡಿ ಮೊಟ್ಟೆಯನ್ನು ಸಾಗಿಸಿಕೊಂಡು ಹೊಲವನ್ನು ತೋಯಿಸಿ ಬೆಳೆಮಾಡಿಕೊಳ್ಳಬೇಕು. ಈ ರೀತಿಯು ಬಾವಿಯು ಹತ್ತು ಹನ್ನೆರಡು ಆಳುಗಳಾದರೆ ಎರಡೇ ದಿವಸಕ್ಕೆ ಬಾವಿ ಸಿದ್ಧವಾಗುವದು ಆದರೆ ಈ ಬಾವಿಯು ಶಾಶ್ವತವಾಗುವದಿಲ್ಲ ಹಳ್ಳ ಬಂದರೆ ಮುಚ್ಚಿ ಹೋಗುವದು. ಆದರೂ ಚಿಂತೆ ಇಲ್ಲ. ಇಷ್ಟು ಹಾನಿ ಯಾದರೂ ಆಗಲಿ ಎಂದು ಹದ ಬಿದೆಯು ಕಾಲದಲ್ಲಿ ತಕ್ಕಷ್ಟಾದರೂ ಬೀಜವನ್ನು ಬಿತ್ತಿಕೊಂಡರೆ ಸಾಕು, ಅಷ್ಟೇ ತನ್ನ ಸತಿ ಸುತಾದಿಗಳ ಪ್ರಾಣರಕ್ಷಣೆಗೆ ಅರಗಾಲ ಬರಗಾ

ಲಂಗಳಲ್ಲಿ ಆಧಾರವಾಗುವದು. ವ್ಯರ್ಥವಾಗಿ ಸಾಯುವದಕ್ಕಿಂತಲೂ ಲಜ್ಜಾಹೀನನಾಗಿ ಪರರನ್ನು ಬೇಡುವದಕ್ಕಿಂತಲೂ ತಕ್ಕಷ್ಟಾದರೂ ಯತ್ನ ಮಾಡಿ ಬೆಳೆ ಮಾಡಿಕೊಂಬುವುದು ಉತ್ತಮವು

ಅಷ್ಟರಿಂದಲಾದರೂ ಕೂರಿಗೆ ಎರಡು ಕೂರಿಗೆ ಭೂಮಿಯನ್ನು ತೋಯಿಸಿ ಬಿತ್ತಿಕೊಂಡರೆ ಅದನ್ನು ಎದುರು ನೋಡಿಕೊಳ್ಳುತ್ತ ಅರಳಿಯ ಕಂಡ ಬೆಕ್ಕಿನಂತೆ ಪ್ರಾಣವನ್ನು ಹಿಡಿದುಕೊಂಡಿರುವದಕ್ಕೆ ಆಸ್ಪದವಾಗುವದು ಹೀಗೆಯೇ ಏನಾದರೂ ಯುಕ್ತಿಯನ್ನು ತೆಗೆದು ಬೆಳೆ ಮಾಡಿಕೊಳ್ಳದಿದ್ದರೆ ಅರಗಾಲ ಬರಗಾಲಂಗಳಲ್ಲಿ ಏನೂ ಯುಕ್ತಿ ತೋಚದೆ ಕಲಗಂಚಿನಲ್ಲಿ ಬಿದ್ದ ಇಲಿಯಂತೆ ಒದ್ದಾಡಿ ಮರಣ ಹೊಂದುವರು. ಹೀಗೆ ಏನಾದರೂ ಯುಕ್ತಿಯನ್ನು ತೆಗೆದು ಬೆಳೆ ಮಾಡಿಕೊಳ್ಳದಿದ್ದರೆ ಪರರ ಅನ್ನಕ್ಕಾನೆ ಮಾಡಿ ಬಹು ಜನರ ಹಂಗಿಗನಾಗಿ ಬಾಳಬೇಕಾಗುತ್ತದೆ.

ಕೆಲವು ಕೆಲವು ಸಮಯಗಳಲ್ಲಿ ಮುಂಗಾರಿಯ ಮಳೆಗಳು ಮತ್ತು ಹಿಂಗಾರಿಯ ಕೆಲವು ಮಳೆಗಳು ಹಸಿ ಮಾಡದೆ ಬಿತ್ತುವ ಸಮಯ ತಪ್ಪಿಸಿದರೆ "ಉತ್ತರಿಯ ಮಳೆಯು ಭಾಷೆಯ ಕೊಟ್ಟಿರುವದು" ಎಂದು ಕೃಷಿಕರು ಭರವಸೆ ಮಾಡಿಕೊಂಡಿರುವರು ಅದಾದರೂ ಭರವಸವೆನ್ನಲಿಕ್ಕೆ ಬರುವದಿಲ್ಲ. ಯಾತಕ್ಕೆಂದರೆ "ಉತ್ತರಿ ಕಾರ್ತಿ ಅತ್ತಳ ಕೊತ್ತಳ, ಹಸ್ತ ಕಾರ್ತಿ ಅಸ್ತ ವ್ಯಸ್ತ" ಎಂದು ಗಾದೆಯುಂಟು. ಇಂಥ ಸಮಯಗಳು ತಿಳಿದಾಗಲಾದರೂ ಪ್ರಯತ್ನ ಮಾಡಿ ಏನಾದರೂ ಯುಕ್ತಿಯಿಂದ ತಕ್ಕಷ್ಟಾದರೂ ಭೂಮಿಯನ್ನು ತೋಯಿಸಿಕೊಂಡು ಬಿತ್ತಿದರೆ ಪರಮೇಶ್ವರನು ಕೃಪೆಯಾಗಿ ಮಳೆಯಾದರೂ ಆಗುವದು, ಬೆಳೆಯಾದರೂ ಆಗುವದು.

ಗಾದೆಯು ಪ್ರಸಂಗಗಳಾದರೂ ಹುಸಿ ಎನಲಾಗದು ಯಾತಕ್ಕೆಂದರೆ ಗಾದೆಯ ಮರೆಯಲ್ಲಿ ಅರ್ಥ ಉಂಟು. ಹೇಗಂದರೆ ಒಬ್ಬನೊಬ್ಬ ಆತ್ಮನು ಮಾರ್ಗ ಹಿಡಿದು ಹೋಗುತ್ತ ತನಗೆ ಮರಣ ಸಮೀಪಿಸಿದ ಸೂಚನೆಯನ್ನು ತಿಳಿದು ಒಂದು ವೃಕ್ಷದ ಕೆಳಗೆ ಕುಳಿತು ತನ್ನ ಬಳಿಯಲ್ಲಿದ್ದ ದ್ರವ್ಯವನ್ನೆಲ್ಲ ತೆಗೆದು ಒಂದು ಗಂಟು ಕಟ್ಟಿ ಸ್ವಲ್ಪ ಭೂಮಿಯನ್ನು ಕೆದರಿ ಆ ತಗ್ಗಿನಲ್ಲಿ ದ್ರವ್ಯವನ್ನಿಟ್ಟು ಇದು ಬುದ್ಧಿಯುಳ್ಳವನಿಗೆ ಸಿಕ್ಕಲೆಂದು ಆ ದ್ರವ್ಯದ ಮೇಲೆ ಒಂದು ದೊಡ್ಡ ಕಲ್ಲನ್ನಿಟ್ಟು ಕಾಣದ ಹಾಗೆ ಮುಚ್ಚಿ "ಎತ್ತೋ ಕತ್ತೆ" ಎಂದು ನಾಲ್ಕು ಅಕ್ಷರಗಳನ್ನು ಆ ಕಲ್ಲ ಮೇಲೆ ಬರೆದು ಮರಣ ಹೊಂದಿದನು. ಇತ್ತಲಾಗಿ ಬಹು ಜನರು ಬಂದು ಆ ಬರಹವನ್ನು ನೋಡಿ ಇದು ಗಾದೆಯ ಮಾತೆಂದು ಅಲಕ್ಷ ಮಾಡಿ ಹೋಗುತ್ತಿದ್ದರು. ಕೆಲವು ದಿವಸಗಳ ಮೇಲೆ ಮತ್ತೊಬ್ಬ

ಬುದ್ಧಿವಂತನು ಆ ಬರಹವನ್ನು ನೋಡಿ ಆ ಕಲ್ಲನ್ನೆತ್ತಿ ಕೆಳಗಿರುವ ದ್ರವ್ಯವನ್ನು ತೆಗೆದುಕೊಂಡನು

ಇದರ ಸಾರಾಂಶವೇನಂದರೆ ಗಾದೆಯ ಪ್ರಸಂಗಗಳು ಸಾಮಾನ್ಯವಲ್ಲ ಅವುಗಳ ನೀತಿಯು ವಿಷಯದಲ್ಲಿ ಅರ್ಥ ಉಂಟು ಅದನ್ನು ಚನ್ನಾಗಿ ತಿಳಿಯತಕ್ಕದ್ದು. ಗಾದೆಯ ಪ್ರಸಂಗವೆಂದು ಅಲಕ್ಷ ಮಾಡಲಾಗದು.

ಅರಗಾಲ ಬರಗಾಲಂಗಳ ಭಯವೂ ಸಮಸ್ತ ರೋಗಾದಿಗಳ ಭಯಕ್ಕಿಂತಲೂ ಬಹಳ ವಿಶೇಷವಾದದ್ದು. ಈ ಬರಗಾಲವು ಬಂದ ವೇಳೆಯಲ್ಲಿ ಮನುಷ್ಯರುಗಳ ಅರ್ಥ ಪ್ರಾಣ ಅಭಿಮಾನಗಳು ನಾಶವಾಗುವದರಿಂದ ಇದರ ಭಯವು ಬಹಳ ವಿಶೇಷವಾಗಿರುವದು. ಮಾರಿಕಾ ಉಪದ್ರವಾದಿ ಸಮಸ್ತ ರೋಗಾದಿಗಳು ಬಂದರೆ ಪ್ರಾಣ ಒಂದೇ ಹೋಗುವದಷ್ಟೇ ಅಲ್ಲದೆ, ಈ ಬರಗಾಲದಂತೆ ಅರ್ಥಾಭಿಮಾನಗಳು ಹೋಗುವದಿಲ್ಲ ಇಂಥ ಕಠಿಣವಾದ ಮಾರಿಕಾದಿ ರೋಗಂಗಳಿಂದ ಮರಣ ಹೊಂದುವದಕ್ಕೆ ಜನರು ಸಂತೋಷಪಡುತ್ತಾರ. ಆದರೆ ಬರಗಾಲಕ್ಕೆ ಮಾತ್ರ ಭಯ ಪಡುತ್ತಾರೆ ಯಾತಕ್ಕಂದರೆ ಹಿಂದಿನ ಕಾಲದಲ್ಲಿ ಕೆಲವು ವರ್ಷಗಳ ಹಿಂದೆ ಕೆಲವು ದೇಶಗಳೆಲ್ಲ ಬರಗಾಲದಿಂದ ನಿರ್ಜನ ಪ್ರದೇಶಗಳಾಗಿದ್ದವೆಂದು ಹೇಳುತ್ತಾರೆ. ಈಗಿನ ಬರಗಾಲವು ಅಂಥಾದ್ದೇ ಸರಿ ಆದರ ನಮ್ಮ ಅರಸರಾದ ಮಹಾರಾಣಿಯರೆಂಬ ಧರ್ಮ ಪ್ರಭುಗಳ ಸಹಾಯದಿಂದ ಜನರು ಬದುಕಿದರೂ ಎಷ್ಟಾದರೂ ಹತ್ತೆಂಟು ಕೋಟಿ ಜನರು ಅನ್ನವಿಲ್ಲದೆ ಮೃತವಾಗಿದ್ದಾರೆಂದು ಕಾಣಬರುತ್ತದೆ.

ಇಂಥ ಬರಗಾಲಂಗಳ ಸೂಚನೆಯು ಕಾಣಬಂದರೆ ಕೃಷಿಕ ಜನರು ತಮ್ಮ ತೋಟಗಳಲ್ಲ ಬೇಸಿಗೆಯ ಕಾಲದಲ್ಲಿ ಮಡಿಕಟ್ಟಿ ಜೋಳವನ್ನು ಬಿತ್ತಿ ಹದದ ಮೇಲೆ ನೀರು ಬಿಡುತ್ತ ಹೋದರ ಮೂರು ತಿಂಗಳಿಗೆ ಬೆಳೆಯಾಗುವದು. ಈ ಮಡಿಕಟ್ಟಿ ಜೋಳವನ್ನು ಬಿತ್ತುವ ಭೂಮಿಯಲ್ಲಿ ಚನ್ನಾಗಿ ಗೊಬ್ಬರವನ್ನು ಹಾಕಿ ನೇಗಿಲೆಯಿಂದಾಗಲಿ ಪಾಡಿಕೆಯಿಂದಾಗಲಿ ಹೊಡೆದು ನೆಲವನ್ನು ಮೆತ್ತಗೆ ಮಾಡಿ ಪುನಃ ಗೊಬ್ಬರ ಹಾಕಿ ಎರಡು ಸಾಲು ಮೂರು ಸಾಲು ಚನ್ನಾಗಿ ಹರಿಗಿ ಮಡಿಕಟ್ಟಿ, ಜೋಳದ ಬೀಜವನ್ನಾಗಲಿ ಅಥವಾ ಕೆಂಪು ಜೋಳದ ಬೀಜವನ್ನಾಗಲಿ ಬಿತ್ತಿ ಮಡಿಸಾಲು ಎಳೆದು ಕಾವಲಿಯನ್ನು ತಿದ್ದಿಕೊಂಡು ನೀರು ಬಿಡುತ್ತ ಹೋದರೆ ಕೂರಿಗೆಗೆ ಐವತ್ತು ಹೇರು ಬೆಳೆಯಾಗುವದು ಮತ್ತು ಹಾಲು ನವಣೆಯನ್ನು ಬಿತ್ತಿದರೂ ಇದರಂತೆ ಬೆಳೆಯಾಗುವದು ಗೊಬ್ಬರದ ಸೊಕ್ಕು ಹೆಚ್ಚಾದ ಹಾಗೆ ಬೆಳೆಯು ಹೆಚ್ಚಾಗುವದು ಈ ಜೋಳವನ್ನು ನವಣೆಯನ್ನು ತೋಟದಲ್ಲಿ ಬಿತ್ತುವ ಕಾಲವು ಮಾಘ ಫಾಲ್ಗುಣ ಚೈತ್ರ ವೈಶಾಖದ ವರೆಗೂ ಬರುತ್ತದೆ. ಬಿತ್ತಿದ ಮೂರು ತಿಂಗಳಿಗೆ

ಬೆಳೆಯಾಗುವದು. ಈ ಜೋಳದ ಕುಲಕ್ಕೆ ಮಡಿಕಟ್ಟು ಜೋಳವೆಂಬುವರು. ಈ ಮಡಿಕಟ್ಟು ಜೋಳದ ಬೀಜವು ಸುರಪುರ ಶಹಾಪುರ ಯಾತಗಿರಿ ತೆಲುಗಾಣ್ಯ ಪ್ರಾಂತ ಮತ್ತು ಮೊಕ್ತಾಲಿ ಈ ಸೀಮೆಗಳಲ್ಲಿ ಸಿಕ್ಕುವವು. ಹಾಗು ಕೆಂಜೋಳದ ಬೀಜವೆಂದರೆ ಕೆಂಪು ಜೋಳದ ಬೀಜವು ಜವಳಗೇರಿ ಪ್ರಾಂತದಲ್ಲಿ ಸಿಕ್ಕುತ್ತದೆ.

## ಎಲೆಯ ಬಳ್ಳಿಯು.

ತೋಟವನ್ನು ಮಾಡುವ ಕೃಷಿಕರು ಆ ತೋಟದ ಭೂಮಿಯನ್ನು ಪರೀಕ್ಷಿಸಿ ಮಡಿಯ ಭೂಮಿ ಅಥವಾ ಕೇಸರಿ ಇಲ್ಲವೆ ಕೆಂಪು ಮಂಡು ಕೆಂಪು, ಮೊರಡಿ ಕೆಂಪು ಮಣ್ಣಿನಲ್ಲಿ ಉಸುಕು ಮಿಶ್ರವಾದ ಮಸಬು, ಉಸುಕು ಪಡಿಭೂಮಿ ಯಾವದಾದರೂ ಸರಿ ಈ ಪ್ರಕಾರದ ಸ್ವಲ್ಪ ಉತ್ತಮ ತರದ ಭೂಮಿಯಲ್ಲಿ ಎಲೆಯ ಬಳ್ಳಿಯನ್ನು ಹಚ್ಚಬೇಕು.

"ತಾಂಬೂಲಂ ಪ್ರಿಯಮುತ್ತಮಂ" ಎಂದು ಅಷ್ಟ ವಿಧಾರ್ಚನೆ ತಾಂಬೂಲವು ಪೂಜಾನಂತರದಲ್ಲಿ ದೇವತಾ ನೈವೇದ್ಯಕ್ಕೂ ಸಮಸ್ತ ಜನರುಗಳ ಭೋಜನಾಂತ್ಯದಲ್ಲಿ ಲಗ್ನ ಮುಂಜಿ ಬಾಷ್ಟಿಗಿ ನಿಶ್ಚಯ ಮೊದಲಾದ ಸಮಸ್ತ ಶುಭ ಶೋಭನಾದಿ ಕಾರ್ಯಗಳಿಗೂ ಬೇಕಾಗುವದಾಗಿ ಮತ್ತು ನಾಚು ರಂಗು ಸಭಾಬೈಠಕಿ ಮೊದಲಾದ ಸಭೆಗಳಲ್ಲಿ ಬೇಕಾಗುತ್ತ ಮಾನ್ಯವಾಗಿರುವ ಪದಾರ್ಥವು. ಹಾಗೂ ವೀರ ಭಟರನ್ನು ರಾಜರು ಯುದ್ಧ ಮೊದಲಾದ ಕಾರ್ಯಗಳನ್ನು ಜಯಿಸುವದಕ್ಕೆ ಅಪ್ಪಣೆಯನ್ನು ಕೊಟ್ಟು ಕಳಿಸುವ ವೇಳೆಯಲ್ಲಿ ಕೊಡತಕ್ಕ ವೀಳ್ಯವೆಂದು ಮಾನ್ಯ ಪದಾರ್ಥವಾಗಿ ಸಮಸ್ತ ಪೂಜಾ ಕಾಲಗಳಲ್ಲಿ ನೈವೇದ್ಯಕ್ಕೆ ಬೇಕಾಗಿರುವದಾಗಿರುತ್ತದೆ.

ತಾಂಬೂಲದ ಗುಣಗೆಯೋ ಮಾತ್ರೆ ಎನಿಸುವದು ಅದರ ಕ್ಷಾರವೇ ಕಷಾಯವೆನಿಸಿ ದೇಹಕ್ಕೆ ಆರೋಗ್ಯವಾಗಿದ್ದು ಸಮಶೀತ ಸಮೋಷ್ಣವಾಗಿ ದೇಹದ ಸ್ಥಿತಿಯನ್ನು ಪರಿಣಾಮಕ್ಕೆ ತರುವದು ತಾಂಬೂಲದಿಂದ ಜಿಹ್ವೆಯು ರುಚಿಕರವಾಗುವದು. ದಂತಗಳು ಬಿಗಿತರವಾಗುವವು. 'ಮುಖವು ಸಲಕ್ಷಣ ತೋರುವದು. ಅದು ಕಾರಣ "ವೀಳ್ಯವಿಲ್ಲದ ಬಾಯಿ ಇಲಿಯ ಗುದ್ದಿನ ಹಾಗೆ" ಎಂದು ಗಾದೆ ಹುಟ್ಟಿತು. ಹಲವು ಪ್ರಕಾರದಿಂದ ಜನರಲ್ಲಿ ಮಾನ್ಯವಾಗಿರುವದಾಗಿ ಮತ್ತು ಸ್ನೇಹಿತರು ಆಪ್ತರಿಷ್ಟರು ಬಂಧು ಬಾಂಧವರು ಒಬ್ಬರು ಬಂದಲ್ಲಿ, ಗೃಹಸ್ಥರಾದವರು ಬಂದವರಿಗೆ ಆಸನವನ್ನು ಕೊಟ್ಟು ತದನಂತರ ಮಾಡತಕ್ಕ ಸತ್ಕಾರ್ಯದಲ್ಲಿ ವೀಳ್ಯವೇ ಮುಖ್ಯವಾಗಿ ಮೊದಲು ವೀಳ್ಯವನ್ನು ಕೊಟ್ಟು ಸತ್ಕಾರ ಮಾಡಿದ ಮೇಲೆ ಬಂದ ಕಾರ್ಯದ ಲಕ್ಷಣವನ್ನು ತಿಳಿದುಕೊಳ್ಳಬೇಕಾಗುತ್ತದೆ. ಅದರಿಂದ ವೀಳ್ಯವು ಸರ್ವ ಕಾಲದಲ್ಲಿ ಮಾನ್ಯವಾದ ಪದಾರ್ಥವು.

ಎಲೆಯ ಬಳ್ಳಿಯನ್ನು ಬೆಳಸಿದ ಕೃಷಿಕರಿಗೆ ದ್ರವ್ಯವಾದರೂ ಚೆನ್ನಾಗಿ ಪ್ರಾಪ್ತವಾಗುವದು. ಈ ಎಲೆಯ ತೋಟವನ್ನು ಮಾಡಿಕೊಂಬುವವರು ಮೊದಲು ಸ್ವಲ್ಪ ಶ್ರಮಪಟ್ಟು ಒಂದು ವರ್ಷದ ವರೆಗೂ ಏನೂ ಪ್ರಾಪ್ತಿಯು ತೋರದೆ ಇರುವದು. ಆದಾಗ್ಯೂ ಅದಕ್ಕೆ ಬೇಸರಪಡದೆ ಸುಮ್ಮಗೆ ನೀರು ಉಣಿಸುತ್ತ ಹೋಗಬೇಕು ಒಂದು ವರ್ಷದ ಮೇಲೆ ಮಾರಾಟಕ್ಕೆ ಪ್ರಾರಂಭವಾದರೆ ಒಂದು ಎಕರೆ ಅಥವಾ ಒಂದುವರೆ ಎಕರೆ ಭೂಮಿಯಲ್ಲಿ ಪ್ರತಿ ವರ್ಷಕ್ಕೂ ಸಹಸ್ರ ರೂಪಾಯಕ್ಕಿಂತಲೂ ಕಡಿಮೆಯಾಗದು. ಇನ್ನೂ ಸ್ವಲ್ಪ ಹೆಚ್ಚೇ ಆಗ ಬಹುದು ಅದರ ಆರೈಕೆಯನ್ನು ಇಲ್ಲಿ ಹೇಳಿದ ಪ್ರಕಾರ ಮಾಡುತ್ತ ಹೋದರೆ ಪ್ರತಿ ವರ್ಷಕ್ಕೂ ಸಾವಿರ ರೂಪಾಯದ ಆಕಾರಕ್ಕೇನು ಕಡಿಮೆ ಇಲ್ಲ ಅದರಿಂದ ತೆಂಗು ಅಡಿಕೆ ಎಲೆಯ ಬಳ್ಳಿಯನ್ನು ಮಾಡಿಕೊಂಡು ಕೃಷಿಕ ಜನರಿಗೆ ದರಿದ್ರ ತ್ವವೇ ಇಲ್ಲವೆಂದು ತಿಳಿಯಬೇಕು.

ಎಲೆಯ ಬಳ್ಳಿಯನ್ನು ಹಚ್ಚುವ ಪರಿಯಾಯವು ಹೇಗಂದರೆ ಎರಡು ಮೊಟ್ಟೆಯ ಭಾವಿ ಇದ್ದರೆ ಎರಡು ಎಕರೆ ಅಥವಾ ಒಂದೇ ಮೊಟ್ಟೆಯ ಭಾವಿಯ ತೋಟವಾದರೆ ಒಂದು ಎಕರೆ ಅಜಮಾಸು ಚಚ್ಚೌಕು ಭೂಮಿ ಯನ್ನು ಕರಿಕೆ ಕಣಿಗಿಲ ಜೇಕು ಮೊದಲಾದ ನಟ್ಟುಗಳಿಲ್ಲಗಂತೆ ಚನ್ನಾಗಿ ನಟ್ಟು ಕಡಿಸಿ ನೇಗಿಲೆಯನ್ನು ಹೊಡೆದು ಕುರಿಯ ತರುಬಿಸಿ ಏಳು ಎಂಟು ವರ್ಷದ ಕಳಿತ ಹಳೆಯ ಗೊಬ್ಬರವನ್ನು ಹಾಕಿ ಎರಡು ಮೂರು ಸಾಲು ಚನ್ನಾಗಿ ಹರಿಗಿ ಹೆಂಟೆಗಳನ್ನು ಒಡೆದು ಹೊಲವನ್ನು ಮೃದುವಾಗುವ ಹಾಗೆ ಮಾಡಿ ಚೌಕಾಗಿ ಮಾರು ಮಾರು ಅಗಲವಾಗಿ ಅಂದರ ನಾಲ್ಕು ಮೊಳ ಅಗಲವಾಗ ಚೌಕು ಮಡಿಗಳನ್ನ ಮಾಡಿ ಆ ಮಡಿಗಳಲ್ಲಿ ಬಹಳ ಹಳೆಯದಾದ ಏಳು ಎಂಟು ವರ್ಷದ ಕಳಿತ ಗೊಬ್ಬರವನ್ನು ಮಡಿ ತುಂಬ ಹರಿಹಿ ಮೃಗಶಿರ ಮಳೆಯ ಕಾಲದಲ್ಲಿ ಚೊಗಚಿಯ ಬೀಜಗಳನ್ನು ಸಡೇದ ಬೀಜಗಳನ್ನು ಮತ್ತು ಹಾಲಿವಾಣಗಳಲ್ಲಿ ಬಿಳಿಯ ಹಾಲಿವಾಣ ಕೆಂಪು ಹಾಲಿವಾಣ ಮುಳ್ಳು ಹಾಲಿ ವಾಣಗಳನ್ನು ನುಗ್ಗಿಯ ಬೀಜಗಳನ್ನು ಆ ಮಡಿಗಳ ನಾಲ್ಕೂ ಮೂಲೆಗಳಲ್ಲಿ ಎರಡೆರಡು ಬೀಜಗಳನ್ನು ಹಾಕಬೇಕು. ಅವುಗಳಲ್ಲಿ ಸಡೇದ ಬೀಜಗಳು ತೀವ್ರವೇ ಉನ್ನತವಾಗುವವು ಮುಂದೆ ಉತ್ತರಿಯ ಮಳೆಯಲ್ಲಿ ಅಥವಾ ಚಿತ್ತಿ ಸ್ವಾತಿ ವಿಶಾಖಾ ಅನುರಾಧಾ ಮಳೆಗಳ ವರಗಾದರೂ ತಮಗೆ ಅನುವಾದಾಗ ಎಲೆಯ ಬಳ್ಳಿಯ ಬೀಜವನ್ನು ತರಿಸಿ ಹಚ್ಚಬೇಕು.

ಎಲೆಯ ಬಳ್ಳಿಯನ್ನು ಹಚ್ಚಬೇಕಾದರೆ ಮೊದಲು ಸಡೇದ ಗಿಡಗಳನ್ನು ಹಾಲಿವಾಣ ಚೊಗಚಿ ಮೊದಲಾದ ಗಿಡಗಳನ್ನು ಮೊದಲಿಗೆಯೇ ಹಾಕಿರ ಬೇಕು. ಆ ಗಿಡಗಳು ದೊಡ್ಡವಾದ ಮೇಲೆ ಆ ಗಿಡಗಳ ಬೊಡ್ಡಿಯ ಸಮೀ

ಪದಲ್ಲಿ ಒಂದು ಮೊಳ ಅಜಮಾಸು ಬಿಟ್ಟು ಗೇಣು ನಾಲ್ಕು ಬೆರಳು ಅಗಲ ಗುದ್ದು ಮೊಳಾ ಅಂದರೆ ಗೇಣು ಎಂಟು ಬೆರಳು ಅಜಮಾಸು ತಗ್ಗು ಇಟ್ಟು ಎಲ್ಲ ಗಿಡಗಳ ಬೊಡ್ಡೆಯಲ್ಲಿ ಪ್ರತಿ ಮಡಿ ಮಡಿಗಳಲ್ಲಿ ಈ ಪ್ರಕಾರದ ತಗ್ಗುಗಳನ್ನು ತೆಗೆದು ಆ ಬೀಜದ ಬಳ್ಳಿಯನ್ನು ತಂದು ಮೊಳ ಮೊಳದ ತುಂಡು ಮಾಡಿ ಮಲ್ಲಿಗೆ ಅಂಚಿನ ಹಾಗೆ ಸಿಂಬಿಯನ್ನು ಸುತ್ತಿ ಆ ಸಿಂಬಿಗಳನ್ನು ತಗ್ಗಿನಲ್ಲಿ ಇಟ್ಟು ಆದರ ಮೇಲೆ ಕೆಮ್ಮಣ್ಣು ಕುರಿಯ ಗೊಬ್ಬರವನ್ನು ಕೂಡಿಸಿ ಕಲಿಸಿ ಸಣ್ಣ ಬೆಳವಲಕಾಯಿ ಸಿಂಬೀಕಾಯಿ ಪ್ರಮಾಣ ಉಂಡಿಯನ್ನು ಕಟ್ಟಿ ನಾಲ್ಕರು ಬೆರಳು ಪ್ರಮಾಣ ಆ ಉಂಡಿಗಳನ್ನು ತಗ್ಗಿನಲ್ಲಿರುವ ಎಲೆಯ ಬಳ್ಳಿಯ ಸಿಂಬಿಯ ಮೇಲೆ ಹೌರಗೆ ಇಟ್ಟು ಅನುಮರಿತು ತೇವು ಆರದ ಹಾಗೆ ನಾಲ್ಕು ದಿವಸಕ್ಕೊಂದು ವೇಳೆ ನೀರು ಬಿಡುತ್ತ ಇರುವಲ್ಲಿ ಮೇಲೆ ಹೌರಗಾಗಿ ಹದಿನೈದು ದಿವಸಗಳಲ್ಲಿ ಕುಡಿಗಳಾಗಿ ತಿಂಗಳಷ್ಟಕ್ಕೆ ಕುಡಿ ಸಾಗಿ ಬೆಳೆಯುತ್ತ ಇರುವವು ಈ ಪ್ರಕಾರ ಯಾವತ್ತು ಮಡಿಗಳಿಗೂ ಬಳ್ಳಿಯನ್ನು ಹಚ್ಚಿ ನೀರು ಬಿಡುತ್ತ ಹೋಗಬೇಕು. ಆ ಬಳ್ಳಿಗಳ ಕುಡಿಯು ಉನ್ನತವಾಗುತ್ತ ಬಂದ ಹಾಗೆ ಬಾಳೆಯ ಸೊಪ್ಪೆಯನ್ನು ಸೀಳಿಸಿಂದಾಗಲಿ ಅಥವಾ ಅಪಿನಿಂದಾಗಲಿ ಇಲ್ಲವೆ ಕೇದಿಗೆಯ ಎಲೆಯ ಸೀಳಿನಿಂದಾಗಲಿ ಗೇಣುದ್ದಕ್ಕೆ ಮೊಳದುದ್ದಕ್ಕೆ ಒಂದೊಂದು ಕಟ್ಟುಗಳನ್ನು ಹೌರಾಗಿ ಕಟ್ಟುತ್ತ ಆ ಗಿಡಗಳಿಗೆ ಎಲೆಯ ಬಳ್ಳಿಯನ್ನು ಹಬ್ಬಿಸುತ್ತಾ ಹೋಗಬೇಕು. ಮತ್ತು ಎಲೆಯ ಬಳ್ಳಿಗಳಿಗೆ ಸ್ವಲ್ಪಾದರೂ ಗಾಳಿ ತಾಕಬಾರದು. ಈ ಬಳ್ಳಿಗಳು ಬಹಳ ಮೃದುವಾದ ಕಾರಣ ಗಾಳಿಯ ಭಾರಕ್ಕೆ ಗಿಡಗಳು ಹೊಯ್ದಾಡಿದರೆ ಅದಕ್ಕೆ ಹಬ್ಬಿದ ಬಳ್ಳಿಗಳು ಕತ್ತರಿಸುತ್ತವೆ ಅಥವಾ ಗಾಸಿಯಾಗಿ ಕೆಡುತ್ತವೆ. ಅದು ಕಾರಣ ಮಧ್ಯಭಾಗದಲ್ಲಿರುವ ಗಿಡಗಳಿಗೂ ಎಲೆಯ ಬಳ್ಳಿಗಳಿಗೂ ಗಾಳಿ ತಾಕದ ಹಾಗೆ ಸುತ್ತು ಬಹಳ ಚಾಟು ಮಾಡಬೇಕು ಹೇಗೆಂದರೆ ಎಲೆಯ ಬಳ್ಳಿಯ ಹೊಂದಿಗೆ ಸುತ್ತಲೂ ನಾಲ್ಕು ದಿಕ್ಕಿಗೂ ಒಂದು ಸಾಲು ಬಾಳೆಯನ್ನು ನಾಲ್ಕು ಮೊಳಕ್ಕೊಂದರಂತೆ ಹಚ್ಚಬೇಕು ಅವುಗಳ ಮಧ್ಯದ ಸಂದಿನಲ್ಲಿ ದಾಶಾಳದ ಬರಿಗಳನ್ನು ಹಚ್ಚಬೇಕು ಮತ್ತು ಬಾಳೆಯ ಮಡಿಗಳ ಹಿಂದೆ ನಾಲ್ಕು ದಿಕ್ಕಿಗೂ ಕಾವಲಿಯನ್ನು ಮಾಡಿ ಗುಲಾಬೀ ಬರಿಗಳನ್ನೂ ಕಣಗಿಲ ಬರಿಗಳನ್ನೂ ಹಚ್ಚಬೇಕು. ಅವುಗಳ ಹಿಂದೆ ನಾಲ್ಕು ಬೆರಳಿಗೊಂದರಂತೆ ಸಡೇದ ಗಿಡಗಳನ್ನು ಅವುಗಳ ಹಿಂದೆ ಮತ್ತೊಂದು ಕಾವಲಿಯನ್ನು ಮಾಡಿ ಗೇಣಿಗೊಂದು ಚೊಗಚಿಯ ಗಿಡಗಳನ್ನು ಅವುಗಳ ಹಿಂದೆ ಹಾಲಿವಾಣದ ಗಿಡಗಳನ್ನು ನುಗ್ಗಿಯ ಗಿಡಗಳನ್ನು ಹಚ್ಚಬೇಕು.

ಎಲೆಯ ಬಳ್ಳಿಯ ವನದ ಸುತ್ತಲೂ ಶೋಭೆಗಾಗಿ ನಾಲ್ಕು ಮಾರಿಗೊಂದು ತೆಂಗಿನ ಗಿಡಗಳನ್ನು ನಾಲ್ಕು ಮೊಳಕ್ಕೊಂದು ಅಡಿಕೆಯ ಗಿಡ

ಗಳನ್ನು ಈ ಪ್ರಕಾರ ಹಚ್ಚಿ ಎಲೆಯ ಬಳ್ಳಿಯ ಸಂಗಡ ಈ ಯಾವತ್ತು ಗಿಡಗಳು ಚೆನ್ನಾಗಿ ನೀರು ಉಂಬುವ ಹಾಗೆ ಮಡಿಗಳನ್ನೂ ಕಾವಲಿಗಳನ್ನೂ ಮಾಡಿ ಬಳ್ಳಿಗಳನ್ನು ಹಚ್ಚಿದಕ್ಕಿಂತಲೂ ಮೊದಲೇ ಗಿಡಗಳನ್ನು ಸುತ್ತಲೂ ಮಧ್ಯದಲ್ಲಿಯೂ ಹಚ್ಚಿ ಈ ಯಾವತ್ತು ಗಿಡಗಳು ಸ್ವಲ್ಪ ಉನ್ನತವಾಗಿ ಗಾಳಿಯ ಭಾರವನ್ನು ಹಿಡಿಯುವ ಹಾಗಾದ ಮೇಲೆ ಎಲೆಯ ಬಳ್ಳಿಯನ್ನು ಹಚ್ಚಬೇಕು.

ಈ ಸುತ್ತಲಿರುವ ಗಿಡಗಳು ಸಣ್ಣವಿದ್ದು ಗಾಳಿಯ ಭಾರವನ್ನು ಹಿಡಿಯದ ಹಾಗೆ ಇದ್ದರೆ ಗಿಡಗಳು ದೊಡ್ಡವಾಗುವ ವರೆಗೂ ಸುತ್ತಲೂ ತಟ್ಟಿಯ ಕಟ್ಟಿದ ಹಾಗೆ ಕಣಿಕೆಯಲ್ಲಿ ಉದ್ದವಾದ ಕಣಿಕೆಯಿಂದಾಗಲಿ ಇಲ್ಲವೆ ಯಾವ ಜೀನಸಿನ ತೊಪ್ಪಲುಗಳಿಂದಾಗಲಿ ಇಲ್ಲವೆ ಬಿದಿರು ಚಾಪೆಯಿಂದಾಗಲಿ ಅಥವಾ ಈಚಲ ಬರಿಗಳಿಂದಾಗಲಿ ಕರಕಲ ಕಟ್ಟಿಗೆಯ ಬರಿಗಳಿಂದಾಗಲಿ ತಟ್ಟಿಗಳನ್ನು ಹೆಣೆದು ಸುತ್ತಲೂ ಬಾಡು ಕಟ್ಟಿದ ಹಾಗೆ ಕಟ್ಟಿ ಚಾಟು ಮಾಡಬೇಕು

ಎಲೆಯ ಬಳ್ಳಿಯು ವರ್ಧನವಾಗುವ ಕಾಲದಲ್ಲಿ ಅದರ ಕೆಳಗೆ ತೊಪ್ಪಲು ಸದಿ ರವದಿ ಕಸ ಹುಲ್ಲು ಮೊದಲಾದ ಮಲಿನಗಳು ಅಣು ಮಾತ್ರವಿಲ್ಲದಂತೆ ಆಗಾಗ್ಗೆ ನಿರ್ಮಲ ಮಾಡುತ್ತ ಮತ್ತು ಮಡಿಗಳಲ್ಲಿ ಏನಾದರೂ ಕಸ ಪದಾರ್ಥಗಳು ನಾಟಿದ್ದರೆ ಅವುಗಳನ್ನು ಆಗಾಗ್ಗೆ ನೋಡಿ ಸದೆಯನ್ನು ತೆಗಿಸುತ್ತ ತೇವು ಆರದಂತೆ ವಾರಕ್ಕೆ ಎರಡು ವೇಳೆ ನೀರು ಬಿಡುತ್ತ ಚನ್ನಾಗಿ ಆರೈಕೆಯನ್ನು ಮಾಡಿದರೆ ಬಳ್ಳಿಗಳು ವರ್ಧನವಾಗಿ ದಿನ ದಿನಕ್ಕೆ ವಿಸ್ತಾರವಾಗಿ ಹಬ್ಬುತ್ತ ಮಂಗಲಕರವಾಗಿ ಕಾಣಿಸುವವು.

ಎಲೆದೋಟವನ್ನು ಮಾಡಿದ ಮೇಲೆ ಆ ಬಾವಿಯ ನೀರು ಬಹಳ ನಿರ್ಮಲವಿರಬೇಕು ಆ ಬಾವಿಯಲ್ಲಿ ಸೀರೆ ರಗಟೆ ಕವದಿ ಮೊದಲಾದ ಮಲಿನ ವಸ್ತ್ರಗಳನ್ನು ತೊಳೆಯಲಾಗದು ಆ ನೀರಿನಲ್ಲಿ ಸ್ವಲ್ಪವಾದರೂ ಎಣ್ಣೆಯ ವಾಸನೆ ಇರಕೂಡದು ಹಾಗು ಮೊಟ್ಟೆಯನ್ನು ಹಚ್ಚಿದ್ದರೆ ಹದಿನೈದು ದಿವಸ ಮತ್ತೊಂದು ಬಾವಿಯಲ್ಲಿ ಹೊಡೆದು ಅದರ ಎಣ್ಣೆಯ ಹೊಲಸು ಹೋದ ಮೇಲೆ ಈ ಬಾವಿಯಲ್ಲಿ ಹಾಕಬೇಕು. ಅಲ್ಲಿಯ ವರೆಗೂ ಹಾಕಬಾರದು.

ಈ ಪ್ರಕಾರ ಎಲೆಯ ಬಳ್ಳಿಯನ್ನು ಬೆಳಿಸುತ್ತ ಹೋಗಿ ಆರು ತಿಂಗಳ ವರೆಗೂ ಅದರ ಎಲೆಗಳನ್ನು ಒಂದಾದರೂ ಕೊಯ್ಯಬಾರದು. ಆರು ತಿಂಗಳ ಮೇಲೆ ಮನೆಯ ಪೂರ್ತಿಗೆ ಬಳ್ಳಿಗೆ ಹತ್ತೆಂಟು ಎಲೆಗಳನ್ನು ಕತ್ತರಿಯಿಂದ ಕತ್ತರಿಸಿಕೊಳ್ಳಬೇಕು ಮಾರಾಟಕ್ಕೆ ಕೊಡಬೇಕಾದರೆ ಬಳ್ಳಿಯು ಬಲಿತು ವಿಸ್ತಾರವಾಗಿ ಹಬ್ಬುವ ವರೆಗೂ ಎಲೆಗಳನ್ನು ಕೊಯ್ಯಬಾರದು. ಹಾಗು ಎಲೆಗಳಲ್ಲಿ ಒಂದಾದರೂ ಎಲೆಯನ್ನು ಉಗುರಿನಿಂದ ಚಿವುಟಿದರೆ ಬಳ್ಳಿಗೆ

ನಂಜಾಗುತ್ತದೆ. ಅದು ಕಾರಣ ಉಕ್ಕಿನ ಉಗುರುಗಳನ್ನು ಮಾಡಿಸಿ ಆ ಉಗುರುಗಳನ್ನು ಕೈ ಬೆರಳಿಗೆ ಹಾಕಿಕೊಂಡು ಚಿವುಟಬೇಕು ಇಲ್ಲವೆ ಕತ್ತರಿಯಿಂದ ಕತ್ತರಿಸಬೇಕು. ಕುಡಿಯನ್ನು ಮತ್ತು ಕುಡಿಯ ಸಮೀಪದಲ್ಲಿರುವ ಅತಿ ಎಳೆಯವಾದ ಐದು ಎಲೆಗಳನ್ನು ಬಿಟ್ಟು ಕೆಳಗಿನ ಎಲೆಗಳನ್ನು ಕತ್ತರಿಯಿಂದಾಗಲಿ ಕತ್ತರಿಸಬೇಕು ಇಲ್ಲವೆ ಉಕ್ಕಿನ ಉಗುರುಗಳಿಂದ ಚಿವುಟಬೇಕು.

ಎಲೆಯ ಬಳ್ಳಿಯನ್ನು ಹಚ್ಚಿದ ಮೇಲೆ ಒಂದು ವರ್ಷದಿಂದ ಮಾರಾಟಕ್ಕೆ ಪ್ರಾರಂಭವಾದ ಮೇಲೆ ಪ್ರತಿ ತಿಂಗಳಿಗೆ ನೂರು ನೂರಾಇಪ್ಪತ್ತೈದು ಒಂದುವರೆನೂರು ರೂಪಾಯದ ಎಲೆಗಳು ಹೊರಡುತ್ತ ಮೂರು ವರ್ಷದ ವರೆಗೂ ಎಲೆಗಳು ದೊಡ್ಡವಾಗುತ್ತ ಇರುವವು. ಆಮೇಲೆ ಎಲೆಗಳು ಸಣ್ಣವಾಗಲಾರಂಭಿಸಿದರೆ ಅದರ ಬೇರುಗಳನ್ನು ಇಳಿಸಿ ಮತ್ತೆ ಹೊಸ ಬಳ್ಳಿಗಳನ್ನು ಮಾಡಬೇಕು. ಅದು ಹೇಗೆಂಬುದನ್ನು ಕೆಳಗೆ ಬರೆಯುತ್ತೇನೆ

ಮೂರು ವರ್ಷದ ಮೇಲೆ ಎಲೆಯ ಬಳ್ಳಿಯು ಹಣ್ಣಾದ ಹಾಗೆ ಕಾಣಿಸಿದರೆ ಗಿಡಗಳಿಗೆ ಹಬ್ಬಿಸಿ ಅಲ್ಲಲ್ಲಿಗೆ ಕಟ್ಟಿದ ಕಟ್ಟುಗಳನ್ನು ಹರಿದು ಬಳ್ಳಿಯನ್ನು ಕೆಳಯಕ್ಕೆ ಕೆಡವಿ ಬೊಡ್ಡಿಯ ಬಳ್ಳಿಯನ್ನು ಹಾಗೇ ಉಳಿಸಿ ತುದಿಯ ಬಳ್ಳಿಯನ್ನು ಕೊಯ್ದು ಬಿಡಬೇಕು ಆಮೇಲೆ ಪೂರ್ವದಲ್ಲಿ, ಹಚ್ಚಿದ ಎಲೆಯ ಬಳ್ಳಿಯ ಬೊಡ್ಡಿಯ ಸಮೀಪದಲ್ಲಿ ಮೊದಲಿನಂತೆ ಗೇಣು ನಾಲ್ಕು ಬೆರಳು ಅಗಲ ಗುದ್ದು ಮೊಳಾ ಉದ್ದ ತಗ್ಗ ಮಾಡಿ ಮತ್ತೊಂದೊಂದು ತಗ್ಗ ತೆಗೆದು ಎಲೆಯ ಬಳ್ಳಿಯ ಪೂರ್ವದ ಬೊಡ್ಡಿಯನ್ನು ಹಾಗೇ ಉಳಿಸಿ ಅದರ ಬಳ್ಳಿಯ ಒಂದು ಕೊಲ್ಲೆಯನ್ನು ತೆಗೆದುಕೊಂಡು ಸಿಂಬಿಯ ಸುತ್ತಿ ಆ ತಗ್ಗಿನಲ್ಲಿ ಇಟ್ಟು ಮೊದಲಿನಂತೆ ಕೆಂಪು ಮಣ್ಣು ಕುರಿಯ ಗೊಬ್ಬರವನ್ನು ಸಮನಾಗಿ ಕಲಿಸಿ ಉಂಡಿಯನ್ನು ಕಟ್ಟಿ ಆ ಸಿಂಬಿಯ ಮೇಲೆ ಇಟ್ಟು ನೀರು ಬಿಡುತ್ತ ಹೋಗಬೇಕು. ಪುನಃ ಅದು ಹೊಸ ಬಳ್ಳಿಯಾಗಿ ಹೊಸ ಕುಡಿಗಳಾಗುತ್ತ ಹೋದ ಹಾಗೆ ಗಿಡಗಳಿಗೆ ಹಬ್ಬಿಸಿ ಅಲ್ಲಲ್ಲಿಗೆ ಕಟ್ಟುತ್ತ ಒಂದು ವರ್ಷ ಪರಿಯಂತರವು ಎಲೆಗಳನ್ನು ಬೆಳಸಬೇಕು ಈ ಹೊಸ ಬಳ್ಳಿಯು ಬಲಿಯುವ ವರೆಗೂ ಹಳೇ ಬಳ್ಳಿಯು ಪುನಃ ಚಿಗಿತು ಚಿಗರೆಲೆಗಳಾಗುತ್ತ ಇರುವವು ವರ್ಷ ಪರಿಯಂತರ ಆ ಎಲೆಗಳನ್ನು ಹರಿದು ಮಾರುತ್ತ ಹೊಸ ಬಳ್ಳಿಯು ಬಲಿತ ಮೇಲೆ ಅದರ ಎಲೆಗಳನ್ನು ಹರಿಯಲಿಕ್ಕೆ ಪ್ರಾರಂಭವಾದ ಮೇಲೆ ಯಾರಾದರೂ ಹಚ್ಚುವವರು ಬೇಡಿದರೆ ಹಳೇ ಬಳ್ಳಿಯನ್ನು ಕೊಯ್ದು ಕೊಡಬೇಕು. ಹೀಗೆ ಮೂರು ವರ್ಷಕ್ಕೊಮ್ಮೆ ಮಾಡುತ್ತ ಹೋದರೆ ಹೊಸ ಬಳ್ಳಿಗಳಾಗುತ್ತ ಬಳ್ಳಿಯು ಕೆಡದೆ ಎಷ್ಟು ದಿವಸವಾದರೂ ಇರುವವು.

ಅಡಿಕೆಯು ಗಿಡಗಳನ್ನು ಹಾಕಿದ ಹತ್ತು ಹನ್ನೆರಡು ವರ್ಷಕ್ಕೆ ಗಿಡಗಳು ಉನ್ನತವಾದ ಮೇಲೆ ಅವುಗಳ ಮಧ್ಯದಲ್ಲಿರುವ ಪೇರಲ ಗಿಡಗಳನ್ನು ಮತ್ತು ಸಡೇದ ಗಿಡಗಳನ್ನು ಕಡಿದು ಗುದ್ದಲಿಯಿಂದ ಅಗಿದು ನೆಲವನ್ನು ಮೆತ್ತಗೆ ಮಾಡಿ ಪೇರಲ ಗಿಡದ ಬೇರು ಸಡೇದ ಗಿಡದ ಬೇರು ಇವು ಇಲ್ಲದಂತೆ ಆರಿಸಿ ತೆಗೆದು ಚನ್ನಾಗಿ ಭೂಮಿಯನ್ನು ಹಸನು ಮಾಡಿ ಹೆಳ್ಳಿಗಳನ್ನು ಒಡೆದು ಹಳೆಯ ಗೊಬ್ಬರವನ್ನು ಹಾಕಿ ಅಡಿಕೆಯ ಗಿಡಗಳಿಗೆ ದಕ್ಕೆಯಾಗದಂತೆ ಅವುಗಳನ್ನು ಹಾಗೇ ಉಳಿಸಿ ಭೂಮಿಯನ್ನು ಹಸನ ಮಾಡಿದ ಮೇಲೆ ಚನ್ನಾಗಿ ಪೂರ್ವ ಪ್ರಕಾರ ಎಲೆಯ ಬಳ್ಳಿಯ ಮಡಿಗಳಂತೆ ಮಡಿಗಳನ್ನು ಮಾಡಿ ಅಡಿಕೆಯ ಗಿಡಗಳ ಸಂದಿನಲ್ಲಿ ಅಂಗಲಾದಲ್ಲಿ ಮೃಗಶಿರ ಕಾಲದಲ್ಲಿ ಸಡೇದ ಗಿಡಗಳನ್ನು ಹಾಕಿ ಉತ್ತರಾ ಹಸ್ತಾ ಮಳೆಗಳ ಕಾಲದಲ್ಲಿ ಎಲೆಯ ಬಳ್ಳಿಗಳನ್ನು ಹಿಂದೆ ಹೇಳಿದ ಪ್ರಕಾರ ಹಚ್ಚಿ ಆ ಬಳ್ಳಿಗಳನ್ನು ಅಡಿಕೆಯ ಗಿಡಗಳಿಗೂ ಸಡೇದ ಗಿಡಗಳಿಗೂ ಹಬ್ಬಿಸಿ ಬಳ್ಳಿ ಹಬ್ಬಿದ ಹಾಗೆ ಅಲ್ಲಲ್ಲಿಗೆ ಕಟ್ಟ್ಟ ಕಟ್ಟುತ್ತ ವರ್ಷ ಪರಿಯಂತರವು ಬಳ್ಳಿಗಳನ್ನು ಬೆಳಿಸಿದರ ಅಡಿಕೆಯ ಉತ್ಪನ್ನವೂ ಎಲೆಯ ಉತ್ಪನ್ನವೂ ಕೂಡಾ ಪ್ರಾಪ್ತಿಸುವವು ಈ ಅಡಿಕೆಯ ವನದಲ್ಲಿ ಹಚ್ಚಿದ ಎಲೆಯ ಬಳ್ಳಿಯನ್ನಾದರೂ ಮೂರು ವರ್ಷಕ್ಕೊಮ್ಮೆ ಬೇರು ಇಳಿಸಿ ಹಿಂದೆ ಹೇಳಿದ ಹಾಗೆ ಹೊಸ ಬಳ್ಳಿಯನ್ನು ಮಾಡುತ್ತ ಹೋದರೆ ಎಷ್ಟು ವರ್ಷವಾದರೂ ಹಾಗೇ ಇರುವವು

ಕೃಷಿಕರಾದವರು ತೋಟದಲ್ಲಿ ಎಲೆಯ ಬಳ್ಳಿಯನ್ನು ಮತ್ತು ಬಾಳೆಯನ್ನು ಹಚ್ಚಿದ ಮೇಲೆ ಅವನ್ನು ಆಳಿದು ಬಿಡಬಾರದು. ಇವುಗಳ ಉತ್ಪನ್ನವು ಅತಿ ವಿಶೇಷವಾದ ಕಾರಣ ಎಲೆಯ ಬಳ್ಳಿಯನ್ನು ಮೂರು ವರ್ಷಕ್ಕೊಮ್ಮೆ ಬೇರು ಇಳಿಸಿ ಹೊಸ ಬಳ್ಳಿಯನ್ನು ಮಾಡುತ್ತ ಹೋಗಬೇಕು. ಬಾಳೆಯನ್ನು ಮೂರು ವರ್ಷಕ್ಕೊಮ್ಮೆ ಬದಲು ಸ್ಥಳದಲ್ಲಿ ಹಚ್ಚುತ್ತ ಹಳೇ ಬಾಳಿ ಇರುವದರೊಳಗೆ ಹೊಸ ಬಾಳೆಯು ಫಲಕ್ಕೆ ಬರುವ ಹಾಗೆ ಮಾಡಿ ಕೊಳ್ಳಬೇಕು. ಹೊಸ ಬಾಳೆಯ ಫಲವನ್ನು ಅದರ ಉತ್ಪನ್ನವನ್ನು ಉಂಬುತ್ತ ಹಳೇ ಬಾಳೆಯನ್ನು ಕಡಿದು ಒಂದು ವರ್ಷ ಅರಿಷಿಣ ಮೆಣಸಿನ ಗಿಡವನ್ನು ಎರಡನೇ ವರ್ಷ ನೆಲ್ಲು ಬೆಳೆಯನ್ನು ಉಳಿದಾದ ಕೆಲವು ಪದಾರ್ಥಗಳನ್ನು ಮೂರನೇ ವರ್ಷ ಕಬ್ಬನ್ನು ಹಚ್ಚಿ ಬೆಳೆ ಮಾಡಿಕೊಂಡು ಆ ಭೂಮಿಗೆ ಪುನಃ ಬಾಳೆಯನ್ನು ಹಚ್ಚಬೇಕು.

## ನಿಂಬಿಯ ವನವು

ನಿಂಬಿಯ ಹಣ್ಣುಗಳು ನೋಟಕ್ಕೆ ರಂಜನೆಯಾದ ಹಳದೀ ಬಣ್ಣದಿಂದ ದುಂಡಾಕೃತಿಯುಳ್ಳ ಹಣ್ಣುಗಳಾಗಿರುವವು. ಈ ನಿಂಬಿಯಲ್ಲಿ ಬಹಳ ತರ

ಗಳುಂಟು. ಅವುಗಳ ಹಣ್ಣುಗಳು ಬೇರೆ ಬೇರೆ ರುಚಿಯಾಗಿ ಹುಳಿಯಾಗಿ ಹುಳಿಯ ಮೇಲೆ ಸ್ವಲ್ಪ ಸವಿಯಾಗಿ ಇರುತ್ತವೆ ಅವುಗಳಲ್ಲಿ ಕೆಲವು ತರಗಳನ್ನು ಹೇಳುತ್ತೇನೆ ನಿಂಬಿ ಗಜನಿಂಬಿ ಕೀನಿಂಬಿ ಸಕ್ಕರೆನಿಂಬಿ ಕಿತ್ತಳೆನಿಂಬಿ ಬಿಲ್ಲಿನಿಂಬಿ ಔರಂಗಾಬಾದನಿಂಬಿ ಚಕ್ಕೋತ್ತರನಿಂಬಿ ಮಾದಳನಿಂಬಿ ಎಂದು ಇವೆ. ನಿಂಬಿಯ ಕುಲದಲ್ಲಿ ನಾರಂಗವೆಂಬದುಂಟು. ಅದಕ್ಕೆ ಸಕ್ಕರಿಗಂಚಿ ಕಂಚೀಕಾಯಿ ಎಂಬ ಹೆಸರುಗಳಿವೆ ಇನ್ನೂ ಅನೇಕ ಪ್ರಕಾರದ ನಿಂಬಿಯ ಕುಲಗಳುಂಟು. ಈ ಎಲ್ಲ ಕುಲಗಳ ಬೀಜಗಳು ಹೈದರಾಬಾದಿನಲ್ಲಿ ಸಿಕ್ಕುತ್ತವೆ.

ಈ ನಿಂಬಿಯ ಹಣ್ಣುಗಳನ್ನು ತಂದು ಹಸಿಯ ಬೀಜಗಳನ್ನು ಒಣಗಿಸದೆ ಬೇರೆ ಒಂದು ಮಡಿಯನ್ನು ಮಾಡಿ ಅವಕ್ಕೆ ಚನ್ನಾಗಿ ಹಳೆಯ ಗೊಬ್ಬರವನ್ನು ಹಾಕಿ ಆ ಮಡಿಯಲ್ಲಿ ಈ ಬೀಜಗಳನ್ನು ಹಾಕಿ ನೀರು ಬಿಡುತ್ತಾ ಹೋದರೆ ಇಪ್ಪತ್ತು ದಿವಸ ಅಥವಾ ತಿಂಗಳು ಆಜವಾಸಿಗೆ ನಾಟಿಕೆ ಕೊಳ್ಳುತ್ತವೆ. ಆ ಸಸಿಗಳನ್ನು ಒಂದು ವರ್ಷ ಮಡಿಯಲ್ಲಿಯೇ ಬೆಳಿಸಿ ಮೃಗಶಿರ ಮಳೆಗೆ ಕಿತ್ತಿ ಹಚ್ಚಬೇಕು.

ನಿಂಬಿಯ ಆಗಿಗಳನ್ನು ಹಚ್ಚುವ ಭೂಮಿಯು ಸೌಳು ಮತ್ತು ಕಟ್ಟುಕರಲು ಇರಬಾರದು. ಈ ಎರಡು ಪ್ರಕಾರದ ಭೂಮಿಯನ್ನು ಬಿಟ್ಟು ಉಳಿದ ಯಾವತ್ತೂ ಭೂಮಿಯಲ್ಲಿ ನಿಂಬಿಯ ಗಿಡಗಳು ಬೆಳೆಯುವದಕ್ಕೆ ಸಂಶಯವಿಲ್ಲ. ಈ ನಿಂಬಿಯ ಗಿಡಗಳನ್ನು ಹಚ್ಚುವ ಭೂಮಿಯನ್ನು ನೇಗಿಲೆಯಿಂದಾಗಲಿ ಹೊಡೆದು ಮಣ್ಣು ಮೆತ್ತಗೆ ಮಾಡಿ ಚನ್ನಾಗಿ ಗೊಬ್ಬರ ಹಾಕಿ ಹರಗಿ ಎಂಟು ಮೊಳಕ್ಕೊಂದು ತಗ್ಗು ತೆಗೆದು ಅದರಲ್ಲಿ ಉಸುಕು ಕೆಮ್ಮಣ್ಣು ಹಳೆಯ ಗೊಬ್ಬರವನ್ನು ಕಲಿಸಿ ಹಾಕಿ ಭರ್ತಿಮಾಡಿ ಆ ತಗ್ಗಿಗೆ ನೀರು ಬಿಟ್ಟು ಹಸಿ ಮಾಡಿ ನಿಂಬಿಯ ಆಗಿಗಳ ಬೇರು ಹರಿಯದ ಹಾಗೆ ಗಡ್ಡೆ ಸಹಿತ ಅಗಿದು ತಂದು ಸ್ವಲ್ಪ ಕೆದರಿ ಆ ತಗ್ಗಿನೊಳಗೆ ಈ ಸಸಿಗಳನ್ನಿಟ್ಟು ಕುರಿಯ ಗೊಬ್ಬರವನ್ನು ಕೆಮ್ಮಣ್ಣನ್ನು ಸಮನಾಗಿ ಕಲಿಸಿ ಹಾಕಿ ಗಟ್ಟಿಯಾಗಿ ಬಗಲು ತುಳಿದು ನೀರು ಬಿಡುತ್ತ ಹೋಗಬೇಕು. ಈ ನಿಂಬಿಯ ಕುಲಗಳಲ್ಲಿ ಹಲವು ಪ್ರಕಾರದ ನಿಂಬಿಯ ಸಸಿಗಳನ್ನು ಕದಲು ಬದಲಾಗಿ ಹಚ್ಚದೆ ಒಂದೇ ವನದಲ್ಲಿ ಬೇರೆ ಬೇರೆ ಒಂದೊಂದು ಕುಲದ ಸಸಿಗಳನ್ನು ಒತ್ತಟ್ಟಿಗೆ ಮಾಡಿ ಹಚ್ಚಬೇಕು.

ಹಾಗು ಮೇಲು ಕಾವಲಿಯ ಒಡ್ಡು ಹಾಕಿಸಿದ್ದರೆ ಆ ಒಡ್ಡು ಹೊಸ ಮಣ್ಣಾದುದರಿಂದ ನೀರು ಉಂಡು ತಂಪು ಹಿಡಿದಿರುವದು ಆ ಒಡ್ಡಿನ ತಳದಲ್ಲಿ ನಿಂಬಿಯ ಗಿಡಗಳನ್ನು ಹಚ್ಚಬೇಕು. ಮತ್ತು ನಿಂಬಿಯ ವನದ ಸುತ್ತಲೂ ಹತ್ತು ಮೊಳಕ್ಕೊಂದು ಗೋಡಂಬಿಯ ಗಿಡಗಳನ್ನು ಅವುಗಳ ಮಧ್ಯದಲ್ಲಿ ಪಪಾಯಿ ಗಿಡಗಳನ್ನು ಅಥವಾ ಪನಸು ಗಿಡಗಳನ್ನು ಹಚ್ಚಬೇಕು.

## ಪೇರಲ ವನವು.

ಪೇರಲವೆಂದರೂ ಜಾಂಪಲವೆಂದರೂ ಒಂದೇ ಪರಿಯಾಯವು ಈ ಪೇರಲ ಆಗಿಗಳನ್ನು ಮಾಡುವ ಪರಿಯಾಯವು ಹೇಗಂದರೆ, ಮೊದಲೇನೇ ಪೇರಲ ಹಣ್ಣಿನ ಹಂಗಾಮಿನಲ್ಲಿ ಚಲೋ ಹಣ್ಣು ತರಿಸಿ ಒಳಗಿನ ಬೀಜಗಳನ್ನು ತೆಗೆದು ಬೂದಿಯಲ್ಲಿ ಕಲಿಸಿ ನಾದಿ ಪುನಃ ಬೂದಿಯನ್ನು ಹಾಕಿ ಒರಿಸಿ ಒಂದೊಂದು ಕಾಳು ಬೇರೆ ಬೇರೆ ಮಾಡಿ ಮುಗ್ಗು ಹಾಯದಂತೆ ಚನ್ನಾಗಿ ಬಿಸಲಲ್ಲಿ ಒಣಗಿಸಿ ಇಟ್ಟುಕೊಂಡು ಮುಂದೆ ಮೃಗಶಿರ ಕಾಲಕ್ಕೆ ಅಡಿನ ಹಾಲಿನಲ್ಲಿ ಒಂದು ದಿವಸ ಪೇರಲ ಬೀಜಗಳನ್ನು ನೆನೆ ಇಟ್ಟು ಬೇರೊಂದು ದೊಡ್ಡ ಮಡಿಯನ್ನು ಮಾಡಿ ಈ ಬೀಜಗಳನ್ನು ಅಂಗಲಾಗಿ ಗೇಣಿಗೊಂದರಂತೆ ಹಾಕಿ ಮೇಲೆ ಸ್ವಲ್ಪ ಮಣ್ಣು ಹಾಕಿ ನೀರು ಹಾಕುತ್ತ ಹೋಗಬೇಕು. ಅವುಗಳು ತಿಂಗಳು ಅಜಮಾಸಿನಲ್ಲಿ ನಾಟಿಕೊಳ್ಳುವವು. ಆ ಸಸಿಗಳನ್ನು ಆ ಮಡಿಯಲ್ಲಿಯೇ ನಾಲ್ಕು ಮೂರು ತಿಂಗಳು ಹಾಗೇ ಬೆಳಿಸಿ ಹಿಂಗಾರಿಯ ಕಾಲದಲ್ಲಿ ಹಸಿಯಾದರೆ ಉತ್ತರಾ ಮಳೆಯಲ್ಲಿ ಕಿತ್ತಿ ಹಚ್ಚಬೇಕು ಅಥವಾ ಮೃಗಶಿರ ಮಳೆಗಾಲದಲ್ಲಿ ಹಚ್ಚಿದರೂ ಬರುತ್ತದ. ಅಲ್ಲಿಯ ವರೆಗೂ ಆ ಸಸಿಗಳನ್ನು ಹಾಗೆಯೇ ಬೆಳಸಬೇಕು.

ಈ ಪೇರಲ ಗಿಡಗಳನ್ನಾದರೂ ಎಂಟು ಹತ್ತು ಮೊಳಕ್ಕೊಂದರಂತೆ ಸಾಲು ಹಿಡಿದು ಔರಸ ಚೌರಸ ಸಾಲಾಗುವಂತೆ ತಗ್ಗುಗಳನ್ನು ತೆಗಿಸಿ ಆ ತಗ್ಗಿನಲ್ಲಿ ಉಸುಕನ್ನೂ ಮಣ್ಣನ್ನೂ ಸಮಬೆರಕೆಯಾಗಿ ಕಲಿಸಿ ಭರೀ ಮಾಡಿ ನೀರು ಬಿಟ್ಟು ಹಸೀ ಮಾಡಿ ಆ ಪೇರಲ ಸಸಿಗಳ ಬೇರು ಹರಿಯದಂತೆ ಗಡ್ಡೆ ಸಹಿತ ಆಗಿದು ತೆಗೆದು ಆ ತಗ್ಗಿನಲ್ಲಿ ಗಡ್ಡೆ ಮುಳುಗುವ ಹಾಗೆ ಸ್ವಲ್ಪ ಕೆದರಿ ಈ ಸಸಿಗಳನ್ನಿಟ್ಟು ಚನ್ನಾಗಿ ಬಗಲು ತುಳಿದು ಗಟ್ಟಿಯಾಗಿ ಕೂಡ್ರಿಸಿ ನೀರು ಬಿಡುತ್ತ ಹೋಗಬೇಕು. ಈ ಗಿಡಗಳು ಎರಡು ಮೂರು ವರ್ಷಕ್ಕೆ ಫಲಕ್ಕೆ ಬರುವವು.

## ಅಂಜೀರದ ವನವು.

ಅಂಜೀರದ ಹಣ್ಣು ಅತ್ತಿಯ ಹಣ್ಣಿನ ಆಕಾರವಾಗಿದ್ದು ಬಹು ಸೀಯಾಗಿರುವದು. ಆದರ ಎಲೆಗಳು ಆಲದ ಎಲೆಯಕಿಂತಲೂ ದೊಡ್ಡವಾಗುವವು. ಈ ಗಿಡಗಳನ್ನು ಹಚ್ಚಬೇಕಾದರೆ ಅವುಗಳ ಕೊಲ್ಲೆಯನ್ನು ತಂದು ದಾಳಿಂಬದ ಕೊಲ್ಲೆಯನ್ನು ಹಚ್ಚಿದ ಹಾಗೆ ಹಚ್ಚಬೇಕು.

ಶೃಂಗಾರವಾದ ತೋಟದಲ್ಲಿ ಮತ್ತು ಉದ್ಯಾನ ವನದಲ್ಲಿ ಹಾಗು ಪುಣ್ಯ ವನಾಂತರದಲ್ಲಿ ಇನ್ನೂ ಕೆಲವು ಸಂಭ್ರಮದ ತೋಟಗಳಲ್ಲಿ ಪುಷ್ಪ ವನದಲ್ಲಿ

ಶೃಂಗಾರಕ್ಕೂ ಶೋಭಾಯಮಾನಕ್ಕೂ ವನ ವಿಸ್ತಾರಕ್ಕೂ ಹಾಕತಕ್ಕ ಸುಂದರವಾದ ಗಂಧಯುಕ್ತವಾದ ಕೆಲವು ಪದಾರ್ಥಗಳುಂಟು. ಅವುಗಳನ್ನು ಸಣ್ಣ ಉಸುಕು ಕೆಂಪು ಮಣ್ಣು ಕಲಿಸಿ ಹಾಕಿದರೆ ಯಾವ ಭೂಮಿಯಲ್ಲಾದರೂ ನೀರು ಸಮೃದ್ಧಿಯಾಗಿದ್ದರೆ ಬೆಳೆಯುತ್ತವೆ. ಅವುಗಳು ಯಾವವೆಂದರೆ, ಗೌಲ ಕಚೂರ ಮುಡಿವಾಳ ಲಾಮಂಚ ಸೋಲು ಕಮರಕ ಸುರವಾರ ಬೂಂದು ಚಹಾ ಕಾಫೀಬೀಜ ಪಚ್ಚ ದವನ ಮುಂತಾದವುಗಳನ್ನು ಹಾಕಬೇಕು. ಇವುಗಳಲ್ಲಿ ಕೆಲವು ಬೀಜಗಳು ಕೆಲವು ಕೊಲ್ಲೆಗಳು ಕೆಲವು ಅಂಟುಗಳನ್ನು ಮಾಡಿ ಹಚ್ಚಬೇಕಾಗುತ್ತದೆ ಅವುಗಳ ವಿವರವು—

| **ಬೀಜಗಳನ್ನು ಹಾಕುವ ಪದಾರ್ಥಗಳು.** | **ಬೇರು, ಅಂಟು, ಕೊಲ್ಲೆ.** |
|---|---|
| ಗೌಲ .. . .. ..... ಬೀಜವು | ಕಚೂರ ....... .. . ... ಬೇರು |
| ಮುಡಿವಾಳ ........ ಬೀಜವು | ಲಾಮಂಚ ............... ಬೇರು |
| ಸೋಲು.. ...... . . ಬೀಜವು | |
| ನೆಲ್ಲಿಯ ಮರಗಳು . . ಬೀಜವು | ಸುರುವಾರ...... .. .... ಕೊಲ್ಲೆ |
| ಬದಾಮಿ........... ಬೀಜವು | ಕಮರಕ....... . ........ ಅಂಟು |
| ಬೂಂದು............ ಬೀಜವು | ಪೇರಲ ನಿಂಬಿಯ ಕುಲಗಳು ಅಂಟು ಮಾಡಿದರೂ ಬರುತ್ತವೆ. |
| ಚಹಾ............. .. ಬೀಜವು | |
| ಕಾಫಿ ........... .. ಬೀಜವು | ಪಚ್ಚ ..................... ಕೊಲ್ಲೆ |
| ದವನ...... ........ ಬೀಜವು | ದಾಳಿಂಬ ....... ...... . ಕೊಲ್ಲೆ |

ಈ ಪ್ರಕಾರ ಕೆಲವು ಪದಾರ್ಥಗಳನ್ನು ಸಂಭ್ರಮಕ್ಕಾಗಿ ತೋಟಗಳಲ್ಲಿ ಉದ್ಯಾನ ವನಗಳಲ್ಲಿ ಪುಣ್ಯ ವನಗಳಲ್ಲಿ ಪುಷ್ಪ ವನಗಳಲ್ಲಿ ಬೆಳೆಸುತ್ತಾರೆ.

## ಬದಾಮಿಯು.

ಬದಾಮು ಯಾಲಕ್ಕಿ ಮೆಣಸು ಜೀರಿಗೆ ಶಾಜೀರಿಗೆ ಹಾಗು ದ್ವೀಪಾಂತರದಿಂದ ಬರುವ ಪದಾರ್ಥಗಳಲ್ಲಿ ಜಾಜೀಕಾಯಿ ಪತ್ರಿ ದಾಲಚಿನ್ನಿ ಕೇಸರಿ ಮೊದಲಾದ ಇನ್ನೂ ಕೆಲವು ಪದಾರ್ಥಗಳನ್ನು ಬೇರೆ ಬೇರೆ ದೇಶಗಳಲ್ಲಿ ಬೆಳೆಸುತ್ತಾರೆ. ಆದರೆ ಈ ಪದಾರ್ಥಗಳು ಎಲ್ಲ ದೇಶಗಳಲ್ಲಿ ಬೆಳೆದರೆ ತಮ್ಮ ಉತ್ಪನ್ನವು ಕಡಿಮೆಯಾದೀತೆಂದು ಅವುಗಳನ್ನು ಮುಗ್ಗು ಹಾಕಿ ನಾಟದಂತೆ ಮಾಡಿ ಈ ದೇಶಕ್ಕೆ ಮತ್ತು ಇತರ ದೇಶಗಳಿಗೆ ಕಳುಹಿಸುತ್ತಾರೆ. ಈ ಮರ್ಮವನ್ನರಿಯದೆ ಅಂಗಡಿಯೊಳಗಿರುವ ಪದಾರ್ಥಗಳನ್ನು ತಂದು ಬಿತ್ತಲಾಗಿ ಅವುಗಳು ನಾಟುವದಿಲ್ಲ. ಅದನ್ನು ನೋಡಿ ಈ ಪದಾರ್ಥಗಳು ಈ ದೇಶದಲ್ಲಿ

ಬೆಳೆಯುವದಿಲ್ಲವೆಂದು ಬಿಡುತ್ತಾರೆ. ಅದು ಕಾರಣ ಇಂಥ ಪದಾರ್ಥಗಳು ಯಾವ ದೇಶಗಳಲ್ಲಿ ಬೆಳೆಯುವವೋ ಅಲ್ಲಿಯ ಬೀಜಗಳಲ್ಲಿ ಮುಗ್ಗು ಹಾಯದೆ ಇದ್ದ ಹೊಸ ಬೀಜಗಳನ್ನು ತರಿಸಿ ಬಿತ್ತಿದರೆ ನಾಟುತ್ತವೆ. ಅವುಗಳಲ್ಲಿ ಬದಾಮಿಯ ಗಿಡಗಳನ್ನು ಬೆಳಿಸುವದು ಹೇಗಂದರೆ, ಬದಾಮಿಯಲ್ಲಿ ಬಹಳ ದಿವಸದ ಹಳೆಯ ಕಾಯಿಗಳನ್ನು ಮತ್ತು ಮುಗ್ಗು ಹಾಯ್ದಿರುವ ಕಾಯಿಗಳನ್ನು ಹಾಗು ಹಳೆಯ ಕಾಯಿಗಳನ್ನು ತಾರದೆ ಬಲಿತ ಹೊಸ ಕಾಯಿಗಳನ್ನು ತಂದು ಯಾವಾಗಲೂ ನೀರು ಹರಿಯುವ ಕಾವಲಿಯ ತಂಪು ನೋಡಿ ತಂಪಿನ ಸ್ಥಳದಲ್ಲಿ ಒಂದು ಮಡಿಯನ್ನು ಮಾಡಿ ಸಣ್ಣ ಉಸುಕನ್ನು ಕೆಮ್ಮಣ್ಣನ್ನು ಕಲಿಸಿ ಆ ಮಡಿಯಲ್ಲಿ ದಪ್ಪಾಗಿ ಹರಹಿ ಈ ಬೀಜಗಳನ್ನು ಕಾಯಿ ಸಹಿತ ಅಡ್ಡ ಇಟ್ಟು ಮೇಲೆ ಸ್ವಲ್ಪ ಮಣ್ಣು ಹಾಕಿ ನೀರು ಹಾಕುತ್ತ ಹಸಿಯಾರದಂತೆ ನೀರು ಬಿಡುತ್ತ ಹೋಪರೆ ಆರು ತಿಂಗಳಷ್ಟಕ್ಕೆ ಸಸಿಯು ಹೊರಗೆ ಹೊರಡುವದು ಅದು ತೀವ್ರವೇ ನಾಟುವದಿಲ್ಲ ಏಕಂದರೆ ಅದರ ಸೊಟ್ಟೆಯು ಬಹಳ ದಪ್ಪಾಗಿ ಮತ್ತು ಬಿಗಿಯಾಗಿ ಇರುವದರಿಂದ ತೀವ್ರವೇ ನೆನೆದು ಮೊಳಕೆ ಹೊರಡುವದಿಲ್ಲ. ಈ ದೇಶದ ಜನರು ಹತ್ತೆಂಟು ದಿವಸ ಅಥವಾ ತಿಂಗಳು ಅಜಮಾಸು ನೋಡಿ ನಾಟುವದಿಲ್ಲದೆಂದು ನೀರು ಹಾಕುವದನ್ನು ಬಿಟ್ಟು ಬಿಡುತ್ತಾರೆ ಹೀಗೆ ಮಾಡದೆ ಈ ಬದಾಮಿಯ ಅಗಿಗಳನ್ನು ಒಂದು ವರ್ಷ ಪರಿಯಂತರ ಚನ್ನಾಗಿ ಬೆಳಿಸಿ ಬೇರೆ ಒಂದು ಕಡೆಗೆ ತಗ್ಗುಗಳನ್ನು ತಯಾರು ಮಾಡಿ ಅಗಿಗಳನ್ನು ಕಿತ್ತಿ ಹಚ್ಚಬೇಕು.

---

# ೧೨ ನೇ ಪ್ರಕರಣವು.

## ಕಬ್ಬು ಹಚ್ಚುವದು.

ಬೆಲ್ಲವೂ ಸಕ್ಕರೆಯೂ ಕಬ್ಬಿನಿಂದ ಹುಟ್ಟುವವು ಕಬ್ಬಿನ ಜೆಲ್ಲೆಯು ಸ್ವಲ್ಪ ಹೆಚ್ಚು ಕಡಿಮೆ ಎಂಟು ಮೊಳ ಅಜಮಾಸು ಬೆಳೆಯುವದು. ಅದು ಈ ದೇಶದ ಯಾವತ್ತೂ ಪ್ರಾಂತಗಳಲ್ಲಿ ಬೆಳೆಯುತ್ತದೆ ಕಬ್ಬಿನಲ್ಲಾದರೂ ಅನೇಕ ಕುಲಗಳುಂಟು. ಅವುಗಳಲ್ಲಿ ರಸದಾಳಿ ಕಬ್ಬು ಎಂದರೂ ದಾಸರ ಕಬ್ಬು ಎಂದರೂ ಒಂದೇ ಮಲಸೀಮೆಯಲ್ಲಿ ಗೋವಾರಿ ಕಬ್ಬು ಎಂದರೂ ಹೊಟ್ಟೆಯ ಕಬ್ಬು ಎಂದರೂ ಒಂದೇ ಪರಿಯಾಯವು ಇದಲ್ಲದೆ ತೆನುಗು ದೇಶದಲ್ಲಿ ಪೆದ್ದಚರಕು ಗನ್ನೇರ ಚರಕು ಎಂದು ಎರಡು ವಿಧವು. ಅವುಗಳಿಗೆ ಕನ್ನಡ ಭಾಷೆಯಲ್ಲಿ ಹಿರೇ ಕಬ್ಬು ಮತ್ತು ಕಣಿಗಿಲ ಕಬ್ಬು ಎನ್ನುತ್ತಾರೆ ಅವುಗಳ ಗಣಿಕೆಗಳು ದೊಡ್ಡವಾಗಿರುತ್ತವೆ. ಮತ್ತು ಚಾಗೇ ಕಬ್ಬು ಕರೀಕಬ್ಬು ಎಂದು ಬೇರೆ ವಿಧಗಳುಂಟು. ಇನ್ನೂ ಅನೇಕ ತರದ ಹೆಸರುಳ್ಳ ಕಬ್ಬುಗಳಿದ್ದರೂ ಅವುಗಳೆಲ್ಲ ಸವಿಯಾಗಿದ್ದು ಅವುಗಳ ರಸದಿಂದ ಬೆಲ್ಲವೂ ಸಕ್ಕರೆಯೂ ಆಗುತ್ತವೆ

ಕಬ್ಬಿನ ಪೈರು ಮಾಡುವ ವಿಧವು ಹೇಗಂದರೆ, ಸವಿನೀರು ಇರುವ ತೋಟಗಳಲ್ಲಿ ಕಬ್ಬನ್ನು ಹಚ್ಚಬೇಕು ಸವಿನೀರಿನಿಂದ ಬೆಳೆದ ಕಬ್ಬಿನ ಬೆಲ್ಲವು ಕೆಡುವದಿಲ್ಲ ಸೌಳು ನೀರಿನಿಂದಾದರೂ ಕಬ್ಬು ಬೆಳೆಯುವದು ಆದರೆ ಅದರ ಬೆಲ್ಲವು ಸೌಳಾಗುವದು ಹಾಗೂ ರಾಡಿಯಾಗುವದು ಅದು ಕಾರಣ ಸವಿ ನೀರು ಇದ್ದಲ್ಲಿ ಕಬ್ಬನ್ನು ಹಚ್ಚಬೇಕು ಕಬ್ಬಿನ ಹೊಲದಲ್ಲಿ ಸ್ವಲ್ಪಾದರೂ ಕರಿಕೆ ಇರಬಾರದು ಆ ಭೂಮಿಗೆ ಗೊಬ್ಬರದ ಬಲಾತ್ಕಾರ ವಿಶೇಷವಾಗಬೇಕು ಮೊದಲು ಗೊಬ್ಬರ ಹಾಕಿ ಎರಡು ಸಾಲು ನೇಗಿಲೆಯನ್ನು ಹೊಡೆದು ಪುನಃ ಗೊಬ್ಬರ ಹಾಕಿ ದೊಡ್ಡ ಕುಂಟೆಯಿಂದ ಮೂರು ಸಾಲು ಚನ್ನಾಗಿ ಹರಿಗಿ ಮಣ್ಣು ಮೆತ್ತಗಾಗುವ ಹಾಗೆ ಮಾಡಿ ಬೋದು ಎಳಿಸಿ ಕಾವಲಿಯನ್ನು ತಿದ್ದಿಕೊಂಡು ಆ ಬೋದಿಗೆ ಗೊಬ್ಬರ ಹಾಕಿ ಭೂಮಿಯನ್ನು ತಯಾರುಮಾಡಬೇಕು.

ಬೀಜದ ಕಬ್ಬುಗಳನ್ನು ತಂದು ಗುದ್ದುಮೊಳ ಅಥವಾ ಗೇಣು ಗೇಣು ತುಂಡುಗಳನ್ನು ಮಾಡಬೇಕು ಆ ತುಂಡುಗಳ ನಡುವೆ ಗಣಿಗಲುಗಳನ್ನು ಉಳಿಸಿ ಕಡಿದಿರಬೇಕು. ಆ ಕಬ್ಬನ್ನು ಹಚ್ಚಬೇಕಾದರೆ ಮುಂದೆ ಮುಂದೆ ಬೋದುಗಳಿಗೆ ನೀರು ಬಿಡುತ್ತ ಆ ನೀರಿನಲ್ಲಿ ಈ ಕಬ್ಬಿನ ಬೀಜದ ಗಣಿಕೆಗಳನ್ನು ತುಳಿಯುತ್ತ ಹೋಗಬೇಕು. ಹೀಗೆ ಹೊಲವೆಲ್ಲ ಗಣಿಕೆಗಳ ಹೊಂದಿಗೆ ಗಣಿ

ಕೆಗಳನ್ನು ತುಳಿಯುತ್ತ ಕಬ್ಬಿನ ಬೀಜಗಳನ್ನು ಹಚ್ಚಿ ನೀರು ಕಟ್ಟುತ್ತ ಹೋಗ ಬೇಕು. ಹಾಗು ಕಬ್ಬು ಹಚ್ಚಿದ ಮೇಲೆ ಹಸಿಯಾರದಂತೆ ನೀರು ಕಟ್ಟಬೇಕು. ಕಬ್ಬು ಬಾಡಿದರೆ ಗೊರಲಿ ಹತ್ತುತ್ತದೆ. ಇದಲ್ಲದೆ ಕಲವು ದಿವಸದ ಮೇಲೆ ಕಬ್ಬಿನಲ್ಲಿ ಸದೆಯನ್ನು ತೆಗಿಸಿ ಮತ್ತೂ ಗೊಬ್ಬರವನ್ನು ಹಾಕಬೇಕು. ಕಬ್ಬು ಸ್ವಲ್ಪ ಬೆಳೆಯುತ್ತ ಬಂದ ಮೇಲೆ ಒಂದಾವರ್ತಿ ಸರವು ಕಡಿಸಬೇಕು. ಹಾಗು ಕಬ್ಬು ಸ್ವಲ್ಪ ಎತ್ತರವಾಗುವ ವರೆಗೂ ಸದೆಯು ಹುಟ್ಟುತ್ತ ಹೋದ ಹಾಗೆ ಎರಡು ಮೂರು ವೇಳೆ ಸದೆಯನ್ನು ತಗಿಸಬೇಕು. ಈ ಪ್ರಕಾರ ಯತ್ನ ಮಾಡಿ ಸದೆಯನ್ನು ತೆಗಿಸಿ ಹದದ ಮೇಲೆ ನೀರು ಕಟ್ಟುತ್ತ ಹೋದರೆ ಹನ್ನೊಂದು ತಿಂಗಳಿಗೆ ಕಬ್ಬು ಬಲಿಯುವದು. ಬಲಿತ ಕಬ್ಬುಗಳನ್ನು ಗಾಣಕ್ಕೆ ಹಾಕಿ ಬೆಲ್ಲವನ್ನು ಮಾಡಬೇಕು

ಕಬ್ಬಿನ ಬೀಜಗಳನ್ನು ಹಚ್ಚುವ ಕಾಲವು ಮಾರ್ಗಶೀರ್ಷ ಪುಷ್ಯಮಾಸ ಗಳಲ್ಲಿ ಅಥವಾ ಮಾಘ ಫಾಲ್ಗುಣದಲ್ಲಿ ಹಚ್ಚಬೇಕು. ಚೈತ್ರ ವೈಶಾಖ ಜ್ಯೇಷ್ಠದಲ್ಲಿ ಕಬ್ಬನ್ನು ಹಚ್ಚಿದರೆ ಬೆಲ್ಲ ಕಡಿಮೆಯಾಗುವದು ಅಥವಾ ಸಕ್ಕರಿ ಯಾದರೂ ವಿಶೇಷವಾಗದು. ಯಾತಕ್ಕೆಂದರೆ ಕಬ್ಬು ಸಮಗ್ರ ಬೆಳೆನು ಬಲಿತು ಬೆಲ್ಲವಾಗುವದಕ್ಕೆ ಬರಬೇಕಾದರೆ ಹನ್ನೊಂದು ತಿಂಗಳು ಬೇಕು. ಅಥವಾ ಸಕ್ಕ ರೆಯಾಗಬೇಕಾದರೆ ಹನ್ನೆರಡು ತಿಂಗಳದ ಕಬ್ಬು ಬೇಕು. ಆ ಸಕ್ಕರೆಯಲ್ಲಿ ಜವಾರೀ ಸಕ್ಕರೆಗೆ ಮಗದುಮ ಸಕ್ಕರಿ ಎನ್ನುತ್ತಾರೆ. ಮತ್ತ ಸ್ವಲ್ಪ ಹೆಚ್ಚು ಮೆಹನತಿಯಿಂದ ಮಾಡಿದ ಬಿಳಿಯ ಸಕ್ಕರೆಗೆ ಚಿನ್ನೀ ಸಕ್ಕರಿ ಎನ್ನುತ್ತಾರೆ. ಈ ಚಿನ್ನೀಸಕ್ಕರೆಯನ್ನು ಚೀನ ದೇಶದಲ್ಲಿ ಮತ್ತು ಉಮರಾವತೀ ಕಾಶೀ ಪ್ರಾಂತದಲ್ಲಿ, ಅದಲ್ಲದೆ ಈ ದೇಶದಲ್ಲಿಯಾದರೂ ಕೆಲವು ಹಲವಾಗಾರರು, ಒಳ್ಳಾರಿಯಲ್ಲಿ ಮತ್ತು ಹೈದರಾಬಾದ ಶಹರದಲ್ಲಿ ಮತ್ತು ನೊಲ್ಲಾಪೂರ ಮುಂ ತಾದ ದೊಡ್ಡ ದೊಡ್ಡ ಶಹರುಗಳಲ್ಲಿ ಬಿಳೀ ಸಕ್ಕರೆಯನ್ನು ಮಾಡುತ್ತಾರೆ. ಮತ್ತು ಬಲಿತ ಹನ್ನೆರಡು ತಿಂಗಳದ ಕಬ್ಬಿನಿಂದ ಬೆಲ್ಲವಾದರೂ ಚನ್ನಾಗಿ ಆಗುವದು. ಅದರಲ್ಲಿ ಹನ್ನೊಂದು ತಿಂಗಳದ ಕಬ್ಬಿನಿಂದ ಬೆಲ್ಲವಾಗುವದೇ ಹೊರ್ತು ಸಕ್ಕರೆಯೂ ಬಿಳಿಯ ಸಕ್ಕರೆಯೂ ಆಗುವದಿಲ್ಲ ಉಸುಕಿನ ಭೂಮಿಗೆ ಮತ್ತು ಕೆಂಪು ಮಸಬಿನ ಭೂಮಿಗೆ ಹಾಗು ಉಸುಕು ಪಡಿಭೂಮಿಗೆ ಉತ್ತಮ ತರದ ಸಕ್ಕರೆಯಾಗುವದು. ಕಪ್ಪು ಕರಲು ಭೂಮಿಗೆ ಮಧ್ಯಮವಾಗುವದು. ಅದು ಕಾರಣ ಕಬ್ಬಿನ ಬೀಜವನ್ನು ಮಾರ್ಗಶೀರ್ಷ ಪುಷ್ಯ ಮಾಘ ಫಾಲ್ಗುಣ ಈ ನಾಲ್ಕು ತಿಂಗಳಲ್ಲಿ ಹಚ್ಚಬೇಕು ಮತ್ತು ಚೈತ್ರದಲ್ಲಿ ಕಬ್ಬಿನ ಬೀಜವನ್ನು ಹಚ್ಚುವದು ಮಧ್ಯಮವು. ವೈಶಾಖದಲ್ಲಿ ಹಚ್ಚುವದು ಕನಿಷ್ಠವು. ಜ್ಯೇಷ್ಠ ದಲ್ಲಿ ಸರ್ವಥಾ ಕಬ್ಬನ್ನು ಹಚ್ಚಲಾಗದು.

ಸೌಳು ನೀರಿನ ಭೂಮಿಯಲ್ಲಿ ಕಬ್ಬು ಹಚ್ಚಿದರೆ ಆ ಸೌಳು ನೀರಿನ ಕಾರಕ್ಕೆ ಕಬ್ಬು ಚೆನ್ನಾಗಿ ಬೆಳೆದು ನೀರಿನ ಗುಣದಿಂದ ರಾಡಿಯಾಗುವದು ಬೆಲ್ಲ ಕೆಡುವದು. ಒಂದು ವೇಳೆ ಅಂಥ ಭೂಮಿಯಲ್ಲಿ ಕಬ್ಬನ್ನು ಹಚ್ಚಿದರೆ ಅದನ್ನು ಹನ್ನೆರಡು ತಿಂಗಳ ವರೆಗೂ ಬಲಿಸಿ ಗಾಣಕ್ಕೆ ಹಾಕಿ ಆ ರಸವನ್ನು ಪಾಕ ಮಾಡುವಲ್ಲಿ ಸ್ವಲ್ಪ ಸುಣ್ಣವನ್ನು ಹಾಕಿ ಹದಕ್ಕೆ ತಂದರೆ ಬೆಲ್ಲವು ಗಟ್ಟಿ ಯಾಗುವದು ಮತ್ತು ನೋಟಕ್ಕೆ ಚನ್ನಾಗಿ ಕಾಣುವದು ಅದರ ರುಚಿಯು ಸ್ವಲ್ಪ ಕಾರದ ಮೇಲೆ ಸೌಳಾಗಿದ್ದು ಭೋಜನಕ್ಕೆ ರುಚಿಕರವಾಗದೆ ಇರುವದು ಆದರೆ ಅಂಥ ಸೌಳು ನೀರಿನ ಭೂಮಿಯಲ್ಲಿ ಅರಿಷಿಣ ಮೆಣಸಿನ ಗಿಡ ಉಳ್ಳಿ ಬಳ್ಳೊಳ್ಳಿ ಗೆಣಸು ಬಾಳೆಯ ಗಿಡಗಳು ಚನ್ನಾಗಿ ಬೆಳೆಯುವವು. ಮತ್ತು ಕೆಲವು ಪ್ರಕಾರದ ಕಾಯಿಪಲ್ಲೆ ಮುಂತಾದವುಗಳು ಜವಿಯ ಗೋದಿ ಕಸಕಸಿ ಜೀರಿಗೆ ಶಾಜೀರಿಗೆ ಮೆಂತೆ ಸಾಸಿವೆ ಮೊದಲಾದವುಗಳು ವಿಶೇಷವಾಗಿ ಬೆಳೆಯುವ ದಕ್ಕೆ ಏನೇನೂ ಆತಂಕವಿಲ್ಲ

ಕಬ್ಬು ಬೆಳೆಯುವಲ್ಲಿ ಆಶ್ಲೇಷಾ ಮಘಾ ಮಳೆಯಲ್ಲಿ ಸರವು ಕಡಿದು ಗೊಬ್ಬರವನ್ನು ಹಾಕಿ ಬೋದು ಮುಚ್ಚಿ ನೀರು ಬಿಡುತ್ತ ಹೋಗುವಲ್ಲಿ ಗೊಬ್ಬರದ ಸೊಕ್ಕಿನಿಂದ ಬೆಳೆದು ಉನ್ನತವಾಗಿ ಗರಿಗಳ ಭಾರಕ್ಕೆ ಅಡ್ಡ ಬಿದ್ದು ಅಲ್ಲಲ್ಲಿಯೇ ಬೇರು ಬಿಟ್ಟು ಹಾಲು ಕಟ್ಟಿ ಮುಂದಿನ ನೋಗೆಯ ಕಡೆಗೆ ಹಸರೇರುತ್ತ ಹೋದ ಹಾಗೆ ಅಂಥ ಕಬ್ಬುಗಳನ್ನು ಗಾಣಕ್ಕೆ ಹಾಕಿದರೆ ಬೆಲ್ಲವು ರಾಡಿಯಾಗಿ ಕೆಡುವದು ಆದದರಿಂದ ಕಬ್ಬು ಬೆಳೆಯುವ ಸಮಯ ದಲ್ಲಿ ಒಂದು ಫೇರಿ ಬರುವದನ್ನು ನೋಡಿ ಆ ಕಬ್ಬಿನ ನಾಲ್ಕು ಕಡೆಗೂ ಅದರ ಭಾರದ ತೂಕವನ್ನು ನೋಡಿ, ಹತ್ತು ಹದಿನೈದು ಇಪ್ಪತ್ತು ಕಬ್ಬು ಗಳನ್ನು ಒಂದುಗೂಡಿಸಿ ಮೆಳೆಗಳಿಂದ ಸಿವಡು ಕಟ್ಟಿ ನಾಲ್ಕು ಅಥವಾ ಮೂರು ಕಾಲು ಆಗುವ ಹಾಗೆ ಮಾಡಿ ನಿಲ್ಲಿಸಿ ಮೊದಲು ಒಂದು ಹಗ್ಗ ದಿಂದ ಬಿಗಿದು ಕಟ್ಟಿ ಆ ಮೇಲೆ ಬಾಳೆಯ ಸೊಪ್ಪಿನಿಂದಾಗಲಿ ಅಥವಾ ಮತ್ತಾವ ಪ್ರಕಾರದ ಬಳ್ಳಿಗಳಿಂದಾಗಲಿ ಇಲ್ಲವೆ ಕೇದಿಗೆಯ ಎಲೆಗಳ ಸೀಳಿ ನಿಂದಾಗಲಿ ಬಿಗಿದು ಕಟ್ಟಿ ನೆಲಕ್ಕೆ ಬೀಳದ ಹಾಗೆ ಬೆಳೆಯುವ ಹಾಗೆ ನಿಲ್ಲಿಸಿ ಹಗ್ಗವನ್ನು ಬಿಚ್ಚಿಕೊಳ್ಳಬೇಕು ಇದರಂತೆ ಎರಡು ಮೊಳ ಅಥವಾ ಮೂರು ಮೊಳ ಕಬ್ಬು ಬೆಳೆಯುವದರೊಳಗೆ ಆ ಹೊಲದ ಯಾವತ್ತು ಕಬ್ಬುಗಳನ್ನು ಹೀಗೆಯೇ ಕಟ್ಟಿಸಿ ನಿಲ್ಲಿಸಿ ನೆಲಕ್ಕೆ ಬೀಳಗೊಡದ ಹಾಗೆ ಮಾಡಿದರೆ ಬೆಲ್ಲವು ಅತ್ಯುತ್ತಮವಾಗುತ್ತದೆ.

ಕಬ್ಬಿನ ಗಾಣಕ್ಕೆ ಆಲಿಯ ಗಾಣವೆನ್ನುತ್ತಾರೆ. ಬೆಲ್ಲವನ್ನು ಮಾಡುವ ನೆಗೆ ಆಲಿಯ ಮನೆ ಎನ್ನುತ್ತಾರೆ. ಕಬ್ಬಿನ ಗಾಣವನ್ನು ಹಾಕುವ ಕಾಲವು

ಯಾವದೆಂದರೆ ಮಾರ್ಗಶೀರ್ಷ ಪುಷ್ಯದಲ್ಲಿ. ಕಬ್ಬನ್ನು ಗಾಣಕ್ಕೆ ಹಾಕಿ ಬೆಲ್ಲವನ್ನು ಮಾಡಿದರೆ ಚಳಿಗಾಲದ ವಿಷಯವಾಗಿ ಹಾಲು ವಿಶೇಷ ಹೊರಡುವದು ಬೆಲ್ಲವು ಚಳಿಗಾಲದಲ್ಲಿ ರಸ ಹೀರಿ ಗಟ್ಟಿಯಾಗುವದು ಮತ್ತು ಮಾಘ ಫಾಲ್ಗುಣದಲ್ಲ ಗಾಣವನ್ನು ಹಾಕಿದರೆ ಅಷ್ಟರಲ್ಲಿ ಬಿಸಿಲು ಬಲಿತು ಕಬ್ಬಿನ ಹಾಲು ಸ್ವಲ್ಪ ಕಡಿಮೆ ಆಗುವದು ಆದಾಗ್ಯೂ ಬೆಲ್ಲವು ಕೆಡುವದಿಲ್ಲ ಹಾಗೂ ಚೈತ್ರ ವೈಶಾಖದಲ್ಲಿ ಗಾಣವನ್ನು ಹಾಕಿದರೆ ಬೇಸಿಗೆಯ ಬಿಸಲಿನ ಜಳಕ್ಕೆ ಕಬ್ಬು ಕಾಯ್ದು ಹಾಲು ಕೆಟ್ಟು ಮತ್ತು ಹಾಲು ಆರಿ ಬಹಳ ಕಡಿಮೆಯಾಗಿ ಅರ್ಧ ತೂಕಕ್ಕೆ ಬರುವದು. ಮತ್ತು ಬೆಲ್ಲವಾದರೂ ಸ್ವಲ್ಪ ಹೊರಡುವದು ಎತ್ತುಗಳಿಗೂ ಮನುಷ್ಯರಿಗೂ ಆ ಕಾಲದ ಗಾಣದಿಂದ ಆಯಾಸವಾಗುವದು. ಆದರೆ ಆ ಕಾಲದಿಂದ ಬೆಲ್ಲವಾದರೂ ಸ್ವಲ್ಪ ಮೃದು ಹುಟ್ಟುವದು ಉತ್ತಮ ಭೂಮಿಯಾಗಿ ಚಲೋ ಸವಿ ನೀರಿನಿಂದ ಬೆಳೆದಿರುವ ಬಲಿತ ಕಬ್ಬುಗಳಾದರ ಆ ಕಾಲದ ಗಾಣದಿಂದ ಬೆಲ್ಲವು ಹದಕ್ಕೆ ಬಂದು ಬೆಲ್ಲವು ಗಟ್ಟಿಯಾಗುವದು ಆದರೆ ಭೂಮಿಯೂ ನೀರೂ ಸಾಮಾನ್ಯವಾಗಿದ್ದು ಚೈತ್ರ ವೈಶಾಖ ಜ್ಯೇಷ್ಠದಲ್ಲಿ ಹಾಕಿದ ಗಾಣದಿಂದ ಬೆಲ್ಲವು ಕೆಟ್ಟು ಅರ್ಧ ಕಡಿಮೆಯಾಗುವದು ಮತ್ತು ಜಳದಿಂದ ರಾಡಿಯಾಗುವದು ಅಂಥ ರಾಡಿ ಬೆಲ್ಲವನ್ನು ಹರಿವೆಗಳಲ್ಲಿ ಗಡಿಗೆಗಳಲ್ಲಿ ತುಂಬಿಟ್ಟು ಸರಾಯಿಗಾರರಿಗೆ ಬೇಡಿದ ಹಾಗೆ ಕೊಡಬೇಕಾಗುತ್ತದೆ. ಅದು ಮಾರಾಟಕ್ಕೆ ರಚನೆ ಆಗುವದಿಲ್ಲ ಮತ್ತ ಒಂದೊಂದು ಸಮಯದಲ್ಲಿ ಮಳೆಯು ಹತ್ತಿದರೆ ಗಾಣಕ್ಕೂ ಬೆಲ್ಲ ಮಾಡುವದಕ್ಕೂ ಅನೇಕ ರೀತಿಯಿಂದ ತೊಂದರೆಯಾಗುತ್ತದೆ

ಗಟ್ಟಿಯಾದ ಚಲೋ ಬೆಲ್ಲವನ್ನು ಮಾಡಿ ಆದರ ಕ್ರಯವು ಹೆಚ್ಚಾಗುವವರೆಗೂ ಕೆಲವು ದಿವಸ ಬೆಲ್ಲ ಕೆಡದ ಹಾಗೆ ಮಡಗುವ ಆಲೋಚನೆಯು ನಾಲದೆ ಆ ಕ್ಷಣದಲ್ಲಿಯೇ ಆದ ಹಾಗೆ ಮಾರುತ್ತಾರೆ ಹಾಗೆ ಮಾಡದೆ ಕೆಲವು ದಿವಸ ಮಡಗಬೇಕಾದರೆ ಪೆಂಟೆಗಳನ್ನಾಗಲಿ ಹಲಿಗೆಗಳನ್ನಾಗಲಿ ಚಾಪೆಯ ಚೀಲದಲ್ಲಿ ಅಥವಾ ಕಪ್ಪಡದ ಚೀಲದಲ್ಲಿ ಇಲ್ಲವೆ ಹಳೆಯ ಅರಿವೆಗಳಲ್ಲಿ ಕಟ್ಟಿ, ಬಹಳವಾಗಿದ್ದರೆ ಕಣಜಗಳಲ್ಲಿ ಸ್ವಲ್ಪ ಇದ್ದರೆ ಗುಮ್ಮಿ ಗಳಿಗೆಗಳಲ್ಲಿ ಇಡಬೇಕಾದರೆ ಜವಿಯ ಗೋಡಿಯನ್ನು ಬೆಳೆದಿದ್ದರೆ ತಳದಲ್ಲಿ ಒಂದು ಗೇಣು ಜವಿಯನ್ನು ಹಾಕಿ ಆದರ ಮೇಲೆ ಬೆಲ್ಲದ ಪೆಂಟೆಗಳನ್ನಿಟ್ಟು ಸಂದು ಸಂದಿಗೆ ಇಳಿಯುವ ಹಾಗೆ ಜವಿಯನ್ನು ಸುರಿವಿ ಅವರ ಮೇಲೆ ಮತ್ತೂ ಬೆಲ್ಲವನ್ನಿಟ್ಟು ತರತರಕ್ಕೆ ಜವಿಯನ್ನು ಸುರಿಯುತ್ತ ಯಾವತ್ತು ಬೆಲ್ಲವನ್ನು ಮಡಗಿದ ಮೇಲೆ ಒಂದು ಗೇಣು ಎತ್ತರವಾಗಿ ಜವಿಯನ್ನು ಹಾಕಿ ಬಿಡಬೇಕು. ಆ ಬೆಲ್ಲವು ಎಷ್ಟು ದಿವಸ ಇಟ್ಟಾಗ್ಯಾದರೂ ಕೆಡುವದಿಲ್ಲ ಮತ್ತು ಇರುವೆ ಹತ್ತುವದಿಲ್ಲ ಹಾಗೂ ಮಳೆಗಾಲದಲ್ಲಿ ಬಸಿದು ನೀರು ಒಡೆಯುವದಿಲ್ಲ.

ಜವಿಯು ಇಲ್ಲದಿದ್ದರೆ ಕುಸಿಬಿಯನ್ನಾಗಲಿ ನವಣಿಯನ್ನಾಗಲಿ ರಾಗಿಯನ್ನಾಗಲಿ ಸಾವಿಯನ್ನಾಗಲಿ ಇದರಂತೆ ಹಾಕಿ ಇಟ್ಟರೆ ಬರುತ್ತದೆ. ಈ ಧಾನ್ಯದ ಜೀನಸುಗಳಿಲ್ಲದಿದ್ದರೆ ಉಸುಕನ್ನಾದರೂ ಹಾಕಿದರೆ ಬರುತ್ತದೆ.

ಬಹು ಕುಶಲರಾದ ಕೃಷಿಕರು ಕಬ್ಬಿನಿಂದ ಸಕ್ಕರೆಯನ್ನಾದರೂ ಮಾಡ ಬಹುದು. ಕೆಂಪು ಸಕ್ಕರೆಯನ್ನು ಮಾಡಬೇಕಾದರೆ ಮಸಬು ಭೂಮಿಯಲ್ಲಿ ಬೆಳೆದ ಹನ್ನೆರಡು ತಿಂಗಳು ಬಲಿತ ಕಬ್ಬುಗಳನ್ನು ಚಳಿಗಾಲದಲ್ಲಿ ಗಾಣಕ್ಕೆ ಹಾಕಿ ತುದಿಯ ಕಡೆಯ ಕಬ್ಬು ಒಂದು ಮೊಳವನ್ನು ಕಡಿದು ಬೀಜಕ್ಕೆ ಇಟ್ಟು ಉಳಿದ ಕಬ್ಬಿನ ಹಾಲು ತೆಗೆದು ಕಡಾಯದಲ್ಲಿ ಹಾಕಿ ಕುದಿಸುವಲ್ಲಿ ಬೆಲ್ಲದಕಿಂತಲೂ ಸ್ವಲ್ಪ ಎಳೆಗಾವಿನ ಮೇಲೆ ಇಳಿಸಿ ಮಡಿಗೆ ಹಾಕಿ ಆರಬಿಟ್ಟು ಬೆಲ್ಲದ ಗೋರಿಗಳಿಂದ ತಿಕ್ಕಲು ರಾಶೀ ಕೆಂಪು ಸಕ್ಕರೆ ಯಾಗುತ್ತದೆ ಅದಾದರೂ ತಿಕ್ಕುವ ಹದದ ಮೇಲೆ ಬಿಳುವಾಗಿ ಉತ್ತಮ ತರದ ಸಕ್ಕರೆಯಾಗುವದು

ಬಿಳಿಸಕ್ಕರೆ ಹುರಿಸಕ್ಕರೆ ಕಲ್ಲುಸಕ್ಕರೆ ಗಡಿಗಿ ನಾಬತ್ತು ಮೊದಲಾದ ಸಕ್ಕರೆಗಳನ್ನು ಮಾಡುವದಕ್ಕೆ ಸ್ವಲ್ಪ ಶ್ರಮವಾದುದರಿಂದ ಕೃಷಿಕರು ಮಾಡ ಲಾರರೆಂದು ಬರೆಯಲಿಲ್ಲ ಅಂಥ ಸಕ್ಕರೆಯನ್ನು ಹಲವಾಗಾರರು ಕಾಶಿಯ ಪ್ರಾಂತದಲ್ಲಿ ಚೀನ ದೇಶದಲ್ಲಿ ಮಾರವಾಡ ದೇಶದಲ್ಲಿ ಉಮರಾವತಿ ಮತ್ತು ಕಲ್ಯಾಣ ಸೀಮೆಯಲ್ಲಿ ಹಾಗೂ ಹೈದರಾಬಾದ ಮುಂಶಾದ ಪೇಟೇಮನ ಪುರ ಪಟ್ಟಣ ಶಹರಗಳಲ್ಲಿ ಹಲವಾಗಾರರು ಮಾಡುತ್ತಾರೆ.

## ೧೩ ನೇ ಪ್ರಕರಣವು.

### ಅರಿಷಿಣ ಮೆಣಸಿನ ಗಿಡಗಳು.

ಅರಿಷಿಣವು ಈ ದೇಶದಲ್ಲಿ ಮತ್ತು ಸಮಸ್ತ ಪ್ರಾಂತಗಳ ತೋಟಗಳಲ್ಲಿ ಗೊಬ್ಬರವನ್ನು ವಿಶೇಷವಾಗಿ ಹಾಕಿದರೆ ಎಲ್ಲಾದರೂ ಬೆಳೆಯುತ್ತದೆ. ಅರಿಷಿಣದ ಪೈರು ಮಾಡುವದು ಹೇಗಂದರೆ, ಭೂಮಿಯು ಬಲಾತ್ಕಾರವಿದ್ದ ಹಾಗೆ ಉತ್ತಮ ಭೂಮಿಯಾದರೆ ಒಂದು ಎಕರೆ ಭೂಮಿಗೆ ನೂರು ಅಥವಾ ವಿಶೇಷ ಬೆಳೆಯಾದರೆ ಸವ್ವಾನೂರು ಮಣ ಒಣ ಅರಿಷಿಣವು ಹೊರಡುವದು. ಅರಿಷಿಣವನ್ನು ಹಚ್ಚುವದಕ್ಕೆ ಶ್ರಮವಾದರೂ ಬಹಳ ಬೇಕಾಗುವದಿಲ್ಲ. ಅರಿಷಿಣದ ಬೆಳೆಯು ಹಾಳು ಭೂಮಿಯಲ್ಲಿ ಕಪ್ಪು ಮೊರಡಿಗಳಲ್ಲಿ ಗರಸು ಮಸಾರಿಗಳಲ್ಲಿ ಕೆಂಪು ಮಸಾರೆಯಲ್ಲಿ ಉಸುಕು ಭೂಮಿಯಲ್ಲಿ ಉಸುಕು ಪಡಿಭೂಮಿಯಲ್ಲ ಎಂಥ ಕನಿಷ್ಠ ಭೂಮಿಯಲ್ಲಿ ಸಹ ತೋಟವನ್ನು ಮಾಡಿದ್ದಾದರೆ ಯಾವತ್ತು ಭೂಮಿಗಳಲ್ಲಿ ಗೊಬ್ಬರದ ಬಲಾತ್ಕಾರವಿದ್ದರೆ ಸಾಕು, ಅರಿಷಿಣದ ಬೆಳೆಯಾಗುದು

ಅರಿಷಿಣದ ಪೈರು ಮಾಡಬೇಕಾದರೆ ಮೊದಲು ಗೊಬ್ಬರವನ್ನು ಹಾಕಿ ಎರಡು ಸಾಲು ನೇಗಿಲೆಯನ್ನು ಹೊಡೆದು ಚನ್ನಾಗಿ ಹರಿಗಿ ಪುನಃ ಗೊಬ್ಬರವನ್ನು ಹಾಕಿ ನೇಗಿಲೆಯನ್ನು ಹೊಡೆದು ಹರಿಗಿ ಹೊಲವನ್ನು ಮೆತ್ತಗ ಮಾಡಿ ಪುನಃ ಗೊಬ್ಬರವನ್ನು ಹಾಕಿ ತೋಟದಲ್ಲಿ ಮೆಣಸಿನ ಗಿಡಗಳನ್ನು ಹಚ್ಚುವದಕ್ಕೆ ಬೋದು ಮಾಡಿ ನೀರಿನ ಕಾವಲಿಯನ್ನು ತಿದ್ದಿಕೊಂಡು ಆ ಬೋದಿನ ತಳದಲ್ಲಿ ಎರಡೂ ಪೈಯಲ್ಲಿ ಗೇಣಿಗೊಂದು ಅಥವಾ ಚೋಟಿಗೊಂದರಂತೆ ಅರಿಷಿಣದ ಬೀಜವನ್ನು ಊರಿ ನೀರು ಬಿಡಬೇಕು ಮತ್ತು ಬೋದು ನೆನೆದು ಹಸಿಯಾದ ಮೇಲೆ ಬೋದಿನ ತಲೆಯ ಮೇಲೆ ಒಂದುವರೆ ಮೊಳ ಅಂತರವಾಗಿ ಎರಡೆರಡು ಮೆಣಸಿನ ಅಗಿಗಳನ್ನು ಹಚ್ಚಬೇಕು

ಬೀಜದ ಅರಿಷಿಣವೆಂದರೆ ಕುದಿಸದೆ ಇದ್ದ ಅರಿಷಿಣವು. ಅದು ಕುದಿಸಿದ ಮೇಲೆ ನಾಟುವದಿಲ್ಲ ಕುದಿಸದೆ ಇದ್ದ ಅರಿಷಿಣದ ರಾಶಿಯಲ್ಲಿ ದೊಡ್ಡ ಗಡ್ಡೆಗಳನ್ನು ಬಿಟ್ಟು ಸಣ್ಣ ಸಣ್ಣ ಬೋಟು ಬೇರುಗಳನ್ನು ಆರಿಸಿ ತುಂಬಿ ಇಟ್ಟರೆ ಅವುಗಳೇ ಬೀಜಕ್ಕೆ ಬರುವವು.

ಮೊದಲು ಹರಿಗಿ ಬೋದು ಮಾಡಿ ಒಣ ಬೋದಿನಲ್ಲಿಯೇ ಬೋದಿನ ತಳದಲ್ಲಿ ಚೋಟಿ ಚೋಟಿ ಅಂತರವಾಗಿ ಎರಡೂ ಪೈಯಲ್ಲಿ ಬೋದಿನ ತಳ

ದಲ್ಲಿ ಅರಿಶಿಣದ ಬೀಜವನ್ನು ಊರಿ ನೀರು ಬಿಡಬೇಕು ಬೋದುಗಳು ಸಹಿತ ನೀರು ಉಂಡು ಹಸಿಯಾದ ಮೇಲೆ ನಡುವಿನ ಬೋದಿನ ತಲೆಯ ಮೇಲೆ ಒಂದುವರೆ ಮೊಳ ಅಂತರವಾಗಿ ಎರಡೆರಡು ಮೆಣಸಿನ ಅಗಿಗಳನ್ನು ಹಚ್ಚಬೇಕು.

ಅರಿಶಿಣದ ಬೀಜವನ್ನು ಹಾಕುವ ಕಾಲವು ರೋಹಿಣಿ ಅಥವಾ ಮೃಗಶಿರ ಆರದ್ರಿಯ ವರೆಗೂ ಹಾಕಬೇಕು ಅರಿಶಿಣದಲ್ಲಿ ಮೆಣಸಿನ ಗಿಡಗಳನ್ನು ಹಚ್ಚಿದರೆ ಮೆಣಸಿನ ಗಿಡದ ಕಾರಕ್ಕೆ ಅರಿಶಿಣದ ಬೆಳೆಯು ವಿಶೇಷವಾಗುವದು ಮತ್ತು ಅರಿಶಿಣದ ಸನ್ನಿಧಿಯಿಂದ ಮೆಣಸಿನ ಗಿಡಗಳು ಕೆಡದೇ ಇರುವವು ಅವುಗಳ ಬೆಳೆಯೂ ಕಾಯಿಗಳೂ ವಿಶೇಷವಾಗುವವು. ಅರಿಶಿಣದ ಬೆಳೆಯು ಬರುವದಕ್ಕಿಂತ ಮೊದಲೇ ಎರಡು ಮೂರು ತಿಂಗಳಲ್ಲಿ ಮೆಣಸಿನ ಕಾಯಿಗಳಾಗಲಾರಂಭಿಸಿ ಮುಂದೆ ನಾಲ್ಕು ತಿಂಗಳ ವರೆಗೂ ಕಾಯಿಗಳಾಗುತ್ತ ಇರುವವು.

ಅರಿಶಿಣವನ್ನು ಬಾಹುಲ್ಯವಾಗಿ ಹಚ್ಚಬೇಕಾದರೆ ಮಡಿಕೆಯ ಸಾಲು ಹಾಸಿ ನಾಲಿನೊಳಗೆ ಚೋಟಿಗೊಂದು ಬೀಜ ಬೀಳುವಂತೆ ಹಾಕುತ್ತ ಹೋಗಬೇಕು ಆ ಮೇಲೆ ಚೌಕಾಗಿ ಮಡಿಗಳನ್ನು ಮಾಡಿ ನೀರು ಬಿಡಬೇಕು ಆ ಮಡಿಗಳಲ್ಲಿ ಆದರೂ ಅಂಗಲಾಗಿ ಮೆಣಸಿನ ಗಿಡಗಳನ್ನು ಹಚ್ಚಬೇಕು

ಅರಿಶಿಣವು ಬಹಳವಾಗಿ ಸರ್ವದಾ ನೀರು ಬಿಡಬೇಕೆಂಬ ಪದಾರ್ಥವಲ್ಲ ಅದು ಮಳೆಗಾಲ ಸಮಯಲ್ಲಿ ಹಚ್ಚತಕ್ಕದ್ದಾಗಿ ಮಳೆಗಾಲ ವಿಶೇಷವಾದರೆ ಮಳೆಯ ಸಹಾಯದಿಂದ ಬೆಳೆಯುವದು ಅಥವಾ ಸ್ವಲ್ಪ ತಡೆದ ಸಮಯದಲ್ಲಿ ಹಸಿಯಾರದಂತೆ ಒಂದೆರಡು ನೀರು ಕಟ್ಟಿಸಿಕೊಂಬುವದು. ಹಾಗೂ ಹದದ ಮೇಲೆ ಹಸಿಯಾರದಂತೆ ನೀರು ಬಿಡುತ್ತ ಹೋದರೂ ಉತ್ತಮವೇ ಸರಿ ಸಮಯವರಿತು ನೆಲವು ಒಣಗದ ಹಾಗೆ ನೀರು ಬಿಡುತ್ತ ಹೋದರೆ ಮೂರು ತಿಂಗಳಿಗ ಮೆಣಸಿನ ಕಾಯಿಗಳಾಗಲಾರಂಭಿಸಿ ಅರಿಶಿಣದ ಬೆಳೆಯು ಬರುವದರೊಳಗೆ ಮೆಣಸಿನಕಾಯಿಗಳು ಕೈಗೆ ಬರುವವು. ಮತ್ತು ಎಂಟು ತಿಂಗಳಿಗೆ ಅರಿಶಿಣದ ಬೆಳೆಯು ಬರುವದು

ಅರಿಶಿಣದ ಸುಗ್ಗಿಯ ಕಾಲವು ಪುಷ್ಯ ಮೊದಲಾಗಿ ಫಾಲ್ಗುಣ ಚೈತ್ರ ವೈಶಾಖದ ವರೆಗೂ ಇರುವದು. ಆ ಕಾಲದಲ್ಲಿ ಮೆಣಸಿನ ಗಿಡಗಳನ್ನು ಕಿತ್ತಿ ಹಾಕಬೇಕು. ಅರಿಶಿಣವು ಸ್ವಲ್ಪ ಇದ್ದರೆ ಗುದ್ದಲಿಯಿಂದ ಅಗಿಯಬೇಕು. ಬಹಳವಾಗಿ ಇದ್ದರೆ ಮಡಿಕೆಯನ್ನು ಹೊಡೆದು ಅರಿಶಿಣವನ್ನು ಆರಿಸಿ ರಾಶಿಯನ್ನು ಮಾಡಿ ಇಟ್ಟುಕೊಳ್ಳಬೇಕು. ಮತ್ತು ಆವುಗಳಲ್ಲಿ ಸಣ್ಣ ಸಣ್ಣ ಬೇರುಗಳನ್ನು

ಬೇರೆ ಅರಿಸಿ ಬೀಜಕ್ಕೆ ಇಟ್ಟು ಉಳಿದ ಯಾವತ್ತು ಅರಿಷಿಣವನ್ನು ಮಣ್ಣು ಹತ್ತದ ಹಾಗೆ ಶೋಧಿಸಿ ಹದವನ್ನು ಹಾಕಿ ಕುದಿಸಿ ಒಣಗಿಸಿ ಆಮೇಲೆ ಬಣ್ಣಕ್ಕೆ ಬರುವ ಹಾಗೆ ಬಣ್ಣ ಹಾಕಿ ಒಣಗಿಸಿ ಮಾರಾಟಕ್ಕೆ ಕೊಡಬೇಕು

ಅರಿಷಿಣವನ್ನು ಕುದಿಸಿ ಹದಕ್ಕೆ ಹಾಗುವದು ಹೇಗಂದರೆ, ಒಂದು ಕಡಾಯುದಲ್ಲಾಗಲಿ ಒಂದು ಹಂಡೇದಲ್ಲಾಗಲಿ ಅಥವಾ ಒಂದು ಹರಿವೆಯಲ್ಲಾಗಲಿ ಮತ್ತು ಸ್ವಲ್ಪ ಇದ್ದರೆ ಒಂದು ಗಡಿಗೆಯಲ್ಲಾಗಲಿ ಒಲಿಯ ಮೇಲೆ ಇಟ್ಟು ಅದರಲ್ಲಿ ನೀರು ಹಾಕಿ ಆ ನೀರೊಳಗೆ ಆಕಳ ಸೆಗಣಿಯನ್ನಾಗಲಿ ಎತ್ತುಗಳ ಸೆಗಣಿಯನ್ನಾಗಲಿ ಹಾಕಿ ಕಲಿಸಿ ತೆಳ್ಳಗೆ ರಾಡಿಯನ್ನು ಮಾಡಿ ಸಣ್ಣಾಗಿ ಉರಿ ಹಚ್ಚಬೇಕು ಹಾಗೂ ನೀರಿನ ಉಗಿಯು ಹೋಗದ ಹಾಗೆ ಕಢಾಯಕ್ಕಾದರೆ ಬಿದಿರು ಚಾಪೆಯನ್ನು ಮತ್ತು ಹಂಡೆ ಮೊದಲಾದವದ್ದರಲ್ಲಿ ಕುದಿಸಬೇಕಾದರೆ ಅವುಗಳ ಬಾಯಿಗೆ ಮತ್ತೇನಾದರೂ ಮುಚ್ಚಬೇಕು ಆ ನೀರು ಹೊಯ್ದಾಡುವಾಗ ಅನುವರಿತು ಅದರಲ್ಲಿ ಹಿಡಿಯುವಷ್ಟು ಅರಿಷಿಣವನ್ನು ಹಾಕಿ ಕುದಿಸಬೇಕು ಸೆಗಣಿಯ ರಾಡಿಯು ಗಟ್ಟಿಯಾದರ ಅರಿಷಿಣವು ತಳಕ್ಕೆ ಕೂತು ಹೊತ್ತಿ ಕೊಳ್ಳಿಯಾಗುವವು ಅದು ಕಾರಣ ಗಟ್ಟಿಯಾದ ಹಾಗೆ ತೆಳ್ಳಗೆ ನೀರು ಮಾಡಿ ಕುದಿಸಬೇಕು ಒಂದು ವೇಳೆ ನೀರು ಕಡಿಮೆಯಾದರೆ ಮತ್ತೂ ಕಾದ ನೀರು ಹಾಕುತ್ತಿರಬೇಕು

ಅರಿಷಿಣವು ಕುದಿದು ಹದಕ್ಕೆ ಬಂದಿದ್ದನ್ನು ಪರೀಕ್ಷಿಸುವದು ಹೇಗಂದರೆ, ಆ ಕಢಾಯುದಲ್ಲಿ ಕುದಿಯುವ ಅರಿಷಿಣದ ಬೇರು ಒಂದನ್ನು ತೆಗೆದು ಕೊಂಡು ಕಡ್ಡಿಯನ್ನು ಚುಚ್ಚಿ ನೋಡಬೇಕು ಅದರಲ್ಲಿ ಕಡ್ಡಿಯು ಮೆತ್ತಗೆ ಪಾರಾಗಿ ಹೋದರ ಹದಕ್ಕೆ ಬಂದಿರುವದೆಂದು ತಿಳಿದು ಕುದಿದ ಅರಿಷಿಣವನ್ನು ಗೋರಿಗಳಿಂದ ಎಳೆದುಕೊಂಡು ಜಾರೆಯ ಸವುಟನಿಂದ ತೆಗೆಯಬೇಕು ಮತ್ತು ಅದೇ ನೀರಿನಲ್ಲಿ ಹಸಿಯ ಅರಿಷಿಣವನ್ನು ಸುರಿವಿ ಉರಿಯನ್ನು ಹಚ್ಚಿ ಕುದಿಸಬೇಕು. ನೀರು ಕಡಿಮೆಯಾಗುತ್ತ ಬಂದ ಹಾಗೆ ಬಿಸಿ ನೀರನ್ನ ಮತ್ತು ಸ್ವಲ್ಪ ಸೆಗಣಿಯನ್ನು ಕಲಿಸಿ ಹಾಕುತ್ತ ಕುದಿ ಹದಕ್ಕೆ ಬಂದದ್ದನ್ನು ನೋಡಿ ತೆಗೆಯುತ್ತ ಹೋಗಬೇಕು. ಈ ಪ್ರಕಾರ ಯಾವತ್ತು ಅರಿಷಿಣಗಳು ಆಗುವ ವರೆಗೂ ಕುದಿಸಿ ಅವುಗಳನ್ನು ಒಣಗಿಸಿ ರಾಶಿಯಾಗಿ ಹಾಕಿ ಅದಕ್ಕೆ ಹುಳ ಹತ್ತದೆ ಹಾಗೆ ಬಜಿಯ ಪುಡಿಯನ್ನು ಹಾಕಿ ಕಲಿಸಿ ತೆಳ್ಳಗೆ ಹರಹಿ ಒಣಗಿಸಿ ಧಾರಣಿ ಬರುವ ವರೆಗೂ ತುಂಬಿ ಇಡಬೇಕು ಅರಿಷಿಣವನ್ನು ನಾಲ್ಕೈದು ತಿಂಗಳ ವರೆಗೂ ಕಡೆಯಲ್ಲಿ ಇಟ್ಟರೆ ಹುಳ ಹತ್ತುವದೆಂದು ಹಗೆಯಲ್ಲಿ ಹಾಕುತ್ತಾರೆ. ಅರಿಷಿಣವನ್ನು ಹಗೆಯಲ್ಲಿ ಹಾಕಿದರೆ ಕೊಳ್ಳಿ ಹಾಯುವವು. ಈ ಎರಡು ಪ್ರಕಾರದ ಭಯವು ಅರಿಷಿಣವನ್ನು ಬೆಳೆದವರಿಗೆ ಇರುವದು. ಮೇಲೆ ಇಟ್ಟರೆ ಹುಳ ಹತ್ತುವವು, ಹಗೆಯಲ್ಲಿ ಹಾಕಿದರೆ ಕೊಳ್ಳಿ ಹಾಯುವವು,

ಎಂದು ರಾಶಿ ಆದಾಕ್ಷಣವೇ ಧಾರಣಿ ಇದ್ದರೂ ಇಲ್ಲದಿದ್ದರೂ ಬೇಡಿದ ಹಾಗೆ ಮಾರುತ್ತಾರೆ. ಅದು ಕಾರಣ ಅರಿಷಿಣವನ್ನು ಇಟ್ಟುಕೊಂಬುವ ಉಪಾಯವನ್ನು ಹೇಳುತ್ತೇನೆ.

ಅರಿಷಿಣವನ್ನು ಎಷ್ಟು ದಿವಸ ಇಟ್ಟ ಕಾಲಕ್ಕೂ ಹುಳಗಳು ಹತ್ತದ ಹಾಗೇ ಮಡಗುವ ಉಪಾಯವು ಹೇಗಂದರ ಹದಕ್ಕೆ ಹಾಕಿ ಸಿದ್ಧ ಮಾಡಿದ ಅರಿಷಿಣವನ್ನು ತೆಳ್ಳಗೆ ಹರಹಿ ಸ್ವಲ್ಪ ಆರಿಸಿ ಆರಿದ ಮೇಲೆ ಅವುಗಳನ್ನು ಗುಮ್ಮಿಗಳಲ್ಲಾಗಲಿ ಕಣಜಗಳಲ್ಲಾಗಲಿ ಹಾಕಿಡಬೇಕಾದರೆ ತಳಕ್ಕೆ ಸಣ್ಣ ಉಸುಕು ಹಾಕಿ ಅರಿಷಿಣವನ್ನು ಗೇಣು ಎತ್ತರ ಸುರಿವಿ ಅದರ ಮೇಲೆ ನಾಲ್ಕು ಬೆರಳು ಒಜಿಯ ಪುಡಿಯನ್ನು ಉದುರಿಸಿ ಸ್ವಲ್ಪ ಉಸಕನ್ನು ಹಾಕಿ ಇದರಂತೆ ಮತ್ತೂ ಅರಿಷಿಣವನ್ನು ಉಸಕನ್ನು ತರತರಕ್ಕೆ ಹಾಕುತ್ತ ಅದರ ಮೇಲೆ ಬಜಿಯ ಪುಡಿಯನ್ನು ಉದುರಿಸುತ್ತ ಯಾವತ್ತು ಅರಿಷಿಣಗಳು ಆಗುವ ವರೆಗೂ ಹಾಕಿ ಮೇಲೆ ಒಂದು ಗೇಣು ಎತ್ತರ ಉಸುಕು ಹಾಕಿ ತುಂಬಿ ಇಟ್ಟರೆ ಎಂದಿಗೂ ಹುಳಗಳು ಹತ್ತದೆ ಇರುವವು ಹೀಗೆ ಮಾಡದಿದ್ದರೆ ಹುಳಗಳು ಹತ್ತುವವು. ಅದು ಕಾರಣ ಅರಿಷಿಣವನ್ನು ತುಂಬಿ ಇಡಬೇಕಾದರೆ ಹಿಂದೆ ಹೇಳಿದ ಹಾಗೆ ಉಸುಕು ಹಾಕಿ ತುಂಬಿ ಇಡಬೇಕು ಮತ್ತು ಮಾರಾಟದ ಸಮಯ ಬಂದರೆ ಅರಿಷಿಣವನ್ನು ಕಡೆಗೆ ತೆಗೆದು ಒಂದು ಕಡಾಯದಲ್ಲಾಗಲಿ ಇಲ್ಲವೆ ಒಂದು ಕೇಲದಲ್ಲಾಗಲಿ ನೀರು ಹಾಕಿ ಆ ನೀರಿನಲ್ಲಿ ಚಲೋ ಅರಿಷಿಣ್ಣದ ಹಿಟ್ಟು ಹಾಕಿ ಕಲಿಸಿ ಒಂದು ಬಿದಿರ ಹೊಸ ಪುಟ್ಟಿಯಲ್ಲಿ ಅರಿಷಿಣವನ್ನು ಹಾಕಿ ಎದ್ದಿ ತೆಗೆದು ಆರಿಸಿದರೆ ಬಣ್ಣವಾಗುವದು ಆ ಮೇಲೆ ಅವುಗಳನ್ನು ಚೀಲಗಳಲ್ಲಿ ತುಂಬಿ ಮಾರಾಟಕ್ಕೆ ಕಳುಹಿಸಬೇಕು. ಇಲ್ಲವೆ ಕೆಲವು ದಿವಸ ಇಟ್ಟು ಮಾರಿದರೂ ಬರುತ್ತದೆ

---

# ೧೪ ನೇ ಪ್ರಕರಣವು.

## ಗೋಡಂಬಿಯ ವನ.

ಗೋಡಂಬಿಯ ವೃಕ್ಷಗಳು ಕೇರ ಗಿಡದಂತೆ ಇರುವವು. ಕೇರ ಗಿಡಗಳು ಅರಣ್ಯದಲ್ಲಿ ಬೆಳೆಯುವಂತೆ ಮಲಸೀಮೆಯಲ್ಲಿ ತಮ್ಮಿಂದ ತಾವೇ ಬೆಳೆಯುತ್ತವೆ. ಈ ವೃಕ್ಷದ ಬೀಜಗಳನ್ನು ಯಾವ ಭೂಮಿಯಲ್ಲಿ ಹಾಕಿದರೂ ಬೆಳೆಯಾಗುತ್ತವೆ ಗೋಡಂಬಿಯು ರುಚಿಕರವಾದ ಪದಾರ್ಥವು ಇದರ ಎಲೆಗಳು ಕಾಯಿಗಳು ಹಣ್ಣುಗಳು ಬೀಜಗಳು ಕೇರ ಗಿಡದಂತೆ ಇರುತ್ತವೆ ಈ ಗಿಡದ ಎಲೆಗಳು ಹಸುರಾಗಿ ಗೋಡಂಬಿಯ ಕಾಯಿಗಳು ಬಿಳುಪಾಗಿ ಇರುತ್ತವೆ. ಕೇರಿನಂತೆ ಇದಕ್ಕಾದರೂ ಎಣ್ಣೆ ಇರುವದು. ಇದರ ಎಣ್ಣೆಯು ಮೈಗೆ ಹಚ್ಚಿದರೆ ಕೇರ ಎಣ್ಣೆಯಂತೆ ಹುಣ್ಣಾಗುತ್ತದೆ

ತೋಟಗಳಲ್ಲಿ ಈ ಗೋಡಂಬಿಯ ವೃಕ್ಷಗಳನ್ನು ಬೆಳೆ ಮಾಡುವದು ಹೇಗಂದರೆ, ಗೋಡಂಬಿಯ ಕಾಯಿಗಳನ್ನು ಮೇಲಿನ ಸೊಪ್ಪೆ ಸಹಿತ ತಂದು ಮೃಗಶಿರ ಕಾಲಕ್ಕೆ ತೋಟದ ಮಡಿಗಳಲ್ಲಿ ಹಾಕಿದರೆ ಸಸಿಗಳಾಗುವವು ಈ ಗಿಡಗಳನ್ನು ಬರೀ ಹತ್ತೆಂಟು ಬೆಳಿಸಿದಲ್ಲಿ ತನಗೆ ದ್ರವ್ಯದ ಪ್ರಾಪ್ತಿಯಾಗದು. ಮತ್ತು ತಿಂಬುವದಕ್ಕಾದರೂ ಸಾಲದು ಅದು ಕಾರಣ ಈ ಗಿಡಗಳನ್ನಾದರೂ ನಾನೂರು ಐನೂರು ಅಥವಾ ಸಹಸ್ರಾವಧಿಯನ್ನು ಹಾಕಿದರೆ ಅದರ ಉತ್ಪನ್ನವು ಚನ್ನಾಗಿ ಅಗುತ್ತದ ಗೋಡಂಬಿಯ ಕ್ರಯವು ಈ ದೇಶದಲ್ಲಿ ಸದಾ ಕಾಲದಲ್ಲಿ ನಾಲ್ಕು ರೂಪಾಯಿ ಅಥವಾ ಐದು ರೂಪಾಯಕ್ಕೆ ಮಣದಂತೆ ಇರುವದು ಒಂದೊಂದು ಸಮಯದಲ್ಲಿ ಎಂಟು ರೂಪಾಯಕ್ಕೆ ಮಣದಂತೆ ಮಾರುವದು. ಈ ಗಿಡಗಳನ್ನು ಹಚ್ಚಿದ ಮೇಲೆ ಮೂರು ವರ್ಷದ ವರೆಗೂ ನೀರು ಹಾಕಿದರೆ ಸಾಕು, ಆ ಮೇಲೆ ತಮ್ಮಿಂದ ತಾವೇ ಮಳೆಯ ಸಹಾಯದಿಂದ ಬೆಳೆದು ದೊಡ್ಡ ವೃಕ್ಷಗಳಾಗಿ ನಿರಾಯಾಸದಿಂದ ವರ್ಷ ವರ್ಷಕ್ಕೂ ಫಲಗಳಾಗುತ್ತ ಇರುವವು.

ಈ ವೃಕ್ಷಗಳನ್ನು ಬೆಳಿಸುವದು ಹೇಗಂದರೆ, ಹಿಂದೆ ಹೇಳಿದ ಹಾಗೆ ಬೀಜಗಳನ್ನು ಹಾಕಿ ಸಸಿಗಳನ್ನು ಮಾಡಿ ಮಳೆಗಾಲದಲ್ಲಿ ಎಂಟು ಮೊಳಕ್ಕೊಂದು ಅಗಿಗಳನ್ನು ಹಚ್ಚಿ ನೀರು ಬಿಟ್ಟು ಮೂರು ವರ್ಷದ ವರೆಗೂ ದನಗಳು ಕುರಿಗಳು ಕೆಡಿಸದ ಹಾಗೆ ಜೋಪಾನ ಮಾಡಿದರೆ ತಮ್ಮಿಂದ ತಾವೇ ವರ್ಧನ

ವಾಗುವವು. ಈ ಗಿಡಗಳು ಮೂರು ವರ್ಷಕ್ಕೆ ಕಾಯಿಗಳಾಗಲಾರಂಭಿಸಿ ಅನಂತ ಕಾಲದ ವರೆಗೂ ತಮ್ಮಿಂದ ತಾವೇ ಬೆಳೆದು ಯಾವ ಆಯಾಸವಿಲ್ಲದೆ ವರ್ಷ ವರ್ಷಕ್ಕೂ ಫಲಗಳಾಗುತ್ತ ಇರುವವು.

ಗೋಡಂಬಿಯ ಗಿಡಗಳು ತೋಟದಲ್ಲಿಯೇ ಆಗುತ್ತವೆ ಎಂಬ ಪ್ರಮಾಣವಲ್ಲವು. ಬೇಲಿಯನ್ನು ಬಂದೋಬಸ್ತು ಮಾಡಿ ದನಗಳು ಕುರಿಗಳು ತಿನ್ನದ ಹಾಗೆ ಮಾಡಿದರೆ ಹೊಲಗಳಲ್ಲಿಯಾದರೂ ಆಗುತ್ತವೆ. ಅವುಗಳಿಗೆ ಮೂರು ನಾಲ್ಕು ವರ್ಷ ಬೇಸಿಗೆಯ ಕಾಲದಲ್ಲಿ ಕಪ್ಪಲಿಯಿಂದ ನೀರು ಹಾಕಿದರೆ ಸಾಕು, ಅಷ್ಟರಿಂದಲೇ ಬೆಳೆಯಾಗುತ್ತವೆ. ಗೋಡಂಬಿಯ ಗಿಡಗಳನ್ನು ಹೊಲಗಳಲ್ಲಿ ಬೆಳಸಬೇಕಾದರೆ ಹೊಲದಲ್ಲಿ ಮೊದಲು ಗೊಬ್ಬರವನ್ನು ಹಾಕಿ, ಎರಡು ಸಾಲು ನೇಗಿಲೆಯನ್ನಾಗಲಿ ಮಡಿಕೆಯನ್ನಾಗಲಿ ಹೊಡೆದು ಚನ್ನಾಗಿ ಹರಿಗಿ ಮಣ್ಣು ಮೆತ್ತಗೆ ಮಾಡಿ ಸುತ್ತಲೂ ಮಾವಿನ ಗಿಡಗಳ ಕುಣಿಗಳನ್ನು ಇಪ್ಪತ್ತುನಾಲ್ಕು ಮೊಳಕ್ಕೊಂದರಂತೆ ತೆಗಿಸಿ ಮಧ್ಯ ಭೂಮಿಯಲ್ಲಿ ಸಾಲು ಸಾಲಾಗಿ ಕಾಣುವಂತೆ ೮ ಮೊಳಕ್ಕೊಂದು ೧। ಮೊಳದ ತಗ್ಗುಗಳನ್ನು ತೆಗೆದು ಆ ತಗ್ಗುಗಳಲ್ಲಿ ಕೆಮ್ಮಣ್ಣನ್ನೂ ಸಣ್ಣ ಉಸುಕನ್ನೂ ಹಾಕಿ ಭರೀ ಮಾಡಿದ ಮೇಲೆ ಒಂದು ಹೆಡಿಗ ಹಳೆಯ ಗೊಬ್ಬರವನ್ನು ಹಾಕಿ ಗೋಡಂಬಿಯ ಬೀಜಗಳನ್ನು ಅಡ್ಡ ಇಟ್ಟು ಮಣ್ಣು ಮುಚ್ಚಿ ನೀರು ಹಾಕುತ್ತ ಹೋಗಬೇಕು ಹಾಗೂ ಸುತ್ತಲೂ ಮಾವಿನ ಬೀಜಗಳನ್ನು ಹಾಕಿ ಅವುಗಳ ಮಧ್ಯದಲ್ಲಿ ಅಲ್ಲಲ್ಲಿಗೊಂದೊಂದು ನೇರಿಲೆ ಗಿಡಗಳನ್ನು ಹಲಸಿನ ಗಿಡಗಳನ್ನು ಮತ್ತು ಹುಣಿಸೆ ಗಿಡಗಳನ್ನು ಹಾಕಿದರೂ ಬರುತ್ತದೆ. ಈ ಪ್ರಕಾರ ಯಾವತ್ತು ಬೀಜಗಳನ್ನು ಹಾಕಿ ನೀರು ಹಾಕುತ್ತ ಹೋಗಬೇಕು ಆ ಗಿಡಗಳು ಉನ್ನತವಾಗಿ ಬೆಳೆಯುವ ವರೆಗೂ ಕೆಲವು ವರ್ಷ ಪರಿಯಂತರ ಆ ಭೂಮಿಯಲ್ಲಿ ಜೋಳವನ್ನಾಗಲಿ ನೆಜ್ಜೆಯನ್ನಾಗಲಿ ಅಥವಾ ಮತ್ತೆ ಯಾವ ಧಾನ್ಯವನ್ನಾಗಲಿ ಬಿತ್ತಿ ಬೆಳೆ ಮಾಡಿಕೊಳ್ಳಬೇಕು ಈ ಗಿಡಗಳಿಗೆ ಬೀಜವನ್ನು ಹಾಕಿದ ಮೇಲೆ ಸಮಗ್ರ ಒಂದು ವರ್ಷ ನೀರು ಹಾಕಬೇಕು ಆ ಮೇಲೆ ಮಳೆಗಾಲದಲ್ಲಿ ಹಾಗೇ ಬೆಳೆಯುವವು. ಬೇಸಿಗೆಯಲ್ಲಿ ಮಾತ್ರ ಸಮಯವರಿತು ನೀರು ಹಾಕುತ್ತ ಹೋದರೆ ಸಾಕು, ಅಷ್ಟರಿಂದಲೇ ಬೆಳೆಯುವವು. ಗೋಡಂಬಿಯ ಗಿಡಗಳನ್ನು ತೋಟಗಳಲ್ಲಿ ಹಾಕಿ ಸರ್ವದಾ ಮೊಟ್ಟೆಯ ನೀರು ಬಿಡುತ್ತ ಹೋದರೆ ಅತಿ ಶೃಂಗಾರವಾಗಿ ಬೆಳೆದು ಬಹಳ ತೀವ್ರವೇ ಫಲಿಸಿ ಮೂರು ವರ್ಷಕ್ಕೆ ಫಲಗಳಾಗುವವು. ಹೊಲಗಳಲ್ಲಿ ಹಚ್ಚಿ ಯಾವಾಗಲೂ ನೀರು ಹಾಕದೆ ಇದ್ದರೆ ನಾಲ್ಕು ಐದು ವರ್ಷಕ್ಕೆ ಫಲಕ್ಕೆ ಬರುವವು.

# ಯಾಲಕ್ಕಿಯ ಗಿಡಗಳು.

ಯಾಲಕ್ಕಿಯ ಗಿಡಗಳು ಕಾಡು ಬಾಳೆಯ ಎಲೆಯಂತೆ ಎಲೆಗಳಾಗಿ ಇರುವವು. ಆ ಗಿಡಗಳನ್ನು ಬೆಳೆಸುವ ವಿವರವನ್ನು ಕೆಳಗೆ ಕಾಣಿಸಿದೆ. ಈ ಗಿಡಗಳ ಸಸಿಗಳನ್ನು ಮಾಡುವಾಗಲಾದರೂ ಇಲ್ಲವೆ ಗಿಡಗಳನ್ನು ಕಿತ್ತಿ ಹಚ್ಚಿ ಬೆಳೆಸುವಾಗಲಾದರೂ ಸ್ವಲ್ಪವಾದರೂ ಬಿಸಲೂ ಗಾಳಿಯೂ ತಾಕದ ಹಾಗ ಮಾಡಬೇಕು ಮಲೆಸೀಮೆಯಲ್ಲಿ ಸೂರ್ಯ ಕಿರಣವು ಬೀಳದಂಥ ದಟ್ಟವಾದ ವನಾಂತರಗಳಿರುವದರಿಂದ ಅಲ್ಲಿಯಾದರೂ ಬೆಳಿಸಬೇಕಾದರೆ ಗಾಳಿ ತಾಕದ ಹಾಗೆ ಸುತ್ತಲೂ ಚಾಟು ಮಾಡಿ ಬೆಳಿಸುತ್ತಾರೆ

ಯಾಲಕ್ಕಿಯ ಬೀಜಗಳನ್ನು ಹಾಕಬೇಕಾದರೆ ಅಂಗಡಿಗಳಲ್ಲಿರುವ ಕಾಯಿಗಳನ್ನ ತಂದು ಹಾಕಬಾರದು. ಅವುಗಳು ನಾಟುವದಿಲ್ಲ ಯಾತಕ್ಕೆಂದರೆ ಆ ಕಾಯಿಗಳನ್ನು ಮುಗ್ಗು ಹಾಕಿ ಬೀಜಗಳನ್ನು ಕೆಡಿಸಿ ನಾಟದ ಹಾಗೆ ಮಾಡಿ ಮಾರಾಟಕ್ಕೆ ಕೊಡುವ ಸಾಂಪ್ರದಾಯವು ಆ ದೇಶಗಳಲ್ಲಿ ಉಂಟು ಆದರಿಂದ ಯಾಲಕ್ಕಿಯು ಬೆಳೆಯುವಲ್ಲಿ ಹೋಗಿ ಅದಕ್ಕೆ ಮಾರಾಟಕ್ಕಿಂತಲೂ ಹೆಚ್ಚು ಕ್ರಯವನ್ನಾದರೂ ಕೊಟ್ಟು ಬೀಜದ ಕಾಯಿಗಳನ್ನು ಪ್ರಯತ್ನಿಸಿ ತಂದು ಚನ್ನಾಗಿ ಒಣಗಿಸಿ ಇಟ್ಟುಕೊಂಡಿರಬೇಕು

ಯಾಲಕ್ಕಿ ಬೆಳೆಯುವ ಭೂಮಿಯ ಪರೀಕ್ಷೆ ಹೇಗಂದರೆ—ಕೆಂಪು ಮಂಡು ಇರಬೇಕು. ಅಥವಾ ಕಟಕದ ಭೂಮಿಯಲ್ಲಾಗಲಿ ಉಸುಕು ಮಿಶ್ರವಾದ ಮಸಬು ಭೂಮಿಗಳಲ್ಲಾಗಲಿ ಚನ್ನಾಗಿ ಬೆಳೆಯುತ್ತವೆ ಇದಲ್ಲದೆ ಈ ದೇಶದ ತೋಟಗಳಲ್ಲಿ ನೀರು ವಿಶೇಷವಾಗಿದ್ದರೆ ಯಾವ ಪ್ರಕಾರದ ಭೂಮಿ ಇದ್ದಾಗ್ಯಾದರೂ ಚಚ್ಚೌಕು ಇಪ್ಪತ್ತು ಇಪ್ಪತ್ತೈದು ಮಾರು ಭೂಮಿಯನ್ನು ಅಗಿಸಿ ಮೂರು ಮೊಳ ಉದ್ದವಾದ ತಗ್ಗನ್ನು ತಗಿಸಿ ಅದರೊಳಗಿನ ಮಣ್ಣನ್ನು ತಗಿಸಿ ಆ ತಗ್ಗಿನಲ್ಲಿ ಒಂದು ಮೊಳದುದ್ದ ಕೆಮ್ಮಣ್ಣನ್ನು ಸಣ್ಣ ಉಸುಕನ್ನು ಸಮಬೆರಿಕೆಯಾಗಿ ಕಲಿಸಿ ಆ ತಗ್ಗಿನಲ್ಲಿ ಹಾಕಿ ಭರೀ ಮಾಡಿ ಆ ತಗ್ಗಿನ ಒಳಮೈಯಲ್ಲಿ ಬಹಳ ದಟ್ಟವಾಗಿ ನಾಲ್ಕು ಬೆರಳಿಗೆ ಒಂದೊಂದರಂತೆ ಸುತ್ತಲೂ ಸಡೇದ ಗಿಡಗಳನ್ನು ಹಾಕಿ ಬೆಳಿಸಿರಬೇಕು ಮತ್ತು ಆ ತಗ್ಗಿನ ಮೇಲಾದರೂ ದಂಡೆಯನ್ನು ಹಿಡಿದು ಸುತ್ತಲೂ ನಾಲ್ಕೂ ಕಡೆಗೂ ಸಡೇದ ಗಿಡಗಳನ್ನು ಹಾಕಬೇಕು. ಮತ್ತು ಅವುಗಳ ಹಿಂದೆ ಬಾಳೆಯ ಗಿಡಗಳನ್ನು ಬಾಳೆಯ ಗಿಡದ ಮಧ್ಯದಲ್ಲಿ ಗೇಣಿಗೊಂದು ಜೊಗಚಿಯ ಗಿಡಗಳನ್ನು ಹಾಕಿ ಸುತ್ತಲೂ ಗಾಳಿ ಹತ್ತದ ಹಾಗೆ ಮಾಡಿ ಆ ತಗ್ಗಿನೊಳಗೆ ತುಂಬಿದ ಉಸುಕು ಕೆಮ್ಮಣ್ಣಿನ ಮೇಲೆ ತೊಪ್ಪಲದ ಗೊಬ್ಬರವನ್ನು ಹಾಕಿ ಸಮ್ಮಿಶ್ರ ಮಾಡಿ ಸಣ್ಣ ಸಣ್ಣ ಚೌಕು ಚೌಕಾದ ಮಡಿಗಳನ್ನು ಮಾಡಿರಬೇಕು. ಈ ಪ್ರಕಾರ ಯಾಲಕ್ಕಿಯ

ಸಸಿಗಳನ್ನು ಹಚ್ಚುವ ಭೂಮಿಯನ್ನು ಸಸಿಗಳು ತಯಾರಕ್ಕೆ ಬರುವದರೊಳಗೆ ಸಿದ್ಧ ಮಾಡಿ ಆ ತಗ್ಗಿನಲ್ಲಿ ಸೂರ್ಯಕಿರಣವು ಬೀಳದಂತೆ ಮೇಲೆ ಹಂದರ ಹಾಕಿ ಬಿದಿರು ಚಾಪೆಗಳನ್ನು ಹಾಕಿ ನೆರಳು ಮಾಡಬೇಕು ಯಾಲಕ್ಕಿಯ ಗಿಡಗಳಿಗೆ ತಂಪಿನ ಹವೆ ತಾಕುವ ಹಾಗೆ ಆ ತಗ್ಗಿನಲ್ಲಿ ಸುತ್ತಲೂ ಬಾಳೆಯ ವನವಾಗಲಿ ನಿಂಬಿಯ ವನವಾಗಲಿ ಅಥವಾ ಅಡಿಕೆಯ ವನವಾಗಲಿ ಇಲ್ಲವೆ ಎಲೆಯ ಬಳ್ಳಿಯಾಗಲಿ ಮೊದಲಿಗೆಯೇ ಹಾಕಿಸಿ ತಯಾರು ಮಾಡಿರಬೇಕು.

ಯಾಲಕ್ಕಿಯ ಸಸಿಗಳನ್ನು ಮಾಡುವದು ಹೇಗಂದರೆ ಬೀಜವನ್ನು ಹಾಕಿ ಯಾಲಕ್ಕಿಯ ಸಸಿಗಳನ್ನು ಮಾಡಬೇಕಾದರೂ ಮೊದಲಿನಂತೆ ಒಂದು ತಗ್ಗನ್ನು ಮಾಡಿ ಅದರೊಳಗೆ ಸಸಿಗಳನ್ನು ಮಾಡಿ ಕಿತ್ತಿ ಹಚ್ಚಬೇಕು. ಅದು ಹೇಗೆಂದರೆ ಎರಡು ಮೂರು ಚಚ್ಚೌಕು ಭೂಮಿಯಲ್ಲಿ ಒಂದುವರೆ ಗಜದ ಪ್ರಮಾಣ ತಗ್ಗು ತೆಗೆದು ಆ ತಗ್ಗಿನೊಳಗಿನ ಮಣ್ಣನ್ನು ಕಡೆಗೆ ತೆಗಸಿ ಅದರೊಳಗೆ ಕೆಮ್ಮಣ್ಣು ಉಸುಕನ್ನು ಕಲಿಸಿ ಅರ್ಧ ಗಜದ ಪ್ರಮಾಣ ಎತ್ತರವಾಗಿ ಆ ತಗ್ಗನಲ್ಲಿ ಭರೀ ಮಾಡಿ ಸುತ್ತಲೂ ಚಾಟು ಆಗುವ ಹಾಗೆ ಆ ತಗ್ಗಿನ ಮೇಲೆ ನಾಲ್ಕು ದಿಕ್ಕಿಗೂ ತಟ್ಟೆಯನ್ನು ಕಟ್ಟಿ ಆ ತಗ್ಗಿನ ಮೇಲಾದರೂ ಹಂದರ ಹಾಕಿ ನೆರಳು ಮಾಡಿ ತಗ್ಗಿನೊಳಗೆ ತೊಪ್ಪಲದ ಗೊಬ್ಬರವನ್ನು ಹಾಕಿ ಮಡಿಗಳನ್ನು ಮಾಡಿ ಅದರೊಳಗೆ ತೊಳೆಯದೇ ಇದ್ದ ಬಲಿತ ಯಾಲಕ್ಕಿಯ ಬೀಜದ ಕಾಯಿಗಳನ್ನು ತಂದು ಒಡೆದು ಬೀಜಗಳನ್ನು ಮಡಿಗಳಲ್ಲಿ ಹಾಕಿ ಮೇಲೆ ಸ್ವಲ್ಪು ತೊಪ್ಪಲದ ಗೊಬ್ಬರವನ್ನು ಹಾಕಿ ನೀರು ಬಿಡುತ್ತ ಹೋಗಬೇಕು. ಅವುಗಳು ಎಂಟು ಹತ್ತು ದಿವಸಗಳಲ್ಲಿ ಮೊಳಿಕೆ ಒಡೆಯುವವು ಆ ಸಸಿಗಳನ್ನು ತಿಂಗಳು ಒಂದುವರೆ ತಿಂಗಳು ಆ ತಗ್ಗಿನಲ್ಲಿಯೇ ಬೆಳಿಸಿ ಆ ಮೇಲೆ ಈ ಪ್ರಕರಣದಲ್ಲಿ ಹಿಂದೆ ಹೇಳಿದಂತೆ ತಯಾರು ಮಾಡಿದ ದೊಡ್ಡ ತಗ್ಗಿನಲ್ಲಿರುವ ಮಡಿಗಳಾವತ್ತಕ್ಕೂ ನೀರು ಬಿಟ್ಟು ಹಸಿ ಮಾಡಿ ಯಾಲಕ್ಕಿಯ ಅಗಿಗಳನ್ನು ಗಡ್ಡೆ ಸಹಿತವಾಗಿ ಅಗಿದು ತಂದು ಆ ಮಡಿಗಳಲ್ಲಿ ಹಚ್ಚಿ ತೊಪ್ಪಲದ ಗೊಬ್ಬರವನ್ನು ಹಾಕಿ ಚನ್ನಾಗಿ ಒಗಲು ತುಳಿದು ಗಟ್ಟಿಯಾಗಿ ಕೂಡ್ರಿಸಬೇಕು ಆ ಮೇಲೆ ಅವುಗಳಿಗೆ ಹಸಿಯಾರದಂತೆ ನೀರು ಬಿಡುವದರಿಂದ ವರ್ಧನವಾಗಿ ಬೇರಿನಲ್ಲಿ ಕಾಯಿಗಳಾಗುವವು ನೀರಿನ ತಂಪು ವಿಶೇಷವಾಗಿದ್ದು ಮೇಲೆ ನೆರಳಾಗಿ ಸುತ್ತಲೂ ಗಾಳಿ ಹತ್ತದೆ ಚಾಟಾಗಿದ್ದರೆ ಮೂರು ನಾಲ್ಕು ತಿಂಗಳಿಗೆ ಕಾಯಿಗಳಾಗುವವು. ಆ ಗಿಡಗಳ ಬೇರಿನಲ್ಲಿ ಗೊಂಚಲು ಗೊಂಚಲುಗಳಾಗಿ ಕಾಯಿಗಳಾಗಿರುವವು ಅವುಗಳನ್ನು ತೆಗೆದುಕೊಂಡು ಬೇರುಗಳಲ್ಲಿರುವ ಕಾಯಿಗಳನ್ನು ಕತ್ತರಿಯಿಂದ ಕತ್ತರಿಸಿ ಗುಂಜು ತೆಗೆದು ಚನ್ನಾಗಿ ತೊಳೆದು ಹದ ಮಾಡಿದಲ್ಲಿ ಯಾಲಕ್ಕಿಯ ಕಾಯಿಗಳಾಗುವವು.

ಯಾಲಕ್ಕಿಯ ಗಿಡಗಳಿಗೆ ಹಾಕತಕ್ಕ ತೊಪ್ಪಲದ ಗೊಬ್ಬರವನ್ನು ಮಾಡು ವದು ಹೇಗಂದರೆ, ತೋಟದಲ್ಲಿ ಒಂದು ದೊಡ್ಡ ತಗ್ಗನ್ನು ತೆಗೆದು ಆ ತಗ್ಗಿನಲ್ಲಿ ಹುಲಗಲಿ ತೊಪ್ಪಲವನ್ನು ಬೆಟ್ಟಲ ತೊಪ್ಪಲವನ್ನು ಸಿರಸಲ ತೊಪ್ಪಲವನ್ನು ನೆಲ್ಲಿಯ ತೊಪ್ಪಲವನ್ನು ತುಂಬಿ ಮೇಲೆ ಸ್ವಲ್ಪ ಮಣ್ಣು ಹಾಕಿ ನೀರು ಬಿಡುತ್ತಾ ಹೋಗಬೇಕು. ಕೆಲವು ದಿವಸಕ್ಕೆ ಅದೆಲ್ಲಾ ಕೊಳೆತು ಗೊಬ್ಬರವಾಗುವದು. ಈ ಗೊಬ್ಬರವು ಎಷ್ಟು ಕಳಿತಷ್ಟು ಉತ್ತಮವು. ಯಾಲಕ್ಕಿಯ ಗಿಡಗಳಿಗೆ ಇದೇ ಗೊಬ್ಬರವನ್ನೇ ಹಾಕಬೇಕು.

## ಮೆಣಸಿನ ಬಳ್ಳಿಯು.

ಮೆಣಸಿನ ಬಳ್ಳಿಯು ಎಲೆಯ ಬಳ್ಳಿಯ ಹಾಗೆ ಇರುತ್ತದೆ. ಅದರ ಎಲೆಗಳಾದರೂ ವೀಳ್ಯದ ಎಲೆಯಂತೆ ಇದ್ದು ಬಸಳೆಯ ಬಳ್ಳಿಯು ಹಬ್ಬಿದಂತೆ ಹಬ್ಬಿ ಬಸಳೆಯ ಹಣ್ಣಿನಂತೆ ಮೆಣಸುಗಳಾಗುವವು ಮುಗ್ಗಿ ಹಾಯ್ದ ಮೆಣಸನ್ನು ಅಂಗಡಿಗಳಿಂದ ತಂದು ಹಾಕಿದರೆ ನಾಟುವದಿಲ್ಲ ಮಲಸೀಮೆಯಿಂದ ಬಲಿತ ಹೊಸ ಬೀಜದ ಮೆಣಸುಗಳನ್ನು ಬೇರೆ ತರಿಸಿ ಕೆಲವು ತಗ್ಗುಗಳನ್ನು ತೆಗಿಸಿ ಅವುಗಳಲ್ಲಿ ಕೆಮ್ಮಣ್ಣು ಉಸುಕನ್ನು ಭರೀ ಮಾಡಿ ತುಂಬಿ ಆ ತಗ್ಗಿನಲ್ಲಿ ಹಣ್ಣಾಗಿ ಒಣಗಿ ಉದುರಿದ ಬೀಜದ ಮೆಣಸನ್ನು ತಂದು ಹಾಕಿ ನೀರು ಬಿಡಬೇಕು ಅಥವಾ ಅವುಗಳ ಸಸಿಗಳನ್ನಾದರೂ ಗಡ್ಡೆ ಸಹಿತ ತಂದು ಹಚ್ಚಬೇಕು ಮೆಣಸಿನ ಬಳ್ಳಿಗಳಿಗಾದರೂ ತೇವು ಆರದಂತೆ ನೀರು ಹಾಕುತ್ತ ಹೋದರೆ ಬಳ್ಳಿಯು ವಿಸ್ತಾರವಾಗಿ ಗಿಡಗಳಿಗೆ ಹಬ್ಬಿ ಆರು ತಿಂಗಳಿಗೆ ಫಲವಾಗಲಾರಂಭಿಸುವವು

## ಅಲ್ಲವು.

ಉಸುಕು ಪಡಿಭೂಮಿಯಲ್ಲಿ ಮೇಲಿಂದ ಮೇಲೆ ನೀರನ್ನು ಹಾಕುತ್ತ ಹೋದ ಹಾಗೆ ಉಸುಕಿನಲ್ಲಿ ಸ್ವಲ್ಪ ಮಣ್ಣನ್ನಾಗಲಿ ಗೊಬ್ಬರವನ್ನಾಗಲಿ ಒೂದಿಯನ್ನಾಗಲಿ ಕಲಿಸಿ ಮಡಿಗಳಲ್ಲಿಯಾದರೂ ಗೇಣು ಒಂದುವರೆ ಗೇಣು ಉಸುಕನ್ನು ಸ್ವಲ್ಪ ಕೆಮ್ಮಣ್ಣನ್ನು ಗೊಬ್ಬರವನ್ನು ಕಲಿಸಿ ಭರೀ ಮಾಡಿ ಹಾಕಿ ಅಲ್ಲದ ಸಣ್ಣ ಸಣ್ಣ ಮರಿಕೊಂಬುಗಳನ್ನು ಮುರಿದುಕೊಂಡು ಚೋಟಗೊಂದನ್ನು ಊರಿ ನೀರು ಬಿಡಬೇಕು ಮತ್ತು ಅಲ್ಲವನ್ನು ಹಚ್ಚಿದ ಎಂಟು ತಿಂಗಳಿಗೆ ಅಗಿದರ ಚಲೋ ಅಲ್ಲವಾಗುವದು. ಅದನ್ನೇ ಮೂರು ವರ್ಷ ಭೂಮಿಯಲ್ಲಿ ಬಿಟ್ಟು ನೀರು ಹಾಕುತ್ತ ಬೆಳಿಸಿ ಆ ಮೇಲೆ ಅಗಿದು ತೆಗಿದರೆ ಅದು ಬಲಿತ ಅಲ್ಲವು. ಅದನ್ನು ಮಣ್ಣು ಹೋಗುವ ಹಾಗೆ ಚನ್ನಾಗಿ ತೊಳೆದು ಹಸನ ಮಾಡಿ ಹೊಸ ಸುಣ್ಣದೊಳಗೆ ಹಾಕಿ ತೆಗೆದು ಒಣಗಿಸಿದರೆ ಸುಂಟಿಯಾಗುವದು.

ಭೂಮಿಯು ಹದದ ಮೇಲೆ ಉಮರಾವತಿ ಸುಂಟಿ ಎನ್ನಿಸುವದು. ಕೆಲವು ಭೂಮಿಯು ಗುಣದಿಂದ ರಾಶಿಯು ಸುಂಟಿ ಎನಿಸುವದು. ಅಲ್ಲವನ್ನು ಸುಣ್ಣ ದಲ್ಲಿ ಹಾಕದೆ ಹಾಗೆಯೇ ಇಟ್ಟರೆ ಸುಂಟಿಯಾಗುವದಿಲ್ಲ ಹಾಗೇ ಅಲ್ಲವನ್ನು ಮಾರಬೇಕಾದರೆ ವರ್ಷದೊಳಗೆ ಬೇಕಾದಾಗ ತೆಗೆದು ಮಾರಿದರೂ ಬರುತ್ತದೆ. ಸುಂಟಿಯನ್ನು ಮಾಡಬೇಕಾದರೆ ಮೂರು ವರ್ಷ ಬಿಡಬೇಕು.

## ಕಸಕಸಿಯು

ಕಸಕಸಿಯು ಬೀಜವು ಹೊಸ ಬೀಜವಾದರೆ ಅಂಗಡಿಯಲ್ಲಿಂದಾದರೂ ಬಿಳುಪು ಹೊಸ ಬಣ್ಣವನ್ನ ನೋಡಿ ಚಲೋ ಕಸಕಸಿಯನ್ನು ತಂದು ಬಿತ್ತಿದರೂ ನಾಟುತ್ತವೆ. ಆದರೆ ಉಳ್ಳಿ ಬಳ್ಳೊಳ್ಳಿಯನ್ನು ಹಚ್ಚುವ ಕಾಲದಲ್ಲಿ ಉಳ್ಳಿಯ ಮಡಿ ಒಳಗಾದರೂ ಅಂಗಲಾಗಿ ಚಲ್ಲುತ್ತಾರೆ. ಅಥವಾ ಕೂರಿಗೆಯಿಂದ ಬಿತ್ತು ತ್ತಾರೆ. ಇಲ್ಲವೆ ಮಡಿಗಳನ್ನು ಮಾಡಿ ಚಲ್ಲಿ ನೀರು ಬಿಟ್ಟು ಕಾವಲಿಗಳಿಗೆ ಮಾತ್ರ ಉಳ್ಳಿಯ ಅಗಿಗಳನ್ನು ಹಚ್ಚುತ್ತಾರೆ.

ಕಸಕಸಿಯನ್ನು ಹಾಕುವ ಭೂಮಿಯನ್ನು ಹಸನ ಮಾಡುವದು ಹೇಗೆಂ ದರೆ ತೋಟದ ಭೂಮಿಯಲ್ಲಿ ಮೊದಲು ಗೊಬ್ಬರವನ್ನು ಹಾಕಿ ಎರಡು ಸಾಲು ಮಡಿಕೆಯನ್ನು ಹೊಡೆದು ಪುನಃ ಗೊಬ್ಬರವನ್ನು ಹಾಕಿ ಮೂರು ಸಾಲು ಹರಿಗಿ ಮತ್ತೂ ಗೊಬ್ಬರವನ್ನು ಹರಹಿ ಕೂರಿಗೆಯಿಂದ ಬಿತ್ತಬೇಕಾದರೆ ಒಣ ಮಣ್ಣಿ ನಲ್ಲಿ ಒಂದು ಸೇರು ಕಸಕಸಿಯಲ್ಲಿ ಇಪ್ಪತ್ತುನಾಲ್ಕು ಸೇರು ಸಣ್ಣ ಉಸು ಕನ್ನು ಕೂಡಿಸಿ ನಾಲ್ಕು ತಾಳಿನ ಕೂರಿಗೆಯಿಂದ ಹೌರಗೆ ಬಿತ್ತಿ ಮಡಿಗಳನ್ನು ಮಾಡಿ ಚನ್ನಾಗಿ ನೀರು ಹೋಗುವ ಹಾಗೆ ಕಾವಲಿಗಳನ್ನು ಮಾಡಿಕೊಂಡು ನೀರು ಬಿಟ್ಟು ಎಲ್ಲ ಕಾವಲಿಗಳಲ್ಲಿ ಉಳ್ಳಿಯ ಅಗಿಗಳನ್ನು ಹಚ್ಚಬೇಕು

ಹಿಂದೆ ಹೇಳಿದಂತೆ ಭೂಮಿಯನ್ನು ಹಸನ ಮಾಡಿ ಚನ್ನಾಗಿ ಮಡಿಗ ಳನ್ನು ಕಾವಲಿಯನ್ನು ಮಾಡಿಕೊಂಡು ಮಡಿಗಳಿಗೆ ಗೊಬ್ಬರವನ್ನು ಹಾಕಿ ಕಸಕಸಿಯನ್ನು ಚಲ್ಲಿ ನೀರು ಬಿಟ್ಟು ಕಾವಲಿಗೆ ಉಳ್ಳಿಯ ಅಗಿಯನ್ನು ಹಚ್ಚ ಬೇಕು. ಇದೊಂದು ಪ್ರಕಾರವು ಈ ಎರಡು ವಿಧದೊಳಗೊಂದು ರೀತಿಯಿಂದ ಕಸಕಸಿಯನ್ನು ಹಾಕಿಕೊಳ್ಳಬೇಕು.

ನಾಲ್ಕಾರು ದಿವಸಗಳಲ್ಲಿ ಅವುಗಳು ನಾಟಿಕೊಳ್ಳುವವು. ಈ ಕಸಕಸಿಗೆ ಮೂರು ವೇಳೆ ಗೊಬ್ಬರವನ್ನು ಹಾಕಿರುವದರಿಂದ ಇದರಲ್ಲಿ ಸದಿಯು ಬಹಳ ವಾಗಿ ಹುಟ್ಟುವದು. ಎರಡು ಮೂರು ಎಲೆಗೆ ಬಂದಾಗ ಸದಿಯನ್ನು ತೆಗಿ ಸಬೇಕು. ಮತ್ತು ಸದಿಯು ಹುಟ್ಟುತ್ತ ಹೋದ ಹಾಗೆ ಮೂರು ನಾಲ್ಕು ವೇಳೆ ಸದಿ

ಯನ್ನು ಹದದ ಮೇಲೆ ತೆಗಿಸುತ್ತ ಹದದ ಮೇಲೆ ನೀರು ಬಿಡುತ್ತ ಹೋಗ ಲಾಗಿ ಮೂರು ತಿಂಗಳಷ್ಟಕ್ಕೆ ಕಾಯಿಗಳಾಗುವವು. ಈ ಕಸಕಸಿಯು ಹೂವು ಆದಾಗ ಬಹಳ ಸಂಭ್ರಮವಾಗಿ ಕಾಣಿಸುವದು. ಇದರ ಹೂವುಗಳು ಮೊದಲು ಬಹಳ ಬಿಳುಪಾಗಿ ತರುವಾಯದಲ್ಲಿ ಗುಲಾಬಿಯ ಬಣ್ಣವಾಗುತ್ತವೆ. ಅದರ ಕಾಯಿಗಳು ನಿಂಬಿಯ ಕಾಯಿ ಪ್ರಮಾಣವಾಗಿ ಮೇಲೆ ಕಮಲ ದಳಗಳ ಹಾಗೆ ಆಕ್ರತಿಯುಳ್ಳ ಒಂದು ಚಕ್ರವಿರುತ್ತದೆ

ಕಸಕಸಿಯ ಕಾಯಿಗಳು ಹಣ್ಣಾಗುವ ಹದಕ್ಕೆ ಬಂದಾಗ ಹಣ್ಣಾಗು ವದಕ್ಕಿಂತ ಮೊದಲೇ ಉಕ್ಕಿನ ಉಗುರುಗಳಿಂದಾಗಲಿ ಅಥವಾ ಮೂರು ಮೂರು ಚಾನಗಳನ್ನು ಕಟ್ಟಿ ಅದರಿಂದಾಗಲಿ ಇಲ್ಲವೆ ಮೂರು ಬಳಿಯ ಚೂರುಗಳನ್ನು ದಾರದಿಂದ ಕಟ್ಟಿದರೂ ಸರಿ, ಆ ಕಾಯಿಗಳಿಗೆ ನಾಲ್ಕು ದಿಕ್ಕಿಗೆ ಸಾಯಂ ಕಾಲ ಸಮಯಕ್ಕೆ ಎರಡು ತಾಸು ಹೊತ್ತು ಇರಲಿಕ್ಕೆ ಪ್ರಾರಂಭಿಸಿ ಸೂರ್ಯನು ಅಸ್ತವಾಗುವ ವರೆಗೂ ಮೂರು ಮೂರು ಗೆರೆಗಳು ಬೀಳುವ ಹಾಗೆ ನಾಲ್ಕು ದಿಕ್ಕಿಗೂ ಚಿವರಿದ ಹಾಗೆ ಗೆರೆಗಳನ್ನು ಹಾಕಬೇಕು. ಈ ಪ್ರಕಾರ ಪ್ರತಿ ಯೊಂದು ಕಾಯಿಗೂ ನಾಲ್ಕು ದಿಕ್ಕಿಗೂ ಮೂರು ಮೂರು ಗೀರುಗಳನ್ನು ಹಾಕಿ ಬಿಡಬೇಕು. ಆ ಮೇಲೆ ಮರುದಿವಸ ಪ್ರಾತಃಕಾಲದಲ್ಲಿ ಆ ಕಾಯಿಗಳ ಮೇಲಿ ರುವ ಗೀರುಗಳಲ್ಲಿ ಅಂಟಿನ ಹಾಗೆ ಅಂಟು ಬಂದಿರುವದು. ಅದು ಮಹಾ ವಿಷವು ಅದನ್ನು ತಿಂದರೆ ಸರ್ಪನ ವಿಷದಂತೆ ಅಮಲಾಗುತ್ತದೆ. ನಿದ್ರೆ ಹತ್ತುತ್ತದೆ ಆ ಕಸಕಸಿಯ ಕಾಯಿಯಲ್ಲಿ ಹೊರಡುವ ಅಂಟಿಗೆ ಕೆಲವರು ಆಪೀಮು ಎನ್ನುತ್ತಾರೆ. ಈ ದೇಶದಲ್ಲಿ ಅದಕ್ಕೆ ಅಫು ಎಂಬ ಹೆಸರು. ಅದನ್ನು ತೆಗೆದುಕೊಳ್ಳಬೇಕಾದರೆ ಎರಡು ಹಸ್ತಗಳಿಗೆ ಔಡಲ ಎಣ್ಣೆಯನ್ನು ಹಚ್ಚಿಕೊಂಡು ಒಂದೊಂದು ಬಟ್ಟಲದಲ್ಲಿಯಾಗಲಿ ಅಥವಾ ಮಣ್ಣಿನ ಮುಚ್ಚಳಗಳಲ್ಲಿಯಾಗಲಿ ಸ್ವಲ್ಪ ಔಡಲ ಎಣ್ಣೆಯನ್ನು ತಳದಲ್ಲಿ ಹಾಕಿಕೊಂಡು ಸಿಂಪೆಯಿಂದ ಅದರ ಅಂಟನ್ನು ಗೀರಿಕೊಂಡು ಬಟ್ಟಲಗಳಲ್ಲಿ ಹಾಕುತ್ತಾರೆ ಈ ಪ್ರಕಾರ ಎಲ್ಲ ಕಾಯಿಗಳಲ್ಲಿರುವ ಅಫುವನ್ನು ಬಿಡಿಸಿಕೊಂಡು ಔಡಲ ಎಣ್ಣೆಯನ್ನು ಕೈಗೆ ಹಚ್ಚಿಕೊಂಡು ಚನ್ನಾಗಿ ನಾದಿ ಎರಡುವರೆ ಸೇರು ತೂಕದ ಪ್ರಮಾಣ ಒಂ ದೊಂದು ಹಲ್ಲೆಯನ್ನು ಮಾಡಿ ಔಡಲ ಎಲೆಗಳಿಗೆ ಔಡಲ ಎಣ್ಣೆಯನ್ನು ಹಚ್ಚಿ ಆ ಹಲ್ಲೆಗಳನ್ನು ಬೇರೆ ಬೇರೆ ಎಲೆಗಳಲ್ಲಿ ಕಟ್ಟಿ ಇಟ್ಟುಕೊಂಬುತ್ತಾರೆ. ಆ ಮೇಲೆ ಕೆಲವು ದಿವಸಕ್ಕೆ ಕಸಕಸಿಯ ಕಾಯಿಗಳು ಹಸರು ಹೋಗಿ ಬಿಳುಪಾಗೋಣ ಇವುಗಳನ್ನು ಮುರಿದುಕೊಂಡು ಮೊಟ್ಟೆಯಲ್ಲಿ ತುಂಬಿಕೊಂಡು ಬಂದು ಒಂದು ಗುಡಾರವನ್ನು ಹಾಸಿ ಅದರ ಮೇಲೆ ಕಾಯಿಗಳನ್ನೆಲ್ಲ ಒತ್ತೊ ಟ್ಟಿಗೆ ಹಾಕಿ ಕುಡುಗೋಲುಗಳಿಂದಾಗಲಿ ಈಳಿಗೆಯಿಂದಾಗಲಿ ಕಾಯಿಗಳನ್ನು ಕೊರೆದು ಕಸಕಸಿಯನ್ನು ಉದುರಿಸಿ ಸೊಟ್ಟೆಗಳನ್ನೆಲ್ಲ ಒಂದು ಕಡೆಗೆ ಹಾಕ

ಬೇಕು. ಈ ಪ್ರಕಾರ ಎಲ್ಲ ಕಾಯಿಗಳನ್ನು ಕೊರೆದು ಕಸಕಸಿಯ ರಾಶಿಯನ್ನು ಮಾಡಿಕೊಳ್ಳಬೇಕು. ಈ ಕಸಕಸಿಯ ಉತ್ಪನ್ನವನ್ನು ಸ್ವಲ್ಪ ಸೂಚಿಸುತ್ತೇನೆ. ಸಾಕಳಿ ಅಳತೆಯ ಒಂದು ಎಕರೆ ಭೂಮಿಯಲ್ಲಿ ಕಸಕಸಿಯನ್ನು ಹಾಕಿದರೆ ಐವತ್ತು ರೂಪಾಯದ ಅಜಮಾಸು ಕಸಕಸಿಯು ಸ್ವಲ್ಪ ಹೆಚ್ಚು ಕಡಿಮೆ ನೂರು ಸವ್ವಾನೂರು ರೂಪಾಯದ ಅಫು ಅಜಮಾಸು ಹತ್ತು ರೂಪಾಯದ ಉಳ್ಳೀಗಡ್ಡೆಯಷ್ಟು ಆಕಾರವು ನಾಲ್ಕು ತಿಂಗಳಲ್ಲಿ ಕೈಗೆ ಬರುವದು. ಸುಮಾರು ಒಂದುವರನೂರು ರೂಪಾಯದ ಆಕಾರಕ್ಕೇನು ಕಡಿಮೆಯಾಗುವದಿಲ್ಲ

## ಜೀರಿಗೆಯು.

ಜೀರಿಗೆಯನ್ನು ಮುಂಗಾರಿಯ ಕಾಲದಲ್ಲಿ ಎರೆಯಲ್ಲಿ ತಂಪು ಎರಿಯ ಭೂಮಿ ಇದ್ದರೆ ಬಿತ್ತುತ್ತಾರೆ. ತೋಟದಲ್ಲಿ ಆದರೂ ಜೀರಿಗೆ ಶಾಜೀರಿಗೆ ಸೊಪ್ಪು ಮೊದಲಾದವುಗಳನ್ನು ಬಿತ್ತಿ ಬೆಳೆ ಮಾಡಿಕೊಳ್ಳಬೇಕು ಜೀರಿಗೆ ಶಾಜೀರಿಗೆಯನ್ನು ಬಿತ್ತತಕ್ಕ ಭೂಮಿಯು ಹೇಗಿರಬೇಕೆಂದರೆ, ಕೆಂಪು ಭೂಮಿ ಮಡಿಯ ಭೂಮಿ, ಮೊರಡಿಯ ಭೂಮಿಯಾಗಲಿ, ಎರೆಯಾಗಲಿ ಬಲಾತ್ಕಾರ ವಾದ ಭೂಮಿ ಇದ್ದರೆ ಬೈಲು ಹೊಲಗಳಲ್ಲಿಯಾದರೂ ತೋಟಗಳಲ್ಲಿಯಾದರೂ ಜೀರಿಗೆಯೂ ಶಾಜೀರಿಗೆಯೂ ಬೆಳೆಯುತ್ತವೆ.

ಜೀರಿಗೆಯನ್ನು ಬಿತ್ತುವ ಭೂಮಿಯು ಜಿರಾಯತದಲ್ಲಿ ಬೈಲು ಹೊಲಗಳಲ್ಲಿಯಾಗಲಿ ಅಥವಾ ತೋಟಗಳಲ್ಲಿಯಾಗಲಿ ಮೊದಲು ಗೊಬ್ಬರವನ್ನು ಹಾಕಿ ಎರಡು ಸಾಲು ಮಡಿಕೆಯನ್ನು ಹೊಡೆದು ಮೂರು ಸಾಲು ಚನ್ನಾಗಿ ಹರಿಗಿ ನಾಲ್ಕು ತಾಳಿನ ಕೂರಿಗೆಯಿಂದ ಒಂದು ಸೇರು ಅಳತೆಯ ಮಾಪಿನ ಜೀರಿಗೆಯಲ್ಲಿ ಎಂಟು ಸೇರು ಅಳತಿಯ ಮಾಪಿನ ಸಣ್ಣ ಉಸುಕನ್ನು ಕೂಡಿಸಿ ಬಿತ್ತಬೇಕು. ಹಾಗೂ ತೋಟಗಳಲ್ಲಿ ಕೂರಿಗೆಯಿಂದ ಬಿತ್ತಿ ಮಡಿ ಮಾಡಿ ನೀರು ಬಿಟ್ಟರೂ ಬರುತ್ತದೆ. ಅಥವಾ ಮಡಿಗಳನ್ನು ಮಾಡಿ ಅಡವು ಹಾಗು ಅಂಗಲ ಆಗದಂತೆ ಹವಣಾಗಿ ಬೀಜಗಳನ್ನು ಚಲ್ಲಿ ನೀರು ಬಿಟ್ಟರೂ ಬರುತ್ತದೆ. ಹೊಲಗಳಲ್ಲಿ ಬಿತ್ತಿದರೆ ಮಳೆಗಾಲ ಹೆಚ್ಚಾದ ಹಾಗೆ ವಿಶೇಷ ಬೆಳೆಯಾಗುವದು. ತೋಟಗಳಲ್ಲಿ ಹದದ ಮೇಲೆ ನೀರು ಬಿಡುವದರಿಂದ ಯಥಾ ಪ್ರಕಾರ ಬೆಳೆಯಾಗುವದು.

ಜೀರಿಗೆಯ ಬೀಜವನ್ನಾಗಲಿ ಶಾಜೀರಿಗೆಯ ಬೀಜವನ್ನಾಗಲಿ ಅಂಗಡಿಗಳಲ್ಲಿ ತಂದು ಬಿತ್ತಿದರೆ ನಾಟುವದಿಲ್ಲ ಅವುಗಳು ಮುಗ್ಗು ಹಾದಿರುವದರಿಂದ ಹೊಸ ಜೀರಿಗೆಯ ಬೀಜಗಳನ್ನು ಮುಗ್ಗು ಹಾಯದೆ ಇರುವ ಜೀರಿಗೆ ಮತ್ತು ಶಾಜೀರಿಗೆಯ ಬೀಜಗಳನ್ನು ತರಿಸಿ ಬಿತ್ತಬೇಕು. ಜೀರಿಗೆಯನ್ನು

ಬಿತ್ತುವ ಕಾಲವು ಮೃಗಶಿರ ಆರದ್ರಿ ಪುಷ್ಯ ಪುನರ್ವಸು ಮಳೆಗಳ ವರೆಗೂ ಮುಂಗಾರಿಯ ಕಾಲದಲ್ಲಿ ಬಿತ್ತಿದರೆ ಕಾರ್ತಿಕ ಮಾರ್ಗಶೀರ್ಷ ಮಾಸಕ್ಕೆ ರಾಶಿಯಾಗುವವು.

## ಶಾಜೀರಿಗೆಯು.

ಶಾಜೀರಿಗೆಯನ್ನು ಜೀರಿಗೆಯನ್ನು ಬಿತ್ತಿದ ಹಾಗೆ ಬಿತ್ತಿ ಬೆಳೆ ಮಾಡಿ ಕೊಳ್ಳಬೇಕು. ಅದನ್ನು ಬಿತ್ತುವ ವಿವರವನ್ನು ಈ ಪ್ರಕರಣದಲ್ಲಿ ಹಿಂದೆ ಹೇಳಿದ ಪ್ರಕಾರ ಪ್ರಯತ್ನ ಮಾಡಿ ಬಿತ್ತಿಕೊಳ್ಳಬೇಕು.

## ಸೊಪ್ಪು.

ಸೊಪ್ಪನ್ನು ಹೊಲಗಳಲ್ಲಿ ತಂಪು ಎರೆಯಾದರೆ ಸಬ್ಬಸಗಿಯನ್ನು ಬಿತ್ತಿದ ಹಾಗೆ ಬಿತ್ತಿದರೂ ಬರುತ್ತದೆ. ಅಥವಾ ಹತ್ತಿಯ ಹೊಲದಲ್ಲಿ ಸ್ವಲ್ಪ ಬೆರಸು ಗಾಳು ಕೂಡಿಸಿ ಬಿತ್ತಿದರೂ ಬರುತ್ತದೆ. ತೋಟಗಳಲ್ಲಿ ಮಡಿಗಳಲ್ಲಿ ಬೀಜ ಗಳನ್ನು ಚಲ್ಲಿ ನೀರು ಬಿಟ್ಟರೂ ಬೆಳೆಯುತ್ತದೆ ಸೊಪ್ಪು ಹೊಸ ಬೀಜವಾದರೆ ಅಂಗಡಿಗಳಲ್ಲಿ ತಂದು ಹಾಕಿದರೂ ಬರುತ್ತದೆ ಮತ್ತು ಮೆಂತೆ ಸಾಸಿವೆಗಳನ್ನು ಎರಿಯಲ್ಲಿ ಬಿತ್ತಿದರೂ ಬೆಳೆಯುತ್ತವೆ. ತೋಟಗಳಲ್ಲಿ ಹಾಕಿದರೂ ಬೆಳೆಯುತ್ತವೆ.

## ಬೂಂದಿನ ದಾಣಿ.

ಬೂಂದಿನ ಗಿಡಗಳು ತೋಟಗಳಲ್ಲಿ ಯಾವ ಭೂಮಿಗಳಲ್ಲಿಯಾದರೂ ಬೆಳೆಯುತ್ತವೆ. ಈ ಗಿಡದ ಬೀಜವನ್ನು ಇಂಗ್ಲೀಷರು ಮತ್ತು ಆರಬರು ಬಹಳವಾಗಿ ಭಕ್ಷಿಸುತ್ತಾರೆ ಈ ಗಿಡಗಳನ್ನು ಬಹಳ ಜನರು ಬೆಳೆಸುವದಿಲ್ಲ ವಾದ ಕಾರಣ ಹನ್ನೆರಡು ರೂಪಾಯಕ್ಕೆ ಒಂದು ಮಣದಂತೆ ಮಾರುತ್ತವೆ. ಬೂಂಪದ ಬೀಜಗಳನ್ನು ಹಾಕುವ ಕಾಲವು ಮುಂಗಾರಿಯ ತಲೆಯಲ್ಲಿ. ಮೃಗಶಿರ ಆರದ್ರಿಯ ಕಾಲದಲ್ಲಿ ಬೀಜವನ್ನು ಹಾಕಿ ಆಗಿಗಳನ್ನು ಮಾಡಿ ತೋಟದಲ್ಲಿ ನಾಲ್ಕ ಮೊಳಕ್ಕೊಂದರಂತೆ ತಗ್ಗುಗಳನ್ನು ತಗಿಸಿ ಆ ಸಸಿಗಳನ್ನು ಕಿತ್ತಿ ಹಚ್ಚಬೇಕು. ಆ ಮೇಲೆ ಚನ್ನಾಗಿ ನೀರು ಬಿಟ್ಟು ಆರೈಕೆಯನ್ನು ಮಾಡಿ ದರೆ ಅಡಸರದ ಗಿಡಗಳಂತೆ ಗಿಡಗಳಾಗಿ ಮಲ್ಲಿಗೆಯ ಹೂವಿನ ಹಾಗೆ ಹೂವಾಗಿ ಸಣ್ಣ ಬೋರೆಯ ಕಾಯಿಗಳ ಹಾಗೆ ಕಾಯಿಗಳಾಗುತ್ತವೆ. ಆ ಕಾಯಿಗಳು ಹಣ್ಣಾಗಿ ಒಣಗಿದ ಮೇಲೆ ತೆಗೆದುಕೊಂಡು ಬೀಜಗಳನ್ನು ರಾಶಿಯ ಮಾಡಿ ಬೇಕಾ ದಾಗ ಮಾರಾಟ ಮಾಡಬೇಕು. ಈ ಬೂಂದಿನ ದಾಣಿಯನ್ನು ತೆಗೆದುಕೊಂಡರೆ ಶರೀರಕ್ಕೆ ಆರೋಗ್ಯವಾಗಿರುವದು. ಹಾಗು ಯಾವ ಜನರಾದರೂ ತೆಗೆದು ಕೊಳ್ಳುವದಕ್ಕೆ ಸಂಶಯವಿಲ್ಲ.

## ಚಹಾದ ತೊಪ್ಪಲು.

ಚಹಾ ತೊಪ್ಪಲವನ್ನು ಸರ್ವ ಜನರು ತೆಗೆದುಕೊಳ್ಳುತ್ತಾರೆ. ಈ ಚಹಾ ತೊಪ್ಪಲದ ಬೀಜವು ಸಣ್ಣದಾಗಿ ಕಸಕಸಿಯಂತೆ ಇರುತ್ತದೆ. ಕಸಕಸಿಯನ್ನು ಹಾಕಿದ ಹಾಗೆ ಉತ್ತರಾ ಹಸ್ತಾ ಚಿತ್ತಿ ಸ್ವಾತಿಯ ಮಳೆಗಳಲ್ಲಿಯಾದರೂ ಕಸಕಸಿಯ ಮಡಿಗಳಂತೆ ಮಡಿಗಳನ್ನು ಮಾಡಿ ಚನ್ನಾಗಿ ಗೊಬ್ಬರ ಹಾಕಿ ಕಸಕಸಿಯ ಬೀಜವನ್ನು ಚಲ್ಲಿದ ಹಾಗೆ ಬೀಜವನ್ನು ಮಡಿಗಳಲ್ಲಿ ಚಲ್ಲಿ ನೀರು ಬಿಡುತ್ತ ಹೋಗಬೇಕು ಇದಕ್ಕೆ ಎರಡು ಮೂರು ವೇಳೆ ಸದೆ ತೆಗಿಸಿದರೆ ಬೆಳೆಯಾಗುತ್ತದೆ. ಇವುಗಳ ಬೀಜಗಳು ಹೈದರಾಬಾದ ಪ್ರಾಂತದಲ್ಲಿ ಬಹಳ ಸಿಕ್ಕುತ್ತವೆ ಇದರ ತೊಪ್ಪಲವು ಮಾರುತ್ತದೆ ಅದು ಒಣಗಿದರೂ ಸಹ ಬರುತ್ತದೆ. ಇದನ್ನು ತೆಗೆದುಕೊಳ್ಳುವವರು ಬೊಗೋಣಿಯಲ್ಲಿ ಸವಿ ನೀರು ಕಾಯಲಿಕ್ಕೆ ಇಟ್ಟು ನೀರು ಹೊಯ್ದಾಡುವಾಗ ಈ ತೊಪ್ಪಲವನ್ನು ಹಾಕಿ ಅದರ ಎಸರನ್ನು ಬಸಿದುಕೊಂಡು ಬಿಳೀ ಸಕ್ಕರೆಯನ್ನು ಹಾಲನ್ನು ಹಾಕಿ ತೆಗೆದುಕೊಳ್ಳುತ್ತಾರೆ. ಇದರಿಂದ ಎಷ್ಟು ದಣಿವಿದ್ದರೂ ದೇಹಕ್ಕೆ ಪರಿಣಾಮವಾಗಿ ವಿಶ್ರಾಂತಿಯಾಗುತ್ತದೆ

## ಪುಷ್ಪದ ಗಿಡಗಳು ಲತೆಗಳು.

ವೃಕ್ಷಗಳಲ್ಲಿ ಪುಷ್ಪದ ಗಿಡಗಳು ನೋಟಕ್ಕೆ ರಮ್ಯವಾಗಿರುವವು ಮತ್ತು ಪುಷ್ಪದ ಕುಲದಲ್ಲಿ ಬಹು ವಿಧಗಳುಂಟು ಅವುಗಳು ಕೆಲವು ಮರಗಳಾಗುತ್ತವೆ. ಕೆಲವು ಕುಲಗಳು ಪುರುಷ ಪ್ರಮಾಣದ ಗಿಡಗಳಾಗುತ್ತವೆ. ಕೆಲವು ಕುಲಗಳು ಚಿಕ್ಕ ಗಿಡಗಳಾಗುತ್ತವೆ ಕೆಲವು ಬಳ್ಳಿಗಳಾಗುತ್ತವೆ.

## ಪುಷ್ಪಗಳಲ್ಲಿ ವೃಕ್ಷ ಜಾತಿ.

ಪುಷ್ಪ ವೃಕ್ಷಗಳಲ್ಲಿ ದೊಡ್ಡ ವೃಕ್ಷಗಳಾಗತಕ್ಕ ಸುಂದರ ಪುಷ್ಪ ಗಿಡಗಳು ಸಂಪಿಗೆ ವನಸಂಪಿಗೆ ನಾಗಸಂಪಿಗ ಕೋಲಸಂಪಿಗೆ ಕೆಂಡಸಂಪಿಗೆ ದುಂಡುಸಂಪಿಗೆ ಇವುಗಳೆಲ್ಲ ಬೀಜಗಳಾಗಿವೆ ಸಂಪಿಗೆಯ ಕುಲದ ಎಲ್ಲ ಬೀಜಗಳು ನಾಟುತ್ತ ಅಗಿಗಳಾಗುತ್ತವೆ. ಹಾಗು ಸಂಪಿಗೆಯ ಬೀಜಗಳು ನೂರಾರು ಹಾಕಿದರೆ ಅವುಗಳಲ್ಲಿ ನಾಲ್ಕು ಮೂರು ನಾಟುತ್ತವೆ ಬಕುಳ ಪಾದರಿ ದೇವಗಣಿಗಿಲ ಗೋಲಸರ ಪುನ್ನಾಗ ಸುರಿಗೆ ಬೆಟ್ಟದಾವರಿ ಕಂಚಿವಾಲದಲ್ಲಿ ಬಿಳಿಯ ಕಂಚಿವಾಲ ಕೆಂಪು ಕಂಚಿವಾಲ ಕಾಡವರಿ ಸುರಹೊನ್ನೆ ಚೊಗಚಿ ಕಾಶೀಕಣಿಗಿಲ ಈ ವೃಕ್ಷಗಳ ಬೀಜಗಳನ್ನು ಹಾಕಿ ಅಗಿ ಮಾಡಿ ಹಚ್ಚಬೇಕು. ಕಣಿಗಿಲವೆಂದರೂ ಕರವೀರವೆಂದರೂ ಒಂದೇ ಪರಿಯಾಯವು. ಕಣಿಗಿಲದಲ್ಲಿ ರತ್ನಗಣಿಗಿಲ

ಚಂಡುಕಣಿಗಿಲ ಎತ್ತರಕಣಿಗಿಲ ಬಿಳಿಯಗಣಿಗಿಲ ಇವುಗಳ ಕೊಲ್ಲೆಗಳನ್ನು ಹಚ್ಚಬೇಕು ಗುಲಾಬಿ ನಂದಿವಟ್ಟಲು ಕಲಿಗಣನಾಥ ಹಾಗು ದಾಶಿವಾಳದಲ್ಲಿ ಕೆಂಪು ದಾಶಿವಾಳ ಬಿಳಿಯ ದಾಶಿವಾಳ ಚಂಡುದಾಶಿವಾಳ ಕಾಶೀದಾಶಿವಾಳ ಅಡಸಾರ ಸುಂಕೇಶ್ವರ ಅವರಗಂಚಿ ಗೋರಟೆ ರುದ್ರಗಂಟೆ ಜಾಜಿ ನಿತ್ಯ ಮಲ್ಲಿಗೆ ಹವಳ ಮಲ್ಲಿಗೆ ದುಂಡು ಮಲ್ಲಿಗೆ ಚಂಡು ಮಲ್ಲಿಗೆ ಕದರ ಮಲ್ಲಿಗೆ ಸೂಜಿಮಲ್ಲಿಗೆ ಮೊಲ್ಲೆ ಮಲ್ಲಿಗೆ ಇರವಂತಿಗೆ ಇವುಗಳಲ್ಲಿ ಕೆಲವು ಕೊಲ್ಲೆ ಗಳನ್ನು ಕೆಲವು ಅಂಟುಗಳನ್ನು ಮಾಡಿ ಹಚ್ಚಬೇಕು ಹೊನ್ನವರೆ ಬಸವನಪಾದ ಮುಳ್ಳುಜಾಜಿ ಇವುಗಳ ಬೀಜಗಳನ್ನು ಹಾಕಿ ಅಗಿ ಮಾಡಿ ಹಚ್ಚಬೇಕು ಸೇವಂತಿಗೆ ಅಡಿಕಯ ಹೂವು ವಿಲಾಯತಿಯ ಚಂಡು ಹೂವುಗಳನ್ನು ಹಚ್ಚ ಬೇಕಾದರೆ ಬಲಿತ ಹೂವನ್ನು ಒಣಗಿಸಿ ಇಟ್ಟುಕೊಂಡರೆ ಆ ಹೂವಿನೊಳಗ ಬೀಜಗಳಿರುವವು ಅವುಗಳನ್ನೇ ಮಡಿಗಳಲ್ಲಿ ಹಾಕಿ ಅಗೀ ಮಾಡಿ ಕಿತ್ತಿ ಹಚ್ಚ ಬೇಕು ಚಂಡು ಹೂವಿನಲ್ಲಿ ವಿಲಾಯತಿ ಚಂಡು ಹೂವಿನ ಬಹಳ ಪ್ರಕಾ ರದ ಕುಲಗಳುಂಟು ಅವುಗಳನ್ನು ಬೇರೆ ಬೇರೆ ಅಗಿ ಮಾಡಿ ಬೇರೆ ಬೇರೆ ಹಚ್ಚಬೇಕು ಬೀಜಗಳನ್ನಾದರೂ ಬೇರೆ ಬೇರ ಮಾಡಿ ಇಟ್ಟುಕೊಳ್ಳಬೇಕು ಮತ್ತು ಶೋಭೆಗಾಗಿ ಔಡಲ ಗಿಡಗಳಲ್ಲಿ ಕೆಂಪು ಬಿಳಿದು ಹಳದಿ ಊದಿ ಮೊದಲಾದ ಪಂಚರಂಗಿನ ಔಡಲಗಳುಂಟು ಅವುಗಳ ಬೀಜಗಳನ್ನು ತರಿಸಿ ಬೇರೆ ಬೇರೆ ಹಾಕಬೇಕು ನಾಗಮಲ್ಲಿಗೆಗೆ ಅಂಟು ಆಗುತ್ತದೆ.

## ವೃಕ್ಷ ಜಾತಿಗಳು.

ತೋಟಗಳಲ್ಲಿ ಉಪವನಗಳಲ್ಲಿ ಶೃಂಗಾರ ವನಗಳಲ್ಲಿ ಪುಣ್ಯ ವನಗಳಲ್ಲಿ ಉದ್ಯಾನ ವನಗಳಲ್ಲಿ ಶೋಭೆಗೂ ನೆರಳಿಗೂ ಕೆಲವು ಹಣ್ಣು ಫಲಾ ದಿಗಳಿಗೂ ಉಪಯೋಗವಾಗುವ ವೃಕ್ಷಗಳನ್ನು ಬೆಳೆಮಾಡಿಕೊಳ್ಳಕತ್ತದ್ದು. ಅದು ಹೇಗಂದರೆ, ಆಲ ಅತ್ತಿ ಅರಳಿಯ ವೃಕ್ಷಗಳು ಅಕಲ್ಪಿತವಾಗಿ ಈ ಗಿಡಗಳ ಕೆಳಗೆ ಸಸಿಗಳಾಗುವವು. ಅಥವಾ ಕೊಲ್ಲೆಗಳನ್ನಾದರೂ ಹಚ್ಚಿದರೂ ಬರುತ್ತದೆ. ಬಸರಿಯ ಗಿಡದ ಕೊಲ್ಲೆಯನ್ನು ಹಚ್ಚಬೇಕು ಹುಣಿಸೆ ಬೋರಿ ನೆಲ್ಲಿ ನೀರಲ ಹಲಸು ಮುತ್ತಲ ಕೇರು ಗೋಡಂಬಿ ಬೇವು ಅರಬೇವು ಕಂಚಾಲ ಬೆಟ್ಟ ದಾವರೆ ಸಂಪಿಗೆ ಪಾದರಿ ಸುರಹೊನ್ನೆ ಹೊನ್ನೆ ಮತ್ತಿ ಕರಿಮತ್ತಿ ಬೀಟೆ ಬಗನಿ ಅಶೋಕ ಹಾಲಿವಾಣ ಸಿರಸಲ ತೇಗು [illegible] ಶ್ರೀಗಂಧ ಚಂದನ ಅಗರು ದೇವದಾರ ಮೊದಲಾದ ವೃಕ್ಷಗಳೆಲ್ಲ ಬೀಜಗಳಿಂದಾಗುತ್ತವೆ ಇವುಗಳ ಬೀಜ ಗಳನ್ನು ಹಾಕಿ ಅಗಿ ಮಾಡಿ ಬೆಳಿಸಬೇಕು ಹೆಬ್ಬೇವು ಬೇರಿನಿಂದಾಗುವದು. ನಂದಿವಾಲ ಅಂಟು ಮಾಡಿ ಹಚ್ಚಬೇಕು ತುಳಿಸೆ ಅಂಟು ಮಾಡಿದರೂ ಆಗುತ್ತದೆ ಅಥವಾ ಬೀಜವನ್ನಾದರೂ ಹಾಕಬೇಕು. "ತೋಟಕ್ಕೆ ಮೊದಲು ಚೊಗಚಿ" ಎಂಬರು. ಹೊಸ ತೋಟಗಳನ್ನು ಮಾಡುವ ಸಮಯದಲ್ಲಿ ಮೊದಲು

ಬೀಜಗಳನ್ನು ಹಾಕಿದರೆ ತೀವ್ರವೇ ಬೆಳೆದು ನೆರಳಾಗುವದು. ಮತ್ತು ತೋಟದ ಬೇಲಿಯ ಶೃಂಗಾರಕ್ಕೆ ಕಳ್ಳಿಯ ಹಿಂದೆ ನಾಲ್ಕು ಬೆರಳು ಅಂತರವಾಗಿ ಹುಲಗಲೀ ಬೀಜವನ್ನು ಹಾಕಬೇಕು ಅದು ಬಹು ಹಸುರಾಗಿ ಯಾವಾಗಲೂ ದಟ್ಟಿತ ವಾದ ತೊಪ್ಪಲುಳ್ಳದ್ದಾಗಿರುವದರಿಂದ ಶೃಂಗಾರವಾಗಿ ಕಾಣಿಸುವದು ಹಾಗು ಅದರ ತೊಪ್ಪಲವು ನೆಲ್ಲು ಹೊಲಕ್ಕೂ ಯಾಲಕ್ಕಿಯ ಗಿಡಗಳಿಗೂ ಉತ್ತಮ ವಾದ ಗೊಬ್ಬರದಂತೆ ಉಪಯೋಗವಾಗುತ್ತದೆ ಅದಕ್ಕೆ ಕೆಲವರು ತಮಾಲ ವೆಂಬುವರು

ಈ ಯಾವತ್ತು ಮರಜಾತಿಗಳನ್ನು ಪುಷ್ಪದ ಗಿಡಗಳನ್ನು ಕ್ರಮಯುಕ್ತ ವಾಗಿ ಹಚ್ಚುವ ತಾರತಮ್ಯವನ್ನು ಪುಣ್ಯಾವನದ ಪರಿಯಾಯದಲ್ಲಿ ಕ್ರಮಯುಕ್ತ ವಾಗಿ ಹಚ್ಚುವ ರೀತಿಯನ್ನು ಹೇಳಿದ್ದೇನೆ

ತೋಟಗಳಲ್ಲಿಯಾದರೂ ಈ ದೊಡ್ಡ ವೃಕ್ಷಗಳನ್ನು ಬೇಲಿಯ ಸಮೀಪಕ್ಕೆ ಅಲ್ಲಲ್ಲಿಗೆ ಒಂದೊಂದರಂತೆ ನೋಡಿ ಜಾಣತನದಿಂದ ಶೋಭಾಯಮಾನವಾಗಿ ಕಾಣುವ ಹಾಗೆ ಹಚ್ಚಿದರೂ ಬರುತ್ತದೆ.

ತೋಟಗಳಲ್ಲಿಯಾದರೂ ಮನೆಗಳಲ್ಲಿಯಾದರೂ ಹೊಲಗಳಲ್ಲಿಯಾದರೂ ಉಪವನಗಳಲ್ಲಿಯಾದರೂ ಧರ್ಮ ನಿಮಿತ್ಯವಾಗಿ ಪರಮೇಶ್ವರನಿಗೆ ಸ್ವಲ್ಪ ಸ್ವಲ್ಪಾದರೂ ಬಹಳವಾದರೂ ಅಷ್ಟರೊಳಗಷ್ಟನಾದರೂ ಸಮರ್ಪಿಸಬೇಕು. ಹೇಗೆಂದರೆ ಮನೆಗಳಲ್ಲಿ ದೇವರಮನೆ ಎಂದು, ಮಠಗಳಲ್ಲಿ ಗುರುಮಂದಿರವೆಂದು, ಗ್ರಾಮಗಳಲ್ಲಿ ದೇವಾಲಯವೆಂದು, ಉಪವನಗಳಲ್ಲಿ ಪುಣ್ಯ ವನವೆಂದು ಬಿಲ್ವ ವನವೆಂದು ಪುಷ್ಪವನವೆಂದು ಪರಮೇಶ್ವರನ ನಿಮಿತ್ಯವಾಗಿ ಸ್ವಲ್ಪ ಸ್ವಲ್ಪಾ ದರೂ ಮಾಡಿಸಿದರೆ ಈ ಪುಣ್ಯದಿಂದ ಆ ಸ್ಥಲಗಳು ವರ್ಧನವಾಗುತ್ತಿರುವವು. ಸಾಕ್ಷಿ॥ ಗೃಹಕ್ಷೇತ್ರಂ ಚ ಧಾನ್ಯಂಚ । ಗೋಕುಲಂ ಮಹೀಪಸ್ತಥಾ ।। ಜಂಗ- ಮೇಷ್ಟಾನ್ನದಾತಾಚ । ಪ್ರಸಾದಂ ನಿಷ್ಫಲಂ ಭವೇತ್ । ಎಂದುಂಟಾಗಿ ಪುಣ್ಯ ಪ್ರಸನ್ನವಾದಲ್ಲಿ ಲಕ್ಷ್ಮೀ ಪ್ರಸನ್ನತೆಯಾಗಿರುವಳು. "ಶಿವ ಪ್ರಸಾದಾತ್ ಲಕ್ಷ್ಮೀ ಪ್ರಸನ್ನತಾ" ಎಂದುಂಟಾಗಿ ಶಿವ ಪ್ರಸನ್ನವಿಲ್ಲದಿದ್ದರೆ ಲಕ್ಷ್ಮೀ ಪ್ರಸನ್ನತೆ ಇಲ್ಲವು ಲಕ್ಷ್ಮೀ ಪ್ರಸನ್ನತೆ ಇಲ್ಲದಿದ್ದರೆ ಮುತ್ತೈದಿತನವಿಲ್ಲದ ಸ್ತ್ರೀಯಳಂತೆ ಕಾಣುವದು. ಅದು ಕಾರಣ ತೋಟಗಳಲ್ಲಿ ಸ್ವಲ್ಪ ಭೂಮಿಯಾದರೂ ಕೆಲವು ಬಿಲ್ವವೃಕ್ಷಗಳನ್ನು ಪುಷ್ಪ ವನವನ್ನು ನೀರಿನ ತಂಪು ಇರುವಲ್ಲಿ ಮಾಡಿಸಿ ಬೇಸರ ಪಡದೆ ಅಲಕ್ಷ ಮಾಡದೆ ನೀರು ಬಿಡುತ್ತಿರಬೇಕು. ಅವುಗಳು ವರ್ಧನವಾದ ಹಾಗೆಲ್ಲ ಐಶ್ವರ್ಯ ವರ್ಧನವಾಗುವದೆಂಬ ಸೂಚನೆಯು. ಅದು ಕೆಟ್ಟಾಗಲೇ ಐಶ್ವರ್ಯ ಕೆಡುವದು. ಅದು ಕಾರಣ ಪುಷ್ಪ ವನದಲ್ಲಿ ಲಕ್ಷವಿರಬೇಕು. ಆಗಾಗಲೆ ನೀರು ಬಿಟ್ಟು ಆರೈಕೆಯನ್ನು ಮಾಡಿದರೆ ತೋಟವು ಸಂಭ್ರಮ ವಾಗಿ ಕಾಣುತ್ತಿರುವದು.

ಅಡಿಕೆಯ ಗಿಡಗಳ ಸುತ್ತಲೂ ತೆಂಗಿನ ವನದ ಸುತ್ತಲೂ ಬಾಳೆಯ ವನದ ಸುತ್ತಲೂ ಎಲೆ ಬಳ್ಳಿಗಳ ಸುತ್ತಲೂ ಯಾಲಕ್ಕಿಯ ಗಿಡಗಳ ಸಸಿಗಳನ್ನು ಮಾಡುವಲ್ಲಿ ಮತ್ತು ಸಸಿಗಳನ್ನು ಹಚ್ಚಿ ಬೆಳಿಸುವಲ್ಲಿ ಮಾಡಿದ ತಗ್ಗುಗಳ ಸುತ್ತಲೂ ನಾಲ್ಕೂ ಕಡೆಗೂ ಅಡಸಾರದ ಗಿಡಗಳನ್ನು ಹಚ್ಚಿದರೆ ಬಹಳ ಚಾಟಾಗಿ ತಟ್ಟಿಯ ಕಟ್ಟಿದ ಹಾಗೆ ಆಗುವದು ಮತ್ತು ತಂಪಾಗುವದು. ಹಾಗೂ ಶೋಭಾಯಮಾನವಾಗಿ ಕಾಣುವದು ಅವುಗಳ ಪುಷ್ಪಗಳಾದರೂ ಸದಾ ಇರುವವು

ಶೃಂಗಾರ ವನಗಳಲ್ಲಿ ಪುಣ್ಯ ವನಗಳಲ್ಲಿ ಉಪ ವನಗಳಲ್ಲಿ ಬಿಲ್ವ ವನಗಳಲ್ಲಿ ಪುಷ್ಪ ವಾಟಿಕೆಗಳಲ್ಲಿ ಸಾಲು ಹಿಡಿದು ದಟ್ಟಿತವಾಗಿ ಗುಲಾಬಿಯ ಗಿಡಗಳನ್ನು ಹಚ್ಚಿದರೆ ಬೇಲಿಯಂತೆ ಆಗುವದು. ಮತ್ತು ಸುಂದರವಾದ ಪುಷ್ಪಗಳಾಗುವವು ಗುಲಾಬಿಯ ಪುಷ್ಪವು ಸದ್ಗಂಧ ವೃಕ್ಷವುಗಳು.

ಮಂದಿರದ ಮುಂದೆ ಅಂಗಳದಲ್ಲಿಯಾಗಲೀ ಚೌಕಿಯ ಮುಂದಿರುವ ಅಂಗಳದಲ್ಲಿಯಾಗಲೀ ಎಡಬಲಕ್ಕೆ ಬಿದಿರು ಕೋಲುಗಳನ್ನು ನಿಲ್ಲಿಸಿ ಅವುಗಳಿಗೆ ಬಿದಿರು ಸೀಳಿ ತಟ್ಟಿಯ ಹಾಗೆ ಕತ್ತರಿಯ ಮೇಲೆ ಕಟ್ಟಿ ಜಾಜಿಮಲ್ಲಿಗೆಯ ಬಳ್ಳಿಯನ್ನಾಗಲೀ ಸೂಜಿ ಮಲ್ಲಿಗೆಯ ಬಳ್ಳಿಯನ್ನಾಗಲಿ ಹಬ್ಬಿಸಿ ನೀರು ಬಿಡುತ್ತ ಹೋದರೆ ಬಳ್ಳಿಯು ತುಂಬಾ ಹಬ್ಬಿ ಸೌಂದರ್ಯವಾಗಿ ಕಾಣಿಸುವದು ಪುಷ್ಪಗಳ ಸದ್ವಾಸನೆಯು ಇರುವದು ಅವುಗಳ ಮಧ್ಯಭಾಗದಲ್ಲಿ ಸಣ್ಣ ಮಳಲನ್ನು ಹಾಕಿದರೆ ವಿಶ್ರಾಂತಿಗೋಸ್ಕರ ಕೂಡ್ರುವದಕ್ಕೆ ಮನೋಹರವಾಗುವದು

## ತೋಟದ ನೆಲ್ಲು.

ತೋಟಗಳಲ್ಲಿ ನೆಲ್ಲು ಗದ್ದೆಯನ್ನಾದರೂ ಮಾಡಿಕೊಳ್ಳುವದಕ್ಕೆ ಬರುತ್ತದೆ ಆದಾಗ್ಯೂ ಅದು ಬಹಳ ಶ್ರಮವು ಗದ್ದೆಯ ನೆಲ್ಲಿಗೆ ಯಾವಾಗಲೂ ನೀರು ಬೇಕಾಗುವದರಿಂದ ತೋಟದಲ್ಲಿ ಉಳಿದ ಪದಾರ್ಥಗಳಿಗೆ ನೀರು ಸಾಲುವದಿಲ್ಲ. ಹಾಗೂ ಈ ದೇಶದಲ್ಲಿ ನಿರಾಯಾಸದಿಂದ ಕೂರಿಗೆಯಲ್ಲಿ ನೆಲ್ಲು ಬಿತ್ತಿ ಬೆಳೆಯುವದಕ್ಕಾಗಿ ಸುಲಭವಾದ ಭೂಮಿ ಇರಲಾಗಿ "ದ್ರವಿಡಮಂಟಂ" ನ್ಯಾಯದಂತೆ ತೋಟಗಳಲ್ಲಿ ಗದ್ದೆಯನ್ನು ಮಾಡುವ ಪ್ರಯೋಜನವಿಲ್ಲ

ಸ್ವಲ್ಪಾದರೂ ಕರಿಕೆ ಜೇಕು ಈ ಎರಡು ಪದಾರ್ಥಗಳು ಇಲ್ಲದ ಹಾಗೆ ಭೂಮಿಯನ್ನು ನಿರ್ಮಲವಮಾಡಿ ಚನ್ನಾಗಿ ಗೊಬ್ಬರ ಹಾಕಿ ಕೂರಿಗೆಯಿಂದ ನೆಲ್ಲು ಬಿತ್ತಿ ಸಮಯವರಿತು ಹುಲ್ಲು ಬಾಡುತ್ತ ಬಂದ ಹಾಗೆ ನಾಲ್ಕಾರು ವೇಳೆ ನೀರು ಬಿಟ್ಟು ಸದೆಯನ್ನು ತೆಗಿಸುತ್ತ ಹೋದರೆ, ಒಂದು ಕೂರಿಗೆ ಭೂಮಿಗೆ ಅರವತ್ತು ಎಪ್ಪತ್ತು ಹೇರು ನೆಲ್ಲು ಬೆಳೆಯುವದಕ್ಕೆ ಸಂಶಯವಿಲ್ಲ.

ತೋಟಗಳಲ್ಲಿ ನೆಲ್ಲನ್ನು ಬಿತ್ತ ಬೇಕಾದರೆ ಮಳೆಯ ಹಾದಿಯ ನೋಡುವ ಪ್ರಯೋಜನವಿಲ್ಲ ಮೊದಲು ಕರಿಕೆ ಇಲ್ಲದ ಭೂಮಿಯಲ್ಲಿ ಗೊಬ್ಬರವನ್ನು ಹಾಕಿ ಎರಡು ಸಾಲು ಮಡಿಕೆಯನ್ನು ಹೊಡೆದು ಕರಿಯ ತರಬಿಸಿದರಂತೂ ಉತ್ತಮವು ಇಲ್ಲದಿದ್ದರೆ ಪುನಃ ಗೊಬ್ಬರವನ್ನು ಹಾಕಿ ಮೂರು ಸಾಲು ಚೆನ್ನಾಗಿ ಹರಿಗಿ ಮೃಗಶಿರ ಮಳೆಯು ಪ್ರಾರಂಭಿಸಿದ ನಾಲ್ಕು ದಿವಸದೊಳಗೆ ಹಸಿಯಾದರೆ ಸರಿ. ಹಸಿಯಾಗದಿದ್ದರೆ ಮಳೆಯನ್ನು ಎದುರುನೋಡುವ ಪ್ರಯೋಜನವಿಲ್ಲ ಮೃಗಶಿರ ಮಳೆಯು ಹೂಡಿದ ನಾಲ್ಕನೆಯ ದಿವಸ ಒಣಮಣ್ಣಿನಲ್ಲಿಯಾದರೂ ಎರಡೆತ್ತರವಾಗಿ ಬಿತ್ತಿ ನೀರು ಹೋಗುವ ಹಾಗೆ ಕಾಲುವೆಯನ್ನೂ ಮಡಿಗಳನ್ನೂ ಚನ್ನಾಗಿ ಮಾಡಿ ಮೊಟ್ಟೆಯಿಂದ ನೀರು ಉಣಿಸಬೇಕು. ಅದೇ ಹಸಿಯಿಂದ ನಾಟಿಕೊಳ್ಳುವವು ಅಷ್ಟರಲ್ಲಿ ಮಳೆಯು ಆಗುತ್ತ ಹೋದರೆ ತಾವೇ ವರ್ಧನವಾಗುವವು ಮತ್ತು ಮಳೆಯು ತಡೆದರೆ ಒಂದೆರಡು ವೇಳೆ ನೀರು ಬಿಟ್ಟು ಸದಿಯು ಹುಟ್ಟುತ್ತ ಹೋದ ಹಾಗೆ ಸದಿಯನ್ನು ತೆಗಿಸಬೇಕು. ಆ ಮೇಲೆ ಮಳೆಯಾದ ಹಾಗೆಲ್ಲ ತನ್ನಿಂದ ತಾನೇ ವರ್ಧನವಾಗುತ್ತದೆ ಅಷ್ಟರಲ್ಲಿಯಾದರೂ ಮಳೆಯು ತಡೆದು ಹುಲ್ಲು ಬಾಡುತ್ತಿದ್ದರೆ, ಮತ್ತೂ ಒಂದೆರಡು ವೇಳೆ ನೀರು ಬಿಟ್ಟು ವರ್ಧನ ಮಾಡಬೇಕು ಈ ಪ್ರಕಾರ ಮಾಡಿದರೆ, ಒಂದು ಎಕರೆ ಭೂಮಿಯಲ್ಲಿ ಸ್ವಲ್ಪ ಹಚ್ಚು ಕಡಿಮೆ ಹದಿನೈದು ಹೇರು ನಲ್ಲು ಬೆಳೆಯಬಹುದು ಮತ್ತು ನೆಲ್ಲು ಬಳೆಗೆ ಕರಿಕೆ ಜೇಕು ಈ ಎರಡು ಪದಾರ್ಥಗಳೇ ಮೂಲದು

ತೋಟದ ಭೂಮಿಯು ಮಂಡು ನೆಲವಾದರೆ, ಮಡಿಯ ಭೂಮಿಯಾದರೆ, ಪ್ರತಿ ಕೂರಿಗೆಗೆ ಎಂಬತ್ತು ಹೇರು ನೆಲ್ಲು ಬೆಳೆಯಬಹುದು. ಗೊಬ್ಬರದ ಬಲಾತ್ಕಾರವು ಸ್ವಲ್ಪ ಹೆಚ್ಚು ಕಡಿಮೆಯಾದರೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಬೆಳೆಯುವವು

ನೆಲ್ಲು ಬೀಜದಲ್ಲಿ ಬಹಳ ಉತ್ತಮ ಪ್ರತಿಯಾದ ಸೂಜಿಯ ಹಾಗೆ ಸಣ್ಣಾದ, ಗಂಧವುಳ್ಳ ಗೌರೀ ಸಣ್ಣಕ್ಕಿ ಅಂಬೇಮೋರೆ ಮೊದಲಾದ ಗಂಧಸಾಲಿಯ ನೆಲ್ಲು ಬೀಜವನ್ನು ಕೊಂಕಣದಿಂದಾಗಲಿ ಮಲಸೀಮೆಯಿಂದಾಗಲಿ ತೆಲುಗಣದಿಂದಾಗಲಿ ಯಾತಗೇರಿ ಪ್ರಾಂತದಿಂದಾಗಲಿ ಬಹು ಉತ್ತಮ ಪ್ರತಿಯಾದ ಗದ್ದೆಯ ನೆಲ್ಲಿನ ಬೀಜವನ್ನು ತರಿಸಿ ಬಿತ್ತಿದರೆ ಅದರಂತೆ ಅಕ್ಕಿಯಾಗುವವು ಪ್ರಯತ್ನ ಮಾಡಿ ತರಿಸಲಾರದೆ ಗಾಂಪ ನೆಲ್ಲಿನ ಬೀಜವನ್ನು ಬಿತ್ತಿ ಅಕ್ಕಿಯನ್ನು ಕೆಡಿಸಕೊಳ್ಳಬಾರದು.

ತೆಲುಗಣದ ಭೂಮಿಯಲ್ಲಿ ಗೇಣು ಕೆಳಗೆ ಕೆಟ್ಟ ಗರಸು ಇರುವದು. ಮತ್ತು ಕೆಲವು ದೇಶಗಳಲ್ಲಿ ಎಷ್ಟು ಕಡಿದರೂ ಹೋಗದ ಹಾಗೆ ಕರಿಕೆ

ಇರುವದು. ಇದಲ್ಲದೆ ಪೂರ್ವ ದಿಕ್ಕಿನ ಘಟ್ಟದ ಸಮೀಪದಲ್ಲಿ ದಕ್ಷಿಣ ದಿಕ್ಕಿನ ಮಲಸೀಮೆಯಲ್ಲಿ ಮತ್ತು ಮೈಸೂರು ಪ್ರಾಂತದಲ್ಲಿ ಮತ್ತು ಪಶ್ಚಿಮ ದಿಕ್ಕಿನ ಕೊಂಕಣದಲ್ಲಿ ಸರ್ವದಾ ಮೂರು ನಾಲ್ಕು ತಿಂಗಳು ಸೋನೆ ಮಳೆ ಇರುವದರಿಂದ ಗದ್ದೆಯ ಹೊರತು ಕೂರಿಗೆಯಿಂದ ನೆಲ್ಲು ಬಿತ್ತಿ ಬೆಳೆಯುವದಕ್ಕೆ ಬರುವ ಹಾಗಿಲ್ಲ ಅದು ಕಾರಣ ಅವರು ಎಷ್ಟು ಶ್ರಮವಾದರೂ ಗದ್ದೆಯನ್ನು ಮಾಡಲಿಕ್ಕೇಬೇಕು ನಮ್ಮ ದೇಶವು ಹಾಗಲ್ಲ ಈ ದೇಶದ ಭೂಮಿಯು ಅತ್ಯುತ್ತಮವು ಬಹಳ ತಂಪು ಹಾಗು ಬಹುಶಃ ಮಂಡು ಭೂಮಿಯಾಗಿದ್ದು ಸಮಶೀತೋಷ್ಣವಾಗಿದ್ದು ಅತಿ ಶೀತ ಪ್ರದೇಶವಲ್ಲವಾದುದರಿಂದ ಈ ದೇಶದ ಎರೆ ಮೊದಲಾದ ಯಾವತ್ತು ಭೂಮಿಯಲ್ಲಿ ನೆಲ್ಲು ಬೆಳೆಯು ಚನ್ನಾಗಿ ಆಗುತ್ತದೆ ಮತ್ತು ಅಕಲ್ಪಿತವಾಗಿ ಹೊಡೆಯು ಹಾಯುವ ಸಮಯಲ್ಲಿ ಅಥವಾ ಹಾಲು ತುಂಬುವ ಸಮಯದಲ್ಲಿ ಒಂದೊಂದು ವೇಳೆ ಮಳೆಯು ತಡೆದು ಹುಲ್ಲು ಬಾಡುತ್ತದೆ. ಆದರಿಂದ ಜಿರಾಯತಭೂಮಿಯಲ್ಲಿ ಇದೊಂದೇ ಭಯ ಉಂಟು ಆದಾಗ್ಯೂ ಯಾವಾಗಲೂ ಹೀಗೆ ಆಗುವದಿಲ್ಲ ಕದಾಚಿತ್ ಹತ್ತೆಂಟು ವರ್ಷಗಳಲ್ಲಿ ಒಂದಾವರ್ತಿ ಹೀಗೆ ಆಗುತ್ತದೆ ಆದರೆ ತೋಟದಲ್ಲಿ ನೆಲ್ಲು ಬಿತ್ತಿದರೆ ಇವರ ಭಯವಾದರೂ ಇಲ್ಲದ ಹಾಗಾಗುವದು ಬೇಕಾದ ಸಮಯದಲ್ಲಿ ನೀರು ಬಿಡುವದಕ್ಕೆ ಅಡಚಣಿ ಇರುವದಿಲ್ಲ

ನೆಲ್ಲು ಬೆಳೆಯನ್ನು ಕೆಡಿಸುವದಕ್ಕೆ ಕರಿಕೆಯೇ ಮೂಲವು ಕರಿಕೆಯೊಂದಿಲ್ಲದಿದ್ದರ ತೋಟದಲ್ಲಿ ನೆಲ್ಲು ಬೆಳೆಯುವದಕ್ಕೆ ಏನೇನೂ ಸಂಶಯವಿಲ್ಲ. ಈ ಪ್ರಕಾರ ಯತ್ನದಿಂದ ಎಲ್ಲರೂ ನೆಲ್ಲು ಬೆಳೆಯನ್ನು ಮಾಡಿಕೊಂಡರೆ ಬಡವರಾದರೂ ಸಹ ಶ್ರೀಮಂತರಂತೆ ದಿನಂಪ್ರತಿ ರಾಜಾನ್ನವನ್ನುಂಡು ಪರಿಣಾಮಿಸುವರು ಮತ್ತು ಬಹಳವಾಗಿ ಬಿತ್ತಿದರೆ, ಅದರಿಂದ ದ್ರವ್ಯವಾದರೂ ಪ್ರಾಪ್ತಿಸುವದು

## ೧೫ ನೇ ಪ್ರಕರಣವು.

### ತೋಟದ ಶೃಂಗಾರ ಸಂಭ್ರಮದ ವರ್ಣನೆಯು.

ಶೃಂಗಾರದ ಉದ್ದಿಶ್ಯವಾಗಿ ರಾಜರೂ ಶ್ರೀಮಂತರೂ ಐಶ್ವರ್ಯವುಳ್ಳ ಸಾವುಕಾರ ಜನರೂ ಉದ್ಯಾನ ವನವೆಂಬ ವನವನ್ನು ಮತ್ತು ಶೃಂಗಾರ ವನ್ನು ಅತ್ಯಾಶ್ಚರ್ಯತರದಿಂದ ಶೋಭಾಯಮಾನವಾಗಿ ಮಾಡಿಸಬೇಕು. ಅದ ರಲ್ಲಿ ಅನೇಕ ಪ್ರಕಾರದ ಪ್ರಯೋಜನಗಳುಂಟು. ಆ ವನವನ್ನು ನೋಡಿದವರು ಯಾವತ್ತರೂ ನೇತ್ರ ತೃಪ್ತಿಯಾಗಿ ಸಂತೋಷಪಡುತ್ತಾರೆ. ಮತ್ತು ತಮ್ಮ ತಮ್ಮ ಮಿತ್ರ ಕಳತ್ರಾದಿ ಪಿತೃ ಪಿತ್ರರೆಲ್ಲರೂ ಮನಸ್ಸಿಗೆ ಮನೋಹರವಾದ ಪದಾರ್ಥ ಗಳನ್ನೆಲ್ಲಾ ಉಂಡು ಪರಿಣಾಮಿಸುವರು ಮೃಗಗಳು ಪಶುಗಳು ಪಕ್ಷಿಗಳು ತಮ್ಮ ತಮ್ಮ ಯೋಗ್ಯಾಹಾರವಾದ ವಸ್ತುಗಳನ್ನು ಭುಂಜಿಸುತ್ತ ಸೌಖ್ಯ ಹೊಂ ದುವವು ತಮ್ಮ ವಂಶಪರಂಪರೆಯಾಗಿ ಅದರ ಉತ್ಪನ್ನದಿಂದ ಬಹಳ ದ್ರವ್ಯ ವನ್ನು ಸಂಪಾದಿಸುತ್ತ ಭೋಜನಕ್ಕೆ ಸ್ವೇಚ್ಛಾ ಪ್ರಕಾರದ ಫಲಗಳನ್ನು ಉಳಿದ ಯಾವತ್ತು ಪದಾರ್ಥಗಳನ್ನು ಭಕ್ಷಿಸುತ್ತ ಪರಿಣಾಮಿಸುವರು ಮತ್ತು ಪರಮ ಶಿವಯೋಗೀಂದ್ರರೂ ದೇಶ ಪಾವನಾರ್ಥವಾಗಿ ಸಂಚಾರ ಮಾಡುತ್ತಾ ಬರು ವಲ್ಲಿ ಈ ಶೃಂಗಾರ ವನದ ಸಂಭ್ರಮವನ್ನು ಕಂಡು ಒಪ್ಪತ್ತು ಪತ್ರೆ ಪುಷ್ಪ ಗಳಿಂದ ಲಿಂಗಾರ್ಚನೆ ಮಾಡಿದರೆ ಅನಂತಕೋಟಿ ಯಜ್ಞಂಗಳ ಫಲವು ಪ್ರಾಪ್ತಿಸಿ ಆ ಸತ್ಫಲವು ಸಪ್ತ ಸಂತಾನಕ್ಕೆ ಕಾರಣವಾಗುವದು

ಊರಿಗೆ ಆಗರವೇ ಶೃಂಗಾರವೆಂದು ಬಸವರಾಜ ದೇವರ ವಾಕ್ಯವಿಹು ದಾಗಿ ಗ್ರಾಮ ಪುರ ಪಟ್ಟಣಗಳ ಮತ್ತು ನಗರ ಶಹರಂಗಳ ಬಹಿರ್ಭಾಗದಲ್ಲಿ ಶೃಂಗಾರ ಶೋಭಿತವಾದ ವನಗಳು ತೋಟಗಳು ಇಲ್ಲದಿದ್ದರ, ಅವುಗಳು ಶೋಭಿಸುವದಿಲ್ಲ ಆ ಪುರ ಪಟ್ಟಣಾದಿ ಗ್ರಾಮಗಳು ಹಾಳು ಗ್ರಾಮಗಳಂತೆ ಮತ್ತು ದಿಗಂಬರ ಸ್ತ್ರೀಯರಂತೆ ಕಾಣುವವು

ಇಂಥ ಶೃಂಗಾರದ ಸಂಭ್ರಮದ ಉಪವನಗಳನ್ನು ಮಾಡಿಸಬೇಕಾದರೆ, ಅದಕ್ಕೆ ಭೂಮಿಯು ಇಪ್ಪತ್ತೈದು ಮೂವತ್ತು ಎಕರೆಗಿಂತಲು ಹೆಚ್ಚು ಇದ್ದಷ್ಟು ಉತ್ತಮವು

ವಿಶಾಲವಾದ ಭೂಮಿಯು ಇದ್ದರೆ ಸರಿ, ಇಲ್ಲದಿದ್ದರೆ ತನಗೆ ಇದ್ದಷ್ಟು ಭೂಮಿಯಲ್ಲಾದರೂ ತಕ್ಕ ಮಟ್ಟಿಗೆ ತೋಟಗಳನ್ನಾದರೂ ಮಾಡಿಕೊಳ್ಳಬೇಕು

ಮೊದಲು ಉಪ ವನವನ್ನು ವಿಶಾಲವಾದ ಭೂಮಿಯು ಹತ್ತೆಂಟು ಕೂರಿಗೆ ಇದ್ದರೆ ಎಲ್ಲ ಭೂಮಿಗೆ ನೀರು ಏರುವ ಹಾಗೆ ಕಾಣಿಸಿದರೆ ಅದರಂತೆ ವಿಶಾಲ ವಾದ ಭೂಮಿಯನ್ನು ಮಾಡಿಸಿ ಹತ್ತೆಂಟು ಮೊಟ್ಟೆಗಳು ನಡೆಯುವ ಹಾಗೆ ಬಾರಿಯನ್ನು ಎತ್ತರವಾಗಿ ಕಟ್ಟಿಸಿಕೊಳ್ಳಬೇಕು ಮತ್ತು ಆ ಭೂಮಿಗೆ ಒಂದು ಕಡೆಗೆ ಅಥವಾ ಎರಡು ಕಡೆಗೆ ಹಳ್ಳವಿದ್ದರೆ, ಆ ಹಳ್ಳದ ದಂಡೆಯನ್ನು ಹಿಡಿದು ಬೇಲಿಯ ಹೊರವೈಯಲ್ಲಿ ಕೇದಗೆಯನ್ನು ಹಚ್ಚಬೇಕು

ಅದು ಸುಗಂಧ ಪದಾರ್ಥವು ಹಳ್ಳದ ತಂಪಿಗೆ ಬೆಳೆಯುತ್ತದೆ ಮತ್ತು ವನಗಳಿಗೆ ಶೋಭೆಯನ್ನು ಕೊಡುತ್ತದೆ ಹಾಗು ಹಳ್ಳವಿಲ್ಲದ ಕಡೆಯಲ್ಲಿ ಶಾಗ ಮಟ್ಟೆ ಎಂದರೆ ಕೇದಿಗೆಗೆ ಹೆಸರು, ಆ ಕೇದಿಗೆಯನ್ನಾದರೂ ಬೇಲಿಯ ಹೊರ ವೈಯ್ಯಲ್ಲಿ ಹಚ್ಚಬೇಕು

ಈ ಗ್ರಂಥದ ಹನ್ನೊಂದನೆಯ ಪ್ರಕರಣದ ಆರಂಭದಲ್ಲಿ ಹೇಳಿದಂತೆ ಸುತ್ತು ಒಡ್ಡನ್ನು ಕಳ್ಳಿಯನ್ನು ಕಳ್ಳಿಯ ಹೊರವೈಯಲ್ಲಿ ಸೀಗೆಯ ಬೀಜವನ್ನು ಹಾಕಿ ಒಡ್ಡಿನ ತಲೆಯ ಮೇಲೆ ಬೇವಿನ ಬೀಜಗಳನ್ನು ಮತ್ತು ಒಡ್ಡಿನ ಹೊರ ವೈಯಲ್ಲಿ ಒಡ್ಡಿನ ತಳದಲ್ಲಿ ಆಲ, ಹತ್ತಿ, ಬಸರಿ, ಹುಣಿಸೆ, ಬೋರೆ, ಅರಳಿ, ತೇಗು, ಮತ್ತಿ, ಕರಿಮತ್ತಿ, ಬೀಟೆ, ಬಗನಿ, ಹಾಲಿವಾಣ, ಸಿರಸಲ, ಮುತ್ತಲ ಮೊದಲಾದ ಗಿಡಗಳನ್ನು ಹಾಕಬೇಕು ಒಡ್ಡಿನ ಒಳವೈಯಲ್ಲಿ ಸರುವು ಕಡಿದು ಬಿದಿರು ಬೀಜಗಳನ್ನು ಹಾಕಬೇಕು ಆ ಬಿದಿರಿನ ಒಳ ವೈಯಲ್ಲಿ ಮೂವತ್ತು ಮೊಳಕ್ಕೊಂದು ಮಾವಿನ ಗಿಡಗಳನ್ನು ಹಚ್ಚಿ ಆ ಮಾವಿನ ಗಿಡಗಳೆರಡರ ನಡುವೆ ಒಂದೊಂದು ಫಲವೃಕ್ಷಗಳನ್ನು ಹಾಕಬೇಕು ಮತ್ತು ಕೆಲವು ಗಿಡಗಳ ಕುಲದಲ್ಲಿ ಪುಷ್ಪದ ಮರಗಳನ್ನು ಹಾಕಬೇಕು ಹಲಸಿನ ಮರಗಳನ್ನು ನೇರಿಲೆ ಮರಗಳನ್ನು ಶ್ರೀಗಂಧದ ಮರಗಳನ್ನು ಚಂದ ನದ ಮರಗಳನ್ನು ಅಶೋಕ ವೃಕ್ಷಗಳನ್ನು ದೇವದಾರು ವೃಕ್ಷಗಳನ್ನು ಕೆಲವು ಸೀತಾಫಲ ರಾಮಫಲ ನೆಲ್ಲಿ ರಾಯನೆಲ್ಲಿ ಬೋರೆ ಖರ್ಜೂರ ವೃಕ್ಷಗಳನ್ನು ಕಾಡಮರಿ ಬೆಟ್ಟದಾವರೆ ಕಂಚಾಲ ಸಂಪಿಗೆ ಪಾಲಾಶ ಪಾದರಿ ಬಕುಳ ಮೊದ ಲಾದ ಪುಷ್ಪ ವೃಕ್ಷಗಳನ್ನು ಸುತ್ತಲೂ ಬಿದಿರಿನ ಒಳವೈಯಲ್ಲಿ ಹಾಕಿಕೊಳ್ಳಬೇಕು.

ಉಳಿದ ಭೂಮಿಯು ಎಷ್ಟು ಇರುವದೋ ಅದರಲ್ಲಿ ಹತ್ತು ಭಾಗಗ ಳನ್ನು ಮಾಡಿ ಒಂದು ಭಾಗವನ್ನು ಪುಣ್ಯವನಕ್ಕೋಸ್ಕರ ಬಿಟ್ಟು ಉಳಿದ ಭೂಮಿ ಯಲ್ಲಿ ಬೇಕಾದ ಫಲ ಪದಾರ್ಥಗಳನ್ನು ಬೆಳೆ ಮಾಡಿಕೊಳ್ಳಬೇಕು.

ಈ ಯಾವತ್ತು ಭೂಮಿಯ ತದರ್ಧ ಭಾಗದಲ್ಲಿ ಐದು ಭಾಗಗಳನ್ನು ಮಾಡಿ ಮಧ್ಯದಲ್ಲಿರುವ ಒಂದು ಭಾಗ ಭೂಮಿಯನ್ನು ಪುಣ್ಯ ವನಕ್ಕೋ

ಸ್ಕರ ಬಿಟ್ಟು ಉಳಿದ ನಾಲ್ಕು ಭಾಗಗಳಲ್ಲಿ ತೆಂಗಿನ ವನವನ್ನು ಅಡಿಕೆಯ ವನವನ್ನು ಅವುಗಳ ಮಧ್ಯದಲ್ಲಿ ಪೇರಲ ಗಿಡಗಳನ್ನು ಮಾವಿನ ವನವನ್ನು ಬಾಳೆಯ ವನವನ್ನು ಈ ಪ್ರಕಾರ ನಾಲ್ಕು ದಿಕ್ಕಿನ ನಾಲ್ಕೂ ಮೂಲೆಗಳಲ್ಲಿ ನಾಲ್ಕ ವನಗಳನ್ನು ಮಾಡಿಕೊಳ್ಳಬೇಕು. ಪುಣ್ಯ ವನವನ್ನು ಹನ್ನೊಂದನೆಯ ಪ್ರಕರಣದಲ್ಲಿ ಬರೆದಿರುವೆನು

ಉಳಿದ ಅರ್ಧ ಭೂಮಿಯಲ್ಲಿ ನಾಲ್ಕು ಭಾಗ ಮಾಡಿ ಮಧ್ಯ ಎರಡು ಭಾಗ ಹಾಗೇ ಉಳಿಸಿ ಕಡೆಯ ಎರಡು ಭಾಗಗಳಲ್ಲಿ ಒಂದೊಂದರಲ್ಲಿ ಎರಡು ಭಾಗಗಳನ್ನು ಮಾಡಿ ಒಂದರಲ್ಲಿ ಎಲೆ ಬಳ್ಳಿಯನ್ನು ಮತ್ತೊಂದರಲ್ಲಿ ಕಬ್ಬನ್ನು ಇನ್ನೊಂದರಲ್ಲಿ ನೆಲ್ಲನ್ನು ಉಳಿದ ಒಂದು ಭಾಗದಲ್ಲಿ ಬಾವಿಯನ್ನು ನಿಂಬಿಯ ವನವನ್ನು ಮಾಡಿಕೊಳ್ಳಬೇಕು.

ಉಳಿದ ಎರಡು ಭಾಗವ ಭೂಮಿಯಲ್ಲಿ ಒಂದರೊಳಗೆರಡು ಭಾಗ ಮಾಡಿ ಒಂದರಲ್ಲಿ ಬದನೆಯ ಗಿಡಗಳನ್ನು ಮತ್ತೊಂದರಲ್ಲಿ ಅರಿಷಿಣ ಮೆಣಸಿನ ಗಿಡಗಳನ್ನು ಹಚ್ಚಬೇಕು.

ಮತ್ತೊಂದು ಭಾಗದಲ್ಲಿ ಎಂಟು ಭಾಗಗಳನ್ನು ಮಾಡಿ ಒಂದು ಭಾಗದಲ್ಲಿ ಕಸಕಸಿಯನ್ನು ಮತ್ತೊಂದು ಭಾಗದಲ್ಲಿ ಉಳ್ಳೇಗಡ್ಡೆಯನ್ನು ಇನ್ನೊಂದರಲ್ಲಿ ಬಳ್ಳೊಳ್ಳಿಯನ್ನು ಒಂದರಲ್ಲಿ ಜೀರಿಗೆ ಶಾಜೀರಿಗೆಯನ್ನು ಒಂದರಲ್ಲಿ ಯಾಲಕ್ಕಿಯ ಗಿಡಗಳನ್ನು ಒಂದರಲ್ಲಿ ಸಿಂಬಿಯ ವನವನ್ನು ಒಂದರಲ್ಲಿ ಗೆಣಸನ್ನು ಒಂದರಲ್ಲಿ ಕಾಯಿಪಲ್ಲೆ ಕೋತಂಬರಿ ಮೊದಲಾದ ಪಲ್ಲೆಗಳನ್ನು ಮಾಡಿಕೊಳ್ಳಬೇಕು

ನೆಲ್ಲು ಬಿತ್ತಿದ ಭೂಮಿಗೆ, ನೆಲ್ಲು ಬೆಳೆಯನ್ನು ತೆಗೆದುಕೊಂಡು ಮುಳ್ಳುಜವೆಯನ್ನಾಗಲಿ ಗೋವೇದ ಜೋಳವನ್ನಾಗಲಿ ಹಾಕಬೇಕು ಅರಿಷಿಣ ಮೆಣಸಿನ ಕಾಯಿ ಬೆಳೆಯನ್ನು ತೆಗೆದುಕೊಂಡು ಆ ಭೂಮಿಗೆ ಕಬ್ಬು ಹಚ್ಚಬೇಕು ಕಬ್ಬಿನ ಹೊಲಕ್ಕೆ ಪುನಃ ನೆಲ್ಲು ಬಿತ್ತಬೇಕು ಹೀಗೆ ಕದಲು ಬದಲು ಮಾಡುತ್ತ ಹೋಗಬೇಕು

ಇಂಥ ವಿಶಾಲವಾದ ಶೃಂಗಾರ ವನವನ್ನು ಮಾಡಿಸಬೇಕಾದರೆ ಮೂವತ್ತು ನಾಲ್ವತ್ತು ಎಕರೆ ಭೂಮಿಯು ನೀರು ಉಂಬುವ ಹಾಗೆ ಇರಬೇಕು. ಮತ್ತು ಮೂವತ್ತು ಎಕರೆ ಭೂಮಿಗೆ ಆರು ಮೊಟ್ಟೆ, ನಾಲ್ವತ್ತು ಎಕರೆ ಭೂಮಿಯಾದರೆ ಎಂಟು ಮೊಟ್ಟೆಯ ನೀರು ಬೇಕಾಗುವದು

ಈ ಭೂಮಿಗೆ ಸಾಕಾಗುವ ಹಾಗೆ ಮಹಾ ನೀರು ಇರುವಂಥ ವಿಶಾಲವಾದ ಎರಡು ಭಾವಿಗಳನ್ನು ತೆಗಿಯಿಸಿ ಒಂದೊಂದು ಭಾವಿಗೆ ನಾಲ್ಕು ನಾಲ್ಕ

ಮೊಟ್ಟೆಯ ಬಾರಿಗಳನ್ನು ಮಾಡಿಕೊಳ್ಳಬೇಕು. ಆ ಭಾವಿಗಳು ದರಿಯು ನಿಲ್ಲುವ ಹಾಗೆ ಗಟ್ಟಿ ದರಿಯಾದರೆ ಉತ್ತಮವೇ ಸರಿ. ಇಲ್ಲವಾದರೆ ಹಿಂದೆ ಒಂಬತ್ತನೆಯ ಪ್ರಕರಣದಲ್ಲಿ ಹೇಳಿದಂತೆ ಕಟ್ಟಿಗೆಯ ಸಾಚಿಗಳನ್ನಿಟ್ಟು ಯಾವತ್ತು ಹೊಲದಲ್ಲಿ ನೀರು ಏರುವ ಹಾಗೆ ಎತ್ತರ ಬಾರಿಯನ್ನು ಕಟ್ಟಿಕೊಳ್ಳಬೇಕು

ಈ ಭೂಮಿಯ ಉತ್ಪನ್ನವು ಒಂದು ವರ್ಷ ಪರ್ಯಂತರದಲ್ಲಿ ಸ್ವಲ್ಪ ಸ್ವಲ್ಪಾದರೂ ಚಿಲ್ಲರೆ ಬೆಳೆಯಿಂದ ನಾಲ್ಕಾರು ತಿಂಗಳಲ್ಲಿ ನೂರಾರು ರೂಪಾಯಿಗಳಾಗುವವು. ಹಾಗು ನೆಲ್ಲು ಕಸಕಸಿ ಕಬ್ಬು ಅರಿಷಿಣ ಮೆಣಸಿನಕಾಯಿ ಉಳ್ಳೀಗಡ್ಡಿ ಬಳ್ಳೊಳ್ಳಿ ಬದನೆ ಗೆಣಸು ಇವುಗಳೆಲ್ಲ ಕೂಡಿ ಮೊದಲನೇ ವರ್ಷ ಸ್ವಲ್ಪ ಹಚ್ಚು ಕಡಿಮೆ ಸಹಸ್ರ ರೂಪಾಯದ ಮಾಲು ಬರುವದು. ಎರಡನೇ ವರ್ಷಕ್ಕೆ ಬಾಳೆ, ಎಲೆಯ ಬಳ್ಳಿ ಮತ್ತು ಕಬ್ಬು ನೆಲ್ಲು ಮೊದಲಾದ ಯಾವತ್ತು ಪದಾರ್ಥಗಳೆಲ್ಲ ಕೂಡಿ ನಾಲ್ಕು ಸಹಸ್ರ ರೂಪಾಯದ ಅಜಮಾಸು ಆಗುವದು ನಾಲ್ಕು ವರ್ಷದಿಂದ ಹತ್ತು ವರ್ಷದ ವರೆಗೂ ಪ್ರತಿ ವರ್ಷಕ್ಕೆ ಐದು ಸಹಸ್ರ ರೂಪಾಯದ ಆಕಾರಕ್ಕೇನೂ ಕಡಿಮೆ ಇಲ್ಲ ಹತ್ತು ವರ್ಷದ ಮೇಲೆ ತೆಂಗು ಅಡಿಕೆ ಮಾವು ನಿಂಬಿ ಪೇರಲ ಮೊದಲಾದ ಯಾವತ್ತು ವೃಕ್ಷಗಳು ಫಲವಾಗಲಾರಂಭಿಸಿದರೆ, ಹತ್ತು ಹನ್ನೆರಡು ಸಾವಿರ ರೂಪಾಯಿಗಳ ಉತ್ಪನ್ನಕ್ಕೇನೂ ಕಡಿಮೆ ಇಲ್ಲದಂತೆ ವಂಶಪರಂಪರೆಯಾಗಿ ಜಹಾಗೀರದಾರರಂತೆ ಪರಿಣಾಮದಿಂದ ಉಂಡುಟ್ಟು ಸೌಖ್ಯದಿಂದಿರುವರು.

ಹಾಗು ಇದಕ್ಕೆ ಹದಿನಾರು ಎತ್ತುಗಳು ಹನ್ನೆರಡು ಮಂದಿ ಮನುಷ್ಯರು ಹಾಗು ಸಮಯ ಬಂದಾಗ ಹತ್ತೆಂಟು ಕೂಲಿಗಳು ಬೇಕಾಗುವರು. ಮತ್ತು ನೂರಾರು ರೂಪಾಯಿ ಸದೆ ತಗಿಸುವದಕ್ಕೆ ಬೇಕಾಗುವದು. ಹದಿನಾರು ಎತ್ತು ಹನ್ನೆರಡು ಮಂದಿ ಮನುಷ್ಯರೂ ಯಾವಾಗಲೂ ಇರಬೇಕಾಗುತ್ತದೆ. ಇಷ್ಟರಿಂದ ವರ್ಷಕ್ಕೆ ಖರ್ಚು ಹೋಗಿ ಹತ್ತೆಂಟು ಸಹಸ್ರ ರೂಪಾಯಿಗಳು ನಿರಾಯಾಸದಿಂದ ಪ್ರಾಪ್ತಿಸಿ ಸದಾ ಸುಖಿಗಳಾಗುವರು

ಇಷ್ಟು ರೀತಿಯಿಂದ ಕೃಷಿಕರಿಗೆ ಸಕಲೈಶ್ವರ್ಯವು ಕಣ್ಣೆದುರಿನಲ್ಲಿ ಕಾಣಿಸುವ ಹಾಗೆ ಬರೆದು ತೋರಿಸಿದ್ದೇನೆ. ಆದಾಗ್ಯೂ ಮಾಡಿಕೊಳ್ಳದೆ ದಾರಿದ್ರ್ಯವನ್ನು ಭೋಗಿಸಿದರೆ ಮಾಡತಕ್ಕ ಉಪಾಯವಿಲ್ಲ ಮಾಡದವರು ಉಂಡಾರೆಂಬ ನಿಶ್ಚಯವೇ ಸರಿ.

ದ್ರವ್ಯ ಹೀನರಾದ ಬಡವರು ಸ್ವಲ್ಪ ಪ್ರಯತ್ನದಿಂದ ಒಂದೇ ಮೊಟ್ಟೆಯ ಬಾವಿಯನ್ನಾದರೂ ಮಾಡಿಕೊಂಡು ನಾಲ್ಕಾರು ಎಕರೆ ಭೂಮಿಯಲ್ಲಿ ನೀರು ಏರುವ ಹಾಗೆ ಮಾಡಿದರೆ ಅದರಲ್ಲಿ ಒಂದುವರೆ ಎಕರೆ ಬಾಳೆ, ಒಂದುವರೆ

ಎಕರೆ ಎಲೆಬಳ್ಳಿ, ಒಂದು ಎಕರೆ ನೆಲ್ಲು, ಒಂದು ಎಕರೆ ಮೆಣಸಿನಗಿಡ ಅರಿಷಿಣ, ಒಂದು ಎಕರೆ ಬದನೀಗಿಡ ಉಳ್ಳಿ ಬಳ್ಳೊಳ್ಳಿ, ಇಷ್ಟೇ ಮಾಡಿಕೊಂಡರೂ ವರ್ಷಕ್ಕೆ ಎರಡು ಸಾವಿರ ರೂಪಾಯಿದ ಉತ್ಪನ್ನಕ್ಕೇನೂ ಕಡಿಮೆ ಇಲ್ಲ

ಬಾಳೆ ಎಲೆಬಳ್ಳಿಯನ್ನು ಹಚ್ಚುವ ತ್ರಾಣವಿಲ್ಲದ ಬಡ ಜನರು ಮೂರು ಎಕರೆ ನೆಲ್ಲನ್ನು ಎರಡು ಎಕರೆ ಅರಿಷಿಣ ಮೆಣಸಿನ ಗಿಡಗಳನ್ನು ಒಂದು ಎಕರೆಯಲ್ಲಿ ಬದನಿ ಉಳ್ಳೀಗಡ್ಡಿ ಬಳ್ಳೊಳ್ಳಿ ಮೊದಲಾದ ಪದಾರ್ಥಗಳನ್ನು ಮಾಡಿ ನೆಲ್ಲು ಬೆಳೆಯನ್ನು ತೆಗೆದುಕೊಂಡು ಗೋವೇದ ಜೋಳವನ್ನು ಹಾಕಿ ಅದನ್ನು ತೆಗೆದುಕೊಂಡು ಮಡಿಕಟ್ಟಿ ಜೋಳವನ್ನು ಬಿತ್ತಬೇಕು. ಹೀಗೆ ಮಾಡಿದರೆ ವರ್ಷಕ್ಕೆ ಎಂಟು ಹತ್ತು ನೂರು ರೂಪಾಯಿದ ಆಕಾರಕ್ಕೇನೂ ಕಡಿಮೆ ಇಲ್ಲ.

ತೋಟದವರು ಉಳ್ಳೀಗಡ್ಡಿ ಬೀಜವನ್ನು ಕೊಳ್ಳುವ ಹಾಗೆ ಮಾಡಬಾರದು ಮಣ ಉಳ್ಳೀಗಡ್ಡಿಯನ್ನು ಕೊರೆದು ಹಚ್ಚಿ ನೀರು ಬಿಟ್ಟರೆ ಪುಷ್ಕಳ ಬೀಜಗಳಾಗುವವು. ಬೆಂಡಿ ಸವತಿ ಹೀರೆ ಹಾಗಲ ಕುಂಬಳ ಮೂಲಂಗಿ ಗಜ್ಜರಿ ಚವಳಿ ಅವರೆ ಹರಿವಿ ರಾಜಗಿರಿ ಚಕ್ಕೊತ್ತಿನ ಬೀಜ ಬದನಿ ಮೆಣಸಿನ ಬೀಜ ಮುಂತಾದ ಯಾವತ್ತು ಬೀಜಗಳನ್ನು ಪ್ರಯತ್ನ ಮಾಡಿಟ್ಟುಕೊಳ್ಳಬೇಕು. ಅಲಕ್ಷ ಮಾಡಿ ಯಾವತ್ತು ಜೀನಸಿನ ಬೀಜಗಳನ್ನು ಹಿಡಿಯುವದನ್ನು ಮರೆಯಬಾರದು

ಶೃಂಗಾರ ವನದ ಶೋಭೆಗೂ ಉಳಿದ ಪ್ರಯೋಜನಾರ್ಥಕ್ಕೂ ಸಕಲ ದೇಶಗಳಲ್ಲಿರುವ ವಿಚಿತ್ರ ತರವಾದ ಫಲವೃಕ್ಷಗಳನ್ನು ಪುಷ್ಪ ವೃಕ್ಷಗಳ ಬೀಜಗಳನ್ನು ಅಗಿಗಳನ್ನು ಅಂಟಿಗಳನ್ನು ದಿನದಿನಕ್ಕೆ ಪ್ರಯತ್ನಿಸಿ ತಂದು ಹಾಕುತ್ತಿರಬೇಕು ಔಷದಕ್ಕೆ ಉಪಯೋಗವಾಗುವ ಸಕಲ ಗಿಡಮೂಲಿಕೆಗಳನ್ನಾದರೂ ಯತ್ನಿಸಿ ತಂದು ಹಾಕುತ್ತಿರಬೇಕು

ಯಾವ ದೇಶದ ವೃಕ್ಷಗಳನ್ನಾದರೂ ಬೆಳಸುವದಕ್ಕೆ ಸಣ್ಣ ಉಸುಕು ಕೆಮ್ಮಣ್ಣು ಬಹಳ ಉಪಯೋಗವುಳ್ಳದ್ದು ಆದರೆ ತೋಟದ ಭೂಮಿಯು ಕೆಂಪು ಮಣ್ಣಾಗದೆ ಇದ್ದಾಗ್ಯಾದರೂ ಅಥವಾ ಯಾವ ಪ್ರಕಾರದ ಭೂಮಿಯಾದರೂ ಇರಲಿ, ಅದರಲ್ಲಿ ಯಾವ ಜಾತಿಯ ಅಗಿಗಳನ್ನಾದರೂ ಬೆಳೆಯಿಸಬೇಕಾದರೆ ಮೊದಲು ಬೀಜಗಳನ್ನು ಹಾಕಿ ಬೇರೆ ಸಸಿಗಳನ್ನು ಮಾಡಿ ಅವುಗಳನ್ನು ಕಿತ್ತಿ ಹಚ್ಚಬೇಕಾದರೆ ತಗ್ಗು ತೆಗೆಯಿಸಿ ಕೆಮ್ಮಣ್ಣು ಉಸುಕನ್ನು ಕಲಿಸಿ ತುಂಬಿ ನೀರು ಬಿಟ್ಟು ಅದರಲ್ಲಿ ಈ ಸಸಿಗಳನ್ನು ನಿಲ್ಲಿಸಬೇಕಾದರೆ ಸ್ವಲ್ಪ ಕೆದರಿ ಹಳೆಯ ಗೊಬ್ಬರವನ್ನಾಗಲಿ ಅಥವಾ ಕುರಿಯ ಗೊಬ್ಬರವನ್ನಾಗಲಿ

ಕೆಮ್ಮಣ್ಣನ್ನು ಸಮನಾಗಿ ಕಲಿಸಿಯಾದರೂ ತಳಕ್ಕೆ ಹಾಕಿ ಸಸಿಯನ್ನು ನಿಲ್ಲಿಸಿ ಬಗಲಿಗೆ ಮಣ್ಣು ಹಾಕಿ ಗಟ್ಟಿಯಾಗಿ ತುಳಿದು ಕೂಡ್ರಿಸಿದರೆ ಅಗಿಗಳು ಹುಸಿ ಹೋಗದೆ ವರ್ಧನವಾಗುವವು ಅವುಗಳಿಗೆ ನೀರು ಬಿಡುತ್ತ ಹೋದಹಾಗೆ ಪಲ್ಲೈಸುವವು

ಗಿಡಗಳಿಗೆ ಹಾಕುವದಕ್ಕೆ ಕೊಳಿತ ಎಲೆ ಗೊಬ್ಬರವು ಅತ್ಯುಪಯೋಗವು ಅದರಿಂದ ತೋಟದ ಗೊಬ್ಬರದ ವಿಷಯವಾಗಿ ದೊಡ್ಡ ತಗ್ಗನ್ನು ತೆಗಯಿಸಿ ತೋಟದಲ್ಲಿ ಗಿಡಗಳ ಕೆಳಗೆ ಉದುರಿ ಬಿದ್ದ ಒಣ ಎಲೆಗಳನ್ನು ಯಾವತ್ತು ಬಳಿದು ನಿತ್ಯದಲ್ಲಿಯೂ ತಗ್ಗಿಗೆ ಭರೀ ಮಾಡುತ್ತ ಆಗಾಗ್ಗೆ ಮೊಟ್ಟೆಯು ನೀರು ಹೋಗುವ ಹಾಗೆ ಮಾಡಿ ತೋಟದ ಕೊಯಿಲಿ ಸದಿ ಸಗಣಿ ಕಣಿಕ ಕಸ ಹುಲ್ಲು ಮೊದಲಾದದ್ದನ್ನು ಚನ್ನಾಗಿ ಬಳಿದು ಪ್ರತಿನಿತ್ಯದಲ್ಲೂ ತಗ್ಗಿಗೆ ಹಾಕುತ್ತ ನೀರು ಬಿಡುವದರಿಂದ ಆ ಎಲೆಗಳೆಲ್ಲ ಕೊಳೆತು ಗೊಬ್ಬರವಾಗುವದು

ಅದರಲ್ಲಿ ನೆಲ್ಲಿಯ ತೊಪ್ಪಲದ ಗೊಬ್ಬರವು ಎಲ್ಲ ಗೊಬ್ಬರಕ್ಕಿಂತಲೂ ವಿಶೇಷವು ಈ ಎಲೆಯ ಗೊಬ್ಬರವಾದರೂ ಮೂರು ವರ್ಷಗಳ ವರಗ ಕೊಳೆತರೆ, ಗಿಡಗಳಿಗೆ ಹಾಕುವುದು ಒಳ್ಳೇದು. ಅದೇ ವರ್ಷದ ಗೊಬ್ಬರ ವನ್ನು ಹಾಕಬಾರದು ಈ ನೆಲ್ಲಿಯ ತೂಪ್ಪಲದ ಗೊಬ್ಬರಕ್ಕೋಸ್ಕರ ಬೇರ ಒಂದು ತಗ್ಗು ಮಾಡಿಸಿ ಆ ತಗ್ಗಿನಲ್ಲಿ ನೆಲ್ಲಿಯ ತೊಪ್ಪಲವನ್ನು, ಹುಲಗಲಿಯ ತೊಪ್ಪಲವನ್ನು, ಸಿರಸಲ ತೊಪ್ಪಲವನ್ನು ಬಟ್ಟಲ ತೂಪ್ಪಲವನ್ನು ತೇಗಿನ ತೊಪ್ಪ ಲವನ್ನು ತಂದು ತಂದು ಹಾಕಿ ಆ ತಗ್ಗನ್ನು ತುಂಬಿ ಮೇಲೆ ಸ್ವಲ್ಪ ಮಣ್ಣನ್ನು ಹಾಕಿ ನೀರು ಬಿಡಬೇಕು ಅದು ಕೆಲವು ದಿವಸಕ್ಕೆ ಕೊಳೆತು ಕಳಕ್ಕೆ ಇಳಿದು ತಗ್ಗಾಗೋಣ, ಮತ್ತೂ ತೊಪ್ಪಲವನ್ನು ಹಾಕಿ ತಗ್ಗು ತುಂಬಿ ಮೇಲೆ ಮಣ್ಣು ಹಾಕಿ ನೀರು ಬಿಡುತ್ತಾ ಹೀಗೆ ಎರಡು ಮೂರು ವೇಳೆ ಮಾಡಿದರೆ ಆ ತಗ್ಗು ತುಂಬಿ ಅದೆಲ್ಲಾ ಗೊಬ್ಬರವಾಗುವದಕ್ಕೆ ಮೂರು ವರ್ಷದ ವರೆಗೂ ಆಗಾಗ್ಗೆ ನೀರು ಬಿಡುತ್ತ ಚನ್ನಾಗಿ ಕೊಳಿಸಿದರೆ ಎಲ್ಲಾ ಕೊಳೆತು ಉತ್ತಮ ಪ್ರತಿಯ ಗೊಬ್ಬರವಾಗುವದು. ಅದು ಯಾಲಕ್ಕಿಯ ಗಿಡಗಳಿಗೂ ಯಾವ ಪ್ರಕಾರದ ಗಿಡಗಳಿಗೂ ನೆಲ್ಲು ಬಿತ್ತುವ ಭೂಮಿಗೂ ಅತಿ ಪ್ರಯೋಜನಕರ ವಾಗುವದು

ಉಪ ವನವನ್ನು ಅತಿ ಶೃಂಗಾರಕ್ಕೆ ತರಬೇಕೆಂಬ ಅಪೇಕ್ಷೆಯುಳ್ಳ ಯಜ ಮಾನರು ಮನೋಲ್ಲಾಸವುಳ್ಳವರಾಗಿ ಸಕಲ ದೇಶಗಳಲ್ಲಿರುವ ನಾನಾ ವಿಧದ ಬೀಜಗಳನ್ನು ಪ್ರಯತ್ನಿಸಿ ತಂದು ಹಾಕುತ್ತ ತಾವು ಆಗಾಗ್ಗೆ ಹೋಗಿ ನೋಡಿ ಸಂತೋಷಿಸುತ್ತ ಮತ್ತು ಆರೈಕೆಯನ್ನು ಚನ್ನಾಗಿ ಮಾಡಿಸುತ್ತ ವನಪಾಲಕ ರಾದ ಸೇವಕರನ್ನು ಆಗಾಗ್ಗೆ ಸಂತೋಷಿಸಿ ದಿನದಿನಕ್ಕೆ ಹೆಚ್ಚು ಮೋಹನತ

ಮಾಡುವ ಹಾಗೆ ಅವರಿಗೆ ಬಕ್ಷೀಸುಗಳನ್ನು ಕೊಡುತ್ತ ಇರಬೇಕು ಇದರಿಂದ ಮಾಡುವವರು ಉಲ್ಹಾಸದಿಂದ ಚನ್ನಾಗಿ ಮೆಹನತು ಮಾಡುತ್ತಾ ಇರುತ್ತಾರೆ.

ಶೃಂಗಾರ ವನಗಳು, ಪಟ್ಟಣದ ಮಧ್ಯದಲ್ಲಿ, ಪುರ ಪಳ್ಳಿ ಗ್ರಾಮಗಳ ಬಹಿರ್ಭಾಗದಲ್ಲಿರುವದರಿಂದ ಆ ನಗರಗಳು ಅತಿ ಶೋಭಾಯಮಾನವಾಗಿ ಕಾಣಿಸುತ್ತವೆ ವನಗಳಿಲ್ಲದ ಗ್ರಾಮಗಳು ಎಷ್ಟು ಶೃಂಗಾರವಾಗಿದ್ದರೂ ವಸ್ತ್ರ ಹೀನಳಾದ ಸ್ತ್ರೀಯಳಂತೆ ಅಮಂಗಲ ಸ್ವರೂಪವಾಗಿ ಕಾಣುತ್ತವೆ

"ಊರಿಗೆ ಅಗರವೇ ಶೃಂಗಾರ, ನೀರಿಗೆ ನೈದಿಲೆಯೇ ಶೃಂಗಾರ" ಎಂದು ಬಸವರಾಜದೇವರ ವಾಕ್ಯ ಉಂಟು ಶೃಂಗಾರ ವನದಲ್ಲಿ ನೀರದಾವರೆಯನ್ನೂ ಕಮಲಗಳನ್ನೂ ಹಾಕಬೇಕು

# ೧೬ ನೇ ಪ್ರಕರಣವು.

## ಯತ್ನಾಧಿಕ್ಯವು.

" ಉದ್ಯೋಗಂ ಪುರುಷ ಲಕ್ಷಣಂ "

ಸರ್ವ ಜನರು ಕಾಯ ಬುದ್ಧಿ ಸಹಿತ ಕಷ್ಟ ಮಾಡಿ ಅನ್ನ ವಸ್ತ್ರಾದಿಗಳನ್ನು ಮತ್ತು ಸಕಲ ಸಂಪತ್ತು ಮಹದೈಶ್ವರ್ಯವನ್ನು ಸಂಪಾದಿಸತಕ್ಕದ್ದು ಇದಲ್ಲದೆ ಬುದ್ಧಿಯಿಂದ ಮನೆ, ತೋಟ, ಹೊಲಗದ್ದೆ ಮೊದಲಾದ ಆಸ್ತಿಗಳನ್ನು ಗಳಿಸಿಟ್ಟುಕೊಳ್ಳಬೇಕು ಊರಲ್ಲಿ ಮನೆ ಇಲ್ಲದೆ ಅಡವಿಯಲ್ಲಿ ಹೊಲವಿಲ್ಲದೆ ಇದ್ದವನು ಸರಕಾರಕ್ಕೆ ಮಂಜೂರಾದ ರೈತನಲ್ಲ ಅವನು ಬಿಭಾಯತರಂತೆ ಪರದೇಶದ ವಸ್ತಿಕಾರನಂತೆ ಗಣನೆ ಇಲ್ಲದೆ ಇರುವನು.

ಯಾವನಾದರೊಬ್ಬನು ಕಷ್ಟಪಡದೆ ಪಿತ್ರಾರ್ಜಿತ ದ್ರವ್ಯವನ್ನು ವ್ಯಯ ಮಾಡುತ್ತ ಹೋದರೆ, ಸ್ವಲ್ಪ ಕಾಲದಲ್ಲಿ ಅದನ್ನೆಲ್ಲಾ ಕಳೆದುಕೊಂಡು ಹೊಟ್ಟೆ ಬಟ್ಟೆಗಿಲ್ಲದೆ ಬಹಳ ಬಳಲಬೇಕಾಗುತ್ತದೆ ಕಷ್ಟ ಪಡದೆ ಕುಳಿತು ಉಣ್ಣುವ ಅಭ್ಯಾಸ ಬಿದ್ದರೆ ಅವನಿಗೆ ಮರಣಾಂತ್ಯದ ವರೆಗೂ ಅದೇ ರೂಢಿಯಾಗಿ ಅವನಿಂದ ಯಾವ ಕೆಲಸಗಳು ಸಾಗುವದಿಲ್ಲ ಮನುಷ್ಯರಾದವರು ಬುದ್ಧಿ ಶಕ್ತಿಯಿಂದಾಗಲಿ ಕಾಯಶಕ್ತಿಯಿಂದಾಗಲಿ ಯಾವದೊಂದಾದರೂ ಕೆಲಸ ಮಾಡಿ ಅದರಿಂದ ದ್ರವ್ಯೋತ್ಪತ್ತಿಯನ್ನು ಮಾಡಿಕೊಳ್ಳದೆ, ಇದ್ದ ಪದಾರ್ಥ ವನ್ನೇ ಖರ್ಚುಮಾಡಿ ಕುಳಿತು ತಿನ್ನುವದು ಸೋಮಾರಿತನವೆಂಬ ಪೈಗಳ್ಳತನವು.

ಅದು ಕಾರಣ ಈ ಸೋಮಾರಿತನವೆಂಬ ಪೈಗಳ್ಳತನವನ್ನು ಬಿಟ್ಟು ಮನುಷ್ಯರಾದವರು ಯಾವದೊಂದಾಗಲಿ ಕೆಲಸ ಮಾಡಿ ದ್ರವ್ಯ ಸಂಪಾದನೆ ಯನ್ನು ಮಾಡಬೇಕು ಪೈಗಳ್ಳನ ಬದುಕು ಹಾಳಾಗುವದಲ್ಲದೆ, ಅವನ ಬುದ್ಧಿ ಸಹ ಕೆಟ್ಟು ಕಳ್ಳತನ, ಕಪಟತನ, ಮೋಸ, ವಿಶ್ವಾಸಘಾತ, ಮೊದ ಲಾದ ಗುಣಗಳುಳ್ಳವನಾಗಿ ಜಗದ್ವಿರುದ್ಧನಾಗುವನು ದುರ್ಗುಣದ ಮೂಲವೇ ಪೈಗಳ್ಳತನವು ಬಾಲ್ಯದಿಂದ ಪೈಗಳ್ಳತನವು ಯಾವನಲ್ಲಿ ನೆಲೆಗೊಂಡಿರುವದೋ ಅವನ ದೇಹದ ಶಕ್ತಿಯು ತಗ್ಗುವದು ಮನಸ್ಸಿನ ಸೌಖ್ಯವು ತಪ್ಪುವದು. " ಆಲಸ್ಯಂ ಅಮೃತಂ ವಿಷಂ " ಎಂದುಂಟಾಗುತ್ತದೆ. ಆ ಆಲಸ್ಯವು ಯಾವಾತನಲ್ಲಿ ನೆಲೆಗೊಳ್ಳುತ್ತದೆಯೋ ಅಂಥವನ ಕಾಯದ ಫಲವು ಕೆಡುವದು.

ಮಕ್ಕಳು ಚಿಕ್ಕವರಾಗಿರುವಾಗ ಕಷ್ಟಮಾಡಿ ಜೀವಿಸುವ ತ್ರಾಣವಿಲ್ಲದ್ದ ರಿಂದ ಹದಿನಾರು ವರ್ಷ ಅಥವಾ ಹದಿನೆಂಟು ವರ್ಷ ವಯಸ್ಸಾಗುವ ವರೆಗೆ ಬಾಲ್ಯದಲ್ಲಿ ಚನ್ನಾಗಿ ಆರೈಕೆ ಮಾಡುವದು ತಾಯಿತಂದೆಗಳ ಧರ್ಮವು ಹದಿನಾರು ವರ್ಷದಿಂದ ಹದಿನೆಂಟು ವರ್ಷ ವಯಸ್ಸಾಗುವದರೊಳಗೆ ಅದೇ ಎರಡು ವರ್ಷಗಳಲ್ಲಿ ವ್ಯೆಗಳ್ಳತನವು ಅಭ್ಯಾಸವಾಗುತ್ತ ಅಷ್ಟರಲ್ಲಿ ಜಾಗ್ರತ ನಾಗಿ ಪಟ್ ಕೃಷಿ ವ್ಯಾಪಾರಂಗಳಲ್ಲಿ ಯಾವದಾದರೂಂದು ಉದ್ಯೋಗ ಮಾಡುವ ಯುಕ್ತಿಯನ್ನು ಬುದ್ಧಿಶಕ್ತಿಯಿಂದ ಚನ್ನಾಗಿ ತಿಳಿದು ವಯಸ್ಸಾದಾಗಲೆ ಯಾವ ದಾದರೊಂದು ಕೆಲಸವನ್ನು ಮಾಡಿ ವಸ್ತ್ರಾದಿಗಳನ್ನು ತಂದೆ ತಾಯಿಗಳಿಂದ ಬೇಡದೆ ಸ್ವತಃ ಪ್ರಯತ್ನದಿಂದ ಸಂಪಾದಿಸಿ ಸ್ವೇಚ್ಛಾ ಪ್ರಕಾರ ವಸ್ತ್ರಾಭರಣ ಗಳಿಂದ ಸೌಖ್ಯ ಪಡೆಯಬೇಕು, ಮತ್ತು ದ್ರವ್ಯ ಸಂಪಾದನೆ ಮಾಡಿಕೊಳ್ಳ ಬೇಕು ಸತ್ಯವಂತನಾಗಿ ತಾನು ಮಾಡುವ ಉದ್ಯೋಗದಲ್ಲಿ ವ್ಯೆಗಳ್ಳತನ ವನ್ನು ಬಿಟ್ಟು ಶ್ರಮ ಮಾಡುವಲ್ಲಿ ಅತಿ ಪರಾಕ್ರಮಿಯಾದರ ಸತ್ಕೀರ್ತಿಯೂ ಸನ್ಮಾನವೂ ಪ್ರಾಪ್ತವಾಗುವವು

ಕೆಲವು ಯೌವ್ವನಸ್ಥರು ವ್ಯೆಗಳ್ಳರಾಗಿ ಕಲ್ಲಿನ ಹಾಗೆ ಮನೆಯಲ್ಲಿ ಕುಳಿತು ತಂದೆತಾಯಿಗಳಿಗೆ ಭಾರವಾಗಿ, ಅವರು ಗಳಿಸಿದ ಋಣದ ಕೂಳಿಗೆ ಕಾಯಿದು ಕೊಂಡಿರುತ್ತಾರೆ. ಅಂಥವರು ತಾಯಿತಂದೆಗಳಿಗೆ ಮಾಡತಕ್ಕ ಸನ್ಮಾನವನ್ನೂ ಸೇವೆಯನ್ನೂ ಅವರ ವಿಷಯವಾಗಿ ನಡೆಯತಕ್ಕ ಧರ್ಮಾಚಾರವನ್ನೂ ಅರಿ ಯದೆ ಅವರಲ್ಲಿ ದುಃಖವನ್ನು ಹುಟ್ಟಿಸಿ ದೈವ ದ್ರೋಹಿಗಳೆನಿಸುವರು. ಏಕಂ ದರೆ, "ಮಾತಾ ಗೌರೀ ಪಿತಃ ಶಂಭೋ" ಎಂದು ಶಾಸ್ತ್ರವಿಹುದಾಗಿ ಲೌಕಿಕ ಶಾಸ್ತ್ರದಲ್ಲಿ ತಾಯಿತಂದೆಗಳೇ ಪ್ರತ್ಯಕ್ಷ ದೇವರೆಂದು ತಿಳಿದು ಆದರ ಪೂರ್ವಕ ವಾಗಿ ಅವರ ಮನಸ್ಸನ್ನ ನೋಯಿಸದೆ, ಸೇವೆ ಸತ್ಕಾರ ಮಾಡಬೇಕೆಂದು ಹೇಳುತ್ತದೆ.

ತಂದೆ ತಾಯಿಗಳಲ್ಲಿ ಸನ್ಮಾನ ವಿಶ್ವಾಸ ಭಯಭಕ್ತಿ ಮೊದಲಾದವುಗಳ ನ್ನಿಟ್ಟು ಜಾಗ್ರತೆಯಿಂದ ನಡೆದು ಅವರ ಪ್ರೀತಿ ಪ್ರಸನ್ನತ್ವವನ್ನು ಪಡೆದು ಕೊಳ್ಳಲರಿಯದವನು ಗುರುಗಳನ್ನೂ ದೇವರನ್ನೂ ಎಂದಿಗೂ ಮೆಚ್ಚಿಸಲರಿಯನು ಅವನು ಭೂಮಿಗೆ ಭಾರವಾಗಿ ಅನ್ನಕ್ಕೆ ವೈರಿಯಾಗುವನು ಯಾಕಂದರೆ, "ಭೂಭಾರೇಣ ಅನ್ನಶತ್ರು" ಎಂದುಂಟಾಗಿ ಆ ಭೂಮಿಭಾರಕನಾದ ವ್ಯೆಗಳ್ಳನನ್ನು ಯಾರೂ ಸೇರುವದಿಲ್ಲ ಅವನು ಸರ್ವರಿಗೂ ಉಪೇಕ್ಷೆಯಾಗಿರ್ಪನು. ಇಷ್ಟೆಲ್ಲ ಕೇಡಿಗೆ ಕಾರಣವಾದದ್ದು ವ್ಯೆಗಳ್ಳತನವು ಆದರ ಅಭ್ಯಾಸ ಯಾರೂ ಕಲಿ ಯಬಾರದು.

ದೇಹ ಬಲವುಳ್ಳವರು ಸ್ವಂತ ಕಷ್ಟದಿಂದ ಸಕಲ ಪದಾರ್ಥಗಳನ್ನು ಸಂಪಾದನೆ ಮಾಡಿ ತಾವು ಅದರಿಂದ ಜೀವಿಸುತ್ತ ಲೋಕಾಪವಾದವನ್ನು

ಹೊರದೆ ಇದ್ದು ದೇಹ ಬಲವಿಲ್ಲದ ಕಣ್ಣು ಕಾಲು ಕೈಗಳು ಮೊದಲಾದ ಅವಯುವ ಹೀನರಾದ ಬಡವರಿಗೆ ಧರ್ಮಕೊಟ್ಟು ಸಹಾಯ ಮಾಡಬೇಕು

ಈ ಲೋಕದಲ್ಲಿ ಅನೇಕ ತರದ ಕೆಲಸಗಳನ್ನು ಮಾಡಬಹುದು. ಎಲ್ಲ ಕೆಲಸಕ್ಕೆ ಎಲ್ಲರೂ ತಕ್ಕವರಲ್ಲ ಕೆಲವರಿಗೆ ಕಾಯಶಕ್ತಿ, ಕೆಲವರಿಗೆ ಬುದ್ಧಿ ಶಕ್ತಿ, ಕಲ ಕೆಲವರಿಗೆ ಬುದ್ಧಿಶಕ್ತಿ ಕಾಯ ಶಕ್ತಿಗಳೆರಡೂ ಇರುವವು

ಮನುಷ್ಯರುಗಳೆಲ್ಲರೂ ತಮ್ಮ ಸಾಮರ್ಥ್ಯಾನುಸಾರವಾಗಿಯೂ ದೇವ ಸಂಜ್ಞಾನುಸಾರವಾಗಿಯೂ ಅಥವಾ ತಂದೆ ತಾಯಿಗಳ ಚಿತ್ತಾನುಸಾರವಾಗಿಯೂ ಪಟ್ ಕೃಷಿ ವ್ಯಾಪಾರಂಗಳಲ್ಲಿ ಯಾವದಾದರೊಂದು ಕೆಲಸ ನಡಿಸುವವನಾಗಿ ಅದರಿಂದ ಅನ್ನ ವಸ್ತ್ರಾದಿ ಸಕಲ ಸಂಪತ್ತನ್ನು ಮಾನ ಮರ್ಯಾದೆಗಳನ್ನು ದೊರಕಿಸಿಕೊಳ್ಳಬೇಕು

"ಅಯೋಗ್ಯಃ ಪುರುಷೋ ನಾಸ್ತಿ ಪ್ರಯೋಗಸ್ತತ್ರ ದುರ್ಲಭಃ" ಅಂದರೆ 'ಕೆಲಸಕ್ಕೆ ಬಾರದ ಮನುಷ್ಯನಿಲ್ಲ, ಮಾಡುವವರು ಮಾತ್ರ ಕಡಿಮೆ" ಎಂಬ ನಾಣ್ಣುಡಿಯಂತೆ ಮನುಷ್ಯ ಯತ್ನದಿಂದ ಸಾಧ್ಯವಾಗದ ಕೆಲಸ ಒಂದಾದರೂ ಇಲ್ಲ.

ಈ ಗ್ರಂಥದಲ್ಲಿ ಯತ್ನಾಧಿಕ್ಯವೆಂಬ ಈ ಪ್ರಕರಣವನ್ನು ಹೇಳುವ ಕಾರಣ ವೇನಂದರೆ, ಈ ಕೃಷಿಜ್ಞಾನ ಪ್ರದೀಪಿಕೆಯ ಮೊದಲನೆಯ ಭಾಗದಲ್ಲಿ ಜಿರಾಯತ ಸಂಬಂಧವಾಗಿ ಹೊಲಗಳ ವ್ಯವಸಾಯದ ಕ್ರಮಗಳಲ್ಲಿ ಬಹು ಸುಲಭವಾದ ಯುಕ್ತಿಗಳಿಂದ ಪ್ರತಿ ಒಂದು ಕೂರಿಗೆ ಭೂಮಿಯಲ್ಲಿ ಮೂವತ್ತು ನಾಲ್ವತ್ತು ಹೇರು ಧಾನ್ಯಗಳು ಬೆಳೆಯಾಗುವಂತೆ ಭೂಮಿಯ ಹದ ಬೆದೆಯ ಕಾಲಗಳನ್ನು ತಿದ್ದಿಕೊಂಬುವದನ್ನು ಗೊಬ್ಬರದ ಬಲಾತ್ಕಾರವನ್ನು ಬಿತ್ತಿ ಬೆಳೆಯುವ ಕ್ರಮವನ್ನು ಲೋಕ ಹಿತಾರ್ಥವಾಗಿ ಸಕಲ ನೀತಿಗಳನ್ನು ಸಮಸ್ತ ಯುಕ್ತಿಗಳನ್ನು ಬಹು ವಿಸ್ತಾರವಾಗಿ ಎಂಟು ಪ್ರಕರಣಗಳಲ್ಲಿ ಬರೆದಿರುವೆನು

ಬಾಗಾಯತ ಸಂಬಂಧವಾಗಿ ಎರಡನೆಯ ಭಾಗದಲ್ಲಿ ತೋಟದ ವಿಷಯವಾಗಿ ಒಬ್ಬೊಬ್ಬರಿಗೆ ಪ್ರತಿ ವರ್ಷಕ್ಕೆ ಹತ್ತೆಂಟು ಕೂರಿಗೆ ಭೂಮಿಯುಳ್ಳ ಒಂದೇ ಹೊಲದಲ್ಲಿ ತೋಟ ಮಾಡಿ ವರ್ಷಕ್ಕೆ ಹತ್ತು ಹನ್ನೆರಡು ಸಾವಿರ ರೂಪಾಯಿಗಳ ಉತ್ಪನ್ನವನ್ನು ಸುಲಭವಾಗಿ ಮಾಡಿಕೊಳ್ಳುವಂತೆ ಅತಿ ಸುಲಭ ಯುಕ್ತಿಗಳಿಂದ ಮಾಡಿಕೊಂಡು ಸಮಸ್ತರು ಧನ ಧಾನ್ಯ ಸಂಪನ್ನರಾಗಲೆಂದು ಅತ್ಯಾಶ್ಚರ್ಯವಾಗಿ ಬರೆದಿರುವೆನು.

ಆದಾಗ್ಯೂ ಸಮಸ್ತರು ಇದರಂತೆ ಮಾಡಿಕೊಂಡು ಮಹದೈಶ್ವರ್ಯವುಳ್ಳವರಾದರೆ ನನ್ನ ಮನೋರಥವು ಇಡೇರಿದಂತಾಗುವದು. ನಿಜವಾಗಿ ಇದ

ಕ್ಕೊಂದು ವಿಘ್ನ ಉಂಟು ಈ ದೇಶದಲ್ಲಿ ದುರ್ವೈರಾಗ್ಯದ ದುಷ್ಟಗುಣದ ಪದ್ಧತಿ ಒಂದು ಬಹುಕಾಲದಿಂದ ರೂಢಿಯಾಗಿ ಸಮಸ್ತರ ಹೃದಯದಲ್ಲಿ ಧೃಡವಾಗಿ ನೆಲೆಗೊಂಡು ಸರ್ವಜನರ ಪ್ರಯತ್ನದ ಕಾಲು ಮುರಿದು ಸಕಲರಿಗೂ ದಾರಿದ್ರ್ಯ ದುಃಖವನ್ನುಣಿಸುತ್ತಿರುವದು.

ಆ ಗುಣವು ಯಾವದೆಂದರೆ "ಪ್ರಾರಬ್ಧ ವಶದಿಂದ ದ್ರವ್ಯ ಪ್ರಾಪ್ತಿಯಾಗುವದಲ್ಲದೆ ಪ್ರಯತ್ನದಿಂದ ಪ್ರಾಪ್ತಿಯಾಗುವದಿಲ್ಲ" ಎಂದು ನಿರ್ಧರಿಸಿ ನಿಶ್ಚಯಮಾಡಿಕೊಂಡು ಎಷ್ಟು ಹೇಳಿದರೂ ಕೂಡ ಅದನ್ನೆಲ್ಲ ಸುಳ್ಳು ಮಾಡಿ ಪ್ರಯತ್ನವನ್ನು ಧಿಃಕ್ಕರಿಸಿ ಪ್ರಾರಬ್ಧವಿದ್ದರೆ ಭೂಮಿ ಬೆಳೆಯುವದಲ್ಲದೆ ಪ್ರಯತ್ನದಿಂದ ಬೆಳೆಯದೆಂದು ಹಣೆಯನ್ನು ಮುಟ್ಟಿಕೊಳ್ಳುತ್ತಾರೆ

ಹೀಗಾದ ಮೇಲೆ ಈ ಗ್ರಂಥವು ಅಸಾರ್ಥಕವಾಯಿತು ಹೇಗೆಂದರೆ ಸಕಲೈಶ್ವರ್ಯವು ಕಣ್ಣೆದುರಿನಲ್ಲಿ ಕಾಣುವ ಹಾಗೆ ಸದ್ಯಃ ಫಲವಾದ ಬಹು ಯುಕ್ತಿಗಳನ್ನು ಅನೇಕ ಪ್ರಕಾರದ ಸುನೀತಿಗಳನ್ನು ಪುಷ್ಕಳ ದೃಷ್ಟಾಂತಗಳಿಂದ ಚಿತ್ರ ಚಮತ್ಕಾರಗಳಿಂದ ಬರೆದು ಬೇಸರವಿಲ್ಲದೆ ಇಷ್ಟು ದೊಡ್ಡ ಗ್ರಂಥವನ್ನು ಸಕಲ ಜನರ ಕಲ್ಯಾಣಾರ್ಥವಾಗಿ ಸಿದ್ಧ ಮಾಡಿದಾಗ್ಯಾದರೂ, ಮೂರ್ಖತನದ ಅಭ್ಯಾಸ ಬಲದಿಂದ ಹಿಂದಿನವರೊಬ್ಬರು ಅಂಬುವದನ್ನು ಕೇಳಿ ತಾವೂ ಅದರಂತೆ ನುಡಿಯುತ್ತ ಮಾಡಲಾರದ ಪೈಗಳ್ಳತನದಿಂದ ಪ್ರಾರಬ್ಧದ ಮೇಲೆ ಭರವಸೆ ಇಟ್ಟು ಪ್ರಯತ್ನವನ್ನು ಧಿಃಕ್ಕಾರ ಮಾಡುತ್ತಾರೆ ಅದು ಕಾರಣ ಈ ಪ್ರಕರಣದಲ್ಲಿ ಯತ್ನಮುಖ್ಯವನ್ನು ಅಗತ್ಯವಾಗಿ ಹೇಳಬೇಕಾಯಿತು.

ಸರ್ವಕಾರ್ಯಗಳನ್ನು ಸಾಧಿಸುವದಕ್ಕೂ ಸರ್ವ ಪ್ರಯೋಜನಕ್ಕೂ ಯತ್ನವೇ ಬೇಕು. ಮೃಗಪಶು ಕ್ರಿಮಿಕೀಟಕ ಪತಂಗಾದಿ ಸಕಲ ಪ್ರಾಣಿಗಳಾದರೂ ತಮ್ಮ ತಮ್ಮ ಯೋಗ್ಯತೆಯ ಪ್ರಕಾರ ಯತ್ನ ಮಾಡಿ ಬದುಕುತ್ತವೆ ಅದರಂತೆ ಮನುಷ್ಯರು ಜೀವಿಸಿ ಬದುಕಬೇಕಾದರೆ, ಷಟ್ಕೃಷಿಯಲ್ಲಿ ಪ್ರಯತ್ನಮಾಡಬೇಕಾಗುತ್ತದೆ ಆ ಷಟ್ಕೃಷಿ ವ್ಯಾಪಾರ ಪ್ರಯತ್ನಗಳಲ್ಲಿ ಕೃಷಿಕರ್ಮವೇ ರಾಜಯತ್ನವು. ಇದು ಮನುಷ್ಯರುಗಳಿಗೆ ಮೂಲವು ಈ ಯತ್ನದಿಂದ ಜೀವನವನ್ನು ಮಾಡುವದು ಉತ್ತಮವು ಈ ವಿಷಯದಲ್ಲಿ ಮುಸಲ್ಮಾನರಲ್ಲೊಬ್ಬ ಕವಿಯು ಅನ್ನುವದೇನಂದರೆ, "ಉತ್ತಮ ಖೇತ್, ಮಧ್ಯಮ ಬೇಪಾರ್, ಕನಿಷ್ಠ ನೌಕರ್, ಭೀಕ ನಿದಾನ," ಎಂದು ಕಬೀರನು ಹೇಳಿದ್ದಾನೆ. ಇದರ ಅರ್ಥವು ಭೂಮಿಯ ವ್ಯವಸಾಯವು ಉತ್ತಮವು. ವ್ಯಾಪಾರ ಮಧ್ಯಮವು. ಪರಸೇವಾ ಕನಿಷ್ಠವು. ಬೇಡಿಕೊಂಡು ಜೀವನವನ್ನು ಮಾಡುವದು ಕೇವಲ ಸಾಮಾನ್ಯ ಎಂದಾಗುವದು.

“ಕೃಷಿತೋ ನಾಸ್ತಿ ದುರ್ಭಿಕ್ಷಂ, ಜಪಿತೋ ನಾಸ್ತಿ ಪಾತಕಃ, ಮೌನಾತ್ ಕಲಹಂನಾಸ್ತಿ ನಾಸ್ತಿ ಜಾಗ್ರತೋ ಭಯಂ” ಎಂದುಂಟಾಗಿ ಭೂಮಿಯ ವ್ಯವಸಾಯವನ್ನು ಜಾಗ್ರತೆಯಿಂದ ಮಾಡುವವರಿಗೆ ದುರ್ಭಿಕ್ಷಾದಿಗಳು ಬರುವದಿಲ್ಲವೆಂದು ಪುರಾಣವಾಕ್ಯವಿರುವದರಿಂದ ಸಕಲ ಜನರೆಲ್ಲರೂ ಕೃಷಿಜ್ಞಾನಪರಿಣತರಾಗಲೆಂದು ಈ ವ್ಯವಸಾಯದ ಸರ್ವ ಯುಕ್ತಿಗಳನ್ನು ವ್ಯಕ್ತವಾಗಿ ತಿಳಿಯಪಡಿಸಿದ್ದೇನೆ ಯಾವತ್ತರೂ ಇದನ್ನು ಚನ್ನಾಗಿ ತಿಳಿದು ಭೋಗ ಭಕ್ಷ್ಯಾದಿ ಸಕಲ ಪದಾರ್ಥ ಸಂಪನ್ನರಾಗಲೆಂದು ಪರಮೇಶ್ವರನ್ನು ಕುರಿತು ಪ್ರಾರ್ಥಿಸುತ್ತೇನೆ.

ಮಲಯ ಪ್ರಾಂತ ಚೋಳಮಂಡಲ ಮೊದಲಾದ ಕೆಲವು ದೇಶದ ಜನರು ಭೂಮಿಯ ವ್ಯವಸಾಯ ಮಾಡುವದರಲ್ಲಿ ತಮ್ಮ ತಮ್ಮ ಕೈಲಾದ ಮಟ್ಟಿಗೆ ಅರ್ಥಶಕ್ತಿಯಿಂದಲೂ ಬುದ್ಧಿಶಕ್ತಿಯಿಂದಲೂ “ಆಳಾಗಿ ಮಾಡಿದವನು ಅರಸಾಗಿ ಉಂಬುವನು” ಎಂಬ ನಾಣ್ಣುಡಿಗನುಸಾರವಾಗಿ ಮೆಹನತು ಮಾಡಿ ಶ್ರಮದಿಂದಲಾದರೂ ಧನ ಧಾನ್ಯ ಫಲ ಪದಾರ್ಥ ಸಂಪತ್ಸೌಖ್ಯವನ್ನು ಹೊಂದಲಿಚ್ಛಿಸಿ ಈ ಕೃಷಿ ಕೃತ್ಯದಿಂದಲೇ ಪರಿಣಾಮಿಗಳಾಗುವರು

ಆದರೆ ನಮ್ಮೀ ದೇಶದ ಜನರು ಕೃಷಿಜ್ಞಾನ ಪರಿಣತರಲ್ಲ ಅವರು ತಿಳಿದಷ್ಟು ಪೂರ್ತಿಗಾದರೂ ನೆರೆದೇಶದವರು ಮಾಡುವದನ್ನು ಕಂಡು ಅಲ್ಲದೆ ಪ್ರಾಜ್ಞರಿಂದ ಕೇಳಿ ತಿಳಿದು ಕೈಲಾದ ಮಟ್ಟಿಗೆ ಶ್ರಮಪಟ್ಟು ಭೂಮಿಯ ವ್ಯವಸಾಯವನ್ನು ಮಾಡಲಾರದ ಅದಕ್ಕೊಂದು ಯೋಜನೆಯನ್ನು ನಿರ್ಧಾರ ಮಾಡಿಕೊಂಡಿದ್ದಾರೆ ಅದೇನೆಂದರೆ, ಪ್ರಾರಬ್ಧಾಧೀನವಾಗಿ ಸಂಪತ್ತು ಇರುವದು, ದೈವಾನುಕೂಲವಿದ್ದವನಿಗೆ ಭೂಮಿಯು ತನ್ನಿಂದ ತಾನೇ ಬೆಳೆಯುತ್ತದೆ, ಧನಧಾನ್ಯ ಸಕಲೈಶ್ವರ್ಯವು ತನ್ನಿಂದ ತಾನೇ ಬರುತ್ತದೆ ಎಂದು ಯತ್ನ ಹೀನರಾಗಿರಾಗಿರುತ್ತಾರೆ ಇದಾದರೂ ನಿಶ್ಚಯತ್ವವಿಲ್ಲದೆ ದುರ್ವೈರಾಗ್ಯರ ಮಾತುಗಳನ್ನಾಡುತ್ತಾರೇ ಹೊರ್ತು ಉಳಿದಾದ ಕೆಲಸಗಳ ವಿಷಯವಾಗಿ ವ್ಯರ್ಥ ಸಾಹಸ ಪಡುತ್ತಾರೆ

ದೈವಾನುಕೂಲವಿದ್ದರೆ ಆದೀತೆಂದು ನಿತ್ಯದಲ್ಲಿ ಮಾಡುವ ಪಾಕ ಪ್ರಯತ್ನವನ್ನು ಬಿಡುವದಿಲ್ಲ. ಅಲ್ಲದೆ ದೇಹ ಶುಚಿಯಾದೀತೆಂದು ಶೌಚಾಚಮನಗಳನ್ನು ಮತ್ತು ಹಸ್ತ ಪಾದಾದಿ ಅವಯವಗಳನ್ನು ತೊಳೆದುಕೊಳ್ಳುವದನ್ನು ಬಿಡುವದಿಲ್ಲ ದೈವಾನುಕೂಲವಿದ್ದರೆ, ಹೊಟ್ಟೆ ತುಂಬೀತೆಂದು ಭೋಜನ ಮಾಡುವದನ್ನು ಬಿಡುವದಿಲ್ಲ. ಅಲ್ಲದೆ ಕೃಷಿಕರಾದವರು ದೈವಾನುಕೂಲವಿದ್ದರೆ ತನ್ನಿಂದ ತಾನೇ ಬೆಳೆಯುವದೆಂದು ಬಿತ್ತುವದನ್ನು ಬಿಡುವದಿಲ್ಲ. ವ್ಯಾಪಾರಸ್ಥರೂ ದೈವಾನುಕೂಲವಿದ್ದರೆ ದ್ರವ್ಯ ದೊರೆತೀತೆಂದು ಉದ್ಯೋಗವನ್ನು ಬಿಡುವದಿಲ್ಲ. ಇವರು ಅನಂತ ಕೃತ್ಯಗಳಲ್ಲೆಲ್ಲ ಯತ್ನ ಮಾಡುವದನ್ನು ಬಿಡದೆ ಮಾಡುತ್ತಾರೆ.

ಅದನ್ನೇ ಯುಕ್ತಿಯಿಂದ ಮಾಡಿ ವಿಶೇಷ ಪ್ರಾಪ್ತಿ ಮಾಡಿಕೊಳ್ಳುವ ವಿಷ ಯದಲ್ಲಿ ಬುದ್ಧಿಯನ್ನು ಹೇಳಿದರೆ ಮಾಡಲಾರದೆ ಬಾಯಿಂದ ಮಾತ್ರ ವಾಗ್ವೈ ರಾಗ್ಯದ ಮಾತುಗಳನ್ನಾಡಿ ಮೈಗಳ್ಳತನದಿಂದ ಕೆಲವರು, ದ್ರವ್ಯ ಮದದಿಂದ ಕೆಲವರು, ಮಾಡುವ ಯುಕ್ತಿಯನ್ನು ತಿಳಿಯದೆ ಕೆಲವರು, ದ್ರವ್ಯಶಕ್ತಿ ಸಾಲದಾಗಿ ಕೆಲವರು, ಚನ್ನಾಗಿ ಶ್ರಮವನ್ನು ಯುಕ್ತಿಯಿಂದ ಮಾಡದ ಕಾರ್ಯದ ಫಲ ವನ್ನು ಕೆಡಿಸಿಕೊಳ್ಳುತ್ತಾರೆ.

ದೈವಾನುಕೂಲವೆಂಬುದಕ್ಕೆ ತಮ್ಮ ಪ್ರಯತ್ನವಿರದಿದ್ದರೆ ಅದೆಲ್ಲಿಯ ದೈವ? ಪ್ರಯತ್ನದಿಂದ ಪ್ರಾರಬ್ಧ ಬರುವದಲ್ಲದ. ಪ್ರಯತ್ನವಿಲ್ಲದಿದ್ದರ ಪ್ರಾರಬ್ಧವೇ ಇಲ್ಲವು ಇಹಲೋಕ ಪರಲೋಕದಲ್ಲಿಯೂ ಸಂಪತ್ತನ್ನು ಭೋಗಿಸಬೇಕೆಂಬ ಲೌಕಿಕರಾದ ಗೃಹಸ್ಥರ ಧರ್ಮವು ಪ್ರಯತ್ನ ಮಾಡದೆ ಸಾಗದು.

ಯಾವದಾದರೊಂದು ಕೆಲಸಕ್ಕೋಸ್ಕರ ಪ್ರಯತ್ನ ಮಾಡುವಲ್ಲಿ ಅದು ಕೆಟ್ಟರೆ ಪುನಃ ಯತ್ನ ಮಾಡಬೇಕಲ್ಲದ ಹಾಗೇ ಬಿಟ್ಟು ಬಿಡಲಾಗದು ಒಂದು ವರ್ಷ ಹೊಲವು ಬೆಳೆಯದಿದ್ದರೆ, ಎರಡನೇ ವರ್ಷ ಬಿತ್ತುವದನ್ನು ಬಿಡಬೇಕೇ ಹೇಗೆ? ಎಷ್ಟು ವೇಳೆ ಕೆಟ್ಟ ಕಾಲಕ್ಕಾದರೂ ಮತ್ತೊಮ್ಮೆ ಯತ್ನ ಮಾಡಬೇಕಲ್ಲದೆ ಆಗುವದಿಲ್ಲವೆಂದು ಬಿಟ್ಟು ಬಿಡಲಾಗದು

ಯತ್ನವಿಲ್ಲದ ವಿನಹ ಯಾವ ಕೆಲಸವಾದರೂ ನಾಗುವದಿಲ್ಲವಾದ ಕಾರಣ ಯತ್ನವೇ ಸರ್ವ ಸಾಧನವು

ಉದ್ಯೋಗಿನಂ ಪುರುಷ ಸಿಂಹಮು ಪೈತಿ ಲಕ್ಷ್ಮೀಃ। ದೈವಪ್ರಧಾನಮಿತಿ ಕೆ ಪುರುಷಾ ವದಂತಿ॥ ದೈವಂ ವಿಹಾಯ ಕುರು ಪೌರುಷಮಾತ್ಮಶಕ್ತ್ಯಾ। ಯತ್ನೇನ ಕೃತೇ ಸಿದ್ಧ್ಯತಿ ಕೋಽತ್ರ ದೋಷಃ॥೧॥ ಮತ್ತು ॥ಉದ್ಯೋಗಂ ಖಲು ಕರ್ತವ್ಯಂ। ಫಲಂ ಮಾರ್ಜಾಲವದ್ಭವೇತ್॥ ಜನ್ಮಪ್ರಭೃತ್ ಗೌರ್ನಾಸ್ತಿ। ಪಯಃ ಪಿಬತಿ ನಿತ್ಯಶಃ॥೧॥

ಜನ್ಮಾರಭ್ಯದಿಂದ ಆಕಳುಗಳನ್ನು ಪಾಲನೆ ಮಾಡದೆ ಮಾರ್ಜಾಲನು ನಿತ್ಯದಲ್ಲಿ ಪ್ರಯತ್ನ ಮುಖದಿಂದ ಹಾಲು ಕುಡಿಯುತ್ತದೆಂಬ ದೃಷ್ಟಾಂತದಂತೆ ಯತ್ನ ಮಾಡದ ಹೊರತು ತನ್ನ ಮನೋರಥವು ಕೈಗೂಡುವದಿಲ್ಲ

ಸರ್ವರೂ ವಾಗ್ವೈರಾಗ್ಯದಿಂದ ಪ್ರಾರಬ್ಧವೇ ಪ್ರಧಾನವೆಂದು ಯತ್ನವನ್ನು ತಿರಸ್ಕರಿಸುತ್ತಾರೆ ಯತ್ನಕ್ಕೆ ಅಸಾಧ್ಯವಾದ ಕೆಲಸವೇ ಇಲ್ಲ ಯತ್ನ ಮಾಡುವ ವಿಷಯದಲ್ಲಿ ಯುಕ್ತಿದಪ್ಪಿ ಮಾಡಿದರೆ ಕೆಲಸ ಕೆಡುವದಲ್ಲದೆ, ಸರಿಯಾಗಿ ಮಾಡಿ ದರೆ ಯಾವದೂ ಸಾಧಿಸದೆ ಹೋಗಲಾರದು. ಯಾರಾದರೂ ತಾವು ಕಾರ್ಯ ಪ್ರಯೋಜನ ಮುಂದುಗೊಂಡು ಮಾಡುವ ಯತ್ನವನ್ನು ಸಿದ್ಧಿಗೆ ಮುಟ್ಟಿಸು

ವದಕ್ಕೆ ತಮ್ಮ ತಮ್ಮ ಕಾಯಶಕ್ತಿ ಬುದ್ಧಿಶಕ್ತಿ ಅಥವಾ ಅರ್ಥಶಕ್ತಿಯಿಂದ ಏನೂ ಕಡಿಮೆಯಾಗದ ಹಾಗೆ ಜಾಗ್ರತೆಯಿಂದ ಯುಕ್ತಿಯಿಂದ ಯಥಾ ಪ್ರಕಾರ ಆಯಾ ಕೆಲಸಗಳಿಗೆ ತಕ್ಕ ಹಾಗೆ ಮಾಡತಕ್ಕದ್ದೆಲ್ಲವನ್ನು ಮಾಡಿ ಸಾಧಿಸಿದರೆ ಅದು ಸಿದ್ಧಿಗೆ ಮುಟ್ಟಿ ಫಲವನ್ನು ಕೊಡದೆ ಇರಲಾರದು.

ಒಂದು ವೇಳೆ ಯತ್ನಕ್ಕೆ ತಕ್ಕ ಹಾಗೆ ಕಾಯ ಶಕ್ತಿಯಾಗಲಿ ಬುದ್ಧಿ ಶಕ್ತಿಯಾಗಲಿ ಅರ್ಥ ಶಕ್ತಿಯಾಗಲಿ ಇವುಗಳಲ್ಲಿ ಒಂದಾದರೂ ಕಡಿಮೆಯಾದರ ಆ ಯತ್ನವು ಕೆಡುವುದು. ಆ ಯತ್ನ ಕೆಟ್ಟಲ್ಲಿ ಯಾವ ಕೆಲಸವಾದರೂ ಫಲಿಸಲರಿಯದು ಹೇಗಂದರೆ ಯತ್ನವೆಂಬ ವೃಕ್ಷದಿಂದ ದೈವವೆಂಬ ಫಲವಾ ಗುವದಲ್ಲದ ಯತ್ನವಿರದಿದ್ದರೆ ಪುಣ್ಯವಲ್ಲಿಂದ ಬರುತ್ತದೆ ? ಪ್ರಯತ್ನದಿಂದ ಗುರು ಸೇವೆ ಲಿಂಗಪೂಜೆ ಜಂಗಮ ಭಕ್ತಿ ಮುಂತಾದ ಸಕಲ ತಪ ನಿಷ್ಠಾ ವ್ರತ ನೇಮ ಪೂಜಾಕ್ರಿಯೆಗಳನ್ನು ಮಾಡುವದರಿಂದ ಪುಣ್ಯ ಪ್ರಾಪ್ತಿಯಾಗುವದು. ಆ ಪುಣ್ಯವೇ ಜನ್ಮ ಜನ್ಮಾಂತರಕ್ಕೂ ಪ್ರಾರಬ್ಧವೆನಿಸಿ ದೈವವೆನಿಸಿ ಬೆಳೆಯು ವದು ಆದು ಕಾರಣ ಪ್ರಯತ್ನವೇ ಮೊದಲಲ್ಲದ, ಪ್ರಾರಬ್ಧವು ಮೊದಲಲ್ಲವು ಪ್ರಾರಬ್ಧವೆಂದರೂ ಪುಣ್ಯವೆಂದರೂ ದೈವವೆಂದರೂ ಒಂದೇ ಪರಿಯಾಯವು. ಪ್ರಯತ್ನದಿಂದ ದೂರಕೊಂಡ ಫಲವೇ ಪ್ರಾರಬ್ಧವನಿಸುವದು.

ಲೌಕಿಕರಾದ ಭೋಗ ಭುಕ್ತ್ಯಾಪೇಕ್ಷಿತರಿಗೆ ಪ್ರಯತ್ನನೇ ಬೇಕು ಯತ್ನ ವಿಲ್ಲದಲ್ಲಿ ದೇಹ ಭೋಗಕ್ಕೆ ಸೌಖ್ಯವೇ ಇಲ್ಲ. ಸರ್ವಸಂಗ ಪರಿತ್ಯಾಗಿಗಳಾದ ಪರಮ ಯೋಗೀಶ್ವರರೂ ಪ್ರಯತ್ನ ಪ್ರಾರಬ್ಧಗಳೆರಡನ್ನು ಮೀರಿದವರಾಗಿ ಸ್ವೇಚ್ಛಾ ಚಾರೋ ಮಹಾತ್ಮನಾಂ। ಸ್ವೇಚ್ಛಾಚಾರೋ ಗಣೇಶ್ವರಃ॥ ಎಂದುಂಟಾಗಿ ಅವರು ಪ್ರಾರಬ್ಧಾದಿಗಳ ಆಧೀನದಲ್ಲಿರದೆ ಭೋಗವನ್ನು ತಿರಸ್ಕರಿಸಿ ಪರಮ ಶಿವಯೋಗಲೀಲಾವಿನೋದದಿಂದಿರ್ಪ ನಿಜವೈರಾಗ್ಯಶೀಲರಿಗೆ ಪ್ರಾರಬ್ಧ ಪ್ರಯ ತ್ನಂಗಳೆರಡೂ ಇಲ್ಲ ಲೌಕಿಕರು ಪ್ರಯತ್ನ ಮಾಡಿ ಪಡಕೊಳ್ಳದಿದ್ದರೆ ಅರ್ಥ ಕೊಡುವವರಾರು ? ಗೃಹಸ್ಥರಾದವರು ಪ್ರಯತ್ನ ಮಾಡದೆ ಬಿಟ್ಟು ಕುಳಿತಾಗಳೆ ಪ್ರಾಣಾಭಿಮಾನಗಳು ಮೂರೂ ಹೋಗುವವು

ಪ್ರಯತ್ನದಿಂದ ದ್ರವ್ಯ ಪ್ರಾಪ್ತಿಯಾಗುವದು, ಪ್ರಯತ್ನದಿಂದ ಪ್ರಾಣರಕ್ಷ ಣೆಯಾಗುವದು, ಪ್ರಯತ್ನದಿಂದ ಮಾನ-ಮರ್ಯಾದೆಯು ಕೂಡ ದೊರೆಕೊಂ ಬುವವು. ಆದು ಕಾರಣ ಅರ್ಥ ಪ್ರಾಣಾಭಿಮಾನಗಳ ಆಶೆಯುಳ್ಳವರು ಪ್ರಯತ್ನ ಮಾಡಲಿಕ್ಕೇಬೇಕು. ಈ ಮೂರರ ಆಶೆ ಬಿಟ್ಟವರು ಪ್ರಯತ್ನವನ್ನು ತೊರ ದರೂ ಚಿಂತೆ ಇಲ್ಲ ಆದರೆ ಮನೆತನಸ್ಥರಾದ ಮಾನ-ಮರ್ಯಾದೆಯುಳ್ಳ ಗೃಹಸ್ಥರು ಪ್ರಾರಬ್ಧವನ್ನು ನಂಬಿ ಪ್ರಯತ್ನವನ್ನು ತೊರೆದಾಗಳೇ ಕೆಟ್ಟು ಹೋಗು ವರು ಅಂಥವರ ಅಭಿಮಾನ ಉಳಿಯದು. ಸಂಸಾರಿಗಳಾದವರು ಸನ್ಯಾಸಿ

ಗಳಂತೆ ಜ್ಞಾನಶೂನ್ಯಸ್ಥಲದಲ್ಲಿ ನಿಂತು, ಆದವಾಗಲಿ, ಹೋದದ್ದು ಹೋಗಲಿ ಬಂದದ್ದು ಬರಲಿ, ಇದ್ದದ್ದು ಇರಲಿ, ಎಂದು ನುಡಿದರೆ ಅದು ಅವರ ಮರ್ಯಾದೆಗೆ ಯೋಗ್ಯತೆಯುಲ್ಲವು. ಲೌಕಿಕರಲ್ಲಿ ಇವರೇ ಅವಿವೇಕಿಗಳೆನಿಸುವರು.

ಪ್ರಯತ್ನಕ್ಕಾದರೂ ಕೆಲವು ಸಾಧನಗಳು ಬೇಕು ಅವುಗಳಾವವೆಂದರೆ ಕಾಯಶಕ್ತಿ ಬುದ್ಧಿಶಕ್ತಿ ಮತ್ತು ಅರ್ಥಶಕ್ತಿಗಳೆಂಬ ತ್ರಿವಿಧವು ಯತ್ನದ ತ್ರಾಣವು. ಮತ್ತು ಉದ್ಯೋಗ, ಸಾಹಸ, ಧೈರ್ಯ ಬಲ, ಬುದ್ಧಿ, ಪರಾಕ್ರಮಗಳೆಂಬ ಈ ಆರು ಉಪಸಾಧನಗಳು. ಈ ಒಂಭತ್ತು ಕಲಿತರೆ ಒಂದು ಪ್ರಯತ್ನವೆನಿಸುವದು ಈ ಯಾವತ್ತು ಸಾಧನಗಳನ್ನು ಒಂದುಗೂಡಿಸಿ ಮಾಡಿದ ಪ್ರಯತ್ನವು ಎಂದಿಗೂ ಕೆಡಲಾರದು ಈ ಪ್ರಯತ್ನದಿಂದ ಮನೋರಥವು ಸಿದ್ಧಿಗೆ ಮುಟ್ಟುವದು. ಈ ಒಂಬತ್ತು ಸಾಧನಗಳಲ್ಲಿ ಒಂದಾದರೂ ಕಡಿಮೆಯಾದರೆ ಮಾಡಿದ ಪ್ರಯತ್ನವು ನಿಷ್ಫಲವಾಗುವದು.

ಇದನ್ನು ತಿಳಿಯದೆ, ನಮ್ಮ ದೈವ ಹೀನವದೆ, ನಮ್ಮ ಪ್ರಾರಬ್ಧ ಹೀಗೆ ಅದೆ, ಹಾಗು ನಮಗೆ ನಮ್ಮ ಮನೋರಥವು ಕೈಗೂಡುವದಕ್ಕೆ ಪುಣ್ಯಾನುಕೂಲವಿಲ್ಲವೆಂದು ಚಿಂತಾಮಯರಾಗಿರುವರು ಕೆಲವರು ಅಜ್ಞಾನದಿಂದ ತಮಗೆ ತಾರಾಬಲವಿಲ್ಲ, ಚಂದ್ರಬಲವಿಲ್ಲ, ಶನಿಬಲವಿಲ್ಲ, ಗುರುಬಲವಿಲ್ಲ, ಮತ್ತು ನಮಗೆ ಪಂಚಮಶನಿ ಸಾಡೇಸಾತ ಮೊದಲಾದ ಕ್ರೂರ ಗ್ರಹಗಳ ಪೀಡೆಯುಂಟು, ಗ್ರಹಗಳು ಕಾಡುತ್ತವೆ ಎಂದು ಇಲ್ಲದ ಸಂಕಲ್ಪವನ್ನುಂಟು ಮಾಡಿಕೊಂಡು, ಸಂಕಲ್ಪ ಸಂಶಯ ವಿಪರೀತಗಳೆಂಬ ಅಜ್ಞಾನ ಬಲದಿಂದ ಮಾಡುವ ಯತ್ನವನ್ನು ಮರೆತು ದುಃಖಕ್ಕೆ ಪಾತ್ರರಾಗುತ್ತಾರೆ ಆದರೆ ವಿವೇಕಿಗಳಾದವರು ಮಾತ್ರ ಮೊದಲು ಮಾಡಿದ ಯತ್ನದಲ್ಲೇನಾದರೂ ಹೆಚ್ಚು ಕಡಿಮೆಯಾಗಿರುವದೆಂಬದನ್ನು ವಿಚಾರಿಸಿ ಮತ್ತೊಮ್ಮೆ ಸರ್ವ ಸಾಧನ ಉಪಸಾಧನಗಳೆಲ್ಲವನ್ನು ಮೇಳೈಸಿ ಮತ್ತೊಮ್ಮೆ ಮತ್ತೊಮ್ಮೆ ಮತ್ತೊಮ್ಮೆ ಚನ್ನಾಗಿ ಪ್ರಯತ್ನ ಮಾಡುತ್ತ ಹೋಗಬೇಕು. ಈ ಬಗ್ಗೆ ಒಂದು ಕಥೆಯನ್ನು ಇಲ್ಲಿ ಹೇಳುತ್ತೇನೆ

## ಕಥೆಯು.

ಒಬ್ಬಾನೊಬ್ಬ ಶಾಲೆಯ ಹುಡುಗನು ಸೂಟಿಯ ದಿವಸಗಳಲ್ಲಿ ಪಟಮಾಡಿ ಅದನ್ನು ಹಾರಿಸಬೇಕೆಂದು ಬೈಲಲ್ಲಿ ಹೋಗಿ ಪ್ರಯತ್ನ ಮಾಡುತ್ತಿರಲು ಅದು ಹಾರಲಿಲ್ಲ. ಅಷ್ಟರಲ್ಲಿ ಅವನು ಬೇಸರಗೊಂಡು ಮುಃಖ ಖಿನ್ನನಾಗಿ ಕೈಯ್ಯಲ್ಲಿ ಪಟವನ್ನು ನುಲಿಯನ್ನು ಹಿಡಿದುಕೊಂಡು ಬರುವಷ್ಟರಲ್ಲಿ ಶಾಲೆಯ ಮಾಸ್ತರರು ಬಂದು ಅವನನ್ನು ಕೇಳಲಾಗಿ ಪಟವು ಹಾರಲಿಲ್ಲವಾದುದರಿಂದ ತಿರುಗಿ ಬಂದೆನೆಂದು ಹೇಳಿದನು.

ಆಗಲಾ ಮಾಸ್ತರರು ಅವನನ್ನು ಕರೆದುಕೊಂಡು ಬೈಲಲ್ಲಿ ಹೋಗಿ ಮತ್ತೊಮ್ಮೆ ಪ್ರಯತ್ನ ಮಾಡೆಂದು ಹೇಳಿದರು. ಆ ಹುಡುಗನು ಪ್ರಯತ್ನ ಮಾಡಲು ಮತ್ತೂ ಹಾರದೆ ನೆಲ್ಲಕ್ಕೆ ಬಿತ್ತು ಆ ಮೇಲೆ ಅದರ ಸೂತ್ರವನ್ನು ಚನ್ನಾಗಿ ಮಾಡಿಕೊಟ್ಟು ಮತ್ತೊಮ್ಮೆ ಯತ್ನ ಮಾಡೆಂದು ಹೇಳಿದರು. ಆ ಹುಡುಗನು ಪುನಃ ಯತ್ನವನ್ನು ಮಾಡಲು ಮತ್ತೂ ಹಾರಲಿಲ್ಲವು. ಆ ಮೇಲೆ ಮಾಸ್ತರರು ಅದರ ಹಿಂಭಾಗದಲ್ಲಿ ಮತ್ತಿಷ್ಟು ಸ್ವಲ್ಪ ಭಾರವನ್ನು ಮಾಡಿ ಮತ್ತೊಮ್ಮೆ ಯತ್ನ ಮಾಡೆಂದು ಹೇಳಿದರು. ಅಗಲಾ ಹುಡುಗನು ಮತ್ತೊಮ್ಮೆ ಯತ್ನ ಮಾಡಲು ಚನ್ನಾಗಿ ಹಾರುವದಾಯಿತು ಆ ಪಟವು ಮೇಲಕ್ಕೆ ಏರಿ ಆಡಹತ್ತಿದ್ದರಿಂದ ಆ ಹುಡುಗನಿಗೆ ಆನಂದವಾಯಿತು

ಆ ಮೇಲೆ ಮಾಸ್ತರರು ಆ ಹುಡುಗನನ್ನು ಸಮೀಪಕ್ಕೆ ಕರೆದು ಹೇಳಿದ್ದೇನಂದರೆ, "ಮುಂದೆ ನೀನು ಮಾಡುವ ಕೆಲಸಗಳಲ್ಲಿ ಏನಾದರೂ ಯುಕ್ತಿ ತಪ್ಪಿದರೆ ಅದರಿಂದ ಕೆಡುತ್ತಿರುವದು. ಅದು ಎಷ್ಟು ವೇಳೆ ಕೆಟ್ಟ ಕಾಲಕ್ಕಾದರೂ ಬುದ್ಧಿಯಿಂದ ವಿಚಾರಿಸಿ ನೆಟ್ಟಗೆ ತಿದ್ದಿಕೊಂಡು ಮತ್ತೊಮ್ಮೆ ಯತ್ನ ಮಾಡಬೇಕು ಅದು ಒಂದು ವೇಳೆ ಪುನಃ ಕೆಟ್ಟಾಗ್ಯಾದರೂ ಮತ್ತೊಮ್ಮೆ ಮತ್ತೊಮ್ಮೆ ಯತ್ನ ಮಾಡುತ್ತ ನೂರಾರು ವೇಳೆ ಅದು ಸಿದ್ಧಿಗೆ ಮುಟ್ಟುವವರಗೂ ಮತ್ತೊಮ್ಮೆ ಮತ್ತೊಮ್ಮೆ ಮತ್ತೊಮ್ಮೆ ಯತ್ನವನ್ನು ಮಾಡಬೇಕು. ಮತ್ತು ಸೀನು ಪ್ರಾಣಾಂತ್ಯದ ವರೆಗೂ ಮತ್ತೊಮ್ಮೆ ಯತ್ನ ಮಾಡೆಂಬ ಮಾತನ್ನು ಮರೆಯಬೇಡ" ಎಂದು ಹೇಳಿ ಮಾಸ್ತರರು ತಮ್ಮ ಕೆಲಸಕ್ಕೆ ಹೋದರು

ಅದು ಕಾರಣ ಬುದ್ಧಿವಂತರಾದವರು ಮತ್ತೊಮ್ಮೆ ಯತ್ನ ಮಾಡಬೇಕೆಂಬದನ್ನು ಎಂದಿಗೂ ಮರೆಯಬಾರದು ಇದರ ವಿಷಯದಲ್ಲಿ ಇನ್ನೂ ಅನಂತ ದೃಷ್ಟಾಂತಗಳುಂಟು. ಅವುಗಳಲ್ಲಿ ಕೆಲವನ್ನು ಮುಂದೆ ಹೇಳುತ್ತೇನೆ.

ಯಾವದಾದರೆಂದು ಕೆಲಸಕ್ಕೆ ಯತ್ನ ಮಾಡಲಾರಂಭಿಸಿದರೆ, ಅದರಲ್ಲಿ ಯತ್ನ ಸಾಧನವಾದ ಬುದ್ಧಿಶಕ್ತಿಯು ಕಾಯಶಕ್ತಿಯು ಮತ್ತು ಯತ್ನಕ್ಕೆ ಉಪಸಾಧನಗಳಾದ ಉದ್ಯೋಗ, ಸಾಹಸ, ಧೈರ್ಯ, ಬಲ, ಬುದ್ಧಿ, ಪರಾಕ್ರಮ ಇವುಗಳಲ್ಲಿ ಒಂದಾದರೂ ಕಡಿಮೆಯಾಗದ ಹಾಗೆ ಜಾಗ್ರತೆಯಿಂದ ಇವುಗಳನ್ನೆಲ್ಲಾ ಮೇಳೈಸಿ ಯತ್ನ ಮಾಡಿದರೆ ಅದೇ ಪ್ರಯತ್ನವೆನಿಸುವದು.

ಯತ್ನಕ್ಕೆ ಬುದ್ಧಿಶಕ್ತಿ ಕಾಯಶಕ್ತಿ ಅರ್ಥಶಕ್ತಿ ಈ ತ್ರಿವಿಧವು ತ್ರಾಣವು. ಇವುಗಳಲ್ಲಿ ಕಾಯಶಕ್ತಿ ಅರ್ಥಶಕ್ತಿಗಳೆರಡಿದ್ದು ಬುದ್ಧಿಶಕ್ತಿಯೊಂದಿಲ್ಲದಿದ್ದರೆ ಆ ಕಾರ್ಯವು ಎಂದಿಗೂ ಫಲಿಸುವದಿಲ್ಲ. ಆ ಯತ್ನಕ್ಕೆ ತ್ರಾಣ ಕಡಿಮೆಯಾದುದರಿಂದ ಅದು ಸಿದ್ಧಿಗೆ ಹೋಗದು. ಅಥವಾ ಬುದ್ಧಿ ಶಕ್ತಿಯೊಂದೇ

ಆದರೂ ಬಲಾತ್ಕಾರವಾಗಿದ್ದರೆ ಉದ್ಯೋಗ ಮೊದಲಾದ ಆರು ಉಪಸಾಧನ ಗಳನ್ನು ಮೇಳೈಸಿ ಅರ್ಥ ಶಕ್ತಿಯನ್ನು ಕಾಯಶಕ್ತಿಯನ್ನು ಸೃಜಿಸಿ ಯತ್ನ ವನ್ನು ಪೂರ್ಣ ಮಾಡಬಹುದು. ಆದರಿಂದ ಬುದ್ಧಿ ಶಕ್ತಿಯೇ ವಿಶೇಷವು "ಬುದ್ಧಿರ್ಮನೀಷಾ ಧೀಷಣಾ। ಧೀಃಪ್ರಜ್ಞಾ ಶೇಮುಷಿ ಮತಿಃ॥ ಎಂದು ಅಮರ ನಿಘಂಟು ಉಂಟು. ಬುದ್ಧಿ ಎಂಬುದೇ ಯತ್ನವೆಂಬಂಗಕ್ಕೆ ಪ್ರಾಣ ಸ್ವರೂಪ ವಾದುದು ಚೇತನಾತ್ಮಕವಾದ ಪ್ರಾಣವಿಲ್ಲದ ದೇಹವು ಹ್ಯಾಗೆ ನಿಷ್ಪ್ರಯೋ ಜನವೋ ಹಾಗೆ ಬುದ್ಧಿ ಇಲ್ಲದ ಯತ್ನವು ನಿಷ್ಪ್ರಯೋಜನವು. ಬುದ್ಧಿ ಇದ್ದು ಯತ್ನ ಮಾಡದಿದ್ದರೆ ಆ ಬುದ್ಧಿಯು ನಿಷ್ಪ್ರಯೋಜಕವು. ಹೇಗಂದರ ದೇಹೋ ಪಾಧಿಯಿಂದ ಪ್ರಾಣದ ಚೈತನ್ಯವು ಪ್ರಕಟಿಸುವದಲ್ಲದೆ ದೇಹವಿಲ್ಲದೆ ಪ್ರಾಣವು ಜಗತ್ಪೂರ್ಣವಾಗಿದ್ದರೇನೂ ಪ್ರಕಟಿತೆಯಾಗದು. "ಜಗತ್ಪ್ರಾಣ ಸಮೀರಣಃ" ಎಂದುಂಟಾಗಿ ಜಗತ್ಪರಿಪೂರ್ಣವಾಗಿದ್ದರೂ ಆದಕ್ಕ ದೇಹೋಪಾಧಿಯು ಬೇಕಾ ಗಿರುವದು ಇದರಂತೆ ಬುದ್ಧಿಯು ಪ್ರಕಟಿತವಾಗಿ ಫಲವನ್ನು ಕೊಡಬೇಕಾದರೆ ಪ್ರಯತ್ನವೇ ಬೇಕು ಹೇಗೆಂದರೆ ಒಬ್ಬಾನೊಬ್ಬ ಚಿತ್ರಿಕನ ಹೃದಯದಲ್ಲಿ ಬಹು ಚಾತುರ್ಯವಾದ ಕೌಶಲ ಬುದ್ಧಿ ಇದ್ದಾಗ್ಯಾದರೂ ಅವನು ಪ್ರಯತ್ನ ಮಾಡದ ವಿನಃ ಪ್ರಕಟಿಸಿಕೊಳ್ಳದೆ ಶಿಲೆಯೊಳಗಿನ ಪಾವಕನಂತೆ ನಿಷ್ಪ್ರಯೋ ಜನವಾಗಿರುವದು ಅವನು ಪ್ರಯತ್ನಮಾಡಿ ಒಂದು ಚಿತ್ರವನ್ನು ಬರೆದು ಆದರಲ್ಲಿ ತನ್ನ ಬುದ್ಧಿಯ ಕೌಶಲತ್ವವನ್ನು ತೋರಿಸಿದರೆ ಆ ಚಿತ್ರವನ್ನು ನೋಡಿ ದವರೆಲ್ಲರೂ ಆತ್ಯಾಶ್ಚರ್ಯಬಟ್ಟು ಅವನ ಬುದ್ಧಿಯನ್ನು ವರ್ಣಿಸುವರು ಮತ್ತು ಶ್ರೀಮಂತರಾದವರು ಆ ಚಿತ್ರಪಟವನ್ನು ತಗೆದುಕೊಂಡು ಅವನಿಗೆ ದ್ರವ್ಯವನ್ನು ಕೊಡುವರು. ಅದು ಕಾರಣ ಪ್ರಯತ್ನದಿಂದಲೇ ಪ್ರಾಪ್ತಿಯಾದೀ ತಲ್ಲದ, ಪ್ರಯತ್ನವಿಲ್ಲದ ಏನೇನೂ ಪ್ರಾಪ್ತಿಯಾಗದು.

ಯಾರಾದರೂ ತಾವು ಮಾಡುತ್ತಿರುವ ಯತ್ನದಿಂದ ತಮ್ಮ ಮನೋ ರಥವು ಕೈಗೂಡದ ಹೋದರೆ, ಯತ್ನದಿಂದ ಫಲಿಸುವದಲ್ಲೆಂದು ಸರ್ವಥಾ ತಿಳಿಯಲಾಗದು ಯತ್ನದಿಂದಾಗದ ಕಾರ್ಯವು ಒಂದಾದರೂ ಇಲ್ಲ. ತಾನು ಆಲೋಚಿಸತಕ್ಕದ್ದೇನೆಂದರೆ ಯತ್ನದಲ್ಲಿ ಏನೋ ಕಡಿಮೆಯಾದದರಿಂದ ಈ ಕಾರ್ಯವು ಫಲಿಸಲಿಲ್ಲವೆಂಬದನ್ನು ಬುದ್ಧಿಯಿಂದ ಶೋಧಿಸಿ ಎರಡನೇ ಸಾರಿ ಯತ್ನವನ್ನು ಮಾಡಬೇಕಲ್ಲದೆ ಬಿಟ್ಟು ಬಿಡಲಾಗದು. ಮತ್ತು ತಾನು ಎದುರು ನೋಡುತ್ತಿರುವ ಕಾರ್ಯವು ಫಲಿಸುವ ವರೆಗೂ ಸಹಸ್ರ ವೇಳೆಯಾದರೂ ಬೇಸರವಿಲ್ಲದೆ ಯತ್ನವನ್ನು ಮಾಡಲಿಕ್ಕೆ ಹಿಂಜರಿಯಲಾಗದು ರಾಮ ರಾವಣ ಪಾಂಡವಾದಿ ಷಟ್ಚಕ್ರವರ್ತಿಗಳು ಷೋಡಶ ಮಹಾರಾಜರುಗಳು ನವಚೋಳರು ನವಬಲ್ಲಾಳರು ದೇವದಾನವ ಮಾನವರು ಮನುಮುನಿಗಳೆಲ್ಲರು ಜಪತಪಾದಿ ಮಂತ್ರ ಸಾಧನ ಕ್ರಿಯೆಗಳೆಂಬ ಯತ್ನದಿಂದ ಸಕಲ ಕಾರ್ಯ

ಗಳನ್ನು ಸಾಧಿಸಿದರು. ಇವರೆಲ್ಲರು ಭುಕ್ತಿ ಮುಕ್ತ್ಯಾದಿ ರಾಜ ಸಂಪದಂಗಳನ್ನೆಲ್ಲ ಯತ್ನದಿಂದ ಸಾಧಿಸಿದರು. ಇವು ಕಥಾಂತರಗಳು ಈಗಲೂ ಪ್ರತ್ಯಕ್ಷವಾಗಿ ನಾವು ನೀವೆಲ್ಲರೂ ನೋಡುತ್ತಿರಲಿಕ್ಕೆ ನಮ್ಮ ಇಂಗ್ಲಂಡದ ರಾಜಧಾನಿಯಾದ ಲಂಡನ ನಗರದ ರಾಜಸಿಂಹಾಸನಾಧೀಶರಾದ ವಿಕ್ಟೋರಿಯಾ ಮಹಾರಾಣಿ ಯವರು ನೇಮಿಸಿದ ನೇಮದ ಪ್ರಕಾರ ತಮ್ಮ ತಮ್ಮ ಬುದ್ಧಿ ಶಕ್ತಿಯ ಬಲ ದಿಂದ ಯತ್ನಿಸಿ ಸಾಧಿಸಿದ ಸಹಸ್ರಾವಧಿ ಅತ್ಯಾಶ್ಚರ್ಯವಾದ ಮಹತ್ಕಾರ್ಯ ಗಳು ಎಷ್ಟು ಪ್ರಯೋಜನವುಳ್ಳವುಗಳಾಗಿ ಸಕಲ ಜನರ ಹಿತವಾಗಿರುವವು? ಆದರೂ ಅವುಗಳೆಲ್ಲ ಅಸಾಧ್ಯವಾದವುಗಳೇ ಆದಾಗ್ಯೂ, ಸ್ವಲ್ಪವಾದರೂ ಬೇಸರ ವಿಲ್ಲದೆ, ಎಷ್ಟು ಸಾರೆ ಕೆಟ್ಟ ಕಾಲಕ್ಕೂ ಸ್ಥಿತಿಗೆ ಮುಟ್ಟುವ ವರೆಗೂ ಯತ್ನ ವನ್ನು ಮಾಡುವದಕ್ಕೆ ಹಿಂಜರಿಯದೆ ಕೆಲಕೆಲವು ಬುದ್ಧಿವಂತರಾದ ಕಲಾ ಕೌಶಲ್ಯ ಪ್ರವೀಣರು ಚಿಕ್ಕಂದಿನಿಂದ ತಮ್ಮ ಆಯುಷ್ಯವನ್ನು ಒಂದೊಂದು ಕೆಲಸಗಳಲ್ಲಿ ಕಳೆದಾಗ್ಯಾದರೂ ಅವುಗಳನ್ನು ನಿರಾಯಾಸದಿಂದ ಸಾಗಿಸುವಂಥ ಯುಕ್ತಿಗಳನ್ನು ಹುಡುಕಿ ತೆಗೆದು ಬಹುತರದ ಯಂತ್ರಗಳನ್ನು ಕಲ್ಪಿಸಿ ಸ್ವದೇಶ ಪರದೇಶದವರಿಗೂ ಸಹಿತ ಹಿತವನ್ನು ಮಾಡಿ ಪುಣ್ಯ ಕೀರ್ತಿಯನ್ನ ಪಡೆದರು

ಅಸಾಧ್ಯವಾದ ಸಹಸ್ರಾವಧಿ ಮಹತ್ಕಾರ್ಯಗಳನ್ನು ನಾವು ನೋಡುತ್ತಿ ರಲಿಕ್ಕೆ ನಮ್ಮ ವಿಲಾಯತಿ ಧೊರಗಳು ಯತ್ನದಿಂದಲೇ ಸಾಧಿಸಿದರು. ಅವನ್ನು ಎಲ್ಲರೂ ಬಲ್ಲರು ಅವುಗಳು ಈಗ ಪ್ರತ್ಯಕ್ಷವಾಗಿ ಸುಲಭದಿಂದ ನಡೆಯುವ ದನ್ನು ಸರ್ವರೂ ನೋಡುತ್ತಾರೆ ಅವುಗಳಲ್ಲಿ ಮುಖ್ಯವಾದವುಗಳು ಯಾವ ವೆಂದರೆ, ಯಂತ್ರದಿಂದ ನೂಲುವದು, ಯಂತ್ರದಿಂದಲೇ ನೇಯುವದು ಹೊಲಿ ಯುವದು, ಜಲ ಯಂತ್ರದಿಂದ ವಾಯು ಯಂತ್ರದಿಂದ ಬೀಸುವದು, ಇದ ಲ್ಲದೆ ಜಲಯಂತ್ರದಿಂದ ಉಗಿಯ ಯಂತ್ರದಿಂದ ಕಟ್ಟಿಗೆಗಳನ್ನು ಕೊರಯುವದು, ಯಂತ್ರದಿಂದ ಎಣ್ಣೆಯ ಗಾಣವು, ಯಂತ್ರಧಿಂದ ವೇಳ ತಿಳಿಸುವ ಗಡಿಯಾರವು, ಯಂತ್ರದಿಂದ ಪುಸ್ತಕಗಳನ್ನು ಛಾಪಿಸುವದು, ಜಲಯಂತ್ರದಿಂದ ತಗ್ಗ ಭೂಮಿಯಲ್ಲಿರುವ ನೀರನ್ನು ಎತ್ತರ ಭೂಮಿಗೆ ಏರಿಸಿ ತೋಟಗಳನ್ನು ವರ್ಧನ ಮಾಡುವದು, ಇಂಥ ಅನೇಕ ಪ್ರಕಾರದ ಯಂತ್ರದ ಕಾರಖಾನೆಗಳಿಂದ ಅಗ ಣಿತ ಕೆಲಸಗಳು ಬಹಳ ಸುಲಭವಾಗಿದ್ದು ಸಕಲ ಜನರಿಗೂ ಹಿತವಾಗಿರು ವವು ಇಂಥ ಯುಕ್ತಿಗಳನ್ನು ಪ್ರಯತ್ನ ಮಾಡಿ ಪ್ರಕಟಿಸದೆ, ದೈವಾಧೀನ ವೆಂದು ಸುಮ್ಮನೆ ಇದ್ದರೆ, ಅವರಿಗೆ ಮಾಡತಕ್ಕದ್ದೇನು? ಆದರೆ ಇವುಗಳೆಲ್ಲ ಯತ್ನದಿಂದಾದವಲ್ಲದೆ, ಪ್ರಾರಬ್ಧದಿಂದಾಗಲಿಲ್ಲ ಇವುಗಳನ್ನು ಮೊದಲು ಸಾಧಿ ಸಬೇಕಾದರೆ, ಬುದ್ಧಿಶಾಲಿಗಳಾದ ಅನಂತ ಜನರು ತಮ್ಮ ಆಯುಷ್ಯವಿರುವ ವರೆಗೂ ಬಿಡದೆ ಯತ್ನಿಸಿ ಒಂದೊಂದು ಯಂತ್ರವನ್ನು ಕಲ್ಪಿಸುವ ಯುಕ್ತಿಗ ಳನ್ನು ಬಹು ಶ್ರಮದಿಂದ ಹುಡುಕಿ ತೆಗೆದರು.

ಉಗೆಬಂಡಿ ಉಗೆಹಡಗ ಆಕಾಶಗಾಮಿಯಾದ ವಿಮಾನವು ತಾರಾಯಂತ್ರವ
ಇವುಗಳು ಎಷ್ಟೋ ಅಸಾಧ್ಯವಾದವುಗಳು. ಆದರೆ ಇವುಗಳನ್ನು ಮಾಡಿ ನಡ
ಸುವ ಯುಕ್ತಿಗಳನ್ನು ನೂರಾರು ವರ್ಷಗಳಾರಭ್ಯವಾಗಿ ಎಷ್ಟೋ ಜನರ
ಕ್ರಮದಿಂದ ಯತ್ನಿಸಿ ಕಡೆಯಲ್ಲಿ ಸಾಧಿಸಿದರು ಅವುಗಳು ಈಗಿನ ಕಾಲದಲ್ಲಿ
ಎಷ್ಟು ಸುಲಭವಾಗಿರುವವು? ಮತ್ತು ಮಾಡಿದವರಿಗೆ ಬಹಳ ದ್ರವ್ಯೋತ್ಪತ್ತಿಗೆ
ಕಾರಣವಾಗಿ ಸಕಲ ಜನರಿಗೂ ಉಪಕಾರವಾಗಿರುವವು. ಆದರೆ ಇವುಗಳ
ಯುಕ್ತಿಯನ್ನು ಮೊದಲು ಸಾಧಿಸುವ ಕಾಲದಲ್ಲಿ ಎಷ್ಟು ವೇಳೆ ಕೆಟ್ಟ ಕಾಲ
ಕ್ಕಾದರೂ ಬಿಡದೆ ಮತ್ತೂ ಅವುಗಳ ಯತ್ನವನ್ನು ಮಾಡಿ ಸಾಧಿಸಿದರು.

ಆದರಿಂದ ಯಾವತ್ತು ಜನರು ತಮ್ಮ ತಮ್ಮ ಕಲಸಗಳಲ್ಲಿ ಜಾಗ್ರತೆ
ಯಿಂದ, ಉದ್ಯೋಗ, ಸಾಹಸ, ಧೈರ್ಯ, ಬಲ, ಬುದ್ಧಿ, ಪರಾಕ್ರಮಗಳೆಂಬ
ಉಪಸಾಧನಗಳಿಂದ, ಮತ್ತು ಅರ್ಥಶಕ್ತಿ ಬುದ್ಧಿಶಕ್ತಿ ಕಾಯಶಕ್ತಿಗಳೆಂಬ
ತ್ರಿವಿಧ ಸಾಧನಗಳಿಂದ ಇವುಗಳನ್ನೆಲ್ಲ ಮೇಳೈಸಿ ಇವುಗಳಿಗೆ ಒಂದಾದರೂ
ಕಡಿಮೆಯಾಗದಂತೆ ದೃಢ ಬುದ್ಧಿಯಿಂದ ಆ ಕೆಲಸವು ಸ್ಥಿತಿಗೆ ಮುಟ್ಟುವ
ವರೆಗೂ ಮತ್ತೊಮ್ಮೆ ಮತ್ತೊಮ್ಮೆ ಯತ್ನವನ್ನು ಮಾಡುತ್ತ ಹೋದರೆ, ಶಿವ
ಕೃಪೆಯಾಗಿ ಆ ಯತ್ನದ ಫಲವೇ ದೈವವಾಗಿ ತನ್ನ ಮನೋರಥವಿದ್ದಂ
ಫಲಿಸುವದು ಆದುದರಿಂದ "ಮತ್ತೊಮ್ಮೆ ಯತ್ನವನ್ನು ಮಾಡು" ಎಂಬ
ವಾಕ್ಯವನ್ನು ಮರೆಯಬಾರದು.

ಯತ್ನದಿಂದ ಮಾಡಿದಷ್ಟು ಪ್ರಾರಬ್ಧವಾಗುವದು. ಯತ್ನವಿಲ್ಲದೆ ಹೋದರೆ
ಪ್ರಾರಬ್ಧ ಭೋಗವಿಲ್ಲ. ಆದರಿಂದ ಷಟ್ಕೃಷಿ ವ್ಯಾಪಾರಗಳಿಗಾದರೂ ಯತ್ನವೆ
ಬೇಕು ಅದರಲ್ಲಿ ಕೃಷಿ ವ್ಯಾಪಾರವು ಸರ್ವರಿಗೂ ಸಾಧ್ಯವಾದದ್ದು. ಇದ
ಅಸಾಧ್ಯವಾದದ್ದಲ್ಲ. ಇದರ ವ್ಯವಸಾಯದ ಪ್ರಯತ್ನವನ್ನು ಮಾಡಬೇಕಾದರೆ
ಬುದ್ಧಿಯಿಂದ ಮಾಡಿಸಿದರೆ, ಸುಲಭದಿಂದಾಗುವದು ಸರ್ವ ಪ್ರಯತ್ನಕ್ಕಾದರೂ
ಬುದ್ಧಿಯೇ ಬೇಕು ಬುದ್ಧಿ ಎಂದರೂ ಜ್ಞಾನವೆಂದರೂ ಒಂದೇ ಪರಿಯಾಯವು
ಕೃಷಿಕರು ಭೂಮಿಯ ವ್ಯವಸಾಯವನ್ನು ಮಾಡುವಲ್ಲಿ ಹೊಡೆ ಹೊಡೆದ
ಹರಗಿ ಸಕಲ ಪ್ರಯತ್ನಗಳಿಂದ ಸಮಸ್ತ ಧಾನ್ಯಾದಿ ಫಲ ಪದಾರ್ಥಗಳನ್ನು
ಬಿತ್ತಿ ಬೆಳೆದು ಉಪಜೀವಿಸಬೇಕಾದರೆ, ಜ್ಞಾನವೇ ಬೇಕು.

"ಜ್ಞಾನೇನ ವಿನಾ ನಾನ್ಯಃ ಪಂಥಃ" ಎಂಬ ಶ್ರುತಿಯುಂಟಾಗಿ ಭೋಗ
ಮೋಕ್ಷಂಗಳೆರಡಕ್ಕೂ ಜ್ಞಾನವೇ ಬೇಕು "ಸಾಕ್ಷಿ॥ ಶಾತಕೋತಾ ಕತಾ
ಪ್ರಾತಕ ಜಡು ಕರ್ತಾ ವಿಶ್ವತಾಭಿರಾಮ ವಿನರವೇಮಾ" ಎಂದು ವೇಮಾರಡ್ಡಿಯ
ವಾಕ್ಯವು. ಇದರ ಅರ್ಥವು, ಮಾಡುವದಕ್ಕೆ ತಾನು ಕರ್ತನು, ಮಾಡಿದಷ್ಟಕೆ
ಸಲ್ಲುವ ಫಲವನ್ನು ಕೊಡುವದಕ್ಕೆ ಪರಮೇಶ್ವರನೇ ಕರ್ತನಾಗಿರುವನು

ಅದರಿಂದ ರೈತರೆಲ್ಲರೂ ಕೃಷಿಜ್ಞಾನ ಪರಿಣತರಾಗಿ ಸಕಲ ಯುಕ್ತಿಗಳನ್ನು ತಿಳಿದು ಚನ್ನಾಗಿ ಪ್ರಯತ್ನ ಮಾಡಬೇಕು. ಪ್ರಾರಬ್ಧವನ್ನು ನಂಬಿ ಪ್ರಯತ್ನವನ್ನು ತೊರೆಯಬಾರದು.

ಕೃಷಿಕ ಜನರೆಲ್ಲರನ್ನು ಕುರಿತು ಬೇಡಿಕೊಳ್ಳುವದೇನಂದರೆ, ಸನ್ಯಾಸಿಗಳಂತೆ ಪ್ರಾರಬ್ಧವೇ ಗತಿ ಎಂದು ವಾಗ್ವೈರಾಗ್ಯವನ್ನು ನುಡಿಯುತ್ತ ಬಿಡಲಾರದ ಪಕ್ಷಕ್ಕೆ ಅಡ್ಡ ಹರಗಿ ಉದ್ದ ಬಿತ್ತುತ್ತ ಬುದ್ಧಿಹೀನತ್ವದಿಂದ ದರಿದ್ರರಾಗಬೇಡಿರಿ ರಾಜಬುದ್ಧಿಯುಳ್ಳ ರಾಜ ಕೃಷಿಕರಂತೆ ಪ್ರಯತ್ನವೇ ಮುಖ್ಯವೆಂದು ನಂಬಿ ನಿರ್ಧರಿಸಿ ಧೈರ್ಯದಿಂದ ಕೃಷಿಜ್ಞಾನವನ್ನು ಚನ್ನಾಗಿ ತಿಳಿದು ಹೇಡಿಗಳಾಗದೆ, "ಮಾಡುವೆನು ಪಡೆಯುವೆನು" ಎಂಬ ಛಲವನ್ನು ಹಿಡಿದು ಪರಾಕ್ರಮ ಸಾಹಸಿಗಳಾಗಿ ಬುದ್ಧಿಯಿಂದ ಯುಕ್ತಿಯ ಮೇಲೆ ಭೂಮಿಯ ವ್ಯವಸಾಯವನ್ನು ಚನ್ನಾಗಿ ಮಾಡಿ ಸಕಲೈಶ್ವರ್ಯ ಸಂಪನ್ನರಾಗಬೇಕೆಂದು ಇಷ್ಟು ದೀನತ್ವದಿಂದ ನಿಮ್ಮ ಹಿತಕ್ಕಾಗಿ ಬೇಡಿಕೊಳ್ಳುವೆನು. ಕಾರಣವೇನಂದರೆ ಸಮಸ್ತರೂ ಕೃಷಿಜ್ಞಾನ ಪ್ರವೀಣರಾಗಿ ಧನಧಾನ್ಯ ಮೊದಲಾದ ಸಕಲ ಸಂಪತ್ತನ್ನು ಪಡೆದು ಸರ್ವರೂ ಸೌಖ್ಯದಿಂದಿದ್ದರೆ, ಅದೇ ನನ್ನ ಹಿತವು. ಅದು ಕಾರಣ ಪ್ರಾರಬ್ಧವನ್ನು ನಂಬಿ ಪ್ರಯತ್ನವನ್ನು ಮರೆತು ದರಿದ್ರರಾಗಬೇಡಿರೆಂದು ಸಕಲ ದೇಶದ ಸಮಸ್ತರೈತ ಜನರನ್ನು ನಾನು ಬೇಡಿಕೊಳ್ಳುತ್ತೇನೆ.

# ೧೭ ನೇ ಪ್ರಕರಣವು.

## ನೀರಿನ ವ್ಯವಸ್ಥೆಯು ಅವಶ್ಯಕತೆ.

ಜಗತ್ಕರ್ತನಾದ ಪರಮೇಶ್ವರನು ಸರ್ವ ಪ್ರಾಣಿಗಳ ಪ್ರಾಣ ಸಂತೃಪ್ತಿಗೆ ಮುಖ್ಯವಾದ ಜಲ ಸಮುದಾಯವನ್ನು ಭೂಗರ್ಭದಲ್ಲಿಯೂ ಭೂಮಿಯ ಮೇಲೆಯೂ, ಭೂಮಿಯ ಸುತ್ತಲೂ ಭೂಮಯವಾಗಿ ಅಲ್ಲಲ್ಲಿ ಸಮೃದ್ಧಿಯಾಗಿ ನಿರ್ಮಿಸಿದ್ದಾನೆ ಈ ಉದಕವೆಂಬದು ಪಂಚತತ್ವಂಗಳಲ್ಲಿ ಮೂಲ ತತ್ವವಾಗಿದೆ. ಪ್ರಾಣಿಗಳಾವತ್ತರ ಪ್ರಾಣ ಸಂತೃಪ್ತಿಗೆ ಅಮೃತೋಪಮಾನವಾಗಿದ್ದರಿಂದ "ಮಹಾ ದೇವಜಟಾನಿಧೇ" "ಜೀವನಂ ವನಂ ವಿಷಂ" ಕೀಲಾಲಂ ಅಮೃತಂ ಪಯಃ" ॥ ಎಂದೆನಿಸುತ್ತದೆ ಈ ಉದಕವೇಬುದು ಭೂಲೋಕದ ಪ್ರಾಣಿಗಳಾವತ್ತರ ಪ್ರಾಣರಕ್ಷಣೆಗೆ ಕಾರಣವಾದದ್ದು

ಸರ್ವಶೀಲ ವ್ರತ ನೇಮಾಚಾರಕ್ಕೂ, ಶುಚಿಗೂ, ಸ್ನಾನ ಮಜ್ಜನ ಪಾಕ ಪ್ರಯತ್ನ ಭೋಜ್ಯ ಪಾನಾದಿಗಳಿಗೂ ಸಕಲ ಪದಾರ್ಥಗಳನ್ನು ನಿರ್ಮಲ ಮಾಡುವದಕ್ಕೂ ಅಲ್ಲದೆ ಭೂಮಿ ಯಾವತ್ತರಲ್ಲಿ ಧಾನ್ಯಾದಿ ಸಕಲ ಫಲ ಪದಾರ್ಥವನೌಷಧಿಗಳನ್ನು ಬೆಳಿಸುವದಕ್ಕೂ ಉದಕವೇ ಮುಖ್ಯ ಕಾರಣವಾಗಿದೆ. ಆದ್ದರಿಂದ ದೇವರು ಭೂಮಿಯಲ್ಲಿ ಸಮೃದ್ಧಿಯಾಗಿ ಉದಕವನ್ನು ನಿರ್ಮಿಸಿದ್ದಾನೆ

ಭೂಮಿಯ ಮೇಲಿನ ನೀರು ಸೂರ್ಯ ಕಿರಣಗಳಿಂದ ಉಗಿಯಾಗಿ ಸೂಕ್ಷ್ಮ ರೂಪದಿಂದ ಆಕಾಶಕ್ಕೆ ಏರಿ ಮೇಘವಾಗಿದ್ದು ಆಯಾಯ ಋತು ಸಮಯವರಿತು ವಾಯು ವಶವಾಗಿ ಆಕಾಶ ಮಾರ್ಗದಿಂದ ಬಂದು ಭೂಮಿಯನ್ನು ತೋಯಿಸುತ್ತದೆ ಈ ಭೂಮಿಯನ್ನು ನೀರಿನಿಂದ ಶಾಂತಿ ಪಡಿಸುವದಕ್ಕೆ ಮೇಘ ವೃಷ್ಟಿ ಎಂಬ ಮಹಾ ಜಲವನ್ನು ಆಕಾಶದಲ್ಲಿರುವಂತೆ ಜಗದೀಶ್ವರನು ನಿಯಮಿಸಿದ್ದಾನೆ ಅದರಲ್ಲಿ ಕಾಲ ಮೇಘವೆಂದು ಅಕಾಲಮೇಘವೆಂದು ಎರಡು ಪ್ರಕಾರಗಳುಂಟು. ಕಾಲಮೇಘದಿಂದ ಸಕಲ ಧಾನ್ಯಾದಿ ಫಲ ಪದಾರ್ಥಗಳಾವತ್ತು ಭೂಮಿಯಲ್ಲಿ ಬೆಳೆಯುವ ಹಾಗೆ ಮಾಡಿದ್ದಾನೆ. ಆದರ ಅಕಾಲಮೇಘದಿಂದ ಬೆಳೆಯಾಗದು

ಈ ಮೇಘ ವೃಷ್ಟಿಯನ್ನು ಇಪ್ಪತ್ತೇಳು ವಿಭಾಗವಾಗಿ ಒಂದು ವರ್ಷದಲ್ಲಿ ಯಾವ ಯಾವ ಕಾಲಗಳಲ್ಲಿ ಯಾವ ಪ್ರಕಾರ ಮಳೆಯಾಗುವದೋ ಆ ಕಾಲದ ಮೇಘ ವೃಷ್ಟಿಗೆ ಬೇರೆ ಬೇರೆ ಅಶ್ವಿನ್ಯಾದಿ ರೇವತ್ಯಂತವಾದ

ಇಪ್ಪತ್ತೇಳು ಹೆಸರುಗಳನ್ನಿಟ್ಟು ಇವುಗಳಿಗೆ ಮಹಾ ನಕ್ಷತ್ರಗಳೆನ್ನುತ್ತಾರೆ. ಈ ಇಪ್ಪತ್ತೇಳು ನಕ್ಷತ್ರ ಮಳೆಗಳಲ್ಲಿ ಹನ್ನೆರಡು ನಕ್ಷತ್ರಗಳಿಗೆಯೇ ಕಾಲಮೇಘವೆನ್ನುತಾರೆ ಉಳಿದ ಮೇಘಂಗಳಿಗೆ ಅಕಾಲಮೇಘವೆಂಬ ಹೆಸರು. ಈ ಕಾಲಮೇಘವೆನಿಸುವ ಹನ್ನೆರಡು ಮಹಾ ನಕ್ಷತ್ರಂಗಳಲ್ಲಿ ಮಳೆಯಾಗದೆ ಹೋದರೆ, ಭೂಮಿಯಲ್ಲಿ ಮಹಾ ಕ್ಷಾಮ ಕಾಲವಾಗಿ ಅನಂತ ಪ್ರಾಣಿಗಳು ಮರಣ ಹೊಂದುವವು ಹೇಗಂದರೆ ಪೂರ್ವದಲ್ಲಿ ಮುಸಲ್ಮಾನರೊಳಗೆ ಒಬ್ಬ ಬಾದಶಹನು ಬೀರಬಲ್ಲನೆಂಬ ತನ್ನ ವಜೀರನಿಗೆ ಪ್ರಶ್ನ ಮಾಡಿದ್ದೇನೆಂದರೆ "ಸತ್ತಾವೀಸ ಮೇ ಬಾರಾ ಗಯಾತೋ ಬಾಕಿ ಕ್ಯಾ ರಹ್ಯಾ" ಎಂದು ಪ್ರಶ್ನ ಮಾಡಲಾಗಿ ವಜೀರನು ಹೇಳಿದ್ದು "ದುನಿಯಾ ಡುಬ್ ಗಯಾ" ಎಂದು ಉತ್ತರಕೊಟ್ಟನು.

ರೋಹಿಣ್ಯಾದಿ ಸ್ವಾತ್ಯಂತವಾಗಿ ಹನ್ನೆರಡು ಮಳೆಗಳು ಆಗದೆ ಹೋದರೆ ಭೂಮಿಯಲ್ಲಿ ಯಾವ ಬೆಳೆಯೂ ಆಗುವದಿಲ್ಲ ಅದರಲ್ಲಿ ಆ ಮಳೆಗಳು ಬೆಳೆಯು ಹದಕ್ಕೆ ತಕ್ಕ ಹಾಗೆ ಹದದ ಮೇಲೆ ಸಂಪೂರ್ಣ ಮಳೆಯಾಗುತ್ತ ಹೋದರೆ ಸುಕಾಲ ಅಥವಾ ಸುಭಿಕ್ಷವೆಂಬರು ಆ ಮಳೆಗಳು ಬೆಳೆಯು ಹದವನ್ನು ತಪ್ಪಿಸಿ ಅಲ್ಪ ಸ್ವಲ್ಪ ವೃಷ್ಟಿಯಾದರೆ, ಅರಗಾಲವೆನಿಸುತ್ತದೆ. ಹನ್ನೆರಡೂ ಮಳೆಗಳು ಆಗದ ಹೋದರೆ ಮಹಾ ಬರಗಾಲವೆನಿಸುವದು. ಆದರ ಪರಮೇಶ್ವರನಿಗೆ ಒಂದೊಂದು ಸಮಯದಲ್ಲಿ ಸಿಟ್ಟು ಹುಟ್ಟಿ ಈ ಜನರನ್ನು ಅರಗಾಲ ಬರಗಾಲಂಗಳಿಂದ ಶಿಕ್ಷಿಸಬೇಕೆಂತಲೋ ಅಥವಾ ವಿನೋದದಿಂದ ಈ ಜನರು ಪ್ರಯತ್ನ ಮಾಡಿ ಭೂಮಿಯಲ್ಲಿಯ ಉದಕದಿಂದಲೇ ಭೂಮಿಯನ್ನು ತೋಯಿಸಿ ಬೆಳೆ ಮಾಡಿಕೊಳ್ಳಲೆಂತಲೋ ಹಾಗು ಜನರ ಜ್ಞಾನ ಪ್ರಕಾಶಕ್ಕೇ ಇಲ್ಲವೇ ತನ್ನ ವಿನೋದಕ್ಕೆ ಒಂದೊಂದು ಸಮಯದಲ್ಲಿ ಮಳೆ ತಡೆಯುವಂತೆ ಮಾಡುವನು. ಆದರೆ ಅದರ ಕಾರಣವೇನು ಇದನ್ನು ತಿಳಿದುಕೊಳ್ಳುವದು ಮನುಷ್ಯರಿಗೆ ಅಸಾಧ್ಯವು ಈ ಸಮಯದಲ್ಲಿ ಮನುಷ್ಯರು ಯತ್ನ ಮಾಡಿ ಮೇಘ ವೃಷ್ಟಿಯನ್ನು ಬರ ಮಾಡಿಕೊಳ್ಳುವದು ಆಗದು. ಇದು ಅವರಿಗೆ ಸಾಧ್ಯವಾಗದ ಹಾಗೆ ಅದನ್ನು ಆಕಾಶದಲ್ಲಿಟ್ಟು ತಾನೇ ತನ್ನ ಕೃಪಾ ದೃಷ್ಟಿಯಿಂದ ನೋಡಿ ದಯಪಾಲಿಸಿದರೆ ಬಂದೀತಲ್ಲದ ಮನುಷ್ಯ ಯತ್ನಕ್ಕೆ ಬಾರದು

ಒಂದು ವೇಳೆ ಅರಗಾಲ ಬರಗಾಲಗಳು ಬಿದ್ದರೆ, ಅನಂತಕೋಟಿ ಜನರು ಪಶುಪಕ್ಷಿ ಪ್ರಾಣಿಗಳು ಲೆಕ್ಕವಿಲ್ಲದಂತೆ ಮರಣಹೊಂದುತ್ತವೆ ಇಂಥ ಕಾಲಗಳು ಭೂ ನಿರ್ಮಾಣವಾದಂದಿನಿಂದ ಇವತ್ತಿನ ವರೆಗೂ ಆಗಾಗ್ಯೂ ಬರುತ್ತಿಹವೆಂದು ಕೇಳುತ್ತಾ ಇದ್ದೆವು. ಆದರೆ ಈಗಿನ ಕಾಲದಲ್ಲಿ ಪ್ರತ್ಯಕ್ಷವಾಗಿ ಅಂಥ ಕಾಲವನ್ನು ನಾವೇ ಕಂಡೆವು ಈ ಸಮಯದಲ್ಲಿ ಎಷ್ಟೋ ಅನರ್ಥಗಳಾ

ಗುತ್ತ ಇದ್ದವು. ಆದರೆ ಪರಮ ದಯಾಳುಗಳಾದ ನಮ್ಮ ಇಂಗ್ಲಂಡದ ಅರಸಿಯರಾದ ಮಹಾರಾಣಿಯವರು ಮಾಡಿದ ಅನಂತ ರೀತಿಯ ಉಪಕಾರಗಳಿಂದಲೂ ಅವರು ಮಾಡಿಸಿದ ಉಗೆಬಂಡಿಯ ಸಹಾಯದಿಂದಲೂ ಈ ದೇಶದ ಸಮಸ್ತ ಜನರು ಬದುಕಿದರಲ್ಲದೇ ಹೊರ್ತು ಬದುಕುವದಕ್ಕೆ ಮಾರ್ಗವೇ ಇದ್ದಿಲ್ಲ. ಈ ನಾಲ್ಕು ವರ್ಷಗಳ ಬರಗಾಲದಲ್ಲಿ ದೇಶವೆಲ್ಲಾ ಹಾಳಾಗತಕ್ಕ ಪ್ರಸಂಗವು. ಆದರೆ ನಮ್ಮ ದೊರೆಗಳವರು ಮಾಡಿದ ಉಪಕಾರಗಳಿಂದ ಬಹು ಜನರು ಬದುಕಿದರಾಗಿ ಅಲ್ಪ ಸ್ವಲ್ಪ ಜನರು ಮಾತ್ರ ಸತ್ತು ಹೋದರು.

"ಕೃಷಿತೋ ನಾಸ್ತಿಃ ದುರ್ಭಿಕ್ಷಂ ।" ಎಂಬ ವಾಕ್ಯವು ಪ್ರಸಿದ್ಧವಾಗಿರಲಾಗಿ ಕೃಷಿಕರಿಗೆ ಕ್ಷಾಮಕಾಲವು ಎಂದಿಗೂ ಬರಬಾರದು ಆದಾಗ್ಯೂ ಮನುಷ್ಯ ಯತ್ನದಿಂದ ಭೂಮಿಯನ್ನು ಹಸನ ಮಾಡಿಕೊಂಬುವದೂ ಒಡ್ಡುವಾರಿಗಳಿಂದ ತಿದ್ದಿಕೊಂಬುವದೂ ಭೂಮಿಯು ಕಾವಿನ ಹದಕ್ಕೆ ಬರುವ ಹಾಗೆ ಗೊಬ್ಬರ ಮುಂತಾದ್ದನ್ನು ಹಾಕಿ ಹದಕ್ಕೆ ತರುವದೂ ಕೃಷಿಕ ಜನರ ಕೈಯ್ಯಿಂದಾಗುವದು. ಆದರೆ ಹದದ ಮೇಲೆ ಬೇಕಾದ ಸಮಯದಲ್ಲಿ ಮಳೆಯಾಗಿ ಭೂಮಿಯನ್ನು ತೋಯಿಸುವಂತೆ ಮಾಡುವದು ಮನುಷ್ಯ ಯತ್ನವಲ್ಲವು. ಆದಾಗ್ಯೂ ಭೂ ಗರ್ಭದಲ್ಲಿಯೂ ಭೂಮಿಯ ಮೇಲೆಯೂ ಹರಿಯುವ ನೀರಿನಿಂದ ಭೂಮಿಯನ್ನು ತೋಯಿಸಿಕೊಂಡು ಬೆಳೆ ಮಾಡಿಕೊಳ್ಳುವದು ಮನುಷ್ಯರಿಂದಾಗುವದು. ಆದರೆ ಎಲ್ಲ ಕೃಷಿಕರಿಗೆ ಹೀಗೆ ಮಾಡಿಕೊಳ್ಳಲು ಶಕ್ತಿ ಇಲ್ಲದೆ ಮತ್ತು ಸುಲಭದಿಂದಾಗುವಂಥ ಯುಕ್ತಿ ಇಲ್ಲದೆ ಕೃಷಿಕರು ಏನೂ ಮಾಡಿಕೊಳ್ಳಲಾರದೆ ಮಳೆಯನ್ನೆದುರು ನೋಡುತ್ತಾ ನಿರುಪಾಯದಿಂದ ಕೂಡ್ರಬೇಕಾಗುವದು ಅಷ್ಟರಲ್ಲಿ ಜಗದೀಶ್ವರನು ತನ್ನಿಂದ ತಾನೇ ಮಳೆಯನ್ನು ದಯಪಾಲಿಸಿದರೆ ಉತ್ತಮವು. ಇಲ್ಲವಾದರೆ ಕ್ಷಾಮಕಾಲವೇ ಸರಿ.

ಪರಮೇಶ್ವರನು ದಯಾಳುವಾದುದರಿಂದ ಜಗತ್ಪ್ರಾಣಿಗಳಾವತ್ತರ ಮೇಲೆ ಆತನ ಕೃಪೆಯು ಇದ್ದದ್ದೇ ಸರಿ. ಆದರೂ ತಾನು ಅವರಿಗೆ ಕೊಡತಕ್ಕದ್ದನ್ನೆಲ್ಲಾ ಭೂ ನಿರ್ಮಾಣದ ಕಾಲದಲ್ಲಿ ಸಕಲವನ್ನೆಲ್ಲ ನಿರ್ಮಿಸಿ ಇವರ ಸ್ವಾಧೀನ ಮಾಡಿದ್ದಾನೆ. ಯುಕ್ತಿಯಿಂದ ಮಾಡಿಕೊಳ್ಳುವದು ಮನುಷ್ಯನ ಧರ್ಮವು. ಆದರೆ ಭೂ ಗರ್ಭದಲ್ಲಿ ಜಲವನ್ನು ಮತ್ತು ನೀರಿನ ಮೇಲೆ ಹರಿಯುವ ಪ್ರವಾಹವನ್ನು ಕೊಟ್ಟಿರಲಾಗಿ ಇದ್ದದ್ದರಲ್ಲಿಯೇ ಪರಿಣಾಮಿಸತಕ್ಕ ಬುದ್ಧಿ ಇಲ್ಲದೆ, ಮಳೆಯನ್ನು ಎದುರು ನೋಡುತ್ತಾ ಮರಣ ಹೊಂದುವದು ಬುದ್ಧಿ ಹೀನತ್ವವು. ಏಕಂದರೆ ಅದು ತನ್ನ ಸ್ವತಂತ್ರವಲ್ಲವು. ಆ ಮಳೆಯು ಒಂದು ದೇಶದಲ್ಲಿ ಸಮೃದ್ಧಿಯಾಗುವದು. ಒಂದು ದೇಶದಲ್ಲಿ ಅಲ್ಪ ಸ್ವಲ್ಪಾಗುವದು. ಕೆಲವು ದೇಶಗಳಲ್ಲಿ ಹದದ ಕಾಲಕ್ಕಾಗುವದು ಕೆಲವು ದೇಶಗ

ಳಲ್ಲಿ ಹದವನ್ನು ತಪ್ಪಿಸಿ ಆಗುವದು ಕೆಲವು ದೇಶಗಳಲ್ಲಿ ಆಗದೆ ಹೋಗುವದು. ಅದು ಕಾರಣ ಮಳೆಯು ತನ್ನ ಸಮಯಕ್ಕೆ ಬಂದೀತೆಂಬ ಬರವಸೆಯನ್ನು ಮಾಡಲಿಕ್ಕೆ ಬರುವದಿಲ್ಲ ದೇವರು ಕೊಟ್ಟದ್ದರಲ್ಲಿಯೇ ಪರಿಣಾಮಿಸಿಕೊಂಡು ಯುಕ್ತಿ ಮಾಡಿಕೊಂಡುಂಬುವದೇ ಧರ್ಮವು ಬುದ್ಧಿವಂತರು ಮರ್ಯಾದೆವಂತರು ದೇವರನ್ನಾದರೂ ಮನುಷ್ಯರನ್ನಾದರೂ ಬೇಡುವದು ಧರ್ಮವಲ್ಲವು. ಏಕೆಂದರೆ ಮಕ್ಕಳಾದರೂ ತಾಯಿತಂದೆಗಳನ್ನು ಬೇಡಬೇಕಾದರೆ ತಮಗೆ ವಯಸ್ಸಾಗುವದರಕಿಂತ ಮೊದಲೇ ತ್ರಾಣವಿಲ್ಲದ ಸಮಯದಲ್ಲಿ ಬೇಡಬೇಕಲ್ಲದೆ ತಮಗೆ ಮಾಡಿಕೊಂಬುವ ತ್ರಾಣ ಬಂದ ಮೇಲೆ ಬೇಡಿದರೆ ಅವಮರ್ಯಾದ ಎನಿಸುತ್ತದೆ ಅದರಂತೆ ಮನುಷ್ಯರು ದೇವರನ್ನಾದರೂ ಬೇಡುವದು ತಕ್ಕದ್ದಲ್ಲ. ಇದ್ದದ್ದರಲ್ಲಿಯೇ ಯತ್ನ ಮಾಡಿ ದೊರಕಿಸಿಕೊಳ್ಳಬೇಕು

"ದೊರಕಲೇನದರೊಳು ಪರಿಣತೆಡಳೆವುದೆ ಚಂದ" ಎಂಬ ವಾಕ್ಯದಂತೆ ಪ್ರಯತ್ನ ಮಾಡಿ ಭೂಮಿಯನ್ನು ಕಡಿಸಿ ಭೂ ಗರ್ಭದ ಉದಕವನ್ನು ಮೊಟ್ಟೆಯ ಮುಖಾಂತರವಾಗಿ ಮೇಲಕ್ಕೆ ತಂದು ಭೂಮಿಯನ್ನು ತೋಯಿಸಿ ತೋಟಗಳನ್ನು ಮಾಡಿ ವರ್ಷಕ್ಕೆ ಎರಡು ಮೂರು ಬೆಳೆಗಳನ್ನು ಮಾಡಿಕೊಳ್ಳಬೇಕು ಈ ರೀತಿಯಿಂದ ಮಾಡಿಕೊಂಬುವ ಕೃಷಿಕರಿಗೆ ಮಳೆಯಾದರಂತೂ ತೀರ ನೆಟ್ಟಗೆ. ಇಲ್ಲವಾದರೆ ಉಪಜೀವಿಸುವ ಪೂರ್ತೆಗೆ ಸಂಶಯವಿಲ್ಲವು.

ಹಳ್ಳಗಳ ದಂಡೆಯಲ್ಲಿ ಅಥವಾ ಹಳ್ಳವಿಲ್ಲದ ಮೇಲು ಭೂಮಿಯಲ್ಲಿ ನೀರು ತೀರ ಸಮೀಪದಲ್ಲಿ ಬೀಳುವ ಯೋಜನೆ ಇದ್ದರೆ, ಭಾವಿಯನ್ನು ತೆಗೆಯಿಸಿ ಬೆಳೆಮಾಡಿಕೊಳ್ಳಬೇಕು. ಈ ರೀತಿ ತೋಟಗಳಾದ ಮಲೆಸೀಮೆ ತೆಲುಗಾಣ್ಯ ಮೊದಲಾದ ದೇಶಗಳಲ್ಲಿ ಬಹಳವಾಗಿ ಬೆಳೆಯುತ್ತಾರೆ. ಮತ್ತು ಯಾವತ್ತು ದೇಶಗಳಲ್ಲಿಯಾದರೂ ಕೆಲವು ಜನರು ಅಲ್ಪ ಸ್ವಲ್ಪ ಬೆಳೆ ಮಾಡಿಕೊಳ್ಳುತ್ತಾರೆ

ಕೆಲವು ಸ್ಥಳಗಳಲ್ಲಿ ಹಳ್ಳ ಹೊಳೆಗಳಿಗೆ ಒಡ್ಡು ಕಟ್ಟಿ ಬಿಡುಗಾವಲಿಗಳನ್ನು ಮಾಡಿ ಅದರಿಂದ ಬೆಳೆ ಮಾಡಿಕೊಳ್ಳುತ್ತಾರೆ. ಮತ್ತು ಕೆಲವು ಕೆಲವು ಪ್ರಾಂತಗಳಲ್ಲಿ ಕೆರೆಗಳನ್ನು ವಿಶಾಲವಾಗಿ ಮಾಡಿಸಿ ನೀರು ಎತ್ತರವಾಗಿ ನಿಲ್ಲುವ ಹಾಗೆ ಮಾಡಿ ಆ ನೀರಿನಿಂದ ವಿಪುಲ ಧಾನ್ಯಗಳನ್ನು ಬೆಳೆದುಕೊಳ್ಳುತ್ತಾರೆ.

ಕೆಲವು ಪ್ರಕಾರದ ಜಲ ಯಂತ್ರಗಳ ಮುಖಾಂತರದಿಂದ ಬಂಗಾಲ ದೇಶದಲ್ಲಿ ತಗ್ಗು ಭೂಮಿಯ ನೀರನ್ನು ಸ್ವಲ್ಪ ಪ್ರಯಾಸದಿಂದ ಎತ್ತರ ಭೂಮಿಗೆ ಏರಿಸುವ ಯುಕ್ತಿಯನ್ನು ತೆಗೆದು ಅದರಂತೆ ಮಾಡಿ ಹೊಳೆಗಳ ನೀರಿನಿಂದ ಹಳ್ಳಗಳ ನೀರಿನಿಂದ ಹೊಲಗಳನ್ನು ತೋಯಿಸಿ ಬೆಳೆ ತೆಗೆದುಕೊಳ್ಳುತ್ತಾರೆಂದು ಕೆಲವು ಪುಸ್ತಕಗಳಿಂದ ತಿಳಿದು ಬರುತ್ತದೆ.

ಇಷ್ಟು ಪ್ರಯತ್ನವು ಯಾವತ್ತು ಕೃಷಿಕರಿಂದಾಗದು. ಆದರೆ ಎತ್ತುಗಳ ಮನುಷ್ಯರುಗಳ ಸಹಾಯವಿಲ್ಲದೆ ಬಿಡುಗಾವಲಿಯಂತೆ ನಿರಾಯಾಸದಿಂದ ನೀರು ಹರಿಯುವ ಯೋಜನೆಯಾದರೆ ಕೃಷಿಕರಾವತ್ತರಿಗೂ ಉಪಯೋಗವಾಗುವದು.

ಕೃಷಿಕ ಜನರ ಉಪಯೋಗಕ್ಕಾಗಿ ಜಗದೀಶ್ವರನು ಭೂಮಿಯ ಮೇಲೆ ಅಲ್ಲಲ್ಲಿ ಸಮುದ್ರಕ್ಕೆ ಸಮಾನವಾದ ಪೂರ್ಣ ಜಲವುಳ್ಳ ಸವಿ ನೀರಿನ ಸರೋವರಗಳು ಹೊಳೆಗಳು ತೊರೆಗಳು ಹಳ್ಳಗಳು ಭಾವಿಗಳು ಮೊದಲಾದವುಗಳನ್ನೆಲ್ಲ ನಿರ್ಮಿಸಿದ್ದಾನೆ ಆದಾಗ್ಯೂ ಈ ನೀರುಗಳೆಲ್ಲ ಭೂಮಿಯ ವ್ಯವಸಾಯಕ್ಕೆ ಉಪಯೋಗ ಬೀಳದೆ ವ್ಯರ್ಥವಾಗಿ ಹೋಗುತ್ತವೆ. ಆದರೆ ಈ ಜಲಸಮುದಾಯವು ತಗ್ಗು ಭೂಮಿಯಲ್ಲಿರುವದರಿಂದ ಎತ್ತರ ಭೂಮಿಗೆ ನೀರು ಏರುವದಿಲ್ಲವೆಂದು ಸುಮ್ಮಗೆ ಬಿಡುತ್ತಾರೇ ಹೊರ್ತು ಏನಾದರೂ ಯುಕ್ತಿಯಿಂದ ಆ ನೀರನ್ನು ಮೇಲಕ್ಕೆ ತಂದು ಎತ್ತರ ಭೂಮಿಯ ಮೇಲೆ ಹರಿಯುವ ಹಾಗೆ ಮಾಡುವಂಥ ಪುಣ್ಯಶಾಲಿಗಳು ಯಾರೂ ಇಲ್ಲ.

ಪೂರ್ವಕಾಲದಲ್ಲಿ ಚೋಳರಾಯರು ಕಾವೇರೀ ನದಿಗೆ ಕಟ್ಟೆಯ ಕಟ್ಟಿ ದಕ್ಷಿಣ ಸೀಮೆಯ ಚೋಳ ಮಂಡಲದಲ್ಲಿ ಭೂಮಿಯನ್ನು ಬಿಡುಗಾವಲಿಯಿಂದ ನೀರಿನಿಂದ ತೊಯಿಸುವ ಹಾಗೆ ಮಾಡಿದ್ದಾರೆ ಮತ್ತು ತುಂಗಭದ್ರಾ ನದಿಯಲ್ಲಿ ಮಾತ್ರ ಹಂಪೆಯ ಬಳಿಯಲ್ಲಿ ಒಂದು ಸ್ಥಳದಲ್ಲಿ ಲೋಕೋಪಕಾರಿಗಳಾದ ಲಕ್ಕಣದಣ್ಣಾಯಕರೆಂಬ ರಾಜರು ಬಹಳ ದ್ರವ್ಯವನ್ನು ಖರ್ಚು ಮಾಡಿ ನದಿಗೆ ಒಡ್ಡು ಕಟ್ಟಿ ದೊಡ್ಡ ದೊಡ್ಡ ಕಾಲುವೆಗಳನ್ನು ಮಾಡಿ ತಗ್ಗು ಭೂಮಿಯ ನೀರನ್ನು ಸ್ವಲ್ಪ ಎತ್ತರವಾದ ಭೂಮಿಯ ಮೇಲೆ ಹರಿಯುವ ಹಾಗೆ ಮಾಡಿದ್ದರಿಂದ ಆ ಕಾಲುವೆಗಳಿದ್ದ ಭೂಮಿಯಲ್ಲಿ ವರುಷಾವಧಿ ಸಮೃದ್ಧಿ ಬಳೆಯಾಗಿ ಸಮಸ್ತ ದೇಶಗಳಲ್ಲಿ ಅರಗಾಲ ಬರಗಾಲಂಗಳಾದರೆಯೂ ಅಲ್ಲಿಯ ಕೃಷಿಕ ಜನರಿಗೆ ದುರ್ಭಿಕ್ಷಾದಿಗಳಿಲ್ಲವು ಈ ರೀತಿಯಿಂದ ಭೂಮಿ ಯಾವತ್ತು ನೀರಿನಿಂದ ತೋಯುವ ಹಾಗೆ ಎಲ್ಲ ಕಡೆಗೆ ಮಾಡಿದರೆ ಈ ಭೂಮಿಯ ಮೇಲೆ ದುರ್ಭಿಕ್ಷವಾಗಲಾರದು. ಇಂಥ ರೀತಿಯಿಂದ ಎಲ್ಲ ಕೃಷಿಕರು ತಮ್ಮ ತಮ್ಮ ಹೊಲಗಳಿಗೆ ನೀರು ಏರುವ ಹಾಗೆ ತಾವೇ ಮಾಡಿಕೊಳ್ಳುವದಕ್ಕೆ ಸಾಮರ್ಥ್ಯ ಸಾಲದು ಇದು ದ್ರವ್ಯಶಕ್ತಿಯುಳ್ಳ ಬಲವಂತರಿಂದ ಮತ್ತು ಸರಕಾರದಿಂದ ಆಗತಕ್ಕಂಥ ಯೋಜನೆಯು.

ಸದಾ ಕಾಲದಲ್ಲಿ ಹರಿಯುತ್ತಿರುವ ಹೊಳೆಗಳು ಹಳ್ಳಗಳು ಮತ್ತು ಪೂರ್ಣ ಜಲದಿಂದ ತುಂಬಿದ ಸರೋವರಗಳು ಇವುಗಳ ನೀರು ಮತ್ತು ಕೆಲವು ಕೆಲವು ಸ್ಥಲಗಳಲ್ಲಿರುವಂಥ ಮಹಾನೀರಿನ ಭಾವಿಗಳಲ್ಲಿರುವ ನೀರು ಹಾಗೂ ಭೂ

ಗರ್ಭದ ಉದಕವು ಮೇಘ ಜಲದಂತೆ ಭೂಮಿಯ ವ್ಯವಸಾಯಕ್ಕೆ ಉಪಯೋಗವಾಗಿದ್ದಾಗ್ಯಾದರೂ ಮಾಡಿಕೊಳ್ಳುವ ಯುಕ್ತಿ ಸಾಲದೆ ವ್ಯರ್ಥವಾಗಿ ಹೋಗುತ್ತವೇ ಹೊರ್ತು, ಜನರ ರಕ್ಷಣ್ಯಕ್ಕೆ ಕಾರಣವಾಗುವದಿಲ್ಲ.

"ಪರೋಪಕಾರಾಯ ವಹಂತಿ ನದ್ಯಾಃ " ಎಂಬ ವಾಕ್ಯ ಉಂಟಾಗಿ ಪರೋಪಕಾರ ನಿಮಿತ್ಯವಾಗಿ ತುಂಬಿ ಹರಿಯುತ್ತಿರುವ ನದಿಗಳ ನೀರು ಎತ್ತರ ಭೂಮಿಗೆ ಏರಿ ಭೂಮಿಯನ್ನು ತೊಯಿಸಿದರೆ ಭೂಲೋಕವೆಲ್ಲ ಸದಾ ಕಾಲದಲ್ಲಿ ಮಂಗಲಕರವಾಗಿ ಕಾಣುವದು. ಇದರಿಂದ ಸರ್ವ ಜನರು ಸಕಲೈಶ್ವರ್ಯ ಸಂಪನ್ನರಾಗುವರು. ಈ ಪುಣ್ಯ ಕಾರ್ಯವನ್ನ ರಾಜರೂ ಐಶ್ವರ್ಯವಂತರೂ ಜಹಾಗೀರುದಾರರೂ ಮಾಡಿದ್ದಾದರೆ ಜಗತ್ತಿನ ಮತ್ತು ಪ್ರಜಗಳ ಕಲ್ಯಾಣವಾಗುವದು ಜನರೆಲ್ಲರೂ ಧನಧಾನ್ಯ ಸಮೃದ್ಧಿಯಾಗಿ ಸುಖದಿಂದ ಕಾಲ ಕಳೆಯುವರು. ಇದನ್ನು ಅವರು ಲಕ್ಷಿಸಲೆಂದು ನನ್ನ ಪ್ರಾರ್ಥನೆ.

## ೧೮ ನೇ ಪ್ರಕರಣವು.

### ಧರ್ಮನೀತಿ ಮತ್ತು ಕರ್ಮ ನಿವೃತ್ತಿ.

ಈ ಗ್ರಂಥದಲ್ಲಿ ಜಿರಾಯತ ಮತ್ತು ಬಾಗಾಯತ ಸಂಬಂಧವಾದ ಭೂಮಿಯಿಂದ ಸಕಲ ಧಾನ್ಯಾದಿ ಸಮಸ್ತ ಫಲ ಪದಾರ್ಥಗಳ ಬೆಳೆ ಮಾಡಿಕೊಳ್ಳುವ ಸಕಲ ಯುಕ್ತಿಗಳನ್ನು ಹೇಳಿದಂತೆ, 'ಪರೋಪಕಾರಾಯ ಪುಣ್ಯಾಯ ಇದಂ ಶರೀರಂ" ಎಂಬ ವಾಕ್ಯದಂತೆ ಪರ ಉಪಕಾರದ ಸಲುವಾಗಿ ಹುಟ್ಟಿದ ಈ ಶರೀರದಿಂದ ಪುಣ್ಯದ ಬೆಳೆಯನ್ನು ಮಾಡಿಕೊಳ್ಳುವ ಯೋಜನೆಯನ್ನು ಮುಂದೆ ಹೇಳುತ್ತೇನೆ.

ಒಂದಕ್ಕೆ ನೂರ್ಮಡಿಯಾಗಿ ಫಲಿಸಬೇಕಾದರೆ, ಅಸಿ, ಮಸಿ, ಕೃಷಿ ವಾಣಿಜ್ಯ, ಗೋಪಾಲಿಕೆ, ಯಾಚನೆ ಎನಿಸಿಪ ಆರು ಪ್ರಕಾರದ ಕೆಲಸಗಳಲ್ಲಿಯೂ ಈ ಕೃಷಿಯ ಕೆಲಸದಲ್ಲಿ ಒಂದು ಬೀಜಕ್ಕೆ ನೂರು, ಅಥವಾ ಅದಕ್ಕೂ ಹೆಚ್ಚು ಫಲ ವೃಕ್ಷಗಳಾದರೆ ಅಗಣಿತ ಸಹಸ್ರ ಬೀಜಗಳಾಗಿ ಬೆಳೆಯಾಗುವದು ಅದು ಕಾರಣ ಷಟ್ ಕೃಷಿ ವ್ಯಾಪಾರಗಳಲ್ಲಿ ಕೃಷಿ ಕೆಲಸವೇ ಮುಖ್ಯವಾದದ್ದು. ಆದರೆ ಇದಕ್ಕಾದರೂ ಪುಣ್ಯದ ಅನುಕೂಲವು ಬೇಕಾಗಿರುವದರಿಂದ ಕೆರೆಗೆ ಕೋಡಿ ಇದ್ದರೆ ಕೆರೆಯು ಒಡೆಯದೆ ಹ್ಯಾಗೆ ತುಂಬಿ ನಿಲ್ಲುವದೋ ಹಾಗೆ ಈ ಕೃಷಿ ಕೆಲಸದಲ್ಲಿ ತಾನು ಹೇಗೆ ಧರ್ಮಿಷ್ಠನಾಗುವನೋ ಹಾಗೆ ಹಾಗೆ ಸಕಲ ಬೆಳೆಗಳು ವರ್ಧನವಾಗಿ ಫಲ ಪ್ರಾಪ್ತಿಯಾಗುವದು. " ಸಕಲ ಸದ್ಗುಣಗಳೊಳು ದಾನ ಗುಣವತ್ಯಧಿಕ। ಸಕಲ ದುರ್ಗುಣಗಳೊಳು ಲೋಭವೆಂಬುವದಕ " ಎಂದು ಗುರುವಾಕ್ಯವಿರುವದರಿಂದ ಸಮಸ್ತರು ತಾವೇ ಮಾಡಿ ತಾವೇ ಉಂಬುವದೇನೂ ಆಶ್ಚರ್ಯವಲ್ಲ. ತಾವು ಸಂಪಾದನೆ ಮಾಡಿದ ಪದಾರ್ಥವನ್ನು ತಾವು ಉಂಬುವ ಸಮಯದಲ್ಲಿ ಮತ್ತೊಬ್ಬರಿಗೆ ಕೊಟ್ಟು ತಾವು ಉಂಬುವದರಿಂದ ತಮ್ಮ ಸಂಪತ್ತು ಹೆಚ್ಚುತ್ತ ಇರುವದು.

ಕೃಷಿ ಕೆಲಸದಿಂದ ಬೆಳೆ ಮಾಡಿಕೊಳ್ಳುವ ಸಕಲ ಪದಾರ್ಥಗಳಿಗೆ ಅನೇಕ ಪ್ರಕಾರದ ವಿಘ್ನಗಳುಂಟು. ಹ್ಯಾಗಂದರೆ ಭೂಮಿಯಲ್ಲಿ ಬಿತ್ತಿದ ಬೀಜಗಳೇ ನಷ್ಟವಾಗುತ್ತವೆ. ಅಥವಾ ಇಲಿಗಳ ಉಪದ್ರವವಾಗುತ್ತದೆ. ಇಲ್ಲವೆ ಬೆಳೆಯುವ ಸಣ್ಣ ಸಸಿಗಳನ್ನು ಹುಳಗಳು ತಿನ್ನುತ್ತವೆ. ಮಿಡತಿಗಳು ಕಡಿಯುತ್ತವೆ. ಮತ್ತು ಬೆಳೆಯುವ ಸಮಯದಲ್ಲಿ ಸೆಜ್ಜೆಯ ತೆನೆಗಳಿಗೆ ಹುಳು ಹತ್ತುತ್ತವೆ. ಗಾಳಿ

ಹಾಯುತ್ತವೆ ಹರಿಹಾಯುತ್ತವೆ. ಕಾಡಿಗೆಯಾಗುತ್ತವೆ. ಹತ್ತಿಗೆ ಹನ್ನೊಂದು ರೋಗಗಳುಂಟು ಬಿಳಿ ಜೋಳಕ್ಕೂ ಕೆಲವು ವಿಘ್ನಗಳುಂಟು ಗೋದಿಯ ಪೈರಿಗೆ ಕುಂಕುಮ ಕುಸುಂಬಿ ತ್ಯಾಬಿ ಎಂಬ ಕೆಲವು ರೋಗಗಳುಂಟು. ಈ ಪ್ರಕಾರ ಅನಂತ ಬೆಳೆಗಳಿಗೂ ನಾನಾ ಪ್ರಕಾರದ ವಿಘ್ನಗಳಿರುವದರಿಂದ ಧರ್ಮಗುಣವುಳ್ಳ ಪುಣ್ಯಶಾಲಿಗಳಿಗೆ ಈ ವಿಘ್ನಗಳೆಲ್ಲ ಪರಿಹಾರವಾಗಿ ಸಕಲ ಪದಾರ್ಥಗಳೆಲ್ಲ ಸಮೃದ್ಧಿಯಾಗಿ ಬೆಳೆಯುವವು

ಜಗದೀಶ್ವರನು ಈ ಜಗತ್ಯದ ಸಕಲ ವಸ್ತುಗಳನ್ನು ಮನುಷ್ಯೋಪಕಾರಾರ್ಥವಾಗಿ ನಿರ್ಮಿಸಿ ತದನಂತರ ಮನುಷ್ಯರುಗಳನ್ನು ತನ್ನಾತ್ಮ ಸ್ವರೂಪವಾಗಿ ನಿರ್ಮಿಸಿ ಸಕಲ ಸಾಮರ್ಥ್ಯವನ್ನು ಕೊಟ್ಟು ಜ್ಞಾನ ಸ್ವರೂಪರನ್ನು ಮಾಡಿ ಯಾವತ್ತು ಜಗದ್ವಸ್ತುಗಳನ್ನು ಅವರ ವಶಕ್ಕೆ ಕೊಟ್ಟಿರುವ ಕಾರಣ ಮನುಷ್ಯರಾದವರು ಸರ್ವಜೀವದಯಾಪಾರಿಗಳಾಗಿ ದೇವರು ತಮಗೆ ಮಾಡಿದ ಉಪಕಾರವನ್ನು ಸ್ಮರಿಸಿ "ಆತ್ಮವತ್ ಸರ್ವಭೂತಾನಿ" ಎಂಬ ವಾಕ್ಯದಂತೆ ಮತ್ತು ತನ್ನ ಮೇಲಿರುವ ಮಮತೆಯಂತೆ ಸರ್ವರಲ್ಲಿಯೂ ಮಮಕಾರವನ್ನಿಟ್ಟು ತಾನು ಪರೋಪಕಾರ ವಿಷಯದಲ್ಲಿ ಧುರೀಣನಾಗಿ ವರ್ತಿಸುತ್ತಿರುವದರಿಂದ ತನ್ನ ಸಂಪತ್ತನ್ನು ದೇವರು ವರ್ಧನ ಮಾಡುವನು ಅದು ಕಾರಣ ಲೌಕಿಕರಾವತ್ತರಿಗೂ ಧರ್ಮ ಗುಣವೇ ಮುಖ್ಯವು.

"ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಂ । ಅಷ್ಟಾದಶ ಪುರಾಣೇನ । ವ್ಯಾಸಸ್ಯ ವಚನ ದ್ವಯಂ" । ಈ ಶ್ಲೋಕಾರ್ಥವೆಂದರೆ ಜಗದೋಪಕಾರಾರ್ಥವಾಗಿ ವ್ಯಾಸ ಮಹಾ ಮುನಿಯು ಧರ್ಮಾಧರ್ಮ ವಿಚಾರ ಪ್ರದವಾದ ಪುಣ್ಯಪಾಪಂಗಳ ಸುಖ ದುಃಖಂಗಳ ತಾರತಮ್ಯವನ್ನು ತಿಳಿಸುವ ಹದಿನೆಂಟು ಪುರಾಣಂಗಳನ್ನು ಅನೇಕ ಪ್ರಕಾರದ ದೃಷ್ಟೋಪಮಾನಂಗಳಿಂದ ಬಹುತರದ ಇತಿಹಾಸಂಗಳಿಂದ ಸವಿಸ್ತಾರವಾಗಿ ಅನಂತ ಲಕ್ಷ ಸಂಖ್ಯೆಯನುಳ್ಳ ಗ್ರಂಥಗಳಿಂದ ರಚಿಸಿ, ಕಡೆಯಲ್ಲಿ ಎರಡು ವಚನಗಳಲ್ಲಿ ಸರ್ವ ಸಾರವನ್ನು ತಿಳಿಸಿದ್ದಾನೆ ಹೇಗೆಂದರೆ, "ಪರರಿಗೆ ಉಪಕಾರ ಮಾಡುವದೇ ಪುಣ್ಯವು, ಪರರನ್ನು ಪೀಡಿಸುವದೇ ಪಾಪವು" ಇದಲ್ಲದೆ ಪುಣ್ಯವೆಂಬುದೇ ಬೆಳಕು. ಪಾಪವೆಂಬುದೇ ಕತ್ತಲೆಯು ಬೆಳಕು ಇಲ್ಲದಿದ್ದರೆ ಕತ್ತಲೆಯು ಹೇಗೆ ಆಚ್ಛಾದಿಸುವದೋ ಹಾಗೆ ಪುಣ್ಯವನ್ನು ಮಾಡದೇ ಇದ್ದಲ್ಲಿ ಪಾಪವು ತನ್ನಿಂದ ತಾನೇ ಬರುವದು

ಲೌಕಿಕರೆಲ್ಲರು ಅತ್ಯಂತ ಪ್ರೀತಿಯಿಂದ ಭೋಗಿಸುತ್ತಿರುವ ಸಂಸಾರ ಸುಖದಲ್ಲಿ ಸುಬುದ್ಧಿ ಇಲ್ಲದೆ ದುರ್ಬುದ್ಧಿಯುಳ್ಳವರು ಭೋಗಿಸುತ್ತಿರುವ ಸಂಸಾರ ಸುಖವೇ ಪಾಪಮಯವೆನಿಸುವದು. ಯಾಕಂದರೆ ದುರ್ಬುದ್ಧಿಯುಳ್ಳವರಿಗೆ ಪಂಚೇಂದ್ರಿಯ ವಿಷಯ ಸುಖಭೋಗಂಗಳ ರುಚಿಯು ವಿಶೇಷವಾದ

ಹಾಗೆಲ್ಲ ಅದರಲ್ಲಿ ಆಸಕ್ತನಾಗಿ ವಿವೇಕವಿಲ್ಲದೆ ಅವುಗಳ ಲಂಪಟವು ಅತಿಯಾದಾಗಲೇ, ವಿಷಯ ಲಂಪಟದ ಆತ್ಯಾಸೆ ಎಂಬ ಅವಿಷತ್ವದಿಂದ ಎಷ್ಟು ಭೋಗಿಸಿದರೂ ಸಾಲದಾಗಿ ಅನ್ಯ ಧನ, ಅನ್ಯಸ್ತ್ರೀ, ಅನ್ಯರ ಗೃಹ ಕ್ಷೇತ್ರ ಸ್ವಾಸ್ತಿ ವೃತ್ತಿಗಳೆಲ್ಲಾ ತನಗಾಗಬೇಕೆಂದು ಬಯಸುತ್ತ ಅತಿಕಾಮಿಯಾಗುತ್ತಿಹನು

ಕಾಮಶರಕ್ರೀಡಾದ ಜೀವನಿಗೆ ಧರ್ಮಾಧರ್ಮ ವಿಚಾರವಿಲ್ಲದಾಗಿ ಇದರಿಂದ ಅನೃತ ಕಪಟ ಹಿಂಸಾದಿ ಅನಂತ ದುರ್ಗುಣಗಳು ಪ್ರಬಲವಾಗಿ ಹೃದಯ ತುಂಬಿ ಮಾಡಬಾರದಂಥ ಅನಂತ ದುಷ್ಕರ್ಮಗಳನ್ನು ಮಾಡಿ ಯಮನ ಶಿಕ್ಷೆಯಾದ ಭಯಂಕರ ನರಕದುಃಖವನ್ನನುಭವಿಸುವನು.

ಸದ್ಬುದ್ಧಿಯುಳ್ಳವರು ಶಮದಮಾದಿ ವಿವೇಕ ಬಲದಿಂದ ವಿಷಯ ಲಂಪಟಕ್ಕೆಳಸದೆ, ಇಂದ್ರಿಯಗಳನ್ನು ಸ್ಥೈರಿಸಿ ಪರಧನ ಪರಸತಿಯರಿಗಿಚ್ಛೈಸದೆ ಇದ್ದಾಗ್ಯಾದರೂ ಜೀವನಕ್ಕೆ ಜಾತ್ಯಾ ಸ್ವಭಾವವಾದ ಶ್ವಾನಗುಣ ಒಂದುಂಟು. ಅದೇನಂದರೆ, ಶ್ವಾನನಿಗೆ ಪ್ರೀತಿಯಾದ ಮಾಂಸವಾಗಲಿ ಅಸ್ಥಿಯಾಗಲಿ ಹಳೆ ಕೆರಹಾಗಲಿ ಸಿಕ್ಕರೆ ಅದನ್ನು ಅತ್ಯಂತ ಪ್ರೀತಿಯಿಂದ ತೆಗೆದುಕೊಂಡು ಬಂದು ತಿಂಬುವಷ್ಟು ತಿಂದು ಕಡಿಯುವಷ್ಟು ಕಡಿದು ಉಳಿದದ್ದನ್ನು ತಿಪ್ಪೆಯಲ್ಲಿ ಹೂಳಿ ಅದನ್ನು ಕಾಯ್ದುಕೊಂಡಿರುವದು ಇದು ಆ ಶ್ವಾನನ ಸ್ವಭಾವವು. ಆದರೆ ಅದರ ಸಮೀಪದಲ್ಲಿ ಪ್ರತಿನಾಯಿಗಳು ಹಾಯ್ದು ಹೋದರೆ ಅದನ್ನು ಕಸೆದುಕೊಳ್ಳುವದಕ್ಕೆ ಬರುವವೆಂದು ದೂರಿಂದಲೇ ಬೊಗಳುವದಕ್ಕೆ ಆರಂಭಿಸುವವು ನಾಯಿಗೆ ಹೊಟ್ಟೆ ಸಣ್ಣದಾದರೂ ಆಶೆ ಬಹಳ ಆನೆಗೆ ಹೊಟ್ಟೆ ದೊಡ್ಡದಾದರೂ ಆಶೆ ಕಡಿಮೆಯಾಗಿರುವದು. ಹ್ಯಾಗಂದರೆ, ನಾಯಿಗಳ ಮುಂದೆ ಉನ್ನತವಾಗಿ ಅನ್ನದ ರಾಶಿ ಇದ್ದರೂ ತನ್ನ ಪ್ರಾಣ ಹೋಗುವ ವರೆಗೂ ಎರಡನೇ ನಾಯಿಗಳಿಗೆ ಕೊಡದೆ, ಅವುಗಳ ಸಂಗಡ ವೈರದಿಂದ ಕಡಿದಾಡುವದು. ಆನೆಯು ಸ್ವಲ್ಪ ಕಬ್ಬನ್ನಾಗಲಿ ಅಥವಾ ಹುಲ್ಲನ್ನಾಗಲಿ ಮುಂದೆ ಹಾಕಿದರೆ, ನಾಲ್ಕೂ ದಿಕ್ಕಿಗೂ ಬೀಸಾಟಿ ತಾನು ಸ್ವಲ್ಪ ತಿಂಬುವದು. ಈ ಪ್ರಕಾರ ದೊಡ್ಡ ಬುದ್ಧಿಯುಳ್ಳ ಗೃಹಸ್ಥರು ಪರರಿಗೆ ಪ್ರೀತಿಯಿಂದ ಕೊಟ್ಟು ತಾವು ಉಂಬುವರು ಇದು ದಯಾಳುಗಳ ಸ್ವಭಾವವು ಮತ್ತು ಶ್ವಾನ ಗುಣಕ್ಕೆ ಸಮಾನವಾದ ಕಡುಲೋಭವು ಜೀವನಿಗೆ ಉಂಟಾಗಿ ತನಗೆ ಪ್ರಿಯವಾದ ವಸ್ತುವನ್ನು ಇನ್ನೊಬ್ಬರಿಗೆ ತನ್ನ ಪ್ರಾಣ ಹೋಗುವ ವರೆಗೂ ಕೊಡಬಾರದೆಂಬುವದೇ ಶ್ವಾನ ಗುಣ ಸ್ವಭಾವವು.

ಎಲ್ಲ ದುರ್ಗುಣಂಗಳಿಗೆ ಬೀಜವಾದ ಸಕಲ ಪಾಪಂಗಳ ಮೂಲವಾದ ಈ ಲೋಭಗುಣವು ಲೌಕಿಕರೆಲ್ಲರಿಗೂ ಸ್ವಭಾವವಾಗಿರುವದರಿಂದ ಇವರಿಗೆ ಅತ್ಯಂತ ಪ್ರಿಯವಾದ ವಸ್ತುಗಳಾವವೆಂದರೆ, ಹೊನ್ನು ಹೆಣ್ಣು ಮಣ್ಣು ಈ

ಮೂರು ಪದಾರ್ಥಗಳು ಜೀವನಿಗೆ ಅಮೌಲ್ಯ ಜೀವ ರತ್ನಗಳೇ ಆಗಿರುವವು. ಇವುಗಳ ಹೊರ್ತು ಜೀವನಿಗೆ ಬೇರೊಂದು ಸುಖವು ಮತ್ತೇನೂ ತೋರದಾಗಿ ಇವುಗಳೇ ತಮ್ಮ ಅರ್ಥ ಪ್ರಾಣಾಭಿಮಾನವೆಂದು ದೃಢವಾಗಿ ನಂಬಿ ಲೌಕಿಕರ ಹೃದಯವು ಜೀವಮಯವಾಗಿ ಜೀವನ ವರ್ತನೆಯೊಡನೆ ಕೂಡಿ ವ್ಯವಹರಿಸುವಲ್ಲಿ ಕಾಮಾದಿ ಅರಿಷಡ್ವರ್ಗಂಗಳ ವಶವಾಗಿ ವಿಷಯ ವ್ಯಸನಾದಿಗಳಿಗೆ ಕುದಿದು ಕೋಟಲೆಗೊಳ್ಳುತ್ತ, ಅನಿತ್ಯವಾದ ಈ ಲೌಕಿಕ ಸುಖಭೋಗಕ್ಕೆ ಮೆಚ್ಚಿ, ಉಣಬೇಕು, ಉಡಬೇಕು, ಇಡಬೇಕು, ತೊಡಬೇಕು, ಷಟ್ಪ್ರಕಾರದ ಸ್ತ್ರೀಯರ ಭೋಗಿಸಬೇಕು ಎಂಬ ಆತ್ಯಾಶೆಯೇ ಮುಂದುಗೋಡು "ಇಂದಿಂಗಂತು ನಾಳಿಂಗೆಂತು" ಎಂದು ಹಗಲಿರಳು ಹೊತ್ತು ಸಾಲದೇ ಪ್ರಳಾಪಿಸುತ್ತಿರುವಲ್ಲಿ ತನ್ನಲ್ಲಿದ್ದ ಪದಾರ್ಥವನ್ನು ತಾನೇ ತನ್ನ ಸತಿಸುತರುಗಳೇ ಉಣಬೇಕಲ್ಲದೆ, ಇದರಲ್ಲಿ ಅಣುಮಾತ್ರವಾದರೂ ಪರರಿಗೆ ಕೊಟ್ಟರೆ, ತನಗೂ ತನ್ನ ಸುತಾದಿಗಳಿಗೂ ಕಡಿಮೆಯಾದೀತೆಂದು ಯೋಚಿಸಿ ಮತ್ತೂ ಈ ಪದಾರ್ಥವು "ನನಗಿರಲಿ ನನ್ನ ಸತಿಗಿರಲಿ ನನ್ನ ಸುತರಿಗಿರಲಿ" ಎಂದು ಮಡುಗಿ ಹೂಳಿಟ್ಟು ಹಗಲಿರುಳು ಅದನ್ನೇ ಕಾಯುತ್ತಾ ಇದ್ದಲ್ಲಿ, ತನ್ನ ಪ್ರಾಣವು ತನಗೆ ತಿರಸ್ಕಾರವಾಗಿ ಹೊನ್ನೇ ಪ್ರಾಣವಾಗಿರ್ಪುದು ಲೋಭಗಳಿಗೆ. ಹೊನ್ನೆಂದರೆ ಸಮಸ್ತ ವಸ್ತ್ರಾಭರಣಾದಿ ಧನಧಾನ್ಯಗಳು ಜೀವಗುಣಮಯವಾದ ಲೌಕಿಕರಿಗೆ ಹೆಣ್ಣೇ ಪ್ರಾಣಾಭಿಮಾನವಾಗಿರ್ಪುದು ಹೆಣ್ಣೆಂದರೆ ಸತಿಯುಳು ಆದರೆ ಜೀವರಾದ ಲೌಕಿಕರು ತಮ್ಮ ಸತಿಯರ ಅಭಿಮಾನವೇ ತಮಗೆ ಪ್ರಾಣವಾಗಿ ಕಾಯ್ದುಕೊಂಡಿರುವರು. ಮತ್ತು ಕೆಲವರಿಗೆ ಸುತರೇ ಪ್ರಾಣವಾಗಿರ್ಪರು ಸುತರೆಂದರೆ ಆತ್ಮ ಸಂಜಾತರಾದ ಕುಮಾರ ಕುಮಾರಿತಿಯರು. ಇವರೇ ತಮ್ಮ ಪ್ರಾಣವಾಗಿರ್ದು "ಆತ್ಮಾ ವೈ ಪುತ್ರ ನಾಮಾಸಿ" ಎಂದು, ಈ ಅರ್ಥಪ್ರಾಣಾಭಿಮಾನವನ್ನು ಕಾಯ್ದು ಉಳುಹಿಕೊಂಬುವದಕ್ಕೆ ತನ್ನ ಪ್ರಾಣದ ಹಂಗಿಲ್ಲದೆ, ತನ್ನ ಶರೀರವನ್ನು ತೃಣಕ್ಕೆ ಸಮಾನವಾಗಿ ಕಂಡು ತಾನು ಮರಣ ಹೊಂದಿದರೂ ಹೊಂದಲಿ, ಈ ದ್ರವ್ಯವನ್ನು ಉಳುಹಿಕೊಂಡರೆ, ಮುಂದೆ ತನ್ನ ಸತಿ ಸುತರಿಗೆ ಆದೀತೆಂದು ಇನ್ನೊಬ್ಬರ ವಶಕ್ಕೆ ಕೊಡಬಾರದೆಂದು ಕಡುಲೋಭದಿಂದ ಕಾಯ್ದುಕೊಂಡಿರುವದೇ ಲೌಕಿಕ ಜೀವರುಗಳಾದ ಸಕಲ ಮನುಷ್ಯರ ಸ್ವಭಾವವಾಗಿದೆ.

ಮನುಷ್ಯರುಗಳನ್ನು ಸಕಲ ಪಾಪಕ್ಕೆ ವಶಮಾಡಿ ಪಂಚಮಹಾ ಪಾತಕರೆಂದೆನಿಸಿ ಪರಲೋಕದಲ್ಲಿ ಭಯಂಕರವಾದ ನರಕದ ಶಿಕ್ಷೆಯನ್ನುಣಿಸಿ ಕಡೆಯಲ್ಲಿ ಪುಣ್ಯ ಹೀನರಾಗಿ ಈ ಭೂಮಿಯಲ್ಲಿ ಕ್ಷೀಣವಾದ ನಾನಾ ಯೋನಿಗಳಲ್ಲಿ ಹುಟ್ಟಿಸಿ ಭವಭವಾಂತರದಲ್ಲಿ ಕಾಲಕಾಮರ ಶಿಕ್ಷೆಯ ಬಹು ಬಾಧೆಯನುಣಿಸುವಂಥ ದುರ್ಗುಣದ ಮೂಲವೇ ಈ ಲೋಭವು ಆದಾಗ್ಯೂ ಎಲ್ಲ ದುರ್ಗುಣಗಳಲ್ಲಿ ಶ್ರೇಷ್ಠವಾದ ಕಡುಲೋಭವೆಂಬ ಕಂಟಕದ ಬೀಜವನ್ನೇ

ಈ ಲೌಕಿಕರು ಹೃದಯದಲ್ಲಿ ಬಿತ್ತಿಕೊಂಡು ಆದರ ಫಲವನ್ನು ಉಂಬುವೆವೆಂದು ದೃಢವಾಗಿ ನಂಬಿ ಬಿಡಲಾರದೆ ಆದಕ್ಕೆ ಆರೈಕೆಯನ್ನು ಮಾಡುತ್ತ ಸಲುಹಿಕೊಂಡು ಕಾಲವನ್ನು ಮಾಡುವದರಿಂದ ಸರ್ವಾಂಗ ಕಂಟಕವಾದ ವೃಕ್ಷವು ಪಲ್ಲೈಸಿದಂತೆ ಇದರಿಂದ ಇದರಂಶದ ಅನಂತ ಬೀಜಗಳಾಗಿ ಶರೀರವನ್ನೆಲ್ಲ ಆಚ್ಛಾದಿಸಿ ತನ್ನ ಮನ ಮೊದಲಾದ ಅರುವತ್ತಾರು ಕೋಟಿ ಕರಣಂಗಳೆಲ್ಲ ಲೋಕೋಪದ್ರವಕರವಾದ ಕಂಟಕಮಯವಾಗಿ ಭೂಲೋಕದ ಸಕಲ ಪ್ರಾಣಿಗಳಿಗೆ ದುಃಖವನ್ನುಂಟು ಮಾಡುತ್ತ ಪಾಪಮಯನಾಗಿ ಕಾಣುತ್ತಿರುವನು. ಆದರೆ ಈ ಕಡು ಲೋಭಿಯನ್ನು ಕಂಡಾಗಲೇ ಕಂಟಕ ವೃಕ್ಷವೆಂಬ ಜಾಲಿ ಬೊಬ್ಬಲಿಯು ಬೆಳೆದು ನೋಡುವವರಿಗೆ ಮಹಾ ಭಯಂಕರವಾಗಿ ಕ್ರೂರ ಮೃಗಂಗಳಿಗೆ ನೆಲೆವನೆಯಾಗಿರುವಂಥ ಘೋರಾರಣ್ಯವೆಂಬ ಭೂಮಿಯು ಹೇಗೆ ಅಂಜಿಸುತ್ತಿಹುದೋ ಹಾಗೆ ಈ ಕಡು ಲೋಭಿಗಳ ಕ್ರೂರ ಮುದ್ರೆಯೂ ಅಂಜಿಸುತ್ತಿರುವದು ಅಂಥ ಘೋರಾರಣ್ಯವನ್ನು ಹೊಕ್ಕಂಥ ಪ್ರಾಣಿಗಳಿಗೆ ಸಿಂಹ ಶಾರ್ದೂಲಾದಿ ನಾನಾ ಪ್ರಕಾರದ ಕಾಡ ಮೃಗಗಳ ಭೀಕರ ಧ್ವನಿಯು ಧೈರ್ಯವನ್ನು ಕೆಡಿಸಿದಂತೆ ಲೋಭಿಗಳ ಮುಖದಿಂದ ಹೊರಡುವ ಕ್ರೋಧಾವೇಶವಾದ ನಿಷ್ಠುರ ಕಠಿಣ ಶಬ್ದವನ್ನು ಕೇಳಿದಂಥ ಆತ್ಮರುಗಳ ಕಿವಿಗಳಲ್ಲಿ ನಿಶಿತಾಸ್ತ್ರವನ್ನು ಚುಚ್ಚಿದಂತಾಗಿ ಮಹಾದುಃಖದಿಂದ ನನಗೀ ಪಾಪಿಯ ದರ್ಶನವೇಕಾಯಿತೆಂದು ಮನದಲ್ಲಿ ಮರುಗುತ್ತ ಬಂದ ಹಾದಿಯಿಂದ ತಿರುಗಿ ಹೊಗುವರು

ಘೋರಾರಣ್ಯವು ಭೀಕರವಾಗಿದ್ದರೂ ಆ ಅರಣ್ಯದಲ್ಲಿ ಹುಲ್ಲು ನೀರು ನೆರಳುಗಳಿಂದ ಪಶುಗಳಿಗೆ ಮಹಾ ವಿಶ್ರಾಂತಿಯ ಸ್ಥಾನವಾಗಿ ಕಾಣಿಸಿದಲ್ಲಿ ಪಶುಗಳು ಸಂಚಾರ ಮಾಡುತ್ತ ಹಸಿವು ಬಾಯಾರಿಕೆಯಿಂದ ಬಳಲಿ ಆ ಸ್ಥಳಕ್ಕೆ ಬಂದು ಅಲ್ಲಿರುವ ಕೋಮಲವಾದ ಹಸುರು ಹುಲ್ಲನ್ನು ಕಂಡು ಆರಣ್ಯವನ್ನು ಹೊಕ್ಕು ಬಾಯಿ ತೆರೆದು ಹುಲ್ಲನ್ನು ತಿಂಬುವುದಕ್ಕೆ ಹೋದರೆ ಬಾಯಿ ಹಾಕಿದಲ್ಲೆಲ್ಲ ಮುಳ್ಳುಗಳೇ ತಟ್ಟುತ್ತಿರುವವು. ತೃಷಾತುರತೆಯಿಂದ ಆ ಪಶುಗಳು ನೀರನ್ನಾದರೂ ಕುಡಿದು ಸಂತೃಪ್ತರಾಗಬೇಕೆಂದು ಮುಂದಕ್ಕೆ ಹೋದಲ್ಲಿ ಅಲ್ಲಿ ಮನೆ ಮಾಡಿಕೊಂಡಿರುವ ಕಾಡಾನೆಗಳು ಸಿಂಹಗಳು ಹುಲಿಗಳು ಕರಡಿಗಳು ಮೊದಲಾದ ಭಯಂಕರ ಸ್ವರೂಪದ ಕ್ರೂರ ಮೃಗಗಳು ಅದ್ಭುತ ಧ್ವನಿಯಿಂದ ಘರ್ಜಿಸಲು ಅವುಗಳ ಕಠೋರ ಧ್ವನಿಯನ್ನು ಕೇಳಿದಾಗಲೆ ಭಯಪಟ್ಟು ಕೆಲವು ಪಶುಗಳು ಮಹಾ ಸಂತಾಪದಿಂದ ಓಡಿ ಹೋಗುವವು. ಅವುಗಳಲ್ಲಿ ಕೆಲವು ಪಶುಗಳು ಹಸಿವೆ ತೃಷೆಯಿಂದ ಅತ್ಯಂತ ಬಳಲಿದ ಕಾರಣ ಹುಲ್ಲು ನೀರನ್ನು ಬಿಟ್ಟು ಬರಲಾರದ ಆಶೆಯಿಂದ ಧೈರ್ಯವನ್ನು ಮಾಡಿ ಮುಂದಕ್ಕೆ ಹೋಗಿ ಹುಲ್ಲು ನೀರಿಗೆ ಬಾಯಿ ಹಾಕಿದಾಗಲೆ ಒಳಗಿರುವ

ಕ್ರೂರ ಪ್ರಾಣಿಗಳಾದ ಹುಲಿಗಳು ಘರ್ಜಿಸುತ್ತ ಬಂದು ನಖಾಗ್ರದಿಂದ ಬಡಿದು ಕೋರೆದಾಡೆಗಳಿಂದ ಕಚ್ಚಿ ಕೊಂದು ರಕ್ತ ಪಾನವನ್ನು ಮಾಡುತ್ತ ಇರುವವು.

ಈ ದೃಷ್ಟಾಂತದಂತೆ ಸಕಲ ದುರ್ಗುಣಗಳಿಗೆ ಮಾತೃಸ್ಥಾನವಾದ ಈ ಕಡು ಲೋಭವೆಂಬ ಕಂಟಕ ವೃಕ್ಷಯುಕ್ತವಾಗಿ ಘೋರಾರಣ್ಯಕ್ಕೆ ಸಮಾನ ವಾಗಿ ಈ ಗುಣವು ಇರುತ್ತಿರುವದು ಯಾರಿಗಾದರೂ ತನ್ನ ಪದಾರ್ಥ ವನ್ನು ಅಣು ಮಾತ್ರವಾದರೂ ಪರರಿಗೆ ಕೊಡಬಾರದೆಂಬ ದುಷ್ಟಗುಣವು ಯಾರ ಹೃದಯದಲ್ಲಿ ನೆಲೆಗೊಂಡಿರುವದೋ ಅವರ ಸರ್ವ ಕರಣಾದಿಗಳು ಲೋಭಮಯವಾಗಿರುವದರಿಂದ ಅವರ ಕಾಯಾ ವಾಚಾ ಮಾನಸಗಳೆಂಬ ತ್ರಿಕ ರಣಗಳಲ್ಲೆಲ್ಲ ಭಯಂಕರ ಸ್ವರೂಪವಾದ ದುರ್ಗುಣವೇ ಪ್ರಕಟಿಸುತ್ತಿರುವದು. ಅಂಥವನ ಶರೀರವು ಕಂಟಕ ವೃಕ್ಷಗಳಿಂದ ಜಾಲಿ ಬೊಬ್ಬುಲಿಯು ಹಬ್ಬಿದ ನಿರ್ಜನ ಪ್ರದೇಶವಾದ ಕ್ರೂರ ಮೃಗಂಗಳ ವಾಸಸ್ಥಾನವಾದ ಮಹಾ ಘೋರಾ ರಣ್ಯದಂತೆ ಕಾಣುತ್ತಿರುವದು ಮತ್ತು ಇಂಥ ದುರ್ಗುಣಿಗಳಾದ ಲೋಭಿಗ ಳಲ್ಲಿ ದೇವರು ಸಮೃದ್ಧಿಯಾಗಿ ಸಂಪತ್ತನ್ನು ಇಟ್ಟಿರುವನು ಆದರೆ ಅವರಲ್ಲಿ ರುವ ಸಂಪತ್ತನ್ನು ಕಂಡು ಯಾರಾದರೂ ಹಸಿವೆ ತೃಷೆಯಿಂದ ಬಳಲಿ ಬಂ ದಾತ್ಮರುಗಳು ಈ ಧನಪಾಲನ ಮನೆಯಲ್ಲಿ ತಮ್ಮ ಹಸಿವೆ ತೃಷೆಯ ಬಳಲಿಕೆಯ ಶ್ರಮವನ್ನು ಪರಿಹರಿಸಿಕೊಳ್ಳಬೇಕೆಂದು ಬಾಯನ್ನು ತೆರೆದಾಗಲೆ "ಯಾಚಕಸ್ಯ ಲುಬ್ಧಃ ಶತ್ರುಃ" ಎಂದು ಅವನ ವಾಚ್ಯದಿಂದ ಭೀಕರ ಸ್ವರೂಪವಾದ ನಿಷ್ಠುರ ವಾಕ್ಯಗಳು ಹೊರಟಾಗಲೆ ಮಾನಿಗಳಾದರೆ ತಮ್ಮ ಹಸಿವೆ ತೃಷೆ ಗಳನ್ನು ಸೈರಿಸಿಕೊಂಡು ಅತ್ಯಂತ ದುಃಖದಿಂದ ಹಿಂದಕ್ಕೆ ತಿರುಗುವರು ಆದರೆ ತಮ್ಮ ಹಸಿವೆ ತೃಷೆಗಳನ್ನು ಸೈರಿಸಲಾರದಂಥ ಆತ್ಮರುಗಳು ಅಭಿಮಾನದಾಸೆ ಯನ್ನು ಬಿಟ್ಟು, ಕ್ಷುಧಾ ಸಂಕಟದಿಂದ ದ್ರವ್ಯಾಪೇಕ್ಷೆಯಿಂದ ನಿರ್ಲಜ್ಜಯುತ ರಾಗಿ ದೀನ ಧ್ವನಿಯಿಂದ ಜನನೀ ಜನಕರನ್ನು ಸುತರು ಛಲದಿಂದ ಬೇಡಿದಂತೆ ಬಾಯಿಯನ್ನು ತೆರೆಯುತ್ತಿರಲು ಆ ದುಷ್ಟಾತ್ಮರಾದ ಮಹಾ ಪಾಪಿಷ್ಠರ ಅಂತ ರ್ಗತವಾದ ಕ್ರೋಧವೆಂಬ ಹೆಬ್ಬುಲಿಯು ಘರ್ಜಿಸಿದಂತೆ ಘುಡಿ ಘುಡಿಸುತ್ತ ಸಿಂಹನಂತೆ ಕಣ್ಣುಗಳನ್ನು ಕೆಂಪು ಮಾಡುತ್ತ ಕರಡಿಯಂತೆ ಮೂಗಿನ ಉಶ್ವಾ ಸವನ್ನು ಪಟ ಪಟನೆ ಬಡಿದುಕೊಳ್ಳುತ್ತ ಕಾಡಾನೆಗಳಂತೆ ತುಳಿಯುತ್ತ ಬಂದು ಬಡಿದು ಭಂಗಿಸಿ ಅವನ ಸರ್ವಾಭಿಮಾನವೆಂಬ ಜೀವ ರಕ್ತವನ್ನು ಹೀರಿ "ಹೋಗು ಹೋಗು" ಎಂದು ಬಿಸಾಟಿದಲ್ಲಿ ನಿಸ್ಸಾರವಾದ ಶವಕ್ಕೆ ಸಮಾನವಾಗಿ ಹೋಗುವರು. ಆ ಸಮಯದಲ್ಲಿ ಯಾಚಕನಿಗೆ ಸಂಭವಿಸಿದಂಥ ನೋಟವನ್ನು ವರ್ಣಿಸುವದು ಅಸಾಧ್ಯವು. ಅದು ಕಾರಣ ಲೋಭಗುಣವುಳ್ಳವರು ಉತ್ತಮ ಕುಲದಲ್ಲಿ ಹುಟ್ಟಿದವರಾದರೂ ಆಗಲಿ, ರಾಜ್ಯ ಸಂಪದ ಸಾಮ್ರಾಜ್ಯವುಳ್ಳವರಾ ದರೂ ಆಗಲಿ, ಸಕಲ ಸೌಭಾಗ್ಯದೊಡನೆ ಕೊಡಲ್ಪಟ್ಟ ಅಷ್ಟಮಹದೈಶ್ವರ್ಯ

ಸಂಪನ್ನರಾದರೂ ಆಗಲಿ, ಸಕಲ ಶಾಸ್ತ್ರ ಕೋವಿದರಾದರೂ ಆಗಲಿ, ನಳಕೂಬರ ಜಯ ವಸಂತ ಮನ್ಮಥರುಗಳಿಗಿಂತಲೂ ಸುಂದರರಾದರೂ ಆಗಲಿ, ಕುಶಲ ರಾಗಲಿ, ಪರಾಕ್ರಮಿಗಳಾಗಲಿ, ಯತಿಗಳಾಗಲಿ, ಮೌನಿಗಳಾಗಲಿ, ಜ್ಞಾನಿಗಳಾ ಗಲಿ. ಸಿದ್ಧಪುರುಷರಾಗಲಿ, ಬ್ರಹ್ಮೇಂದ್ರಾದಿ ದೇವತಾ ಸಾರ್ವಭೌಮರಾಗಲಿ ಇವರೊಳಗಾರಲ್ಲಿಯಾದರೂ ಈ ಕಡುಲೋಭವೆಂಬ ದುರ್ಗುಣವು ನೆಲೆಗೊಂ ಡಿರುವದೋ ಅವರನ್ನು ಈ ಲೋಕದಲ್ಲಿ ಯಾರೂ ಸೇರುವದಿಲ್ಲ ಈತನಿಗೆ ಸಮನಿಸಿದಂಥ ಭಯಂಕರವಾದ ಪಾಪವು ಮತ್ತಾವ ದುರ್ಗುಣವುಳ್ಳವನಿಗೂ ಸಮನಿಸದು

ಯಾವ ಲೋಕದಲ್ಲಾದರೂ ಎಲ್ಲಾದರೂ ಯಾರಾದರೂ ಅವನಿಗೆ ದುರ್ದೋಷಿ ಎಂದಾರಲ್ಲದೆ, ಈ ಕಡು ಲೋಭಿಯಲ್ಲಿ ಯಾವ ಸದ್ಗುಣವಿದ್ದರೂ ಅದು ಪ್ರಕಟಿಸದು. ಅದು ಕಾರಣ ಸಕಲಲೋಕೋಪಕಾರಿಗಳಾದ ಜಗತ್ಪ್ರ ಸಿದ್ಧರಾದ ಅನಿವಿತ್ತ ಬಾಂಧವರಾದ ನಿಜಗುಣ ಶಿವಯೋಗಿಗಳು ಕೈವಲ್ಯ ಪದ್ಧತಿ ಎಂಬ ಉದ್ಗ್ರಂಥದಲ್ಲಿ "ಕಡುಲೋಭದಿಂದ ದುರ್ಗುಣಮನ್ಯ ಮುಂಟೆ" ಎಂದು ಹೇಳಿದ್ದಾರೆ ಮತ್ತು ಯೋಗಂಟೆ ಲಕ್ಷ್ಮಪ್ಪನವರು ತೆಲುಗು ಭಾಷೆಯಲ್ಲಿ ಹೇಳಿದ್ದು "ತನರಲೋ ಭಕ್ತಿ ಪ್ರಸಾದ ತ್ರಯಮು ಲೇದು" ಎಂಬಲ್ಲಿ ಲೋಭಿಯಾದವನಿಗೆ ತ್ರಿವಿಧ ಪ್ರಸಾದ ನಾಸ್ತಿ ಎಂದು ಹೇಳಿರುವದ ರಿಂದ ಈ ಲೋಭ ಗುಣದಿಂದಾಗುವ ದುಃಖಕ್ಕೂ ಅಪಕೀರ್ತಿಗೂ ಕಡೆ ಇಲ್ಲ ವಾಗಿ ಯಾರಾದರೂ ಈ ಲೋಭವನ್ನೇ ತ್ಯಜಿಸಬೇಕೆಂದು ಲೌಕಿಕರಲ್ಲರನ್ನು ಬೇಡಿಕೊಳ್ಳುತ್ತೇನೆ.

ಲೌಕಿಕಾತ್ಮರಲ್ಲಿರುವ ಸರ್ವ ಸದ್ಗುಣಗಳಲ್ಲಿ ಪರೋಪಕಾರವೆಂಬ ಕಲ್ಯಾಣ ಗುಣಕ್ಕೆ ಸಮಾನವಾದ ಸದ್ಗುಣವು ಯಾವದೂ ಇರುವದಿಲ್ಲ. ಅದರ ಹಿಂದೆ ಹೇಳಿದ ಕಡುಲೋಭವು ಭೂಮಿಯಲ್ಲಿ ಕಾಡು ಮರಗಳು ತಮ್ಮಿಂದ ತಾವೇ ಉದ್ಭವಿಸುವಂತೆ ಮನುಷ್ಯರುಗಳಿಗೆ ಈ ಗುಣವು ಸ್ವಭಾವ ಸಿದ್ಧವಾಗಿರುವದು. ಮತ್ತು ಭೂಮಿಯಲ್ಲಿ ಸಕಲ ಧಾನ್ಯಾದಿಗಳನ್ನು ಫಲ ಪದಾರ್ಥಗಳನ್ನು ಬಲ ವಂತರು ಯತ್ನಮಾಡಿ ಬೆಳಿಸಿದಲ್ಲದೆ ಹ್ಯಾಗೆ ಬೆಳೆಯುವದಿಲ್ಲವೋ ಹಾಗೆ ಪರೋಪಕಾರಾದಿ ಸರ್ವ ಸದ್ಗುಣಗಳು ಗುರುಹಿರಿಯರ ಸುಬೋಧನೆಯಿಂದಲ್ಲದೆ ದೊರೆಕೊಳ್ಳದು ಹ್ಯಾಗಂದರೆ ಜಯಶೀಲ ಸಾಮರ್ಥ್ಯಯುತನಾದ ರಾಜ ನೋರ್ವನು ಸರ್ವ ಬಲಯುತನಾಗಿ ಮಾರ್ಗಕ್ರಮಣ ಮಾಡುತ್ತ ಬರುವಲ್ಲಿ ಮಹಾ ಭೀಕರಾಕಾರವಾದ ಮಹಾರಣ್ಯವನ್ನು ನೋಡಿ "ಆಹಾ! ಇದು ಉತ್ತಮ ಭೂಮಿಯು ಇದರಲ್ಲಿ ಕಾಡುಮರಗಳಾದ ಸರ್ವ ಕಂಟಕವೃಕ್ಷಂಗಳುದ್ಭವಿಸಿ ಈ ಭೂಮಿಯನ್ನಾಚ್ಛಾದಿಸಿದ್ದರಿಂದ ಇದರಲ್ಲಿ ಕ್ರೂರ ಮೃಗಾದಿಗಳು ಸೇರಿ ನಿರ್ಜನ ಪ್ರದೇಶವೆನಿಸುವ ಮಹಾ ಭಯಂಕರ ಸ್ವರೂಪವನುಳ್ಳ ಘೋರಾ

ರಣ್ಯವೆನಿಸಿತಲಾ ಎಂದು ಇದನ್ನು ಉದ್ಧರಿಸಿ ಪುಣ್ಯ ಭೂಮಿ ಎನಿಸಿ ತನ್ನ ವಶಮಾಡಿಕೊಳ್ಳಬೇಕೆಂದು ನಿರ್ಧರಿಸಿ ತನ್ನ ಸೇನಾ ಸಮೇತನಾಗಿ ಅಲ್ಲಿ ಪಾಳೆಯಂ ಬಿಟ್ಟು ಚಂದ್ರಾಯುಧಮಂ ಪಿಡಿದು ಧನುರ್ಧಾರಿಯಾಗಿ ಅಕ್ಷಯ ಬಾಣಗಳ ಬತ್ತಳಿಕೆಯನ್ನು ಬೆನ್ನಿನಲ್ಲಿ ಕಟ್ಟಿ ರಥಾರೂಢನಾಗಿ ಚತುರಂಗ ಬಲಗೂಡಿ ಮಹಾವೀರರುಗಳ ಸಮ್ಮೇಳನದಿಂದ, ಭೇರಿ ಮೊದಲಾದ ವಾದ್ಯಂಗಳು ಸಹಿತ ವೀರಘೋಷದಿಂದ ಮಹಾರಣ್ಯವನ್ನು ಪೊಕ್ಕು ಅಲ್ಲಿ ತಲೆದೋರುತ್ತಿರುವ ಕ್ರೂರ ಮೃಗಂಗಳೊಡನೆ ಮಹಾ ಪರಾಕ್ರಮದಿಂದ ಯುದ್ಧವಂ ಮಾಡಿ ಸಮಸ್ತ ಮೃಗಾದಿಗಳಂ ಸಂಹರಿಸಿ, ಅಲ್ಲಿ ಸೂರ್ಯಕಿರಣಮಂ ಪಸರಿಸಗೊಡದೆ ಆಚ್ಛಾದಿಸಿರುವ ಕಾಡುಮರಗಳಾದ ಕಂಟಕ ವೃಕ್ಷಂಗಳನ್ನು ಕೊಡಲಿಯಿಂದ ಕಡಿದು ಅವುಗಳನ್ನು ಮೂಲ ಸಹಿತವಾಗಿ ಸುಟ್ಟು ತದನಂತರದಲ್ಲಿ ಆ ಭೂಮಿಯನ್ನು ಕೆಡಿಸುವ ನಟ್ಟು ಮುಂತಾದ ಕಸ ಪದಾರ್ಥಗಳನ್ನು ಕಂಡು ಅವುಗಳನ್ನು ಗುದ್ದಲಿಯಿಂದ ಅಗಿಸಿ ಬೇರುಗಳುಳಿಯದಂತೆ ಆರಿಸಿ ಕಡೆಗೆ ಬಿಸಾಟಿ ನಿರ್ಮಲ ಭೂಮಿ ಎಂದೆನಿಸಿ ಅದರಲ್ಲಿ ಅತ್ಯುತ್ತಮ ಫಲ ಪದಾರ್ಥಗಳನ್ನು ಬಿತ್ತಿ ಬೆಳೆದಲ್ಲಿ ಸರ್ವತ್ರರಿಗೂ ಸಂತೋಷ ಪಡಿಸುತ್ತಿಹುದಾದ ಕಾರಣ ಪುಣ್ಯ ಭೂಮಿ ಎನಿಸುವದು. ಆ ಭೂಮಿಯನ್ನು ರಾಜನು ತನ್ನ ವಶದಲ್ಲಿಟ್ಟುಕೊಂಡು ತನ್ನದೆಂಬಭಿಮಾನ ದೃಢವಾಗಿರ್ದು ಆಗಾಗ್ಗೆ ಅದರಲ್ಲಿ ಕಾಡುವೃಕ್ಷದ ಮೊಳಕೆ ಮೊದಲಾದ ಕಂಟಕ ವೃಕ್ಷಾಂಕುರಗಳು ಮೊಳೆದೋರದಂತೆ ಎಚ್ಚರಿಸಿ ಪರಾಮರಿಸುತ್ತಿರುವನು

ಲೋಕದಲ್ಲಿ ಉದ್ಭವಿಸಿದ ಮನುಷ್ಯರೆಲ್ಲರಲ್ಲಿ ಲೌಕಿಕಾಚಾರವಾದ ಸಂಸಾರದಲ್ಲಿರ್ಪವರೆಲ್ಲರಿಗೂ ಕಡುಲೋಭಾದಿ ಸಮಸ್ತ ದುರ್ಗುಣಗಳು ಸ್ವಭಾವಸಿದ್ಧವಾಗಿ ತಮ್ಮಿಂದ ತಾವೇ ಪ್ರಾಬಲ್ಯವಾಗಿ ಬೆಳೆದು ಆಚ್ಛಾದಿಸಿ ಜ್ಞಾನ ಸೂರ್ಯ ಕಿರಣವು ಪಸರಿಸದಾಗಿ ಮಹಾಕಾವಳ ಸ್ವರೂಪವಾದ ಅಜ್ಞಾನಾಂಧಕಾರದಿಂದ ತುಂಬಿದ ಹೃದಯವಾದುದರಿಂದ ಅಲ್ಲಿ ಮನ ಮೊದಲಾದ ಸಕಲ ಕರಣಂಗಳೆಲ್ಲ ದುರ್ವರ್ತನೆಯೊಡನೆ ಕೂಡಿ ಲೋಕೋಪದ್ರವಕರವಾದ ಮಹಾ ಕಂಟಕವೃತ್ತಿಯೊಡನೆ ಚರಿಸುತ್ತ ಕಡು ಲೋಭಿಯಾಗಿರುತಿರ್ಪ ಸಾಂಪ್ರದಾಯವು ಜೀವನ ಪ್ರಕೃತಿಯುಳ್ಳ ಯಾವತ್ತು ಸಂಸಾರಿಗಳಿಗೂ ಸ್ವಭಾವವಾಗಿದೆ. ಆದರೆ ಈ ಸಂಸಾರಿಗಳ ಶರೀರವು ಬಲ್ಲವರುಗಳಿಗೆ ಭೀಕರಾರಣ್ಯದಂತೆ ಕಾಣಿಸುತ್ತಿರುವದು. ಜ್ಞಾಸಿಗಳ ದೃಷ್ಟಿಗೆ ಹೀಗೆ ಕಾಣಿಸುವದಲ್ಲದೆ, ಲೌಕಿಕರ ಕಣ್ಣಿಗೆ ಅಸಹ್ಯವಾಗಿ ಕಾಣಿಸದು. ಹೇಗಂದರೆ ಹಂದಿಗಳಿಗೆ ಹಂದಿಯ ಜನ್ಮವೇ ಸುಖವಾದಂತೆ ಲೋಭಿಗಳಿಗೆ ಲೋಭಗುಣವೇ ಉತ್ತಮವಾಗಿ ಕಾಣಿಸುವದು.

ಸಕಲ ಬ್ರಹ್ಮಾಂಡಂಗಳಿಗೆ ರಾಜಾಧಿರಾಜನಾದ ಪರಶಿವ ಮೂರ್ತಿಯು ಈ ಜಗದೋಪಕಾರವಾಗಿ ಜಗತ್ಪಾವನ ಪ್ರಯೋಜನ ಮುಂದುಗೊಂಡು ಜ್ಞಾನಜಂಗಮ ಲೀಲೆಯನ್ನು ಧರಿಸಿ ಕ್ರಿಯಾ ಘನ ಗುರುವಾಗಿ ದೇಶ ಸಂಚಾರ ಮಾಡುತ್ತ ಬರುವಲ್ಲಿ ಈ ಸಂಸಾರಿಗಳಲ್ಲಿರುವ ಸಕಲ ದುರ್ಗುಣಂಗಳ ಕಂಡು "ಅಯ್ಯೋ, ವ್ಯರ್ಥವಾಗಿ ಕೆಟ್ಟು ಹೋಗುತ್ತಿಹರಲಾ" ಎಂದು ಚಿಂತಿಸಿ ತಾನು ಅನಿಮಿತ್ತ ಬಾಂಧವನಾದ ಕಾರಣ ಊರಿಗೆ ಸಮೀಪವಾಗಿರುವ ಉದ್ಯಾನ ವನಗಳಲ್ಲಾಗಲಿ ಚೌಕೀಮರಗಳಲ್ಲಾಗಲಿ ರಾಜನು ಸೇನಾಸಮೇತನಾಗಿ ಇಳಿದು ಕೊಂಡಂತೆ ಇಳಿದು ಸಕಲ ಶಾಸ್ತ್ರಂಗಳೆಂಬ ನಿಜಾಯುಧಗಳನ್ನು ಪ್ರಕಟಿಸಿ ಬೋಧಿಸುತ್ತ ಮೊದಲು ದುರ್ಗುಣಗಳನ್ನು ಛೇದಿಸಿ, ತರುವಾಯ ಕಂಟಕ ವೃಕ್ಷಂಗಳೆಂಬ ಮುಳ್ಳು ಗಿಡಗಳಿಗೆ ಸದೃಶವಾದ ಕಡುಲೋಭವೆಂಬ ವೃಕ್ಷಗಳನ್ನು ನಿಜ ವೈರಾಗ್ಯವೆಂಬ ಕೊಡಲಿಯಿಂದ ಕಡಿದು ಪರಮ ವೀರಶೈವ ಜ್ಞಾನಾಗ್ನಿಯಿಂದ ಸುಟ್ಟು ಶಿವಜ್ಞಾನವೆಂಬ ಬೀಜವನ್ನು ಬಿತ್ತುವದಕ್ಕೆ ದೇಹದ ಸಮಸ್ತ ಕರಣೇಂದ್ರಿಯಂಗಳಲ್ಲಿ ಬೇರು ಬಿಟ್ಟು ಆಚ್ಛಾದಿಸಿರುವ ಆಣವ ಮಲ ಮಾಯಾ ಮಲ ಕಾರ್ಮಿಕ ಮಲಗಳೆಂಬ ತ್ರಿವಿಧ ನಟ್ಟುಗಳನ್ನು ಛೇದಿಸುವದಕ್ಕೆ ನಾದವೆಂಬ ನೇಗಿಲು, ಜೀವನೆಂಬ ಮುಂಜ, ಮನ ಪವನಂಗಳೆಂಬ ಎತ್ತುಗಳು, ಸುಷುಮ್ನವೆಂಬ ಈಸು, ಇವುಗಳಿಂದ ದೇಹವೆಂಬ ಪೃಥ್ವಿಯನ್ನು ಮರ್ದನವಮಾಡಿ ಸುವಿಚಾರದಿಂದ ಶೋಧಿಸಿ ನಿರ್ಮಲ ಮಾಡಿ ಚಿತ್ಪೃಥ್ವಿ ಎನಿಸಿ ಸುಮನವೆಂಬ ನಿರ್ಮಲೋದಕದಿಂದ ತೋಯಿಸಿ ಪುಣ್ಯ ಸ್ವರೂಪವಾದ ಸುಕೃತವೆಂಬ ಪುಣ್ಯಕಾಲದ ಹದವರಿತು ಮುಕ್ತಾ ಫಳ ಸ್ವರೂಪವಾದ ಶಾಂಭವ ಭಕ್ತಿ ಎಂಬ ಬೀಜವನ್ನು ಬಿತ್ತಿ ಪರಮಾನಂದ ಪ್ರಸಾದವೆಂಬ ಫಲ ಪದಾರ್ಥವನ್ನು ಪಡೆದು ಗುರುಲಿಂಗ ಜಂಗಮವೆಂಬ ರಾಜಾಧಿರಾಜರು ಉಂಡು ಪರಿಣಾಮಿಸಿಕೊಂಡಿರುವದಕ್ಕೆ ನಿಜ ವಾಸವಾದ ಪುಣ್ಯ ಭೂಮಿಯಂತೆ ಭಕ್ತಿ ಜ್ಞಾನ ವೈರಾಗ್ಯಶೀಲನೆನಿಸಿದಲ್ಲಿ ಆ ಸಂಸಾರಿಯೇ ಸದ್ಭಕ್ತನಾಗುವನು

ಅಲ್ಲದೆ ಹಬ್ಬಿದ ಅರಣ್ಯವನ್ನು ಛೇದಿಸಿ ನಿರ್ಮಲ ಭೂಮಿಯನ್ನು ಮಾಡುವದಕ್ಕೆ ಬಲವಂತರಾದ ಮಹಾರಾಜರಿಂದಾಗುವಂತೆ, ಸಂಸಾರದಲ್ಲಿ ಬದ್ಧರಾದಂಥ ಆತ್ಮರುಗಳನ್ನು ನಿರ್ವಂಚಕ ಸದ್ಭಕ್ತನನ್ನಾಗಿ ಮಾಡುವದಕ್ಕೆ ಶಿವನ ಸದ್ರೂಪವಾದ ಗುರುಲಿಂಗ ಜಂಗಮದೇಕ ಸ್ವರೂಪವಾದ ದಿವ್ಯ ಶಿವಯೋಗಿಗಳಿಂದಾಗುವದಲ್ಲದೆ, ಉಳಿದಾದವರುಗಳಿಂದಲೀ ಸಾಮರ್ಥ್ಯವು ಘಟಿಸದಿಹುದು.

ಲೋಕೋಪಕಾರಾರ್ಥವಾಗಿ ಲೌಕಿಕರೆಲ್ಲರನ್ನು ನಾನು ಪ್ರಾರ್ಥಿಸಿ ಬೇಡಿಕೊಳ್ಳುವದೇನಂದರೆ, ಹಿಂದೆ ಕೃಷಿ ಪ್ರಯೋಜನ ಮುಂದುಗೊಂಡು ಕೆಲವು ಪ್ರಕರಣಗಳಲ್ಲಿ ಹೇಳಿದ್ದೇನಂದರ, ಯಾವತ್ತರೂ ವೈಗಳ್ಳತನವನ್ನು ಬಿಟ್ಟು ಯತ್ನವನ್ನೇ ದೃಢವಾಗಿ ನಂಬಿ ಅರ್ಥಶಕ್ತಿ ಬುದ್ಧಿಶಕ್ತಿ ಕಾಯಶಕ್ತಿಗಳಿಂದಲೂ

ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಯತ್ನ ಮಾಡಿ ಭೂಮಿಯಿಂದ ಸಕಲ ಪದಾರ್ಥಗಳನ್ನು ಬೆಳೆ ಮಾಡಿಕೊಂಡು, ಧನಧಾನ್ಯ ಸಂಪದ ಸೌಖ್ಯವನ್ನು ಸಮೃದ್ಧಿಯಾಗಿ ಪಡೆಯಲೆಂದು ಹೇಳಿದ್ದೇನೆ. ಅದಾದರೂ ನಿಮಗೆ ಹಿತವಾದದ್ದೇ ಇದೆ

ಅದರಂತೆ ಈ ಪ್ರಕರಣದಲ್ಲಾದರೂ ನಿಮ್ಮ ನಿಮ್ಮ ಪದಾರ್ಥಗಳನ್ನು ಪರೋಪಕಾರಾರ್ಥವಾಗಿ ವೆಚ್ಚ ಮಾಡಿ ಪುಣ್ಯ ಸಂಗ್ರಹವನ್ನು ಸಂಪಾದಿಸಿಕೊಂಡರೆ, ಜನ್ಮ ಜನ್ಮಾಂತರಂಗಳಲ್ಲಿಯೂ ಇಹಲೋಕ ಪರಲೋಕಂಗಳಲ್ಲಿಯೂ ಅಷ್ಟ ಮಹದೈಶ್ವರ್ಯವನ್ನು ಪ್ರಕ್ಷಂದನ ನವನೀತಾದ್ಯಷ್ಟ ಭೋಗಂಗಳನ್ನು ಭೋಗಿಸುತ್ತಾ ಸ್ವೇಚ್ಛಾ ಪ್ರಕಾರಕ್ಕೆ ಸುಖದಿಂದಿರಬಹುದು ಅದು ಕಾರಣ ಲೌಕಿಕರಾದ ಗೃಹಸ್ಥರೆಲ್ಲರು ದೊಡ್ಡ ಬುದ್ಧಿಯುಳ್ಳವರಾಗಿ ಮಾಡಿ ನೀಡಿ ಜನ್ಮಾಂತರಂಗಳಲ್ಲಿಯೂ ಸಕಲೈಶ್ವರ್ಯವು ಕೊರತೆಯಾಗದಂತೆ ಹಲವು ರೀತಿಯಿಂದಾದರೂ ಯತ್ನಿಸಿ ಪರೋಪಕಾರವನ್ನು ಮಾಡತಕ್ಕದ್ದು

ಲೌಕಿಕರಲ್ಲಿ ಪರಹಿತಕಾರಿಗಳಾದ ದಯಾಳು ಪುರುಷರು ಅಕಲ್ಪಿತವಾಗಿರುತ್ತಾರೇ ಹೊರ್ತು ಬಹಳವಾಗಿರಲಾರರು. ಆದಾಗ್ಯೂ ರಘು, ಹರಿಶ್ಚಂದ್ರ, ಕರ್ಣ, ಯುಧಿಷ್ಠಿರ, ವಿಕ್ರಮ, ಭೋಜಭೂಪಾಲರೆಂಬವರು ಪರೋಪಕಾರ ವಿಷಯದಲ್ಲಿ ಕೀರ್ತಿ ಹೊಂದಿದರಲ್ಲದೆ, ಉಳಿದ ಅನಂತ ರಾಜರೆಲ್ಲರೂ ಇವರಂತೆ ಪರೋಪಕಾರಿಗಳಾಗಲಿಲ್ಲ ಆದಾಗ್ಯೂ ಹಿಂದೆ ಪ್ರಸಿದ್ಧ ಹೊಂದಿದ ರಾಜರೆಲ್ಲರೂ ಪರೋಪಕಾರವೇ ಪ್ರಾಣವಾಗಿ ವರ್ತಿಸುತ್ತಿರುವಲ್ಲಿ ವೃಕ್ಷಾದಿಗಳಂತೆ ಸ್ವಕಾರ್ಯವನ್ನುಳಿದಾದರೂ ಪರೋಪಕಾರವನ್ನು ಮಾಡುವ ವಿಷಯದಲ್ಲಿ ರಘು ರಾಜನು ಮತ್ತು ವಿಕ್ರಮನು ವಿಶೇಷವೆಂದು ಅವರವರ ಇತಿಹಾಸಗಳಿಂದ ತಿಳಿದು ಬರುತ್ತದೆ.

ಪರೋಪಕಾರಿಗಳಾದ ಪುಣ್ಯಾಪೇಕ್ಷಿತರು ತಾವೂ ಮಾಡುವರು ಮತ್ತು ಪರೋಪಕಾರವನ್ನು ಮಾಡುವವರಿಗಾದರೂ ಸಹಾಯವನ್ನು ಮಾಡಿ ಅವರ ಕಡೆಯಿಂದಲಾದರೂ ಮಾಡಿಸುವರು ಸಕಲ ರೀತಿಯಿಂದಲಾದರೂ ಪುಣ್ಯದ ಬೆಳವಿಗೆಯನ್ನು ಮಾಡಿಕೊಳ್ಳುತ್ತಾರೆ. "ಪರರ ದುರ್ಗುಣವನ್ನು ಮರೆಸುತಾದರೆ ಪುದೆ ಚಂದ ಮಾಮ" ಎಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ವೈರಿಗಳಿಗಾದರೂ ಉಪಕಾರವನ್ನು ಮಾಡಬೇಕೆಂದು ಲೋಕದ ನಾಣ್ನುಡಿಯುಂಟು. ಇದಲ್ಲದೆ "ತನ್ನ ಬಾಯಿಯಲ್ಲಿ ಬಿದ್ದದ್ದು ಮಣ್ಣಾಗುವದು, ಅನ್ಯರ ಬಾಯಿಯಲ್ಲಿ ಬಿದ್ದದ್ದು ಹೊನ್ನಾಗುವದು" ಎಂದು ಲೌಕಿಕ ನೀತಿಯುಂಟು. ಹಾಗೂ ಪರೋಪಕಾರಿಯಲ್ಲದವನ ಜನ್ಮವು ನಿರರ್ಥಕವೆಂದೂ ಅಸಾರ್ಥಕವೆಂದೂ ಸಕಲ ಶಾಸ್ತ್ರಂಗಳು ಸಾರುತ್ತಿವೆ. "ವ್ಯಾಧ ನೊಂದು ಮೊಲನ ತಂದರೆ ಸಲುವ

ಹಾಗಕ್ಕೆ ಬೆಲಿವರು ನೆಲನಾಳ್ವನ ಹೆಣ ನೆಂದರೆ ಒಂದಡಿಕೆಗೆ ಕೊಂಬುವ ರಿಲ್ಲ. ಮೊಲನಿಗಿಂತ ಕರಕಷ್ಟ ನರನ ಬಾಳುವೆ" ಎಂದು ಶ್ರೀ ಬಸವೇಶ್ವರರ ಗುರು ವಾಕ್ಯ ಉಂಟಾಗಿ ಲೌಕಿಕರೆಲ್ಲರೂ ಪರೋಪಕಾರವನ್ನು ಮಾಡಿ ಪುಣ್ಯವಂತರೆನಿಸಿಕೊಳ್ಳಬೇಕು

ಯಾರಾದರೂ ಯತ್ನ ಮಾಡುತ್ತಿರಲಿಕ್ಕೆ ಯತ್ನ ಮುಖದಿಂದ ದೇವರು ಸಹಾಯಕನಾಗಿ ಸಕಲ ಸಂಪದವನ್ನಾದರೂ ಅಥವಾ ತಕ್ಕಮಟ್ಟಿಗಾದರೂ ಧನ ಕನಕ ಗೃಹ ಕ್ಷೇತ್ರ ಮೊದಲಾದದ್ದನ್ನಾದರೂ ಕೊಟ್ಟಿರುವ ಕಾಲದಲ್ಲಿ ತಮ್ಮ ತಮ್ಮ ಸತಿ ಸುತಾದಿಗಳೊಡಗೂಡಿ ಲೌಕಿಕರೆಲ್ಲರೂ ತಾವೇ ಉಂಡುಟ್ಟು ಪರಿಣಾಮಿ ಗಳಾಗಿರುವದೇನಾಶ್ಚರ್ಯ? ಇಂಥ ಸಂಸಾರವನ್ನು ಇಲಿ, ಹೆಗ್ಗಣ, ಶುನಿ, ಸೂಕರಾದಿಗಳಾದರೂ ತಮ್ಮ ನಿಮಿತ್ಯವಾಗಿ ಮತ್ತು ತಮ್ಮ ಸತಿ ಸುತರ ನಿಮಿತ್ತವಾಗಿ ಯತ್ನ ಮಾಡಿ ಬದುಕುತ್ತವೆ. ಈ ರೀತಿಯಿಂದ ಸಂಸಾರ ಮಾಡು ವದಕ್ಕೆ ಕಲಿಸಬೇಕೆಂಬುವ ಪ್ರಯೋಜನವಿಲ್ಲ ಜೀವ ಭಾವಿಗಳಿಗೆ ಇದು ಸ್ವಭಾವ ಗುಣವಾಗಿದೆ.

ಅಸಾಕ್ಷಿಕನಾಗಿ ಉಣಲಾಗದೆಂದು ನಿಜಗುಣವಾಕ್ಯ ಉಂಟಾಗಿ ಅನೇಕ ಶಾಸ್ತ್ರಗಳಲ್ಲಿಯಾದರೂ "ಅನ್ನಕಾಮಿಯಾದ ಪಥಾಶ್ರಿತನಾದ ಅತಿಥಿಯು ಗೃಹಕ್ಕೆ ಬಂದರೆ, ಸರ್ವದಾ ಸತ್ಕರಿಸಬೇಕೆಂದು ಉಪ್ಫಡಿಸುತ್ತವೆ." ವರ್ಷಾಕಾಲೆ ಗೃಹಂ ದಧ್ಯಾತ್ ಸೀತಕಾಲೆ ಹುತಾಶನಃ ಉಷ್ಣಕಾಲೆ ಜಲಂ ದಧ್ಯಾತ್ ಸರ್ವಕಾಲೇಷು ಭೋಜನಂ" ಇದರರ್ಥವೇನಂದರೆ, ತನ್ನಾಶ್ರಮಕ್ಕೆ ಯಾರಾ ದರೂ ಬಂದಲ್ಲಿ ಅವರಿಗೆ ಮಳೆಗಾಲದಲ್ಲಿ ಮನೆಯಲ್ಲಿ ಸ್ಥಳವನ್ನು ಸೀತ ಕಾಲದಲ್ಲಿ ಅಗ್ನಿಯನ್ನು ಅಂಬರವನ್ನು, ಬೇಸಿಗೆ ಕಾಲದಲ್ಲಿ ನೀರನ್ನು, ಸರ್ವ ಕಾಲದಲ್ಲಿ ಅನ್ನವನ್ನು ಕೊಟ್ಟು ಸತ್ಕಾರವನ್ನು ಮಾಡಬೇಕು ಈ ಧರ್ಮವು ಮನುಷ್ಯ ರಾದವರೆಲ್ಲರಲ್ಲಿ ಇರತಕ್ಕದ್ದು

ಯತಿಗಳಾಗಲಿ ಮೌನಿಗಳಾಗಲಿ ಮೂರ್ಖರಾಗಲಿ ರಾಜರಾಗಲಿ ಭಿಕ್ಷುಕ ರಾಗಲಿ ಸಂಸಾರಿಗಳಾಗಲಿ, ಸನ್ಯಾಸಿಗಳಾಗಲಿ, ಧರ್ಮಿಗಳಾಗಲಿ, ಕರ್ಮಿ ಗಳಾಗಲಿ, ಭವಿಗಳಾಗಲಿ, ಭಕ್ತರಾಗಲಿ, ಅರಣ್ಯವಾಸಿಗಳಾಗಲಿ, ತಮ್ಮ ತಮ್ಮ ಆಶ್ರಮಕ್ಕೆ ಬಂದಂಥವರಿಗೆ ಸರ್ವದಾ ಅನ್ನಪಾನಾದಿಗಳನ್ನು ಕೊಟ್ಟು ಸತ್ಕ ರಿಸಬೇಕು.

ಅನ್ನ ದಾನಕ್ಕೆ ಸಮಾನವಾದ ಪುಣ್ಯವು ಯಾವ ಸತ್ಕರ್ಮದಿಂದಲೂ ಪ್ರಾಪ್ತಿಸದು. ಏಕೆಂದರೆ, ಸಕಲ ಜಗತ್ಕರ್ತನಾದ ಪರಶಿವ ಮಹಾಮೂರ್ತಿಯು ಸರ್ವಜ್ಞನಾಗಿ, ಸರ್ವಾಂತರ್ಯಾಮಿಯಾಗಿ, ಸರ್ವ ವ್ಯಾಪಕನಾಗಿ, ಸರ್ವತ್ರ ಪರಿಪೂರ್ಣನಾಗಿ, ಪ್ರಾಣಿಗಳಾವತ್ತರ ಪ್ರಾಣ ಚೈತನ್ಯಾತ್ಮಕನಾಗಿ ಇರುವದ

ರಿಂದ ಸಕಲ ಶೃತಿ ಸ್ಮೃತಿಗಳು " ಯತ್ರಜೀವ ಸ್ತತ್ರಶಿವಃ " ಎಂದು ಪ್ರಸಿದ್ಧವಾಗಿ ಬೋಧಿಸುತ್ತವೆ. ಆದುದರಿಂದ ಪ್ರಾಣವು ಅನ್ನಾಶ್ರಯದಿಂದ ಪ್ರಜ್ವಲಿಸುವದಾಗಿ ಅನ್ನದಾನದ ಸಮಾನವಾದ ಪುಣ್ಯವು ಮತ್ತೊಂದಿಲ್ಲ. ಸಾಕ್ಷಿ॥ "ಗಜತುರಗ ಸಹಸ್ರಂ, ಗೋಕುಲಂ, ಭೂಮಿದಾನಂ, ಕನಕ ರಜತ ಪಾತ್ರಂ, ಮೇದಿನೀ ಸಾಗರಾಂತಂ ಉಭಯಕುಲ ಪವಿತ್ರಂ ಕೋಟಿ ಕನ್ಯಾ ಪ್ರದಾನಂ, ನ ಭವತಿ ಸಮತುಲ್ಯಂ ಅನ್ನದಾನಸ್ಸಮಾನಃ " ಎಂಬ ನೀತಿಯುಂಟಾಗಿ ಅಂತಪ್ಪ ಅನ್ನವು ಕೃಷಿಯಿಂದಲ್ಲದೆ ದೊರೆಯದ್ದರಿಂದ ಕೃಷಿಕರಾದವರು ಭಕ್ತಿಕಾರಣವಾದ ಕೃಷಿ ಮೊದಲಾದ ಷಟ್ಕೃಷಿ ವ್ಯಾಪಾರಾದಿಗಳಿಂದ ಧನ ಧಾನ್ಯಗಳನ್ನು ಪಡೆದು ತಾವು ಉಂಬುತ್ತ ಪರರಿಗೆ ಕೊಡುತ್ತ ಧರ್ಮ ನಿಮಿತ್ಯ ಪುಣ್ಯ ಸಂಪಾದನಕ್ಕೋಸ್ಕರ ಅನ್ನದಾನ ಮಾಡಿದಲ್ಲಿ ಆ ಅನ್ನದಿಂದ ಆತ್ಮ ತೃಪ್ತಿಯಾದ ಕಾರಣ ಸ್ವರ್ಗಾದಿ ಸಂಪದವು ಸಂಪ್ರಾಪ್ತಿಸುವದು.

ಅನ್ನದಾನಾದಿಗಳಲ್ಲಿ ಸಾಧು ಸತ್ಪುರುಷ ಸಜ್ಜನ ಶಿವಯೋಗಿಗಳಿಗೆ ನೀಡಿದ್ದು ಅತಿ ವಿಶೇಷ ಫಲವಾಗುವದು ಹೇಗೆಂದರೆ, ಮಡಿಕಟ್ಟು ಭೂಮಿಯಲ್ಲಿ ಬಿತ್ತಿದರೆ, ಒಂದು ಕೂರಿಗೆಗೆ ಐವತ್ತು ಅರುವತ್ತು ಎಪ್ಪತ್ತು ಹೇರು ಧಾನ್ಯವು ಬೆಳೆಯಾಗುವದು ಅವೇ ಬೀಜಗಳನ್ನು ಕನಿಷ್ಠ ಮೊರಡಿ ಭೂಮಿಗಳಲ್ಲಿ ಬಿತ್ತಿದರೆ, ಒಂದು ಕೂರಿಗೆ ಭೂಮಿಯಲ್ಲಿ ಒಂದು ಹೇರು ಆಗಬೇಕಾದರೆ, ದುರ್ಲಭವು ಆದ್ದರಿಂದ ಶಿವಯೋಗಿಗಳಿಗೆ ನೀಡಿದ್ದು ಒಂದಕ್ಕೆ ಕೋಟ್ಯಾವಧಿ ವಿಶೇಷ ಫಲವಾಗುವದು. ಸಾಕ್ಷಿ "ಕ್ಷೀರಕುಂಭ ಸಹಸ್ರಾಣಿ ಘೃತಕುಂಭ ಶತೈರಪಿ। ಶಿವಯೋಗಿ ಭಿಕ್ಷಾಮಾತ್ರೇಣ। ಕೋಟಿಯಜ್ಞಃ ಫಲಂ ಭವೇತ್ " ಎಂದುಂಟಾಗಿ, ಮತ್ತೂ "ವಿಪ್ರಕೋಟಿ ಸಹಸ್ರೇಭ್ಯೋ ಏಕಘಂಟಾ ಮಹಾಧ್ವನಿಃ ಮದ್ಭಕ್ತಾ ಏಪ ಭುಂಜಂತಿ ಕಬಳಿ ಕಬಳೀ ವರಾನನೆ " ಎಂದು ಆಗಮ ಪ್ರಮಾಣ ಉಂಟಾಗಿ ಅನುವರಿತು ಮಾಡಿದುದೇ ಸತ್ಪುಣ್ಯವೆನಿಸುವದು.

ಜ್ಞಾನ ಶೂನ್ಯನಾಗಿ ವಿಚಾರವಿಲ್ಲದೆ, ಪಾತ್ರಾಪಾತ್ರವನರಿಯದೆ, ಕೊಡಬೇಕು ಕೊಡಬೇಕು ಎಂಬ ಭ್ರಾಂತಿ ತಲೆಗೇರಿ ವಿವೇಕವಿಲ್ಲದೆ, ಅತಿಯಾಗಿ ಕೊಡಲಾಗದು. "ಅತಿದಾನೇನ ಹತಃಕರ್ಣಃ"ಎಂದ ಹಾಗೆ ವ್ಯರ್ಥ ಕೊಟ್ಟು ಕೆಡಬಾರದು ಸಾಕ್ಷಿ, ವೃತ್ತ 'ಕೊಡುವರ್ತನ್ನವರಾದೊಡಂ ತನಗೆ ತಾಂ ಕೊಟ್ಟರ್ಥಮಂ ಕೊಂಡು ನೂರ್ಮಡಿಯಾಗಲ್ ಸುಜನೈಕ ವತ್ಸಲತೆಯಿಂ ಮಿಕ್ಕಾದವರ್ಕೊಟ್ಟೊಡಂ। ಕೊಡರಾ ಕೂಂಡನಿತರ್ಥಮಂ ಬರಿದೆ ಲೋಗರಿಗಕ್ಕಟಾ ಕೊಟ್ಟವರ್ ಕೆಡುವರ್ ಭಕ್ತರಿಗಿತ್ತವರು ಬದುಕುವರು ನೋಡಾ ಶಿವಾವಲ್ಲಭಾ" ಎಂದು ಮಾಯಿದೇವ ಪ್ರಭುಗಳು ಹೇಳಿದ್ದಾರೆ. ಅದು ಕಾರಣ ಪಾತ್ರಾಪಾತ್ರ ವಿಚಾರಿಸಿ ಸತ್ಪಾತ್ರವರಿತು ಸತ್ಕಾರ ಮಾಡಬೇಕು

ಸಂಪತ್ತೆಂಬುದು ಶಾಶ್ವತವೆಂದು ಲೌಕಿಕರು ನಂಬಿರುತ್ತಾರೆ. ಅದು ಶಾಶ್ವತವಲ್ಲ ಸಾಕ್ಷಿ "ಅಸ್ಥಿರಂ ಜೀವಿತೇ ಲೋಕೆ। ಅಸ್ಥಿರಂ ಧನಯವ್ವನಂ ಅಸ್ಥಿರಂ ಪುತ್ರದಾರಾಚ। ಧರ್ಮ ಕೀರ್ತಿದ್ವಯಂ ಸ್ಥಿರಂ॥ ಎಂಬುದಾಗಿ ಸಂಪತ್ತು ಮೊದಲಾದವೆಲ್ಲ ಮಿಂಚಿನಂತೆ ಅಶಾಸ್ವಿತವಾದ ಕಾರಣ ತನಗೆ ಸಾಮರ್ಥ್ಯವಿರುವದರೊಳಗೆ ಜ್ಞಾನ ಕಾಯನಾಗಿ ತಮ್ಮ ಕಯ್ಯಿಂದಾದಷ್ಟು ಯತ್ನ ಮಾಡಿ, ಧರ್ಮ ಕೀರ್ತಿಗಳ ಸಂಗ್ರಹವನ್ನು ಮಾಡಿಕೊಳ್ಳಬೇಕು

ಪುಣ್ಯವೆಂಬದು ಒಂದು ಜನ್ಮದಲ್ಲಿ ಸ್ವಲ್ಪ ಬೀಜವಾದರೆ, ಅದು ಜನ್ಮ ಜನ್ಮಾಂತರಗಳಲ್ಲಿ ಬೆಳೆಯುತ್ತ ಇದ್ದು ಅಧಿಕಾಧಿಕವಾಗಿ ಇಹಪರಲೋಕಂಗಳಲ್ಲಿ ಸದಾ ಸುಖವನ್ನು ಕೊಡುತ್ತಿಹುದು ಮತ್ತು ಕೀರ್ತಿಯಾದರೂ ಪುಣ್ಯ ವರ್ಧನವಾದ ಹಾಗೆ ಬೆಳೆಯುತ್ತ ಸ್ವರ್ಗಮರ್ತ್ಯಂಗಳಲ್ಲಿಯೂ ವಿಸ್ತಾರವಾಗಿ ಹಬ್ಬುತ್ತ ಜನ್ಮ ಜನ್ಮಾಂತರಂಗಳಲ್ಲಿಯೂ ಸ್ಥಿರವಾಗಿದ್ದು ಬ್ರಹ್ಮೇಂದ್ರಾದಿಗಳಿಂದಲಾದರೂ ಮರ್ಯಾದೆಯನ್ನು ಮಾಡಿಸುವದು ಸತ್ಕೀರ್ತಿ ಇಲ್ಲದ ಮನುಷ್ಯನು ಪ್ರಕಾಶಕ್ಕೆ ಬಾರನು. ಪ್ರಕಾಶಹೀನವಾದ ರತ್ನವಾದರೂ ಪಾಷಾಣವೆನಿಸಿಕೊಂಡು ಹೇಗಿರುತ್ತಿರುವದೋ ಹಾಗೆ ಈ ಲೋಕದಲ್ಲಿ ಕೀರ್ತಿ ಇಲ್ಲದ ಮನುಷ್ಯನು ಪ್ರಕಾಶ ಹೀನನಾಗಿ ಜೀವದಿಂದಿದ್ದರೂ ಮೃತ ಘಟ ಜೀವಿಯಾಗಿ ಶವದಂತೆ ಉಪೇಕ್ಷೆಯಾಗಿ ಅಪ್ರಯೋಜಕನಾಗಿರ್ಪನು.

ಲೌಕಿಕರೆಲ್ಲರು ಪುಣ್ಯ ಸಂಗ್ರಹದಲ್ಲಿಯೂ ಸತ್ಕೀರ್ತಿಯಲ್ಲಿಯೂ ಅತ್ಯಂತ ಪ್ರೇಮವುಳ್ಳವರಾಗಿ ಇದರ ವಿಷಯದಲ್ಲಿ ತನ್ನ ಅರ್ಥ ಪ್ರಾಣಾಭಿಮಾನಂಗಳಲ್ಲಾದರೂ ಅಣು ಮಾತ್ರ ಆಶೆಯನ್ನಿಡದೆ ಪರೋಪಕಾರ ವಿಷಯದಲ್ಲಿ ಖರ್ಚು ಮಾಡಬೇಕು ಯಾಕಂದರೆ ಸಾಕ್ಷಿ "ವಿತ್ತಂಚ ರಾಜ ವಿತ್ತಂಚ ಕಾಮಿನೀ ಕಾಮುಕಸ್ತಥಾ॥ ಪೃಥ್ವೀ ವೀರಭೋಜಂಚ" ಎಂದುಂಟಾಗಿ ದ್ರವ್ಯವು ಕಾಮಿನಿಯು ಭೂಮಿಯು ತನ್ನನ್ನು ಬಿಟ್ಟು ಹೋಗುವವು ತನ್ನ ಶರೀರವಾದರೂ ನಾಶ ಹೊಂದುವದು. ಅದು ಕಾರಣ ಇವುಗಳು ವ್ಯರ್ಥವಾಗಿ ಕೆಟ್ಟು ಹೋಗುವದರಿಂದ ಅಸಾರ್ಥಕವಾಗಿರುವವು. ಕಾರಣ ಪರೋಪಕಾರ ವಿಷಯದಲ್ಲಿ ಈ ಪದಾರ್ಥಗಳನ್ನು ಸಲ್ಲಿಸಿ ಪುಣ್ಯ ಕೀರ್ತಿಯನ್ನು ಸಂಪಾದಿಸಿಕೊಳ್ಳಬೇಕು. ಇದರಿಂದ ಜನ್ಮ ಜನ್ಮಾಂತರಕ್ಕೂ ಸಕಲ ಸಂಪದವು ಸಮೃದ್ಧಿಯಾಗಿ ಬೆಳೆಯುತ್ತಾ ಇರುವದು.

ಮನುಷ್ಯರಾದವರೆಲ್ಲರೂ ಮುಂದೆ ಜನ್ಮಾಂತರಂಗಳಲ್ಲಿ ಮಹದೈಶ್ವರ್ಯವುಳ್ಳವರಾಗಬೇಕೆಂಬ ದೊಡ್ಡ ಬುದ್ಧಿಯುಳ್ಳವರಾಗಿ ಔದಾರ್ಯದಿಂದ ಉದಾರಿಗಳೆನಿಸಿಕೊಳ್ಳಬೇಕು. ಕೊಟ್ಟರೆ, ಹೋದೀತು, ಉಂಡರೆ ಕಡಿಮೆಯಾದೀತೆಂದು, ಲೋಭಗುಣದಿಂದ ತ್ಯಾಗ ಭೋಗಾದಿಗಳನ್ನು ಬಿಟ್ಟು ಸಣ್ಣ ಗುಣದಿಂದ ಲೋಭಿ ಎನಿಸಿಕೊಳ್ಳಬಾರದು

ಸಿಂಹನು ಉಪವಾಸದಿಂದಿದ್ದಾಗ್ಯಾದರೂ ಮದಹಸ್ತಿಯ ಕುಂಭ ಸ್ಥಲದ ಮಾಂಸವನ್ನೇ ಯತ್ನಿಸುವದಲ್ಲದೆ, ಕ್ಷುಧಾತುರನಾಗಿ ನೀಚ ಮೃಗಗಳ ಮಾಂಸ ವನ್ನು ಬಯಸಲಾರದು, ಮತ್ತು ಹುಲ್ಲು ಭಕ್ಷಣ ಮಾಡದು. ಈ ದೃಷ್ಟಾಂತದಂತೆ ಬಲ್ಲವರು ಯಾವ ರೀತಿಯಿಂದಲಾದರೂ ಧರ್ಮ ಸಂಗ್ರಹವನ್ನೇ ಯತ್ನಿಸಿ ಧನಕನಕ ಗೃಹ ಕ್ಷೇತ್ರ ಸ್ವಾಸ್ತಿ ವೃತ್ತಿ ಸತಿ ಸುತರಾಪ್ತುರಿಷ್ಟರು ಮೊದಲಾದ ಲೌಕಿಕ ಸಂಪತ್ತನ್ನು ಸಮೃದ್ಧಿಯಾಗಿ ಪಡೆದು ಎಂದಿಗೂ ಕೊರತೆ ಯಾಗದಂತೆ ಸಗಲ ಸುಖಭೋಗಂಗಳನ್ನು ಜನ್ಮ ಜನ್ಮಾಂತರದಲ್ಲಿಯೂ ವಿತರಣದೊಡನೆ ಭೋಗಿಸಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರಾಗಬೇಕಲ್ಲದೆ ನೊಣಗಳಂತೆ ಆಗಿನ ಪೂರ್ತಿಗೆ ಸುಖವಾದರ ಸಾಕು ಮುಂದಿನ ಸುಖವ ನಾರುಬಲ್ಲರೆಂದು ಅಲ್ಪ ಬುದ್ಧಿಯಿಂದ ಅಲ್ಪ ಸಂತೋಷಿಗಳಾಗಿ ಸದಾ ದುಃಖಿ ಗಳಾಗಬಾರದು

ಇರಿವೆಗಳು ಅಲ್ಪಾಯುಷ್ಯವುಳ್ಳ ಪ್ರಾಣಿಗಳು ಮತ್ತು ಅಲ್ಪ ತ್ರಾಣಿಗಳು ಆದಾಗ್ಯೂ ಅವುಗಳು ಆರು ತಿಂಗಳ ವರೆಗೂ ಸಾಕಾಗುಷ್ಟು ಧಾನ್ಯ ಸಂಗ್ರಹ ವನ್ನು ಮಾಡಿಕೊಂಡಿರುವವು ಆದರೆ ನೊಣಗಳಿಗೆ ಇರಿವೆಗಳಿಗಿಂತಲು ಆಯುಷ್ಯವು ತ್ರಾಣವು ಮತ್ತು ರೆಕ್ಕೆಗಳು ಇದ್ದಾಗ್ಯಾದರೂ ಆಲಸ್ಯದಿಂದ ಒಂದು ದಿನದ ಸಂಗ್ರಹವನ್ನಾದರೂ ಮಾಡಿಕೊಳ್ಳದೆ, ಸಿಕ್ಕಷ್ಟರ ಪೂರ್ತಿಗೆ ಸಂತೋಷವಾಗಿ ಹಸಿವೆಯಾದಾಗಲೆ ಆಹಾರವನ್ನು ಹುಡುಕುತ್ತ ಹೋದರೆ, ಅಡಚಣಿಯ ಕಾಲಕ್ಕೆ ಆಹಾರ ಸಿಕ್ಕದೆ ಹೋಗಿ ಪಶ್ಚಾತ್ತಾಪ ಹೊಂದುವವು.

ಪುಣ್ಯಾಪೇಕ್ಷಿತರಾದ ಪರೋಪಕಾರಿಗಳೆನಿಪ ಧರ್ಮಿಷ್ಠರು ಅಲ್ಲಲ್ಲಿಗೆ ಅನ್ನ ಕ್ಷೇತ್ರಗಳನ್ನ ಅರವಟ್ಟಿಗೆಗಳನ್ನ ಧರ್ಮಶಾಲೆಗಳನ್ನು ಪುಣ್ಯ ವನಗಳನ್ನು ಪುಷ್ಪವಾಟಿಯನ್ನು ಶಿವಾಲಯಗಳನ್ನು ಮಠ ಮಾನ್ಯಗಳನ್ನು ವಾಪೀಕೂಪ ತಟಾಕಾದಿಗಳನ್ನು ಮಾಡಿ ದಿವ್ಯ ತೋಟ ಮೊದಲಾದವುಗಳ ದಾನ, ಇಕ್ಷುದಂಡ ಗೋದಾನ, ಭೂದಾನ, ಕನ್ಯಾದಾನ, ಹಿರಣ್ಯದಾನ, ಅನ್ನೋದಕದಾನ, ವಸ್ತ್ರದಾನ, ಮೌಕ್ತಿಕಾದಿ ನವರತ್ನದಾನ, ಆಶ್ವಅಂದಣ ಛತ್ರಚಾಮರ ರಥಪತಾಕಾದಿ ರಾಜ ವೈಭವದಾನ, ಅಶ್ವಗಜಾದಿವಾಹನದಾನ, ಉಭಯಮುಖೀದಾನ, ಕಾಳಾಮುಖೀದಾನ, ತಿಲತಂಡುಲಾದಿ ಸಕಲ ಧಾನ್ಯ ದಾನ, ಮಹಿಷದಾನ ಈ ಪ್ರಕಾರವಾದ ದಾನಗಳಲ್ಲಿ ಷೋಡಶ ಮಹಾದಾನ ಮೊದಲಾದ ಅನಂತ ಪ್ರಕಾರದ ದಾನ ಧರ್ಮಗಳನ್ನು ತ್ರಿಕರಣ ಶುದ್ಧವಾಗಿ ಶಿವಾರ್ಪಣವೆಂದು ಕೊಟ್ಟು ಸಕಲ ಸುಖ ಭೋಗಂಗಳೆನಿಪ ಮಹದೈಶ್ವರ್ಯಗಳನ್ನು ಪಡೆಯುತ್ತಾ ಇರುವರು.

ದ್ರವ್ಯ ಶಕ್ತಿ ಇಲ್ಲದವರಾದರೂ ತಾವು ಭೋಗಿಸುವ ಪದಾರ್ಥಗಳಲ್ಲಿ ಅಷ್ಟರೊಳಗಷ್ಟನಾದರೂ ಕೊಟ್ಟು ಸತ್ಫಲವನ್ನು ಪಡೆಯಬೇಕು. ಮತ್ತು

ಜಗದೇಕ ದೈವನಾದ ಪರಶಿವಮೂರ್ತಿಯಂ ಕುರಿತು ಪೂಜಾ ಸ್ತೋತ್ರ ನಮಸ್ಕಾರಾದಿಗಳಿಂದ ಸದ್ವ್ರತವನ್ನಾಚರಿಸಿ ಸತ್ಯಶೀಲರಾಗಿ ಆಚರಿಸುತ್ತ ಧರ್ಮನಿಷ್ಠರಾಗಿ ಪ್ರಾಣಿ ಮಾತ್ರಾದಿಗಳಾವತ್ತರಲ್ಲಿ ಕರುಣವುಳ್ಳಾತರಾಗಿ, ದ್ರವ್ಯಶಕ್ತಿ ಇಲ್ಲದವರಾದರೂ ಕಾಯಶಕ್ತಿ ಬುದ್ಧಿಶಕ್ತಿಗಳಿಂದ ಗುರುಸೇವೆ ಲಿಂಗಪೂಜ ಜಂಗಮಭಕ್ತಿಗಳಿಂದ ಪುಣ್ಯವಂತರಾಗಬೇಕು.

ಒಂದು ಜನ್ಮದಲ್ಲಿ ವಿವೇಕವು ತಲೆದೋರಿ ಜ್ಞಾನೋದಯವಾದರೆ, ಆ ಜನ್ಮದಲ್ಲಿ ಆಯುಷ್ಯವಿರುವ ವರೆಗೂ ಅನೇಕ ಯತ್ನದಿಂದ ದಿನ ದಿನಕ್ಕೂ ತಮ್ಮ ಕೈಯ್ಯಿಂದಲಾದಷ್ಟು ಪುಣ್ಯ ಸಂಗ್ರಹವನ್ನು ಮಾಡುತ್ತ ಹೋಗಬೇಕು. ಪುಣ್ಯವು ಎಷ್ಟು ದೊರೆತರೂ ಸಾಕೆನ್ನದೆ, ಸಹಸ್ರಮುಖದಿಂದಲಾದರೂ ಆಯುಷ್ಯವಿರುವ ವರೆಗೂ ಪುಣ್ಯದ ಬೆಳವಿಗೆಯನ್ನೇ ಮಾಡುತ್ತಾ ಹೋಗಲು ಸುಕೃತವೆಂಬುದು ತನಗ ಪರ್ವತೋಪಮಾನವಾಗಿ ಸಂಭವಿಸಿದಾಗ್ಯಾದರೂ ಅದು ಇಷ್ಟೇ ಸಾಕೆನಲಾಗದು. ಮತ್ತೂ ಪುಣ್ಯವನ್ನೇ ಯತ್ನೈಸಬೇಕು. ಪಾಪವು ಅಣುಮಾತ್ರವಾದರೂ, ಅದನ್ನೆಲ್ಲ ಪರ್ವತೋಪಮಾನವಾಗಿ ಕಂಡು ಅಂಜುತ್ತಿರಬೇಕು. ಪಾಪ ಕಾರ್ಯಗಳನ್ನು ಸರ್ವಥಾ ಮಾಡಲಾಗದು.

ಇದು ಸತ್ಯವೆಂದು ಸರ್ವರೂ ಪ್ರತ್ಯಕ್ಷ ಪ್ರಮಾಣದಿಂದ ಕಂಡು ನಂಬುವದಕ್ಕೆ ಪಾಪ ಪುಣ್ಯಗಳೆರಡೂ ಫಲಗಳು ಸ್ಪಷ್ಟವಾಗಿ ತಿಳಿಯುವದಕ್ಕೆ ದೃಷ್ಟಾಂತವೇನಂದರೆ, ಈ ಲೋಕದಲ್ಲಿ ಈಗ ನೀವೆಲ್ಲರೂ ನೋಡುತ್ತಿರುವಲ್ಲಿ, ಸಕಲ ಸಂಪತ್ತನ್ನು ಭೋಗಿಸುತ್ತ ಅಷ್ಟಮಹದೈಶ್ವರ್ಯ ಸಂಪನ್ನರಾದ ರಾಜರುಗಳು ಮಂತ್ರಿಗಳು ಕಾರಭಾರಿಗಳು ಮುಂತಾದ ಅನಂತ ಪ್ರಕಾರದ ದೊಡ್ಡ ದೊಡ್ಡ ಪದವಿಗಳುಳ್ಳ ಅನಂತ ಶ್ರೀಮಂತರುಗಳೆಲ್ಲರು ಪೂರ್ವ ಜನ್ಮದಲ್ಲಿ ಸಂಗ್ರಹಿಸಿಕೊಂಡಿರ್ದ ಘನ ಪುಣ್ಯ ನಿಧಿಗಳ ತಾರತಮ್ಯವಿದ್ದಂತೆ ಈಗ ಸಮಸ್ತ ಜನರ ಕಣ್ಣೆದುರಿನಲ್ಲಿ ಮನೋಹರವಾದ ವಿಚಿತ್ರ ಭೋಗದೊಡನೆ ಸುಖದಿಂದಿರ್ಪರು.

ಮಧ್ಯಮ ಪ್ರಕಾರದಲ್ಲಾದರೂ ತಕ್ಕ ಮಟ್ಟಿಗೆ ಸುಕೃತ ಸಂಪನ್ನರಾದ ಪುಣ್ಯಾತ್ಮರುಗಳು ಬಹುಮಾನದಿಂದ ಗಾಂಭೀರ್ಯ ಗುಣದಿಂದ ಲೋಕರಂಜನೆಯಾದ ಮಹದೈಶ್ವರ್ಯ ಯುತರಾಗಿ ಧನಧಾನ್ಯ ವಸ್ತ್ರವಾಹನ ಗೃಹ ಕ್ಷೇತ್ರ ಪುತ್ರ ಪೌತ್ರ ಆಪ್ತರಿಷ್ಟರು ದಾಸೀಭೃತ್ಯ ಗೋಪಾಲರೊಡನೆ ಕೂಡಿ ಅಲ್ಪ ಸ್ವಲ್ಪ ಭೂಪತಿಗಳೆನಿಸಿಕೊಂಡು ಸಕಲ ಸುಖಭೋಗಿಗಳಾಗಿರುತ್ತಿಹರು.

ಸಾಮಾನ್ಯತರವಾಗಿ ತಕ್ಕಷ್ಟಾದರೂ ಪುಣ್ಯ ಸಂಗ್ರಹವುಳ್ಳವರುಗಳು ಮರ್ಯಾದೆಯುಳ್ಳವರಾಗಿ ದೊಡ್ಡ ಮನುಷ್ಯರೆನಿಸಿಕೊಂಡು ಗೃಹಸ್ಥರೊಳು ಮಾನ ಹೊಂದಿ ತಕ್ಕಷ್ಟಾದರೂ ಸ್ವಾಸ್ತಿ ವೃತ್ತಿ ದನಕರ ವಸ್ತು ವಾಹನ ಗೃಹ

ಕ್ಷೇತ್ರ ಧನಧಾನ್ಯಗಳುಳ್ಳವರಾಗಿ ಪುತ್ರ ಪೌತ್ರ ಬಂಧು ಬಾಂಧವರೆಲ್ಲರಿಗೂ ಪ್ರಿಯಂಕರರಾಗಿ ದಾಸೀ ಭೃತ್ಯ ಗೋಪಾಲರುಗಳಿಂದ ಓಲೈಸಿಕೊಳ್ಳುತ್ತ ಸದಾ ಸೌಖ್ಯಕರವಾದ ಸ್ರಕ್ಚಂದನ ವನಿತಾದ್ಯಷ್ಟಭೋಗವಿಲಾಸಂಗಳುಳ್ಳವರಾಗಿ ಪರಿಣಾಮದಿಂದಿರುತ್ತಿಹರು.

ಅಣುಮಾತ್ರವಾದರೂ ಸುಕೃತ ಸಂಗ್ರಹವಿಲ್ಲದವರು ಕೆಲವರುಂಟು. ಇಂಥವರು ಚಾಂಡಾಲಾದಿ ನೀಚ ಜಾತಿಯಲ್ಲಿ ಹುಟ್ಟಿ ಅನ್ನ ವಸ್ತ್ರ ಗೃಹ ಕ್ಷೇತ್ರ ಮಾನ ಮರ್ಯಾದೆಗಳನ್ನು ಕಾಣದೆ ಮಳೆ ಚಳಿ ಗಾಳಿ ಬಿಸಿಲುಗಳಲ್ಲಿ ಬಳಲುತ್ತ ಹಸಿವು ಬಾಯಾರಿಕೆಯಿಂದ ನೋಯುತ್ತ ಒಂದು ಕೈಯ್ಯಲ್ಲಿ ಭಿಕ್ಷಾನ್ನವನ್ನು ತಿರಿದುಂಬುವದಕ್ಕೋಸ್ಕರ ಒಂದು ಒಡಕ ಓಡನ್ನಾಗಲಿ ಅಥವಾ ಒಂದು ಪುಟ್ಟಿಯನ್ನಾಗಲಿ ಇಲ್ಲವೆ ಒಂದು ಹರಕು ಬಟ್ಟೆಯ ತುಂಡನ್ನಾಗಲಿ ತೆಗೆದುಕೊಂಡು ಕೈಯ್ಯಲ್ಲಿ ಕೋಲನ್ನು ಹಿಡಿದುಕೊಂಡು ಪುಣ್ಯವಂತರ ಮನೆಯ ಬಾಗಿಲಿಗೆ ಬಂದು ಹಲವು ಪ್ರಕಾರದ ದೀನ ಧ್ವನಿಯಿಂದ ಆ ಪುಣ್ಯವಂತರ ನಾಮವನುಚ್ಚರಿಸುತ್ತ "ಹೇ ಪುಣ್ಯಾತ್ಮರುಗಳಿರಾ, ಸುಕೃತ ಹೀನರಾದ ಮಹಾ ಪಾಪಿಗಳಾದ ನಮಗೆ ತುತ್ತು ಅನ್ನವನಿಕ್ಕಿರಿ"ಎಂದು ಹಲುಬುತ್ತಿರುವಲ್ಲಿ ದಯಾ ಹೀನರಾದ ಕೆಲವರು ಲೋಭಿಗಳು ಅವರ ಪಾಪವನ್ನು ಎತ್ತಿ ತೋರಿದಂತೆ, ಬೆಂದ ಹಣ್ಣನ್ನು ಕಂಬಿಯಲ್ಲಿ ಕೇಚಿದಂತೆ, ಹಂಗಿ ಹಗಿಸಿ, ಬೈದು ದೂಷಿಸುತ್ತ ಸ್ವಲ್ಪ ಅನ್ನವನ್ನು ಹಾಕುವರು, ಕೆಲವರು ನೂಕುವರು ಮತ್ತು ಸಕಲ ಜೀವ ದಯಾಪರಿಗಳಾದ ಪುಣ್ಯಾತ್ಮರುಗಳು ಕೃಪಾ ದೃಷ್ಟಿಯಿಂದ ನೋಡಿ ಆ ಪಾಪಿ ಗಳಿಗೆ ಕೈಯೆತ್ತಿ ಹಾಕಿದ ಧಾನ್ಯವನಾಗಲಿ ಅನ್ನವನಾಗಲಿ ಆ ಪಾಪಿಗಳು ಆದರಪೂರ್ವಕವಾಗಿ ತೆಗೆದುಕೊಂಡು ಆದರಿಂದ ಜನ್ಮವಿರುವ ವರೆಗೂ ಜೀವಿ ಸುತ್ತ ನಿತ್ಯದಲ್ಲೂ ಮನೆಮನೆದಪ್ಪದೆ, ಲಜ್ಜಾ ಹೀನರಾಗಿ ತಿರಿದುಂಬುತ್ತ ಹೀಗೆಯೇ ದುಃಖದಿಂದ ಕಾಲನ್ನು ಕಳೆಯುತ್ತಿರುವ ಅಸಂಖ್ಯ ಜನರನ್ನು ನೀವು ಕಣ್ಣಾರೆ ಕಾಣುತ್ತಿರುವಿರಿ. ಈ ಪ್ರಕಾರ ದುಃಖವನ್ನು ಭೋಗಿಸುವದು ಪಾಪದ ಫಲವಲ್ಲವೇ ?

ಕೆಲವು ವಿಚಾರ ಪರರಾದ ವಿವೇಕಿಗಳು ಇಂಥವರನ್ನು ನೋಡಿ ಅನ್ನು ವದೇನಂದರೆ ಇವರು ಪುಣ್ಯಹೀನರಾದುದರಿಂದ, ಈ ಗತಿಗೆ ಬಂದಿರುವರೆಂದು ತೋರಿಸುವರು. ಮತ್ತು ಪುಣ್ಯವುಳ್ಳವರು ವಾಸಿಸುವ ಮನೆಯು ಇಂದ್ರಭವನ ದಂತೆ ಬ್ರಹ್ಮಾಲಯದಂತೆ, ವಿಷ್ಣು ಲೋಕದಂತೆ, ಶಿವನ ಸಭೆಯಂತೆ, ಉತ್ತರೋತ್ತರ ಪುಣ್ಯವಿದ್ದ ಹಾಗೆ ಇರುತ್ತಿರುವವು.

ಕೆಲವು ಪುಣ್ಯವಂತರಲ್ಲಿ ಅವರವರ ಸಂಪತ್ತು ಕ್ರಮಾನುಸಾರವಾಗಿ ವಿಶೇಷವಾಗಿದ್ದು ಮೇಣೆ ಪಲ್ಲಕ್ಕಿ ರಥ ಕುದುರೆ ಆನೆಗಳು ಮೊದಲಾದ

ವಾಹನಗಳಿಂದಲೂ ರತ್ನ ಮೌಕ್ತಿಕಾದಿ ಚಿನ್ನ ಬೆಳ್ಳಿಯ ಆಭರಣಗಳಿಂದಲೂ ಛತ್ರ ಚಾಮರಾದಿ ವೈಭವಗಳಿಂದಲೂ ದಿವ್ಯ ಪೀತಾಂಬರ ಚೀನೀ ಚೀನಾಂಬರ ಪಟ್ಟೆ ಪಟ್ಟಾವಳಿ ತೋಪು ಶಕಲಾತಿ ಮುಂತಾದ ದಿವ್ಯ ದುಕೂಲಾದಿ ವಸ್ತ್ರಂಗಳಿಂದಲೂ ಹೊಗಳುವ ಭಟ್ಟಂಗಿಗಳಿಂದಲೂ, ಮಂಚ ಸುಪ್ಪತ್ತಿಗೆ ಮೊದಲಾದ ಹಾಸಿಕೆಯಿಂದಲೂ ಪುಷ್ಪಮಾಲ್ಯಗಳಿಂದಲೂ ಗಂಧದ್ರವ್ಯಗಳಿಂದಲೂ ಸದಾ ಸೌಖ್ಯತರವಾದ ಸುಖಭೋಗಂಗಳನುಳ್ಳ ಸದ್ಗುಣ ಶೀಲರಾದ ಅನುಕೂಲೆಯರಾದ ಸೌಂದರ್ಯ ಸುಲಕ್ಷಣ ಶರೀರಿಗಳಾದ ಸತಿ ಸುತರಿಂದಲೂ ಸಕಲ ಸಂಪತ್ತಿಗೂ ಸರಿ ಸಮಾನಸ್ತರಾದ ಬಂಧು ಬಾಂಧವರಿಂದಲೂ ರಂಜಿಸುತ್ತಿರುವ ಶ್ರೀಮಂತರನ್ನು ನೋಡಿ ಇವರು ಪೂರ್ವ ಜನ್ಮದಲ್ಲಿ ಅನಂತ ಪ್ರಕಾರವಾದ ಸುಕೃತ ಸಂಪಾದನೆಯನ್ನು ಮಾಡಿದವರು, ಆ ಪುಣ್ಯವೇ ಬಲಿದು ಅಷ್ಟಮಹದೈಶ್ವರ್ಯವಾಗಿದೆ, ಈ ಜನ್ಮದಲ್ಲಿ ಪುಣ್ಯ ಕಾರ್ಯಗಳನ್ನು ಮಾಡುತ್ತಿರುವದರಿಂದ, ಇವರು ಜನ್ಮ ಜನ್ಮಾಂತರದಿಂದಲೂ ಪುಣ್ಯಶಾಲಿಗಳು ಎಂದು ಪ್ರತ್ಯಕ್ಷವಾಗಿ ಕಾಣಬರುತ್ತಿಹುದೆಂಬುದನ್ನು ಬಲ್ಲವರು ಪರೀಕ್ಷಿಸುವರು.

"ಕ್ಷೇತ್ರವರಿತು ಬೀಜವನ್ನು ಬಿತ್ತಬೇಕು, ಪಾತ್ರವರಿತು ಧರ್ಮವನ್ನು ಕೊಡಬೇಕು" ಎಂಬ ನೀತಿಯುಂಟಾಗಿ, ಹ್ಯಾಗೆ ಉತ್ತಮ ಭೂಮಿಯಲ್ಲಿ ಬೀಜವನ್ನು ಬಿತ್ತಿದರೆ, ಒಂದಕ್ಕೆ ಸಹಸ್ರಾವಧಿಯಾಗಿ ಫಲಿಸುವದೋ ಹಾಗೆ ಸತ್ಯ ಸದಾಚಾರಿಗಳಿಗೆ ಅನುವರಿತು ಬಂದ ಬರವನ್ನು ನಿಂದ ನಿಲವನ್ನು ತಿಳಿದು ಅವರವರ ಯೋಗ್ಯತೆಗೆ ಸರಿಯಾಗಿ ಅನ್ನ ಪಾನಾದಿ ಸಕಲ ಲೋಕೋಪಚಾರಗಳನ್ನು ಸದ್ಭಕ್ತಿಯಿಂದ ಮಾಡಿ ವಸ್ತ್ರ ಭೂಷಣಾದಿಗಳಿಂದ ಸತ್ಕರಿಸಲು ಅನಂತ ಪ್ರಕಾರದ ಫಲವು ಸಂಪ್ರಾಪ್ತಿಸುವದು. ಸಾಕ್ಷಿ "ಶಿವಯೋಗೀ ಭಿಕ್ಷಾಮಾತ್ರೇಣ ಕೋಟಿಯಜ್ಞಫಲಂ ಭವೇತ್" ಎಂದು ವೇದಾಗಮಂಗಳು ಸಾರುತ್ತಿವೆ. ಮತ್ತು "ದಂಡ ಕ್ಷೀರದ್ವಯೋರ್ಹಸ್ತಂ ಜಂಗಮಂ ಭಕ್ತಿ ಮಂದಿರಂ ಅತಿಭಕ್ತಿ ಲಿಂಗ ಸಂತುಷ್ಟಂ ಉಪಹಾಸಂ ಯಮದಂಡನಂ" ಮತ್ತು "ಜಂಗಮಂ ಜಂಗಮಶ್ಚೈವ ಜಗನ್ನಾರಾಯಣೋದ್ಭವಃ" ಎಂಬ ಶಿವಾಗಮಪ್ರಮಾಣವಿರಲು ಲೌಕಿಕರೆಲ್ಲರೂ ತಿಳಿಯತಕ್ಕದ್ದೇನಂದರೆ, "ಜಂಗಮಂ ಜಗದಾರಾಧ್ಯಃ ಜಂಗಮಂ ಜಗತ್ಪತಿಃ ಜಂಗಮಂ ಜಗತ್ಪೂಜ್ಯಃ ಜಗತ್ಪಾವನ ಜಂಗಮಃ" ಮತ್ತು "ಭೂ ರುದ್ರೋ ಜಂಗಮಾಸ್ತಥಾ" ಎಂಬ ವಾಕ್ಯ ಪ್ರಮಾಣಂಗಳಿರಲು ಜಂಗಮದೇವರು ಭಿಕ್ಷಕ್ಕೆ ಬಂದಲ್ಲಿ ಎಲ್ಲರಂತೆ ಇವರು ಯಾಚಕರೆಂದು ತಿಳಿಯದೆ, ಶಿವನ ಸದ್ರೂಪವೆ ಗುರುವಾಗಿ ಚಿದ್ರೂಪವೇ ಲಿಂಗವಾಗಿ ಆನಂದರೂಪವೇ ಜಂಗಮವಾಗಿ ಸಚ್ಚಿದಾನಂದೈಕ ಸ್ವರೂಪವಾದ ಪರಶಿವಮೂರ್ತಿಯು ನಿಜ ಲೀಲೆಯೋ ಜಂಗಮವೆಂದು ಕಂಡು ಭಾವಿಸಿ ಭಯ ಭಕ್ತಿ ಕಿಂಕುರ್ವಾಣದಿಂದ ಸತ್ಕರಿಸುವಲ್ಲಿ ಒಡೆಯಗೋಡವೆಯನೊಪ್ಪಿಸುವೆನೆಂದು ತನು ಮನ

ಧನಂಗಳಲ್ಲಿ ವಂಚನೆ ಇಲ್ಲದೆ ಅಂಗ ಅಷ್ಟಸ್ಥಾನ ಸದ್ಭಾವಂಗಳಿಂದ ಹಾಲುಕ್ಕಿ ಮೇಲುವರಿದಂತೆ ಗುರುಭಕ್ತ್ಯಾತುರನಾಗಿ ಗುರುಸೇವೆಯನ್ನು, ಮನದಲ್ಲಿ ಲಿಂಗವನ್ನು, ಸಂಬಂಧ ಮಾಡಿಕೊಂಡು ಮನೋವಾಂಛೆಯನ್ನು ತೀರಿಸಿ ಸಂತೃಪ್ತಿಬಡಿಸಿ, ಪ್ರಾಣಜ್ಞಾನದಲ್ಲಿ ಜಂಗಮದ ಸಂಬಂಧವ ಮಾಡಿಕೊಂಡು ಪರಮಾನ್ನಪಾಯಸಂಗಳಿಂದ ಸಂತೃಪ್ತಿಯಂ ಮಾಡಿ ಪರಮಾನಂದ ಪ್ರಸಾದವಂ ಪಡೆದನುಭವಿಸುತ್ತಿರುವ ನಿರ್ವಂಚಕ ಸದ್ಭಕ್ತನ ಸುಕೃತವಂ ಗಣನೆಗೆ ತಂದು ಬರೆಯಬೇಕಾದರೆ ಬ್ರಹ್ಮನಾಯುಷ್ಯ ಸಾಲದು, ಈತನ ಪುಣ್ಯಕ್ಕೆ ಸರಿಯಾಗಿ ಫಲವನ್ನು ಕೊಡಬೇಕಾದರೆ, ಹದಿನಾಲ್ಕು ಲೋಕಂಗಳ ಸಂಪತ್ತೆಲ್ಲವನ್ನು ಕೊಟ್ಟರೂ ತೀರದು. ಆದು ಕಾರಣ ಶಿವನು ಸದ್ಭಕ್ತರನ್ನು ತನ್ನೊಳಗೇಕಾರ್ಥವ ಮಾಡಿಕೊಂಡು ಶಿವೈಕ್ಯಸಂಪದವೆಂಬ ನಿಜಮೋಕ್ಷವನ್ನು ಕೊಡುತ್ತಿಹನು

ಜಂಗಮ ಭಕ್ತಿಯಲ್ಲಿ ದೃಢಾಭಿಮಾನಿಯಾಗಿ ನಿರ್ವಂಚಕ ಸದ್ಭಕ್ತನಾಗಬೇಕಾದರೆ, ಗುರು ಮಾರ್ಗಾಚಾರದಿಂದಲ್ಲದೆ, ಲೌಕಿಕರಾದ ಭಿನ್ನ ಜ್ಞಾನಿಗಳಿಗೆ ಸಿದ್ಧಿಸದಾಗಿ, ಲೌಕಿಕರು ಭಿನ್ನವಿಟ್ಟುಕೊಂಡಾದರೂ ಜಂಗಮವೇ ಶಿವರೂಪವೆಂದು, ಪೂಜಾಸ್ತೋತ್ರವಂದನಾದಿಗಳಿಂದ ಸತ್ಕರಿಸಲು ಚತುರ್ವಿಧ ಫಲಪದಗಳನ್ನು ಪಡೆವರು ಇದಲ್ಲದೆ ಶಿವಯೋಗಿಗಳಿಗೆ ಭಕ್ತಿ ಭಿಕ್ಷವ ನೀಡಿ ನಮಸ್ಕರಿಸಿದರೆ, ಕೋಟಿ ಯಜ್ಞದ ಫಲವು ಪ್ರಾಪ್ತಿಸುವದು. ಇದಕ್ಕೆ ವ್ಯಾಸೋಕ್ತ ಸ್ಕಂದ ಪುರಾಣದಲ್ಲಿ ಮತ್ತು ಬ್ರಹ್ಮೋತ್ತರ ಖಂಡದಲ್ಲಿ ಹೇಳಿದ ವೃಷಭ ಯೋಗೀಶ್ವರನ ಇತಿಹಾಸವೇ ದೃಷ್ಟಾಂತವು ಮತ್ತು ಸಕಲಾಗಮಂಗಳಲ್ಲಿಯೂ ಸಾಕ್ಷಿಯುಂಟು.

ಇಂದ್ರಿಯಾರ್ಥವಾಗಿ ಮತ್ತು ವ್ಯಸನ ವಿಷಯಾದಿಗಳಿಗೋಸ್ಕರವಾಗಿ ಖರ್ಚು ಮಾಡಿದ ದ್ರವ್ಯವು ಅಪಾತ್ರವೆನಿಸುತ್ತದೆ. ಆದಾಗ್ಯೂ ಲೌಕಿಕರು ಇವುಗಳ ವಿಷಯವಾಗಿ ಲೋಭಗುಣವನ್ನಾದರೂ ಬಿಟ್ಟು ಖರ್ಚು ಮಾಡುತ್ತಾರೆ ಆದರೆ ಧರ್ಮ ನಿಮಿತ್ತ್ಯವಾಗಿ ಅಣುವಾದರೂ ಕೊಡಲಾರರು. ಸಾಕ್ಷಿ 'ಇಂದ್ರಿಯಾರ್ಥಂ ಪ್ರಶಂಸಾರ್ಥಂ ದೀಯತೆ ದಾನತತ್ಪರಃ। ಧರ್ಮಾರ್ಥಮಣುಮಾತ್ರಂಚ । ತದ್ದಾನ ಮರಣೋಪಮಾ॥ ಎಂದುಂಟಾಗಿ ಅಪಾತ್ರಕ್ಕೆ ಕೊಡುವದಕ್ಕೆ ಹಿಂಜರಿಯುವದಿಲ್ಲ. ಸತ್ಪಾತ್ರಕ್ಕೆ ಮಾತ್ರ ಕೈ ಏಳದು ದುಷ್ಕರ್ಮಿಗಳಾದ ಕಳವು ಹಾದರ ಹಿಂಸಾದಿ ಕರ್ಮಯುಕ್ತರಪ್ಪ ಪಂಚಮಹಾಪಾತಕರಲ್ಲಿ ಪುಣ್ಯವಣುವಾದರೂ ಇರುವದಿಲ್ಲ. ಇಂಥವರುಗಳಿಗೆ ಕೊಡುವ ದಾನವು ಅಪಾತ್ರವೆನಿಸುತ್ತದೆ ಆದಾಗ್ಯೂ ಅಂಥವರು ಅನ್ನಕಾಮಿಯಾಗಿ ಗೃಹಕ್ಕೆ ಬಂದಲ್ಲಿ ದಯಾಳುಗಳು ಧರ್ಮವನ್ನು ಬಿಡಬಾರದಾದ ಕಾರಣ "ನಾಸ್ತಿ" ಎನ್ನದೆ ಅಷ್ಟರೊಳಗಷ್ಟನಾದರೂ ಕೊಟ್ಟು ಕಳುಹಿಸಬೇಕು. ಅನ್ನ

ದಾನಕ್ಕೆ ಇಲ್ಲವೆನಲಾಗದು ಯಾತಕ್ಕಂದರೆ ಅದು ಆತ್ಮಾರ್ಪಣವಾಗುತ್ತದೆ. ಮತ್ತು "ಭಿಕ್ಷಾಂ ದೇಹಿ" ಎಂಬವರಿಗೆ "ನಾಸ್ತಿ" ಎನ್ನುವದು ಧರ್ಮಿಗಳ ಸ್ವಭಾವಕ್ಕೆ ಭಂಗವೆನಿಸುವದು

"ದೇಹಿ" ಎಂದವರಿಗೆ ಕೊಡದೆ ಧಿಃಕರಿಸುವದರಿಂದ ಕಷ್ಟ ಜಾತಿಯ ಜನ್ಮದಲ್ಲಿ ಜನಿಸುವರು. ಧರ್ಮವನರಿಯದ ಕಾರಣ ದಾರಿದ್ರ್ಯದೋಷಿಗಳಾಗುವರು. ಶಿವನಿಷ್ಠೆ ಶಿವಾರ್ಚನೆ ಶಿವಭಕ್ತಿ ಶಿವಾರ್ಪಣ ಶಿವಮಂತ್ರ ಸ್ಮರಣಾದಿ ಸದ್ಭಕ್ತಿಯನರಿಯದ ಕಾರಣ ದಾರಿದ್ರ್ಯ ದೋಷಿಗಳಾಗುವರು, ಕುರುಪಿಗಳಾಗುವರು, ಮತ್ತು ಖಲರಾಗಿ, ದುರ್ಜನರಾಗಿ ನೀತಿಹೀನರಾಗಿ, ಅಪಕೀರ್ತಿ ಪರರಾಗಿ ಅನ್ನ ವಸ್ತ್ರಾದಿಗಳಿಲ್ಲದೆ, ಮನೆ ಮನೆಯ ತಿರಿದುಂಬುತ್ತಿರುವದನ್ನು ಎಲ್ಲರೂ ಪ್ರತ್ಯಕ್ಷವಾಗಿ ಕಾಣುತ್ತಿರುವದರಿಂದ ಹಲವು ಪ್ರಯತ್ನಗಳಿಂದಲಾದರೂ ಧರ್ಮಸಂಗ್ರಹವನ್ನು ಪರೋಪಕಾರವನ್ನು ಮಾಡಬೇಕು.

ಭೂಮಿಯ ವಿಷಯದಲ್ಲಿ ಹ್ಯಾಗೆ ವೈಗಳ್ಳತನವನ್ನು ಬಿಟ್ಟು ಸಕಲ ವ್ಯವಸಾಯವನ್ನು ಮಾಡಬೇಕೆಂದು ಹೇಳಿಹುದೋ ಹಾಗೆ ಪರೋಪಕಾರವನ್ನು ಮಾಡುವಲ್ಲಿ ಕಡು ಲೋಭವನ್ನು ಬಿಟ್ಟು ಪುಣ್ಯ ಸಂಗ್ರಹವನ್ನು ಸಂಪಾದಿಸಬೇಕು.

ವ್ಯಾಪಾರಸ್ಥರಲ್ಲಿ ಒಬ್ಬನು ಸಕಲ ವ್ಯಾಪಾರಿಗಳು ದ್ರವ್ಯ ಸಂಗ್ರಹ ಮಾಡುವದನ್ನು ನೋಡಿ ತಾನೊಬ್ಬನೇ ಧನಿಕನಲ್ಲಿಗೆ ಹೋಗಿ ತನ್ನ ಮನೋವಾಂಛೆಯನ್ನು ತಿಳಿಸಿ ಅವನಿಂದ ಸ್ವಲ್ಪ ದ್ರವ್ಯವನ್ನು ತೆಗೆದುಕೊಂಡು ಬಂದು, ಲಾಭ ಚಿನ್ಹ ಕಾಣಿಸುವ ಕೆಲವು ಅತ್ಯುತ್ತಮ ಪದಾರ್ಥಗಳನ್ನು ಕೊಂಡು ತಂದು, ಆ ಪದಾರ್ಥಗಳ ಮೇಲಿನ ಮೋಹದಿಂದ ಅವುಗಳನ್ನು ವಿಕ್ರಯಿಸಲಾರದೆ, ತಾನು ತನ್ನ ಸತಿ ಸುತಾದಿಗಳು ಸಹಿತ ತಿಂದು ಬಿಟ್ಟಲ್ಲಿ ಮುಂದೆ ಉಪಜೀವನಕ್ಕೆ ಪದಾರ್ಥವಿಲ್ಲದಾಯಿತು ಮತ್ತು ವ್ಯಾಪಾರಕ್ಕೋಸುಗ ಹಣವನ್ನು ಕೊಟ್ಟವನ ಋಣದ ಭಾರವು ತಲೆಯ ಮೇಲೆ ಬಂದಿತು ಮತ್ತು ಯಾರಾದರು ಹಣ ಕೊಡದ ಹಾಗೆ ನಂಬಿಗೆ ಹೋಯಿತು ಇದರಿಂದ ಜನ್ಮವಿರುವರೆಗೂ ದಾರಿದ್ರ್ಯವನ್ನು ಭೋಗಿಸಬೇಕಾಯಿತು. ಹೀಗೆ ಮಾಡದ ತಾನು ಮೊದಲು ತಂದ ಹಣವನ್ನು ತಿನ್ನದೆ ವ್ಯಾಪಾರ ಮುಖಾಂತರದಿಂದ ಬೆಳಸುತ್ತ ಹೋಗಿ ಸ್ವಲ್ಪ ದಿವಸಗಳಲ್ಲಿ ಘನ ದ್ರವ್ಯವಾಗಿ ಬಲಿತ ಮೇಲೆ ತಾನುಂಡರೂ ಪರರಿಗೆ ಕೊಟ್ಟರೂ ಸವಿಯದಂತೆ ಮತ್ತೂ ವ್ಯಾಪಾರಕ್ಕೆ ಕೊಟ್ಟರೂ ಅಡಚಣಿಯಾಗದಂತಾಗಿ ಬಹು ಕಾಲ ಸಾಗುವದು.

ಇಲ್ಲಿ ಹೇಳಿದ ದೃಷ್ಟಾಂತದಂತೆ ಜಗದೀಶ್ವರನ ಕೃಪೆಯಿಂದ ಧನ ಧಾನ್ಯ ಸಂಪನ್ನನಾಗಿ ಜನಿಸಿದ ಮೇಲೆ ವಿವೇಕ ಹೀನನಾಗಿ ದ್ರವ್ಯದ ಮೇಲಣ

ಲೋಭ ಗುಣದಿಂದ ತಾನು ತನ್ನ ಸತಿ ಸುತಾದಿ ಬಂಧುಗಳೊಡಗೂಡಿ ಉಂಡುಟ್ಟು ಪರಿಣಾಮಿಸಿದರೆ, ಮುಂದಿನ ಜನ್ಮದಲ್ಲಿ ದ್ರವ್ಯಹೀನನಾಗಿ ಹುಟ್ಟಿ ದಾರಿದ್ರ್ಯ ದುಃಖವನ್ನನುಭವಿಸುತ್ತಿರುವಲ್ಲಿ, ಆ ದುಃಖವನ್ನು ಸೈರಿಸಲಾರದೆ, ವಿವೇಕ ತಲೆದೋರಿದಾಗ್ಯಾದರೂ ಅಪ್ರಯೋಜನವು. ಹ್ಯಾಗಂದರೆ, ಹಿಂದಿನ ಜನ್ಮದಲ್ಲಿ ಧರ್ಮ ಸಂಗ್ರಹವನ್ನು ಮಾಡಿಕೊಳ್ಳದ ಕಾರಣ ಈ ಜನ್ಮದಲ್ಲಿ ದರಿದ್ರನಾದೆನು ಈ ಜನ್ಮದಲ್ಲಾದರೂ ಪುಣ್ಯ ಸಂಗ್ರಹವನ್ನು ಮಾಡಿದರೆ, ಮುಂದಿನ ಜನ್ಮಕ್ಕೆ ಸುಖವಾದೀತು ಎಂಬುವದು ತಿಳಿದ ಕಾಲಕ್ಕೂ ಮಾಡಿ ಕೊಂಬುವ ಶಕ್ತಿ ಇಲ್ಲದಾಗಿ ಬಹು ಜನ್ಮಗಳನ್ನು ದರಿದ್ರತ್ವದಿಂದ ಕಳೆಯ ಬೇಕಾಗುತ್ತಿರುವದು

ಕೃಷಿಕ ಜನರಲ್ಲಿ ಓರ್ವನು, ಅನ್ನ ವಸ್ತ್ರಾದಿಗಳಿಲ್ಲದೆ, ನಿರಾಧಾರದಿಂದಿರುತ್ತಿರಲು ಕರುಣದಿಂದ ಒಬ್ಬ ದ್ರವ್ಯಾಧಿಕಾರಿಯು ಅವನಿಗೆ ಸ್ವಲ್ಪ ಭೂಮಿಯನ್ನು ಮತ್ತು ಬೀಜವನ್ನು ಕೊಟ್ಟು ಇವುಗಳಿಂದ ಉಪಜೀವಿಸೆಂದು ಹೇಳಿ ಕಳುಹಿಸಲು ಅವನೂ ಆ ಉತ್ತಮ ಪ್ರತಿಯ ಬೀಜವನ್ನು ಕಂಡು ಪ್ರೀತಿ ಹುಟ್ಟಿ ಜಿಹ್ವಾ ಲಂಪಟಿಯಾಗಿ ಆ ಬೀಜವನ್ನು ಭೂಮಿಯಲ್ಲಿ ಬಿತ್ತದೆ ಉಂಡು ಬಿಟ್ಟನು. ಆಗಿನ ಪೂರ್ತಿಗೆ ಮಾತ್ರ ಅತ್ಯಂತ ಸೌಖ್ಯವಾಗಿ ಸಮಾಧಾನವಾಯಿತು ಮುಂದೆ ಅನಂತ ಕಾಲ ಉಪಜೀವಿಸುವದಕ್ಕೆ ಆಧಾರ ತಪ್ಪಿ ಉಪವಾಸದಿಂದಿರುವದಕ್ಕೆ ಕಾರಣವಾಯಿತು ಇದರಂತೆ ಮಾಡದೆ, ಆ ಬೀಜವನ್ನು ಭೂಮಿಯಲ್ಲಿ ಬಿತ್ತಿದರೆ, ಒಮ್ಮನಕ್ಕೆ ಖಂಡುಗ ಬೆಳೆಯಾಗಿ ಮುಂದಿನ ವರ್ಷಕ್ಕೆ ಅನಂತ ಖಂಡುಗದ ಘನರಾಶಿಯಾಗುವದು

ಸುಕೃತಂಗಳ ಬೆಳೆಯನ್ನಾದರೂ ಬುದ್ಧಿವಂತರು ಇದರಂತೆ ಮಾಡಿಕೊಳ್ಳಬೇಕು ಹ್ಯಾಗಂದರೆ, ಪರಮೇಶ್ವರನು ತನಗೆ ತಕ್ಕಷ್ಟು ಸಂಪತ್ತನ್ನು ಕೊಟ್ಟು ಮರ್ತ್ಯಕ್ಕೆ ಕಳುಹಿಸಿದಲ್ಲಿ ಧನ ಧಾನ್ಯ ಸಂಪನ್ನನಾಗಿ ಜನಿಸಿದ ಮೇಲೆ ವಿವೇಕ ಹೀನನಾಗಿ ದ್ರವ್ಯದ ಮೇಲಣ ಲೋಭಗುಣದಿಂದ ತಾನು ತನ್ನ ಸತಿ ಸುತಾದಿ ಬಂಧುಗಳೊಡಗೂಡಿ, ಉಂಡುಟ್ಟು ಪರಿಣಾಮಿಸಿದರೆ, ಮುಂದಣ ಜನ್ಮದಲ್ಲಿ ದ್ರವ್ಯ ಹೀನನಾಗಿ ಹುಟ್ಟಿ ದಾರಿದ್ರ್ಯವನನುಭೋಗಿಸಬೇಕಾಗುವದು. ಅದು ಕಾರಣ ತನ್ನ ಸ್ವತಂತ್ರದಲ್ಲಿ ಸಂಪತ್ತಿರುವ ಕಾಲದಲ್ಲಿ ಅಷ್ಟಷ್ಟನ್ನಾದರೂ ಸತ್ಪಾತ್ರಕ್ಕೆ ಸಲ್ಲಿಸಿ ಪುಣ್ಯ ಸಂಪಾದನೆಯನ್ನು ಮಾಡಿಕೊಂಡಿದ್ದರೆ, ಮುಂದಿನ ಜನ್ಮದಲ್ಲಿ ಅಖಂಡಿತ ಮಹದೈಶ್ವರ್ಯವಾಗುವದು. ಇದರಿಂದ ಜನ್ಮ ಜನ್ಮಾಂತರಂಗಳಲ್ಲಿಯೂ ಪುಣ್ಯ ವರ್ಧನವಾಗುತ್ತಿರುವದು. ಮತ್ತು ಸೌಖ್ಯವು ಸಂಪದವು ಸತ್ಕೀರ್ತಿಯು ಸನ್ಮಾನವು ಅಭಿವೃದ್ಧಿಯಾಗಿ ಬೆಳೆಯುತ್ತಾ ವರ್ಧನವಾಗುವದು ಅದು ಕಾರಣವಾಗಿ ಲೌಕಿಕರಾದ ಗೃಹಸ್ಥರು ಯಾವತ್ತರೂ ಪುಣ್ಯ ಸಂಗ್ರಹವನ್ನು ಮಾಡಿಕೊಳ್ಳದೆ ಇರಲಾಗದು.

ಪುಣ್ಯ ಹೀನಂಗೆ ಒಂದು ಕಾರ್ಯವಾದರೂ ತನ್ನ ಮನೋವಾಂಛನೆಯಂತೆ ಫಲಿಸುವದಿಲ್ಲ ಸಾಕ್ಷಿ "ಸತಿ ಶೌಚ ಕೃಷಿ ಸೇವೆ ಯಾಚನೆಯುಲಂಕಾರ ಗೆಲುವವುಳಗುಣವಾದ ವಶ್ಯಮಣಿಮಂತ್ರ ತತಿ ಫಲಿಸಲರಿಯುವು ಪುಣ್ಯದನುಕೂಲವಿಲ್ಲದಿರೆ ತನಗೆ ಮನವೆಳಸದಂತೆ" ಎಂದು ನಿಜಗುಣಾರಾಧ್ಯರು ಕೈವಲ್ಯವೆಂಬ ಗ್ರಂಥದಲ್ಲಿ ಪ್ರಸಿದ್ಧವಾಗಿ ಹೇಳಿದ್ದಾರೆ. ಮತ್ತು ಸಕಲ ಶಾಸ್ತ್ರಗಳಲ್ಲಿಯೂ ಇದರಂತೆ ಹೇಳಿರುತ್ತದೆ.

## ಕರ್ಮನಿವೃತ್ತಿ.

ಸಕಲ ಕರ್ಮ ನಿವೃತ್ತಿಗಾಗಿ ಲೌಕಿಕರಾವತ್ತರಿಗೂ ಸ್ಪಷ್ಟವಾಗಿ ತಿಳಿಸತಕ್ಕದ್ದೇನಂದರೆ, ತಾನು ತನ್ನ ಘಟ ಸಂರಕ್ಷಣೆಯ ನಿಮಿತ್ಯವಾಗಿ ಮತ್ತು ತನ್ನ ಕುಟುಂಬ ಸಂರಕ್ಷಣ ನಿಮಿತ್ಯವಾಗಿ ಅಸಿಕೃಷಿ ಮೊದಲಾದ ಷಟ್ಕೃಷಿ ವ್ಯಾಪಾರಂಗಳನ್ನು ಮಾಡುವಲ್ಲಿ, ಅನಂತ ದುರ್ದೋಷಗಳು ಸಂಭವಿಸುತ್ತಿಹವಾಗಿ, ಸಂಸಾರವೆಂಬುದೆಲ್ಲವೂ ಪಾಪಮಯವೆನಿಸುತ್ತದೆ

ಸಂಸಾರ ಮಾಡುವವರೆಲ್ಲರೂ ಪರೋಪಕಾರ ಪ್ರಯೋಜನವನ್ನು ಮುಂದುಗೊಂಡು ಮಾಡುವ ಸಂಸಾರ ಕರ್ಮದಲ್ಲಿ ಸಂಭವಿಸುವ ಪಾಪಂಗಳೆಲ್ಲ ನಿವೃತ್ತಿಯಾಗಿ ಪುಣ್ಯವೇ ಪ್ರಾಪ್ತಿಸುವದು.

ಸಂಸಾರವೆಂಬುದು ಜ್ಞಾನಹೀನವಾದ ಮೃಗಪಶು ಕ್ರಿಮಿ ಕೀಟ ಮೂಷಕ ಮಾರ್ಜಾಲಾದಿ ಪ್ರಾಣಿಗಳಿಗಾದರೂ ಘಟವಿರುವವರೆಗೂ ಇರುವದು ಆದಾಗ್ಯೂ ಜ್ಞಾನಹೀನವಾದ ಪಶುವಾದಿ ಪ್ರಾಣಿಗಳಿಗೆ ನಿರ್ದೋಷವು. ಮನುಷ್ಯರು ಜ್ಞಾನವುಳ್ಳವರಾಗಿ ಜನಿಸಿದ ಕಾರಣ ಇವರಿಗೆ ಕಾಯಶಕ್ತಿ ಬುದ್ಧಿಶಕ್ತಿ ದ್ರವ್ಯಶಕ್ತಿ ಮೊದಲಾದ ಸಾಧನಗಳನ್ನು ಕೊಟ್ಟು ಯತ್ನ ಮಾಡಿ ಪುಣ್ಯ ಕೀರ್ತಿಗಳನ್ನು ಪಡೆದು ಇಹಲೋಕ ಪರಲೋಕ ಮೊದಲಾದ ಸಕಲ ಸುಖಭೋಗಂಗಳನ್ನು ಭೋಗಿಸತಕ್ಕ ಪ್ರಯತ್ನವೆನಿಪ ಉದ್ಯೋಗ, ಸಾಹಸ, ಧೈರ್ಯ, ಬಲ, ಬುದ್ಧಿ ಪರಾಕ್ರಮಗಳೆಂಬ, ಉಪಸಾಧನಗಳನ್ನು ಕೊಟ್ಟು ಮೇಲಾಗಿ ಸಕಲ ಸನ್ಮಾನಗಳನ್ನು ಬೋಧಿಸುವವಕ್ಕೆ ವೇದಾಗಮ ಪುರಾಣಗಳನ್ನು ಕೊಟ್ಟು ಇರುತ್ತಿರಲಾಗಿ, ಕೇಳಿ ಕೇಳದ ಹಾಗೆ ತಿಳಿದು ತಿಳಿಯದ ಹಾಗೆ, ಕಂಡು ಕಾಣದ ಹಾಗೆ, ಮದೋದ್ರೇಕದಿಂದ ಮುಂದಾಗುವ ದುಃಖವನ್ನು ಗಣನೆಗೆ ತಾರದೆ, "ನನಗೆ ಬೇಕು, ನನ್ನ ಸುತರಿಗೆ ಬೇಕು" ಎಂದು, ಮತ್ತು ಹೊನ್ನಿದ್ದು ಹೊನ್ನಾಗಬೇಕು, ಹೆಣ್ಣಿದ್ದು ಹೆಣ್ಣಾಗಬೇಕು, ಮಣ್ಣಿದ್ದು ಮಣ್ಣಾಗಬೇಕು, ಎಂದು ಎಷ್ಟು ದೊರೆತರೂ ಸಾಲದಾಗಿ ಭ್ರಮೆಗೊಂಡು ಆಶೆಯೊಳಗಣ ಅತಿ ಕಾಂಕ್ಷೆ ಮುಂದುಗೊಂಡು, ಧರ್ಮದಿಂದಾಗಲಿ, ಅಧರ್ಮದಿಂದಾಗಲಿ, ದೊರೆ

ತಂಥ ವಸ್ತುವನ್ನು ಕೊಡಲಿಕ್ಕೆ ನೋಡಿ ನೋಡಿ ಸಂತೋಷಿಸುತ್ತ ಮತ್ತೂ ಯತ್ನಿಸಬೇಕೆಂದು ಧರ್ಮವಿರುದ್ಧವಾಗಿಯಾದರೂ ವರ್ತಿಸುವರು. ಇದರಲ್ಲಿ ಲೋಭ ವಿಶೇಷವಾದ ಹಾಗೆಲ್ಲಾ ಆಗಿನ ಪೂರ್ತಿಗೆ ದ್ರವ್ಯ ಸಂಚಯಿಸುವದು. ಕಡು ಲೋಭದಿಂದ ಮತ್ತೂ ಅಧರ್ಮ ವರ್ತನದಿಂದ ದುರಾಶೆ ಬೆಳೆದಂತೆ ಪಾಪವಾದರೂ ಘನರಾಶಿಯಾಗಿ ಬೆಳೆಯುವದು.

ಮನುಷ್ಯರಾದ ಮೇಲೆ ಧರ್ಮಾಧರ್ಮ ವಿಚಾರವಿರಬೇಕು. ನಿತ್ಯಾನಿತ್ಯ ವನರಿಯಬೇಕು. ಸತ್ಕರ್ಮ ದುಷ್ಕರ್ಮಗಳ ವಿವೇಕವಿರಬೇಕು. ಪುಣ್ಯ ಪಾಪ ಗಳನ್ನು ತಿಳಿಯಬೇಕು. ಮತ್ತು ಔದಾರ್ಯ ಗುಣದಿಂದ ತನ್ನ ಹಿತವನುಪೇ ಕ್ಷಿಸಿ ಅನ್ಯರನ್ನು ಸಂತೋಷಬಡಿಸಬೇಕೆಂಬ ದೊಡ್ಡ ಬುದ್ಧಿಯನ್ನು ದೃಢವಾಗಿ ನಂಬಿ ಸತ್ಯಸದಾಚಾರವೇ ಪ್ರಾಣವಾಗಿರಬೇಕು.

"ನನಗೆ ಬೇಕು ನನ್ನವರಿಗೆ ಬೇಕು" ಎಂಬ ಲೋಭದಾಸೆಯ ಪಾಶ ವನ್ನು ಹರಿದು ಔದಾರ್ಯವೆಂಬ ಸಿಂಹಾಸನವನೇರಿ ಕಡುಲೋಭವೆಂಬ ಕಂಟಕವ ಸುಟ್ಟು ಜಯಿಸಿ ಸರ್ವ ರೀತಿಯಿಂದಲೂ, ಸದಾ ಕಾಲದಲ್ಲಿಯೂ ಗುರುಹಿರಿಯರ ಹಿತವನ್ನೇ ಚಿಂತಿಸುತ್ತ ಮಾಡುವಂಥ ಸಂಸಾರ ಪ್ರಯತ್ನ ದಲ್ಲಿ ಸಂಭವಿಸಿದ ಸರ್ವ ಕರ್ಮಂಗಳು ಪುಣ್ಯವೇ ಹೊರ್ತು, ಪಾಪವಲ್ಲವೆಂದು ತಿಳಿಯತಕ್ಕದ್ದು.

ಪರೋಪಕಾರದ ವಿಷಯದಲ್ಲಿ ತಿಳಿಯತಕ್ಕದ್ದೇನಂದರೆ, ದೇಹ ಕರಣಾದಿ ಇಹಪರವಿಲಕ್ಷಣರಾದ ಪರವಸ್ತು ಸ್ವರೂಪಿಗಳಾದ ಪರಶಿವಯೋಗಿಗಳೇ ಪರವೆಂದು ಸೇವಾಸತ್ಕಾರಾದಿ ಸಕಲೋಪಚಾರವೇ ಪರೋಪಕಾರವೆನಿಸುವದು. ತನಗನ್ಯವಾದ ಪ್ರಾಣಿಗಳು ಅನ್ಯರೇ ಸರಿ.

ಸಂಸಾರಿಗಳಾದವರಲ್ಲಿ ಸರ್ವದಾ ಪರಹಿತಾರ್ಥಾಪೇಕ್ಷೆಯ ಭಾವವೇ ಮುಂದುಗೊಂಡಿರಬೇಕು. ಮನೆಯನ್ನು ಕಟ್ಟಬೇಕಾದರೆ, ಮಳೆಗಾಲ ಚಳಿ ಗಾಲ ಬಿಸಿಲುಗಾಲಂಗಳಲ್ಲಿ ಪಥಾಶ್ರಿತರಾಗಿ ಬಂದಂಥ ಸಮಾಚಾರಿಗಳಿಗೆ ಕೂಡುವದಕ್ಕೆ ಮಲಗುವದಕ್ಕೆ ಪಾಕ ಪ್ರಯತ್ನಾದಿಗಳಿಗೆ ಬೇರೆ ಬೇರೆ ಸ್ಥಳಗಳು ಬೇಕೆಂದು ತಕ್ಕ ಮಟ್ಟಿಗಾದರೂ ಯೋಗ್ಯತೆಗೆ ಸರಿಯಾಗಿ ಮನೆಗಳನ್ನು ಕಟ್ಟಿಸಬೇಕು. ಇದು ಸಂಸಾರಿಗಳ ಧರ್ಮವು.

ಸಂಚಾರ ಮುಖಾಂತರವಾಗಿ ಬಂದಂಥ ಶಿವಯೋಗಿಗಳಾದ ಸಾಧು ಸಜ್ಜನ ಸತ್ಪುರುಷರ ಹಸಿವೆ ತೃಷೆಗೆ ತಕ್ಕ ಪಾಕ ಪ್ರಯತ್ನಾದಿಗಳಿಗೆಯೂ, ಅವರ ಸೇವಾ ಸತ್ಕಾರಾದಿ ಸರ್ವೋಪಚಾರಕ್ಕೂ ಸತಿ ಇಲ್ಲದಾಗದೆಂದು ಸದ್ಗುಣ ವತಿಯಾದ ಸುಶೀಲಳಾದ ಸಲಕ್ಷಣವುಳ್ಳ ಸ್ತ್ರೀಯಳನ್ನು ಲಗ್ನವಾಗಬೇಕು.

ತನ್ನಾಶ್ರಮಕ್ಕೆ ಬಂದಂಥ ಸದಾಚಾರಿಗಳ ಇಚ್ಛೆಯನ್ನರಿತು ಸರ್ವೋಪಚಾರ ಮಾಡಿ ಸತ್ಕರಿಸುವದಕ್ಕೆ ಧನ ಧಾನ್ಯಾದಿ ಸಕಲ ದ್ರವ್ಯ ಪದಾರ್ಥಗಳು ಬೇಕೆಂದು ಷಟ್ಕೃಷಿ ವ್ಯಾಪಾರಂಗಳನ್ನು ಮಾಡಿ ದ್ರವ್ಯ ಸಂಪಾದನೆ ಮಾಡಬೇಕು. ಮತ್ತು ಪರೋಪಕಾರ ವಿಷಯದಲ್ಲಿ ತಾನು ತನ್ನಾಪ್ತರಿಷ್ಟರು ಬಂಧು ಬಾಂಧವರೆಲ್ಲರೂ ಬಲಿಷ್ಠರಾಗಬೇಕೆಂದು ಅನ್ನ ವಸ್ತ್ರಾದಿಗಳಿಂದ ಶರೀರ ಪೋಷಣೆಯನ್ನು ಮಾಡಿಕೊಳ್ಳಬೇಕು.

ಈ ಪ್ರಕಾರ ಭಾವನೆಯುಳ್ಳಾತನಾಗಿ ಸಂಸಾರಿಯಾದ ಗೃಹಸ್ಥನು ತಾನು ಮಾಡುವ ಸರ್ವ ಕೃತ್ಯಗಳನ್ನು ಪರೋಪಕಾರ ಪ್ರಯೋಜನ ಮುಂದುಗೊಂಡು ಮಾಡುವದರಿಂದ ಸರ್ವ ಕರ್ಮಂಗಳೆಲ್ಲ ಪುಣ್ಯಮಯವೆನಿಸಿ ಪಾಪ ನಿವೃತ್ತಿಯಾಗುವದು.

ಸಂಸಾರಿಗಳೆಲ್ಲರೂ ಈ ರೀತಿಯಿಂದ ಪರಹಿತಾರ್ಥ ಪ್ರಯೋಜನ ಮುಂದುಗೊಂಡು ಸರ್ವ ಪ್ರಯತ್ನಂಗಳನ್ನು ಮಾಡಬೇಕು ಮತ್ತು ಪರಹಿತಾರ್ಥವನರಿಯದೆ ಮಾಡುವ ಸಂಸಾರವು ನಿಃಸಾರವೆನಿಸುವದು ಲೋಕದಲ್ಲಿ ಸರ್ವರೂ ಪರೋಪಕಾರ ಧರ್ಮವನ್ನು ತಿಳಿದುಕೊಳ್ಳತಕ್ಕ ದೃಷ್ಟಾಂತವಾನವಾಗಿ ಮತ್ತು ಧರ್ಮ ನಿಮಿತ್ಯವಾಗಿ ಕೆಲವು ಪುಣ್ಯಾತ್ಮರು ಅನ್ನಕ್ಷೇತ್ರಗಳನ್ನು ಅರವಟ್ಟಿಗೆಗಳನ್ನೂ ಇಟ್ಟಿರುವರು. ಕೆಲವರು ಪ್ರಯಾಣಸ್ಥರಿಗೆ ಇಳಿದುಕೊಂಬುವದಕ್ಕಾಗಿ ಧರ್ಮ ಶಾಲೆಗಳನ್ನೂ ವಾಪೀ ಕೂಪ ತಟಕಾದಿಗಳನ್ನೂ ಉದ್ಯಾನ ವನ ಪುಣ್ಯ ವನ, ಪುಷ್ಪ ವನ ಬಿಲ್ವ ವನ ಕದಳೀಚೂತ ವನಾದಿಗಳನ್ನೂ ಪರಹಿತಾರ್ಥಕ್ಕೋಸ್ಕರ ಛಾಯಾ ವೃಕ್ಷಗಳನ್ನೂ ಫಲವೃಕ್ಷಗಳನ್ನೂ ನಾನಾ ತರದ ಗಿಡ ಮರಗಳನ್ನೂ ಪರಹಿತಾರ್ಥಕ್ಕಾಗಿ ಬೆಳೆಸಿರುವರು. ಇದಲ್ಲದೆ, ಕೆಲವು ರಾಜರು ದೊಡ್ಡ ದೊಡ್ಡ ಕೆರೆಗಳನ್ನು ಕಾಲುವೆಗಳನ್ನು ಮಾಡಿಸಿ ಪುಣ್ಯ ಸಂಪಾದನೆಯನ್ನು ಮಾಡಿಕೊಂಡಿರುವರು

ಇದಲ್ಲದೆ ಲೌಕಿಕರೆಲ್ಲರು ಷಟ್‌ಕೃಷಿ ಮೊದಲಾದ ಸಕಲ ವ್ಯಾಪಾರಂಗಳನ್ನು ಪರಹಿತಾರ್ಥ ಪ್ರಯೋಜನವಾಗಿ ಮಾಡಿ ಅದರಿಂದ ದ್ರವ್ಯ ಮೊದಲಾದ ಪದಾರ್ಥಗಳನ್ನು ಸಂಪಾದಿಸಿ, ಸಕಲ ಸಾಮಗ್ರಿಗಳನ್ನು ಸಿದ್ಧಮಾಡಿ ಪಾಕ ಪ್ರಯತ್ನಂಗಳನ್ನು ಮಾಡಿಕೊಂಡು, ಈ ಹೊತ್ತು ನಮ್ಮ ಮನೆಗೆ ಯಾರಾದರೂ ಪಥಾಶ್ರಿತರಾದ ಸಾಧು ಸತ್ಪುರುಷ ಸದಾಚಾರಿಗಳು ಶಿವಯೋಗಿಗಳು ಬರಬೇಕೆಂಬ ಅಪೇಕ್ಷೆಯುಳ್ಳವರಾಗಿ ಇದಿರು ನೋಡುತ್ತ ಇರುವಷ್ಟರಲ್ಲಿ ಯಾರಾದರೂ ಬಂದರೆ ಉತ್ತಮವು, ಇಲ್ಲವಾದರೆ, ಅಸಾಕ್ಷಿಕನಾಗಿ ಉಣಲಾಗದೆಂಬ ನೀತಿಗೆ ಸರಿಯಾಗಿ ಯಾರನ್ನಾದರೂ ಕರೆದುಕೊಂಡು ಬಂದು ಅವರನ್ನು ಅನ್ನಪಾನಾದಿಗಳಿಂದ ಸಂತೃಪ್ತಿಪಡಿಸಿ ಮಿಕ್ಕ ಪದಾರ್ಥಗಳನ್ನು ತಾನೂ ತನ್ನವರೆಲ್ಲರೂ ಉಂಬುವದು ಸಂಸಾರಿಗಳ ಧರ್ಮವು.

ಸಂಸಾರವೆಂಬುದು ಪಾಪಮಯವೆಂದು ಸಕಲ ಶಾಸ್ತ್ರಂಗಳು ಸಾರುತ್ತಿವೆ. ಸಾಕ್ಷಿ "ಪೀಷಣೀ; ಖಂಡನಂ ಚುಲ್ಲಿ। ಉದುಕುಂಭಿ ಪ್ರಮಾರ್ಜನಿ, ಪಂಚ ಶೂನ್ಯ ಗೃಹಸ್ಥಸ್ಯ। ತೇನ ಮೋಕ್ಷ ನ ಜಾಯತೆ ॥" ಸಂಸಾರಿಗಳು ಬೀಸುವಲ್ಲಿ ಕೊರೆಯುವಲ್ಲಿ ನೀರು ಕಾಸುವಲ್ಲಿ ಒಲೆ ಹೊತ್ತಿಸುವಲ್ಲಿ ಪಾಕ ಮಾಡುವಲ್ಲಿ ಈ ಐದು ಕೃತ್ಯಗಳಲ್ಲಿ ಅತಿ ಸೂಕ್ಷ್ಮವಾದ ಅಣು ಪ್ರಾಣಿಗಳು ಮರಣ ಹೊಂದಿ ಪ್ರಾಣಹಿಂಸೆಯು ಘಟಿಸುವದಾಗಿ, ಈ ಪ್ರಕಾರದ ಐದು ತೆರದ ಕಟುಕರಾದ ಗೃಹಸ್ಥರಿಗೆ ಮೋಕ್ಷವಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತವೆ

ಅಹಿಂಸೋ ಪರಮೋ ಧರ್ಮಃ" ಎಂಬ ಶೃತಿಯುಂಟು. ಇದಲ್ಲದೆ "ಕೊಲ್ಲದಿಪ್ಪದೇ ಧರ್ಮ ಪರಧನ ಪರಸತಿಯ ನೊಲ್ಲದಿಪ್ಪದೇ ಶೀಲ" ಎಂದು ಬಸವಣ್ಣನವರ ಗುರು ವಚನ ಉಂಟಾಗಿ ಅಸಿ, ಕೃಷಿ, ವಾಣಿಜ್ಯ, ಗೋಪಾಲಿಕೆ, ಸೇವೆ, ಯಾಚನೆ ಎನಿಪ ಆರು ಕಾರ್ಯಗಳಲ್ಲಿ ಹಿಂಸಾದಿ ದೋಷಂಗಳು ಸಂಭವಿಸುವವು ಲೌಕಿಕರಿಗೆ ಇವು ಪಾಪರೂಢವಾಗಿ ಕಾಣಿಸದೆ ಇದ್ದಾಗ್ಯೂ ಜ್ಞಾನಿಗಳ ಜ್ಞಾನ ದೃಷ್ಟಿಗೆ ಷಟ್ ಕೃಷಿ ವ್ಯಾಪಾರಗಳೆಲ್ಲ ಪಾಪರೂಪವಾಗಿ ಹಿಂಸಾದಿ ದೋಷಂಗಳುಳ್ಳವಾಗಿ ಕಾಣಿಸುವವು

ತೃಣ ಸಸಿ ಗುಲ್ಮ ಲತಾ ವೃಕ್ಷಾದಿಗಳಾದರೂ ಧಾನ್ಯಾದಿ ಪದಾರ್ಥಗಳಾದರೂ ಜೀವವುಳ್ಳವೆಂದು ಹೇಳಿಸಿಕೊಂಡ ಕಾರಣ ಬಿತ್ತಿ ಬೆಳೆಯುದ ಪದಾರ್ಥಗಳಲ್ಲಿ ಕೆಲವನ್ನು ಮೂಲ ಸಹಿತ ಕಿತ್ತುವರು ಕೆಲವು ಫಲಗಳನ್ನು ಕೊಯ್ಯುವರು ಕೆಲವು ಪದಾರ್ಥಗಳ ಬೆಳೆ ಸಹಿತ ಕೊಯ್ದು ಕೆಡುಹುವರು. ಆದರೆ ಸರ್ವರಿಗೂ ಇದು ಪ್ರಾಣ ಹಿಂಸೆಯಾಗಿ ಕಾಣದು. ಜ್ಞಾನಿಗಳಿಗೆ ಮಾತ್ರ ಕಾಣುತ್ತಿಹುದು ಆದರೆ, ಸರ್ವೇಶ್ವರನಾದ ಪರಮಾತ್ಮನು ಸರ್ವತ್ರ ಪರಿಪೂರ್ಣನಾಗಿ, ಸರ್ವವ್ಯಾಪಕನಾಗಿ, ಅಣು ರೇಣು ತೃಣ ಕಾಷ್ಠಂಗಳಲ್ಲಿ ಭರಿತನಾಗಿರ್ಪನೆಂದು ಸಕಲವೇದ ಶಾಸ್ತ್ರಂಗಳು ಸಾರುತ್ತಿವೆ ಅದು ಕಾರಣ ಕಂಡಾದರೂ ಕಾಣದಾದರೂ ಒಂದು ಅತಿ ಸೂಕ್ಷ್ಮ ಪ್ರಾಣಿಯಾದ ಜೀವ ಹಿಂಸೆಯಾದಲ್ಲಿ ಅದು ಬ್ರಹ್ಮ ಘಾತಕವೆಂಬ ದೈವದ್ರೋಹವಾಗುತ್ತಿಹುದು ಅದು ಸಾಮಾನ್ಯವಲ್ಲವು ಇದನರಿಯದೆ ಮದಾಂಧತೆಯಿಂದ ಕೃಷಿವಾಣಿಜ್ಯಾದಿ ಸಕಲ ಕಾರ್ಯಗಳಲ್ಲಿ ಅನಂತ ದೋಷಗಳು ಸಂಭವಿಸುವವು.

ಕಾಯಾ ವಾಚಾ ಮಾನಸವೆಂಬ ತ್ರಿಕರಣಗಳು ಶುದ್ಧವಾಗಿರಬೇಕು. ಹೇಗೆಂದರೆ, ಹಿಂಸಾದಿ ದೋಷಂಗಳಿಲ್ಲದೆ, ಕಾಯಶುದ್ಧನಾಗಿ ಅನೃತಾದಿ ವಾಕ್ಯಂಗಳಿಲ್ಲದೆ, ವಾಚ್ಯ ಶುದ್ಧನಾಗಿ ಅನ್ಯಸ್ತ್ರೀ ಅನ್ಯ ಧನ ಕಾಂಕ್ಷೆ ಇಲ್ಲದೆ, ಮಾನಸ ಶುದ್ಧನಾಗಿ ಸತ್ಯ ಶೀಲರಾಗಿ ಪರೋಪಕಾರಾದಿಗುಣ ಕಲ್ಯಾಣಗುಣ

ಗಳುಳ್ಳವರಾಗಿ ವರ್ತಿಸಿದರೆ, ಜಗದೀಶ್ವರನ ಕೃಪೆಯಾಗಿ ಅದು ಸರ್ವದಾ ಅವರ ಮೇಲೆ ಇರುವದು. ಈ ಸದ್ಗುಣಗಳುಳ್ಳವರು ಇಹಲೋಕ ಪರಲೋಕದಲ್ಲಾದರೂ ಮಾನ್ಯರಾಗಿ ಸಕಲೈಶ್ವರ್ಯ ಸಂಪನ್ನರಾಗಿ ಸದಾ ಸುಖಿಗಳಾಗುವರು. ಈ ಸದ್ಗುಣಗಳಿಲ್ಲದೆ, ತಮ್ಮ ಒಡಲಕಕ್ಕುಲಿತೆಗೆ ಧರ್ಮಾಧರ್ಮಗಳನರಿಯದೆ ಮಾಡುವ ಷಟ್ಕೃಷಿಗಳಲ್ಲಾದರೂ ಸಂಭವಿಸುವ ದೋಷಂಗಳಿಗೆ ಕಡೆ ಇಲ್ಲವು. ಆದಾಗ್ಯೂ ನಿವೃತ್ತಿ ಮುಖದಿಂದ ನಿರ್ದೋಷವಾಗುವವು.

ಸಂಸಾರವೆಂಬುದು ಪುಣ್ಯಾನುಕೂಲಿಗಳಾದ ಲೌಕಿಕರಿಗೆ ಸುಖದ ಸಾರವೇ ಅಹುದು ಪುಣ್ಯ ಹೀನರಿಗೆ ಸಂಸಾರವೆಂಬುದು ದುಃಖರೂಪವಾಗಿ ನಿಃಸಾರವೆನಿಸುವದು. ಆದಾಗ್ಯೂ ರುಚಿ ಇಲ್ಲದ ನಿಃಸಾರವೆನಿಪ ದುಃಖಸಾಗರವಾಗಿದ್ದರೂ ಮಾಯಾ ಮೋಹದ ಮಮಕಾರದಿಂದ ಬಿಡಲಾರದೆ, ದುಃಖವನ್ನೇ ಸುಖವಾಗಿ ಭೋಗಿಸುವರು. ಹ್ಯಾಗಂದರೆ,

ಒಂದಾನೊಂದು ದಿವಸ ಕೃಷ್ಣನು ಅರ್ಜುನನೊಡನೆ ಪ್ರಸಂಗಿಸುತ್ತಿರಲಾಗಿ, ಪ್ರಸ್ತಾಪ ಸದೃಶವಾಗಿ "ಸುಖಂ ಬಿಂದು ಮಾತ್ರೇಣ ದುಃಖಂ ಪರ್ವತಮೇವ ಚ" ಎನಲಾಗಿ ಅರ್ಜುನನು ಇದರ ಅಭಿಪ್ರಾಯವೇನೆಂದು ಕೇಳಿದನು. ಅಷ್ಟರಲ್ಲಿ ಕೃಷ್ಣನು ಅರ್ಜುನನನ್ನು ಅರಣ್ಯಕ್ಕೆ ಕರೆದೊಯ್ದು ತನ್ನ ಮಾಯಾ ಸಾಮರ್ಥ್ಯದಿಂದ ತಾನದೃಶ್ಯನಾಗಿ ಪೂರ್ವಕ್ಕೆ ಹುಲಿಯನ್ನು ಪಶ್ಚಿಮಕ್ಕೆ ಕಾಡಾನೆಯನ್ನು ದಕ್ಷಿಣಕ್ಕೆ ಕಾಡಬೇಗೆಯನ್ನು ಉತ್ತರಕ್ಕೆ ಒಂದು ಹಾಳಭಾವಿಯನ್ನು ನಿರ್ಮಿಸಿದನು ಅಷ್ಟರಲ್ಲಿ ಅರ್ಜುನನು ಗಾಬರಿಯಾಗಿ ಭಾವಿಯಲ್ಲಿ ಹಾರಲು, ಕೆಳಗೊಂದು ಕಾಳೋರಗನು ಭೋರಾಡುತ್ತಿರುವದನ್ನು ಕಂಡು ಭಯದಿಂದ ಭಾವಿಯಲ್ಲಿ ಹಬ್ಬಿದ ತೊಟ್ಟಿಲ ಬಳ್ಳಿಯನ್ನು ಹಿಡಿದುಕೊಂಡು ಜೋತಾಡುತ್ತಿರಲು ಆ ಬಳ್ಳಿಯಲ್ಲಿರುವ ಜೇನು ಹುಳುಗಳೆದ್ದು ಸರ್ವಾಂಗವನ್ನು ಮುತ್ತಿ ಕಡಿಯುತ್ತಿದ್ದವು ಮತ್ತು ಆ ತೊಟ್ಟಿಲ ಬಳ್ಳಿಯ ಬೇರನ್ನು ಎರಡು ಇಲಿಗಳು ಕಡಿಯಲಾರಂಭಿಸಿದವು ಅಷ್ಟರಲ್ಲಿ ಜೇನುಕೊಡ ಒಡೆದು ಜೇನು ತುಪ್ಪದ ಹನಿಯು ಮೂಗಿನ ಮೇಲೆ ಬೀಳಲು ಅದನ್ನು ಅರ್ಜುನನು ನಾಲಿಗೆಯಿಂದ ನೆಕ್ಕುತ್ತಿದ್ದನು. ಅಷ್ಟರಲ್ಲಿ ಕೃಷ್ಣನು ಇವುಗಳನ್ನೆಲ್ಲ ಬಯಲು ಮಾಡಿ ಬಾವಿಯ ದಂಡೆಯ ಮೇಲೆ ನಿಂತು ಅರ್ಜುನನನ್ನು ಕೈ ಹಿಡಿದು ಮೇಲಕ್ಕೆ ಕರೆದುಕೊಂಡನು, ಆಗಲಾ ಪಾರ್ಥನು ಅಂದದ್ದು "ನಮೋ ನಮೋ ಶೌರೀ ಮುರಹರೀ ಮಾಧವಾ ಬಲಿಧ್ವಂಸೀ ಬಾಣಾಸುರಾರಿ" ಎಂದು ಸ್ತುತಿಸಿ, ನೀನು ಕಪಟ ನಾಟಕನು ನಿನ್ನ ಲೀಲೆಯನ್ನು ತಿಳಿವರಾರೆಂದು ಕೀರ್ತಿಸುತ್ತಿರಲು ಶ್ರೀ ಕೃಷ್ಣನು ಹೇಳುತ್ತಾನೆ. "ಎಲೈ ಪಾರ್ಥನೆ ಕೇಳು, ಸಂಸಾರಿಗಳ ಸುಖವು ಈ ಪ್ರಕಾರವದೆ ಎಂದು ನಿನಗೆ ದೃಷ್ಟೋಪಮಾನವಾಗಿ ತೋರಿಸಬೇಕೆಂದು ಈ ಚಮತ್ಕಾರವನ್ನು ತೋರಿಸಿದೆನು. ಇದರಲ್ಲಿ ನಿನಗೆ ಸಂಸಾರ ಸುಖ ದುಃಖ

ಗಳು ಅನುಭವಕ್ಕೆ ಬಂದಿರಬಹುದು. ಹೇಗೆಂದರೆ ಇಲ್ಲಿ ಯಾವ ಕಡೆಗಾದರೂ ಸುತ್ತಲೂ ಭಯಂಕರವು ತೋರುತ್ತಿರುವದು ಕಾಳೋರಗನೆಂಬುದೇ ಮೃತ್ಯುವು. ತೊಟ್ಟಿಲ ಬಳ್ಳಿ ಎಂಬುದೇ ಆಯುಷ್ಯವು ಇಲಿಗಳೆಂಬುವೇ ಹಗಲುರಾತ್ರಿ ಈ ಕಾಲಮಾನಗಳು ಕ್ಷೀಣವಾಗುತ್ತ ಹೋಗುವವು ಜೇನು ಹುಳಗಳಂತೆ ಅನಂತ ರೀತಿ ಉಪದ್ರವಗಳು ದುಃಖರೂಪವಾಗಿ ಇರುತ್ತಿರಲು ಜೇನು ತುಪ್ಪ ಹನಿಯು ಹೇಗೆ ಸುಖವಾಗಿತ್ತೋ ಹಾಗೆ ಸಂಸಾರದಲ್ಲಿ ಸುಖವು ಬಿಂದು ಮಾತ್ರವಾಗಿದೆ. ಆದರೆ ದುಃಖವು ಪರ್ವತಸಮಾನವಾಗಿದೆ. ಆದಾಗ್ಯೂ ಈ ಸಂಸಾರದಲ್ಲಿ ಆಸಕ್ತರಾದ ಪ್ರಾಣಿಗಳು ಅಣುಮಾತ್ರವಾದರೂ ಸೌಖ್ಯವನ್ನು ಕಾಣದೆ ಚಿಂತಾಮಯರಾಗಿ ಕುದಿದು ಕೋಟಲೆಗೊಂಡ ಕಾಲದಲ್ಲಿ ಸದಾ ಸಂಕಟದಲ್ಲಿದ್ದಾಗ್ಯಾದರೂ ಅದನ್ನು ಬಿಡಲಾರದೆ ತೊಳಲುತ್ತಿಹರು. ಆದು ಕಾರಣ ಸುಜ್ಞಾನಿಗಳಲ್ಲದವರು ಈ ದುಃಖವನ್ನೇ ಸುಖವಾಗಿ ಭೋಗಿಸುತ್ತಿಹರು ಆದರೆ ಪುಣ್ಯವಂತರಿಗೆ ಸಂಸಾರವು ಲೇಸಾದ ಸಾರದಂತೆ ಸುಖಮಯವಾಗಿರುವದು " ಎಂದು ಅರ್ಜುನನಿಗೆ ಶ್ರೀಕೃಷ್ಣನು ಉಪದೇಶವನ್ನು ಮಾಡಿ ಪುಣ್ಯಪಾಪಗಳ ತಾರತಮ್ಯವನ್ನು ತಿಳುಹಿಸಿದನು.

ಜ್ಞಾನಿಗಳೆಂಬರು ವಿವೇಕಬಲದಿಂದ ಸಂಸಾರದಲ್ಲಿ ಅನಂತ ಪ್ರಕಾರದ ಅನಂತ ದೋಷಗಳು ಸಂಭವಿಸುವವೆಂದಂಜಿ, ರಾಜ್ಯ, ಸಂಪದ ಮೊದಲಾದ ಅಷ್ಟ ಮಹದೈಶ್ವರ್ಯಗಳಿದ್ದ ಕಾಲಕ್ಕೂ ಅವುಗಳನ್ನು ತ್ಯಾಜ್ಯ ಮಾಡಿ ಸಕಲೈಶ್ವರ್ಯಗಳೆಲ್ಲವೂ ಮಣ್ಣು ಹೆಂಟೆಗೆ ಸಮಾನವೆಂದುಪೇಕ್ಷಿಸಿ ವೈರಾಗ್ಯವನ್ನು ತಾಳಿ ಪಾಕಪ್ರಯತ್ನಾದಿಗಳಂ ಬಿಟ್ಟು ಜಲಾಹಾರ ಫಲಾಹಾರ ಪರ್ಣಾಹಾರಾದಿಗಳಿಂದ ಜಪ ತಪ ಅನುಷ್ಠಾನಂಗಳಂ ಮಾಡುತ್ತ, ಚಾಂದ್ರಾಯಣಾದಿ ಮಹಾವ್ರತಗಳಿಂದ ಶರೀರಶೋಷಣೆಯನ್ನು ಮಾಡುತ್ತ, ಅರಣ್ಯ ಪರ್ವತಾದಿಗಳಲ್ಲಿ ವಾಸಮಾಡಿಕೊಂಡು ಸರ್ವೇಂದ್ರಿಯಾದಿಗಳನ್ನು ನಿಗ್ರಹಿಸಿ ತಪಸ್ವಿಗಳೆನಿಸಿಕೊಂಡು ಕಾಲವನ್ನು ಕಳೆದರು. ಆದರೆ ಇದಾದರೂ ಸುಲಭವಾದ ಮಾರ್ಗವಲ್ಲ.

ಹೀಗೆ ಇವರು ಋಷಿಗಳಾದಾಗ್ಯೂ ತಪವೆಂಬ ಸಂಸಾರಕ್ಕೊಳಗಾದರು. ಹೇಗಂದರೆ ತನ್ನ ನಿಮಿತ್ಯವಾಗಿ ಮಾಡಿದ ಸರ್ವಕರ್ಮಂಗಳಲ್ಲಿ ದೋಷ ಉಂಟೆಂದು ಶಾಸ್ತ್ರ ಉಂಟಾಗಿ ಇಂದ್ರಿಯಂಗಳ ಮುಖದಿಂದ ಆತ್ಮನು ಸಕಲ ಪದಾರ್ಥಗಳನ್ನು ಭೋಗಿಸುತ್ತಿಹನಾಗಿ ಇಂಥ ಇಂದ್ರಿಯಂಗಳನ್ನು ನಿಗ್ರಹಿಸುವದೆಲ್ಲ ದೈವದ್ರೋಹವೆನಿಸುವದು. ಮತ್ತು ತನ್ನ ನಿಮಿತ್ಯವಾಗಿ ಯಾವ ಕರ್ಮಂಗಳನ್ನು ಮಾಡಿದಾಗ್ಯಾದರೂ ಪಾಪವೇ ಎಂದು ಸಕಲ ಶಾಸ್ತ್ರಂಗಳಲ್ಲಿ ಪ್ರಸಿದ್ಧವಾಗಿ ಹೇಳಲ್ಪಟ್ಟಿದೆ

ಕ್ರೂರ ಮೃಗವಾದ ಹುಲಿಯು ಒಬ್ಬ ಮನುಷ್ಯನನ್ನಾಗಲಿ ಅಥವಾ ಒಂದು ಪಶುವನ್ನಾಗಲಿ ಕೊಲ್ಲಬೇಕೆಂದು ಯತ್ನಿಸುತ್ತಿರುವಲ್ಲಿ ಯಾರಾದರೂ ಪುಣ್ಯವಂತರು ಕಂಡು ಆ ದುಷ್ಟ ಮೃಗವಾದ ಹುಲಿಯನ್ನು ಕೊಂದು ಆದರ ಪ್ರಾಣವನ್ನುಳಿಸಿಕೊಂಡರೆ ಹುಲಿಯನ್ನು ಕೊಂದಂಥ ದೋಷವು ಸುಳ್ಳಾಗಿ ಪ್ರಾಣರಕ್ಷಣೆಯ ಪುಣ್ಯವೇ ಪ್ರಾಪ್ತವಾಗುವದು

ಇದಲ್ಲದೆ ಒಬ್ಬಾನೊಬ್ಬ ನೀಚಾತ್ಮನಾದ ದುಷ್ಟನು ದ್ರವ್ಯದಾಶೆಯಿಂದ ಬಾಲಕರು ಧರಿಸಿದ ಬಾಲದೊಡಿಗೆಯಾದ ಆಭರಣಗಳನ್ನು ಅಪಹರಿಸಬೇಕೆಂದು ಆ ಕೂಸನ್ನು ಎತ್ತಿಕೊಂಡು ಗೌಪ್ಯಸ್ಥಾನಕ್ಕೊಯ್ದು ಕೊಲ್ಲುವ ಯತ್ನ ನಡಿಸಿರುವಷ್ಟರಲ್ಲಿ ಒಬ್ಬ ಪುಣ್ಯಶಾಲಿಯಾದ ರಾಜನು ಕಂಡು ಆ ದುಷ್ಟನನ್ನು ಶಿಕ್ಷಿಸಿ ಬಾಲಕನ ಪ್ರಾಣವನ್ನುಳಿಸಿದರೆ, ಶಿಕ್ಷೆ ಮಾಡಿದ ದೋಷವಿಲ್ಲವಾಗಿ ಬಾಲಕನ ಪ್ರಾಣವನ್ನು ಕಾಯ್ದುಕೊಂಡ ಪುಣ್ಯವೇ ಪ್ರಾಪ್ತಿಸುವದು ಏಕೆಂದರೆ ಪರೋಪಕಾರವೇ ಪ್ರಾಣವಾಗಿ ವರ್ತಿಸುವವರು ಅನ್ಯ ಪ್ರಾಣಿಗಳನ್ನು ಎಂದೂ ನೋಯಿಸಲರಿಯರು ಆದಾಗ್ಯೂ "ದುಷ್ಟನಿಗ್ರಹ ಶಿಷ್ಟ ಪ್ರತಿಪಾಲನ" ಮಾಡಬೇಕೆಂದು ರಾಜನೀತಿಯಲ್ಲಿ ಧರ್ಮಶಾಸ್ತ್ರಗಳು ಹೇಳುತ್ತಿಹವಾಗಿ ದುಷ್ಟ ಪ್ರಾಣಿಗಳನ್ನು ಸಂಹರಿಸುವದೇ ರಾಜರಿಗೆ ಧರ್ಮವು

ಪರಹಿತಾರ್ಥ ಪ್ರಯೋಜನವಾಗಿ ಮಾಡಲ್ಪಟ್ಟ ಸರ್ವ ಕೃತ್ಯಂಗಳಲ್ಲಿ ಸಂಭವಿಸಿದ ದೋಷಗಳಿಗೆ ಪ್ರಾಯಶ್ಚಿತ್ತಂಗಳು ಇಲ್ಲದೆ ಅವು ಪರಿಹಾರವಾಗಿ ಪರಹಿತಾರ್ಥದ ಪುಣ್ಯವೇ ಪ್ರಕಟಿಸುವದು ಇದಕ್ಕೆ ದೃಷ್ಟಾಂತವೇನಂದರೆ- ಸದ್ಧರ್ಮ ಪವಿತ್ರಪಾಲಕನಾದ ರಾಮಚಂದ್ರನು ಬಾಲ್ಯದಲ್ಲಿ ಋಷಿಗಳು ಮಾಡುವ ಯಜ್ಞ ರಕ್ಷಣಾರ್ಥವಾಗಿ ಕೆಲವು ರಕ್ಕಸರನ್ನು ಸಂಹರಿಸಿದ ದೋಷವು ಪ್ರಾಯಶ್ಚಿತ್ತಂಗಳಿಲ್ಲದೆ ಪರಿಹಾರವಾಗಿ ಯಜ್ಞ ರಕ್ಷಣೆ ಮಾಡಿದ ಪುಣ್ಯವೇ ಪ್ರಾಪ್ತಿಸಿತು ಆದರೆ ಆ ರಾಮಚಂದ್ರನು ಸತಿಸಹಿತ ವನ ಪ್ರವೇಶವಾದ ಕಾಲದಲ್ಲಿ ರಾವಣನು ಜಾನಕಿಯನ್ನು ಲಂಕಾ ಪಟ್ಟಣಕ್ಕೆ ತೆಗೆದುಕೊಂಡು ಹೋದಾಗ್ಗೆ ನೀತಿಯುತನಾದ ರಾಮಚಂದ್ರನು ತನ್ನ ಸತಿಯ ಬಂಧನವನ್ನು ಪರಿಹಾರ ಮಾಡುವದಕ್ಕೆ ಯುದ್ಧವನ್ನು ಮಾಡಿ ರಾವಣ ಕುಂಭಕರ್ಣಾದಿ ಅನೇಕ ರಕ್ಕಸರನ್ನು ಸಂಹರಿಸಲು ಅದೆಲ್ಲಾ ಬ್ರಹ್ಮಹತ್ಯವಾಗಿ ಇವನನ್ನು ಪೀಡಿಸಲಿಕ್ಕೆ ಉದ್ಯೋಗಿಸಿತು. ಯಾಕಂದರ ತನ್ನ ನಿಮಿತ್ಯವಾಗಿ ಸಂಹರಿಸಿದ ದೋಷವು ತನ್ನನ್ನು ಪೀಡಿಸದೆ ಬಿಡುವದಿಲ್ಲವೆಂದು ತಿಳಿದು, ಬಲ್ಲವನಾದ ರಾಮಚಂದ್ರನು ಲಿಂಗಾಲಯಗಳು ಸಹಿತ ಮೂರುವರೆ ಕೋಟಿ ಲಿಂಗಗಳ ಸ್ಥಾಪನೆಯನ್ನು ಮಾಡಿ ಲಿಂಗ ಪೂಜಾ ಮಹಿಮೆಯಿಂದ ಬ್ರಹ್ಮಹತ್ಯ ದೋಷವನ್ನು ಕಳೆದುಕೊಂಡನು ಇವೊತ್ತಿಗಾದರೂ ರಾಮಲಿಂಗನೆಂಬ ಲಿಂಗಾಲಯಗಳು ಅಲ್ಲಲ್ಲಿ

ಇರುವವು. ಸೇತುಬಂಧ ರಾಮೇಶ್ವರ ಲಿಂಗವು ಜಗತ್ಪ್ರಸಿದ್ಧವಾಗಿದೆ. ಮತ್ತು ರಾಮ ಪ್ರತಿಷ್ಠಿತ ರಾಮಲಿಂಗವೆಂದೂ ಭೀಮ ಪ್ರತಿಷ್ಠಿತ ಭೀಮಲಿಂಗವೆಂದೂ ಪ್ರತ್ಯಕ್ಷವಾಗಿವೆ.

ಆದ್ದರಿಂದ ಲೌಕಿಕರೆಲ್ಲರು ಧರ್ಮ ನಿಮಿತ್ತವಾಗಿ ಪರೋಪಕಾರ ಪ್ರಯೋಜನ ಮುಂದುಗೊಂಡು, ಸಕಲ ಸಂಸಾರ ಕೃತ್ಯಗಳನ್ನು ಮಾಡುತ್ತಿರಬೇಕು. ಮನೆಯನ್ನು ಕಟ್ಟುವಲ್ಲಿ ಕೃಷಿ ಮುಂತಾದ ಕೆಲಗಳನ್ನು ಮಾಡುವಲ್ಲಿ ಮತ್ತು ರಾಜಾಶ್ರಯವನ್ನ ಮಾಡುವಲ್ಲಿ ಉದ್ಯೋಗ ಮಾಡುವಲ್ಲಿ ಅನ್ಯರ ಸೇವೆ ಮಾಡಿ ದ್ರವ್ಯ ದೊರಕಿಸುವಲ್ಲಿ ಬೇರೆ ಯಾವ ತರದಿಂದಲಾದರೂ ಧನ ಸಂಗ್ರಹಮಾಡುವಲ್ಲಿ ಆ ದ್ರವ್ಯ ಮೊದಲಾದ ಪದಾರ್ಥಗಳು ಧರ್ಮ ಕಾರ್ಯಕ್ಕೆ ಬೇಕೆಂದು ಯತ್ನ ಮಾಡುತ್ತಿರಬೇಕು.

ತಾನು ಉಂಡ ಟ್ಟು ಪರಿಣಾಮಿಸುವಲ್ಲಿ ಈ ಶರೀರವು ಪರಹಿತಕ್ಕೋಸ್ಕರ ಬಲಾತ್ಕಾರವಾಗಿರತಕ್ಕದ್ದೆಂದು ಸಕಲ ರೀತಿಯಿಂದ ಶರೀರ ಪೋಷಣೆಯನ್ನು ಮಾಡಿಕೊಳ್ಳಬೇಕು ತನ್ನಾಶ್ರಮಕ್ಕೆ ಬಂದವರ ಶುಶ್ರೂಷೆಯನ್ನು ಮಾಡುವದಕ್ಕೆ ಬೇಕೆಂದು ಸ್ತ್ರೀಯರನ್ನು ಲಗ್ನವಾಗಬೇಕು ಮುಂದೆ ಬಹುಕಾಲದ ವರೆಗೂ ಈ ಧರ್ಮ ಕಾರ್ಯಗಳು ನಡೆಯಬೇಕೆಂದು ಆದಕ್ಕೆ ಅನ್ವಾಭಿವೃದ್ಧಿಗೋಸ್ಕರ ಮಕ್ಕಳನ್ನು ಹಡೆಯಬೇಕು ಈ ರೀತಿಯಿಂದ ಪರೋಪಕಾರಾರ್ಥವಾಗಿ ತನ್ನ ಶರೀರಾದಿ ಸಕಲ ಸಂಪತ್ತನ್ನು ದೇವಕಾರ್ಯ ಗುರುಕಾರ್ಯ ಧರ್ಮಕಾರ್ಯ ಶಿವಕಾರ್ಯಂಗಳಲ್ಲಿ ಖರ್ಚ ಮಾಡುತ್ತ ಹಲವು ಮುಖಾಂತರದಿಂದ ಪುಣ್ಯ ಸಂಗ್ರಹವನ್ನೇ ಮಾಡಿಕೊಳ್ಳಬೇಕು.

ಈ ರೀತಿಯಿಂದ ಮಾಡುವ ಸಂಸಾರದಲ್ಲಿ ದೋಷವಿಲ್ಲ. ಇದೇ ಕರ್ಮ ನಿವೃತ್ತಿ ಮಾರ್ಗವು ಅಣುಮಾತ್ರವಾದರೂ ಅನ್ಯರಿಗೆ ಘಾತವಾಗುವಂಥ ದುಷ್ಕೃತ್ಯವನ್ನು ಮಾಡಲಾಗದು ಅನ್ಯರನ್ನು ನೋಯಿಸಿದ ನೋವು ತನಗೆ ದುಃಖ ಕೊಡದೇ ಹೋಗಲಾರದು ಆದರೆ ಪರಹಿತವು ತನಗೆ ಸುಖವನ್ನು ಕೊಡುವದು. ದೇವಕಾರ್ಯ ಗುರುಕಾರ್ಯ ಧರ್ಮಕಾರ್ಯಗಳಲ್ಲಿಯ ಸಕಲ ಕೃತ್ಯಗಳು ಸದ್ಭಕ್ತರಿಗೆ ಪುಣ್ಯವೇ ಸರಿ. ಸಾಕ್ಷಿ "ಮಸ್ಮಿಮಿತ್ತಕೃತಂ ಪಾಪಂ। ಮುಚ್ಯತೆ ಕಣ್ಣಪಾಖ್ಯವತು ಮದ್ರಹಿತ ಕೃತಂ ಪುಣ್ಯಂ। ಹತೋ ದಕ್ಷ ಹತೋ ಹತು" ಎಂಬಾಗಮ ಪ್ರಮಾಣ ಉಂಟು.

ಈ ಪ್ರಕರಣದಲ್ಲಿ ಹೇಳಿದಂತೆ ಪರೋಪಕಾರ ನಿಮಿತ್ಯವಾಗಿ ಸಂಸಾರವನ್ನು ಮಾಡುವದು ಸಾಮಾನ್ಯವಲ್ಲ ಆದರೆ ಲೌಕಿಕರೆಲ್ಲರಿಗೂ ಈ ಬುದ್ಧಿಯು ದೃಢವಾಗಿ ನಿಲ್ಲುವದು ಅಸಾಧ್ಯವಾಗಿದೆ. ಆದಾಗ್ಯೂ ತಕ್ಕ ಮಟ್ಟಿಗಾದರೂ

ಸಂಸಾರಿಗಳೆಲ್ಲರು ಕಡುಲೋಭವನ್ನು ಬಿಟ್ಟು, ಸ್ತ್ರೀಯರಾಗಲಿ ಪುರುಷರಾಗಲಿ ಬಾಲಕರಾಗಲಿ ವೃದ್ಧರಾಗಲಿ, ಸಮಸ್ತರು ಅಷ್ಟರೊಳಗಿಷ್ಟನಾದರೂ ಪರೋಪಕಾರ ನಿಮಿತ್ಯವಾಗಿ ಕೊಟ್ಟು ಪುಣ್ಯ ಸಂಗ್ರಹವನ್ನು ಮಾಡಿಕೊಳ್ಳಬೇಕು.

ಯಾರಾದರೂ ಅನ್ನ ವಸ್ತ್ರಗಳಿಲ್ಲದೆ ಕಷ್ಟ ಬಡುತ್ತಿರಲು ಮತ್ತು ರೋಗಾದಿಗಳ ಬಾಧೆಯಿಂದ ಬಳಲುತ್ತಿರಲು, ಇದಲ್ಲದೆ ದುಷ್ಟ ಮೃಗ ಪಶುಗಳಿಂದ ಸಂಕಟಕ್ಕೊಳಗಾಗಿರಲು ಮತ್ತು ಅನೇಕ ತರದಿಂದ ಯಾವದಾದರೊಂದು ದುಃಖದಿಂದ ಕಷ್ಟಬಡುತ್ತಿರುವ ಪ್ರಾಣಿಗಳನ್ನು ಕಾಣುತ್ತಿರಲು, ಕೂಡಲೆ ತಮ್ಮ ಕೈಯಿಂದಾದಷ್ಟು ಯತ್ನ ಮಾಡಿ ಅವುಗಳನ್ನು ಕಾಪಾಡುವದು ಧರ್ಮಿಗಳಿಗೆ ಸ್ವಭಾವವಾಗಿದೆ. ಹೀಗೆ ಮಾಡದೆ ಕಂಡು ಕಾಣದ ಹಾಗೆ ಕೇಳಿ ಕೇಳದ ಹಾಗೆ ಮದಾಂಧತೆಯಿಂದ ಸುಮ್ಮನೆ ಇರುವ ಪ್ರಾಣಿಗಳಿಗೆ ಆ ದ್ರೋಹವು ಸಂಭವಿಸುತ್ತಿಹುದಾಗಿ, ಯಾವತ್ತರೂ ಹಲವು ರೀತಿಯಿಂದಾದರೂ ತಮ್ಮ ತಮ್ಮ ಯೋಗ್ಯತೆಯ ಪ್ರಕಾರಕ್ಕೆ ಯತ್ನ ಮಾಡಿ ಸರ್ವರಿಗೂ ಹಿತವನ್ನು ಮಾಡಬೇಕು ಆದರೆ ತ್ರಾಣವಿಲ್ಲದೆ ಇದ್ದು ಅದು ನಿಜವಾಗಿ ಅಸಾಧ್ಯವಾದರೆ, ಆ ದೋಷವು ತನ್ನ ಕಡೆಗಿಲ್ಲ.

ತಾವು ಉಂಬುವ ಸಮಯಕ್ಕೆ ಯಾರಾದರೂ ಕ್ಷುಧಾತುರರಾಗಿ ಬಂದು ಅನ್ನವನ್ನು ಬೇಡಿದರೆ, ಅಷ್ಟರೊಳಗಷ್ಟನಾದರೂ ಕೊಟ್ಟು ಉಣಿಸಬೇಕು ಅಥವಾ ಅವರು ಲಜ್ಜೆಯಿಂದ ಬೇಡದೇ ಇದ್ದರೆ, ತಾನಾದರೂ ಕರೆದು ಅನ್ನವನ್ನು ಕೊಡಬೇಕು. ತನ್ನ ಬಾಯಿಯ ತುತ್ತನ್ನು ಪರರಿಗೆ ಕೊಟ್ಟದ್ದರಿಂದ ರಾಜ್ಯ ಸಂಪದವನ್ನು ಪಡೆದರೆಂದು ಕೆಲವು ಇತಿಹಾಸಗಳು ಹೇಳುತ್ತವೆ. ಮತ್ತು ತಾನು ಭಿಕ್ಷುಕನಾಗಿ, ಬಿಕ್ಷೆ ಬೇಡಿ ತಂದಿರುವ ಪದಾರ್ಥವನ್ನಾದರೂ ತಾನುಂಬುವ ಸಮಯಕ್ಕೆ ಕ್ಷುಧಾತುರರಾಗಿ ಬಂದವರಿಗೆ ಸ್ವಲ್ಪಾದರೂ ಕೊಟ್ಟು ಉಣಬೇಕು ಕೊಡದೆ ತಾನುಂಬುವದು ಮಹಾಪಾತಕವು. ಒಂದು ಸಮಯದಲ್ಲಿ ತನ್ನಲ್ಲಿ ಇಲ್ಲದಾಗಿದ್ದರೆ, ಅದಕ್ಕೆ ಉಪಾಯವಿಲ್ಲವು ಧರ್ಮದ ಮನೆಯನ್ನಾದರೂ ತೋರಿಸಬೇಕು. ಇದ್ದು ವಂಚಿಸಿದರೆ ದೋಷಕ್ಕೆ ಪಾತ್ರರಾಗುತ್ತಾರೆ.

ಪರಹಿತಾರ್ಥ ಪ್ರಯೋಜನ ಮುಂದುಗೊಂಡು ಮಾಡುವ ಸಕಲ ಪಾಪಗಳು ನಿವೃತ್ತಿಯಾಗಿ ಪುಣ್ಯವು ಪ್ರಾಪ್ತಿಸುವದು. ಈ ನೀತಿಯು ಲೌಕಿಕರಾದ ಸಕಲ ಜನರಿಗೂ ಸರ್ವ ಮತದವರಿಗೂ ಹಿತಕರವಾದದ್ದು. ಆದರೆ ಲಿಂಗಾಯತ ಲಿಂಗಸ್ವಾಯತ ಲಿಂಗಸನ್ನಿಹಿತರಾದ ವೀರಶೈವ ಸದ್ಭಕ್ತರುಗಳಿಗೆ ಹೇಳುವ ನೀತಿಯು ಹೀಗೆ ವಿಲಕ್ಷಣವಾಗಿದೆ.

ಈ ಪ್ರಕಾರ ಪ್ರವೃತ್ತಿ ಮಾರ್ಗ ಸಂಬಂಧವಾಗಿ ಸಂಸಾರಿಗಳಾವತ್ತರೂ ಪ್ರಯತ್ನ ಮುಖದಿಂದ ಇಹಲೋಕ ಪರಲೋಕ ಸರ್ವ ಸಂಪತ್ತನ್ನು ಪಡೆದನುಭವಿಸುವಂಥ ಅತಿ ಸುಲಭವಾದ ಉಪಾಯಗಳನ್ನು ಸಕಲ ಯುಕ್ತಿಗಳನ್ನು ಇಲ್ಲಿ ತಿಳಿಯಪಡಿಸಿದ್ದೇನೆ.

ಇನ್ನು ಮುಂದೆ ಮುಮುಕ್ಷು ಜನ ಹಿತಾರ್ಥವಾಗಿ ಪಾರಮಾರ್ಥ ಕೃಷಿ ಎಂಬ ಸುಜ್ಞಾನ ಕೃಷಿಯಿಂದ ಶರೀರವೆಂಬ ಭೂಮಿಯನ್ನು ಹಸನ ಮಾಡಿ ಪರತತ್ವ ಬೆಳೆಯನ್ನು ಬೆಳೆದುಣ್ಣುವದಕ್ಕಾಗಿ ನಿರ್ಮಲತ್ವ ಸದಾಚಾರ ಸುಜ್ಞಾನ ಸದ್ಭಕ್ತಿ ಪಾರಮಾರ್ಥಕೃಷಿ ಎಂಬ ಐದು ಪ್ರಕರಣಗಳನ್ನು ಮುಂದೆ ಬರೆಯುತ್ತೇನೆ.

# ಎರಡನೆಯ ಭಾಗವು.

## ೧೯ ನೇ ಪ್ರಕರಣವು.

### ನಿರ್ಮಲತ್ವ.

ಈ ಕೃಷಿಜ್ಞಾನಕ್ಕೆ ನಿರ್ಮಲತ್ವವು ಬಹು ಪ್ರಯೋಜನಕರವು. ಈ ಕೃಷಿಜ್ಞಾನಪ್ರದೀಪಿಕೆ ಎಂಬ ಗ್ರಂಥದಲ್ಲಿ ಆದಿಯಿಂದ ೧೮ ಪ್ರಕರಣಗಳ ವರೆಗೂ ಕೃಷಿಕೆಲಸದಿಂದ ಧನಧಾನ್ಯಾದಿ ಸಮಸ್ತ ಫಲಪದಾರ್ಥಗಳನ್ನು ಸಮೃದ್ಧಿಯಾಗಿ ಬೆಳೆದು ಐಶ್ವರ್ಯವಂತರಾಗಿ ಪರೋಪಕಾರಾದಿ ಸದ್ಗುಣಗಳುಳ್ಳವರಾಗಿ ಸಕಾಮನಿಷ್ಠರಾಗಿ ಸತ್ಕಾರ್ಯಗಳನ್ನು ಮಾಡಿ ಇಹಲೋಕ ಪರಲೋಕಗಳಲ್ಲಿ ಒಂದೂ ಕೊರತೆಯಾಗದಂತೆ, ಸಕಲ ಸುಖಭೋಗಗಳನ್ನು ಪಡೆದುಂಬುವ ವಿಷಯವಾಗಿ ಬಹು ವಿಧದ ನೀತಿ ಯುಕ್ತಿಗಳನ್ನು ಮತ್ತು ಸುಲಭವಾದ ಉಪಾಯಗಳನ್ನು ಲೌಕಿಕ ಸಂಬಂಧವಾಗಿ ಹೇಳಿದ್ದೇನೆ.

ಇನ್ನು ಮೇಲೆ "ಪೃಥ್ವೀಮಯಂ ಶರೀರಸ್ಯ" ಎಂಬಲ್ಲಿ ಈ ಶರೀರವೆಂಬ ಪೃಥ್ವಿಯನ್ನು ಆಣವಾದಿ ತ್ರಿಮಲಂಗಳೆಂಬ ಮಲಿನಂಗಳನ್ನು ಕಳೆದು ನಿರ್ಮಲಾಂಗ ಜ್ಞಾನಕಾಯನೆನಿಸಿ, ಮಾಂಸಪಿಂಡವಳಿದು ಮಂತ್ರಪಿಂಡವಾಗಬೇಕಾಗಿ, ಶ್ರೀಗುರುವೆಂಬ ಹಲಾಯುಧನು ಶಿಷ್ಯತನುವೆಂಬ ಭೂಮಿವಿಡಿದು ನಿರ್ಮಲತ್ವ, ಸದಾಚಾರ, ಸುಜ್ಞಾನ, ಸದ್ಭಕ್ತಿ, ಪಾರಮಾರ್ಥಕೃಷಿ ಎಂಬ ಐದು ಪ್ರಕಾರದ ವ್ಯವಸಾಯಗಳನ್ನು ಮಾಡಿ ಪರಿಪೂರ್ಣಪ್ರಸಾದವೆಂಬ ಘನರಾಶಿಯ ಬತ್ತವನ್ನೇ ಪಡೆಯಲುಳ್ಳವನಾದುದರಿಂದ ಈ ಪ್ರಕರಣಗಳಿಗೆ ಜ್ಞಾನಕೃಷಿಗಳು ಎಂಬ ಹೆಸರಾಗಿ ಈ ಪಂಚಪ್ರಕರಣಗಳಲ್ಲಾದರೂ ಕೆಲವು ಪೂರ್ವಭಾಗ ಕೆಲವು ಉತ್ತರಭಾಗವಾಗಿರುವ ಕಾರಣ ಉತ್ತರ ಭಾಗಕ್ಕೆ ಪಾರಮಾರ್ಥಕೃಷಿ ಎಂಬ ಹೆಸರಾಗಿರುತ್ತದೆ.

ಈ ಗ್ರಂಥದಲ್ಲಿ ಮೊದಲು ಭೋಗಭುಕ್ತಿಯ ವಿಷಯಕ್ಕೆ ಕೃಷಿಯನ್ನು ಹೇಳಿ ತರುವಾಯದಲ್ಲಿ ಸದ್ಯೋನ್ಮುಕ್ತಿಯನ್ನು ಹೇಳಿದ್ದೇನೆ. ಅದು ಕಾರಣ ಈ ಗ್ರಂಥಕ್ಕೆ ಕೃಷಿಜ್ಞಾನವೆಂಬ ಹೆಸರಾಯಿತು ಮತ್ತು ಕೃಷಿಯನ್ನು ಹಾಗು ಜ್ಞಾನವನ್ನು ಮರೆ ಇಲ್ಲದೆ, ಕರತಳಾಮಳಕವಾಗಿ ಪ್ರಕೃಷ್ಟವಾಗಿ ತೋರಿಸಿಕೊಡತಕ್ಕಂಥ ಜ್ಯೋತಿಯಾದ ಕಾರಣ ಕೃಷಿಜ್ಞಾನಪ್ರದೀಪಿಕೆ ಎಂದೆನಿಸುತ್ತದೆ.

# ಲೌಕಿಕಾಚಾರದ ನಿರ್ಮಲತ್ವವು.

ಈ ಪ್ರಕರಣದಲ್ಲಿ ಮೊದಲು ಲೌಕಿಕಾಚಾರದ ವಿಷಯವಾಗಿರುವ ನಿರ್ಮಲತ್ವವನ್ನು ಹೇಳಬೇಕಾಗಿದೆ ಹೇಗೆಂದರೆ ನಿರ್ಮಲತ್ವವು ಬ್ರಹ್ಮಾಂಡ ಪಿಂಡಾಂಡಗಳೆರಡರಲ್ಲಿಯೂ ಬೇಕಾಗಿದೆ. ಭೂಮಿಯಲ್ಲಿ ಬೆಳೆಯಲ್ಪಟ್ಟ ಸಕಲ ಸಸಿ ವೃಕ್ಷ-ಲತಾದಿ ಸಮಸ್ತ ಫಲಪದಾರ್ಥವನೌಷಧಿಗಳಿಗೂ ಧಾನ್ಯಾದಿ ಸಕಲ ಪೈರುಗಳಿಗೂ ನಿರ್ಮಲತ್ವವಿದ್ದ ಹಾಗೆ ವಿಶೇಷ ಬೆಳೆಯಾಗುವವು. ಹಾಗೆ ಪಿಂಡೋದ್ಭವರಾದ ಸಕಲ ಪ್ರಾಣಿಗಳಿಗೂ ನಿರ್ಮಲತ್ವದಿಂದ ದೇಹಕ್ಕೆ ಆರೋಗ್ಯವಾಗುವದು ಅದರಲ್ಲಿ ಮನುಷ್ಯರುಗಳಿಗಂತೂ ನಿರ್ಮಲತ್ವವು ಅತ್ಯಂತ ಹಿತವಾದದ್ದು

ಭೋಗ ಸಾಧನವಾದ ಅನ್ನೋದಕ, ವಸ್ತ್ರಾಭರಣ ಮತ್ತು ಪಾಕಶಾಲೆ ಭೋಜನಶಾಲೆ ಕ್ರಿಯಾಶಾಲೆ ದೇವತಾರ್ಚನಾ ಶಾಲೆ ಶಯ್ಯಾಗೃಹ ಪಟ್ಟಶಾಲೆ ಅಶ್ವಾಲಯ ಗಜಾಲಯ ರಥಾಲಯ ಗೋಮಹಿಷಾದಿ ಪಶುವಾಲಯಗಳೆಂಬ ಮನೆಗಳಲ್ಲಿ ಕಚೇರಿ ಚಾವಡಿ ಸಭಾಸ್ಥಾನ ಮೊದಲಾದವುಗಳಲ್ಲಿ ಹಾಗು ಅಂಗಡಿ ಬೀದಿ ಬಾಜಾರ ಅಗಸೆ ರಸ್ತೆ ರಾಜಬೀದಿಗಳಲ್ಲಿ ಪುರ ಪಳ್ಳಿ ಗ್ರಾಮ ಪಟ್ಟಣ ಶಹರ ನಗರಗಳ ಬಹಿರ್ಭಾಗದಲ್ಲಿ ಮತ್ತು ಮಧ್ಯಭಾಗದಲ್ಲಿ ಅಲ್ಲದೆ ದೇವಾಲಯ ಧರ್ಮಶಾಲೆಗಳಲ್ಲಿ ಅಣುಮಾತ್ರ ಮಾಲಿನ್ಯವಿಲ್ಲದಂತೆ ಪ್ರಭುಗಳು ಪ್ರಜೆಗಳು ಸಹಿತ ಸರ್ವರೂ ಲಕ್ಷ ಹಾಕಿ ನಿತ್ಯದಲ್ಲೂ ತಪ್ಪದಂತೆ ನಿರ್ಮಲ ಮಾಡುತ್ತ ಹೋಗಬೇಕು ನಿರ್ಮಲತ್ವದಿಂದ ಮಂಗಲ ಉಂಟು. ನಿರ್ಮಲವಾದ ಶೋಭೆಯುಳ್ಳ ಸ್ಥಳಗಳಲ್ಲಿ ಶ್ರೀ ಲಕ್ಷ್ಮಿಯೂ ವಾಸವಾಗಿರ್ಪಳು ಮಲಿನ ಸ್ಥಳವು ದಾರಿದ್ರ್ಯ ಲಕ್ಷ್ಮಿಯು ನಿಜ ವಾಸದ ಸ್ಥಾನವು

ನಮ್ಮ ದೇಶವನ್ನಾಳುವ ವಿಲಾಯತಿ ಧೊರೆಗಳವರ ಮನೆಗಳನ್ನು ಅವರು ಮಲಗುವ ಹಾಸಿಕೆಗಳನ್ನು ಧರಿಸುವ ವಸ್ತ್ರಗಳನ್ನು ಕೂಡ್ರುವ ಸಿಂಹಾಸನಗಳನ್ನು ಮಂಚ ಖುರ್ಚಿ ಮೇಜು ಪೆಟ್ಟಿಗೆ ಮೊದಲಾದ ಸಾಮಾನುಗಳನ್ನು ನೋಡಿರಿ ಅವು ಎಷ್ಟು ಚನ್ನಾಗಿವೆ! ಮತ್ತು ಅವರು ವಿನೋದಾರ್ಥಕ್ಕಾಗಿ ಮಾಡಿಸಿರುವ ತೋಟಗಳನ್ನು ನೋಡಿದರೆ, ನಿರ್ಮಲತನದಿಂದ ಶೃಂಗಾರವಾಗಿ ಶೋಭೆಯಾಗಿ ಹೇಗೆ ರಂಜಿಸುತ್ತಿರುವವು! ಇವರು ನಡೆಯುವಲ್ಲಿ, ನುಡಿಯುವಲ್ಲಿ, ಹಾಗೂ ಇವರ ಸಕಲ ಕಾರ್ಯಗಳಲ್ಲಿ ನಿರ್ಮಲತನವೇ ಪ್ರಕಟಿಸುವದಲ್ಲದೆ, ಮಲಿನವಣುಮಾತ್ರವೂ ತೋರದು. ಸಮಸ್ತ ಲೋಕಾಚಾರದ ಲೌಕಿಕರಾದ ಗೃಹಸ್ಥರೆಲ್ಲರೂ ಇವರನ್ನು ನೋಡಿ ನಿರ್ಮಲತ್ವವನ್ನು ಕಲಿತುಕೊಳ್ಳಬೇಕು.

ನಮ್ಮ ದೇಶದ ಸ್ತ್ರೀಪುರುಷರಲ್ಲಿ ನಿರ್ಮಲರಾದ ಶುಚಿಗಳು ಬ್ರಾಹ್ಮಣ ಮತ್ತು ಲಿಂಗಾಯತರಲ್ಲಿ ಕೆಲವರುಂಟಲ್ಲದೆ, ಉಳಿದ ಧರ್ಮದ ಸ್ತ್ರೀಪುರುಷ

ರೆಲ್ಲರೂ ಶುಚಿಗಳಲ್ಲವು. ಕೆಲವು ಚಿಕ್ಕ ಹಳ್ಳಿಗಳಲ್ಲಿ ಕೆಲವು ಪಾಮರ ಗ್ರಾಮಗಳಲ್ಲಿ ಇರುವ ಮನೆಗಳು ಅಮಂಗಲರೂಪವಾಗಿದ್ದು ಆ ಸ್ತ್ರೀಯರುಗಳ ಸಮೀಪದಲ್ಲಿ ನಿಲ್ಲಲಾಗದಂಥ ದುರ್ವಾಸನೆಯು ಇದ್ದು ಅವರ ಶರೀರವೂ ವಸ್ತ್ರಗಳೂ ಮಲಿನವಾಗಿ ಅವರ ವಾಕ್ಯದಲ್ಲಿ ಸ್ವಲ್ಪಾದರೂ ವಿನಯವಿಲ್ಲದೆ ಗಾಂಪರಾಗಿರುವದು ಅದು ಅವರಿಗೆ ಅಭ್ಯಾಸವಾಗಿ ನಿರ್ಮಲತ್ವದಿಂದಿರುವದಕ್ಕೆ ಬೇಸರಪಡುತ್ತಾರೆ. ಅದರೊಳಗೆ ಈ ದುಷ್ಕಾಲದ ತಾಪದಲ್ಲಂತೂ ನೋಡ ಕೂಡದ ಕುರೂಪಿಗಳಾಗಿದ್ದಾರೆ

ಇದಲ್ಲದೆ ಕೆಲವು ಸ್ತ್ರೀಪುರುಷರು ಮೈಗಳ್ಳತನದಿಂದ ಆಲಸ್ಯತ್ವದ ಮುಗ್ಗಲತನದಿಂದ ತಮ್ಮ ಶರೀರದಲ್ಲಿ ಧರಿಸತಕ್ಕಂಥ ವಸ್ತ್ರಗಳನ್ನು ನಿತ್ಯದಲ್ಲೂ ತೊಳೆದು ನಿರ್ಮಲ ಮಾಡಲಾರದೆ, ಒಂದು ವರ್ಷದಲ್ಲಿ ನಾಲ್ಕಾರು ವೇಳೆ ತೊಳೆದರೆ ತೊಳೆಯುವರು, ಇಲ್ಲವಾದರೆ ಇಲ್ಲೇ ಇಲ್ಲ. ಇಂಥ ಮಲಿನ ವಸ್ತ್ರಗಳನ್ನು ಧರಿಸುವಲ್ಲಿ ಮೈಬೆವರಿನ ಮಲಿನತ್ವದಿಂದ ದುರ್ವಾಸನೆಯಾಗಿ ಆ ವಸ್ತ್ರಗಳಲ್ಲಿ ಕೂರಿಗಳೆಂಬ ಒಂದು ಪ್ರಕಾರದ ಚಿಕ್ಕ ಹುಳುಗಳು ಹುಟ್ಟಿ ಜಾಡಿಸಿದರೆ, ಎಳ್ಳು ಉದುರಿದ ಹಾಗೆ ಉದುರುತ್ತಿದ್ದು ಯಾವಾಗಲೂ ಅವು ಅವರ ಶರೀರವನ್ನು ರಕ್ತಪಾನ ಮಾಡುತ್ತ ಹಗಲು ರಾತ್ರಿಯಲ್ಲಿ ಉಪದ್ರವ ಕೊಟ್ಟರೂ ಕರಕೊಂಬುತ್ತ ತಿರುಗುವರಲ್ಲದೆ ವಸ್ತ್ರಗಳನ್ನು ತೊಳೆದು ನಿರ್ಮಲ ಮಾಡಿಕೊಳ್ಳಲಾರರು.

ಮೈಗಳ್ಳರಾದ ಸ್ತ್ರೀಯರು ಸ್ವಚ್ಛವಾಗಿ ತಲೆಯ ಕೂದಲುಗಳಿಗೆ ಆಗಾಗ್ಗೆ ಎಣ್ಣೆಯನ್ನು ಹಚ್ಚಿ ಬಿಸಿ ನೀರಿನಿಂದ ಎಣ್ಣೆ ವಾಸನೆ ಹೋಗುವಂತೆ ಸೀಗೇಕಾಯಿ ಹುಳಿ ನೀರನ್ನು ಹಚ್ಚಿ ಜಳಜಳವಾಗುವ ಹಾಗೆ ತೊಳೆದು ನೀರು ಎರೆದುಕೊಳ್ಳಲಾರದ ಮಸ್ತಕವು ಮಲಿನವಾಗಿ ತಲೆಯ ಬೆವರಿನಿಂದ ಚಿಕ್ಕ ಹೇನುಗಳೆಂಬ ಹುಳಗಳು ಹುಟ್ಟಿ ತಲೆಯನ್ನು ಕಚ್ಚುವದರಿಂದ ಕೆರೆದುಕೊಂಡು ಹುಣ್ಣು ಬಿದ್ದಾಗ್ಯಾದರೂ ಎರೆದುಕೊಳ್ಳಲಾರರು. ಮತ್ತು ಕೂರಿಗಳ ಉಪದ್ರವಕ್ಕಂತೂ ಅವರಿಗೆ ಲಕ್ಷವೇ ಇಲ್ಲ

ಮನೆಗಳ ವಿಷಯವಾಗಿ ಸ್ವಲ್ಪ ಹೇಳುತ್ತೇನೆ. ಹೇಗಂದರೆ ನಿತ್ಯದಲ್ಲಿ ಚನ್ನಾಗಿ ಕಸವನ್ನು ಹೊಡೆಯಲಾರದೆ ಮತ್ತು ಉಳಿದ ಕಸವನ್ನಾದರೂ ಮನೆಯಲ್ಲಿ ಒತ್ತಟ್ಟಿಗೆ ಒಂದು ಮೂಲೆಯಲ್ಲಿ ನೂಕುತ್ತಾರೇ ಹೊರತು ದೂರ ಒಯ್ದು ಹಾಕಲಾರರು ಹೀಗೆ ಹತ್ತೆಂಟು ದಿವಸ ಮಾಡುವಷ್ಟರಲ್ಲಿ ಆ ಕಸದ ಮಲಿನದಲ್ಲಿ ಚಿಕ್ಕಾಡುಗಳೆಂಬ ಪಕ್ಷದ ಹುಳಗಳು ರಾಶಿರಾಶಿಯಾಗಿ ಹುಟ್ಟಿ ಮನೆಯಲ್ಲೆಲ್ಲ ತುಂಬಿಕೊಂಡು ವಸ್ತ್ರಗಳಲ್ಲಿ ಹೊಕ್ಕು ಹಗಲೂ ರಾತ್ರಿಯಲ್ಲಿ ಸಹ ಕಡಿದು ರಕ್ತಪಾನ ಮಾಡುತ್ತವೆ. ಈ ಹುಳಗಳು ಸಣ್ಣವಾದರೂ

ಉಪದ್ರವ ಬಹಳ. ಅವು ಕೈಗೆ ಸಿಕ್ಕುವದಿಲ್ಲ. ಸಿಕ್ಕ ಕಾಲಕ್ಕಾದರೂ ಅವುಗಳ ಶರೀರಗಳು ಬಿರುಸಾಗಿರುವದರಿಂದ ಅವು ಬೇಗ ಸಾಯುವದಿಲ್ಲ.

ಕೆಲವು ಸ್ತ್ರೀಯರಿಗೆ ಅಡಿಗೆಯ ಮನೆಯ ಬಚ್ಚಲದಲ್ಲಿ ಮೂತ್ರ ಗೈಯ್ಯುವ ರೂಢಿ ಇರುವದರಿಂದ ಮೂತ್ರದ ದುರ್ವಾಸನೆಗೆ ಕುದುರೆಯ ಮೋತಿಯ ಹುಳುಗಳೆಂಬ ಅರು ಕಾಲಿನ ಉದ್ದವಾದ ಸೂಜಿಯಂಥ ಚುಂಚುಗಳುಳ್ಳ ಪಕ್ಷದ ಹುಳಗಳು ಹುಟ್ಟಿ ಕಡಿಯಲಾರಂಭಿಸಿದರೆ, ಸರ್ವಾಂಗದಲ್ಲಿ ಸೂಜಿಯನ್ನು ಚುಚ್ಚಿದಂತಾಗುವದು. ಎಲ್ಲ ಹುಳಗಳ ಉಪದ್ರವಕ್ಕಿಂತಲೂ ಈ ಹುಳಗಳ ಉಪದ್ರವವು ಬಹಳ.

ಮನೆಯ ಅಂಗಳದಲ್ಲಿ ಮತ್ತು ಮನೆಯ ಸಮೀಪಕ್ಕೆ ಹೊಂದಿ ಹಿಂಭಾಗದ ಹಿತ್ತಲುಗಳಲ್ಲಿ ಮಲವಿಸರ್ಜನೆ ಮಾಡುವದರಿಂದ ಅದರ ದುರ್ವಾಸನೆಗೆ ನೊರಜುಗಳೆಂಬ ಅತಿ ಸಣ್ಣ ಪಕ್ಷದ ಹುಳಗಳು ಹುಟ್ಟಿ ಮನೆಯಲ್ಲಿ ಸೇರಿಕೊಂಡಿದ್ದು ಕಣ್ಣು ತೆರೆದಾಕ್ಷಣಕ್ಕೆ ಕಣ್ಣಿಗೆ ಮುತ್ತಿಕೊಂಡು ಕಡಿಯುತ್ತವೆ.

ಇದಲ್ಲದೆ ವರ್ಷದಲ್ಲಿ ಒಂದೆರಡು ವೇಳೆಯಾದರೂ ಮನೆಯನ್ನು ಗೋಡೆಯನ್ನು ಸಾರಿಸಿ ನಿರ್ಮಲ ಮಾಡದೆ, ಮತ್ತು ಅಗಿಂದಾಗಲೆ ಗೋಡೆಯ ಮೇಲಿರುವ ಧೂಳವನ್ನು ಹೊಡೆಯದೆ ಇರುವದರಿಂದ ತ್ರಿಗುಣಿ ಎಂಬ ಹುಳಗಳು ಹುಟ್ಟುತ್ತವೆ. ಈ ಹುಳಗಳಿಗೆ ಮೂರು ಗುಣಗಳುಂಟು. ಮೂಗನ್ನು ಊರುವದು, ರಕ್ತವನ್ನು ಹೀರುವದು, ತೀವ್ರವೇ ಜಾರುವದು ಈ ಪ್ರಕಾರದ ಮೂರು ಗುಣಗಳಿರುವದರಿಂದ ಈ ಹುಳಗಳಿಗೆ ತ್ರಿಗುಣಿಯೆಂಬ ಹೆಸರಾಗಿದೆ. ಈ ಶಬ್ದ ಕೆಟ್ಟು ತಗಣಿ ಎನ್ನುತ್ತಾರೆ ಮನೆಯಲ್ಲಿ ಇದೊಂದು ಇದ್ದರೆ, ದಿನ ಒಂದಕ್ಕೆ ಸಾವಿರ ಮಕ್ಕಳನ್ನು ಹಡೆಯುತ್ತದ. ಕೆಲವು ದಿವಸಕ್ಕೆ ಅವುಗಳು ಪ್ರಬಲವಾಗಿ ಗೋಡೆಗಳಲ್ಲಿ ಕಂಬದ ಬಿರುಕುಗಳಲ್ಲಿ ಧರಿಸುವ ವಸ್ತ್ರಗಳಲ್ಲಿ ಮಲಗುವ ಹಾಸಿಗೆಯಲ್ಲಿ ಮನೆಯ ಜಂತೆಗಳಲ್ಲಿ ಸಹ ಸೇರಿಕೊಂಡು ರಾತ್ರಿ ಹಗಲೂ ಕಡಿಯುತ್ತಿರುವವು. ರಾತ್ರಿಯಲ್ಲಿ ನಿದ್ರಾಸಮಯಕ್ಕೆ ಬಂದು ಶರೀರವನ್ನು ಮುತ್ತಿಕೊಂಡು ಕಡಿಯಲಾರಂಭಿಸಿದರ, ಶರೀರಕ್ಕೆ ಬೆಂಕಿ ಹಚ್ಚಿದಂತಾಗುವದು.

ಇವೆಲ್ಲದರಕ್ಕಿಂತ ಮಲಿನತ್ವದಿಂದ ಇನ್ನೊಂದು ದೊಡ್ಡ ಅನರ್ಥವುಂಟು. ಅದೇನಂದರೆ, ಮನೆಯ ಸಮೀಪದಲ್ಲಿ ತಿಪ್ಪೆಯನ್ನು ಹಾಕಿದ್ದರೆ, ಮತ್ತು ಬಚ್ಚಲದ ನೀರು ನಿಲ್ಲುವ ಹಾಗೆ ಮಾಡಿದ್ದರ, ಇವುಗಳ ದುರ್ವಾಸನೆಯು ಮೂಗಿನ ಶ್ವಾಸ ಮುಖದಿಂದ ಮಸ್ತಕದ ಮಿದುಳು ಕೆಟ್ಟು ಹೊಟ್ಟೆಯಲ್ಲಿ ನಾಭಿ ಸೂತ್ರ ನಾಡಿಗಿಳಿಯುತ್ತದೆ. ಇದರಿಂದ ಒಂದು ಪ್ರಕಾರದ ಹುಳಗಳು ಹುಟ್ಟುವವು. ಈ ರೋಗಕ್ಕೆ ಮಾರೀ ಉಪದ್ರವವೆನ್ನು

ತ್ತಾರೆ. ಈ ರೋಗವು ಊರೊಳಗೆ ಒಬ್ಬನಿಗೆ ಹುಟ್ಟಿದರೆ ಸಾಕು, ಅದು ಹಬ್ಬುತ್ತದೆ. ಅವನು ಮಲಮೂತ್ರ ವಿಸರ್ಜನೆ ಮಾಡಿದಲ್ಲಿ ಅಥವಾ ಅವನ ಬಾಯಿಯ ವಾಂತಿಯಲ್ಲಿರುವ ನೊಂಕು ತಾಕಿದರೆ ಸಾಕು, ಈ ರೋಗ ಹಬ್ಬು ತ್ತದೆ. ಹೀಗಾಗಿ ಒಂದೊಂದು ದೊಡ್ಡ ಗ್ರಾಮದಲ್ಲಿ ಸಹಸ್ರಾವಧಿ ಜನರು ಮರಣ ಹೊಂದುತ್ತಾರೆ.

ಇವುಗಳೆಲ್ಲ ಮಲಿನದಿಂದಾದ ಅನರ್ಥಂಗಳು. ಇಷ್ಟು ಉಪದ್ರವಗಳು ಶರೀರಕ್ಕೆ ಇದ್ದಾಗ್ಯಾದರೂ ಜನರು ಅಜ್ಞಾನಿಗಳಾದ ಕಾರಣ ನಿರ್ಮಲರಾ ಗಿರಬೇಕೆಂಬ ಬುದ್ಧಿಯೂ ಹುಟ್ಟದೇ ಹೋಗುತ್ತದೆ.

ರಾಜರುಗಳು ಇವರ ಹೊಲಸುತನವನ್ನು ಲಕ್ಷಕ್ಕೆ ತಾರದೆ, ಇವುಗಳಿಗೇ ನಾದರೂ ಉಪಾಯಗಳನ್ನು ಮಾಡದೇ ಹೋದರೆ, ಜನರಿಗೆ ಎಂದಿಗೂ ಬುದ್ಧಿ ಬರುವದಿಲ್ಲ ಇವರಿಗೆ ನಿರ್ಮಲತನದ ರುಚಿಯು ಹುಟ್ಟುವದಿಲ್ಲ.

ಇಷ್ಟು ಪ್ರಕಾರದ ಉಪದ್ರವವಾದ ಕಾಲಕ್ಕೂ ನಿರ್ಮಲತನದ ಸುಖವು ಮಲಿನತ್ವದ ದುಃಖವು ಇವರಿಗೆ ತಿಳಿಯದೆ ಹೋಯಿತು! ಇಂಥ ಮೂರ್ಖರನ್ನಾ ದರೂ ವಿವೇಕಕ್ಕೆ ತರುವ ವಿಷಯದಲ್ಲಿ ನಮ್ಮ ರಾಜ ಪ್ರಭುಗಳು ಸಾಮರ್ಥ್ಯ ವುಳ್ಳವರಿದ್ದಾರೆ. ಅವರು ಲಕ್ಷ ಹಾಕದ ಕಾರಣ ಉಳಿದಿರುವದು. ಸ್ವಲ್ಪ ಲಕ್ಷ ಹಾಕಿ ದರೆ ಸಾಕು, ಅವರಿಗಿದೇನೂ ಆಶ್ಚರ್ಯವಲ್ಲ ಹೀಗೆ ರಾಜರು ಬಲಾತ್ಕಾರ ದಿಂದಾದರೂ ಮಲಿನತ್ವದ ಜಾಡ್ಯ ಗುಣವನ್ನು ಬಿಡಿಸಿದರೆ ದೋಷವಿಲ್ಲ.

ಈ ನಿರ್ಮಲತನದ ವಿಷಯಕ್ಕೆ ಕಾಯದೆಯ ಬುಕ್ಕಿನಲ್ಲಿ ಒಂದು ಆ್ಯಕ್ಟನ್ನು ಮಾಡಿದರೆ, ಸಾಕು. ತತ್ಕಾಲಕ್ಕೆ ದೇಶವೆಲ್ಲ ನಿರ್ಮಲತನದಿಂದ ಸುಧಾರಿಸು ವದಾಗಿ ಸರ್ವರಿಗೂ ಸುಖವಾಗುವದು.

ಶರೀರಾದಿ ಸಕಲ ವಸ್ತುಗಳನ್ನು ನಿರ್ಮಲ ಮಾಡುವದಕ್ಕೆ ಜಲವೇ ಮುಖ್ಯ ಸಾಧನವು. ಅದು ಕಾರಣ ಜಲವೆಂಬುದು ಜೀವನೋಪಾಯಕ್ಕೆ ಜೀವನವಾದ ಕಾರಣ ಜೀವನವೆಂಬ ನಾಮವು ಸಾರ್ಥಕವಾಗಿದೆ. ಈ ಜಲವೇ ಕಟ್ಟು ಅಪವಿತ್ರವಾಗಿ ಮಲಿನಾದಿ ದೋಷಗಳನ್ನು ಹೊಂದಿದರೆ, ವಿಷವಾಗಿ ಒಪ್ಪುತ್ತಿಹುದಾಗಿ ಕೋಶಕಾರನು ಜಲವನ್ನು ವರ್ಣಿಸಿದ್ದೇನಂದರೆ "ನೀರಂ ಜೀವನಂ ವಿಷಂ ಕೀಲಾಲಂ ಅಮೃತಂ ಪಯಃ" ಎಂದು ಹೇಳಿದ್ದಾನೆ. ಇದ ಲ್ಲದೆ "ಜೀವನಂ ಸರ್ವ ಜಂತೂನಾಂ ಮಹಾದೇವ ಜಟಾಸಿಥೇ" ಎಂದುಂ ಟಾಗಿ ಜಲವೇ ಜೀವನಕ್ಕೆ ಜೀವನ ಎಂದುದರಿಂದ ಬಲ್ಲವರುಗಳೆಲ್ಲರು ನಿರ್ಮಲ ಜಲದಿಂದಲೇ ಸಕಲಭೋಗ ಪದಾರ್ಥಗಳನ್ನು ನಿರ್ಮಲ ಮಾಡಿ ಮತ್ತು ನಿರ್ಮಲ ಜಲದಿಂದಲೇ ಸ್ನಾನ ಪಾನಾದಿ ಪಾಕ ಪ್ರಯತ್ನಂಗಳನ್ನು ಮಾಡ

ಬೇಕು. ಅಪವಿತ್ರವಾದ ಮಲಿನ ಜಲವನ್ನೂ ದೋಷಾರೋಪಣ ಜಲವನ್ನೂ ಮುಟ್ಟಲಾಗದು. ಜಲವನ್ನು ಶೋಧಿಸಿದರೆ ಉದಕನೆನಿಸುವದು. ಸದಾಚಾರಿಗಳು ಶೋಧಿಸದೆ ಇದ್ದ ಜಲವನ್ನು ಯಾವ ಕೆಲಸಕ್ಕೂ ತೆಗೆದುಕೊಳ್ಳಬಾರದು.

"ಯಾವನ್ಮಾತ್ರ ಮನಶ್ಶುದ್ಧಿಃ ತಾವತ್ ಶೌಚಂ ಸಮಾಚರೇತ್" ಇದು ಶೃತ್ಯಾಚಾರವು. ಹೇಗೆಂದರೆ ಎಲ್ಲಿಯು ವರೆಗೆ ಮನಃಶುದ್ಧಿ ಹೊಂದುವದೋ ಅಲ್ಲಿಯು ವರೆಗೂ ಶುಚಿ ಮಾಡಬೇಕು. ಹೀಗೆ ಈ ಅರ್ಥವಿರುವದರಿಂದ ಕೆಲವರು ಫ್ರೆಂಚ ದೇಶದ ಸನ್ಯಾಸಿಗಳ ಬೋಧೆಯ ಸಂತತಿಯವರು ಲೋಕಾಚಾರದಂತೆ ಮಾಡಿ ಉಂಬುವದಾಗದೆ, ವೈಗಳ್ಳತನದಿಂದ ಮತ್ತು ವಿಷಯ ವ್ಯಸನಾದಿಗಳ ಲಂಪಟತ್ವದಿಂದ ಸುರಾಪಾನ ಮಾಂಸಾಹಾರಾದಿಗಳ ರುಚಿಯಿಂದ ಬಯಲೇ ಬ್ರಹ್ಮವೆಂಬ ಉಭಯ ಭ್ರಷ್ಟತ್ವದ ಕೆಲವು ಮಾತುಗಳನ್ನು ಕಲಿತು ಶುಚಿಗಳಾದವರನ್ನು ಧಿಃಕ್ಕರಿಸುತ್ತ ಭಂಗಿ ದತ್ತೂರಿಯ ಅಮಲಿನಿಂದ ಪದಗಳನ್ನು ಹಾಡುತ್ತಾರೆ ಹೇಗೆಂದರೆ 'ಮುಟ್ಟೇ ಮುಟ್ಟೇ ಎಂದು ಮೂರು ಮಾರು ಹಾರತೀವಿ. ಮಟ್ಟನೊಳಗೆ ಹುಟ್ಟಿ ಬಂದ್ಯೋ ಪಿಕನಾಸಿ" ಎಂದು ಶೃತ್ಯಾಚಾರ ಮತ್ತು ವೇದೋಕ್ತ ಧರ್ಮಾಚಾರಕ್ಕೆ ವಿರುದ್ಧವಾದ ಪದಗಳನ್ನು ಬಾಯಿಗೆ ಬಂದಂತ ಲಕ್ಷಣ ಹೀನವಾಗಿ ಕೂಗುತ್ತ ಬತ್ತಲೆ ಇರುತ್ತ ಶ್ವಪಚಾದಿಯಾಗಿ ಸರ್ವರಲ್ಲಿ ತಿರಿದುಂಬುತ್ತ ಬೋಕಿಯಲ್ಲಿ ಉಂಬುತ್ತ "ನಾವು ಅದ್ವೈತಿಗಳು ಆರೂಢರು ಬ್ರಹ್ಮಜ್ಞಾನಿಗಳು" ಎಂದು ಬಿಂಕದ ಮಾತುಗಳನ್ನಾಡುತ್ತ ತಿಪ್ಪೆಯಲ್ಲಿ ಅಮಲೇರಿ ಹೊರಳಾಡುತ್ತ ಜನರಿಗೆ ದುರ್ಬೋಧೆಯನ್ನು ಬೋಧಿಸುತ್ತ, "ತಾನು ಕೆಟ್ಟ ಕೋತಿ ವನವ ಕೆಡಿಸಿತ್ತು" ಎಂಬ ಗಾದೆಯಂತೆ, ಅನಂತ ದುರ್ನಡತೆಗಳಿಂದ ನಡೆಯುತ್ತ ಶೃತ್ಯಾಚಾರವುಳ್ಳ ಆಚಾರವಂತರಾದ ಶುಚಿಗಳನ್ನು ಧಿಃಕ್ಕಾರ ಮಾಡುತ್ತ ಶ್ವಪಚಾಚಾರಿಗಳಾದ ಮಾದಿಗರ ಅಭ್ಯಾಸದ ಕೆಲವು ಅದ್ವೈತಿಗಳು ಅನಾಚಾರಿಗಳಾಗಿ ವರ್ತಿಸುವರು.

ನಾನು ನೋಡುವದರಲ್ಲಿ ಇಂಥ ಆರೂಢರು ಅನೇಕರು ದೇಹದಲ್ಲಿ ಹುಳಗಳು ಬಿದ್ದು ಒರಲಿ ಸತ್ತು ಹೋದರು. ಬನ್ನೂರೆಂಬ ಗ್ರಾಮದ ಪೇಟಿಯಲ್ಲಿ ಒಬ್ಬನು ದಿಗಂಬರನಾಗಿ ಬಂದು ಬೀದಿಯಲ್ಲಿ ಕೆಲವು ಹೊತ್ತು ಮಲಗಿದ್ದು ಆ ಮೇಲೆ ಎದ್ದು ಕುಳಿತು ಬಚ್ಚಲದ ನೀರ ಡೋಣಿಯಲ್ಲಿಯ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿಯುತ್ತಿದ್ದನು. ಅಷ್ಟರಲ್ಲಿ ಒಬ್ಬ ಉತ್ತಮ ಸ್ತ್ರೀಯಳು ಕಂಡು "ಆ ಉದಕ ನಾರುತ್ತದೆ. ಚಲೋ ನೀರು ಹಾಕುವೆನು ಆ ನೀರು ಕುಡಿಯಬೇಡ" ಎಂದು ಹೇಳಿದಾಗ್ಯಾದರೂ ಅದೇ ನೀರು ಕುಡಿದು ಆ ಸ್ತ್ರೀಯಳಿಗಂದದ್ದೇನಂದರೆ, "ಇದು ಮಹಾ ಗಂಗಾ ಜಲವು. ನಾರುವದಂಟೇ? ನಿನ್ನ ಪೃಷ್ಟದಲ್ಲಿ ಬೆರಳಿಟ್ಟು ನೋಡು. ನಾರುತ್ತದೆ" ಎಂದನು. ಆಗ ಅಲ್ಲಿದ್ದವರೆಲ್ಲರೂ ಸುತ್ತಲೂ ನೆರೆದು ನೀನು ಎಲ್ಲೀದ ಬಂದಿ

ಎಂದು ಕೇಳಲಾಗಿ ಮಾಣೀದ್ವಾರದಿಂದ ಬಂದೆನೆಂದು ಹೇಳಿ ಆ ಸ್ಥಳವನ್ನು ಬಿಟ್ಟು ಗುಡ್ಡಕ್ಕೆ ಹೋದನು ಇಂಥವರಿಗೆ ಜ್ಞಾನಿಗಳೆನಬೇಕೋ ಅಜ್ಞಾನಿಗಳೆನಬೇಕೋ ನೀವೇ ನೋಡಿರಿ.

ಅದ್ವೈತಿಗಳೆಂದರೆ ಬಹಿರಂಗದ ಕ್ರಿಯೆಗಳಲ್ಲಿ ಅದ್ವೈತ ಉಂಟೇ ? "ಅಂತರ್ಜ್ಞಾನ ಬಹಿಃ ಕ್ರಿಯಾ। ಏಕೋ ಭಾವ ಸಮಾಚರೇತ್" ಎಂದಲ್ಲಿ ಅಂತರಂಗದ ಜ್ಞಾನವನ್ನೇ ಬಹಿರಂಗದ ಕ್ರಿಯೆಯಲ್ಲಿ ಸಮವಾಗಿ ಸರಿಗೊಳಿಸಬೇಕಾದರೆ, ಅಂಗವಿರುವ ವರೆಗೂ ಆಚಾರವಿರಬೇಕು ಆ ಆಚಾರವು ಅನಾಚಾರವಾಗದೆ ಶೃತಿಸಮ್ಮತವಾದ ಶೃತ್ಯಾಚಾರವಾಗಬೇಕು ಆ ಆಚಾರವಿಡಿದು ಜ್ಞಾನವನ್ನಾಶ್ರಯಿಸಬೇಕು. ಜ್ಞಾನವಿಡಿದು ಸದ್ಯೋನ್ಮುಕ್ತರಾಗಬೇಕು.

ಇದಲ್ಲದೆ "ಮುನ್ನವೇ ಭಕ್ತಿಕ್ರಿಯೆಯಿಂದಂ। ನೆರೆ ಪರಿಶುದ್ಧವಾದ ಬುದ್ಧಿಯನುಳ್ಳ ಸಮುನ್ನತ ಗುಣಗಣ ಸಂ। ಪನ್ನಗೆ ನಿಜಾರ್ಥ ಸಾಧ್ಯಮಿದರೋಳ್॥" ಎಂದು ಪರಮಾರ್ಥ ಗೀತೆಯಲ್ಲಿ ಹೇಳಿದ್ದಾರೆ ಮತ್ತು "ಬಳಸದಿರದ್ವೈತವನು ಬಾಹ್ಯದಲಿ ನಿ। ನ್ನೊಳಗೇಕೋಭಾವನೆಯೊಡಗೂಡು॥ ತಿಳಿದು ಸಮಯ ನಿಷ್ಠೆ ವೇದ ವಿದ ಭಕ್ತಿಯನಗಲದಿರೆಂದು ಬೆಸಸುವ। ಶ್ರೀಗುರು ವಚನೋಪದೇಶವ ನಾಲಿಸಿ। ದಾಗಳಹುದು ನರರಿಗೆ ಮುಕುತಿ" ಎಂಬ ನಿಜಗುಣ ಶಿವಯೋಗಿಗಳು ಆಗಮ ಪ್ರಮಾಣವಾಗಿ ಹೇಳಿದ ಪದಗಳ ಅಭಿಪ್ರಾಯವನರಿಯದೆ, ಹುಚ್ಚು ತಲೆಗೇರಿ ಕುಣಿದಾಡಿ ಕೂಗಿದರೆ, ಅದ್ವೈತಿಗಳಾಗಬಲ್ಲರೇ ? ಇದು ಅವಧೂತ ಮಾರ್ಗವಲ್ಲ. ಇದೊಂದು ಅಜ್ಞಾನ ಮಾರ್ಗ ಬೇರೆ ಇದೆ ಇದು ಫ್ರೆಂಚ ದೇಶದ ಸನ್ಯಾಸಿಗಳ ಬೋಧೆಯು. ಇದು ವೇದ ಸಮ್ಮತವಲ್ಲ ಆಗಮ ಸಮ್ಮತವಲ್ಲ. ಶೃತಿಸಮ್ಮತವಾದ ಮಾರ್ಗವಲ್ಲಾದ ಕಾರಣ, ಈ ಮತದವರನ್ನು ನಂಬಬಾರದು. ಯಾಕೆಂದರೆ, "ಶೃತಿ ವಿರಹಿತವಾದ ಮತವ ತಾನುಳಿವುದೆ ಚಂದಮಾವು" ಎಂದು ನಿಜಗುಣವಾಕ್ಯ ಉಂಟಾಗಿದೆ

"ಜ್ಞಾನಿ ಸರ್ವತ್ರ ಲೋಚನಃ" ಎಂದುಂಟಾಗಿ ಜ್ಞಾನಿಯಾದರೆ ಸರ್ವಾಂಗನೇತ್ರ ಉಳ್ಳವರಂತೆ, ಜಾಗ್ರತರಾಗಿ ಲೋಕಾಪವಾದವನ್ನು ಹೊರದೆ, ಲೋಕಾಚಾರ ಶೃತ್ಯಾಚಾರ ಜ್ಞಾನಾಚಾರಕ್ಕೆ ವಿರುದ್ಧವಾಗಿ ನಡೆಯದೆ, ನಡೆವಲ್ಲಿ ನುಡಿವಲ್ಲಿ ಕೊಡುವಲ್ಲಿ ಕೊಂಬಲ್ಲಿ ಪಾಕ ಪ್ರಯತ್ನಾದಿ ಸ್ನಾನ ಪಾನಂಗಳಲ್ಲಿ, ನಿರ್ಮಲತ್ವವನ್ನೇ ಪ್ರಕಟಿಸಬೇಕಲ್ಲದೆ, ದುರ್ನಡತೆಯಾಗಬಾರದು. ಮತ್ತು "ಸ್ವೇಚ್ಛಾಚಾರೋ ಗಣೇಶ್ವರಃ" ಎಂಬ ಪ್ರಮಾಣ ಉಂಟಾಗಿ ಮಹಾತ್ಮರು ಸ್ವೇಚ್ಛಾಚಾರಿಗಳಾದಾಗ್ಯಾದರೂ ನಿರ್ಮಲತ್ವವೇ ಬೇಕು. ಅನಾಚಾರಿಗಳಾಗಬಾರದು ಸ್ವೇಚ್ಛಾಚಾರವಾದಾಗ್ಯೂ ಅದು ಆಗಮ ಪ್ರಮಾಣದಂತೆ, ಆದ್ಯರ

ವಚನಶಾಸ್ತ್ರಾನುಸಾರವಾಗಿ, ವೀರಮಾಹೇಶ್ವರಾಚಾರವಾಗಬೇಕು. ಆಗಮ ಸಮ್ಮತವಲ್ಲದ ಅನಾಚಾರವಾಗಬಾರದು.

ಆಚಾರಾದಿ ಸತ್ಕ್ರಿಯೆಗಳಿಗೆ ನಿರ್ಮಲ ಜಲವೇ ಪ್ರಾಮಾಣ್ಯವಾಗಿ ಮುಖ್ಯವಾಗಿ ಲೋಕಾಚಾರಕ್ಕೂ ಜ್ಞಾನಾಚಾರಕ್ಕೂ ಅದು ನಿರ್ಮಲವಿರಬೇಕು. ಹ್ಯಾಗೆಂದರೆ, ಬಾವಿಗಳ ಸಮೀಪದಲ್ಲಿ ತಿಪ್ಪೆಗಳಿರಬಾರದು. ಬಚ್ಚಲ ನೀರ ಹರಿಗಳಿರಬಾರದು. ಮತ್ತು ಮಲಮೂತ್ರ ವಿಸರ್ಜನೆ ಮಾಡಬಾರದು. ಮಳೆಯಾದಾಗ ಊರ ಮಲಿನವಾದ ನೀರು ಬಾವಿಯಲ್ಲಿ ಹೋಗಬಾರದು. ಬಾವಿಯ ಸಮೀಪದಲ್ಲಿ ಶವಗಳನ್ನು ಹೂಳಬಾರದು. ಬಾವಿಯಲ್ಲಿ ಮಲಿನ ವಸ್ತ್ರಗಳನ್ನು ತೊಳೆಯಬಾರದು. ಸಗಣಿಯಾದ ಕೈಕಾಲುಗಳನ್ನು ತೊಳೆಯಬಾರದು. ರೋಗೀ ಜನರ ಮೈ ತೊಳೆಯಬಾರದು ಮಲಮೂತ್ರ ವಿಸರ್ಜನೆಯಾದ ಬಟ್ಟೆಗಳನ್ನು ಕೌದಿಗಳನ್ನು ಹಾಗೂ ಋತುಮತಿ ಸ್ತ್ರೀಯರ ಬಟ್ಟೆಗಳನ್ನು ತೊಳೆಯಬಾರದು. ಇಂಥ ನಿರ್ಮಲತರದ ಭಾವಿ ಇದ್ದರೆ ಆ ಭಾವಿಯ ಉದಕವನ್ನು ಬಳಸಬೇಕು ಇದನ್ನು ಪರೀಕ್ಷಿಸದೆ ಬಳಸಿದರೆ, ಜ್ಞಾನಿಗಳ ಜ್ಞಾನಾಚಾರಕ್ಕೂ ಭಂಗವು. ಲೋಕಾಚಾರದ ನಿರ್ಮಲತನಕ್ಕೂ ಭಂಗವಾಗಿ ಕಜ್ಜಿ ತಿಮರು ಇಸಬು ಗಜಕರ್ಣ ಇಂಥ ರೋಗಗಳು ಆಗುವವಲ್ಲದೆ ಶವಗಳನ್ನು ಹೂಳಿದ್ದಲ್ಲಿ ಮಳೆಗಾಲ ಸಮಯಕ್ಕೆ ಸಮಾಧಿಯ ನೀರು ಬಸಿದು ಬಾವಿಯಲ್ಲಿ ಬಂದರೆ ಗಿರಣಿ ಮೊದಲಾದ ರೋಗಗಳು ಹುಟ್ಟುತ್ತವೆ ಅದು ಕಾರಣ ಲೋಕಾಚಾರಕ್ಕೂ ಜ್ಞಾನಾಚಾರಕ್ಕೂ ನಿರ್ಮಲವಾದ ಜಲವನ್ನೇ ಬಳಸಬೇಕಲ್ಲದೆ, ಅಪವಿತ್ರ ಜಲವನ್ನು ಬಳಸಲಾಗದು.

ಸೇದುವ ಬಾವಿಯಾದ ಕಾಲಕ್ಕಾದರೂ ಸಮೀಪದಲ್ಲಿ ಶವಗಳು ತಿಪ್ಪೆಗಳು ಬಚ್ಚಲ ಹರಿಗಳು ಇಲ್ಲದಂಥ ಸ್ಥಳದಲ್ಲಿ ಬಾವಿಯನ್ನು ತೆಗಿಸಬೇಕು. ಮತ್ತು ಹಳ್ಳ ಹೊಳೆಗಳಲ್ಲಿ ಹರಿಯುವ ನೀರನ್ನು ಬಳಸಬೇಕಾದರೆ, ಮೊಳಕಾಲುದ್ದ ಹರಿಯುತ್ತಿದ್ದ ನೀರನ್ನು ತೆಗೆದುಕೊಂಡು ವಸ್ತ್ರ ಹಾಕಿ ಸೋಸಿಕೊಂಡು ಬಳಸಬೇಕು. ಅದಕ್ಕಿಂತಲೂ ಕಡಿಮೆಯಾಗಿ ಹರಿಯುತ್ತಿದ್ದರೆ, ಆ ಹರಿಯುವ ನೀರನ್ನು ಬಳಸಬಾರದು ಒರತೆಯನ್ನು ತೋಡಿ ಒರತೆಯ ನೀರನ್ನು ಬಳಸಬೇಕು.

ಪಾಕ ಪ್ರಯತ್ನದ ಭಾಂಡಗಳಲ್ಲಿ ಮೃತ್ತಿಕಾ ಭಾಂಡೆಭಾಜನಗಳಿದ್ದರೆ, ಅವುಗಳೆಲ್ಲ ನಿರ್ಮಲವಿರಬೇಕು. ಆ ಮೃದ್ಭಾಂಡ ಭಾಜನಾದಿಗಳು ಶಬ್ದದೋಷ ಅಥವಾ ಸೋಂಕಿನ ದೋಷಗಳಿಂದ ಅಪವಿತ್ರವಾದರೆ, ಅವುಗಳನ್ನು ಬಿಸಾಟಬೇಕು. ಅಥವಾ ಜ್ಞಾನಾಚಾರಿಗಳಾದರೆ ಒಡೆದು ತುಕುಡಿಗಳನ್ನು ಮಾಡಿ ಭೂಮಿಯಲ್ಲಿ ಹೂಳಬೇಕು. ತಾಮ್ರ ಹಿತ್ತಾಳಿಯ ಭಾಂಡೆ ಭಾಜ

ನಗಳಾದರೆ ಸುಟ್ಟು ಚನ್ನಾಗಿ ಬೆಳಗಿ ನಿರ್ಮಲ ಮಾಡಿ ತೆಗೆದುಕೊಳ್ಳಬೇಕು. ಕಂಚಿನ ಪಾತ್ರೆ ಬಟ್ಟಲು ಭಾಜನಗಳಿಗೆ ಅಪವಿತ್ರ ದೋಷ ಹೊಂದಿದರೆ, ಅವುಗಳನ್ನು ಬಿಟ್ಟು ಬಿಡಬೇಕು. ಅವುಗಳಾತಕ್ಕೂ ಪ್ರಯೋಜನವಲ್ಲವು.

ಫಲ ಪದಾರ್ಥಗಳಲ್ಲಿ ಮಣ್ಣು ಹತ್ತಿದ ಗಡ್ಡೆ ಗೆಣಸು ಉಳ್ಳೇಗಡ್ಡೆ ಬಳ್ಳೊಳ್ಳಿ ಮೊದಲಾದ ಪದಾರ್ಥಗಳನ್ನು ತೊಳೆದು ತೆಗೆದುಕೊಳ್ಳಬೇಕು. ಹಾಗು ಹಣ್ಣು ಕಾಯಿಪಲ್ಲೆ ಪದಾರ್ಥಗಳನ್ನು ವೀಳ್ಯೆ ಅಡಿಕೆ ಕಬ್ಬು ಪತ್ರೆ ಪುಷ್ಪ ಮೊದಲಾದವುಗಳನ್ನು ತೊಳೆದು ತಕ್ಕೊಳ್ಳಬೇಕು.

ಪಾಕ ಶಾಲೆಯ ಮನೆಯನ್ನು ಒಲೆಗಳನ್ನು ಹಾಗೂ ಕ್ರಿಯಾ ಮಂದಿರವನ್ನು ದೇವ ಗೃಹವನ್ನು ಭೋಜನ ಶಾಲೆಯನ್ನು ನಿತ್ಯದಲ್ಲೂ ಸಾರಣೆ ಹಾಕಿ ಶುದ್ಧ ಮಾಡಬೇಕು. ಉಳಿದ ಮನೆಗಳನ್ನು ಎಂಟು ದಿವಸಕ್ಕೊಮ್ಮೆ ಸಾರಣೆ ಹಾಕಿದರೂ ಬರುತ್ತದೆ

ಪಾಕ ಪ್ರಯತ್ನಾದಿಗಳನ್ನು ಮಾಡುವವರು ಸ್ನಾನ ಮಾಡಿ ಪಾಕ ಮಾಡಿದರೆ, ಲೋಕಾಚಾರಕ್ಕೂ ಜ್ಞಾನಾಚಾರಕ್ಕೂ ಸಮ್ಮತವಾಗಿ ಕೇವಲ ನಿರ್ಮಲತ್ವವೆನಿಸುತ್ತದೆ ಅದು ಆಗದಿದ್ದರೆ, ಲೋಕಾಚಾರಿಗಳಾದವರು ಪಾಕ ಮಾಡಿದ ಮೇಲಾದರೂ ನಿತ್ಯ ಸ್ನಾನ ಮಾಡುವದು ನಿರ್ಮಲತ್ವವೆನಿಸುತ್ತದೆ.

ಪಾಕ ಮಾಡುವ ಸಮಯದಲ್ಲಿ ಬಾಯ ತೆರದಿಟ್ಟರೆ, ಉಗಿಯ ಶಾಕತಾಗಿ ಪ್ರಾಣಿಗಳು ಹತವಾಗಿ ಪಾಕದ ಭಾಂಡೆಯಲ್ಲಿ ಬೀಳುವವು. ಅದು ಕಾರಣ ಪಾಕ ಮಾಡುವ ಸಮಯದಲ್ಲಿ ಒಂದಾದರೂ ಪ್ರಾಣ ಹಿಂಸೆಯಾಗದಂತೆ ಅಪವಿತ್ರ ಸೋಂಕದಂತೆ ಬಹು ಎಚ್ಚರದಿಂದ ಪಾಕಮಾಡಬೇಕು.

ಪಾಕವಾದ ವೇಳೆಯಾದರೂ ಯಾವ ಪ್ರಾಣಿಗಳು ಪದಾರ್ಥವನ್ನು ಮುಟ್ಟದಂತೆ, ಯಾವತ್ತೂ ಭಾಂಡೆಗಳ ಮೇಲೆ ವಸ್ತ್ರಗಳನ್ನು ಮುಚ್ಚಿ ಇಡಬೇಕು ಭೋಜನ ಮಾಡತಕ್ಕ ಭಾಜನಗಳು ಹುಳಿ ಪದಾರ್ಥ ಕಿಲಬಾಗದಂತೆ ಚನ್ನಾಗಿ ಬೆಳಗಿ ತೊಳೆದು ಒರಸಿ ಝುಳಝುಳ ಮಾಡಿ ಇಡಬೇಕು.

ಧಾನ್ಯಾದಿ ಪದಾರ್ಥಗಳಿಗೆ ಮುಗ್ಗು ಹಾಯ್ದಿರಬಾರದು. ಬೆಳೆಯುವ ಸಮಯದಲ್ಲಿ ಶವದ ಹೊಗೆ ತಾಕಬಾರದು. ಚರ್ಮ ಪಾತ್ರೆಯೊಳಗೆ ತುಂಬಿದ ತೈಲ ಘೃತಗಳನ್ನು ಜ್ಞಾನಾಚಾರಿಗಳು ತೆಗೆದುಕೊಳ್ಳಲಾಗದು. ಯಾಕಂದರೆ ಶಿವನು ಭಕ್ತಹೃನ್ನಿಲಯನಾದ ಕಾರಣ ಭಕ್ತಾದಿಗಳ ಜಿಹ್ವಾದಿ ಇಂದ್ರಿಯ ಮುಖಂಗಳಿಂದ ಪ್ರಾಣೇಶ್ವರನಿಗೆ ನೈವೇದ್ಯವಾಗುತ್ತಿಹುದಾದ ಕಾರಣ ಲೋಕಾಚಾರದಲ್ಲಿ ಸದಾಚಾರಿಗಳು ಜ್ಞಾನಾಚಾರಿಗಳು ದೋಷಾ

ರೋಪಣ ಮತ್ತು ಅಪವಿತ್ರ ಸೋಂಕಾದ ಪದಾರ್ಥಗಳನ್ನು ಮುಟ್ಟಲಾಗದು. ಯಾಕಂದರೆ "ಭಕ್ತಾ ಜಿಹ್ವಾಗ್ರತೋ ಲಿಂಗಂ। ಲಿಂಗಜಿಹ್ವಾಗ್ರತೋ ರುಚಿಃ॥ ರುಚಿ ಜಿಹ್ವಾ ಪ್ರಸಾದೇನ। ಪ್ರಸಾದಂ ಪರಮಂ ಪದಂ"॥ ಎಂದಾಗಮ ಪ್ರಮಾಣ ಉಂಟು.

ಲೋಕಾಚಾರ ಜ್ಞಾನಾಚಾರದವರು ಯಾರಾದರಾಗಲಿ ತಾವು ಧರಿಸುವ ವಸ್ತ್ರಗಳನ್ನೂ ವಾಸ ಮಾಡುವ ಸ್ಥಳಗಳನ್ನೂ ಭೋಗ ಭುಕ್ತ್ಯಾದಿ ಸಕಲ ಸಾಮಗ್ರಿಗಳನ್ನೂ ಮಲಗುವ ಹಾಸಿಗೆಗಳನ್ನೂ ನಿರ್ಮಲವಿಡಬೇಕಲ್ಲದೆ, ಒಂದಾದರೂ ಮಲಿನವಾಗಿರಬಾರದು ಮಲಿನವಿದ್ದಲ್ಲಿ ಸೌಖ್ಯವಿಲ್ಲ ಮತ್ತು ಜ್ಞಾನಾಚಾರಕ್ಕೆ ಕೊರತೆಯಾಗುವದು. ಮಲಿನವು ದಾರಿದ್ರ್ಯಕ್ಕೂ ರೋಗಕ್ಕೂ ಅಜ್ಞಾನಕ್ಕೂ ಆಸ್ಪದವಾಗಿದೆ. ಹೇಗಂದರೆ ಸೂರ್ಯನು ಹೋದಲ್ಲಿ ಕತ್ತಲೆಯು ಆಚ್ಛಾದಿಸಿದಂತೆ ಮಲಿನತ್ವವು ಅಜ್ಞಾನಕ್ಕೆ ಬೀಜವಾಗಿದೆ ಲಾಂದ್ರದಲ್ಲಿ ದೀಪವು ನಿರ್ಮಲವಾಗಿ ಕಂಡಂತೆ ಬೋಕಿಯಲ್ಲಿ ನಿರ್ಮಲವಾಗಿ ಕಾಣುವದೇ? ಹಾಗೆಯೇ ಲೋಕಾಚಾರ ವರ್ತನೆಯಲ್ಲಿ ಶುಚಿ ಅಶುಚಿ ಜ್ಞಾನ ಅಜ್ಞಾನ ಸುಬುದ್ಧಿ ದುರ್ಬುದ್ಧಿಯನ್ನು ತಿಳಿಯದಿದ್ದರೆ, ಮುಂದೆ ಜ್ಞಾನಾಚಾರದಲ್ಲಿ ಪ್ರವೀಣರಾಗುವದೆಂತು?

ಮಾಂಸಾಹಾರ ಮದ್ಯಪಾನಾದಿಗಳನ್ನು ಮಾಡುವದು ಸದಾಚಾರಿಗಳಿಗೆ ಭೃತ್ಯಾಚಾರಿಗಳಿಗೆ ಮತ್ತು ಜ್ಞಾನಾಚಾರಿಗಳಿಗೆ ಯೋಗ್ಯವಾದುದಲ್ಲ. ಉಳಿದಾದ ಕೆಲವು ಕುಲದವರು ಭಕ್ಷಿಸುತ್ತಾರೆ. ಹೇಗೆಂದರೆ ಅವರವರಿಗೆ ಅವರ ಮತವೇ ಪ್ರಾಮಾಣ್ಯವಾಗಿರುವದು. ಅದನ್ನಾರು ತಿದ್ದಬೇಕು? ಪಶುಗಳಿಗೆ ಇರಿದು ನೋಯಿಸಿದೆ ಎಂಬ ದೋಷಾರೋಪಣವಿಲ್ಲ. ಅದರಂತೆ ತೊಟ್ಟಿಲ ಶಿಶುಗಳಿಗೆ ಶುಚಿ ಅಶುಚಿ ಎಂಬ ಭೇದವಿಲ್ಲ. ಹಾಗೂ ಮಾನ ಅಪಮಾನ ಭಯ ನಿರ್ಭಯಗಳೇನೂ ಅವುಗಳಿಗೆ ಇಲ್ಲ ಆದರೆ ಮುಂದೆ ಸ್ವಲ್ಪ ಜ್ಞಾನೋದಯವಾಗುತ್ತ ಬಂದ ಹಾಗೆ ಹೇಗೆ ಶುಚಿ ಅಶುಚಿಗಳು ಅವುಗಳಿಗೆ ಆಯಾಯ ಜಾತಿ ಸ್ಮರತ್ವದಿಂದ ತಿಳಿಯುತ್ತ ಬರುವವೋ, ಹ್ಯಾಗೆ ಆಯಾಯ ಕುಲ ಧರ್ಮದಂತೆ ಅವು ವರ್ತಿಸುತ್ತ ಆಯಾಯ ಆಟಗಳನ್ನು ಆಡುವರೋ ಹಾಗೆ ಆಯಾಯ ಮತದವರು ನಿರ್ಮಲ ಜ್ಞಾನೋದಯವಾಗುವ ವರೆಗೆ ತಮ್ಮ ತಮ್ಮ ಮತಾಚರಣೆಯಂತೆ ವರ್ತಿಸುತ್ತಾರೆ.

ಕೆಲಕೆಲವು ಮತಸ್ತರು ತಮ್ಮ ತಮ್ಮ ದೈವ ನಿಮಿತ್ಯವಾಗಿ ದೈವತಾರ್ಪಣವೆಂದು ಮಾಡುವಲ್ಲಿ, ಅವರಿಗೆ ಮಾಂಸಾಹಾರ ಮದ್ಯಪಾನಗಳ ದೋಷಾರೋಪಣವಿಲ್ಲವೆಂದು ಅವರವರ ಮತದ ಶಾಸ್ತ್ರವಿರುವದರಿಂದ ಹಾಗೆ ಸಮ್ಮತ

ಮಾಡಿಕೊಳ್ಳುತ್ತಾರೆ. ಅದು ದೋಷಾರೋಪಣವಾಗಿ ಕಂಡರೆ, ಅವರು ಹಿಂಸಾದಿ ಕಾರ್ಯಗಳನ್ನು ಎಂದಿಗೂ ಮಾಡಲಾರರು.

ಶೃತಿ ಸ್ಮೃತಿ ಧರ್ಮಾಚಾರ ವರ್ತನೆಯುಳ್ಳ ಶೃತ್ಯಾಚಾರಿಗಳಿಗೆ ಮತ್ತು ಜ್ಞಾನಾಚಾರಿಗಳಾದ ವೀರಶೈವಾಚಾರವಾದಿಗಳಿಗೆ ಯತಿ ವ್ರತಿ ಬ್ರಹ್ಮಚಾರಿ ವಾನಪ್ರಸ್ಥರೆಂಬ ಬ್ರಾಹ್ಮಣಾದಿ ಕೆಲವು ಮತಸ್ಥರಿಗೆ ಮಾಂಸಾಹಾರ ಮದ್ಯಪಾನಗಳು ಪಂಚ ಮಹಾಪಾತಕವೆಂದು ಆರೋಪಣ ಉಂಟಾದ ಕಾರಣ ಶೃತ್ಯಾಚಾರ ಜ್ಞಾನಾಚಾರ ವೇದೋಕ್ತ ಧರ್ಮಾಚಾರವುಳ್ಳವರಿಗೆ ದೋಷಾರೋಪಣ ಉಂಟಾಗಿರುವದು

ವನಿತಾದಿ ಸಕಲ ಭೋಗಂಗಳೆಲ್ಲ ಲೋಕಾಚಾರ ಗೃಹಸ್ಥರಾದ ಭೋಗಿಗಳಿಗೆ ದೋಷಾರೋಪಣವಿಲ್ಲ ಆದಾಗ್ಯೂ ವನಿತಾದಿ ಸಕಲ ಭೋಗಂಗಳು ಯೋಗಿಗಳಿಗೆ ದೋಷಾರೋಪಣವಾಗಿ ದುರ್ಗಂಧಮಯವಾಗಿ ಮಲರೂಪವಾಗಿ ಕಾಣುವದು. ವಿಷಯಾತುರವುಳ್ಳವರಿಗೆ ವಿಷಯಾನಂದದ ಕಾಮತ್ವದಲ್ಲಿ ಲಕ್ಷವಲ್ಲದೆ ಯೋಗಿಗಳಂತೆ ತಿಳಿಯಲಾರರು ಅದು ದೋಷಾರೋಪಣವೆಂದು ತಿಳಿದರೆ ಅವರು ಸ್ತ್ರೀ ಸಂಭೋಗಾದಿ ಕ್ರಿಯೆಗಳನ್ನು ಎಂದಿಗೂ ಮಾಡಲಾರರು. ಅಂಥ ಸಂಸಾರಿಗಾದರೂ ವಿವೇಕ ಹುಟ್ಟಿ ಜ್ಞಾನೋದಯವಾದಾಕ್ಷಣವೇ ತೊರದು ಬಿಡುವರು.

ಮಾಂಸ ಭಕ್ಷಕರಲ್ಲಾದರೂ ಉತ್ತಮ ಮಧ್ಯಮ ಕನಿಷ್ಠರೆಂದುಂಟು. ಅವರಲ್ಲಿ ತಮ್ಮ ತಮ್ಮ ಕುಲದೈವಾರೋಪಣ ನಿಮಿತ್ಯವಾಗಿ ಭಕ್ಷಿಸುವವರು ಕೆಲವರು ಉತ್ತಮವು. ಅದರಲ್ಲಿ ವಿಚಾರವರಿಯದೆ, ಸತ್ತಿದ್ದು ಬದುಕಿದ್ದು ಕೂಡ ತಿಂಬುವಂಥ ಕುರುಬರು ಕಬ್ಬಲಿಗರು ಒಡ್ಡರು ಕೊರಮೆಯರು ಮುಂತಾದವರು ಮಧ್ಯಮರು ಹೇಸಿಗೆ ಇಲ್ಲದೆ ಕೇವಲ ಸತ್ತಂಥ ಮೃಗ ಪಶುಗಳ ಮಾಂಸವನ್ನಾದರೂ ಹತ್ತೆಂಟು ದಿವಸ ಇಟ್ಟುಕೊಂಡು ತಿಂಬುವಂಥ ಚಾಂಡಾಲಾದಿಗಳು ನಿರ್ಮಲರಲ್ಲದ ಕಾರಣ ಕನಿಷ್ಠರೆನಿಸುವರು.

ಮಾಂಸ ಭಕ್ಷಕರಾದಾಗ್ಯಾದರೂ ಕೆಲವರಲ್ಲಿ ನಿರ್ಮಲತ್ವವು ಕೆಲವರಲ್ಲಿ ದೈವಾರೋಪಣ ನಿಮಿತ್ಯವು ಇರುವದರಿಂದ ಅಂಥವರು ಮುಟ್ಟಿ ತಟ್ಟಿದಲ್ಲಿ ಸಂಶಯ ಪಡುವದಿಲ್ಲ. ಮತ್ತು ಅವರು ಮುಟ್ಟಿದ ಭಾವಿಯ ಉದಕವನ್ನು ಕೆಲವು ಲೋಕಾಚಾರದವರೂ ಬಳಸುತ್ತಾರೆ. ಆ ಮಾಂಸ ಭಕ್ಷಕರಲ್ಲಿ ಚಾಂಡಾಲರು ನಿರ್ಮಲತ್ವವುಳ್ಳವರಲ್ಲದ ಕಾರಣ ಅವರು ಮುಟ್ಟಿದ ಬಾವಿಯ ಉದಕವನ್ನು ಯಾರೂ ಮುಟ್ಟುವದಿಲ್ಲ. ಈ ಪದ್ಧತಿಯು ಲೋಕದಲ್ಲಿ ಯಾವಾಗಲೂ ಇದ್ದಷ್ಟೇ ಷರಿ. ನಿರ್ಮಲತ್ವವಿಲ್ಲದ ಕಾರಣ ಚಾಂಡಾಲತ್ವಕ್ಕೆ ಕರ್ಮವಾಯಿತು.

ನಿರ್ಮಲ ಬುದ್ಧಿಯುತರಾದ ಸಮಸ್ತ ಸತ್ಕುಲದ ಜ್ಞಾನ ಕಲಾತ್ಮರಿಗೆ ದೋಷಾರೋಪಣವಾಗಿ ಸಹಜವೇ ಕಾಣಿಸುವದು. ಹೇಗೆಂದರೆ, ಮಾದಿಗರು ತೊಗಲು ನೆನೆಹಾಕಿ ಕೀಚುವಲ್ಲಿ ಕೊಳೆತ ತೊಗಲಿನ ದುರ್ವಾಸನೆಯು ಈಚೆ ಕಡೆಯಲ್ಲಿದ್ದ ನಿರ್ಮಲತ್ವವುಳ್ಳ ನಿರ್ಮಲರಿಗೆ ದುರ್ಗಂಧ ವಾಸನೆಯಾಗಿ ಬೇಸರಗೊಳಿಸುವದಲ್ಲದೆ, ಆ ಚಾಂಡಾಲರಿಗೆ ದುರ್ವಾಸನೆಯಾಗಿ ಕಾಣಿಸದು ಮತ್ತು ಅದು ಬೇಸರವಾಗದು. ಆಯಾಯ ಪ್ರಾಣಿಗಳಿಗೆ ಮತ್ತು ಆಯಾಯ ಮತಸ್ಥರಿಗೆ ಆಯಾಯ ಆಹಾರವು ಸ್ವಾಭಾವಿಕವೇ ಸರಿ. ಮತ್ತು ನಿರ್ಮಲ ಜ್ಞಾನವುಳ್ಳ ಜ್ಞಾನ ಕಲಾತ್ಮರಿಗೆ ಶೃತ್ಯಾಚಾರ ಸಮ್ಮತವಾದ ಆಚಾರವೇ ಧರ್ಮವು. ಅವರು ಶೃತಿ ವಿರಹಿತವಾದ ಆಚಾರಕ್ಕೆ ಎಂದಿಗೂ ಒಡಂಬಡರು.

ನಿರ್ಮಲತ್ವವೆಂಬುದು ಬಹಿರಂಗದ ಸಕಲ ಕ್ರಿಯಾಚಾರದಲ್ಲಿಯೂ ಬೇಕು. ಅಂತರಂಗದ ಜ್ಞಾನಾಚಾರದಲ್ಲಿಯೂ ಅಗತ್ಯವಾಗಿ ಇರತಕ್ಕದ್ದು. ಅಂತರಂಗದ ಜ್ಞಾನಾಚಾರದಲ್ಲಿ ಸಕಲ ದುರ್ಗುಣಗಳೇ ಮಲಿನತ್ವವು ಅವುಗಳಾವಾವೆಂದರೆ, ಕಾಯಕದೋಷ ನಾಲ್ಕು, ವಾಚಕದೋಷ ನಾಲ್ಕು ಮತ್ತು ಮಾನಸದೋಷಗಳು ನಾಲ್ಕು, ಇಂತೀ ಹನ್ನೆರಡು ದೋಷಗಳಾದಿಯಾಗಿ ಅನಂತ ದುರ್ಗುಣಗಳು ತುಂಬಿ ದೇಹವು ಮಲಿನ ಹೊಂದಿರುವದು. ಅಂಥ ಮಲಿನ ಸ್ವರೂಪಿಗಳಾದವರ ಹೃದಯದಲ್ಲಿ ಪರಮೇಶ್ವರನು ಇಲ್ಲನೆಂದು ತಿಳಿಯತಕ್ಕದ್ದು. ಇದಕ್ಕೆ ಬಸವರಾಜದೇವರ ವಚನ ಸಾಕ್ಷಿಯುಂಟು ಅವನ ಅಭಿಪ್ರಾಯದ ಆಧಾರದ ಮೇಲಿಂದ ಜಗತ್ಪರಿಪೂರ್ಣನೆಂಬ ಶೃತಿ ವಾಕ್ಯಕ್ಕೆ ಭಂಗವಾದರಾಗಲಿ ದುರ್ಗುಣಿಗಳಾದವರ ಹೃದಯದಲ್ಲಿ ಪರಮೇಶ್ವರನಿಲ್ಲವೆಂದು ನಿರ್ಧರಿಸತಕ್ಕದ್ದು "ಹೊಸ್ತಲಲಿ ಹುಟ್ಟಿ ಮನೆಯು ಅಂಗಳದಲ್ಲಿ ಕಸವಿದ್ದರೆ, ಮನೆಯು ಯಜಮಾನನು ಈ ಮನೆಯೊಳಗಿಲ್ಲ" ಎಂಬುದೇ ನಿಶ್ಚಯ.

ಒಂದೊಂದೇ ದುರ್ಗುಣವಿದ್ದರೆ, ಕೋಟಿ ಅನರ್ಥಗಳು ಪ್ರಾಪ್ತಿಸುವವು ಬಹು ದುರ್ಗುಣಗಳಿದ್ದರೆ, ಎಷ್ಟು ಅನರ್ಥಗಳಾಗಬಹುದು? ಅವುಗಳಲ್ಲಿ ಸ್ವಲ್ಪ ಹೇಳುತ್ತೇನೆ ಅವಿವೇಕ ಹಿಂಸೆ ಪರಸ್ತ್ರೀಯರೊಲುಮೆ ಕೋಪ ಕಡುತವಕ ಮಾತ್ಸರ್ಯ ಡಂಭ ಅನೇಕ ಕರಣಾದಿಗಳಲ್ಲಿ ಕವಿದಿರುವ ಮಾಯಾ ವಿಲಾಸ ಹವಣಿಸದಾಸೆ ಕರ್ಮಗಳ ಸಮೂಹ ಶೃತಿ ವಿರಹಿತವಾದ ದುರ್ಮತ ಶಾಸ್ತ್ರದೊಳ್ಗತಿ, ನಿರ್ಬುದ್ಧಿ, ದೇಹ ಮೊದಲಾದುದರೊಳತಿ ಮಮತೆ, ದುರಾತ್ಮರ ಗೆಳೆತನ ಪರಮೇಶ್ವರನ ಚರಣ ಕಮಲ ಭಕ್ತಿಯೊಳು ವಿಮುಖತೆ ಮತ್ತು ಮದ ಲೋಭ ಕದನ, ಕರ್ಕಶ ಸ್ವಭಾವ, ಮದನ ವಿಕಾರ ಮೊದಲಾದ ಅನಂತ ದುರ್ಗುಣಗಳು ತುಂಬಿದ ಶರೀರವು ಹ್ಯಾಗೆ ನಿರ್ಮಲವಾದೀತು? ಇಂಥ ದುರ್ಗುಣ ಮಯವಾದ ಕಾಡು ಭೂಮಿಯಾದ ದೇಹವೆಂಬುವ ಹೊಲ

ವನ್ನು ಶ್ರೀಗುರುದೇವನೆಂಬ ಹಲಾಯುಧಂಗೆ ಕೊಟ್ಟು ಹರಗಿ ಹಸನ ಮಾಡಿ ಪರತತ್ವ ಬೀಜವಂ ಬಿತ್ತಿ ಪರಿಪೂರ್ಣ ರಾಶಿಯಂ ಪಡೆದು ಸವಿದಾನಂದಮಯನಾಗಿರುವದೇ ಸದ್ಭಕ್ತರಾದ ಸದಾಚಾರಿಗಳಿಗೆ ಜ್ಞಾನಾಚಾರದ ನಿರ್ಮಲತ್ವವು.

ಲೋಕಾಚಾರದಲ್ಲಿ ಬಹಿರಂಗ ಕರ್ಮದ ಸಕಲ ವರ್ತನೆಯಲ್ಲಿ ಶುಚಿಯಾಗಿ ಶೃತ್ಯಾಚಾರಕ್ಕೆ ಸರಿಯಾಗಿ ನಿರ್ಮಲತ್ವವಿರಬೇಕು. ಜ್ಞಾನಾಚಾರದಲ್ಲಿ ಅಂತರಂಗದ ಸಕಲ ಕರಣಾದಿಗಳಲ್ಲಿ ಸಮಸ್ತ ಸದ್ಗುಣಗಳಿಂದ ಸತ್ಯಧರ್ಮಾಚಾರವುಳ್ಳವರಾಗಿ ಜ್ಞಾನಮಯರೆನಿಸಿ ನಿರ್ಮಲ ಕಾಯರಾದರೆ ಈ ಪಾರಮಾರ್ಥ ಕೃಷಿಗೆ ಯೋಗ್ಯರಾದ ಸತ್ಯ ಸದ್ಭಕ್ತ ಸದಾಚಾರಿಗಳೆನಿಸುವರು. ಆದು ಕಾರಣ ಪಾರಮಾರ್ಥ ಕೃಷಿಯು ಐದು ಪ್ರಕರಣಗಳಲ್ಲಿ ಮೊದಲು ನಿರ್ಮಲತ್ವವನ್ನು ಹೇಳಿದ್ದೇನೆ.

# ೨೦ ನೇ ಪ್ರಕರಣವು.

## ಸದಾಚಾರವು.

ಸದಾಚಾರವೆಂಬುದು ಸತ್ಯವಾದ ನಡಾವಳಿಯು. ಸತ್ಯವಾದ ಆಚಾರವೇ ಸದಾಚಾರವೆನಿಸುತ್ತದೆ ಸತ್ಯವು ಸಕಲ ಸಂಪತ್ತಿಗೆ ಸ್ಥಾನವಾದದ್ದು. ಸತ್ಯವೇ ಸಕಲ ತಪದ ಬೀಜವು. "ವರ ಸತ್ಯದಿಂ ಬೇರೆ ತಪವುಂಟೆ" ಎಂಬ ನಿಜಗುಣ ವಾಕ್ಯ ಉಂಟು ಅಸತ್ಯದಿಂದ ಅಗಣಿತ ದುಃಖವು ಪ್ರಾಪ್ತಿಸುವದು. ಅಸತ್ಯವೆಂಬುದೇ ಅನೃತವು. ಈ ಅನೃತವೆಂಬುದರಿಂದ ಸಕಲ ದುಷ್ಕರ್ಮಗಳು ಹುಟ್ಟುತ್ತಿಹವಾಗಿ, ಅನೃತವೆಂಬ ಅಸತ್ಯವೇ ಪಾಪ ಕಾರ್ಯಂಗಳಿಗೆ ಮೂಲವಾಗಿ, ಇದರಿಂದ ಕಳವು ಹಾದರ ಹಿಂಸೆ ಕಪಟ ಮೋಸ ವಿಶ್ವಾಸಘಾತಾದಿ ಸಮಸ್ತ ದುರ್ದೋಷಗಳು ನೆಲೆಗೊಳ್ಳುತ್ತವೆ ಆದುದರಿಂದ ಅಸತ್ಯವೆಂಬುದು ಅನಂತ ಹಿಂಸಾಕರ್ಮಗಳಿಗೆ ಸಮಾನವು ಸಾಕ್ಷಿ "ಶತ ಗಾವೋ ಹತಾ ಬಾಲ। ಶತ ಬಾಲ ಹತ ಸ್ತ್ರೀಯಃ। ಶತನಾರೀ ಹತಾ ವಿಪ್ರ। ಶತ ವಿಪ್ರ ಹತಾನೃತಃ॥" ಎಂದುಂಟಾಗಿ ಸುಳ್ಳಾಡುವವನೇ ಅಧಮನು. ಹೀಗೆಂದು ಸಕಲ ಶಾಸ್ತ್ರಂಗಳಲ್ಲಿ ಪ್ರಸಿದ್ಧವಾಗಿ ಹೇಳಿರುವದರಿಂದ, ಸುಳ್ಳಾಡದೇ ಇರುವದೇ ಸದಾಚಾರವು. ಸಾಕ್ಷಿ "ಜಿಹ್ವಾಗ್ರೇ ವಸತಿ ಲಕ್ಷ್ಮೀ। ಜಿಹ್ವಾಗ್ರೇ ಮಿತ್ರ ಬಾಂಧವಃ॥ ಜಿಹ್ವಾಗ್ರೇ ಬಂಧನಂ ಪ್ರಾಪ್ತಿ। ಜಿಹ್ವಾಗ್ರೇ ಮರಣಂ ಧ್ರುವಂ॥ ಎಂಬ ಪ್ರಮಾಣದಿಂದ ಸತ್ಯಸದಾಚಾರಿಗಳಿಗೆ ವಾಕ್ ಶುದ್ಧಿಯಾದಲ್ಲಿ ವಾಕ್ ಪರುಷ ಉಂಟು

ಶಿವಭಕ್ತರುಗಳಲ್ಲಿ ಸದಾಚಾರಿಗಳು ಎಲ್ಲ ಮತಸ್ಥರಂತೆ ಸ್ವೇಚ್ಛೆಯಾಗಿ ವರ್ತಿಸಲಿಕ್ಕೆ ಮಾರ್ಗವೇ ಇಲ್ಲವಾಗಿ, ಸತ್ಯ ಸದಾಚಾರದಿಂದ ನಡೆಯಬೇಕು ಯಾಕಂದರೆ, ಅನಾದಿ ವೃಷಭೇಶ್ವರನಾದ ಜಗದಾರಾಧ್ಯ ಸಂಗನಬಸವೇಶ್ವರ ದೇವರ ಸಾಂಪ್ರದಾಯಕರಾದ ಕಾರಣ, ಅವರಂತೆ ಇವರಿಗಾದರೂ "ಮನಪರುಷ, ವಾಕ್‌ಪರುಷ, ಹಸ್ತಪರುಷ, ದೃಷ್ಟಿಪರುಷ, ಭಾವಪರುಷಂಗಳು ಎಂಬ ಪಂಚಪರುಷಂಗಳನ್ನು ಜಗದೀಶ್ವರನು ಕೊಟ್ಟಿರುವನಾಗಿ, ಈ ಶಿವಭಕ್ತರ ಅಂಗಣವೇ ಕೈಲಾಸವೆಂದು ಮತ್ತು ಶಿವಭಕ್ತರುಗಳ ಪಾದ ಪ್ರಕ್ಷಾಲನದ ಹೊಂಡವೇ ಅಷ್ಟಾಷಷ್ಟಿ ತೀರ್ಥಗಳೆಂದು, ಇದಲ್ಲದೆ ಆ ಶಿವಭಕ್ತರ ಪಾದ ಸೋಂಕಿದ ಸ್ಥಳವೇ ಪುಣ್ಯಕ್ಷೇತ್ರವೆಂದು ಸಕಲ ಪುರಾಣ ಶಾಸ್ತ್ರಾಗಮಂಗಳಲ್ಲಿ ಪ್ರಸಿದ್ಧವಾಗಿ ಬೋಧಿಸುತ್ತವೆ. ಶಿವಭಕ್ತರ ಪಾದವು ಸೋಂಕಿದಲ್ಲಿ ಲಕ್ಷ್ಮಿಯು ನೆಲೆಗೊಂಡಿರ್ಪಳೆಂಬುದಕ್ಕೆ ಅನೇಕ ಪ್ರಮಾಣಗಳುಂಟು.

ಕುಬೇರಾದಿ ಸಕಲ ದೇವತೆಗಳೆಲ್ಲರು ತಮ್ಮ ತಮ್ಮ ಊಳಿಗ ಸಹಿತವಾಗಿ ಶಿವಭಕ್ತರ ಭಕ್ತಿಮಂದಿರದ ಮಹಾದ್ವಾರವನ್ನು ಕಾಯ್ದುಕೊಂಡಿರುವರೆಂಬುದಕ್ಕೆ ಅನಂತ ಪುರಾಣಗಳಲ್ಲಿ ಸಾಕ್ಷಿಯುಂಟು ಈಗಾದರೂ ಪ್ರತ್ಯಕ್ಷ ಪ್ರಮಾಣ ಉಂಟು

ಈಗಿನ ಕಾಲದಲ್ಲಿ ಶಿವಭಕ್ತರಾದವರು ವೀರಶೈವ ಮಾರ್ಗದ ಭಕ್ತಿ ತಾತ್ಪರ್ಯ ಚಾತುರ್ಯದ ಕ್ರಮತಪ್ಪಿ ನಡೆಯುವವರು ದಾರಿದ್ರ್ಯಾದಿ ದುಃಖವನ್ನು ಅನುಭೋಗಿಸುವರು ಮಾಹೇಶ್ವರರಾದರೂ ವೀರಮಾಹೇಶ್ವರಾಚಾರದ ಕ್ರಮವನರಿಯುವ ಕಾರಣ ಕಷ್ಟಪಡುತ್ತಾರೇ ಹೊರತು ಭಕ್ತಮಾಹೇಶ್ವರರಿಗೆ ಕೊರತೆಯುಂಟೆ? ತಾವು ಶಿವಭಕ್ತರಾಗಿ ದಾರಿದ್ರ್ಯ ದುಃಖವನ್ನು ಅನುಭೋಗಿಸುವದೆಂದರೆ ಇದು ನಾಚಿಕೆಗೇಡೆಯಲ್ಲವೇ? ಹೀಗೆಂಬುವದರಿಂದ ಶಿವಮಹಿಮಾತಿಶಯಕ್ಕೆ ಭಂಗವಲ್ಲವೇ? ಇವರು ಕ್ರಮದಪ್ಪಿದರಿಂದ ಕಷ್ಟ ಉಂಟಾಯಿತು.

ಭಕ್ತರೆಂಬವರು ತಾವು ಲಿಂಗ ಭಕ್ತರೆಂಬ ಅಭಿಮಾನವಿಲ್ಲದೆ, ತಮಗೆ ಶಿವನು ಕೊಟ್ಟಿರುವ ಸರ್ವಸಾಮರ್ಥ್ಯಯುತವಾದ ಪಂಚಪರುಷಗಳನ್ನು ಕಳೆದುಕೊಂಡು ದಾರಿದ್ರ್ಯ ದೋಷಿಗಳಾಗಿ ಲೌಕಿಕ ವೃತ್ತಿಯೊಡನೆ ಕೂಡಿ ಜಾತಿಸ್ಮರತ್ವವನ್ನೇ ಮರೆತು ತ್ರಿವಿಧ ಮಲಭಾವಿಗಳಾಗಿ ಜೀವಭಾವದೊಡನೆ ಕೂಡಿ ವರ್ತಿಸುತ್ತ ಶುದ್ಧ ಪಾಮರರಂತೆ ವಿಚಾರವಿಲ್ಲದೆ ಅನಂತ ದುರ್ದೋಷಗಳನ್ನು ಮಾಡುತ್ತ ದೇಹಾಂತ್ಯದಲ್ಲಿ ಕಾಲಾಗ್ನಿ ರುದ್ರನ ಶಿಕ್ಷೆಗೊಳಗಾಗಿ ಮುಂದೆ ಭವಭವಾಂತರದಲ್ಲಿ ಭಯಂಕರ ದುಃಖವನ್ನು ಅನುಭೋಗಿಸುತ್ತಿರುವರು.

ಶಿವಭಕ್ತರೆಂಬ ಲಿಂಗಭಕ್ತರು ತಾವು ವೀರಶೈವ ಸದ್ಭಕ್ತರಾದ ಕಾರಣ ಶಿವಾಗಮ ಪ್ರಮಾಣದಂತೆ, ಶಿವಲಿಂಗ ನೈಷ್ಠೆಯುಳ್ಳವರಾಗಿ ನಡೆ ನುಡಿ ಕಾಯಕಂಗಳಲ್ಲಿ ಶೀಲ ವ್ರತ ನಿಯಮಾಚಾರಗಳಲ್ಲಿ ಭೃತ್ಯಾಚಾರ ಜ್ಞಾನಾಚಾರ ಧರ್ಮನೀತಿಗಳಿಂದ ಸದಾಚಾರಿಗಳಾಗಿ ವರ್ತಿಸಬೇಕು. ತಾಮಸ ಬುದ್ಧಿಯುತರಾದ ಲೌಕಿಕರಂತೆ ಪರನಾರೀಗಮನ, ಕಳವು, ಹುಸಿ, ಹಿಂಸೆ, ತಾಮಸ ಜನ ಸಂಗ ಇವೈದರಿಂದ ಕೆಟ್ಟು ಭ್ರಷ್ಟರಾಗುತ್ತಿಹರಾಗಿ, ಇವುಗಳನ್ನು ಬಿಟ್ಟುಬಿಡಬೇಕು: ಸಾಕ್ಷಿ, "ಕನ್ಯಾ ಸಂಯೋಗ ಸಂಯುಕ್ತಂ। ಪ್ರೌಢೀ ಸಂಪರ್ಕ ವರ್ಜಯೇತ್ ॥ ಪಿಕಪತ್ನೀವ್ರತಶ್ಚೈವ। ಶಿವಾಚಾರ ಪಥಂ ತಥಾ ॥" ಎಂದುಂಟಾಗಿ ಸದಾಚಾರಿಗಳಾದ ಶಿವಭಕ್ತರುಗಳಿಗೆ ಪರಸ್ತ್ರೀಗಮನವು ಧರ್ಮವಲ್ಲ.

ಕುಲೀನ ಸ್ತ್ರೀಯಳಾದ ಸ್ವಸತ್ನಿಯೊಡಗೂಡಿರುವದು ಭಕ್ತರಿಗೆ ಲಕ್ಷಣವು. ಮತ್ತು ಪರವು ಪತಿವ್ರತೆಯರಾದ ಭಕ್ತಿ ಸತಿಯರುಗಳ ಧರ್ಮವು. ಹೇಗೆಂದರೆ, "ಏಕಲಿಂಗ ನಿಜ ನೈಷ್ಠೆಯುಳ್ಳವರಾಗಿ ಪುರುಷನ ಆಜ್ಞೆಯ ಪ್ರಕಾರ ವರ್ತಿಸುತ್ತ ಪುರುಷ ಭಕ್ತಿಯಲ್ಲಿ ತತ್ಪರರಾಗಿ ಪುರುಷನಿಗೆ ಶುಶ್ರೂಷೆಯನ್ನು ಮಾಡುತ್ತ ಅನ್ಯ ದೈವಂಗಳನುಪೇಕ್ಷಿಸಿ ಶಿವನೇ ದೈವವೆಂದು ದೃಢಾನುರಾಗದಿಂದ ಗುರಲಿಂಗಜಂಗಮದ ಭಕ್ತಿ ತಾತ್ಪರ್ಯ ಚಾತುರ್ಯವನ್ನು ಅಂತರಂಗ ಬಹಿರಂಗದಲ್ಲಿ ಅರಿದು ಮಾರ್ಗ ಕ್ರಿಯೆ, ಮೀರಿದ ಕ್ರಿಯೆಗಳಿಂದ ವರ್ತಿಸುತ್ತ ಜ್ಞಾನ ಕ್ರಿಯೆಗಳೊಂದೇಯಾಗಿ, ಲೋಕಾಚಾರಕ್ಕೆ ವಿಲಕ್ಷಣವಾಗಿ ಭೃತ್ಯಾಚಾರ ಜ್ಞಾನಾಚಾರಗಳನ್ನನುಸರಿಸಿ ವರ್ತಿಸುವದೇ ಸದಾಚಾರವು. ಈ ಧರ್ಮವು ಶಿವಭಕ್ತರಾದ ಸ್ತ್ರೀ ಪುರುಷರೀರ್ವರಿಗೂ ಯೋಗ್ಯವಾದದ್ದು

ಸರ್ವಂ ವರ್ಜ್ಯ ವ್ರಜೇಯೋದ್ಯ ಪರದ್ವಾರ ವಿಷವರ್ಜಿತಂ। ಬ್ರಹ್ಮಚಾರೀ ಸಮುಶ್ಲೋಪಿ। ಜ್ಞೇಯಾ ಶಿವಘೃಣಾಶ್ರಮಿ॥ ಎಂದುಂಟಾಗಿ ಸ್ವಪತ್ನೀ ವಿನಹಾ ಸರ್ವ ಸ್ತ್ರೀಯರನ್ನು ಮಾತೆಯ ಸಮವೆಂದು ಭಾವಿಸಿ ಪರಸ್ತ್ರೀಯರ ಬಿಟ್ಟಾತನೇ ಬ್ರಹ್ಮಚಾರಿಗೆ ಸಮಾನನಹನು. ಮತ್ತು ಭಕ್ತ ಸತಿಯರುಗಳು ತಮ್ಮ ಲಗ್ನದ ಪುರುಷನೊಬ್ಬನೇ ಪುರುಷನಲ್ಲದೆ ಅನ್ಯ ಪುರುಷರಾವತ್ತರೂ ಸಹೋದರರೆಂದು ಭಾವಿಸಿ ಅನ್ಯ ದೈವಂಗಳನೆಲ್ಲ ತೃಣಕ್ಕೆ ಸಮಾನವಾಗಿ ಕಂಡು ಪುರುಷ ಭಕ್ತಿಯಲ್ಲಿ ತತ್ಪರರಾಗಿರುವದೇ ಭಕ್ತಿ ಸತಿಯರಿಗೆ ಸದಾಚಾರವೆನಿಸುವದು.

ಶಿವಭಕ್ತರಾದವರು ಪರಸ್ತ್ರೀಯರಾದವರನ್ನು ಕಾಮ ಕಲಾದೃಷ್ಟಿಯಿಂದ ನೋಡಲಾಗದು. ಕಾಮುಕಲಾಬಯಕೆಯಿಂದ ಮನದಲ್ಲಿ ಬಯಸಲಾಗದು ಮತ್ತು ಕಾಮುಕಲಾಚೇಷ್ಟೆಯಿಂದ ಅವರೊಡನೆ ಪ್ರಸಂಗಿಸಲಾಗದು ಸಾಕ್ಷಿ। "ಪರನಾರೀ ಕುಚಗ್ರಾಹ್ಯಂ। ಚುಂಬನಾಲಿಂಗನಾ ರತಿಃ॥ ಯಸ್ಯಕೃತ್ವಾ ಮನೋವಾಚ್ಯ। ರೌರವಂ ನರಕಂ ವ್ರಜೇತ್"॥ ಎಂದುಂಟಾಗಿ ಇದು ಸ್ತ್ರೀಪುರುಷರೀರ್ವರಿಗೂ ಸದಾಚಾರ ಪಥವಲ್ಲ

ಸದಾಚಾರಿಗಳಾದ ಶಿವಭಕ್ತರುಗಳಿಗೆ ಒಬ್ಬರ ಪದಾರ್ಥವಣುವಾದರೂ ಅವರವರ ಅನುಮತಿ ಇಲ್ಲದೆ, ಅವರು ಕಾಣದ ಹಾಗೆ ಮತ್ತು ಅವರನ್ನು ಕೇಳದೆ ಅವರನ್ನು ವಂಚಿಸಿ ಮರೆಮಾಡಿ ತೆಗೆದುಕೊಂಬುವದು ಕಳವೆನಿಸುತ್ತದೆ, ಮತ್ತು ಅನ್ಯ ದ್ರವ್ಯಾಪಹಾರವೆನಿಸುತ್ತದೆ "ಶಿವ ಧರ್ಮೋತ್ತರೇ॥ಗ್ರಂಥ॥ ತೃಣಂ ವಾಯುವಿವಾಕಾಶಂ॥ ಮೃದಂ ವಾ ಜಲ ಮೇವ ಚ॥ ಪರಸ್ಯಾಪಹರಣಂ ಜಂತು। ನರಕಂ ಚ ಪ್ರಪದ್ಯತೆ"॥ ಎಂದು ಪೇಳುತ್ತಿಹುದಾಗಿ ಹುಲ್ಲು

ಕಡ್ಡಿಯಷ್ಟಾದರೂ ಆಕಾಶದಷ್ಟಾದರೂ ಒಕ್ಕುಡುತೆಯುದಕವಾದರೂ ಒಂದು ಹಿಡಿ ಮಣ್ಣಾದರೂ ಅನ್ಯರ ಪದಾರ್ಥವನ್ನು ಅವರು ಕಾಣಗೊಡದ ಹಾಗಾದರೂ ಅಥವಾ ಬಲುಮೆಯಿಂದಾದರೂ ಅಪಹರಿಸಿದವರಿಗೆ ಅಕ್ಷಯವಾದ ನರಕದ ಶಿಕ್ಷೆಯು ಸಂಭವಿಸುತ್ತಿರುವದು.

ಇದಲ್ಲದೆ ॥ಗ್ರಂಥ॥ ತೃಣಂಕಾಷ್ಠಂ ಫಲಂ ಪುಷ್ಪಂ ಪರದ್ರವ್ಯಾಪಹಾರಿತಂ॥ ಧರ್ಮಾರ್ಥನೇವಲಾಶ್ಚೈವ। ಅನ್ಯಥಾ ಪತಿತೋ ಭವೇತ್॥" ಎಂದು ಹೇಳುತ್ತಿಹುದಾಗಿ, ಹುಲ್ಲು ಮರ ಕಾಯಿ ಹಣ್ಣು ಹೂವು ಮೊದಲಾದವನ್ನು ಮಾಡಿಕೊಳ್ಳಲಾರದೆ ಅನ್ಯರು ಮಾಡಿಸಿದ ಪದಾರ್ಥಗಳನ್ನು ತಂದು ದೋಷಕ್ಕ ಪಾತ್ರರಾಗುತ್ತಾರೆ. ಮತ್ತು ತಾವು ಸಕಲ ಪದಾರ್ಥಗಳನ್ನು ಸದಾಚಾರದಿಂದ ಸಂಪಾದನೆ ಮಾಡಿಕೊಳ್ಳಬೇಕಲ್ಲದೆ, ತಸ್ಕರ ವೃತ್ತಿಯಿಂದ ಅಪಹರಿಸಿದರೆ ಮುಂದೆ ಚಾಂಡಾಲರಾಗಿ ಜನಿಸುವರು. ಯಾರಾದರೊಬ್ಬರು ಯಾವ ವಸ್ತುವಿಗೆ ಒಡೆಯರಾಗಿರುವರೋ ಆ ಪದಾರ್ಥವನ್ನು ಅವರು ಪ್ರೀತಿಯಿಂದ ಕೊಟ್ಟರ, ಅವರ ಅನುಮತಿಯಿಂದ ತೆಗೆದುಕೊಳ್ಳಬೇಕಲ್ಲದೆ, ಆ ಪದಾರ್ಥದ ಯಜಮಾನರ ಅನುಮತಿ ಇಲ್ಲದೆ ತೆಗೆದುಕೊಂಡು ಅನುಭವಿಸಿದ್ದೆಲ್ಲ ಕಳವೆನಿಸುತ್ತದೆ. ಆದರೆ ಕಾಯಾ ವಾಚಾ ಮಾನಸವೆಂಬ ತ್ರಿಕರಣಪೂರ್ವಕವಾಗಿ ಪರಧನವ ನಿಚ್ಛೈಸದೆ ನಿರ್ಮಲರಾಗಿದ್ದ ಸದಾಚಾರಿಗಳಾದವರೇ ಶಿವಪೂಜೆಯನ್ನು ಮಾಡಬೇಕು. ತ್ರಿಕರಣ ಶುದ್ಧವಲ್ಲದವರು ಶಿವಪೂಜೆಯನ್ನು ಮಾಡಿದರೆ ನಿಷ್ಫಲವೆನಿಸುತ್ತದೆ ಸಾಕ್ಷಿ "ಅಲಭ್ಯೇಷು ಪರಶ್ರೀಷು। ಯಮನಾದತ್ತವರ್ತತೆ॥ ಕರ್ಮಣಾ ಮನಸಾ ವಾಚ್ಯ। ಶರ್ಕತ್ವಂ ಶಿವತಾಂ ವ್ರಜೇತ್॥ ಎಂದುಂಟಾಗಿ, ಶಿವಭಕ್ತರಾದ ವೀರಶೈವ ಸದ್ಭಕ್ತ ಸದಾಚಾರಿಗಳು ಪರದ್ರವ್ಯವಂ ಮುಟ್ಟಲಾಗದೆಂಬುದೇ ಮುಖ್ಯ ತಾತ್ಪರ್ಯವು.

ಸದಾಚಾರಿಗಳಾದ ವೀರಶೈವ ಸದ್ಭಕ್ತರುಗಳು ಪರಧನ ಪರಸ್ತ್ರೀಯರಿಗಿಚ್ಛೈಸದೆ ಪರಹಿಂಸೆಯ ಮಾಡದೆ ಸಟೆಯ ನುಡಿಯದೆ ಸರ್ವ ಜೀವ ದಯಾಭರಿತ ಕಾರುಣ್ಯರಾಗಿ ವರ್ತಿಸಬೇಕು ಮತ್ತು ಲೋಕಾಚಾರದಂತೆ ಸಂಸಾರವ ಮಾಡಿದಾಗ್ಯಾದರೂ ಅದರಲ್ಲಿ ಮನ ಮಗ್ನರಾಗದೆ ಷಟ್‌ಕೃಷಿ ಲೋಕವ್ಯವಹಾರದೊಳಿರದೆ, ಭಕ್ತಿಸತ್ಪಥ ಮಾರ್ಗವಾಗಿ, ಗುರುಲಿಂಗಜಂಗಮ ಸೇವಾತತ್ಪರರಾಗಿ, ದಾಸೋಹ ಮುಖಾಂತರದಿಂದ ಕೃಷಿ ಮೊದಲಾದ ಸಮಸ್ತ ಕಾರ್ಯಂಗಳನ್ನು ಗುರುಲಿಂಗಜಂಗಮ ನಿಮಿತ್ಯವಾಗಿ ಮಾಡುತ್ತ, ಸತ್ಯಶುದ್ಧ ಕಾಯಕವಿಡಿದಾಚರಿಸಿ, ಮಾಡಿ ನೀಡಿ ಸುಖಭೋಗಂಗಳನೆಲ್ಲದರಲ್ಲಿ ಒಂದು ಕೊರತೆಯಾಗದೆ ಲಿಂಗಭೋಗೋಪಭೋಗಿಗಳಾಗಿ ಭೋಗಿಸುತ್ತ ಗುರುಭಕ್ತಿ ಲಿಂಗಭಕ್ತಿ, ಜಂಗಮಭಕ್ತಿ, ಪ್ರಸಾದಭಕ್ತಿ ಎಂಬ ಚತುರ್ವಿಧ ಭಕ್ತಿವಿಡಿದ

ಭಕ್ತಿಸತ್ಕಾರ್ಯದಿಂದೆ ಶಿವ ದಾಸೋಹಿಗಳಾಗಿ ವರ್ತಿಸುವದೇ ಸದಾಚಾರವು. ಇದೇ ಶಿವಭಕ್ತರುಗಳಿಗೆ ಮುಖ್ಯ ಧರ್ಮವು.

ಆದರೆ ಈ ಶಿವಭಕ್ತರಾದ ಸದಾಚಾರಿಗಳು ಮಾಡುವ ಸಂಸಾರವು ಲೌಕಿಕರುಗಳ ಕಣ್ಣಿಗೆ ಲೋಕವೃತ್ತಿಯಾಗಿ ಕಾಣಿಸಿದರೂ ಅದು ಲೋಕವೃತ್ತಿಯುಲ್ಲವು ಯಾತಕ್ಕೆಂದರೆ, ಅವರು ತಮ್ಮ ನಿಮಿತ್ಯವಾಗಿ ತಮ್ಮ ಸತಿ ಸುತರ ನಿಮಿತ್ಯವಾಗಿ ಮತ್ತು ತಮ್ಮಾಪ್ತರಿಷ್ಟರ ನಿಮಿತ್ಯವಾಗಿ ಷಟ್ಕೃಷಿ ಲೋಕವ್ಯವಹಾರಂಗಳನ್ನು ಮಾಡದೆ, ಶಿವಭಕ್ತಿ ಮುಂದುಗೊಂಡು ಗುರುಲಿಂಗಜಂಗಮಕ್ಕೆ ತ್ರಿವಿಧ ಪ್ರಸಾದವನು ಪಡೆದನುಭವಿಸುತ್ತ ಇರುವಲ್ಲಿ ಸಕಲ ಸಂಸಾರನಿವೃತ್ತಿಯಾಗಿ, ಸಂಸಾರವೆಂಬುದೇ ಸದ್ಭಕ್ತಿ ಚಾರಿತ್ರವಾಗಿರ್ಪುದು "ಯಾ ಯಾ ಚೇಷ್ಟಾ ಸಮುತ್ಪನ್ನಂ । ಸಾ ಸಾ ಪೂಜನಮೀಶ್ವರಃ" ॥ ಎಂದುಂಟಾಗಿ ಶಿವಭಕ್ತರ ಭಾವದಲ್ಲಿ ಶಿವನು ಪರಿಪೂರ್ಣನಾಗಿರ್ಪನು. ಸಾಕ್ಷಿ, "ಯಥಾ ಭಾವಸ್ತಥಾ ಲಿಂಗಂ ಸತ್ಯಂ ಸತ್ಯಂ ನ ಸಂಶಯಃ" ಎಂದುಂಟಾಗಿ ಶಿವಭಕ್ತರಾದ ಸದಾಚಾರಿಗಳು ತಮ್ಮ ತಮ್ಮ ಭಾವದಲ್ಲಿ ಗುರುಲಿಂಗಜಂಗಮವೇ ಸಾಕ್ಷಾತ್ ಶಿವನೆಂದು ವಿಶ್ವಾಸಿಸಿ ನಿರ್ವಂಚಕ ಭಾವದಿಂದ ಅರ್ಥ ಪ್ರಾಣಾಭಿಮಾನಂಗಳನೊಪ್ಪಿಸಿ, ಗುರುಲಿಂಗಜಂಗಮವೇ ತಮ್ಮ ಪ್ರಾಣನಾಥನೆಂದು ದೃಢಾನುರಾಗವಾಗಿ ಒಡೆಯರಿಗೊಡವೆಯನೊಪ್ಪಿಸುವೆನೆಂದು ಬಂದ ಜಂಗಮದ ಹಸಿವನರಿತು ಬೇಡಿಬೇಡಿದಂತೆ ಸಂತೋಷದಿಂದ ಕೊಟ್ಟು ಭಕ್ತಿಯನ್ನು ಮಾಡುತ್ತ ಸದಾ ಸಂಪತ್ತನ್ನು ಭೋಗಮೋಕ್ಷಂಗಳನ್ನು ಪಡೆಯಬೇಕು. ಭಕ್ತರಾದವರು ಲಿಂಗಜಂಗಮವನುಪೇಕ್ಷಿಸಿದರೆ, ಅವರ ಕೇಡಿಂಗೆ ಕಡೆ ಇಲ್ಲವಾಗಿ ಗುರುಲಿಂಗಜಂಗಮವೇ ಸಾಕ್ಷಾತ್ ಶಿವನೆಂದು ನಂಬಬೇಕು. ಇದುವೇ ಭಕ್ತರಿಗೆ ಸದಾಚಾರವು.

ಹಿಂದೆ ಸಾಂಪ್ರದಾಯಕರಾದ ಅರವತ್ತುಮೂರು ಪುರಾತನರು ಭಕ್ತಿ ಸಚ್ಚಾರಿತ್ರದಿಂದ ಸದಾಚಾರಿಗಳಾಗಿ ಆಚರಿಸುವಲ್ಲಿ ಮೊದಲೇ ಗುರೂಪದೇಶದಿಂದ ಅಂತರಂಗದಲ್ಲಿ ಪರಶಿವನ ನಿಜಪನರಿದು ಬಲ್ಲವರಾಗಿ ಶಿವಭಾವಿಗಳಾದುದರಿಂದ ನಿಜವೀರಶೈವ ಭಕ್ತಿ ತಾತ್ಪರ್ಯದಿಂದ ಕುರಿಯ ಹಿಕ್ಕೆಯಲ್ಲಿ ಸೈಕತದಲ್ಲಿ ಬಳ್ಳದಲ್ಲಿ ಕುಚದಲ್ಲಿ ಲಿಂಗದ ನಿಜವಿಡಿದು ಭಾವಿಸಿ ಕರೆದು ಪ್ರತ್ಯಕ್ಷ ಮಾಡಿಕೊಂಡರು. ತಾವು ಭಾವಲಿಂಗ ಸ್ವರೂಪಿಗಳಾದುದರಿಂದ ಅವರು ಆವಾವ ಕುರುಹಿಡಿದು ಭಾವಿಸಿದರೆ, ಅಲ್ಲಲ್ಲಿ ಲಿಂಗವು ಪ್ರತ್ಯಕ್ಷವಾಗಿ ಬೇಡಿದು ಚಿತವ ಕೊಟ್ಟು ಜಗತ್ಪ್ರಖ್ಯಾತವಾಗಿ ಕೆಲವರನ್ನು ಕಾಯವೆಂಸಿ ಕೈಲಾಸಕ್ಕೆ ಒಯ್ದು ಗಣಪದವನಿತ್ತು ಮನ್ನಿಸಿದನು. ಇದಲ್ಲದೆ ಶಿವನು ಕೆಲವರಿಗೆ ಸ್ವಯಲಿಂಗ ಪದವ ಕೊಟ್ಟನು. ಮತ್ತು ಕೆಲವರನ್ನು ತನ್ನೊಳಗಿಂಬಿಟ್ಟುಕೊಂಡನು.

ಕಲ್ಯಾಣದಲ್ಲಿ ಏಳುನೂರೆಪ್ಪತ್ತು ಅಮರಗಣರೆಂಬ ಬಸವಾದಿ ಪ್ರಮಥರು ಭೂಲೋಕ ಪ್ರಸಿದ್ಧರಾಗಿ ಭಕ್ತಿಸತಿಯರೊಡಗೂಡಿ ಲೋಕೋದ್ಧಾರಾರ್ಥವಾಗಿ ಮುಂದೆ ಭಕ್ತಮಾಹೇಶ್ವರರುಗಳೆಲ್ಲರು ಅಂತರ್ಬಾಹ್ಯದಲ್ಲಿ ಚತುರ್ವಿಧ ಭಕ್ತಿ ಹಿಡಿದಾಚರಿಸಲೆಂದು ನಡೆದು ನುಡಿದು ಮಾಡಿ ನೀಡಿ ತೋರಿದರು ಅವರೆಲ್ಲರು ಬದ್ಧರಾಗಿ ಮಾಡಿ ಮುಕ್ತಿಯು ಪಡೆಯಬೇಕೆಂದು ಮಾಡಲಿಲ್ಲ ಆ ಪ್ರಮಥರು ಅಸಮಾನ ಶೌರ್ಯರು ಅಗಣಿತ ಚರಿತ್ರರು ಸ್ವತಂತ್ರ ಧೀರರು ಭೋಗ ಮೋಕ್ಷಪ್ರದಾಯಕರು ಸಕಲ ಭುವನ ಬ್ರಹ್ಮಾಂಡಾಧಿಕಾರಿಗಳು ಜಗತ್ ಸೃಷ್ಟಿ ಸಂಹಾರಾದಿ ಕಾರ್ಯಸಮರ್ಥರು ಆದಿ ಮಧ್ಯಾಂತರಹಿತರು ಮೃತ್ಯುಂಜಯರು ಪರಶಿವನ ಸ್ವಲೀಲಾವತಾರರು ಅವರು ಲೋಕ ಹಿತಾರ್ಥವಾಗಿ ಭೂವಲಯದಲ್ಲಿ ಶಿವನ ನಿಜ ಭಕ್ತಿಯ ಘನಚಾತುರ್ಯವನ್ನು ಶಿವಭಕ್ತಿಯ ಮಹಿಮೆಯನ್ನು ಶಿವನ ಘನತೆಯನ್ನು ಶಿವಮತಸ್ಥಿರಪಡಿಸುವದನ್ನು ಶಿವಭಕ್ತರುಗಳ ಉನ್ನತಿಯನ್ನು ಶಿವಭಕ್ತಿಯೊಂದೊದಗುವ ಸತ್ಫಲವನ್ನು ಸಾಮರ್ಥ್ಯವನ್ನು ಸೌಖ್ಯವನ್ನು ಜಯವನ್ನು ನಿಜ ಮೋಕ್ಷವೆನಿಸ ಶಿವೈಕ್ಯ ಸಂಪದವನ್ನು ಸಕಲರು ಕಂಡು ಕೇಳಿ ತಿಳಿದು ನೋಡಿ ಭವಿತನಕ್ಕೆ ಹೇಸಿ ಭಕ್ತರಾಗಿ ಗುರುಲಿಂಗಜಂಗಮದ ಭಕ್ತಿ ತಾತ್ಪರ್ಯವಿಡಿದು ಮಾಡಿ ನೀಡಿ ಭೋಗಮೋಕ್ಷಯುತರಾಗಿ, ಸಿಜಾನಂದದೊಳಿರಲೆಂದು ಈ ಲೋಕದವರಿಗೆ ಪ್ರತ್ಯಕ್ಷ ಪ್ರಮಾಣದಿಂದ ತೋರಿಸುವದಕ್ಕೆ ಶಿವಲೀಲೆಯಿಂದಾಚರಿಸಿ ಗುರುಲಿಂಗಜಂಗಮದ ಭಕ್ತಿಯನ್ನು ಮನೋಹರದಿಂದ ಮಾಡಿ ತೋರಿಸಿದರು.

ಪೂರ್ವದ ಅರುವತ್ತುಮೂರು ಪುರಾತನರು ಕಲ್ಯಾಣದ ಬಸವಾದಿ ಪ್ರಮಥರು ಮಾಡಿ ನೀಡಿ ಭಕ್ತಿ ಸತ್ಪಥಹಿಡಿದು ಸದಾಚಾರದಿಂದ ಚರಿಸಿ ತೋರಿದ ಗುರುಭಕ್ತಿ ಲಿಂಗಭಕ್ತಿ ಜಂಗಮಭಕ್ತಿ ಪ್ರಸಾದ ಭಕ್ತಿಗಳೆಂಬ ಚತುರ್ವಿಧ ಭಕ್ತಿ ತಾತ್ಪರ್ಯವು ಆಶ್ಚರ್ಯಕರವು. ಈ ಲೋಕದ ಜೀವ ಭಾವಿಗಳಾದ ವೇದಾಂತಿ ಸಿದ್ಧಾಂತಿ ಯೋಗ ಮಾರ್ಗಿಗಳೆಂಬ ಭಿನ್ನ ಭಾವಿಗಳಿಗಸಾಧ್ಯವು. ಶಿವಭಕ್ತಿ ವಿಹೀನವಾದ ಅನ್ಯಮತದವರಿಗೆ ಅಗೋಚರವು. ಈ ಭಕ್ತಿ ತಾತ್ಪರ್ಯ ಚಾತುರ್ಯವು ಶಿವಾಂಶೀಭೂತರಾದ ಶ್ರೀ ವೀರಶೈವ ಶೂರರಿಗೆ ಸುಲಭನಾದ, ನಿರ್ಬೀಜದೀಕ್ಷಾಪ್ರದನಾದ, ನಿರಾಭಾರಿಯಾದ, ವೀರಶೈವಾವಧೂತನಾದ, ಅನಿಮಿತ್ತ ಬಾಂಧವನಾದ, ಷಟ್‌ಸ್ಥಲ ಬ್ರಹ್ಮಿಯಾದ ಶ್ರೀಗುರುದೇವನ ನಿಜೋಪದೇಶದಿಂದಲ್ಲದೆ ತಿಳಿಯದು.

ಬಸವಾದಿ ಪ್ರಮಥರು ಅರುವತ್ತುಮೂರು ಪುರಾತನರುಗಳ ಆಚರಣೆಯನ್ನು ಭಕ್ತಿ ತಾತ್ಪರ್ಯ ಚಾತುರ್ಯವನ್ನು ಶ್ರೀಗುರುಮುಖದಿಂದರಿದು ಆಚರಿಸುವವರಿಗೆ ಅವರಂತೆ ಈಗಲಾದರೂ ಸದ್ಯೋನ್ಮುಕ್ತಿಯೂ ಸಕಲ ಸಂಪದವೂ ಸರ್ವ ಸಾಮರ್ಥ್ಯವೂ ಸಂಪ್ರಾಪ್ತಿಸುವದಾಗಿ ಅವರವರು ಆಚರಿಸಿ ತೋರಿದ

ಲೋಕೋಪಕಾರ ಚಾರಿತ್ರಗಳನ್ನು ಸರ್ವರೂ ತಿಳಿದು ಆಚರಿಸುವದಕ್ಕೆ ಕೇಳಿ ತಿಳಿದು ಕೃತಾರ್ಥರಾಗಬೇಕು.

ಈಗಲೂ ಸದಾಚಾರಿಗಳಾದ ಯಾವತ್ತು ಸದ್ಭಕ್ತರು ತಿಳಿಯತಕ್ಕದ್ದೇನಂದರೆ, ಭಾವದ ಬಲುಮೆಯಂತೆ ಸಕಲ ಕಾರ್ಯಗಳು ಸಿದ್ಧಿಸುವವು. ಹ್ಯಾಗಂದರೆ ಸಾಕ್ಷಿ "ನ ಕಾಷ್ಠೆ ವಿದ್ಯತೆ ದೇವೋ। ನ ಪಾಷಾಣೇ ನ ಮೃಣ್ಮಯೆ॥ ಭಾವೋಹಿ ವಿದ್ಯತೇ ದೇವೋ। ತಸ್ಮಾದ್ಭಾವೋ ಹಿ ಕಾರಣಂ॥ ಎಂದುಂಟಾಗಿ ಕಲ್ಲು ಕಟ್ಟಿಗೆ ಮಣ್ಣುಗಳು ದೇವರಲ್ಲವೆಂಬುದು ಪ್ರಸಿದ್ಧವಾಗಿದೆ. ಆದಾಗ್ಯೂ ತನ್ನ ಭಾವದಲ್ಲಿ ಶಿವನ ನಿಜವನರಿಯಬೇಕಾದರೆ, ಗುರುಮಾರ್ಗಾಚಾರದಿಂದ ರಿದು ವೀರಶೈವ ಸದ್ಭಕ್ತರು ಭಾವದ ನಿಜದ ಬಲದಿಂದ ಯಾವದರಲ್ಲಿ ಕುರುಹಿಡುವರೋ ಅದರಲ್ಲಿ ದೇವಾದಿ ದೇವನಾದ ಪರಶಿವನು ಪ್ರತ್ಯಕ್ಷವಾಗುತ್ತಿಹನು.

ಸದ್ಭಕ್ತರ ಸಧ್ಭಾವವೇ ದೈವವೆಂಬುವದಕ್ಕೆ ಸಂಶಯವಿಲ್ಲ. ಸಾಕ್ಷಿ- ಪದ "ಭಾವಲಿಂಗವೋ ಸದ್ಭಕ್ತ ಜನರ ಭಾವಲಿಂಗವೋ। ಭಾವಲಿಂಗವೋ ಸದಾಶಿವಾವತಾರರೆನಿಸಿ ವೀರ। ಶೈವ ಧರ್ಮನಿಷ್ಠ ಭುವಿಯೊಳೋವಿ ಮೆರೆದ ಮಹಿಮರಮುಳ। ಭಾವಲಿಂಗವೋ"॥ ಎಂದು ಶ್ರೀಘನಮಠದ ನಿವಾಸ ಚಿದ್ಘನ ಶಿವಭೂಷಣ ಪ್ರಭುವಿನ ವಾಕ್ಯವಿಹುದು ಇದಕ್ಕೆ ದೃಷ್ಟಾಂತವೇನಂದರೆ ಕಾಟಕೂಟನೆಂಬ ಗೊಲ್ಲನು ಅಜಪಿಕ್ಕಿಯೊಳು ಲಿಂಗವ ಪ್ರಸನ್ನ ಮಾಡಿಕೊಂಡು ಇಷ್ಟಾರ್ಥವನ್ನು ಹಡೆದ ಲಿಂಗವು ಗೊಲ್ಲಗೇರಿಯಲ್ಲಿ ಈಗಲೂ ಪ್ರಸಿದ್ಧವಾಗಿದೆ ಮಲ್ಲಶೆಟ್ಟಿಯು ಬಳ್ಳವನೆ ಲಿಂಗವೆಂದು ನಿಜಭಾವದಿಂದ ಅರ್ಚಿಸಿ ಸ್ವಯಂಭು ಲಿಂಗವ ಮಾಡಿ ತೋರಿ ಕಾವ್ಯಾರ್ಥವ ಪಡೆದನು. ಸೌಂದರ ನಿಂಬೆಣ್ಣಗಳು ವಾಮಲೂರಲ್ಲಿ ಪರವಿನಾಚಿಯು ಕಚವನೇ ವಾಲ್ಮಿಕೇಶ್ವರ ಲಿಂಗವೆಂದು ನಿಜಭಾವದಿಂದರ್ಚಿಸಿ ಸ್ತನಶಂಕರಾ ಎಂದು ಕರೆದು ನುಡಿಸಿ ವಾಲ್ಮಿಕೇಶ್ವರ ಲಿಂಗದಿಂದ ನಂದಿ ಮುದ್ರೆಯ ಪಡಿಹೊನ್ನ ಪಡೆದುದು ಜಗತ್ ಪ್ರಖ್ಯಾತವದೆ. ಕಿನ್ನರಯ್ಯಗಳು ತ್ರಿಪುರಾಂತಕ ಲಿಂಗದಲ್ಲಿ ಹೊನ್ನ ಪಡೆದರು. ಕರಿಕಾಲ ಚೋಳರಾಜೇಂದ್ರನು ಕಾಳಹಸ್ತೀಶ್ವರನಿಗೆ ನಿತ್ಯ ಭೋಜನವ ಮಾಡಿಸಿದನು ಈ ಪ್ರಕಾರ ಕಾಳಿದಾಸ, ಮಲುಹಣ, ಬಾಣ, ಮಯೂರ, ಹಲಾಯುಧ, ಮಲಯರಾಜ, ರಾಘವಾಂಕ ಮೊದಲಾದ ಅನಂತ ಶಿವ ಕವಿಗಳು ನಿಜಭಾವದಿಂದ ಲಿಂಗದ ಕುರುಹನರಿದು ಸ್ತುತಿಸಿ ಪ್ರತ್ಯಕ್ಷ ಮಾಡಿಕೊಂಡು ಕಾವ್ಯಾರ್ಥವ ಪಡೆದರು ಮತ್ತು ಮಲ್ಲಿಕಾರ್ಜುನ ಪಂಡಿತರು ದ್ರಾಕ್ಷಾರಾಮದಲ್ಲಿ ಭೀಮೇಶ್ವರ ಲಿಂಗದಿಂದ ಊರ್ಧ್ವ ಲೋಚನವ ಪಡೆದರು.

ಕಲ್ಯಾಣದಲ್ಲಿ ಬಸವಾದಿ ಪ್ರಮಥರುಗಳಾದ ನಿಜ ವೀರಶೈವ ಚಕ್ರವರ್ತಿಗಳು ಜಂಗಮವೇ ಶಿವನೆಂಬ ನಿಜಭಾವವನ್ನು ಗುರುಮಾರ್ಗಾಚಾರದಿಂದ

ಕಂಡು ನಂಬಿಗೆಯಿಂದ ಚಿತ್ರದ ಜಂಗಮವನು ನಿಜ ಜಂಗಮವ ಮಾಡಿ ಕರೆದೊಯ್ದರು ವೇಶ್ಯಾಂಗನೆಯ ಕೊರಳಲ್ಲಿರ್ದ ನಿಂಬೆಯ ಹಣ್ಣನೇ ಶಿವ ಭಾವದಿಂದ ನೋಡಿ ಸುವರ್ಣದ ಕರಡಿಗೆಯೊಳಗೆ ಶಿವಲಿಂಗವ ಮಾಡಿ ತೋರಿದರು ಲಾಂಛನವ ಧರಿಸಿದ ಕಾಷ್ಠದ ಪ್ರತಿಮೆಗಳನು ಜಂಗಮವೆಂಬ ನಿಜ ಭಾವದಿಂ ಕರೆದು ನಿಜ ಜಂಗಮವ ಮಾಡಿ ತೋರಿದರು. ಚೋರರೀರ್ವರು ಧರಿಸಿದ ಬದನೆಯಕಾಯಿಯನು ಲಿಂಗವ ಮಾಡಿ ಅವರೀರ್ವರನು ಸಹಜ ಜಂಗಮವ ಮಾಡಿ ಮೆರೆದರು

ಈ ಪ್ರಕಾರ ಅಗಣಿತಕೋಟಿ ಮಹತ್ವೋನ್ನತಿಯನ್ನು ಪೂರ್ವದ ಪ್ರಮಥರು ಪುರಾತನರು ಆಚರಿಸಿದ ಸದಷ್ಟಾವರಣಂಗಳೆಂದೆನಿಪ ಗುರುಲಿಂಗಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಶಿವಮಂತ್ರಂಗಳ ಬಲುಮೆಯ ಘನತೆಯ ಮಹತ್ವಾತಿಶಯವು ಈ ವರೆಗೂ ಇರಲಾಗಿ ಈಗ ಇರುವ ಭಕ್ತರುಗಳು ಆದ್ಯರಾಚರಣೆಯಂತೆ ಹೋಲ್ವಿಕೆಯಾಗಿ ಮಾತ್ರ ಆಚರಿಸುತ್ತ ಭಾವದಲ್ಲಿ ನಿಜವಿಲ್ಲದೆ, ಸಹಜ ಭಕ್ತಿ ನೆಲೆಗೊಳ್ಳದೆ, ಗುರುಲಿಂಗ ಜಂಗಮದ ನಿಜವನರಿಯದೆ, ಹೊರಗೆ ಭಕ್ತಿಯ ವೇಷವ ಧರಿಸಿ, ಮೇಲೆ ರಂಜನೆಯಾಗುವ ಹಾಗೆ ಮುಖದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿ ಉರದಲ್ಲಿ ಶಿವಲಿಂಗದ ಸಜ್ಜೆ ಮೊದಲಾದ ಭಕ್ತ ವೇಷವ ಧರಿಸಿ ಹೃದಯದಲ್ಲಿ ವಂಚನೆ, ಉಪಾಧಿಕೆ, ಕುಹಕ, ಕಾಪಟ್ಯ, ಹುಸಿ, ಹಿಂಸೆ, ಕಳವು, ಹಾದರ, ಅನ್ಯಾಯ, ಅಧರ್ಮವೆಂಬ ಪ್ರಪಂಚದೊಡನೆ ಕೂಡಿ, ಲೌಕಿಕರೊಡನೆ ಲೌಕಿಕರಾಗಿ ಭಕ್ತರೆಂಬಭಿಮಾನವಿಲ್ಲದೆ, ಶಿವಮಹತ್ವಾತಿಶಯವಾದ ಅಷ್ಟಾವರಣಂಗಳಿಗೆ ಭಂಗ ತಂದು, ಪಂಚ ಪರುಷಗಳನ್ನು ಕಳೆದುಕೊಂಡು, ಪಾಶಬದ್ಧರಾಗಿ ಜೀವನವರ್ತನೆಯೊಡನೆ ಕೂಡಿ ವಿವೇಕ ಹೀನರಾಗಿ ಅನ್ಯಮತದವರು ಮಾಡುವ ದೂಷಣೆಗೆ ಪಾತ್ರರಾಗಿ ಪಾಮರರೆನಿಸುವ ಶೂದ್ರರೆಂಬ ನಿಂದೆಗೆ ಆಸ್ಪದರಾಗಿ ಅಧಿಕಾರ ವಿಹೀನರಾಗಿ ದಾರಿದ್ರ್ಯ ದೋಷಿಗಳಾಗಿ ಕಾಲಕಾಮರ ಶಿಕ್ಷೆಯ ಬಾಧೆಗೆ ವಶಗತರಾದದ್ದು ಯಾವ ಜನ್ಮಾಂತರದ ಕರ್ಮವೆಂದು ಬಣ್ಣಿಸಬಹುದು?

“ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವು ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು” ಎಂದು ಜಗದಾರಾಧ್ಯ ಸಂಗನಬಸವೇಶ್ವರ ದೇವರ ವಾಕ್ಯವಿಹುದಾಗಿ, ಭಕ್ತರಾದರೆ ಜಂಗಮವು ಮೆಚ್ಚಿ ಅಹುದೆನಬೇಕು. ಅದರಂತೆ ಸರ್ವಸದ್ಗುಣಶೀಲನಾಗಿ ಭಕ್ತಿಸತ್ಪಥ ಮಾರ್ಗವಿಡಿದು ಸದಾಚಾರಿಯಾಗಿ ಆಚರಿಸುವದಕ್ಕೆ ಧೈರ್ಯವಿದ್ದರ, ಭಕ್ತರಾಗಬೇಕು ಅಥವಾ ಸಕಲ ದುರ್ಗುಣಗಳೊಡನೆ ಕೂಡಿ ಅನಾಚಾರಿಯಾಗಿ ವರ್ತಿಸಬೇಕಾದರೆ ಭವಿಯಾಗಿ ಭವಭವಾಂತರದಲ್ಲಿ ಕಾಲಕಾಮರ ಶಿಕ್ಷೆಯನುಂಬುತ್ತ ಕೆಟ್ಟು ಭ್ರಷ್ಟನಾಗಿ “ಭ್ರಷ್ಟಸ್ಯ ಕಾ ವಾ ಗತಿಃ'' ಎಂದ ಹಾಗೆ ಭವಿಯಾಗಿರುವದೊಂದು ಪಥವು.

ಶಿವಭಕ್ತನಾಗಿ ಜನಿಸಬೇಕಾದರೆ ಹಿಂದೆ ಅನಂತಕೋಟಿ ಜನ್ಮಾದಿಗಳಲ್ಲಿ ಮಾಡಿದ ಅಘೋರ ತಪಸ್ಸುಗಳ ಫಲಗಳಿಂದ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಚತುರ್ವಿಧ ಶಿವಪದಗಳನ್ನು ಪಡೆದವನಾಗಿ ಈ ಲೋಕದಲ್ಲಿ ಜನಿಸಿದಾಗ್ಯಾದರೂ ಶಿವನ ಸದ್ರೂಪವಾದ ಗುರುಲಿಂಗಜಂಗಮದಲ್ಲಿ ಸಾಲೋಕ್ಯಪದಸ್ಥನಾಗಿ, ಅವರ ಸಮೀಪದಲ್ಲಿದ್ದು ಸಾಮೀಪ್ಯಪದಸ್ಥನಾಗಿ, ಆ ಜಂಗಮ ಮೂರ್ತಿಗಳ ಸಮ್ಮುಖದಲ್ಲಿ ಕುಳಿತು ಸಾರೂಪ್ಯಪದಸ್ಥನಾಗಿ, ಭಸ್ಮರುದ್ರಾಕ್ಷಾದಿ ಅಷ್ಟಾವರಣ ಧಾರಕನಾಗಿ ಶಿವನ ರೂಪಿನಂತ ರಂಜಿಸುತ್ತ ಮತ್ತು ಸಾಯುಜ್ಯಪದಸ್ಥನಾಗಿ ಗುರುಲಿಂಗಜಂಗಮದ ಪ್ರಸಾದಮಂ ಪಡೆದು ಲಿಂಗ ಭೋಗೋಪಭೋಗಿಯಾಗಿ ಶಿವಪ್ರಸಾದವ ತಾನುಂಡು ತನ್ನ ಪ್ರಸಾದದ ಶಿವಂಗಿತ್ತು ಸಕಲ ಭೋಗಂಗಳನು ಲಿಂಗ ಸಹಿತ ಸಹ ಭೋಜನವ ಮಾಡುತ್ತ ಶಿವನೊಡೆವೆರದಿಪ್ಪನಾಗಿ ಈ ರೀತಿಯಿಂದ ಸಾಲೋಕ್ಯಾದಿ ಚತುರ್ವಿಧ ಫಲಗಳಿಗೆ ಉಪರಿಯಾದ ಭಕ್ತಿಪದಸ್ಥನಾಗಿ ಈ ಲೋಕದಲ್ಲಿದ್ದರೂ ದೇವತಾ ಸಾರ್ವಭೌಮರನ್ನು ತೃಣಕ್ಕೆ ಸಮಾನವಾಗಿ ಕಂಡು ಶಿವಭಕ್ತಿ ಪ್ರಭಾವದೊಳಿಪ್ಪ ಘನಸಂಪದವು ಸಾಮಾನ್ಯ ತರದ ಸುಕೃತದಿಂದ ಘಟಿಸದಾಗಿ ಅನಂತಕೋಟಿ ಜನ್ಮಂಗಳಲ್ಲಿ ಮಾಡಿದ ಅಘೋರ ತಪಂಗಳಿಂದ ಶಿವಭಕ್ತರ ಗರ್ಭದಲ್ಲಿ ಜನಿಸುವನಾಗಿ ಇಂಥ ಘನಪುಣ್ಯ ಜನ್ಮವಾದ ಶಿವಭಕ್ತ ಜನ್ಮದ ಉನ್ನತಿಯನರಿಯದ, ಅನ್ಯದೈವಕ್ಕರಗಿ ಅನ್ಯ ದ್ರವ್ಯಾಪಹಾರಿಯಾಗಿ ಅನ್ಯ ಸ್ತ್ರೀಯರಂ ಬಯಸಿ, ಅನ್ಯ ಮತದ ಕರ್ಮಾದಿಗಳಲ್ಲಿ ಪ್ರೀತಿಯುಳ್ಳವನಾಗಿ ಅನ್ಯಥಾ ಸಂಸಾರಕ್ಕೆ ಮೆಚ್ಚಿ ಮಾನ ಕರಿಸಿ ಕಡು ಲೋಭಿಯಾಗಿ, ತನ್ನ ಪದಾರ್ಥವಣುವಾದರೂ ಸಜ್ಜನ ಸದ್ಭಕ್ತರಿಗೆ ಸಹ ಕೊಡಬಾರದೆಂದು ಕಡು ಲೋಭಿಯಾಗಿ ತನ್ನನುದ್ಧರಿಸುವದಕ್ಕೆ ಬಂದ ಗುರುಲಿಂಗಜಂಗಮವನ್ಯರೆಂದು ಭಾವಿಸಿ ತನ್ನನು ಯಮಪಾಶದಲ್ಲಿಕ್ಕುವ ಸತಿಸುತಾದಿ ಆಪ್ತರಿಪ್ಪರು ಬಂಧು ಬಾಂಧವರೆಲ್ಲರು ತನ್ನವರೆಂದು ನಿಜವಾಗಿ ನಂಬಿರುತ್ತಾರೆ

ತನ್ನ ಸಕಲ ಪದಾರ್ಥಗಳಲ್ಲಿ ಅರ್ಥ ಪ್ರಾಣಾಭಿಮಾನಂಗಳು ಸಹಿತ ಸ್ವಲ್ಪಾದರೂ ವಂಚಿಸಿಕೊಳ್ಳದೆ, ನಿರ್ವಂಚಕತ್ವದಿಂದ ಸತಿ ಸುತರಿಗೆ ಕೊಟ್ಟು ಭ್ರಷ್ಟನಾಗಿ ದೇಹಾಂತ್ಯದಲ್ಲಿ ಯಮಕಿಂಕರ ಪಾಶಕ್ಕೆ ವಶಗತನಾಗಿ ಭಯಂಕರ ದುಃಖದ ಮಾರ್ಗವಿಡಿದು ಯಮಲೋಕಕ್ಕೆ ಹೋಗಿ ತಾನು ತ್ರಿಕರಣ ಪೂರ್ವಕವಾಗಿ ಜನ್ಮಾರಭ್ಯದಿಂದ ದೇಹಾಂತ್ಯದ ವರೆಗೂ ಮಹಾಂಧತೆಯಿಂದ ಮಾಡಿದ ಅನಂತ ದುರ್ದೋಷಂಗಳಾದ ಅನೃತ ಕಪಟ ಕೊಲೆ ಹಿಂಸೆ ವಿಶ್ವಾಸಘಾತ ವಂಚನೆ ಉಪಾಧಿಕ ಅನ್ಯಾಯ ನಿಷ್ಠುರ ದುರ್ವಾಕ್ಯ ಕುಜನ ಸಂಗ ಅಭಕ್ಷ ಭಕ್ಷಣ ಅನ್ಯ ಸ್ತ್ರೀ ವ್ಯಸನ ಅನ್ಯ ದ್ರವ್ಯಾಪಹರಣ ಅನ್ಯಗೃಹ ಕ್ಷೇತ್ರಾಪಹಾರ ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ ಮತ್ತು ಶಿವ

ಭಕ್ತಿಮತದೂಷಣ ವೇದಾಗಮ ಶಾಸ್ತ್ರದೂಷಣ ಮೊದಲಾದ ಅನಂ
ದೋಷಂಗಳಿಗೆ ಪಾತ್ರನಾಗಿ, ಆಯಾಯ ದೋಷಂಗಳಿಗೆ ತಕ್ಕ ತಕ್ಕ ಶಿಕ್ಷೆ
ಗಳನ್ನು ಅನುಭೋಗಿಸುತ್ತಿರ್ಪನು

ಗುರುಲಿಂಗ ಜಂಗಮಕ್ಕೆ ತನ್ನ ಸರ್ವ ಪದಾರ್ಥಗಳನ್ನು ವಂಚಿಸಿ ತನ್ನ
ಸತಿ ಸುತರಿಗೆ ನಿರ್ವಂಚಕತ್ವದಿಂದ ಕೊಡುವ ಸಂಸಾರಿಗಳಾದ ತಾಮಸಭಕ್ತರು
ಹಿಂದೆ ಹೇಳಿದ ಸಮಸ್ತ ದೋಷಂಗಳಿಗೆ ಪಾತ್ರರಾಗಿ ಹೇಳಲಸಾಧ್ಯವಾದ
ಜಿಗುಪ್ಸೆ ಎನಿಸ ಭಯಂಕರ ನರಕ ದುಃಖದವಧಿಯೊಳು ಅರ್ಧವನನು
ಭವಿಸಿ ಕಡೆಯಲ್ಲಿ ಈ ಲೋಕದಲ್ಲಿರ್ದವರೆಲ್ಲರು ಈ ದೋಷಿಗಳಿಗಾಗುವ
ನರಕದ ಶಿಕ್ಷೆಯನ್ನು ಕಣ್ಗಂಡು ಭಯಪಡುವದಕ್ಕೆ ದೃಷ್ಟಾಂತವಾಗಬೇ
ಕೆಂದು ನರಕ ಭಕ್ಷಣ ಜೀವಿಗಳಾದ ಶುನಿ ಸೂಕರ ಕಾಕ ಗಾರ್ದಭಗಳೆಂಬ
ನಿಕೃಷ್ಟ ಯೋನಿದ್ವಾರದಲ್ಲಿ ಜನಿಸುತ್ತ ಜನ್ಮ ಸಹಸ್ರಂಗಳನನುಭವಿಸುತ್ತ
ಎಂಬತ್ತುನಾಲ್ಕು ಲಕ್ಷ ಯೋನಿದ್ವಾರಂಗಳೊಳೊಂದೊಂದು ಜನ್ಮದೊಳ್ ಸಹಸ್ರ
ವೇಳೆ ಜನಿಸುತ್ತ ಮಾಡಬಾರದ ಕೃತ್ಯಂಗಳ ಮಾಡಿ ಉಣ್ಣಬಾರದ ಆಹಾರ
ವನುಂಡು ಹುಟ್ಟಬಾರದ ಯೋನಿಯಲ್ಲಿ ಹುಟ್ಟಿ ಭನಮಾಲೆಯ ಸರದಂತೆ
ಅವಧಿ ಇಲ್ಲದ ಭವಂಗಳಲ್ಲಿ ಬಳಲುತ್ತ ಭವಧಾರಿಯಾಗಿ ಭವಿ ಎನಿಸಿಕೊಂ
ಬುತ್ತ ಘನ ದುಃಖವನ್ನು ಭೋಗಿಸುವದು ಇದಾವ ಜನ್ಮದ ಕರ್ಮವೆಂದರಿ
ಯರಲಾ! ಆದರೆ ನಾನಾ ಜನ್ಮಂಗಳಲ್ಲಿ ಸಕಲ ದುಃಖವನನುಭವಿಸುತ್ತಿರುವಲ್ಲಿ
ಕಿಂಚಿತ್ ಪುಣ್ಯದಿಂದ ಮನುಷ್ಯ ಜನ್ಮಕ್ಕೆ ಬರುವದೇ ದುರ್ಲಭವು

ಮನುಷ್ಯಜನ್ಮ ಸಹಸ್ರಂಗಳಲ್ಲಿ ಮಾಡಿದ ಘನ ತಪಸ್ಸಿನ ಪುಣ್ಯದಿಂದ
ಶಿವಭಕ್ತನಾಗಿ ಜನಿಸುವದೇ ದುರ್ಲಭವು. ಶಿವಭಕ್ತನಾದಾಗ್ಯೂ ಜಾತಿ ಸ್ಮರ
ತ್ವದಿಂದ ನಾನು ಶಿವಭಕ್ತನೆಂಬ ಅಭಿಮಾನವಿಡಿದು ಈ ಪುಣ್ಯದ ಜನ್ಮವೆನಗೆ
ಸಂಭವಿಸಿತು, ನಾನು ಪುಣ್ಯನು, ಧನ್ಯನು, ನಾನೀ ಜನ್ಮ ಒಂದರಲ್ಲಿ ವಿವೇ
ಕಿಯಾಗಿ ಗುರುಮಾರ್ಗಾಚಾರವಿಡಿದು ಶ್ರೀ ವೀರಶೈವ ದೀಕ್ಷೆಯಂ ಪಡೆದು
ಸದ್ಭಕ್ತಸದಾಚಾರಿ ಎನಿಸಿ, ಸಕಲ ದುರ್ಗುಣಗಳೆಲ್ಲವಂ ತ್ಯಜಿಸಿ ಜೀವ ಭಾವದ
ಭ್ರಮೆಯ ಕಳೆದು ಆಣವಾದಿ ಮಲಭಾವವಂ ನೀಗಿ ಶಿವಭಾವ ನಿಜವಾಗಿ
ಅಷ್ಟಾವರಣದ ನಿಜವನರಿದು ಪಂಚಾಚಾರವೇ ಪ್ರಾಣವಾಗಿ ಬಸವಾದಿ
ಪುರಾತನರ ಸಾಂಪ್ರದಾಯಕನೆನಿಸಿ, ಭಕ್ತನೆಂಬ ಬಿರಿದು ಸಾರುತ್ತ ನಿಜ
ಧೈರ್ಯದಿಂದ ಗುರುಲಿಂಗ ಜಂಗಮಕ್ಕೆ ತನುಮನಧನಾದಿಗಳನು ನಿರ್ವಂ
ಚಕ ಭಾವದಿಂದ ಕೊಟ್ಟು ಭಕ್ತಿಯ ಮಾಡಿ ಕೇಡಿಲ್ಲದ ನಿಜಮೋಕ್ಷವನ್ನು
ಪಡೆಯಬೇಕೆಂಬ ಸುಜ್ಞಾನವು ತಲೆದೋರುವದು ಅತ್ಯಂತ ದುರ್ಲಭವು.

ಶಿವನೇ ಶ್ರೀಗರುವಾಗಿ ಬಂದು ಬೋಧಿಸುತ್ತಿರಲು ಒಬ್ಬಾನೊಬ್ಬಾತ್ಮನು ಜ್ಞಾನೋನ್ಮುಖನಾಗಿ ಸದ್ಗುರುವಿನ ಸದ್ಬೋಧೆಯಂ ಗ್ರಹಿಸಿ ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂದಿಚ್ಛೈಸಿ ಅರ್ಥ ಪ್ರಾಣಾಭಿಮಾನವನು ಶ್ರೀ ಗುರುವಿಂಗೊಪ್ಪಿಸಿ, ಮೊದಲು ಆತನಿಂದ ಆಜ್ಞಾ ದೀಕ್ಷೆಯಂ ಪಡೆದು, ಬಳಿಕ ವೇಧಾ ದೀಕ್ಷೆ, ಮಂತ್ರ ದೀಕ್ಷೆ, ಕ್ರಿಯಾ ದೀಕ್ಷೆ ಎಂಬ ತ್ರಿವಿಧ ದೀಕ್ಷೆಯೊಂದಾದ ಶ್ರೀ ವೀರಶೈವ ದೀಕ್ಷೆಯನ್ನು ಪಡೆದು, ಆಣವ ಮಲ ಮಾಯಾ ಮಲ ಕಾರ್ಮಿಕಮಲವಂ ಬಿಸುಟ ಕಳೆದು ಮಾಂಸಮಯ ಶರೀರಭಾವವಳಿದು ಮಂತ್ರಮಯ ಶರೀರ ಭಾವಿಯಾಗಿ ಭೂತಪಂಚಕ ಜಡಕಾಯವಳಿದು ಚಿಂದಗ ಸ್ವರೂಪನಾಗಿ ಶ್ರೀ ಗುರುವಿನ ಹಸ್ತಮಸ್ತಕ ಸಂಯೋಗದಿಂದ ಚಿತ್ಕಲಾಲಿಂಗವು ಬಹಿಷ್ಕರಿಸಿ ಕ್ರಿಯಾಘನಲಿಂಗವಾಗಿ ಭಾವಕ್ಕೆ ಗೋಚರವಾಗಿ ಭಾವದಲ್ಲಿ ನೆಲೆಗೊಂಡಲ್ಲಿ ಭಾವಲಿಂಗವೆನಿಸಿತ್ತಾಗಿ ಬಳಿಕಾ ಲಿಂಗವೇ ಮನಕ್ಕೆ ಗೋಚರವಾಗಿ ಮನ ಸ್ಥಲದಲ್ಲಿ ನೆಲೆಗೊಂಡು ಪ್ರಾಣಲಿಂಗವೆನಿಸಿತ್ತಾಗಿ ಆ ವ ನದ ಚಾಂಪಲ್ಯ ವರ್ತನೆಯಳಿದು ಉನ್ಮನವೆನಿಸಿತ್ತು ಮತ್ತು ಆ ಲಿಂಗವೇ ನೇತ್ರಕ್ಕೆ ಗೋಚರವಾಗಿ ಕರಸ್ಥಲಕ್ಕೆ ಬಂದು ಕರದಲ್ಲಿ ನೆಲೆಗೊಂಡು ಇಷ್ಟಲಿಂಗವೆನಿಸಿತ್ತು.

ಬಳಿಕಾ ಇಷ್ಟಲಿಂಗವೇ ಷಟ್ ಪ್ರಕಾರ ಮುಖವಾಗಿ, ಷಟ್ಕರಣಂಗಳಲ್ಲಿ ಭೇದಿಸಿದಲ್ಲಿ ಕುಚಿತ್ತ ಹಸ್ತವಳಿದು ಸ ಚಿತ್ತ ಹಸ್ತವಾಗಿ, ಕುಬುದ್ಧಿಯಳಿದು ಸುಬುದ್ಧಿಹಸ್ತವಾಗಿ, ಕುಮನಹಸ್ತವಳಿದು ಸುಮನಹಸ್ತವಾಗಿ ದುರಹಂಕಾರ ಹಸ್ತವಳಿದು ನಿರಹಂಕಾರಹಸ್ತವಾಗಿ ಅಜ್ಞಾನಹಸ್ತವಳಿದು ಸುಜ್ಞಾನಹಸ್ತವಾಗಿ ದುರ್ಭಾವಹಸ್ತವಳಿದು ಸದ್ಭಾವಹಸ್ತವಾಗಿ ಈ ಪ್ರಕಾರ ಷಡ್ವಿಧ ಹಸ್ತ ಶುದ್ಧ ವಾದಲ್ಲಿ ಬಳಿಕಾ ಲಿಂಗವೇ ಜ್ಞಾನ ಕ್ರಿಯಾ ಸೂತ್ರದಿಂ ಷಡಿಂದ್ರಿಯ ಷಟ್ಕರಣಂಗಳಲ್ಲಿ ವೇಧಿಸಿ ಸರ್ವಾಂಗ ಪರಿಪೂರ್ಣವಾಗಿ ನೆಲೆಗೊಂಡಲ್ಲಿ ಚಿದ್ಘನ ಮಹಾಲಿಂಗವೆನಿಸಿತ್ತಾಗಿ ಸರ್ವಾಂಗಲಿಂಗಮಯವಾಯಿತ್ತು. ಸಾಕ್ಷಿ "ಸರ್ಪದಷ್ಟಂ ತದ್ದೇಹಂ। ಸರ್ವಾಂಗ ವಿಷದೇಹವತ್॥ ಲಿಂಗದಷ್ಟಂ ತದ್ದೇಹಂ। ಸರ್ವಾಂಗ ಲಿಂಗದೇಹವತ್॥ ಎಂಬಾಗಮ ಪ್ರಮಾಣ ಉಂಟು. ಈ ಪ್ರಕಾರ ಗುರು ಮಾರ್ಗಾಚಾರವಿಡಿದು ಭಕ್ತನಾದಲ್ಲಿ ಶಿವನು ಭಕ್ತದೇಹಿಕ ದೇಹನಾಗಿರ್ಪನು. ಹೀಗಿರುವದೇ ಭಕ್ತರ ಸದಾಚಾರವು.

ಪರಶಿವ ಮೂರ್ತಿಯು ಭಕ್ತಹೃತ್ಕಮಲವಾಸನೆಂಬುವದಕ್ಕೆ ಶಿವಾಗಮಂಗಳಲ್ಲಿ ಅನಂತ ಸಾಕ್ಷಿಗಳುಂಟು. ಹೇಗೆಂದರೆ ಸಾಕ್ಷಿ, ನಾಹಂ ಸ್ವಾಮಿ ಕೈಲಾಸೇ। ನ ಮೇರೌ ನ ಚ ಮಂದಾರೇ॥ ಮದ್ಭಕ್ತಾಃ ಯತ್ರ ತಿಷ್ಠಂತಿ। ತತ್ರ ತಿಷ್ಠಾಮಿ ಪಾರ್ವತೀ॥ ಇಂತೆಂದು ಈಶ್ವರ ವಾಕ್ಯವಿಹುದಾಗಿ, ಶಿವನು ಭಕ್ತಹೃದಯದಲ್ಲಿದ್ದಮೇಲೆ ಭಕ್ತರಿಗೆ ದಾರಿದ್ರ್ಯದುಃಖಂಗಳುಂಟೆ? ಈ ವಿಷಯದಲ್ಲಿ ಭಕ್ತರಿಗೆ ಶಿವಸ್ಮರಣೆಯೊಂದಿರಲು ಯಾವ ಭಯವಿಲ್ಲವೆಂದು ಪಾರ

ಮಾರ್ಥ ಕೃಷಿಯು ನೆಲ್ಲು ಗದ್ದೆಯು ಸಂಬಂಧವಾಗಿ ಅಂತರಂಗದ ಜ್ಞಾನಾನು ಭಾವ ಪ್ರಸಂಗದ ಸ್ತೋತ್ರ ಮುಖದಿಂದ ಶಂಕರಾಚಾರ್ಯರೆಂಬ ಪ್ರಸಿದ್ಧ ಶಿವಕವಿ ಶ್ರೇಷ್ಠರು ಹೇಳಿದ ಶಿವಾನಂದ ಲಹರಿಯೇ ಗ್ರಂಥ ಸಾಕ್ಷಿ. "ಧೀ ಯಂತ್ರೇಣ ವಚೋ ಘಟೇನ ಕವಿತಾ ಕುಲ್ಯೋಪಕುಲ್ಯಾಕ್ರಮೈ । ರಾನೀತೈಶ್ಚ ಸದಾಶಿವಸ್ಯ ಚರಿತಾಂಭೋರಾಶಿ ದಿವ್ಯಾಮೃತೈಃ ॥ ಹೃತ್ಕೇದಾರಯುತಾಶ್ಚ ಭಕ್ತಿ ಕಲಮಾಸ್ಸಾಫಲ್ಯ ಮಾತನ್ವತೇ । ದುರ್ಭಿಕ್ಷಾನ್ಮಮ ಸೇವಕಸ್ಯ ಭಗ ವನ್ವಿಶ್ವೇಶ ಭೀತಿಃ ಕುತಃ" ॥ ಅರ್ಥ- ಹೇ ಭಗವಾನ್ ಎಲೋ ಷಡ್ಗುಣೈಶ್ವರ ಸಂಪನ್ನನಾದಾತನೆ, ಹೇ ವಿಶ್ವೇಶ ಸಕಲ ಪ್ರಪಂಚಗಳಿಗೆ ಪತಿಯಾದಾತನೇ, "ಧೀ ಯಂತ್ರೇಣ ಧೀ ಬುದ್ಧಿ ಎಂಬ ಯಂತ್ರೇಣ ಘಟಯಂತ್ರದಿಂದ, ವಚೋಘಟೇನ ವಚಃ ವಾಕ್ಯವೆನಿಸುವ, ಘಟೇನ ಘಟದಿಂದ, ಕವಿತಾ ಕುಲ್ಯೋಪ ಕುಲ್ಯಾಕ್ರಮೈಃ ಕವಿತಾ ಕವಿತ್ವವೆಂಬ, ಕುಲ್ಯಾ ಕಾಲಿವೆಗಳ, ಉಪಕುಲ್ಯಾ ಸಣ್ಣ ಕಾಲುವೆಗಳ ಆಕ್ರಮೈಃ ಆಕ್ರಮಿಸುವದರಿಂದ, ಆನಿತೈಃ ತೆಗೆದುಕೊಂಡು ಬರುವಂಥ, ಸದಾಶಿವಸ್ಯ ಅನವರತ ಮಾಂಗಲ್ಯ ಸ್ವರೂಪ ನಾದ ಪರಶಿವನ, ಚರಿತಾಂಬೋರಾಶಿ ದಿವ್ಯಾಮೃತೈಃ, ಚರಿತ ಚರಿತ್ರವೆಂಬ ದಿವ್ಯಾಮೃತೈಃ ಮಹಾ ಶುದ್ಧೋದಕವೆಂಬ ಅಮೃತದಿಂದ, ಹೃತ್ಕೇದಾರಯುತಾಶ್ಚ, ಹೃತ್ ಹೃದಯವೆಂಬ, ಕೇದಾರ ಕ್ಷೇತ್ರದಿಂದ ಯುತಾಶ್ಚ ಕೂಡಿಕೊಳ್ಳಲ್ಪಟ್ಟ ದ್ದಾದ, ಭಕ್ತಿ ಕಲಮಃ ಭಕ್ತಿ ಭಕ್ತಿಯೆಂಬ ಕಲಮಃ ಶಾಲಿ ಸಸ್ಯವು, ಸಾಫಲ್ಯಂ ಸಫಲತ್ವವನು, ಆತನ್ವತೆ ವಿಸ್ತರಿಸಲ್ಪಟ್ಟಿದೆ ಸೇವಕಸ್ಯ ನಿನಗೆ ಸೇವಕನಾದ, ಮಮ ಎನಗೆ, ದುರ್ಭಿಕ್ಷಾತ್ ಕ್ಷಾಮದತ್ತಣಿಂದ, ಭೀತಿಃ ಭಯವು, ಕುತಃ ಯಾವ ಕಡೆಯದು,? ಭಾವಾರ್ಥ- ಷಡ್ಗುಣೈಶ್ವರ್ಯ ಸಂಪನ್ನನಾದ ಸಕಲ ಪ್ರಪಂಚಗಳಿಗೊಡೆಯುನಾದ ವಿಶ್ವೈ ಈಶ್ವರನೇ, ಬುದ್ಧಿ ಎಂಬ ಘಟಯಂತ್ರ ದಿಂದ ವಾಕ್ಕೆಂಬ ಘಟದಿಂದೆ ಕವಿತ್ವವೆಂಬ ಕಾಲಿವೆಗಳಿಂದ ತೆಗೆದುಕೊಂಡು ಬಂದ ಸಾಂಬಶಿವನ ಚರಿತ್ರವೆಂಬ ಸಮುದ್ರದ ಶುದ್ಧೋದಕದಿಂದ ಎನ್ನ ಮನಸ್ಸೆಂಬ ಕ್ಷೇತ್ರಂಗಳಿಂದ ಕೂಡಿದಂಥ ಭಕ್ತಿ ಎಂಬ ಶಾಲಿಸಸ್ಯಂಗಳು ಸಫ ಲತ್ವವನ್ನು ವಿಸ್ತಾರ ಮಾಡುತ್ತಿರಲಾಗಿ ಸೇವಕನಾದ ಎನಗೆ ಕ್ಷಾಮದತ್ತಣಿಂದ ಭಯವಾವ ಕಡೆಯದು ಎನಲು, ಸರ್ವದಾ ನನ್ನ ಮನದಲ್ಲಿ ನಿನ್ನ ಭಜನೆ ಮಾಡುತ್ತಿರುವೆನೆಂಬ ಅಭಿಪ್ರಾಯವು

ಇದಲ್ಲದೆ ಈ ಲೋಕದಲ್ಲಿ ಒಬ್ಬಾನೊಬ್ಬ ಸಾಮಾನ್ಯತರದ ರಾಜ್ಯ ನಾದರೂ ಏಕಾಂಗಿಯಾಗಿ ಓರ್ವನೇ ಹೋಗಿ ಒಂದು ಸ್ಥಳದಲ್ಲಿ ಕುಳಿತರೆ, ಆ ರಾಜನ ಪರಿಚಾರಕರಾದ ಸಮಸ್ತ ವಿನಿಯೋಗದ ಊಳಿಗದವರೆಲ್ಲರು ಬೊಕ್ಕಸ ಭಾಂಡಾರದವರು ಮಂತ್ರಿಗಳು ಸೇನಾಪತಿಗಳು ಭಟರು ಪರಿಚಾರ ಕರೆಲ್ಲರು ಆಯಾಯ ಸಮಯಕ್ಕೆ ತಾವು ಮಾಡುತ್ತಿರುವ ಸೇವಾದ ವೇಳೆಗೆ

ತಕ್ಕ ಊಳಿಗದ ಸರ್ವ ಸಾಹಿತ್ಯಾದಿಗಳನ್ನು ಧನ ಕನಕ ವಸ್ತ್ರಾಭರಣ ಗಂಧ ಕುಸುಮಾದಿ ಪದಾರ್ಥಗಳನ್ನು ಅಸನ ಪೀಠ ವಾಹನಾದಿಗಳನ್ನು ಸಹ ತೆಗೆದು ಕೊಂಡು ಹುಡುಕುತ್ತ ಹೋಗಿ ತಮ್ಮಿಂದ ತಾವೇ ತಕ್ಕ ತಕ್ಕ ಉಪಚಾರ ಗಳನ್ನು ಮಾಡುವರು

ಈ ದೃಷ್ಟಾಂತದಂತೆ ಸಕಲ ಬ್ರಹ್ಮಾಂಡಗಳಿಗಧಿಷ್ಠಾನ ಕರ್ತುವಾದ ಪರಶಿವ ಮೂರ್ತಿಯು ಸದ್ಭಕ್ತರ ಹೃದಯವಾಸನಾದುದರಿಂದ ಅನಂತ ಸುರ ನರೋರಗ ಯಕ್ಷ ಕಿನ್ನರ ಗರುಡ ಗಂಧರ್ವ, ವಿದ್ಯಾಧರ ಮಯೂರರು, ಇಂದ್ರಾದ್ಯಷ್ಟ ದಿಕ್ಪಾಲಕರು, ಬ್ರಹ್ಮವಿಷ್ಣ್ವಾದಿ ದೇವ ಶ್ರೇಷ್ಠರು, ಲಕ್ಷ್ಮೀ ಶಾರದೆ ಶಚಿ ಮೊದಲಾದ ದೇವತಾ ರಾಜಪತ್ನಿಯರು ತಾವು ನಿತ್ಯದಲ್ಲು ಸಮಯವರಿತು ಮಾಡುವ ಊಳಿಗದ ಸೇವೆಯು ಮಾಡುವದಕ್ಕೆ ಸದ್ಭಕ್ತರ ಮಹಾದ್ವಾರವನ್ನು ಕಾಯ್ದುಕೊಂಡಿರ್ಪರೆಂಬುದಕ್ಕೆ ಸಕಲ ಶಾಸ್ತ್ರಗಳು ಪುರಾಣಂಗಳು ಸಾಕ್ಷಿಯುಂಟು ಇದಲ್ಲದೆ, ಭಕ್ತರುಗಳು ಮಾಡುವ ದಾಸೋ ಹಕ್ಕೆ ಆಯಾಯ ಸಮಯಕ್ಕೆ ಏನೇನು ಬೇಕಾಗಿಹುದೋ ಅದೆಲ್ಲ ತನ್ನಿಂದ ತಾನೇ ಬಂದು ಸಮಯಕ್ಕೊದಗುತ್ತಿಹುದಾಗಿ ಪ್ರತ್ಯಕ್ಷ ಪ್ರಮಾಣವು

ಇದಲ್ಲದೆ ಕಲ್ಯಾಣದಲ್ಲಿ ಸಕಲ ಪ್ರಮಥರು ಮಾಡಿದ ದಾಸೋಹ ಚಾರಿ ತ್ರ್ಯಗಳ ಕೇಳಲಾಗಿ ಅತ್ಯಾಶ್ಚರ್ಯವೆನಿಸುವದು ಅದಾಗ್ಯೂ ಶಿವನು "ಯತ್ರ ಮಾಹೇಶ್ವರಸ್ತತ್ರಸನ್ನಿಹಿತ" ಎಂದುಂಟಾಗಿ ಶಿವನು ಭಕ್ತ ದೇಹಿಕ ದೇವನೆಂದು ಪ್ರಸಿದ್ಧವಾಗಿಹುದಾಗಿ, ಶಿವನು ಸದ್ಭಕ್ತರ ಹೃದಯವಾಸನಾದುದರಿಂದ ಭಕ್ತರು ಬಡವರೆನ್ನಬಹುದೆ? ಈ ದೃಷ್ಟಾಂತಂಗಳಿಂದ ಭಕ್ತಿ ಸಂಪದಕ್ಕೆ ತ್ರೈಲೋಕದ ರಾಜಸಂಪದವು ಸಮಬಾರದು.

ಹೀಗಿರುತ್ತಿರಲಾಗಿ ಭಕ್ತರೆಂಬವರು ಭಕ್ತಿ ಸತ್ಪಥಮಾರ್ಗವಿಡಿದಾಚರಿಸು ವಲ್ಲಿ ಧೈರ್ಯಗುಂದಿ ಹಿಂಜರಿದರೆ ಅದರಿಂದಾಗುವ ಭಂಗಕ್ಕೂ ದುಃಖಕ್ಕೂ ಗಣನೆ ಇಲ್ಲವು. ಶ್ರೀಗುರುವಿನಿಂದ ನಿಜಧೈರ್ಯವಂ ಪಡೆದು ನಿರ್ವಂಚಕ ಭಕ್ತನಾಗಿ ಆಚರಿಸಿ ಜಯಿಸಿದರೆ ಈ ಶಿವೈಕ್ಯ ಸಂಪದವೆಂಬ ನಿಜ ಮೋಕ್ಷ ಸಹಜಾನಂದವನ್ನು ವರ್ಣಿಸಲಶಕ್ಯವು. ಆದರೆ ಭಕ್ತರಾದವರು ಭಕ್ತಿಮೋಕ್ಷ ವನ್ನು ಧರಿಸಿದ ಮೇಲೆ ಜಂಗಮ ಭಕ್ತಿಯನ್ನು ಮಾಡುವದಕ್ಕೆ ಅಂಜಿ, ಹಿಂಜ ರಿಯಲಾಗದು. ಇದಕ್ಕೊಂದು ದೃಷ್ಟಾಂತ ಉಂಟು ಅದೇನೆಂದರೆ:—

ಒಬ್ಬನೊಬ್ಬ ಪರಾಕ್ರಮಿಯಾದ ವೀರನು ಸಾಧಕಾಲಯವೆಂಬ ಗರು ಡಿಯ ಮನೆಯಲ್ಲಿ ಗದಾಯುದ್ಧ, ಮುಷ್ಟಿಯುದ್ಧ, ಮಲ್ಲಯುದ್ಧ, ಶಸ್ತ್ರಾಸ್ತ್ರ ಮಂತ್ರಾಸ್ತ್ರ ಪ್ರಯೋಗಾದಿಯಾದ ಬತ್ತೀಸಾಯುಧ ಸಾಧನೆಯನ್ನು ಅಭ್ಯಾಸಿಸಿ

ಯುದ್ಧ ಚಾತುರ್ಯದಲ್ಲಿ ಕುಶಲನಾಗಿ ವೀರತ್ವದ ಬಿರುದುಗಳಾದ ಕಾಲಪೆಂಡೆ ಮುತ್ತಿನ ತುರಾಯಿ ಮೊದಲಾದವುಗಳನ್ನು ಧರಿಸಿ ವೀರಗಾಸೆಯನುಟ್ಟು ಬತ್ತೀಸಾಯುಧ ಸಮೇತನಾಗಿ ವೀರಭಟನೆಂದು ಬಿರುದು ಹೊಗಳಿಸಿಕೊಳ್ಳುತ್ತ ರಾಜಸಭೆಗೆ ಹೋದಲ್ಲಿ ರಾಜನು ಬೇಡಿದ ಉಚಿತವ ಕೊಟ್ಟು ತನ್ನ ಸಮೀಪದಲ್ಲಿಟ್ಟುಕೊಂಡಿರಲು ಕೆಲವು ದಿವಸಕ್ಕೆ ಪರರಾಜರೊಡನೆ ಯುದ್ಧ ಪ್ರಸಂಗ ಬಂದಲ್ಲಿ ರಾಜನು ಈ ಪಟುಭಟನಿಗೆ ವೀಳೆಯವನ್ನು ಕೊಟ್ಟು ಯುದ್ಧಕ್ಕೆ ಕಳುಹಿಸುವ ಸಮಯದಲ್ಲಿ ಅವನು ಭಾಷಾಪಂಥದ ಪೌರುಷದ ಮಾತುಗಳನ್ನಾಡಿ ಸಕಲ ವಸ್ತ್ರಾಭರಣಂಗಳಿಂದಲಂಕರಿಸಿಕೊಂಡು ಕಾಶಿಯನುಟ್ಟು ಆಯುಧಂಗಳನು ಧರಿಸಿ ಧನುರ್ಧಾರಿಯಾಗಿ ರಥವನೇರಿ ಬೊಬ್ಬಿರಿದು ಚೀರುತ್ತ ಸಿಂಹನಾದದಿಂದ ಹೂಂಕರಿಸುತ್ತ ಧನುವ ಝೇಂಕರಿಸುತ್ತ ಬಿರಿದು ಹೊಗಳಿಸುತ್ತ ರಣಭೂಮಿಗೆ ಬಂದು ಸಮ್ಮುಖದಲ್ಲಿ ಕಾದುತ್ತಿರುವ ವೀರ ಭಟರು ಹೊಯ್ದಾಡುವ ಕಣೆಗಳು ಕಾರ್ಗಿಡಿಗಳಂ ಕಾರುತ್ತಿರಲು ಕಂಡು ಭಯಪಟ್ಟು ನಾನು ಇವರೊಡನೆ ಯುದ್ಧವನ್ನು ಮಾಡಿ ಮೃತಿಹೊಂದಿದರ ನನಗೆ ಬರುವ ಪ್ರಯೋಜನವೇನು, ನಾನು ಸತ್ತು ಪಡೆಯುವ ಸಂಪದವೇತಕ್ಕೆ, ರಾಜನು ಮೆಚ್ಚಿದರೇನು, ಮೆಚ್ಚದಿದ್ದರೇನು, ನನ್ನ ಜೀವ ಉಳಿದರೆ ಮುಂದೆ ಏನಾದರೂ ಕಂಡೇನು, ನಾನು ಸತ್ತಮೇಲೆ ಕಾಣುವದೇನೆಂದು ತಿಳಿದು ಜೀವಗಳ್ಳನಾಗಿ ಕೈಯ್ಯೊಳಗಿದ್ದ ಆಯುಧವ ನೆಲಕ್ಕಿಟ್ಟು ಹುತ್ತವನೇರಿ ಹುಲ್ಲು ಕಚ್ಚಿ ತಪ್ಪಿಸಿಕೊಂಡು ಓಡಿಬಂದರೆ, ಅವನ ಭಂಗವನೇನೆಂದು ಹೇಳಬಹುದು? ಆದರೆ ಆ ವೀರನನ್ನು ಯಾರಾದರೂ ಕಂಡು ಮಾತಾಡಿಸಿದರೆ ಅವನು ನಾಚಿಕೊಳ್ಳುವನು. ಮತ್ತು ರಾಜನು ಅವನನ್ನು ಹಿಡಿತರಿಸಿ ಅವನ ಸರ್ವ ದ್ರವ್ಯವನ್ನೆಲ್ಲ ಸೆಳೆದುಕೊಂಡು ಮೀಸೆಯ ತೆಗೆಯಿಸಿ ಸೀರೆಯನುಡಿಸಿ ಬಳೆಯನಿಡಿಸಿ ಕೈಯ್ಯಲ್ಲಿ ಬೋರಿಗೆಯನ್ನು ಕೊಟ್ಟು ರಾಜಬೀದಿಯಲ್ಲಿ ಬಾಜಾರದಲ್ಲಿ ಕಸವ ಬಳಿಯಲಿಕ್ಕೆ ಹಚ್ಚುವನು. ಆ ಸಮಯದಲ್ಲಿ ಅವನು ಲಜ್ಜಾಯುತನಾಗಿ ಪಶ್ಚಾತ್ತಾಪವನ್ನು ಹೊಂದಿ ಎನ್ನುವದೇನಂದರೆ, ಹಿಂದೆ ನಾನು ಜೀವಗಳ್ಳನಾಗಿ ಓಡಿಬರದೆ, ಮಹಾಯುದ್ಧವನ್ನು ಮಾಡಿದ್ದರೆ, ಈ ಅವಮಾನವೂ ದುಃಖವೂ ಯಾಕೆ ಪ್ರಾಪ್ತಿಸುವವೆಂದು ಪ್ರಳಾಪಿಸಿದರೆ ಬಂದೀತೇ? ಬರಲರಿಯದು. ಅಥವಾ ಅವನು ಆ ಯುದ್ಧದಲ್ಲಿ ಮರಣ ಹೊಂದಿದ್ದರೆ, ವೀರ ಸ್ವರ್ಗವಾಗುತ್ತಿತ್ತು.

ವೀರನಾದಾಗ್ಯೂ ಪ್ರಯೋಜನವೇನು? ಕಾದುವದಕ್ಕೆ ಧೈರ್ಯ ಬೇಕು. ಧೈರ್ಯದ ಬಲವೇ ಬಲವಲ್ಲದೆ ದೈರ್ಯವಿಲ್ಲದಿದ್ದರೆ, ಯಾವ ಸಾಧನೆಯನ್ನು ಮಾಡಿದರೂ ಎಷ್ಟು ಚಾತುರ್ಯವುಳ್ಳವನಾದರೂ ಎಂಥ ತೀಕ್ಷ್ಣ ಶಸ್ತ್ರಾಸ್ತ್ರಗಳಿದ್ದರೂ ನಿಷ್ಪ್ರಯೋಜನವಾಗುವದು. ಅದು ಕಾರಣ "ಧೈರ್ಯಂ ಸರ್ವತ್ರ ಸಾಧನಂ" ಎಂದ ಹಾಗೆ, ಯಾವ ಕಾರ್ಯಕ್ಕಾದರೂ ಧೈರ್ಯವೇ ಬೇಕು.

ಧೈರ್ಯವೆಂದರೂ ದೃಢಭಕ್ತಿ ಎಂದರೂ ಒಂದೇ. ಆ ಧೈರ್ಯವು ನೆಲೆಗೊಳ್ಳ ಬೇಕಾದರೆ ಶ್ರವಣವೇ ಮುಖ್ಯವಾಗಿರ್ಪುದು ಯುದ್ಧದಲ್ಲಿ ಪರಾಕ್ರಮದಿಂದ ಕಾದಿದ ಮಹಾವೀರರ ಕಥೆಗಳನ್ನು ಕೇಳಿದರೆ ಧೈರ್ಯ ಬರುವದು ಧೈರ್ಯದಿಂದ ವೈರಿಗಳು ಮೆಚ್ಚುವಂತೆ ಕಾದುತ್ತಿರುವಲ್ಲಿ ಜಯವಾದರೆ ಉತ್ತಮವು ಅಥವಾ ತಾನು ನಿಸ್ಪೃಹನಾಗಿ ದೇಹದ ಹಂಗಿಲ್ಲದೆ, ಘಾಯವಾದರೂ ಶಸ್ತ್ರಾಸ್ತ್ರಗಳು ಹೋದರೂ ಧೈರ್ಯಗುಂದದೆ ಕಾದುವಲ್ಲಿ ತಲೆ ಹೋದರೂ ಅಟ್ಟೆ ಎದ್ದು ಕಾದಿದರೆ ಸರ್ವರೂ ಮೆಚ್ಚುತ್ತಿಹರು ರಣ ಭೂಮಿಯಲ್ಲಿ ಕಾದಿ ಮಡಿದ ಮಹಾವೀರರಿಗೆ ಸ್ವರ್ಗದಲ್ಲಿ ಇಂದ್ರನಿಗೆ ಸಮಾನವಾದ ಭೋಗವೂ ಸಂಪದವೂ ಪ್ರಾಪ್ತಿಸುವ ವೆಂಬುದನ್ನು ಕೇಳಿ ತಿಳಿದು ದೃಢವಾದರೆ, ಧೈರ್ಯವು ತನ್ನಿಂದ ತಾನೇ ಪ್ರಾಪ್ತಿಸಿ, ಕಾದುವದಕ್ಕೆ ಅಭಿಮನ್ಯು ಅರ್ಜುನ ಸುಧನ್ವರಂತೆ ಮನವು ಉಕ್ಕುತ್ತದ. ಇದಲ್ಲದೆ ಇದಿರಾದ ವೀರರನ್ನು ಕೊಂದು ಜಯವನ್ನು ಪಡೆದು ಈ ಲೋಕದಲ್ಲಿ ರಾಜರಿಂದ ಮಾನಹೊಂದಿ ಸಾಮ್ರಾಜ್ಯ ಸಂಪದವನ್ನು ಪಡೆಯುವಸು

ಈ ದೃಷ್ಟಾಂತದಂತೆ ಈಗಿನ ಕಾಲದ ಉಪಾಧಿ ಭಕ್ತರು ಬಹಿರಂಗ ದಲ್ಲಿ ಭಕ್ತಿ ವೇಷವಾದ ಭಸ್ಮ ರುದ್ರಾಕ್ಷಿ ಶಿವಲಿಂಗ ಮೊದಲಾದವುಗಳನ್ನು ಧರಿಸಿ ತನುಮನಧನವು ಗುರುಲಿಂಗ ಜಂಗಮದ್ದೆಂದು ನುಡಿದು ಅದರಂತೆ ನಿರ್ವಂಚಕತ್ವದಿಂದ ಕೊಟ್ಟು ಭಕ್ತಿಯನ್ನು ಮಾಡುವದಕ್ಕೆ ಹಿಂಜರಿದು ತಪ್ಪಿಸಿ ಕೊಂಡರೆ, ನಿರ್ವಂಚಕ ಸದ್ಭಕ್ತರು ಹಾಸ್ಯವನ್ನು ಮಾಡುವಲ್ಲಿ, ಮುಖಭಂಗಿತ ರಾಗುವರು ಮತ್ತು ಶಿವನು ಈ ವಂಚಕರನ್ನು ಕಾಲಕಾಮರ ವಶಕ್ಕೆ ಕೊಟ್ಟು, ಭವಭವಾಂತರದಲ್ಲಿ ಅನಂತ ರೀತಿಯಿಂದ ರೋಗ ದಾರಿದ್ರ್ಯಾದಿ ಘನದುಃಖಂಗಳನ್ನುಣಿಸುವನು

ಲೌಕಿಕರೆಲ್ಲರು ತಮ್ಮ ತಮ್ಮ ಸತಿ ಸುತಾದಿಗಳಿಗೆ ಮಾತ್ರ ನಿರ್ವಂಚಕತ್ವ ದಿಂದ ಕೊಡುತ್ತಿಹರು ಹ್ಯಾಗಂದರೆ, ತಮ್ಮಲ್ಲಿ ವಂಚನೆ ಅಣುಮಾತ್ರವಿಲ್ಲ ದಂತಾಗಿ ಧನಕನಕ ವಸ್ತ್ರ ಭೂಷಣ ಗೃಹ ಕ್ಷೇತ್ರ ಸ್ವಾಸ್ತಿ ವೃತ್ತಿಗಳಲ್ಲಿ ಒಂ ದನ್ನಾದರೂ ವಂಚಿಸಿಕೊಳ್ಳದೆ, ಸಕಲವೆಲ್ಲ ತಮ್ಮ ಸತಿಗೆ ಇರಲಿ, ಸುತರಿಗೆ ಇರಲಿ, ಎಂದು ಆಯುಷ್ಯವಿರುವ ವರೆಗೂ ಯತ್ನ ಮಾಡಿ ಕೊಡುತ್ತಿರುವರು. ಮತ್ತು ತಮ್ಮವರಿಂದು ತಮ್ಮ ಸತಿ ಸುತರ ಮೇಲೆ ಭಕ್ತಿ ವಿಶೇಷವಾಗಿರುವದು. ಹೇಗೆಂದರೆ ತಾವು ಭೋಜನ ಮಾಡುವ ಪದಾರ್ಥವು ಯಥೇಷ್ಟವಾಗಿದ್ದರೆ, ತಾವೂ ಅವರೂ ಕೂಡ ಚನ್ನಾಗಿ ಭೋಜನ ಮಾಡುವರು. ಒಂದು ವರ್ಷಕ್ಕೆ ಆ ಪದಾರ್ಥವು ಯಥೇಷ್ಟವಾಗಿರದೆ ಸ್ವಲ್ಪ ಇದ್ದರೆ, ತಾವು ಉಂಬುವದನ್ನು ಬಿಟ್ಟಾದರೂ ತಮ್ಮ ಮಕ್ಕಳಿಗೆ ಬೇಕು, ಹೆಂಡತಿಗೆ ಬೇಕೆಂದು ಕೊಡುತ್ತಿಹರು.

ಆಕಸ್ಮಿಕವಾಗಿ ಕೆಲವು ಉತ್ತಮತರದ ಹಣ್ಣು ಫಲಗಳು ದೊರೆತರೆ, ಅವುಗಳನ್ನು ತಾವು ಭಕ್ಷಿಸದೆ ತಮ್ಮ ಸುತರಿಗಾಗಲಿ ಸತಿಯಳಿಗಾಗಲಿ ತಂದು ಕೊಡುತ್ತಿಹರು. ಇದಲ್ಲದೆ, ಚಳಿಗಾಲಗಳಲ್ಲಿ ತಾವು ಚಳಿಯಿಂದ ಕಷ್ಟ ಪಟ್ಟಾಗ್ಯಾದರೂ ತಮ್ಮ ಶರೀರದ ಸುಖವನ್ನು ನೋಡದೆ ತಮಗೆ ಹೊದ್ದುಕೊಳ್ಳುವದಕ್ಕೆ ಇದ್ದ ವಸ್ತ್ರಗಳನ್ನು ಸತಿ ಸುತರಿಗೆ ಹೊದ್ದಿಸಿ ತಾವು ಚಳಿಯಲ್ಲಿ ನಡುಗುತ್ತ ಮಲಗುವರು

ಸತಿ ಸುತರೊಡನೆ ಪ್ರಯಾಣಸ್ಥರಾಗಿ ಮಾರ್ಗ ಕ್ರಮಣ ಮಾಡುವ ಸಮಯದಲ್ಲಿ ತಾವು ನಡೆಯಲಾರದವರಾದರೂ ತಾವು ಕುಳ್ಳಿರುವ ವಾಹನವನ್ನು ಅವರಿಗೆ ಕೊಟ್ಟು ಕಾಲ ನಡೆಯಿಂದ ನಡೆಯುವರು ಇದಲ್ಲದೆ ಎಲ್ಲರೂ ನಡೆಯುವದಾದರೆ, ಬೇಸಿಗೆಯ ಕಾಲದಲ್ಲಿ ಕಾಲು ಸುಡುತ್ತಿದ್ದರೆ, ತಮ್ಮ ಕಾಲಲ್ಲಿರುವ ಪಾದರಕ್ಷೆಗಳನ್ನು ಅವರಿಗೆ ಕೊಟ್ಟು ತಾವು ಕಾಲುಗಳನ್ನು ಸುಡಿಸಿಕೊಳ್ಳುತ್ತ ನಡೆಯುವರು

ಈ ಪ್ರಕಾರವಾಗಿ ಲೌಕಿಕರಾವತ್ತರೂ ಮಾಯಾ ಮೋಹದಿಂದ ತಮ್ಮ ತಮ್ಮ ಜನ್ಮವಿರುವ ವರೆಗೆ ಸರ್ವ ಕಾರ್ಯಗಳಲ್ಲಿ ಯತ್ನಿಸುವದೇಕೆಂದರೆ, ಸತಿಯು ಮೆಚ್ಚಿ ಪ್ರಸನ್ನಳಾಗಲಿ, ಸುತರು ಮೆಚ್ಚಿ ಪ್ರಸನ್ನರಾಗಲಿ, ಎಂದು ಹಲವು ರೀತಿಯಿಂದ ಕಷ್ಟ ಪಟ್ಟು ಅವರವರ ಮನಬಯಕೆಗಳನ್ನು ತಿಳಿದು ಬೇಡುವದರಕಿಂತ ಮೊದಲೇ ಯತ್ನಿಸಿ ತಂದು ಕೊಡುತ್ತಿರಲು ಅವರು ಸಂತೋಷಿಸಿ ಪ್ರೀತಿಯಿಂದ ಮಾತುಗಳನ್ನಾಡಿದರ, ಈ ಗೃಹಸ್ಥರಿಗೆ ಅತ್ಯಾನಂದವಾಗಿ ಪರಮ ಸಂತೋಷದಲ್ಲಿರುವರು ಒಂದೊಂದು ಸಮಯದಲ್ಲಿ ಆ ಸತಿ ಸುತರು ಬೇಡಿದ ವಸ್ತುಗಳನ್ನು ಯತ್ನಿಸಿ ತಂದು ಕೊಡುವರು ತನ್ನಿಂದಾಗದ ಕಾಲದಲ್ಲಿ ಅವರು ಮುನಿದು ಕೋಪಿಸಿ ಕ್ರೂರ ಮುದ್ರೆಯಿಂದ ನೋಡಿದರೆ, ಇವರ ಸಂತಾಪಕ್ಕೆ ಕಡೆ ಇಲ್ಲವಾಗಿ ಮನದಲ್ಲಿ ಆಲೋಚಿಸುವದೇನಂದರೆ, ಈ ಸತಿಯು ಹ್ಯಾಗಾದರೆ ಪ್ರಸನ್ನಳಾದಾಳು, ಈ ಸುತರು ಹ್ಯಾಗಾದರೆ ಮೆಚ್ಚಿ ಮಮಕರಿಸುವರು, ಮತ್ತು ಇವರು ಬೇಡಿದ ಪದಾರ್ಥವು ಏನು ಮಾಡಿದರ ಪ್ರಾಪ್ತಿಸೀತು, ನಾವು ಎಂದು ಕೊಟ್ಟು ಇವರನ್ನು ಸಂತೋಷ ಪಡಿಸೇವು, ಎಂದು ಹಗಲು ಇರುಳು ನಿದ್ರೆ ಇಲ್ಲದೆ ಚಿಂತೆ ಎಂಬ ಸಂತಾಪದಲ್ಲಿ ಕುದಿಯುತ್ತ ಅನಂತ ರೀತಿಯಿಂದ ಕಷ್ಟಪಟ್ಟು ಶರೀರವನ್ನು ದಂಡಿಸುವರು. ಮತ್ತು ಯತ್ನದಿಂದ ಪ್ರಾಪ್ತಿಯಾಗದಿದ್ದರೆ ಸಾಲವನ್ನು ಮಾಡಿ ತಂದು ಕೊಡುವರು.

ಕೆಲವರಿಗೆ ಸಾಲ ದೊರೆಯದಿದ್ದರೆ ಕಳವು ಮಾಡುವರು. ಅದರಿಂದಲೂ ಸಿಕ್ಕದಾದರೆ ಅನ್ಯರಿಗೆ ಘಾತವನ್ನು ಮಾಡಿಯಾದರೂ ಆ ಪದಾರ್ಥವನ್ನು

ತಂದು ತಮ್ಮ ಸತಿಯುಳ ಕೈಯ್ಯಲ್ಲಿ ಕೊಟ್ಟ ಮಾತ್ರಕ್ಕೆ ಅವಳು ಸಂತೋಷಿಸಿ ಕ್ಷಣಮಾತ್ರಕ್ಕೆ ಪ್ರೀತಿಯಿಂದ ಮಾತುಗಳನ್ನಾಡಿದರೆ ಅದಕ್ಕೆ ಎಷ್ಟೋ ಸಂತೋಷ ಪಡುವರು

ಇಂಥ ಅಜ್ಞಾನಿ ಸಂಸಾರಿಗಳಾದವರು ಮಾಯಾ ಮೋಹದಿಂದ ಮಾಡುವ ದುಷ್ಕೃತ್ಯಗಳು ಪ್ರಕಟವಾದಾಗಲೇ ರಾಜರುಗಳು ಕಟ್ಟಿಕೊಂಡು ಒಯ್ದು ಒಡಿದು ಭಂಗಿಸಿ ಶಿರಚ್ಛೇದನವನ್ನು ಮಾಡಿಸುತ್ತಿರುವ ಕಾಲದಲ್ಲಿ ಈ ಸಂಸಾರಿಗಳು ತಮ್ಮ ಮನದಲ್ಲಿ ಆಲೋಚಿಸುವದೇನಂದರೆ ನಾನಾಬ್ಬನು ಸತ್ತರೂ ಚಿಂತೆ ಇಲ್ಲ, ನನ್ನ ಸತಿ ಸುತರು ಪರಿಣಾಮದಿಂದಿರುವ ಹಾಗ ದ್ರವ್ಯವನ್ನು ತಂದು ಇಟ್ಟಿದ್ದೇನೆ, ಅವರು ಉಂಡುಟ್ಟು ಪರಿಣಾಮದಿಂದಿದ್ದರೆ ಸಾಕು, ಎಂದು ತಮ್ಮ ಮರಣಕ್ಕೂ ಅಪಮಾನಕ್ಕೂ ಅಪಕೀರ್ತಿಗೂ ಹೇಸದ ಇರುವರು.

ಈ ರೀತಿಯಲ್ಲಿ ಸಂಸಾರಿಗಳೆಂಬವರೆಲ್ಲರಿಗೂ ಸ್ವಭಾವವಾಗಿರುವದು ಅದರಲ್ಲ ಬುದ್ಧಿವಂತರಾದವರು ವಿವೇಕಿಗಳಾಗಿ ಸತ್ಯ ಸದಾಚಾರಿಗಳಾಗಿ ಮಾನಿಗಳೆನಿಸಿ ಸಂಸಾರ ಮಾಡುವವರು ಅಕಲ್ಪಿತರಾಗಿದ್ದಾರ

ಈ ಸಂಸಾರಕ್ಕಿಂತಲೂ ಪರಸ್ತ್ರೀಯರಾದ ದಾಶಿ ವೇಶೆಯರ ಸಂಗದಲ್ಲಿದ್ದವರು ಈ ಸಂಸಾರಿಗಳಿಗಿಂತಲೂ ಕೋಟಿ ಗುಣ ವಿಶೇಷವಾದ ಅಜ್ಞಾನಿಗಳಾಗಿ ಅಭಿಮಾನದ ಹಂಗಿಲ್ಲದೆ ಅಪಕೀರ್ತಿಗೆ ಅಂಜದೆ ಶರೀರವನ್ನು ತೃಣಕ್ಕೆ ಸಮಾನಮಾಡಿ ಸಮಸ್ತ ಪ್ರಕಾರದ ದುಷ್ಕೃತ್ಯಂಗಳಿಂದ ದ್ರವ್ಯವನ್ನು ತಂದು ಕೊಟ್ಟು ಆ ದುಷ್ಟ ಸ್ತ್ರೀಯರ ಪ್ರೀತಿಯನ್ನು ಪಡೆದುಕೊಳ್ಳುವ ಯತ್ನ ಮಾಡುತ್ತಾರೆ ಈ ವ್ಯಸನವುಳ್ಳವರು ದ್ರವ್ಯಹೀನರಾದರೆ ಅವರು ಮಾಡುವ ದುಷ್ಕರ್ಮಕ್ಕೆ ಗಣನೆ ಇಲ್ಲವು ಇವರಿಗೆ ಭಯವೇ ಇಲ್ಲವು ಆ ಸ್ತ್ರೀಯರು ಮಾಡುವ ಕಾಪಟ್ಯದ ಮೋಹದಲ್ಲಿಯೇ ಲಕ್ಷವಿರುವದಲ್ಲದೆ ತಮ್ಮ ಅರ್ಥ ಪ್ರಾಣಾಭಿಮಾನದಲ್ಲಿ ಲಕ್ಷವಿಲ್ಲವು ಏನಾದರೂ ಹೋದರೆ ಹೋಗಲಿ, ಆ ಸತಿಯರು ಪ್ರಸನ್ನರಾದರ ಸಾಕೆಂದು ಯತ್ನಿಸಿ ಅರ್ಥ ಪ್ರಾಣಾಭಿಮಾನವನ್ನು ಕಳೆದುಕೊಂಡು ಕೆಟ್ಟು ಹೋಗುತ್ತಾರೆ.

ಇದರಂತೆ ಭವ ಭವಾಂತರದಲ್ಲಿ ತಮ್ಮ ಅರ್ಥ ಪ್ರಾಣಾಭಿಮಾನವನು ಶಿವನ ನಿಮಿತ್ಯವಾಗಿ ಸಮರ್ಪಿಸಿದರೆ, ಅದು ವೀರಭಕ್ತಿ ಎನಿಸಿ ಇಹಲೋಕ ಪರ ಲೋಕದಲ್ಲ ಎಷ್ಟು ಸುಖವನ್ನು ಕೊಟ್ಟಿರುವದು ? ಇದನ್ನರಿಯುದೆ "ಭ್ರಷ್ಟಸ್ಯ ಕಾ ವಾ ಗತಿಃ" ಎಂದ ಹಾಗೆ ಕೆಟ್ಟು ಭ್ರಷ್ಟರಾಗುವರು.

ಇದಲ್ಲದೆ ಇಂಥ ದುಷ್ಕರ್ಮಿಗಳ ಪ್ರಾಣಾಂತ್ಯ ಕಾಲದಲ್ಲಿ ಯಮನು ಸಂಸಾರಿಗಳೂ ಜಾರ ಕಾರ್ಮಿಗಳೂ ಆದ ಇವರು ಜನ್ಮದಾರಭ್ಯ ಮಾಡಿದ

ದುರ್ದೋಷಗಳಾವತ್ತನ್ನು ನಿದರ್ಶನಕ್ಕೆ ತಂದುಕೊಂಡಾಗಲೇ ಮಹಾ ಕೋಪ ಭರಿತನಾಗಿ ಈ ಪಾಪಿಗಳನ್ನು ಬಹುತರದ ಶಿಕ್ಷೆಗಳಿಂದ ದಂಡಿಸಬೇಕಂದು ಕ್ರೂರರಾದ ತನ್ನ ಭಟರನ್ನು ಕಳುಹಲು ಕಾಲಭಟರು ಇವರ ಶರೀರವನ್ನು ಸ್ಥೂಲಘಟದೊಳಗಿಂದ ಕಡೆಗೆ ತೆಗೆದು ಕಾಲಪಾಶದಿಂದ ಕಟ್ಟಿ ಯಮಲೋಕಕ್ಕೆ ಒಯ್ದು ಯಮನ ಸನ್ನಿಧಿಯಲ್ಲಿ ನಿಲ್ಲಿಸಲು ಇವರು ಹುಟ್ಟಿದಾರಭ್ಯ ಸತಿ ಸುತರಿಗೋಸ್ಕರ ಮತ್ತು ಜಾರ ಸ್ತ್ರೀಯರಿಗೋಸ್ಕರ ಯತ್ನ ಮಾಡಿದ ಸರ್ವ ದುಷ್ಕೃತ್ಯಂಗಳನೆಲ್ಲ ಚಿತ್ರಗುಪ್ತರ ಮುಖದಿಂದ ಕೇಳಿ ಮಹಾ ಕೋಪದಿಂದ ಹಂಗಿಸಿ ಹಂಗಿಸಿ ಅನಂತ ಪ್ರಕಾರದ ಬಂಧನಗಳಿಂದ ಇವರನ್ನು ಶಿಕ್ಷಿಸಿ ಕಡೆಯಲ್ಲಿ ಶಿವಾಜ್ಞೆಯ ನಿಯಮದಂತೆ ಭವಕ್ಕೆ ನೂಕಿ ಬಿಡುತ್ತಿಹನು. ಆದು ಕಾರಣ ನೀತಿಗಾರನು ಹೇಳಿದ್ದೇನಂದರೆ, ಸಾಕ್ಷಿ "ಹರಿಣೀ ಪಾದ ಮಾತ್ರೇಣ। ಬಂಧನಂ ಚ ಜಗತ್ರಯಂ॥ ಸುಖಂ ಬಿಂದು ಮಾತ್ರೇಣ। ದುಃಖಂ ಪರ್ವತಮೇವ ಚ॥ ಎಂದಲ್ಲಿ ಎರಳೆಯ ಕೊಳಗದಾಕೃತಿಯುಳ್ಳ ಯೋನಿ ಮೋಹದಲ್ಲಿ ವಿಷಯಾ ಸಕ್ತರಾಗಿ ಮೂರು ಲೋಕಗಳಲ್ಲಿರುವ ಬ್ರಹ್ಮಾದಿ ದೇವತೆಗಳಾದಿ ಯಾದ ಸಮಸ್ತ ಸುರನರೋರಗರು ಸಂಸಾರದಲ್ಲಿ ಮನ ಮಗ್ನರಾಗಿ ಸ್ತ್ರೀಮೋಹಿತ ರಾಗಿರುವರು ಅವರೆಲ್ಲರಿಗೂ ಈ ಸಂಸಾರದಲ್ಲಿ ಸುಖವು ಬಿಂದು ಮಾತ್ರಮಯ ವಾಗಿ ದುಃಖವು ಪರ್ವತಕ್ಕೆ ಸರಿಯಾಗಿಪ್ಪುದು

ಸ್ತ್ರೀಯರ ಚಿತ್ತವು ಚಂಚಲವಾದುದರಿಂದ ಅವರ ಪ್ರೀತಿಯು ಸ್ಥಿರ ವಲ್ಲವಾಗಿ ನಿಮಿಷ ಮಾತ್ರದ ಸವಿ ನುಡಿಯ ಸರಸ ವಿಲಾಸಕ್ಕೆ ಮೆಚ್ಚಿ ಜನ್ಮ ಜನ್ಮಾಂತರದಲ್ಲಿ ಭೋಗಿಸಿದರೂ ತೀರದಂಥ ಘನ ದುಃಖಕ್ಕೆ ಪಾತ್ರರಾಗು ತ್ತಾರ ಆದು ಕಾರಣ ತ್ರೈಲೋಕದಲ್ಲಿರುವ ಯಾವತ್ತು ಸಂಸಾರಿಗಳು ಮಾಡುವ ಸಂಸಾರವು ಇದರಂತೆ ಇರುವದು.

ಆದರೆ ಈ ಸಂಸಾರಿಗಳು ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯದಿಂದ ದ್ರವ್ಯವಿರುವ ವರೆಗೆ ಯಾವ ದುರ್ಗುಣಗಳು ಪ್ರಕಟವಾಗುವದಿಲ್ಲ ಕದಾಚಿತ್ ಪುಣ್ಯ ತೀರಿ ದರಿದ್ರ ಸ್ಥಿತಿಗೆ ಬಂದಲ್ಲಿ ಎಂಥ ನೀತಿವಂತನಾದರೂ ಸತಿ ಸುತರ ಮೇಲೆ ಅತಿ ಮೋಹವುಳ್ಳವನಾದರೆ, ಅವರ ವಿಷಯದಲ್ಲಿ ಅಧರ್ಮ ದಿಂದ ವರ್ತಿಸಿ ದುರ್ದೋಷಿಯಾಗಿ ದುಷ್ಕರ್ಮಂಗಳ ಮಾಡಿ ಪಾಪಿಯಾಗಿ ನರಕ ದುಃಖವನನುಭೋಗಿಸುವದು ಸತ್ಯವು ಸತ್ಯವು ಸಾಕ್ಷಿ ಪದ "ಮನುಜ ನೀನೆಡೆವಿಡದನುದಿನ ವೆಳಸುವ ವನಿತೆಯೊಳೆಣಿಸಲೊಂದಿನಿತು ಲೇಸಿಹುದೇ ಮತ್ತು "ವನಿತೆಯರೊಲವಾವ ನೆಲೆ ಎಂದು ಮೋಹವನು ಮಾಡುವರು ಮುಕ್ತಿವಡೆಯದೇ ನರರು" ಎಂದು, "ಸುತನ ಸೊಗಸು ಮಿಗಿಲೆನ್ನದೆ ಚಿಂ ತೆಗಳ। ಮತಿವಂತರರಿದು ಮೋಹವನುಳಿದಿಹುದು॥" ಎಂದು ಮತ್ತು

"ಯಾಕೆ ವಿರತಿಯುನುಳಿದು ಹೀನ ವಿಷಯುವನೊಲಿವೆ। ಕಾಕ ಮಾನಸವೆ ನಿನಗೇನಿದಿರೋಟಂಟು॥" ಎಂದು ಮತ್ತು "ಸೋಲಪಾತನೆ ವಿರತನು ಮನದೊಳಗೆ ಬಾಲೆಯುರ ಸಿಂಗರವನು ಕಂಡು" ಎಂದು ನಿಜಗುಣ ಶಿವ ಯೋಗಿಗಳು ಪ್ರಸಿದ್ಧವಾಗಿ ಕೈವಲ್ಯವೆಂಬ ಗ್ರಂಥದಲ್ಲಿ ಪದರೂಪವಾಗಿ ವಿಸ್ತಾರ ವಾಗಿ ಹೇಳಿದ್ದಾರೆ

ಈ ರೀತಿಯಿಂದ ಬೋಧಿಸಿ ಸಂಸಾರವು ದುಃಖರೂಪವೆಂದು ಮೋಕ್ಷ ಸುಖವೇ ಸುಖವೆಂದು ವೇದಾಗಮ ಪುರಾಣ ಶಾಸ್ತ್ರ ಶೃತಿ ಸ್ಮೃತಿಗಳೆಲ್ಲವು ಹೇಳಿ ಹೇಳಿ ಬೇಸತ್ತರೂ ಲೌಕಿಕರು ಸಂಸಾರ ವ್ಯಾಮೋಹವನ್ನು ಬಿಡಲಾ ರದೆ ಅದರಲ್ಲಿಯೇ ಆಸಕ್ತರಾಗಿರುವರು ಮತ್ತು "ಆವ ಕಾಲದೊಳು ಬಳಿಕಾವ ದೇಶದೊಳು ಬೇರಾವ ವಸ್ತುವಿನೊಳೆಡೆವಿಡದತಿ ಮಮತೆ ಆವ ಪರಿಯಲಿ ತನ್ನ ಮೇಲಿಪ್ಪುದಂತೆ ಗುರುದೇವತೆಯೊಳನುರಾಗವಿಹುದ ನಿಜಭಕ್ತಿ" ಎಂ ದುಂಟಾಗಿ ಸಂಸಾರದ ಸರ್ವ ಮೊಹವನ್ನೇ ಗುರುಕಾರ್ಯ ದೇವಕಾರ್ಯ ಶಿವಕಾರ್ಯಂಗಳಲ್ಲಿಟ್ಟು ವರ್ತಿಸುವದೇ ಸದಾಚಾರವು ಸದಾಚಾರದಿಂದೆ ಕಾಯಶುದ್ಧವಾಗುವದು "ಕಾಯಶುದ್ಧೀ ಸದಾಚಾರಂ" ಎಂಬ ಪ್ರಮಾಣ ಉಂಟು

ಲೌಕಿಕರಾದ ಲೋಕಾಚಾರದ ಗೃಹಸ್ಥರಾಗಲಿ ಮತ್ತು ಸದಾಚಾರಿಗ ಳಾದ ಸದ್ಭಕ್ತರಾಗಲಿ, ಸಂಸಾರದಲ್ಲಿದ್ದರೂ ಇರಲಿ, ಸತಿಸುತರ ಮೇಲಣ ಮೋಹ ದಿಂದ ಆ ಸತಿಸುತರೇ ತನ್ನವರೆಂದು ನಂಬಿದ ಹಾಗೆ ಆ ಸತಿಸುತರು ಸಹಿತ ತಾವೆಲ್ಲರೂ ಏಕ ಮನಸ್ಸಿನಿಂದ ಗುರುಲಿಂಗಜಂಗಮವೇ ತಮ್ಮವರು, ಅವರೇ ತಮ್ಮ ತಮ್ಮ ಕುಟುಂಬದವರೆಲ್ಲರಿಗೂ ಸಕಲಸುಖಭೋಗ ಮೋಕ್ಷಪ್ರದರಾದ ಕರ್ತರು ಎಂದು ನಿಶ್ಚಯವಾಗಿ ತಿಳಿದು ತ್ರಿಕರಣಪೂರ್ವಕವಾಗಿ ಮಾಡುವ ಸಂಸಾರವೆಲ್ಲ ಧೃಡಭಕ್ತಿಯಿಂದ ಗುರುಲಿಂಗಜಂಗಮದ ಭಕ್ತಿನಿಮಿತ್ತವಾಗಿ ಗುರು ಮೆಚ್ಚಲಿ, ಲಿಂಗ ಮೆಚ್ಚಲಿ, ಜಂಗಮ ಮೆಚ್ಚಿ ಮಮಕರಿಸಲಿ ಎಂದು ಸದಾ ಕಾಲದಲ್ಲಿ ಅವರನ್ನು ಮೆಚ್ಚಿಸಬೇಕೆಂಬ ಪ್ರಯತ್ನದಿಂದ ಸಂಸಾರದ ಸಕಲ ಕೃತ್ಯಂ ಗಳನ್ನು ಸುನೀತಿ ಸದ್ಧರ್ಮದಿಂದ ಭಕ್ತಿಕಾಯಕವಾಗಿ ಮಾಡಿ, ಇದು ಗುರು ವಿಗೆ ಬೇಕು, ಇದು ಲಿಂಗಕ್ಕ ಬೇಕು, ಇದು ಜಂಗಮಕ್ಕೆ ಬೇಕೆಂದು ಯುಕ್ತಿಸಿ ತಂದು ಕೊಟ್ಟು ಅವರ ಪ್ರಸನ್ನತ್ವವನ್ನು ಪಡೆದರೆ ಇಹಲೋಕದಲ್ಲಿ ಸತ್ಕೀರ್ತಿಯು ಪಸರಿಸಿ ದೇಹಾಂತ್ಯದಲ್ಲಿ ಸುಖಾಂಬುಸಿಧಿಯಾದ ಪರಶಿವ ನಿಜಸಂಪದವು ಪ್ರಾಪ್ತಿಸಿ ಕೇಡಿಲ್ಲದ ನಿಜ ಮೋಕ್ಷವು ಸಂಭವಿಸುತ್ತಿಹುದು

ಶಿವಭಕ್ತರುಗಳು ಶಿವಭಕ್ತಿ ತಾತ್ಪರ್ಯವನರಿದು ಆಚರಿಸುವದಕ್ಕೆ ಸದಾ ಚಾರವೆನಿಪ ಭಕ್ತಿಸತ್ಪಥ ಮಾರ್ಗದಾಚರಣೆಯಲ್ಲಿ ಆಚರಿಸಿ ತೋರಿದ ಬಸವಾದಿ

ಪುರಾತನರುಗಳ ಮತ್ತು ನೂತನ ಪುರಾತನರುಗಳ ಕಥಾ ಚಾರಿತ್ರಂಗಳ ಕೇಳಿ ತಿಳಿದು ಅದರಂತೆ ಆಚರಿಸುವದಕ್ಕೆ ಭಕ್ತರೆಲ್ಲರೂ ಬಸವೇಶ್ವರ ಭೈರವೇಶ್ವರ ಪುರಾಣಗಳ ಕಥಾಸಾರವನ್ನು ನೋಡತಕ್ಕದ್ದು ಮತ್ತು ವೀರಶೈವಾಮೃತ ಮೊದಲಾದ ಶಿವ ಪುರಾಣಗಳನ್ನು ಕೇಳಿ ತಿಳಿಯತಕ್ಕದ್ದು

ಈ ಪುರಾತನರು ಬಹಿರಂಗದ ಕಾಯಕವನ್ನೇ ಜ್ಞಾನ ಮುಖದಿಂದ ಸಂಬಂಧವ ಮಾಡಿಕೊಂಡು ಆಚರಿಸಿದ ಚಾರಿತ್ರ್ಯಗಳಲ್ಲಿ ಒಕ್ಕಲಿಗರ ಮುದ್ದಣ್ಣಗಳ ವಚನಃ— ಭಕ್ತಿ ಎಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲೆಯ ಪಿಡಿದು ಅಂತಃಕರಣ ಚತುಷ್ಟಯವೆಂಬ ವಶುವಂ ಕಟ್ಟಿ ಓಂಕಾರ ನಾದವೆಂಬ ನೆಳೆಗೋಲ ಪಿಡಿದು ಉತ್ತರ ಕ್ರಿಯಾ ಎಂಬ ಸಾಲನತ್ತಿ ದುಷ್ಕರ್ಮವೆಂಬ ಕಂಟಕದ ಗುಲ್ಮವಂ ಕಡಿದು ಅರಿವೆಂಬ ರವಿಯ ಕಿರಣದಿಂದೂಣಗಿಸಿ ಅವಂ ಕೂಡಲೊಟ್ಟಿ ಜ್ಞಾನಾಗ್ನಿ ಎಂಬಗ್ನಿಯಿಂದ ಸುಟ್ಟುರುಹಿ, ಆ ಹೊಲನಂ ಹಸನ ಮಾಡಿ ಬಿತ್ತುವ ಪರಿ ಇನ್ನಾವುದಯ್ಯಾ ಎಂದೊಡೆ, ನಾದ ಬಿಂದುಕಳೆಗಳೆಂಬ ಮೆಳೆಗಾಲದ ಹದ ಬೆದೆಯನರಿದು ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳ ನಟ್ಟು ಈಡಾ ಪಿಂಗಳ ಸುಷುಮ್ನ ನಾಳವೆಂಬ ಕೋವಿಗಳ ಜೋಡಿಸಿ ಮೇಲೆ ತ್ರಿಕೂಟ ಸ್ಥಾನವೆಂಬ ಬಟ್ಟಲವಂ ಬಲಿದು ಕುಂಡಲೀಸರ್ಪನೆಂಬ ಹಗ್ಗವಂ ನೇದಿಗಟ್ಟಿ ಹಂಸನೆಂಬ ಎತ್ತಂ ಹೂಡಿ ಪ್ರಣವವೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ ಸರ್ವಶಾಂತ ನಿರ್ಮಲವೆಂಬ ಮೋಘವ ಸುರಿಯಲ್ಕೆ ನಿಷ್ಕಲ ಬ್ರಹ್ಮವೆಂಬ ಸಸಿ ಹುಟ್ಟಿತ್ತು. ಆ ಸಸಿಯು ಮುಟ್ಟುವ ಸರ್ಪವರ್ಣದ ಸದೆಯುಂ ಕಳೆದು ಅಷ್ಟಾವರಣದ ಅಲಬಂ ಕಿತ್ತು ದಶವಾಯುವೆಂಬ ಕಸವಂ ತೆಗೆದು ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ ಚತುರ್ವಿಧವೆಂಬ ಮಂಚಿಕೆಯ ಮೆಟ್ಟಿ ಬಾಲಚಂದ್ರನೆಂಬ ಕವಣೆಯ ಪಿಡಿದು ಪ್ರಪಂಚವೆಂಬ ಹಕ್ಕಿಯಂ ನೋವಿ, ಆ ಒತ್ತ ಬಲಿದು ನಿಂದಿರಲು ಕೊಯ್ಯುಂಬುವ ಪರಿ ಇನ್ನಾವುದಯ್ಯಾ ಎಂದರೆ ಇಷ್ಟವೆಂಬ ಕುಡುಗೋಲಿಂಗೆ, ಪ್ರಣವವೆಂಬ ಹಿಡಿಯ ತೊಡಿಸಿ ಭಾವವೆಂಬ ಹಸ್ತದಿಂದ ಪಿಡಿದು, ಜನನದ ಸಿಲವಂ ಕೊಯ್ದು ಮರಣವ ಸಿವುಡಂ ಕಟ್ಟಿ ಆಕಾಶವೆಂಬ ಬಣವೆಯನೊಟ್ಟಿ ಉನ್ಮನಿ ಎಂಬ ತನೆಯ ನರಿದು ಮನೋರಥವೆಂಬ ಬಂಡಿಯಲ್ಲಿ ಹೇರಿ, ಮುಕ್ತಿ ಎಂಬ ಕೋಟಾರಕ್ಕೆ ತಂದು ಅಷ್ಟಾಂಗಯೋಗವೆಂಬ ಜೀವಪನದಿಂದೊಕ್ಕಿ ತಾಪತ್ರಯದ ಮೆಟ್ಟನೇರಿ ಪಾಪದ ಹೊಟ್ಟಂ ತೂರಿ ಪುಣ್ಯದ ಬೀಜವಂ ಕಳದು ಷಡೂರ್ಮಿಗಳೆಂಬ ಬೇಗಾರವಂ ಕಳೆದು ಅಂಗಜಾಲನ ಕಣ್ಣ ಮುಚ್ಚಿ ಚಿತ್ರಗುಪ್ತರೆಂಬ ಕರಣಿಕರ ಸಂಪುಟಕ್ಕೆ ಬರಿಸದೆ ಯಮರಾಜನೆಂಬ ಅರಸಿಗ ಕೊರನಿಕ್ಕದೆ "ಸುಖಂ ಕರೋತಿ ಶಂಕರಃ ಶಂಕರೋತಿ" ಎಂಬ ಸುಯಿಧಾನವನುಂಡು ಸುಖಿಯಾಗಿಪ್ಪ ಒಕ್ಕಲು ಮಗನ ತೋರಿಸಿ ಬದುಕಿಸಯ್ಯಾ

ಕಾಮ ಭೀಮ ಜೀವ ದನದೊಡೆಯ ಪ್ರಭುವೇ ನಿಮ್ಮ ಧರ್ಮ ನಿಮ್ಮ ಧರ್ಮ ” ಈ ರೀತಿಯಲ್ಲಿ ಜ್ಞಾನಕೃಷಿ ಎಂಬ ಅಂತರಂಗದ ಪಾರಮಾರ್ಥ ಕೃಷಿಯನ್ನೇ ಬಹಿರಂಗದ ಬಾಹ್ಯ ಕಾಯಕವಾಗಿ ಲೋಕಾಚಾರದಂತೆ ಭೂಮಿಯ ವ್ಯವಸಾಯವನ್ನು ಶರಣರು ಮಾಡುತ್ತಿದ್ದರು ಇವರು ಮಾಡಿದ ಕಾಯಕವು ಜ್ಞಾನಮಯವಾಗಿದ್ದು ಲೌಕಿಕರ ದೃಷ್ಟಿಗೆ ಲೋಕಾಚಾರದ ಕೃಷಿಯಾಗಿದ್ದುದು. ಜ್ಞಾನಿಗಳು ಪ್ರಸಂಗಿಸಿ ಪರೀಕ್ಷಿಸಿದಲ್ಲಿ ಇವರ ಕಾಯಕವು ಪಾರಮಾರ್ಥ ಕೃಷಿಯೇ ಆಗಿ ತೋರುತ್ತಿದ್ದುದು.

# ೨೧ ನೇ ಪ್ರಕರಣವು.

## ಸುಜ್ಞಾನ ಸಾರವು.

ಈ ಕೃಷಿ ಜ್ಞಾನದಲ್ಲಿ ಸುಜ್ಞಾನವೇನು ಪ್ರಯೋಜನವೆಂದರೆ, ಈ ಪಾರಮಾರ್ಥ ಕೃಷಿಗೆ ಸುಜ್ಞಾನವೇ ಸಾಧನವು "ಜ್ಞಾನೇನ ವಿನಾ ನಾನ್ಯಪಂಥಃ" ಎಂಬ ಶೃತಿಯುಂಟಾಗಿ ಸದ್ಯೋನ್ಮುಕ್ತಿಯಾದ ಜ್ಞಾನ ಕೃಷಿಯಾದ ನಿಜ ಮೋಕ್ಷಕ್ಕೆ ಜ್ಞಾನದ ವಿನಾ ಬೇರೊಂದು ಯೋಗವಿಲ್ಲವು ಅದು ಕಾರಣ ಸದಾಚಾರಿಗಳಿಗೆ ಸುಜ್ಞಾನವೇ ಬೇಕಾಗಿರುವದಾಗಿ ಸುಜ್ಞಾನ ಸಾರವನ್ನೇ ಹೇಳಬೇಕಾಯಿತು

ಜ್ಞಾನೋತ್ಕೃಷ್ಟವರ್ಣನೆಯು.— ಈ ಸುಜ್ಞಾನವೆಂಬುದು ಶಿವನ ಜ್ಞಾನವು. ಶಿವಜ್ಞಾನವೆಂದರೂ ಬ್ರಹ್ಮಜ್ಞಾನವೆಂದರೂ ಆತ್ಮಜ್ಞಾನವೆಂದರೂ ಸ್ವಾತ್ಮಜ್ಞಾನವೆಂದರೂ ತತ್ವಜ್ಞಾನವೆಂದರೂ ಶಿವತತ್ವಜ್ಞಾನವೆಂದರೂ ಮಹಾಜ್ಞಾನವೆಂದರೂ ಏಕಪರ್ಯಾಯಾರ್ಥವು ಆದರ "ಶಿವಜ್ಞಾನಂ ನ ಜಾನಾತಿ ಬ್ರಾಹ್ಮಣಃ ಶ್ವಪಚಾಧಮಃ" ಎಂದುಂಟಾಗಿ ಶಿವಜ್ಞಾನ ಹೀನರಾಗಿ ಉತ್ತಮ ಕುಲದಲ್ಲಿ ಹುಟ್ಟಿದವನಾದರೂ ಅಧಮನೆಂದು ಹೇಳಲ್ಪಟ್ಟಿದೆ. "ಬ್ರಹ್ಮಜ್ಞಾನೀ ಚ ಬ್ರಾಹ್ಮಣಃ" ಎಂಬ ಶೃತಿಯುಂಟಾಗಿ ಪೂರ್ವದ ಋಷಿಗಳೆಲ್ಲರು ಕಮ್ಮಾರ ಮಚ್ಚಿಗಾರ ಧೋರ ಕಬ್ಬಲಿಗ ನಾಯಿಂದ ಮೊದಲಾದ ಕುಲದಲ್ಲಿ ಹುಟ್ಟಿದವರಾದಾಗ್ಯೂ ಬ್ರಹ್ಮಜ್ಞಾನಿಗಳಾದುದರಿಂದ ಎಲ್ಲರೂ ಬ್ರಾಹ್ಮಣರಾಗಿ ವರ್ತಿಸಿದರು. ಈಗಲಾದರೂ ಆ ಋಷಿಗಳ ಗೋತ್ರದವರು ಬ್ರಾಹ್ಮಣರೆಂದು ಹೇಳಿಸಿಕೊಳ್ಳುತ್ತಾರೆ. ಇವರಾದರೂ ಬ್ರಹ್ಮಜ್ಞಾನಿಗಳಾದರ ಆ ವರ್ಣಕ್ಕೆ ಯೋಗ್ಯರಾಗುವರು ಬ್ರಾಹ್ಮಣ ವರ್ಣಕ್ಕೆ ಬ್ರಹ್ಮಜ್ಞಾನವೇ ಮುಖ್ಯವು

"ಜ್ಞಾನಾಗ್ನಿಃ ಸರ್ವ ಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ" ಎಂದು ಭಗವದ್ಗೀತೆಯಲ್ಲಿ ಹೇಳುತ್ತಿಹುದಾಗಿ ಮತ್ತು "ನಂಬೋ ಜ್ಞಾನವನ್ನೇ । ಕರ್ಮವೆಂಬ ಜಾಲದೊಳು ಸಿಲ್ಕಿ । ಹಂಬಲಿಸದಿರು ಮುಕ್ತಿಯ ಬೇರೆ ಬಯಸಿ ಮನುಜ ॥" ಎಂದು ನಿಜಗುಣಾರ್ಯರ ವಾಕ್ಯವಿಹುದಾಗಿ ಈ ಸುಜ್ಞಾನವು ವೇದಾಂತಾದಿ ಉಪನಿಷತ್ವಾಕ್ಯಂಗಳಿಂದಲ್ಲದೆ, ತಲೆ ದೋರದಾಗಿ "ವೇದಾಂತಜನ್ಯ ತೇ ಜ್ಞಾನಂ ವಿದ್ಧೀತಿ ಪರಿಕೀರ್ತ್ಯತೆ" "ವಿದ್ಯಾಯಾಂ ರಮತೇ ಯಸ್ಯ ಪೀರ ಇತಿ ಬ್ರೂಯತೆ" ಎಂದುಂಟಾಗಿ ವೇದಾಂತದಿಂದುದ್ಭವಿಸಲ್ಪಟ್ಟ

ಜ್ಞಾನವೇ ವೀರಶೈವ ಜ್ಞಾನವೆಂದು ಹೇಳುತ್ತಿಹುದಾಗಿ ವೀರಶೈವ ಸದ್ಭಕ್ತರು ವೇದಾಂತಸಾರದ ಉಪನಿಷದ್ವಾಕ್ಯಂಗಳನ್ನು ನೋಡಬೇಕು. ಅಥವಾ ಉಪನಿಷದ್ವಾಕ್ಯಂಗಳ ಸಾರವನ್ನೆಲ್ಲ ತೆಗೆದು ಏಕ ಮುಹೂರ್ತದಲ್ಲಿ ತಿಳಿಯುವದಕ್ಕೆ ಆಬಾಲವೃದ್ಧರಿಗಾಯಾಸವಿಲ್ಲದ ಹಾಗೆ ಕನ್ನಡ ಭಾಷೆಯಿಂದ ದೇಶ ಭಾಷೆಯಂತೆ ಬೆಳುಗನ್ನಡವಾಗಿ ವಿವೇಕಚಿಂತಾಮಣಿ ಅನುಭವಸಾರ ಪರಮಾನುಭವ ಪಾರಮಾರ್ಥಪ್ರಕಾಶ ಗೀತೆ ಕೈವಲ್ಯಪದ್ಧತಿಗಳೆಂಬ ಷಟ್‌ಶಾಸ್ತ್ರಗಳನ್ನು ಮೋಕ್ಷಚಿಂತಾರತ್ನಸ್ವರೂಪವಾಗಿ ಸುಜ್ಞಾನ ದೀಪಿಕೆಯಂತೆ ರಚಿಸಿದ್ದಾರೆ. ಅವುಗಳು ಕನ್ನಡವೆಂದುಪೇಕ್ಷಿಸದೆ ನೋಡಬೇಕು.

ಆದ್ಯರ ವಚನಗಳು ಜ್ಞಾನೋತ್ಕರ್ಷವಾದ ಪ್ರಬಲ ಶಾಸ್ತ್ರಗಳು. ಇವು ಕನ್ನಡವೆಂದು ಅವುಗಳನ್ನು ಉಪೇಕ್ಷಿಸಲಾಗದು. ಯಾಕಂದರೆ ಆದ್ಯರುಗಳಾದ ಬಸವಾದಿ ಪುರಾತನರು ವೇದಾದಿ ಸಕಲ ಶೃತಿ ಸ್ಮೃತಿಗಳೆಲ್ಲ ತಮ್ಮ ಮನೆಯ ಮುಂದಿರುವ ಶುನಕಗಳಿಂದೋದಿಸಿದ ಸಮರ್ಥರಿಗ ಸಂಸ್ಕೃತವೇನಾಶ್ಚರ್ಯವು? ಅವರಿಗೆ ಸಂಸ್ಕೃತದಿಂದ ಹೇಳುವ ಸಾಮರ್ಥ್ಯವು ಇದ್ದಿಲ್ಲವೇ ಹ್ಯಾಗೆ? ಕನ್ನಡದಿಂದ ಹೇಳಿದಾಗ್ಯಾದರೂ ಒಂದೊಂದು ವಚನದಲ್ಲಿ ಕೋಟ ಕೋಟಿ ಶೃತ್ಯಾಗಮ ಗ್ರಂಥಗಳ ಸಾರವು ಗೂಢವಾಗಿದೆ. ಆದರೆ ಬಸವರಾಜ ದೇವರಿಗೆ ಸಂಗಮೇಶ್ವರ ದೇವರು ವೇದಾಂತದೊಳಗ್ಗೋಪ್ಯವಾದ ನಿಜೈಕ್ಯ ಭಕ್ತಿಯನೆ ಪ್ರಕಟಸೆಂದು ಉಪದೇಶವಿತ್ತ ಕಾರಣ ನಾಲ್ಕು ಲಕ್ಷ ಮೂವತ್ತಾರು ಸಾವಿರ ವಚನಗಳಿಂದ ನಿಜೈಕ್ಯ ಭಕ್ತಿಯ ಚಾತುರ್ಯದ ತಾತ್ಪರ್ಯವನ್ನೇ ಲೋಕಹಿತಾರ್ಥವಾಗಿ ಕನ್ನಡದಲ್ಲಿ ಬೆಳುಗನ್ನಡ ತಿಳಿಗನ್ನಡವಾಗಿ ಬೋಧಿಸಿದರು

ಬಸವಾದಿ ಪ್ರಭುದೇವರಂತ್ಯವಾದ ಏಳುನೂರೆಪ್ಪತ್ತು ಪ್ರಮಥ ಗಣಂಗಳು ಅರುವತ್ತುಮೂರು ಪುರಾತನರು ಮತ್ತು ನೂತನ ಪುರಾತನರುಗಳೆಲ್ಲರು ನಡೆದಂತೆ ನುಡಿದು ನುಡಿದಂತೆ ನಡೆದು ಭಕ್ತಿಜ್ಞಾನ ವೈರಾಗ್ಯವಿಡಿದಾಚರಿಸಿ ತೋರಿದ ವೀರಶೈವಜ್ಞಾನವೇ ವೇದಾಂತಜನ್ಯ ಜ್ಞಾನವಾಗಿ ಸುಜ್ಞಾನವೆನಿಸಿತ್ತು.

ಈ ಸುಜ್ಞಾನದಿಂದ ನಿಜಮೋಕ್ಷವಾಗುವದಲ್ಲದೆ ವೀರಶೈವ ಸುಜ್ಞಾನ ಹೀನವಾದ ಶೃತಿ ವಿರಹಿತವಾದ ಅನ್ಯಮತದವರು ಹೇಳುವಂಥ ಬಹು ಮುಖದ ಜ್ಞಾನವೆಲ್ಲ ಜಡಕರ್ಮವೂ ಭಿನ್ನಜ್ಞಾನವೂ ಆಗಿ ಮೋಕ್ಷಕ್ಕೆ ಪ್ರಯೋಜನವಲ್ಲವು ಮತ್ತು ಮೋಕ್ಷಾಪೇಕ್ಷೆಯುಳ್ಳವರೂ ಇದಲ್ಲದೆ ಲೌಕಿಕ ಭೋಗ ಭುಕ್ತ್ಯಪೇಕ್ಷೆಯುಳ್ಳವರೂ ಈ ಜ್ಞಾನವನ್ನೇ ದೃಢವಾಗಿ ನಂಬಬೇಕು. ಈ ಸುಜ್ಞಾನದಿಂದ ಸಕಲ ಕಾಮ್ಯಾರ್ಥಂಗಳು ಕಾಮಿಯಾದವನಿಗೆ ಸಂಭವಿಸುತ್ತಿಹವು. ನಿಷ್ಕಾಮಿಗೆ ನಿಜಮೋಕ್ಷ ಸಂಭವಿಸುವದು.

ಈ ಸುಜ್ಞಾನವೆಂಬುವದು ಗೋಚರವಾಗಿ ನಿದರ್ಶನಕ್ಕೆ ನಿಲ್ಲಬೇಕಾದರೆ, ಸಕಲ ಶಾಸ್ತ್ರಂಗಳ ಬಲವಿಲ್ಲದೆ ಘಟಿಸದಾಗಿ ಜಗದ ಜನರು ತಿಳಿಯಲೆಂದು ವೇದಾದಿ ಸಕಲ ಶಾಸ್ತ್ರಂಗಳ ಸಾರವೆಲ್ಲ ಸರ್ವರಿಗೆ ತಿಳಿದು ಕೃತಾರ್ಥರಾಗಲೆಂದು ನಿಜಗುಣ ಶಿವಯೋಗಿಗಳು ಕನ್ನಡದಿಂದ ರಚಿಸಿದ ಷಟ್‌ಶಾಸ್ತ್ರವನ್ನು ಮೊದಲು ನೋಡಬೇಕು ತರುವಾಯದಲ್ಲಿ ಆದ್ಯರ ವಚನಂಗಳ ನೋಡಿ ಷಟ್‌ಸ್ಥಲ ಬ್ರಹ್ಮಿಯಾಗಿ ಜ್ಞಾನ ಕ್ರಿಯೆಗಳಿಂದ ವರ್ತಿಸಬೇಕು ಯಾಕಂದರೆ "ಗುರುವಚನದಿಂದಧಿಕ ಸುಧೆಯುಂಟೆ" ಎಂದು ನಿಜಗುಣಾರಾಧ್ಯರು ಹೇಳಿದ್ದಾರೆ

ಸುಜ್ಞಾನವೆಂಬುದು ಕೇವಲ ಶಿವತತ್ವದಂಶವು. ಅದು ಕಾರಣ ಅದಕ್ಕೆ ಶಿವಜ್ಞಾನವೆಂಬ ಹೆಸರಾಯಿತು ಸುಜ್ಞಾನವೆಂಬುದು ಬಚ್ಚ ಬರಿಯ ಅಚ್ಚ ಪ್ರಕಾಶವು. ಈ ಪ್ರಕಾಶಕ್ಕೆ ಅನಂತ ಕೋಟಿ ಸೂರ್ಯಚಂದ್ರರುಗಳ ಪ್ರಕಾಶವು ಸಮಬಾರದು ಈ ಪರಮ ಪ್ರಕಾಶರೂಪವಾದ ಶಿವಜ್ಞಾನವೆನಿಪ ಸುಜ್ಞಾನಕ್ಕೆ ಪರಂಜ್ಯೋತಿ ಎಂದೂ ನಿರುಪಾಧಿ ಜ್ಯೋತಿ ಎಂದೂ ಶೃತಿಗಳು ಸಾರುತ್ತವೆ

ಈ ಸುಜ್ಞಾನವೆಂಬ ಮೋಕ್ಷ ಚಿಂತಾರತ್ನವನ್ನು ವೇದಾದಿ ಸಕಲ ಶೃತಿಸ್ಮೃತಿಗಳು ಹಲವು ರೀತಿಯಿಂದ ಬಣ್ಣಿಸುತ್ತಿಹವು ಹ್ಯಾಗಂದರೆ, ಈ ಶಿವಜ್ಞಾನವು "ದುರಿತ ಕಾನನವಗ್ನಿ। ಪರಿಭವ ಘನಚಂದ ಮರುತ। ಅಜ್ಞಾನ ತಿಮಿರ ತರಣಿ। ಮಾನಸ ಕುಲಗಿರಿ ವಜ್ರ। ಅನುತಾಪ ಸರಸಿಜ ಹಿಮವಿದೆಂದು॥" ಮತ್ತು, ಸಾರ ಸುಖದ ಸುಧಾವಾರಿಧಿ ಸುಕೃತದ ಮೇರು ಮುಕ್ತಿಯ ಜನ್ಮಭೂಮಿ ಚಾರು ಸಿದ್ಧಿಗಳ ಮಂದಾರದಿರವಿನ ಮೂಲ ಕಾರಣವಿದೆಂದು ನಿಗಮಂಗಳರಸುವವು, ಮುನಿ ಜನರು ಧ್ಯಾನಿಸುವರು, ಸುರೋರುಗರ ಜಾಣ್ಮೆಗೆ ನಿಲುಕದು, ಜಗದಾಗು ಹೋಗೆನಿಪ ಸೃಷ್ಟಿ ಸ್ಥಿತಿ ಸಂಹಾರಾದಿ ಕಾರ್ಯಂಗಳೊಳು ಸಿಲುಕದೆ ವಿಲಕ್ಷಣವಾಗಿ ಅವಿರಳ ಸಾಕ್ಷಿ ಚೈತನ್ಯ ಸ್ವರೂಪವಾದ ಶಿವಲಿಂಗದಗಣಿತನಿಜವಿದಂದು, ಸಕಲ ವೇದಾದಿ ಶೃತಿ ಸ್ಮೃತ್ಯರ್ಥಂಗಳು ಸರ್ವ ಶಾಸ್ತ್ರಾಗಮಂಗಳು ಜ್ಞಾನೋತ್ಕರ್ಷವನ್ನೇ ಬಣ್ಣಿಸುತ್ತಿಹವಾಗಿ "ಜ್ಞಾನಮಾನಂದಮವ್ಯಯಂ" ಎಂದು "ಜ್ಞಾನೇನ ವಿನಾ ನಾನ್ಯ ಪಂಥಃ" ಎಂದು ಈ ಸುಜ್ಞಾನದ ವರ್ಣನೆಯುಂಟು. "ಆಹಾರ ನಿದ್ರಾಭಯ ಮೈಥುನಂ ಚ। ಸಮಾನಮೇತತ್ಪಶುಭಿರ್ನರಾಣಾಂ॥ ಜ್ಞಾನೀ ನರಾಣಾಂ ಅಧಿಕೋ ವಿಶೇಷಃ। ಜ್ಞಾನೇನ ಹೀನಃ ಪಶುಭಿಃ ಸಮಾನಃ॥" ಎಂಬ ಪ್ರಮಾಣಗಳುಂಟಾಗಿ ಸುಜ್ಞಾನ ಹೀನರಾದ ನರ ಸುರೋರುಗರೆಲ್ಲರು ಪಶುಗಳೆಂದೇ ಹೇಳತಕ್ಕದ್ದು.

ಈ ಸುಜ್ಞಾನೋತ್ಪತ್ತಿಗೆ ಮೊದಲು ಗುರುಕಾರುಣ್ಯವಿಲ್ಲದೆ ಸಿದ್ಧಿಸದಾಗಿ ಗುರುಕಾರುಣ್ಯದಿಂದ ಜೀವ ಸಂಬೋಧನವದರಿಂ ಮೇಲೆ ನೀತಿ ಕ್ರಿಯಾ

ಚರಣೆ, ಆ ಬಳಿಕ ಶಿವಯೋಗ ಸಾಧನ, ಅದರಿಂ ಬಳಿಕ ಸುಜ್ಞಾನ ಸ್ವಿರ್ಯೋಗವೆನಿಪ ನಿಜಾನಂದ ಜ್ಞಾನೈಶ್ವರ್ಯ ರೂಪವಾದ ಸದ್ಯೋನ್ಮುಕ್ತಿ ಎಂಬ ಶಿವೈಕ್ಯ ಸಂಪದ ನಿಜಮೋಕ್ಷವಹುದಾಗಿ "ನಂಬೋ ಜ್ಞಾನವನ್ನೇ" ಎಂದು ಬಲ್ಲ ಮಹಾತ್ಮರು ಹೇಳಿದ್ದಾರೆ ಮತ್ತು ಸಕಲ ಶಾಸ್ತ್ರಗಳಾದರೂ ಇದರಂತೆ ಬೋಧಿಸುತ್ತವೆ.

## ಸುಜ್ಞಾನಸಾರದಲ್ಲಿಯು ಯುಕ್ತೀಕೃತವು.

॥ಶ್ಲೋ॥ ಲೋಕಸಿದ್ಧಿ ನಿರಾಪೇಕ್ಷಂ। ಜ್ಞಾನಸಿದ್ಧಿ ದಯಾಪರಃ॥ ಕಾಯುಸಿದ್ಧೀ ಸದಾಚಾರಂ। ವಿದ್ಯಾಸಿದ್ಧಿ ನಿಗರ್ವಿತಾ॥ ಎಂದಲ್ಲಿ ಈ ಸುಜ್ಞಾನ ಕೃಷಿಯಲ್ಲಿ ಭಕ್ತದೇಹವೆಂಬ ಶಿವಕ್ಷೇತ್ರವನ್ನು ಶ್ರೀ ಗುರುವೆಂಬ ಕೃಷಿಕನು ಕುಂಟೆಯ ಕಟ್ಟಿ ಹರಗಿ ಬಿತ್ತಬೇಕಾದರೆ, ಸತ್ಕ್ರಿಯೆ ಸದಾಚಾರಗಳ ವರ್ತನೆಯಿಂದ ಹಸನಾದ ಭೂಮಿಯಾದರೆ ಬಿತ್ತುವನಲ್ಲದೆ, ಕಲ್ಲುಮೊರಡಿಗಳೆನಿಪ ಕಾಡುಭೂಮಿಯಾದ ಜಾಲಿ ಬೊಬ್ಬಲಿ ನಟ್ಟ ಬೆಳೆದ ಬೀಳು ಭೂಮಿಯಾದ ಅನಾಚಾರಿ ಹೃದಯದಲ್ಲಿ ಮಾಂಗಲ್ಯ ಸ್ವರೂಪವಾದ ಶಂಕರ ಭಕ್ತಿ ಎಂಬ ಪ್ರಣವ ಬೀಜವನ್ನು ಬಿತ್ತುವನೇ? ಬಿತ್ತಲರಿಯನು ಅದು ಕಾರಣ ಜೀವನೆಂಬ ರಾಜನು ಶರೀರವೆಂಬ ಕ್ಷೇತ್ರವನ್ನು ಶ್ರೀ ಗುರುವೆಂಬ ಬಾದಶಹ ರೈತನಿಗೆ ಸಮರ್ಪಿಸಿ ಕಾಲು ಕರಾರು ಕೊಟ್ಟಲ್ಲಿ, ಸಾಗುಮಾಡಿ, ಸುಜ್ಞಾನ ಬೀಜವ ಬಿತ್ತುವನಲ್ಲದೆ, ಸುಮ್ಮನೆ ತನ್ನ ವಶಕ್ಕೆ ಬಾರದ ಬೀಳು ಭೂಮಿಯಲ್ಲಿ ಬಿತ್ತಲರಿಯನು. ಈ ದೃಷ್ಟಾಂತದ ತಾತ್ಪರ್ಯವೇನೆಂದರೆ, ಮೋಕ್ಷಾಪೇಕ್ಷೆಯುಳ್ಳವರುಗಳು ಸುಜ್ಞಾನದ ಬೆಳೆಯನ್ನು ಮಾಡಿಕೊಳ್ಳಬೇಕಾದರೆ ಕಾಲು ಕರಾರು ಕೊಡಬೇಕೆಂಬುದೇ ಯತ್ನವು ಯತ್ನಮಾಡಿ ಜ್ಞಾನವನ್ನು ಪಡೆದರೆ, ಮುಕ್ತರಾದಾರಲ್ಲದೆ, ಜ್ಞಾನ ಹೀನರಾಗಿ ಅಲ್ಪ ಸ್ವಲ್ಪ ಸತ್ಕ್ರಿಯೆಗಳಿಂದೆ ತನ್ನಿಂದ ತಾನೇ ಮುಕ್ತಿಯಾದೀತೆಂದರೆ, ಆಗಬಹುದೇ? ಆಗಲರಿಯದು ಸಾಕ್ಷಿ. "ಕರ್ಮಕೋಟಿಗಳಿಂದ ಮುಕ್ತಿಯಾಗುವದುಂಟೇ?॥" ಎಂಬ ಪದದಲ್ಲಿ ಸರ್ಪಭೂಷಣ ಕವಿಗಳು ಹೀಗೆಯೇ ಹೇಳಿದ್ದಾರೆ. ಇದಲ್ಲದೆ, "ಕರ್ಮವೆಂಬ ಜಾಲದೊಳು ಸಿಲುಕಿ ಹಂಬಲಿಸದಿರು ಮುಕ್ತಿಯ॥ ಬೇರೆ ಬಯಸಿ ಮನುಜಾ॥ ನಂಬೋ ಜ್ಞಾನವನ್ನೆ॥" ಎಂಬ ಪದದಲ್ಲಿಯೂ ನಿಜಗುಣಾರ್ಯರು ಹೇಳಿದ್ದಾರೆ.

ಕೆಲವು ಸತ್ಕರ್ಮಯುತರಾದವರು ಜ್ಞಾನಹೀನರಾಗಿ ಎನ್ನುವದೇನೆಂದರೆ, ಮೋಕ್ಷಕ್ಕೆ ಯತ್ನವೇತಕ್ಕೆ ಬೇಕು? ಯತ್ನದಿಂದ ಸುಜ್ಞಾನಿಯಾಗಬೇಕಾದರೆ ಭಕ್ತಿಜ್ಞಾನ ವೈರಾಗ್ಯದಿಂದಾಚರಿಸಿ ಲೋಕದಂತಿರದೆ ಲೋಕವಿರುದ್ಧನಾಗದೆ ನಡೆನುಡಿಗಳಲ್ಲಿ ಬಹು ಎಚ್ಚರದಿಂದ ವರ್ತಿಸಬೇಕಾಗುತ್ತದೆ ಆದರೆ ಇಷ್ಟು ಪ್ರಯತ್ನವೇತಕೆ? ಹಿಂದೆ ಸ್ವಲ್ಪ ಸ್ವಲ್ಪ ಸತ್ಕರ್ಮಗಳಿಂದ

ಶ್ವೇತಾದಿಗಳಿಗೆ ಮುಕ್ತಿಯಾಗಲಿಲ್ಲವೇ, ಎಂದು ನಿಜಗುಣಾರಾಧ್ಯರು ಹೇಳಿದ ಒಂದು ಮಾತಿನಾಧಾರದಿಂದ ಸಮ್ಮತ ಮಾಡಿಕೊಂಡು ಯತ್ನಹೀನರಾಗುತ್ತಾರೆ. ಹೇಗೆಂದರೆ, "ಶಲಬಜಾಯಿಲಾನೆ ಪಂದಿ ಮಲ ನಿರುಂಪಿ," "ಹದ್ದು ಹಕ್ಕಿಗಳನು ಶಂಭುಲಿಂಗವಮರ ಕುಲಕೆ ಮಿಗಲೆನಿಸಿದನಾಗಿ" ಎಂದು ನಿಜಗುಣಾರ್ಯರು ಹೇಳಲಿಲ್ಲವೇ, ಎಂದೆನ್ನುತ್ತಾರೆ ಇದಕ್ಕುತ್ತರವೇನಂದರೆ, "ಸದರವಲ್ಲವೇ ತಿಳಿಯೆ ಸದರವಲ್ಲವೇ ಮದನವೈರಿ ತನ್ನವರ್ಗೆ ಪದುಳದಿಂದ ಕೊಡುವ ಮುಕ್ತಿ ಸದರವಲ್ಲವೇ" ಎಂದು ಪಲ್ಲವಿಯಲ್ಲಿ ನಿಜಗುಣಾರಾಧ್ಯರು ಹೇಳಿದ್ದಾರೆ. ಇದರ ಅಭಿಪ್ರಾಯವೇನಂದರೆ, ಈ ಶ್ವೇತಾದಿಗಳಾದರೂ ಹಿಂದೆ ಹೇಳಿದ ಮೃಗಪಕ್ಷಿಗಳಾದರೂ ಪರಶಿವಮೂರ್ತಿಗೆ ಸಾನ್ನಿಧ್ಯರಾಗಿ ಸುಜ್ಞಾನದಿಂದ ಶಿವನವರಾದ ಕಾರಣ ತನ್ನವರಿಗೆ ಕೊಡುವ ಮುಕ್ತಿ ಸುಲಭವೆಂದು ಹೇಳಿದ್ದಾರಲ್ಲದೆ ಈ ಲೋಕದ ಜಡಕರ್ಮಿಗಳು ಅಲ್ಪ ಸ್ವಲ್ಪ ಭಿನ್ನಕರ್ಮಗಳನ್ನು ಮಾಡಿ ನಿಜಯತ್ನವಿಲ್ಲದೆ ನಾವು ಮುಕ್ತರಾಗುವೆವೆಂದರೆ ಮುಕ್ತರಾಗುವದುಂಟೇ? ಇದಕ್ಕೆ ಜ್ಞಾನ ಸಾಧನದಿಂದ ಪ್ರಯತ್ನಮಾಡಿ ಅಭಿನ್ನ ಕ್ರಿಯೆಗಳಿಂದ ಶ್ರೀ ವೀರಶೈವಾಚಾರ ವಿಡಿದು ನಿರಾಭಾರತ್ವದಿಂದ ಪರಿಪೂರ್ಣ ಮಹಾಜ್ಞಾನಿ ಎನಿಸಿ ಶಿವೈಕ್ಯಮಂ ಪಡೆದರೆ ಬಂದೀತಲ್ಲದೆ, ಯತ್ನವಿಲ್ಲದೆ ಭವ ಹಿಂಗುವದುಂಟೆ?

ಹಿಂದೆ ಈ ಗ್ರಂಥದ ಪೂರ್ವ ಭಾಗಗಳಲ್ಲಿ ಯತ್ನದಿಂದ ಕೃಷಿ ಕೆಲಸಗಳನ್ನು ಚನ್ನಾಗಿ ಮಾಡಿ ಧನ ಧಾನ್ಯಾದಿ ಸಕಲೈಶ್ವರ್ಯವನ್ನು ಪಡೆಯಬೇಕೆಂದು ಹೇಳಿದಂತೆ ಈ ಸುಜ್ಞಾನ ಕೃಷಿಯಲ್ಲಾದರೂ ಪ್ರಯತ್ನ ಮುಖದಿಂದ ಜ್ಞಾನ ಮಯನಾಗಿ ಮೋಕ್ಷ ಸುಖವನ್ನು ಪಡೆಯಬೇಕೆಂದು ಯತ್ನಾಧಿಕ್ಯವನ್ನು ಈ ಪ್ರಕರಣದಲ್ಲಿ ತಿಳುಹಿಸಬೇಕಾಗಿದೆ.

"ಬಹು ಜನ್ಮಕೃತೈಃ ಪುಣ್ಯೈಃ। ಪ್ರಕ್ಷೀಣೈಃ ಪಾಪ ಪಂಜರೈಃ॥ ಶುದ್ಧಾಂತಃಕರಣೋ ದೇಹಿ। ಪಿಂಡ ಶಬ್ದೇನ ಗೀಯತೆ॥" ಮತ್ತು "ಅನೇಕ ಜನ್ಮ ಸಂಪ್ರಾಪ್ತಿ। ಕರ್ಮಧ್ಯಾನ ಸಮಾಧಿಭಿಃ॥ ನರಾಣಾಂ ಕ್ಷೀಣ ಪಾಪಾನಾಂ। ಶಿವಭಕ್ತಿಃ ಪ್ರಜಾಯತೆ॥ ಎಂದುಂಟಾಗಿ ಸದ್ಭಕ್ತಿ ಸದಾಚಾರ ಸಮ್ಯಜ್ಞಾನಂಗಳು ಹುಟ್ಟಬೇಕಾದರೆ, ಹಿಂದೆ ಅನಂತ ಜನ್ಮಂಗಳಲ್ಲಿ ಮಾಡಿದ ಸುಕೃತದಿಂದ ಅವು ಹುಟ್ಟುತ್ತಿಹವು ಆದರಲ್ಲಿ ಯಾವ ಬೀಜವನ್ನು ಬಿತ್ತಿದರೆ ಆ ಫಲವಾಗುವಂತೆ ಕರ್ಮವನ್ನು ಮಾಡಿ ಕರ್ಮಸಂಬಂಧದ ಪುಣ್ಯ ಸಂಗ್ರಹದಿಂದ ಕರ್ಮಫಲವೇ ಪ್ರಾಪ್ತಿಸುವದು. ನಿರಾಭಾರ ಪರಮ ವೀರಶೈವ ಪಥ ವಿಡಿದು ಮಾಡಿದ ಅಭಿನ್ನ ಸತ್ಕ್ರಿಯೆಗಳಿಂದ ನಿಜಮೋಕ್ಷವಾಗುವದು. ಅದು ಕಾರಣ. ಯತ್ನವಿಲ್ಲದೆ ಯಾವ ಕಾರ್ಯವೂ ಫಲಿಸಲರಿಯದು. ಸಾಕ್ಷಿ "ಉದ್ಯೋಗಿನಂ ಪುರುಷ ಸಿಂಹಮುಪೈತಿ ಲಕ್ಷ್ಮೀಃ। ದೈವ ಪ್ರಧಾನ ಇತಿ ಕೆ

ಪುರುಷಾ ವದಂತಿ ॥ ದೈವಂ ವಿಹಾಯ ಕುರು ಪೌರುಷಮಾತ್ಮ ಶಕ್ತ್ಯಾ॥ ಯತ್ನೇ ಕೃತೆ ಯದಿ ನ ಸಿಧ್ಯತಿ ಕೋತ್ರ ದೋಷಃ" ಉದ್ಯೋಗವನ್ನು ಮಾಡುವ ಪುರುಷ ಶ್ರೇಷ್ಠನನ್ನು ಮೆಚ್ಚಿ ಪ್ರಸನ್ನಳಾಗಿ ಅವನ ವಶೀಕೃತಳಾಗುತ್ತಾಳೆ. ಇದಲ್ಲದೆ ಕೆಲವು ಪುರಷುರು ದೈವ ಪ್ರಧಾನವೆನ್ನುತ್ತಾರೆ ಆ ಮಾತನ್ನು ನಂಬದೆ ತಮ್ಮಾತ್ಮ ಶಕ್ತಿ ಇದ್ದಷ್ಟು ಪೂರ್ತಿಗಾದರೂ ಪ್ರಯತ್ನ ಮಾಡೇನು, ಪಡೆದೇನು, ಎಂಬ ಪರಾಕ್ರಮದಿಂದ ಪರಮಾತ್ಮನನ್ನು ಕುರಿತು ಧ್ಯಾನ ಪೂಜಾ ನಮಸ್ಕಾರ ಸ್ತೋತ್ರಂಗಳಿಂದ ಒಲಿಸಿ ಭೋಗ ಭುಕ್ತ್ಯಪೇಕ್ಷಿತರಾಗಿ ಸಕಲ ಪ್ರಯತ್ನಾದಿ ಗಳನ್ನು ಮಾಡಿ ಮಹದೈಶ್ವರ್ಯಗಳನ್ನು ಪಡೆಯಬೇಕು ಮತ್ತು ಅಧಿಕಾರಿ ಗಳಾದರೆ ವೀರತ್ವದಿಂದ ವೀರ ಭಕ್ತಿಯನ್ನು ಮಾಡಿ ವೀರಶೈವಾಚಾರ ತತ್ಪರ ರಾಗಿ ನಿಜ ಮೋಕ್ಷವನ್ನು ಪಡೆಯಬೇಕು.

## ಸುಜ್ಞಾನ ಸಂಪಾದನೆ.

ಸುಜ್ಞಾನದ ಲಕ್ಷಣವೆಂತೆಂದಡೆ, "ಅದಿದೆಂಬುದಖಿಳ ತತ್ವವನೇತಿಗಳೆ ದುಳಿದ ಸದಮಳ ಚಿದಾನಂದ ಪೂರ್ಣ ತಾನೆಂದು। ಹೃದಯದೊಳು ನಂಬಿ ಬಹು ಮತವನೆಣಿಸದೆ ಮತ್ತೆ ಪದುಳದಿಂದಿರದೇ ಸಹಜ ಸುಜ್ಞಾನ" ಈ ಪ್ರಕಾರ ನಿಜಗುಣ ಶಿವಯೋಗಿಗಳು ಸುಜ್ಞಾನದ ಕುರುಹನ್ನು ಹೇಳಿದ್ದಾರೆ. ಅದು ಹ್ಯಾಗೆಂದರೆ, ತನಗೆ ಅಂತರ್ಬಾಹ್ಯದಲ್ಲಿ ಕರಣಾದಿ ಇಂದ್ರಿಯಂಗಳಿಗೆ ಸ್ಥೂಲ ಸೂಕ್ಷ್ಮ ರೂಪದಿಂದ ಎದುರಾಗಿ ಕಾಣಿಸುವ ಪಿಂಡ ಬ್ರಹ್ಮಾಂಡಗಳ ಲ್ಲಿರುವ ಸಕಲ ತತ್ವಗಳನ್ನು ಜಡರೂಪವೆಂದು ನೇತಿಗಳೆದು ತನಗೆದುರಾಗಿ ಕಾಣಿಸದೆ ಉಳಿದಿರುವ ತತ್ವವಾವುದುಂಟೋ ಆ ತತ್ವವೇ ತಾನೆಂದು ನಿಶ್ಚ ಯಿಸತಕ್ಕದ್ದು. ಆದರೆ ಆ ವಸ್ತುವು ನಿಜವಹುದೋ ಅಲ್ಲವೋ ಎಂಬ ಪರೀ ಕ್ಷೆಗೆ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣವೆಂಬ ಪಂಚ ಲಕ್ಷಣಗಳುಂಟು. ಆ ಪಂಚಲಕ್ಷಣಗಳುಳ್ಳದ್ದೇ ವಸ್ತುವಹುದೆಂದು ನಿರ್ಧರಿಸತಕ್ಕದ್ದು. ಈ ಪಂಚ ಲಕ್ಷಣಗಳ ಆಧಾರದ ಊಹೆಯಿಂದ ಅಪರೋಕ್ಷ ಜ್ಞಾನದಲ್ಲಿ ವಸ್ತು ನಿರ್ದೇ ಶವಾದಾಗಲೇ ಆ ವಸ್ತುವೇ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣ ತಾನೆಂದು ಹೃದಯದೊಳು ನಂಬಿ, ಬಹಳವಾದ ಭಿನ್ನ ಜ್ಞಾನ ಮತಗಳನ್ನು ಗಣನೆಗೆ ತಾರದೆ, ವೇದ ಸಮ್ಮತವಾದ ಶಿವಮತದ ಸಕಲ ಶಿವಾಗಮಂಗಳಿಗನುಸಾರ ವಾಗಿ ಆದ್ಯರ ವಚನಾನುಭಾವವಿಡಿದು ಆಚರಿಸುತ್ತ ಆನಂದಮಯನಾಗಿ ಪೂರ್ಣ ತಾನಾಗಿ ಏಕಾತ್ಮನಾಗಿ ತನಗನ್ಯವೇನೇನೂ ತೋರದೆ ಸರ್ವ ಸಮತಾ ಭಾವಿಯಾಗಿ ಅಣು ರೇಣು ತೃಣಗಳಲ್ಲಾದರೂ ತನ್ನನೇ ಕಾಣುತ್ತ ಇರುವದೇ ಸಹಜ ಸುಜ್ಞಾನವು. ಈ ಮಹಾ ಜ್ಞಾನನೇ ನಿರಾಧಾರಿ ವೀರಶೈವಾಚಾರ ಸ್ಥಿತಿ ಎಂದೆನಿಸುತ್ತದೆ. ಸಾಕ್ಷೀ— ನ ಕರ್ಮಣಾ ನ ತಪಸಾ। ನ ಜಪೇನ

ಸಹಾದಿಭಿಃ ॥ 'ಅಮಾಯ ಶಿವಮಾರ್ಗೇಽಸ್ಮಿನ್ । ಭಕ್ತಿರೇಕಾ ಪ್ರದರ್ಶ್ಯತೆ ॥ ಮತ್ತು ॥ ನ ಯೋಗೋ ನ ತಪೋ ನಾರ್ಚನೋ । ಕ್ರಮ ಕೋಪಿ ನ ವಿದ್ಯತೆ ॥ ಅಮೋಯಂ ಶಿವ ಮಾರ್ಗೇಽಸ್ಮಿನ್ । ಭಕ್ತಿರೇಕಾ ಪ್ರದರ್ಶ್ಯತೆ ॥ ಇಂತೆಂಬ ಶೃತಿ ವಾಕ್ಯ ಪ್ರಮಾಣದಿಂದ ಪೂರ್ಣಾನಂದನಾಗಿರ್ಪುದೇ ಸುಜ್ಞಾನವೆನಿಸುವದು. ಇದುವೇ ಜೀವನ್ಮುಕ್ತಿ ಲಕ್ಷಣವು

ಈ ಸುಜ್ಞಾನವು ತನಗೆ ಗೋಚರಿಸಿ ದೃಢವಾಗಬೇಕಾದರೆ, ಜಗದುಪಕಾರಿಗಳಾದ ನಿಜಗುಣ ಶಿವಯೋಗಿಗಳಿಂದ ರಚಿಸಲ್ಪಟ್ಟ ಅನುಭವಸಾರದ ಅರ್ಥಾನ್ವಯುವನ್ನು ಚನ್ನಾಗಿ ತಿಳಿದರೆ ಆ ಗ್ರಂಥದ ಎರಡನೇ ಅಧ್ಯಾಯದಲ್ಲಿಯಂತೆ ವಸ್ತುನಿರ್ದೇಶವಾಗುವದು ಮತ್ತು ಪರಮಾನುಭ ಬೋಧೆಯ ಪ್ರಥಮದ ಮೂರು ಅಧ್ಯಾಯಗಳಲ್ಲಿ ತತ್ವಜ್ಞಾನದ ಬಲಿಕೆಯಾಗುವದು ಗೀತೆಯಲ್ಲಿ ಸಕಲ ತತ್ವಾದಿಗಳುದಯವು ಮತ್ತು ಪಂಚೀಕರಣಗಳ ಕುರುಹು ಸಪ್ತ ಭೂಮಿಕೆ ಎಂಬ ಜೀವನ್ಮುಕ್ತರ ಸಪ್ತವಿಧ ಸ್ಥಿತಿಗಳು ಹೃದ್ವೇದ್ಯವಾಗುವವು. ಪರಮಾರ್ಥ ಪ್ರಕಾಶದಲ್ಲಿ ಸಕಲಯೋಗ ಲಕ್ಷಣಗಳೂ ಮಂತ್ರ ಜಪಾನುಷ್ಠಾನದ ಕ್ರಮಗಳೂ ಸಮಸ್ತ ಸಿದ್ಧಿಗಳೂ ತಿಳಿಯುವವು ವಿವೇಕ ಚಿಂತಾಮಣಿಯಲ್ಲಿ ಸಕಲ ಲಕ್ಷಣಗಳು ಸಕಲಾಗಮಂಗಳು ವೀರಶೈವ ನಿರಾಭಾರಿ ವೀರಶೈವ ಲಕ್ಷಣಗಳು ಮತ್ತು ಬ್ರಹ್ಮಾಂಡದ ಸಕಲ ಲಕ್ಷಣಗಳು ಮನನವಾಗುವವು. ಕೈವಲ್ಯ ಪದ್ಧತಿಯಲ್ಲಿ ಜ್ಞಾನಸಿದ್ಧಿ ಜೀವನ್ಮುಕ್ತಿ ಸ್ಥಿತಿಯನ್ನು ನಿರ್ಧರಗೊಳಿಸುವದು. ಈ ರೀತಿಯಿಂದ ಸುಜ್ಞಾನೋದಯುಕ್ಕೆ ಸಕಲ ಶೃತಿ ಸ್ಮೃತಿ ವೇದಾಗಮ ಸಮ್ಮತವಾದ ಸಾರ ತರದ ಪ್ರಬಲ ಶಾಸ್ತ್ರಗಳಿರಲಾಗಿ ಅವುಗಳ ಸಾರವನ್ನು ಸುಜ್ಞಾನ ಪ್ರಕರಣದಲ್ಲಿ ಬರೆಯಬೇಕೆಂಬ ಪ್ರಯೋಜನವಿಲ್ಲ ಆದಾಗ್ಯೂ ನಿಜಗುಣಯೋಗಿಗಳ ಷಟ್‌ಶಾಸ್ತ್ರಂಗಳ ಸಾರವನ್ನೆಲ್ಲ ಸಂಕ್ಷೇಪಕ್ಕೆ ತಂದು ಸುಲಭದಿಂದ ತಿಳಿಯುವ ಹಾಗೆ ಬರೆದರೂ ಉತ್ತಮವೇ ಸರಿ.

ಈ ನಿಜಗುಣಯೋಗಿಗಳ ಷಟ್ಶಾಸ್ತ್ರಂಗಳನಾದರೂ ಸಹಜವಾಗಿ ಇದ್ದ ಕಿದ್ದ ಹಾಗೆ ಅರ್ಥ ಮಾಡಿ ತಿಳಿಯಲರಿಯದೆ, ವಾಗ್ಬ್ರಹ್ಮತ್ವದ ಚಾಪಲ್ಯದ ಮಾತನ್ನು ಕಲಿತು ತಮ್ಮ ದುರ್ಗುಣಗಳನ್ನು ಮರೆಸಿಕೊಂಬುವದಕ್ಕೆ ತಮ್ಮ ತಮ್ಮ ದುರ್ವರ್ತನೆಗೆ ಸರಿಯಾಗಿ ವಿಪರೀತಾರ್ಥದಿಂದ ಸಮ್ಮತ ಮಾಡಿಕೊಳ್ಳುತ್ತಾರೆ. ಹೇಗಂದರೆ, "ನನ್ನ ಮನೆಗೆ ನಾನೇ ದಾಸ, ಬೆಕ್ಕಿಗಿಡೋ ಪೆಂಗಿ ನಾಮ" ಎಂಬ ಸೂಳೆಯರ ಗಾದೆಯಂತೆ ಶೃತ್ಯಾಗಮಂಗಳಿಗೆ ವಿರೋಧವಾಗಿ ತಮ್ಮಿಚ್ಛೆಯಾಗಿ ತಮ್ಮ ಮನ ಬಂದ ಪರಿಯಲ್ಲಿ ಅರ್ಥ ಮಾಡಿ ಶಾಸ್ತ್ರ ಕೆಡಿಸುತ್ತಾರೆ. ಮತ್ತು ಸೂಳೆಯರ ಸಭೆಯಲ್ಲಿ ಕುಂಟ ದಾಸನೇ ಪಂಡಿತನೆಂಬಂತೆ ಮೂರ್ಖಜನರ ಸಭೆಯಲ್ಲಿ ವಿಪರೀತಾರ್ಥವ ಹೇಳಿ ಮರುಳುಗೊಳಿಸುವರು. ಈ ವಾಗ್ಬ್ರಹ್ಮಿಗಳಾದ ಶುಷ್ಕ ವೇದಾಂತಿಗಳು "ಹುಲ್ಲು ಕಿಚ್ಚು ಹೊಲೆಯರ

ಮೇಳದಂತೆ, ನುಡಿ ಒಂದು ಪರಿ, ನಡೆ ಒಂದು ಪರಿ, ಪರ ಒಂದು ಪರಿ, ಅರ್ಥ ಒಂದು ಪರಿಯಾಗಿರ್ಪುದು." ಹೇಗಂದರೆ ಹೊಲೆಯರ ಮೇಳದಲ್ಲಿ ಡೊಳ್ಳೊಂದು ಕಡೆಗೆ ಕೊಳಲೊಂದು ಕಡೆಗೆ ನರ್ತನ ಒತ್ತಟ್ಟಿಗೆ ಪದ ಒತ್ತಟ್ಟಿಗೆ ಅಭಿನಯ ಒತ್ತಟ್ಟಿಗೆ ಹೀಗಾಗಿ ತಾಳ ಕೂಡದೆ ಮೇಳ ಕೂಡದೆ, ನರ್ತನವಾಡುವಲ್ಲಿ ಸಂಗೀತ ಬಲ್ಲವರ ಮುಂದೆ ಹಾಸ್ಯವಲ್ಲವೇ? ಹೀಗೆ ವಾಗ್ಬ್ರಹ್ಮಜ್ಞಾನದಲ್ಲಿ ಮೇಳವಿಲ್ಲವು. ಇವರಿಗೆ ಶುಷ್ಕ ವೇದಾಂತಿಗಳೆಂಬ ಹೆಸರು

ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರಗಳು ಶಿವಾಗಮಂಗಳ ಪುಂಜವು, ಪರಮ ವೀರಶೈವಾಚಾರ ಸ್ಥಿತಿಗೆ ಜ್ಞಾನದರ್ಪಣವು ಹೀಗಿದ್ದು ಆದ್ಯರ ವಚನಕ್ಕನುಸಾರವಾಗಿಪ್ಪ ದಿವ್ಯಜ್ಞಾನಮಯವಾಗಿ ಮೋಕ್ಷ ಚಿಂತಾರತ್ನವಾಗಿ ಮುಮುಕ್ಷು ಜನರ ಕರದೀಪಿಕೆಯಾಗಿ ಒಪ್ಪುವ ಪ್ರಬಲ ಶಾಸ್ತ್ರಗಳರ್ಥವನ್ನು ಕೆಡಿಸಿ ಅನರ್ಥ ಮಾಡಿ ದುರ್ಬೋಧೆಯನ್ನು ಬೋಧಿಸುವ ದುಷ್ಟರನ್ನು ನಂಬಲಾಗದು. ಮತ್ತು ಆದ್ಯರ ವಚನಕ್ಕನುಸಾರವಾಗಿ ಶಿವಾಗಮಂಗಳನುಮತವಾಗಿ ಶ್ರುತಿಸ್ಮೃತಿಗಳಂ ವೀಕ್ಷಿಸಿ ವಚನಗಳರ್ಥಾನುಭವದಂತೆ ಅರ್ಥೈಸಿ ಶಿಷ್ಯನ ಸಂಕಲ್ಪಾದಿಗಳಂ ನಿರಸನದ್ವಾರದಿಂ ಕಳೆದು ಶಿಷ್ಯ ಸಂತಾಪಹರಣ ಮಾಡಿ ಗುರುತ್ವಾಭಿಮಾನ ರಹಿತನಪ್ಪಾತನೇ ಶ್ರೀಗುರುವೆಂದರಿದು, ಇಂತಪ್ಪ ಸದ್ಗುರುಗಳಿಂದ ನಿಜಗುಣ ಶಾಸ್ತ್ರದರ್ಥಂಗಳ ಕೇಳಿ ತಿಳಿಯಬೇಕು. ಇದಲ್ಲದ ಶಿಷ್ಯವಿತ್ತಾಪಹಾರಕರಾದ ದುರಭಿಮಾನಿಗಳ ಮುಖದಿಂದ ಕೇಳಲಾಗದು. ಏಕೆಂದರೆ ನಡೆನುಡಿಗಳಲ್ಲಿ ತಾನೇ ಶುದ್ಧನಲ್ಲದಿದ್ದರೆ, ಶಿಷ್ಯರನ್ನು ಪರಿಶುದ್ಧ ಮಾಡುವ ಪರಿ ಎಂತು? ಇವರು ದುರ್ಬೋಧೆಯನ್ನು ಬೋಧಿಸುವರಲ್ಲದೆ, ಸದ್ಬೋಧೆಯನ್ನು ಬೋಧಿಸಲರಿಯರು

ಬುದ್ಧಿಯನ್ನು ಹೇಳುವದಕ್ಕೆ ಆದ್ಯರುಗಳ ವಚನ ಉಂಟು "ಉದ್ಧರಿಸುವಡೆವಗೆ ಶಿವನ ಮಂತ್ರ ಉಂಟಲ್ಲೈ" ಎಂದು ವೈರಾಗ್ಯ ಷಡಕ್ಷರಿ ದೇವರ ವಚನ ಉಂಟಾಗಿ ಜಗದುಪಕಾರ ನಿಮಿತ್ಯದಿಂದ ಸಕಲಾಗಮಂಗಳ ಸಾರವೆಲ್ಲ ಏಕ ಮುಹೂರ್ತದಲ್ಲಿ ತಿಳಿಯುವಂತೆ ಒಂದೊಂದು ವಚನದಲ್ಲಿ ಕೋಟಿ ಕೋಟಿ ಗ್ರಂಥಂಗಳ ಸಾರವನ್ನೇ ಸಂಗ್ರಹಿಸಿ ಅನೇಕ ಶೃತಿಸ್ಮೃತಿಗಳ ದೃಷ್ಟ ಧಾರಿಷ್ಟ್ಯಾದಿಗಳಿಂದ ಪರಿಪೂರ್ಣ ಜ್ಞಾನವು ಸ್ಥಿರವಾಗುವಂತೆ, ಪಾರಮಾರ್ಥದ ನಿಜವನ್ನೇ ಗಟ್ಟಿಗೊಳಿಸಿ, ಸುಲಿದ ಬಾಳೆಯ ಹಣ್ಣಿನಂತೆ ಆಯಾಸವಿಲ್ಲದೆ ಕೇಳಿದ ಮಾತ್ರದಲ್ಲಿಯೇ ಜ್ಞಾನೋದಯವಾಗುವ ಹಾಗೆ ಪರಮಾರಾಧ್ಯರಾದ ಬಸವಾದಿ ಪುರಾತನರು ಹೇಳಿದ ವಚನಗಳನಂತ ಉಂಟು. ಇಂತಪ್ಪ "ಶ್ರೀಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ" ಎಂದು ಮತ್ತು "ಶ್ರೀಗುರು ವಚನದಿಂದಧಿಕ ಸುಧೆಯುಂಟೆ?'

ಎಂದು ನಿಜಗುಣ ವಾಕ್ಯ ಉಂಟಾಗಿ ಜಗದಾರಾಧ್ಯರಾದ ಬಸವಾದಿ ಪುರಾತನರ ವಚನಾನುಭಾವವನ್ನು ವಿಶ್ವಾಸಿಸಿಕೊಂಡು ಸಕಲ ತತ್ವಂಗಳ ವಿಚಾರವನ್ನು ತಿಳಿದು ಶ್ರೀ ವೀರಶೈವಾಚಾರ ಮಾರ್ಗಸ್ಥಿತಿಯೊಳ್ ಜ್ಞಾನಕ್ರಿಯೆಗಳೊಂದಾಗಿ ಜಡನಾಗದೆ ಅಜಡನಾಗದೆ, ಪಿಂಡಾದಿ ಜ್ಞಾನಶೂನ್ಯಾಂತವಾದ ನೂರಾವೊಂದು ಸ್ಥಲದಾಚರಣೆ ಅಂಗಗೊಂಡು ಭಕ್ತಾದಿ ಐಕ್ಯಾಂತವಾದ ಷಟ್‌ಸ್ಥಲಮಾರ್ಗದಲ್ಲಿ ಪ್ರವರ್ತಿಸುತ್ತೆ, ನಡೆನುಡಿ ಸಿದ್ಧಾಂತವಾಗಿ ಅಂತರಂಗದ ಮಹಾಜ್ಞಾನವನ್ನೇ ಒಹಿರಂಗದಲ್ಲಿ ಕ್ರಿಯಾರೂಪಕ್ಕೆ ತಂದು ಮತ್ತು ಬಹಿರಂಗದ ಸಮಸ್ತ ಕ್ರಿಯೆಗಳನ್ನೆಲ್ಲ ಅಂತರಂಗದ ಮಹಾಜ್ಞಾನದಲ್ಲಿ ಸಂಬಂಧಿಸಿ ಲೋಕಾಚಾರ ವರ್ತನವಾದ ಷಟ್ಕೃಷಿ ಲೋಕವ್ಯವಹಾರಂಗಳಲ್ಲಾದರೂ ಸತ್ಯ ಸದಾಚಾರವಿಡಿದು ಸತ್ಕಾಯಕವೆಂದೆನಿಸಿ ಗುರುಮಾರ್ಗಾಚಾರವಾಗಿ ಮಾರ್ಗ ಕ್ರಿಯೆ ಮೀರಿದ ಕ್ರಿಯೆಗಳಿಂದೆ ವ್ಯವಹರಿಸುತ್ತ ಲೌಕಿಕರಂತೆ ಇರದೆ ಭಕ್ತಿ ದಾಸೋಹ ಮುಂದುಗೊಂಡು ಸಕಲ ಕಾರ್ಯಂಗಳನೆಲ್ಲ 'ಜ್ಞಾನರೂಪದಿಂದ' ಗುರುಲಿಂಗಜಂಗಮ ದಾಸೋಹ ಮುಖಾಂತರವಾಗಿ ಸಾಗಿಸುತ್ತ ಪರಮ ಸುಜ್ಞಾನಿಗಳೆನಿಸಿ ಪ್ರಪಂಚದಲ್ಲಿರ್ದರೂ ಲೋಕಾಪವಾದವನ್ನು ಹೊರದೆ ನಿವೃತ್ತಿ ಮುಖದಿಂದ ನಿಷ್ಪ್ರಪಂಚಿಗಳಾಗಿ ಸುಜ್ಞಾನದಿಂದ ಸತ್ಕಾಯಕವನ್ನು ಅಂತರ್ಧ್ಯಾನ ಬಹಿಃಕ್ರಿಯೆಗಳಲ್ಲಿ ಸರಿಯಾಗಿ ಮಾಡುತ್ತಿರಬೇಕು. ಹೇಗಂದರ "ಶರೀರವೆಂದೆಂಬುವ' ಹೊಲನ ಹಸನ ಮಾಡಿ ಪರತತ್ವ ಬೆಳೆಯನ್ನು ಬೆಳೆದುಣ್ಣಿರೋ", ಎಂದು ಸಪ್ಪಣ್ಣ ಶಾಸ್ತ್ರಿಗಳು ಹೇಳಿದ್ದಾರೆ. ಇದಲ್ಲದೆ, ಅನಂತ ಶಿವಕವಿಗಳು ಮತ್ತು ಪೂರ್ವ ಪುರಾತನರು ಬಸವಾದಿ ಪ್ರಮಥರು ನೂತನ ಪುರಾತನರು ಸುಜ್ಞಾನ ಕೃಷಿಗನುಸಾರವಾಗಿ ಪಾರಮಾರ್ಥ ಕೃಷಿವಚನಗಳಲ್ಲಿ ತಮ್ಮ ನಿಜದರಿವಿನ ನೆಲೆಯನ್ನು ಸೂಚಿಸಿದ್ದಾರೆ. ಕೆಲವರು ಪದರೂಪವಾಗಿ ಹೇಳಿದ್ದಾರೆ.

ಆದ್ಯರ ವಚನದಂತೆ ನಡೆ ನುಡಿ ಸಿದ್ಧಾಂತಕ್ಕೆ ಪ್ರಾಮಾಣ್ಯವಾಗಿ ಗುರುವಚನಂಗಳಾದ ಜಗದ್ಗುರು ಬಸವಾದಿ ಪುರಾತನರ ವಚನಂಗಳನ್ನು ಕೇಳಿ ತಿಳಿದು ಆಚರಿಸಿದರೆ, ವೀರಶೈವಾಚಾರ ತತ್ಪರರಾಗಿ ಪರಿಪೂರ್ಣ ಭಾವದಿಂದ ಸುಜ್ಞಾನ ಸಂಪನ್ನರಾಗಿ ನಿಜೈಕ್ಯ ಸಂಪದವನ್ನು ಪಡೆದು ನಿಜಾನಂದದಲ್ಲಿ ಪರಮುಕ್ತರಾಗುವದಕ್ಕೆ ಸಂಶಯವಿಲ್ಲ.

ಮನುಷ್ಯ ಮಾತ್ರ ಯಾವತ್ತರಲ್ಲಿ ಜ್ಞಾನಾಂಕುರವು ಇದ್ದದ್ದೇ ಸರಿ. ಅಜ್ಞಾನ ಸಸಿಯನ್ನು ವರ್ಧನ ಮಾಡಬೇಕಾದರೆ ದುರ್ಗುಣವೆಂಬ ಕಸವ ತೆಗೆದು ಸತ್ಕ್ರಿಯೆ ಎಂಬ ಒಡ್ಡು ಕಟ್ಟಿ ಚತುರ್ವಿಧ ಭಕ್ತಿ ಎಂಬ ಚೌಕು ಮಡಿಗಳ ಮಾಡಿ ಸದ್ವಿವೇಕವೆಂಬ ನೀರನುಣಿಸಿ ಸಮತೆ ಸೈರಣೆ ಎಂಬ ಗೊಬ್ಬರವನಿಟ್ಟು ದುರ್ವಿವೇಕವೆಂಬ ಅಜ ಪಶುಗಳು ಮುಟ್ಟದಂತೆ ಸತ್ಸಂಗ

ವೆಂಬ ಬೇಲಿಯನ್ನಿಕ್ಕಿ ಸಸಿಯು ಫಲಹಿದರೆ ಪಸುರಾಗಿ ಪಲ್ಲೈಸಿ ಸುಜ್ಞಾನವೆಂಬ ಹೂವಾಗಿ ಮಹಾಜ್ಞಾನವೆಂಬ ಹಣ್ಣಾಗಿ ಪರಿಪೂರ್ಣ ಜ್ಞಾನವೆಂಬ ತೊಟ್ಟು ಬಿಟ್ಟು ಆನಂದವಂಬ ರಸ ಒಸರುತ್ತಿರ್ಪುದು. ಇದಕ್ಕೆ ಸಾಕ್ಷಿ, ವಚನ— "ಬೆಳೆದ ಭೂಮಿಯೊಳೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು, ಎಚ್ಚರಲೀಯದು ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯ ಲಿಂಗ ತಂದೆ ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ" ಎಂದು ಬಸವರಾಜದೇವರು ಜ್ಞಾನ ಸಸಿಯನ್ನು ವರ್ಧನ ಮಾಡಬೇಕೆಂದು ಲೌಕಿಕರು ಗುರೂಪಾವಸ್ಥೆಯ ಮಾಡುವ ರೀತಿಯನ್ನು ಸೂಚಿಸುವದಕ್ಕಾಗಿ ನುಡಿದುಕೊಂಡಿದ್ದಾರೆ.

ವೃತ್ತಿ ಜ್ಞಾನವು ಸಕಲ ಪ್ರಾಣಿಗಳಲ್ಲಿ ತಕ್ಕ ಮಟ್ಟಿಗೆ ಇದ್ದದ್ದು. ಆ ಜ್ಞಾನವು ಸ್ಥಿರಚರ ಪ್ರಾಣಿಗಳಲ್ಲಿ ಪರೆ ಪಶ್ಯಂತಿ ಮಧ್ಯಮೆ ವೈಖರಿ ಎಂದು ನಾಲ್ಕು ಪ್ರಕಾರ ಬೇರ ಬೇರೆಯಾಗಿ, ವೃಕ್ಷಾದಿಗಳಲ್ಲಿ ಪರೆ ಎನಿಸಿ ಸರ್ಪಾದಿಗಳಲ್ಲಿ ಪಶ್ಯಂತಿ ಎನಿಸಿ ಪಶುಪಾದಿಗಳಲ್ಲಿ ಮಧ್ಯಮೆಯಾಗಿ ಮನುಷ್ಯರುಗಳಲ್ಲಿ ವೈಖರಿಯಾಗಿ ತಾಲವ್ಯ ದಂತವ್ಯ ಮೂಲವ್ಯದಿಂದ ಅಕ್ಷರಾತ್ಮಕ ರೂಪವಾಗಿರ್ದು ಸಕಲವೆಲ್ಲವನು ಅರಿದು, ಆದರ ಅರ್ಥ ತಿಳಿಯುವಂತೆ ನುಡಿದು ಆದರಂತೆ ಬರೆದು ಮತ್ತೂ ಹೇಳಿ ಕೇಳಿ ಮಾಡಿ ತೋರಿಸುವ ಸರ್ವ ಲಕ್ಷಣ ಸಂಪನ್ನತ್ವವಿರ್ದು ಅನುಭಾವ ಮುಖಾಂತರದಲ್ಲಿ ಪ್ರತ್ಯಕ್ಷ ಮಾಡಿಕೊಡುತ್ತ ಇರ್ಪುದು ಆ ವೈಖರಿಯು ಆಯಾಯ ಪ್ರಾಣಿಗಳಿಗ ತಕ್ಕ ತಕ್ಕ ಹಾಗೆ ಅದರದರ ಸ್ವಭಾವದಿಂದ ಜೀವನೋಪಾಯಕ್ಕ ಆಹಾರವನ್ನೇ ತಿಂದುಕೊಂಡು ಪರಿಣಾಮಿಸ-ವಷ್ಟಕ್ಕೆ ಪ್ರವೃತ್ತಿಯಾಗಿ ವೃತ್ತಿಜ್ಞಾನವೆಂದು ಹೇಳಿಸಿಕೊಂಬುವುದು ಆದರೆ ಮನುಷ್ಯರಲ್ಲಿ ಮಾತ್ರ ವಿಚಿತ್ರ ವೈಖರ್ಯಾವಿ ಚಾತುರ್ಯದಿಂದ ಆ ಜ್ಞಾನವು ತಾನು ತನ್ನರಿವು ಶಿವತ್ವವು ಬೇರೆ ಎಂಬ ತ್ರಿಪುಟಿರೂಪವಾಗಿ ಭಿನ್ನ ಜ್ಞಾನವೆನಿಸಿಕೊಂಡು ಜ್ಞಾತೃ ಜ್ಞಾನ ಜ್ಞೇಯವೆಂಬ ಪೆಸರಂ ಪಡೆದು ಆವಾವ ಕಾರ್ಯವನ್ನಾದರೂ ಸಾಧಿಸಿ ಕೊಡುವದಕ್ಕೆ ತಾನೇ ಮುಖ್ಯ ಸಾಧನವಾಗಿದೆ

ಆ ವೃತ್ತಿಜ್ಞಾನವು ಆಹಾರವ್ಯವಹಾರಂಗಳ ಪೂರ್ತೆಗೆ ಎಷ್ಟ ಚಾತುರ್ಯವಾಗಿ ಕಂಡ ಕಾಲಕ್ಕೂ ಜೀವನ ಸಂರಕ್ಷಣೋಪಾಯಕ್ಕೆ ಉಪಯೋಗವಾಗುವದಲ್ಲದೆ ಸುಜ್ಞಾನವಾಗಲರಿಯದು ತನ್ನ ತಾನರಿಯದ ಕಾರಣ ಅಜ್ಞಾನವೆನಿಸುವದು. ಆ ಭಿನ್ನ ಜ್ಞಾನವಾದರೂ ಸುಜ್ಞಾನ ದಂಶವಾದ ಕಾರಣ ವಿಚಿತ್ರ ವೈಖರ್ಯಾದಿ ವಾಚ್ಯರೂಪದಿಂಥಿರ್ದು ಅಕ್ಷರಾತ್ಮಕವಾಗಿ ಸಕಲವೆಲ್ಲವನು ಅರುಹಿ ಕೊಡುವಲ್ಲಿ ಪ್ರಕಾಶ ರೂಪವಾಗಿರ್ದ ಕಾರಣ ಮನುಷ್ಯರಲ್ಲಿ ಮಾತ್ರ ಆ ವೃತ್ತಿಜ್ಞಾನವನ್ನೇ ಪ್ರವೃತ್ತಿ ಎಂದು ಹೇಳಬೇಕಾಯಿತು.

ಸುಜ್ಞಾನವೆಂಬುದು ಈ ವೃತ್ತಿಜ್ಞಾನಕ್ಕೆ ವಿಲಕ್ಷಣವಾಗಿ ತೇಜೋಮಯ ವಾಗಿ ಪರಂಜ್ಯೋತಿ ಸ್ವರೂಪವಾಗಿ ನಿರುಪಾಧಿಕ ಜ್ಯೋತಿ ಎನಿಸಿ ಅಜ್ಞಾನವೆಂಬ ಮಾಯಾಂಧಕಾರವನು ಸಂಹರಿಸಿ, ಮಹಾ ಪ್ರಭೆಯಿಂದ ತನ್ನ ನಿಜವನರುಹಿಸಿಕೊಡುವಲ್ಲಿ ನಿತ್ಯಾನಿತ್ಯ ವಸ್ತು ವಿವೇಕ ಇಹಮೋತ್ತರ ಫಲಭೋಗ ವಿರಾಗ ಶಮ ದಮ ತಿತಿಕ್ಷ ಉಪರತಿ ಶ್ರದ್ಧ ಸಮಾಧಿಗಳೆಂಬ ಸಮಾಧಿ ಷಟ್ಸಂಪತ್ತು ಮುಮುಕ್ಷತ್ವವೆಂಬ ಸ್ಥಿತಿಯನ್ನುಂಟುಮಾಡಿಕೊಟ್ಟು ಸರ್ವಜ್ಞತ್ವವಾಗಿ ಸುಜ್ಞಾನವೆನಿಸಿತ್ತು. ಆದರ ಆ ಜ್ಞಾನದಲ್ಲಿ ಅನಂತ ಪ್ರಕಾರದ ಭೇದಗಳುಂಟು. ಅವುಗಳೆಲ್ಲ ಸುಜ್ಞಾನಕ್ಕೆ ದೂರಾಗಿ ಕಾಣಬರು ತ್ತಿಹವು. ಹ್ಯಾಗೆಂದರೆ, ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನ, ಮರ್ಕಟ ಜ್ಞಾನ, ವಿಹಂಗಮಜ್ಞಾನ ಮೊದಲಾದವು ಜ್ಞಾನಂಗಳು ಅಹುದಾದಾಗ್ಯೂ ಮತ್ಸ್ಯ ಕೂರ್ಮ ಗಾರ್ದಭಾದಿ ಮೃಗಪಶು ಪಕ್ಷಿ ಜಲಜಂತುಗಳಲ್ಲಿ ಆಶ್ಚರ್ಯ ರೂಪದಿಂದ ಇದ್ದಾಗ್ಯಾದರೂ ಅವುಗಳೆಲ್ಲ ಅಜ್ಞಾನವೇ ಹೊರತು ಸುಜ್ಞಾನ ವಾಗಲರಿಯವು

ಈ ಸುಜ್ಞಾನವೆಂಬುದು ಬಹಿರಂತರಂಗದಲ್ಲಿ ಒಳಹೊರಗೆ ಒಂದಾಗಿ ಸಕಲೇಂದ್ರಿಯ ಸಮಸ್ತ ಕರಣಾದಿಗಳ ಮುಖಂಗಳಗೆ ತಾನೇ ನೇತ್ರವಾಗಿರ್ದು ತನಗಾವ ಮೇರೆ ಇಲ್ಲದೆ, ಸಕಲವೆಲ್ಲವನು ಅರಿವಲ್ಲಿ ಅಣುವಿಗಣುವಾಗಿ ಮಹತ್ತಿಗೆ ಮಹತ್ತಾಗಿ ಅಣೋರಣೀಯಾನ್ ಮಹತೋ ಮಹೀಯಾನ್ ಎಂಬ ಶೃತಿ ಪ್ರಮಾಣದಿಂದ ಸಕಲಚರಾಚರಂಗಳಲ್ಲಿ ವ್ಯಾಪಕವಾಗಿರ್ದು ಜಗತ್‌ಪರಿ ಪೂರ್ಣವಾಗಿ ಜಗದ್ವಿಲಕ್ಷಣವಾಗಿ ಪಂಚಭೂತಂಗಳ ತತ್ವ ಸಮುದಾಯಕ್ಕೆ ಅವಿರಳವಾಗಿ ಹೊಂದಿ ಹೊಂದದ ಹಾಗಿರ್ದು ಸಕಲವೆಲ್ಲಕ್ಕೂ ತಾನೇ ಸಾಕ್ಷಿ ರೂಪನಾಗಿರ್ದು ತಾನೊಂದರಿಂದರುಹಿಸಿಕೊಳ್ಳದೆ ತಾನೇ ತನ್ನಯ ಮತ್ತು ತನಗೆದುರಾದ ಸಮಸ್ತ ಜಡಾಜಡತತ್ವಂಗಳನರಿಯಬಹುದಾದುದರಿಂದ ನಿಜದರು ಹೆನಿಸಿ ಅರುಹಿನೊಳಿನಿತಾದರೂ ಮರವೆ ಇಲ್ಲದುದರಿಂದ ಮಹಾಜ್ಞಾನವೆಂದು ಹೇಳಿಸಿಕೊಂಬುತ್ತಿಹುದು.

ಅರಿವೇ ಸಮಸ್ತ ಪ್ರಾಣಿಗಳಲ್ಲಿ ಪರಿಪೂರ್ಣವಾಗಿರ್ದು ಅವರವರಿಗವರಂ ತೆಯಾಗಿ, ಆಯಾಯ ಘಟಂಗಳಲ್ಲಿ ಆದರದರಂತೆಯಾಗಿ ಇದ್ದಾಗ್ಯಾದರೂ ತಾನು ವಿಲಕ್ಷಣವಾಗಿದೆ ವೃತ್ತ:— "ಅರಿವೇ ಸಮಸ್ತ ವಿಷಯಾಗಮ ಮುಖ್ಯವದೆ ಏಕ ಮುಕ್ತಿದಂ। ಪೊರಗಣ ವೇದಾಚರಣೆ ಭಾವಿಪೊಡೇಂ ವಿಧಿಯಾದೊಡೇಂ ವ್ರಥಾ। ಜರಿವುದು ಬುದ್ಧಿಯೇ ಶರಣರೆಂತಿಹರೆಂಬುದ ನೊಲ್ದು ನೋಡದೆ। ಬರುತನ ದುಕ್ತಿ ಚಾಪಲದ ಗೌರವದಿಂ ಫಲವೇನು ಶಿವಾಧವಾ॥" ಎಂದುಂಟಾಗಿ ಮತ್ತು "ಅರಿವೇ ಬರಿಯರಿವೆ ನಿನ್ನ ತೆರನರಿಯೆ ಮುಕ್ತಿಯಹುದು ನಿಶ್ಚಯವಂತೆ॥

ಅರಿವೆಬರೆಯರಿವೆ ॥ ಎಂಬ ಪದ್ಯದಲ್ಲಿ ನಿಜಗುಣಾರಾಧ್ಯರು ಜ್ಞಾನೋತ್ಕರ್ಷ ವನ್ನು ಬಣ್ಣಿಸಿದ್ದಾರೆ

"ಯಥಾ ಬೀಜಂ ತಥಾಂಕುರಂ" ಎಂದ ಹಾಗೆ ಈ ಸುಜ್ಞಾನವು ಸ್ಫಟಿಕದ ಘಟದಂತೆ ನಿರ್ಮಲವಾಗಿದ್ದು, ಜಲದಂತೆ ಯಾವ ವರ್ಣದಲ್ಲಿ ಕಲಿಸಿದರೂ ಆ ವರ್ಣವಾಗಿ ಒಪ್ಪುವಂತೆ, ಮನೋವರ್ತನೆ ಇದ್ದಹಾಗೆ, ಸಕಾಮಿಗಳಿಗೆ ಸಕಾಮವಾಗಿ ಭಿನ್ನಜ್ಞಾನವೆನಿಸಿ, ನಿಷ್ಕಾಮಿಗಳಲ್ಲಿ ಸಹಜ ಸುಜ್ಞಾನವಾಗಿ ಶಿವತತ್ವ ಸ್ವರೂಪವಾಗಿರ್ಪುದು.

ಪರಶಿವ ಮೂರ್ತಿಯ ನಿಜವನರಿಯಬೇಕೆಂದು ಬೇರೆ ಬೇರೆ ಭಿನ್ನ ಕರ್ಮಿಗಳು ಆಯಾಯ ಮತದ ಶಾಸ್ತ್ರಾನುಸಾರದಂತೆ, ಭಿನ್ನ ಜ್ಞಾನ ಕರ್ಮ ಗಳಿಂದ ಯೋಗ ದಾನ ಜಪ ನೀತಿ ಯೋಗ ಪೂಜಾದಿಗಳು ಮೊದಲಾದ ಕರ್ಮಗಳಿಂದ ಶಿವನ ನಿಜವನರಿದೆನಂದರೆ, ಆ ನಿಜವು ಸಾಧ್ಯವಾಗದು ಆ ಭಿನ್ನ ಕರ್ಮಂಗಳಲ್ಲಾದರೂ ಪೂರ್ವ ಭಾಗದ ಶಾಸ್ತ್ರ ಪ್ರಮಾಣದಂತೆ ಅದರದರ ತಕ್ಕಮಟ್ಟಿಗ ಫಲ ಪದಂಗಳ ಕೊಟ್ಟ ಶಿವನು ಮರೆಯಾಗಿರ್ಪ ನಲ್ಲದೆ, ಸುಜ್ಞಾನಿಗಳಿಗೆ ಕರತಳಾಮಳಕವಾಗಿ, ಪ್ರತ್ಯಕ್ಷವಾದಂತೆ ಬಹು ಮತದ ಭಿನ್ನ ಕರ್ಮಿಗಳಿಗೆ ಪ್ರತ್ಯಕ್ಷವಾಗಲರಿಯನು ಅದು ಕಾರಣ "ಜ್ಞಾನೇನ ವಿನಾ ನಾನ್ಯಃ ಪಂಥಃ" ಎಂಬ ಶೃತಿಗನುಸಾರವಾಗಿ "ನಂಬೋ ಜ್ಞಾನ ವನ್ನೇ" ಎಂದು ನಿಜಗುಣಶಿವಯೋಗಿಗಳು ಹೇಳಿದ್ದಾರೆ ಆದಾಗ್ಯೂ ಜ್ಞಾನ ದಲ್ಲಿ ಕಾಲಜ್ಞಾನ ಖಂಡಜ್ಞಾನ ಶಾಸ್ತ್ರಜ್ಞಾನ, ಅಕ್ಷರಜ್ಞಾನ ಪದಾರ್ಥಜ್ಞಾನ, ಮೊದಲಾದ ಅನಂತ ಜ್ಞಾನಭೇದಗಳುಂಟು ಆದರೆ ವೀರಶೈವ ಸುಜ್ಞಾನಕ್ಕೆ ಸಮವಾದಾವೇ? ಆಗಲರಿಯವು.

ಕೆಲ ಕೆಲವು ಭಿನ್ನ ಜ್ಞಾನದ ಅಲ್ಪ ಮತದವರಿಗೆ ಕಿಂಚಿಜ್ಞತ್ವದಿಂದ ಅಷ್ಟಸ್ಕಷ್ಟೆಯಾಗಿ ಅಲ್ಪಜ್ಞಾನವಾಗಿರುತ್ತಿಹುದು. ಆದರಿಂದ ಮುಕ್ತಿಯಾಗಲಾ ರದು. ಅಥವಾ ಕರ್ಮದಿಂದ ಮುಕ್ತಿಯಾಗುವದೆಂದು ಯಾವ ಶಾಸ್ತ್ರಗಳ ಲ್ಲಾದರೂ ಹೇಳಿರುವದಿಲ್ಲ. ಕರ್ಮದಿಂದ ಫಲಪದಂಗಳುಂಟಲ್ಲದೆ ನಿಜ ಮೋಕ್ಷವಿಲ್ಲವು. ಸಾಕ್ಷಿ "ಶೀತ ಗ್ರಹೀತ ವಾನರ ಗಣಂ ಜ್ವಲಿತಾನಲ ಕಾಂಕ್ಷೆಯಿಂ ಪ್ರಿಯ। ತ್ಮಾತುರವಾಗಿ ಮಿಂಚು ಪುಳುವಂ ಪರಿ ಕಲ್ಪಿಸು ವಂತೆ ವೀರಶೈ। ವೇತರ ಧರ್ಮಮಾರ್ಗವಿಡಿದೂರ್ಜಿತಮುಪ್ಪ ವಿಶಿಷ್ಟ ಮುಕ್ತಿ ಸೌ। ಖ್ಯಾತಿಶಯಾಭಿರಾಮ ಪದಂ ಬಿಡದೈದುವರ್ ಶಿವಾಧವಾ ॥ ಎಂದು ಮಾಯಿದೇವ ಪ್ರಭುಗಳು ಹೇಳಿದ್ದಾರೆ ಮತ್ತು ಕೋಟಿ ಜನ್ಮಾಂತರ ಗಳಲ್ಲಿ ಆದ ಮೋಕ್ಷಾಪೇಕ್ಷೆಯಿಂದ ವೀರಶೈವೇತರ ಧರ್ಮ ಮಾರ್ಗದಿಂದಾ ಚರಿಸಿ ಕೋಟಲೆಗೊಳ್ಳುತ್ತಿಹರು. "ಏಕೇನ ಜನ್ಮ ಮುಕ್ತಿರ್ವೀರಾಣಾಂ ತು

ಮಹೇಶ್ವರೀ ॥ " ಎಂಬಾಗಮ ವಾಕ್ಯ ಉಂಟು. ಮತ್ತು " ಅನ್ಯಶೈವಂತು ತತ್ಸರ್ವಂ । ಫಲಮಲ್ಪ ಕ್ರಿಯಾ ಬಹು ಫಲಂ ವೀರಶೈವಂತು ಶಾಂಕರೀ ॥ " ಎಂಬಾಗಮ ಉಂಟು. ಮತ್ತು "ಬಹು ವಿಧ ದುಃಖ ಸಾಧ್ಯವಹ ಮುಕ್ತಿ ಪದಂ ಭವಕೋಟಿಯಲ್ಲಿ ನಿ । ರ್ವಹಿಸುವದಕ್ಕೆ ಕೋಟಲೆಗೊಳ್ಳುತ್ತಿಹರೊಯ್ಯನೆ ಜನ್ಮ ಒಂದರೊಳ್ । ವಿಹಿತ ಸುಖೈಕ ಸಾಧ್ಯವಹ ಮುಕ್ತಿ ಪದಂ ದೊರೆಕೊಂಡೊಡೊಲ್ಲೆನೆಂದಿಹುದಿದು ಪಾಪ ಶೇಷದ ಫಲವೈಸ ವಿಚಾರವದೇಂ ಶಿವಾಧವಾ " ಎಂದುಂಟಾಗಿ, ಸುಜ್ಞಾನ ಒಂದಿಲ್ಲದೆ ಏನೇನು ಪ್ರಯತ್ನಂಗಳನ್ನು ಮಾಡಿದರೂ ಅಜ್ಞಾನಿಗಳಾಗಿ ಕೆಟ್ಟು ಹೋಗುತ್ತಿಹರು ಸುಜ್ಞಾನ ಉದಯವಾದ ಮಾತ್ರದಲ್ಲಿಯೇ ಸ್ವಪ್ನದಲ್ಲಿ ಕಂಡ ಅನಂತ ದುಃಖಂಗಳೆಲ್ಲ ಎಚ್ಚರವಾದಲ್ಲಿ ಇಲ್ಲವಾದಂತೆ, ಅನಂತಕೋಟಿ ಭವಬಂಧನಾದಿ ದುಃಖಂಗಳೆಲ್ಲ ತನ್ನ ತಾ ತಿಳಿದ ಮಾತ್ರದಲ್ಲಿಯೇ ನಾಶವಾಗುತ್ತಿರುವ ಈ ಸುಜ್ಞಾನವನ್ನು ಶಿವಾಂಶೀಭೂತರಾದ ಸತ್ಯ ಸದ್ಭಕ್ತ ಜ್ಞಾನಿಗಳಿಗೆ ಕಾಣಬಹುದು ಉಳಿದ ಅನ್ಯ ಮತಸ್ಥರಿಗೆ ಅಶಕ್ಯವಾಗಿರ್ಪುದು.

"ಅಧಮಂ ತು ಕುಲಾಚಾರಂ। ಭೃತ್ಯಾಚಾರಂತು ಮಧ್ಯಮಂ॥ ಉತ್ತಮಂ ಜ್ಞಾನಾಚಾರಂ ಸ್ವೇಚ್ಛಾಚಾರಂ ಮಹಾತ್ಮನಾಂ ॥" ಎಂದು ಶಿವಜ್ಞಾನಿಗಳಾದ ಶರಣರು ಸ್ವತಂತ್ರ ಶೀಲರಾಗಿ, ಅಜ್ಞಾನವನ್ನೇ ಕ್ರಿಯಾ ರೂಪದಿಂದ ಬಹಿರಂಗದ ಕಾಯಕವ ಮಾಡಿಕೊಂಡು ಸಕಲ ಮಹತ್ವಾತಿಶಯವನ್ನು ಮೆರೆವುತ್ತ ಅನಂತ ರೀತಿಯ ಕಾಯಕಗಳಿಂದ " ದಾಸೋಹಂ ಸ್ವಯಂ ಶಿವಃ " ಎಂಬ ಪ್ರಮಾಣದಂತೆ ಶಿವದಾಸೋಹಿಗಳಾಗಿರುತ್ತಿಹರು ಅದೆಂತೆಂದಡೆ, ಕಟ್ಟಿಗೆಯನ್ನು ಮಾರಿ ಮೊದಿಯ ನುಲಿಯ ಹೊಸೆದು ಬಿದ್ದಕ್ಕಿಯನಾಯ್ದು ಹೊಡೆ ಹುಲ್ಲ ತರುತ್ತ ಸುಂಕದ ಗುತ್ತಿಗೆಯ ಮಾಡುತ್ತ ಹಾಸ್ಯವನಾಡುತ್ತ ಕೋಡಗವನಾಡಿಸುತ್ತ ಢಕ್ಕೆಯ ಬಾರಿಸುತ್ತ ಬುದ್ದಲಿಯ ಮಾಡುತ್ತ ಕೆರವ ಹೊಲಿಯುತ್ತ ಕೈಕೂಲಿ ಮಾಡುತ್ತ ಕೃಷಿಯ ಮಾಡುತ್ತ ಅಸಿಯ ಮಾಡುತ್ತ ವಾಣಿಜ್ಯಾದಿ ವ್ಯಾಪಾರ ಮಾಡುತ್ತ ರಾಜ್ಯವನಾಳುತ್ತ ಮಂತ್ರಿ ಪಟ್ಟವನಾಳುತ್ತ ನೇಯುತ್ತ ಪಶುಗಳ ಕಾಯುತ್ತ ಕೊಟ್ಟಣವ ಕುಟ್ಟುತ್ತ ಕೊಡ ನೀರು ಹೊರುತ್ತ ಈ ಪ್ರಕಾರವಾದ ಅನಂತ ಕೃತ್ಯಾದಿಗಳಿಂದ ಭಕ್ತಿ ಸತ್ಪಥ ಮಾರ್ಗವಾಗಿ ಸತ್ಯಶುದ್ಧ ಕಾಯಕವೆಂದು ಶಿವ ಮಹಿಮಾತಿಶಯವನ್ನು ಮೆರೆಯುತ್ತ ಶಿವಭಕ್ತಿ ಪ್ರಭಾವದುನ್ನತಿಯಂ ಪಸರಿಸುತ್ತ ಕೊಡುವಾತ ಕೊಂಬಾತ ಶಿವನೆಂಬ ಭಾವದಿಂದ ಪರಿಪೂರ್ಣ ಜ್ಞಾನವೆನಿಪ ಸುಜ್ಞಾನವನ್ನೇ ಸತ್ಕಾಯಕವಾಗಿ ಆಚರಿಸಿದರಲ್ಲದೆ, ಭವಿಗಳಂತೆ ದೇಹೋಪಾಧಿಯಿಂದ ಘಟರಕ್ಷಣಾರ್ಥಕಾಗಿ ದುರಾಸೆಯಿಂದ ಅಜ್ಞಾನಿಗಳಾಗಿ. ಭವಭವಾಂತರದಲ್ಲಿ ತಿರುಗುತ್ತಿರುವ ಸಂಸಾರವನ್ನು ಶರಣರು ಮಾಡಲಿಲ್ಲ.

ಆ ಶರಣರ ಕಾಯಕವೇ ಪಾರಮಾರ್ಥ ಜ್ಞಾನ ಸತ್ಕಾರ್ಯಕವಾದ ಕಾರಣ ಈ ಲೋಕದ ಸದ್ಭಕ್ತ ಸದಾಚಾರಿಗಳಿಗೆ ಮುಕ್ತಿ ಸೋಪಾನವಾಗಿ ಅವರ ಚಾರಿತ್ರಂಗಳೇ ಮೋಕ್ಷ ಮಾರ್ಗಕ್ಕೆ ದೀವಿಗೆಯಾಗಿ, ಅವರು ನುಡಿದ ವಚನಂಗಳೇ ಮಂತ್ರಮಯವಾಗಿ ಅವರು ಮೆಟ್ಟಿನ ಭೂಮಿಯೇ ಪುಣ್ಯಕ್ಷೇತ್ರವಾಗಿ ಅವರು ಮಿಂದ ಉದಕಂಗಳೇ ಎಂಭತ್ತೆಂಟು ಕೋಟಿ ಪುಣ್ಯತೀರ್ಥಂಗಳಾಗಿ ಅವರ ಸತಿಯರೇ ಮಹಾಜ್ಞಾನ ಶಕ್ತಿಯರಾಗಿ ಅವರ ಸುತರೇ ಮಹಾ ವೀರಗಣರಾಗಿ ಕೊಡುವಲ್ಲಿ ಕೊಂಬಲ್ಲಿ ನಡೆವಲ್ಲಿ ನುಡಿವಲ್ಲಿ ಸರ್ವದರಲ್ಲಿ ಸುಜ್ಞಾನವನ್ನೇ ಪ್ರಕಟಿಸುತ್ತ ಶಿವಹೃದಯರಾದ ಕಾರಣ ಸಕಲ ಕಾರ್ಯಂಗಳಲ್ಲಿ ಶಿವಾಜ್ಞೆ ಎನುತ ಶಿವಜ್ಞಾನ ಸಾರಾಯರಾದ ಕಾರಣ ಶಿವಜ್ಞಾನವನ್ನೇ ಸ್ಥಾಪಿಸುತ್ತ ಸ್ಫಟಿಕದೊಳಗಣ ದೀಪದಂತೆ ಒಳಹೊರಗೆ ಜ್ಞಾನಮಯರಾಗಿ ಕಾಣಬರುತ್ತಿಹರು "ಸ್ವಯಮೇವ ಭವೇದ್ದೇಹಿ। ಸ್ವಯಮೇವವಿಲೀಯತೆ ॥ ವೃಕ್ಷೋತ್ಪತ್ತಿ ಬೀಜಾನಾಂ। ತದ್ವೃಕ್ಷಂ ಲೀಯತೆಪುನಃ॥ ಎಂದುಂಟಾಗಿ ಮತ್ತು "ರುದ್ರಲೋಕ ಭವಿಷ್ಯತಿ। ರುದ್ರಲೋಕ ಗಮಿಷ್ಯತಿ॥' ಎಂಬ ವಾಕ್ಯ ಪ್ರಮಾಣದಂತೆ ಸಕಲ ಜನ ಹಿತೋಪಕಾರಾರ್ಥವಾಗಿ ಲೋಕ ಪಾವನ ಕಾರ್ಯ ಸಮರ್ಥತ್ವದಿಂದ ರುದ್ರಲೋಕದಿಂದ ಭೂಲೋಕಕ್ಕೆ ಅವತರಿಸಿ ಸಕಲರಿಗೂ ಸನ್ಮಾರ್ಗ ಸದ್ಬೋಧೆಯಂ ಬೋಧಿಸಿ ಬೋಧಿಸಿದಂತೆ ಈ ಲೋಕದ ಭಕ್ತರಿಗೆ ನಡೆನುಡಿ ಸಿದ್ಧಾಂತವಾಗುವ ಹಾಗೆ ತಾವು ಅದರಂತೆ ಆಚರಿಸಿ ತೋರಿಸಿ ಸಂಸಾರದಲ್ಲಿರ್ದರೂ ನಿಃಸಂಸಾರಿಗಳಾಗಿ ಷಟ್ಕೃಷಿ ಲೋಕ ವ್ಯವಹಾರಂಗಳ ಮಾಡಿದಾಗ್ಯಾದರೂ ಭಕ್ತಿ ಸತ್ಕಾರ್ಯಕವೆಂದನಿಸಿ ಮಾಡಿ ನೀಡಿ ದೃಷ್ಟ ಧಾರಿಷ್ಟ್ಯಾದಿಗಳಿಂದ ತಾವಾಚರಿಸಿ ಇದರಂತೆ ಮಾಡಿ ಸಮಸ್ತರೂ ಮುಕ್ತರಾಗಲೆಂದು ತೋರಿಕೊಟ್ಟು ಮತ್ತನಂತ ರೀತಿಯಿಂದ ಅವರವರ ಪಾಪ ಕರ್ಮಂಗಳಂ ಪರಿಹರಿಸಿ ಲೋಕಪಾವನ ಮಾಡಿ ಪುನಃ ತಮ್ಮ ನಿಜದೊಳ್ಬೆರೆದು ಶಿವಲೋಕವನ್ನೈದುತಿಹರು

ಈಗಲಾದರೂ ಜ್ಞಾನ ಕಲಾತ್ಮಕರಾದ ಸುಜ್ಞಾನಿಗಳೆಂದೆನಿಸುವ ಶ್ರೀ ವೀರಶೈವಾಚಾರ ಸದ್ಭಕ್ತರು ಆದ್ಯರ ವಚನ ಪ್ರಮಾಣದಂತೆ ಜ್ಞಾನಮಯರಾಗಿ ಆಚರಿಸಿ ನಡೆನುಡಿ ಸಿದ್ಧಾಂತರಾಗಿ ಮಹಾಜ್ಞಾನವೇ ಕ್ರಿಯೆಯಾಗಿ ಸಹಜಾನಂದದಿಂದ ಲೌಕಿಕರೊಡನೆ ಕೂಡಿ ಲೌಕಿಕ ವರ್ತನದಿಂದಿದ್ದರೂ ಮಾಯಾ ಮೋಹದಿಂದ ಜಡ ಸಂಸಾರಿಗಳಾಗದೆ ನಿರ್ಮೋಹದಿಂದ ಕಮಲ ಪತ್ರದಂತೆ ತಾವು ಸಂಸಾರದೊಳಗಿರ್ದರೂ ಜ್ಞಾನಸಾಮರ್ಥ್ಯದ ಬಲದಿಂದ ತಮ್ಮೊಳಗೆ ಸಂಸಾರವಿಲ್ಲದಂತೆ ಮಹಾ ಜಾಗ್ರತರಾಗಿ "ಜ್ಞಾನೀ ಸರ್ವತ್ರ ಲೋಚನಃ" ಎಂದು ಹಾಗೆ ತಾವು ಸರ್ವ ಕಾರ್ಯಂಗಳಲ್ಲಿ ಜ್ಞಾನವನ್ನೇ ಮುಂದುಗೊಂಡು ಆಚರಿಸಬೇಕು.

ಸುಜ್ಞಾನಿಯಾದ ಜ್ಞಾನ ಕಲಾತ್ಮನು ಲೌಕಿಕರ ಮಧ್ಯದಲ್ಲಿರ್ದು ತಾನು ಲೌಕಿಕರಂತೆ ವರ್ತಿಸಬೇಕಾದರೆ ತಾನು ಪರಿಪೂರ್ಣ ಜ್ಞಾನಿಯಾಗಿ ಜಗತ್ತೆಲ್ಲ ಏಕರೂಪಾಗಿ ಏಕಾತ್ಮನಾಗಿ ತಾನೋರ್ವನಲ್ಲದೆ ತನಗೆ ದೂರಾಗಿ ಜ್ಞಾನ ದೃಷ್ಟಿಗೆ ಇನ್ನೊಂದೇನೂ ತೋರದಾಗಿ ಕಂಡರೂ ಪರಮ ಜ್ಞಾನಿಯಾದ ಪೂರ್ಣನೆನಿಪ್ಪ ಶಿವಾದ್ವೈತನಾದ ಷಟ್‌ಸ್ಥಲ ಬ್ರಹ್ಮಿಯಾದ ನಿರಾಭಾರಿ ವೀರಶೈವಾವಧೂತನ ಅಂತರಂಗದ ಪೂರ್ಣ ಜ್ಞಾನ ಸ್ಥಿತಿಯು ಹೇಗಿರಬೇಕೆಂದರೆ, ಶೃತಿ ಸಾಕ್ಷಿ “ನೈವ ಶುದ್ಧಿರ್ನ ಚ ಶುದ್ಧಿರ್ನೈವ ವಂದಿತ ವಂದಿತಃ ॥ ನ ಪೂಜ್ಯ ಪೂಜಕ ವಿಧಿ । ನ ಶಿಷ್ಯೋರ್ನ ಗುರುಃ ಶಿವೆ ॥ ನ ಮಾತಾ ನ ಪಿತಾ ಭಾರ್ಯಾ । ನ ಚಾಂಡಾಲೋ ನ ಭೂಸುರಃ ॥ ನ ಗೌರ್ನ ಶುನಕೋ ಹಸ್ತಿ । ಗಾರ್ದಭೋ ವಾಪಿ ಭೇದತಃ ॥ ಉತ್ತಮಂ ಮಧ್ಯಮಂ ನೀಚಂ ಅನ್ಯೋನ್ಯಮಧಿಕಂ ಸಮಂ ॥ ವೀರಶೈವಾವಧೂತಶ್ಚ । ನಮೋಮಖಿಲಂ ಶಿವೆ ॥ ಎಂಬ ಶೃತಿ ಪ್ರಮಾಣದಂತೆ ಅಂತರ್ಜ್ಞಾನವುಳ್ಳಾತನಾಗಿ ಬಹಿರಂಗದ ವರ್ತನದಲ್ಲಿ ಅದ್ವೈತವಂ ಪ್ರಕಟಿಸದೆ ಸತ್ಕ್ರಿಯಾ ಸಮ್ಯಜ್ಞಾನದಿಂದ ವರ್ತಿಸುತ್ತ ಲೌಕಿಕರ ಮಧ್ಯದಲ್ಲಿರ್ದು ಲೋಕಾಚಾರದ ಸದ್ಭಕ್ತರುಗಳಿಗೆ ಪೂರ್ವಕ್ರಿಯೆಗಳಿಂದಾಚರಿಸುವ ಮಾರ್ಗವನ್ನು ತಾನೇ ನಡೆದು ತೋರಿಸಬೇಕಾದಲ್ಲಿ ಸದ್ವರ್ತನೆ ಸತ್ಕ್ರಿಯಾಚಾರದಿಂದ ನಡೆದು ತೋರಿಸಬೇಕಲ್ಲದೆ ಅಂತರಂಗದ ಅದ್ವೈತ ವರ್ತನವನ್ನು ಬಹಿರಂಗದ ಕ್ರಿಯೆಗಳಲ್ಲಿ ಬಳಸಬಾರದು ಜ್ಞಾನಿಗಳೆಂಬ ಮಹಾ ಪುರುಷರೇ ಸದಾಚಾರ ಸತ್ಕ್ರಿಯೆಗಳಿಂದ ವರ್ತಿಸದಿದ್ದರ ಲೌಕಿಕರು ಅನಾಚಾರಿಗಳಾಗಿ ಕೆಟ್ಟು ಹೋದಾರೆಂಬ ಕಾರುಣ್ಯದಿಂದ ಅಂತರ್ಜ್ಞಾನದ ಜ್ಞಾನವರ್ತನೆಯಲ್ಲಿ ಜ್ಞಾನದೃಷ್ಟಿಯಿಂದ ಸರ್ವ ಜೀವದಯಾಪಾರಿಗಳಾಗಿ ತಮ್ಮನು ಪರಿಪೂರ್ಣವಾಗಿ ಕಂಡಾಗ್ಯಾದರೂ ಬಹಿರಂಗದ ವರ್ತನೆಯಲ್ಲಿ ಸತ್ಕ್ರಿಯೆಯಿಂದ ಆಚರಿಸತಕ್ಕದ್ದಾಗಿದೆ

“ ಬಳಸದಿರದ್ವೈತವನು ಬಾಹ್ಯದಲಿ ನಿನ್ನೊಳಗೇಕೋ ಭಾವನೆಯೊಡಗೂಡು । ತಿಳಿದು ಸಮಯ ನಿಷ್ಠೆಗಲಿ ವೇದವಿದ ಭಕ್ತಿಗಳನಗಲದಿರು ” ಎಂದು ನಿಜಗುಣ ಶಿವಯೋಗಿಗಳ ವಾಕ್ಯ ಉಂಟಾಗಿ ಎಷ್ಟು ಪೂರ್ಣ ಸ್ಥಿತಿಯು ಬಂದಾಗ್ಯಾದರೂ ಜ್ಞಾನದಲ್ಲದ್ವೈತವಲ್ಲದೆ ಜಡಭೂತ ಕಾಯ ವರ್ತನೆಯ ಕ್ರಿಯೆಗಳಲ್ಲದ್ವೈತ ಉಂಟೆ ? ಇಲ್ಲವು. “ ಗುಪ್ತೋ ಮುಕ್ತ ಪ್ರಕಟೋ ಭ್ರಷ್ಟ” ಎಂಬ ಪ್ರಮಾಣ ಉಂಟಾಗಿ ಅದ್ವೈತವನ್ನು ಜ್ಞಾನದಲ್ಲಿಟ್ಟು ಗುಪ್ತವಾಗಿದ್ದರೆ ಮುಕ್ತನೇ ಆಹುದು ಆ ಅದ್ವೈತವನ್ನು ಪ್ರಕಟಿಸಿ ಬಹಿರಂಗದ ಕ್ರಿಯೆಗಳಲ್ಲಿ ಬಳಸಿದರೆ ಭ್ರಷ್ಟನೇ ಆಹುದು. ಇದು ಸರ್ವರಿಗೂ ಪ್ರತ್ಯಕ್ಷ ಪ್ರಮಾಣವಾಗಿ ಕಾಣಿಸುತ್ತಿಹುದು. ಹೇಗೆಂದರೆ ಪಶುಗಳಂತೆ ಮಾಯು ವರ್ತನವಿಲ್ಲದೆ ದುರಾಚಾರಿಯಾಗಿ ಅಕ್ಕ ತಂಗಿ, ತಾಯಿ ಆಯಿ, ಅತ್ತೆ, ನಾದಿನಿ, ಸೊಸೆ ಎನ್ನದೆ

ಉತ್ತಮ ಮಧ್ಯಮ ನೀಚ ಚಾಂಡಾಲಾದಿ ಜಾತಿಯ ಸ್ತ್ರೀಯರೆನ್ನದೆ ಕಾಮಾತುರನಾಗಿ ಪಶುಗಳಂತೆ ಕಂಡ ಕಂಡ ಸ್ತ್ರೀಯರನ್ನು ಭೋಗಿಸುತ್ತಿರುವ ಅಥವಾ ಅನಾಚಾರಿಗಳಿಗೆ ಎಷ್ಟು ಪುಣ್ಯದ ಮಾತುಗಳನ್ನಾಡಿದಾಗ್ಯಾದರೂ ಭ್ರಷ್ಟರೆಂದಾರಲ್ಲದೆ ಜ್ಞಾನಿಗಳಹುದೆಂದು ಮೆಚ್ಚಬಹುದೇ? ಮೆಚ್ಚಲರಿಯರು ಮತ್ತು ಪಿಶಾಚಿಗಳಂತೆ ಬತ್ತಲೆ ಇದ್ದು ಸ್ಮಶಾನದ ಅರಿವೆಯನ್ನುಟ್ಟು ತಿಪ್ಪೆಯೊಳು ಹೊರಳಾಡಿ ರಾಕ್ಷಸಾಹಾರವಾದ ಸುರೆ ಮಾಂಸಗಳಂ ಭುಂಜಿಸುತ್ತ ಭಂಗಿ ದತ್ತೂರಿ ಅಫು ಗಾಂಜಿ ಮೊದಲಾದ ಅಮಲಿನಲ್ಲಿ ಕಣ್ಣು ಮುಚ್ಚುತ್ತಲಿರುವ ಮಾದಿಗಾಚಾರದ ಮೂಳ ಹೊಲೆಯರ ವರ್ತನವು ಅದ್ವೈತವೆನಬಹುದೇ? ಈ ದುರ್ವ್ಯಸನಿಗಳಾದ ಅಜ್ಞಾನಿಗಳಿಗೆ ಯಾರಾದರೂ ಮೆಚ್ಚಾರೆ? ಮೆಚ್ಚಲರಿಯರು ಇದಲ್ಲದೆ ಬಾಲಕರಂತೆ ಮಲವ ಭುಂಜಿಸುತ್ತ ಮೂತ್ರದೊಳು ಹೊರಳಾಡುತ್ತ ಮಾನಾಪಮಾನದ ಹಂಗಿಲ್ಲದೆ ಬತ್ತಲೆ ಇರುತ್ತ ಜ್ಞಾನಹೀನರಾಗಿ ವರ್ತಿಸುವ ದುರಾಚಾರಿಗಳಿಗೆ ಯಾರಾದರೂ ಸುಜ್ಞಾನಿಗಳೆಂದಾರೇ? ಎನ್ನಲರಿಯರು ಮತ್ತು ವಿಟ ಪುರುಷರಂತೆ ಸ್ತ್ರೀಲಂಪಟಿಗಳಾಗಿ ಚಾತುರ್ಯದ ಜ್ಞಾನದ ಮಾತುಗಳನ್ನಾಡಿ ಮರುಳುಗೊಳಿಸಿ ಸ್ತ್ರೀಯರಿಗುಪದೇಶ ಮಾಡುವವರು ಏಕಾಂತ ವಾಸಕ್ಕೊಯ್ದು ತನು, ಮನ, ಧನವ ಗುರುವಿಗೆ ಸಮರ್ಪಿಸಬೇಕೆಂದು ಹೇಳಿ ಆ ಸ್ತ್ರೀಯರಂ ಭೋಗಿಸಿ ಆ ಸವಿಯಿಂದ ಪರಸ್ತ್ರೀಗಮನದ ಲಂಪಟವು ತಲೆಗೇರಿ ಅನ್ಯ ಸ್ತ್ರೀಗಮನ ಅನ್ಯ ದ್ರವ್ಯಾಪಹಾರಿಗಳಾಗಿ ಬ್ರಹ್ಮಜ್ಞಾನದ ಭ್ರಷ್ಟ ಹೊಲೆ ಮಾದಿಗರಿಗೆ ಯಾರು ಮೆಚ್ಚಬೇಕು? ಆದರೆ ಆ ಜೀವನ್ಮುಕ್ತನ ಸ್ಥಿತಿಯು ಪಶುವಿನಂತೆ ಪೈಶಾಚಿಗಳಂತೆ ಬಾಲಕರಂತೆ ವಿಟ ಪುರುಷರಂತೆ ಇರುವದೆಂದು ನಿಜಗುಣಾರಾಧ್ಯರು ಹೇಳಿದ್ದಾರೆ ಈ ಸೂತ್ರಾರ್ಥವು ಈ ಜಿಹ್ವಾ ಲಂಪಟ ಗುಹ್ಯಾಲಂಪಟವುಳ್ಳ ಕಾಮಾಂಧ ಹೊಲೆಯರಾದ ಅಜ್ಞಾನಿಗಳಿಗೆ ಸಹಜವಾಗುವದೇ? ಹೇಗೆಂದರೆ ವಿಟಬಾಲೋನ್ಮತ್ತ ಪಿಶಾಚಿ ಪಶುಗಳ ಸ್ಥಿತಿಗಳಲ್ಲಿ ಒಂದೊಂದು ಮಹಾಜ್ಞಾನ ಲಕ್ಷಣದ ಚಿನ್ಹ ಉಂಟು ಆ ಜ್ಞಾನ ಲಕ್ಷಣದಿಂದ ಸರ್ವಜ್ಞನಾಗಿ ಸಕಲ ಜಗತ್ಪೂಜ್ಯನಾಗಿ ವರ್ತಿಸಬೇಕಲ್ಲದೆ ಅಜ್ಞಾನ ದುರ್ವರ್ತನದಿಂದ ಆಚರಿಸುವದು ಅಥವಾಚಾರವೇ ಹೊರತು ಜ್ಞಾನಾಚಾರವಾಗಲರಿಯದು. ಈ ಅನಾಚಾರಿಗಳಿಗೆ ಅದ್ವೈತ ಮತದ ಆರೂಢಜ್ಞಾನಿಗಳೆಂದು ಯಾರೂ ತಿಳಿಯಬಾರದು ಇದು ಶಿವಾದ್ವೈತ ಮಾರ್ಗವಲ್ಲವು. ಇದು ಫ್ರೆಂಚ ದೇಶದ ಸನ್ಯಾಸಿಗಳಿಂದ ಹುಟ್ಟಿದ ಮಾದಿಗಾಚರಣೆ ಎಂದು ಸ್ಪಷ್ಟವಾಗಿ ತಿಳಿಯಬೇಕು ಜ್ಞಾನದಲ್ಲಿ ಅದ್ವೈತವಲ್ಲದ ಕ್ರಿಯೆಯಲ್ಲಿ ಅದ್ವೈತ ಉಂಟೇ? ಸಹಜಾರ್ಥವ ಕೆಡಿಸಿ ಅನರ್ಥ ಮಾಡಿದ ಕಾರಣ ಹೀಗಾಗಿ ಕೆಟ್ಟು ಭ್ರಷ್ಟರಾದರಲ್ಲದೆ ಭ್ರಷ್ಟರಿಗೆ ಗತಿಯುಂಟೇ? "ಭ್ರಷ್ಟಸ್ಯ ಕಾ ವಾ ಗತಿಃ" ಎಂಬ ಪ್ರಮಾಣವಿಹುದು

ಮನೆಗಳಿಗೆ ಮೇರೆ, ಹೊಲಗಳಿಗೆ ಮೇರೆ, ಕುಲಗಳಿಗೆ ಮೇರೆ, ಮತಗಳಿಗೆ ಮೇರೆ, ಶಾಸ್ತ್ರಗಳಿಗೆ ಮೇರೆ, ನಡೆಯಲ್ಲಿ ಮೇರೆ, ನುಡಿಯಲ್ಲಿ ಮೇರೆಗಳುಂಟು. ಇದಲ್ಲದೆ, ಪೃಥ್ವಿಗೆ ಮೇರೆ, ಆಕಾಶಕ್ಕೆ ಮೇರೆ, ಸಮುದ್ರಾದಿ ಉದಕಂಗಳಿಗೆ ಮೇರೆ, ವಾಯು ಅಗ್ನಿಗಳಿಗೆ ಮೇರೆಯುಂಟು. ಸೂರ್ಯ ಚಂದ್ರ ನಕ್ಷತ್ರಂಗಳಿಗಾದರೂ ಮೇರೆಯುಂಟು ಇವುಗಳು ಮೇರೆದಪ್ಪಿದಾಗಲೆ ಪ್ರಳಯವೇ ಹೊರತು ಪರಿಣಾಮವಿಲ್ಲ.

ಜ್ಞಾನಿಯಾದ ಮೇಲೆ ಕುಂದುವಡೆಯದಿರಬೇಕು ಸಾಕ್ಷಿ "ನಿಂದಿಸಿ ನುಡಿಯದಿರಾರನು ಮನಸಿಗೆ ಬಂದಂತೆ ನುಡಿಯದಿರಿಹದಲ್ಲಿ ಕುಂದುವಡೆಯದಿರು ಕಾಮಾದಿಗಳ ಜಯಿಸೆಂದು ಕೈವಿಡಿದನುಗ್ರಹಿಸುವ" ಎಂದು ನಿಜಗುಣ ವಾಕ್ಯ ಉಂಟಾಗಿ, ಲೋಕಾಪವಾದದಲ್ಲಿ ಭೀತಿ ಇರಬೇಕು ಯಾಕಂದರೆ ಅಪವಾದ ಬಂದ ಮೇಲೆ ಹೋಗಲರಿಯದು ಇದಕ್ಕೆ ಇಂದ್ರ ಚಂದ್ರರ ಕುಂದೇ ಸಾಕ್ಷಿ ಮತ್ತು "ಪಡೆದಪವಾದದಿಂ ಮರಣವಿನ್ನುಂಟೆ" ಎಂಬ ವಾಕ್ಯ ಉಂಟು. ಮತ್ತು ಜ್ಞಾನಿಯಾದ ಮೇಲೆ "ಎಲ್ಲರೊಡನೆ ವೈರವಿಲ್ಲದ ಇರ್ಪುದೇ ಚಂದ" ಎಂದ ಹಾಗೆ ಸರ್ವರಿಗೂ ಹಿತಕಾರಿಯಾಗಿ ಲೋಕೋಪಕಾರಿ ಎನಿಸುತ್ತ ವರ್ತಿಸಬೇಕು.

ಜ್ಞಾನಿಯಾದವರು ಕುಟುಂಬ ಉಳ್ಳವರಾಗಿದ್ದರೆ, ಬಹಿರಂಗದ ವರ್ತನೆಯಲ್ಲಿ ಏಕ ಕುಟುಂಬಿಗಳಾಗಿ ವರ್ತಿಸಿದಾಗ್ಯಾದರೂ ಅಂತರಂಗದ ಮಹಾಜ್ಞಾನದಲ್ಲಿ ತಾವು ವಿಶ್ವ ಕುಟುಂಬಿಗಳೆಂದೇ ತಿಳಿದಿರಬೇಕು ತನ್ನ ಕೈಯಿಂದಾದಷ್ಟು ಸಹಾಯದಿಂದ ಸರ್ವರಿಗೂ ಹಿತವನ್ನು ಮಾಡುತ್ತಿರಬೇಕು. ಲೌಕಿಕರೆದುರಿಗೆ ತನ್ನಂತರಂಗದ ಸಹಜ ಜ್ಞಾನ ಸ್ಥಿತಿಯನ್ನು ಪ್ರಕಟಿಸದೆ ಗುಪ್ತ ಜ್ಞಾನಿಗಳಾಗಿ ಸತ್ಕ್ರಿಯೆ ಸದಾಚಾರಂಗಳ ಪ್ರಕಟಿಸಬೇಕು ಯಾತಕ್ಕೆಂದರೆ, 'ನಿಜವನಾಡಲು ಗಾದು ನೀಚಾತ್ಮರೊಲು" ಎಂದು ತೆಲಗಿನಲ್ಲಿ ಒಬ್ಬ ಪರಮ ಜ್ಞಾನಿಗಳು ಹೇಳಿದ್ದಾರೆ.

ಜ್ಞಾನಿಗಳು ಸತ್ಯವಂತರಾಗಬೇಕಲ್ಲದೆ, ಅಸತ್ಯಕ್ಕೆ ಪೈಗೊಡಬಾರದು. ಜ್ಞಾನಿಗಳಾದವರಲ್ಲಿ ಅಸತ್ಯ ವರ್ತನವಿಲ್ಲದಿದ್ದರೂ ಲೌಕಿಕರ ದಾಕ್ಷಿಣ್ಯದಿಂದ ತಾವು ಅಸತ್ಯ ನುಡಿದರೆ ಜ್ಞಾನಿಗಳಾದರೂ ಅಜ್ಞಾನಿಗಳೆನಿಸುವರು ಅಸತ್ಯವು ಅನರ್ಥಕ್ಕೆ ಸಾಧನವಾಗಿದೆ ಸಾಕ್ಷಿ "ಉತ್ತರಿಯು ಸುರಿಯದಿರೆ, ಹೆತ್ತವ್ವ ಪೊರೆಯದಿರೆ, ಸತ್ಯವಂತರು ಹುಸಿದರೆ, ಮರ್ತ್ಯಕ್ಕೆ ಅತ್ತಳ ಕೊತ್ತವು ಸರ್ವಜ್ಞ" ಎಂದು ಸರ್ವಜ್ಞ ಜ್ಞಾನಿಗಳ ವಾಕ್ಯ ಉಂಟು

ಪರಮಸುಜ್ಞಾನಿಗಳಾದ ದಿವ್ಯಜ್ಞಾನಿಗಳಾದವರು ಈ ಲೋಕದಲ್ಲಿ ಲೌಕಿಕರಂತೆ, ಲೋಕಾಚಾರದ ಕೃಷಿ ಮೊದಲಾದ ಷಟ್‌ಕೃಷಿ ಲೋಕ ವ್ಯವಹಾರ

ದಿಂದ ಸಂಸಾರದೊಳಗಿರ್ದರೂ ತಮ್ಮ ಮಹಾಜ್ಞಾನದಲ್ಲಿ ಭಕ್ತಿಜ್ಞಾನ ವೈರಾಗ್ಯದ ಬಲದಿಂದ ನಿಃಸಂಸಾರಿಗಳಂತೆ ನಿರ್ಲೇಪಿಗಳಾಗಿರಬೇಕು.

ಸಂಸಾರದೊಳಗಿರ್ದು ಕಮಲ ಪತ್ರದಂತೆ ನಿಃಸಂಸಾರಿಗಳಾಗಿರಬೇಕಾದರೆ ಸರ್ವ ಜ್ಞಾನಿಗಳಾದ ಪರಮ ಜ್ಞಾನಿಗಳಿಗೆ ಸುಲಭವು. ಅಲ್ಪ ಜ್ಞಾನಿಗಳಿಗೆ ದುರ್ಲಭವಾಗಿರುವದು. ಸಾಕ್ಷಿ "ಜಾಣನು ಲೌಕಿಕ ಪಾರಮಾರ್ಥವೆರಡನು ಮಾಣದೆ ಕೂಡಿ ನಡಿಸುತಿಹನಿಂತು" ಎಂಬ ನಿಜಗುಣಾರ್ಯರ ಪದವೇ ಸಾಕ್ಷಿಯಾಗಿದೆ.

ಈ ಗ್ರಂಥವು ಭೋಗ ಮೋಕ್ಷಗಳೆರಡರ ವಿಷಯದಲ್ಲಿ ಅನಂತ ರೀತಿಯ ಸದ್ಬೋಧೆಯನ್ನು ಬೋಧಿಸುವದಾಗಿ ಪ್ರಬಲವೇ ಹೊರ್ತು ಅಬಲವಲ್ಲವು. ಇದರಲ್ಲಿ ನೀತಿ ಕ್ರಿಯಾಚಾರ ಸತ್ಯ ಸದಾಚಾರ ಸುಜ್ಞಾನ ಜ್ಞಾನಾಚಾರ ವಿಷಯದಲ್ಲಿ ವೇದಾದಿ ಶೃತಿ ಸಮ್ಮತವಾದ ಜಗತ್ಪ್ರಖ್ಯಾತವಾದ ಪ್ರಬಲಶಾಸ್ತ್ರಂಗಳೆನಿಸಿದ ನಿಜಗುಣ ಶಿವಯೋಗಿಗಳ ಷಟ್ ಶಾಸ್ತ್ರಗಳ ವಾಕ್ಯಗಳ ದೃಷ್ಟಾಂತಂಗಳಿಂದ ಮತ್ತು ಶೃತಿ ಸ್ಮೃತಿ ಆಗಮ ಪುರಾಣಂಗಳ ಗ್ರಂಥ ಸಾಕ್ಷಿಗಳನ್ನು ಕೊಟ್ಟು, ಸದ್ಬೋಧೆಯನ್ನು ಬೋಧಿಸುತ್ತ ಇರುವದರಿಂದ ಪ್ರಬಲವೆಂದು ತಿಳಿಯತಕ್ಕದ್ದು

---

# ೨೨ ನೇ ಪ್ರಕರಣವು.

## ಸದ್ಭಕ್ತಿಯು.

ಈ ಪಾರಮಾರ್ಥ ಕೃಷಿಯಲ್ಲಿ ಸದ್ಭಕ್ತಿಯು ಏನು ಪ್ರಯೋಜನವೆಂದರೆ, ಸಕಲ ಕಾರ್ಯಗಳಲ್ಲಿ ಭೋಗ ಮೋಕ್ಷಾದಿಯಾದ ಇಹಲೋಕ ಪರಲೋಕದ ಮಹದೈಶ್ವರ್ಯ ಸಂಪದವನ್ನು ಪಡೆಯಬೇಕಾದರೂ ನಿರ್ಭಾವಾನಂದ ನಿಜೈಕ್ಯ ಸಂಪದವನ್ನು ಪಡೆಯಬೇಕಾದರೂ ಸದ್ಭಕ್ತಿಯೇ ಕಾರಣವಲ್ಲದೆ, ಮತ್ತೊಂದಿಲ್ಲ ಈ ಪಾರಮಾರ್ಥ ಕೃಷಿ ಎಂಬ ನಿಜಮುಕ್ತಿ ಸಾಮ್ರಾಜ್ಯಕ್ಕೆ ಭಕ್ತಿಜ್ಞಾನ ವೈರಾಗ್ಯವೇ ಕಾರಣವಾಗಿ, ಜ್ಞಾನಹೀನವಾದ ಭಿನ್ನ ಕ್ರಿಯೆಯ ದಾಸ ಭಕ್ತಿಯು ಮೋಕ್ಷಕಾರಣವಲ್ಲವಾಗಿ ಅಭಿನ್ನ ಭಕ್ತಿಯಾದ ಶಿವೈಕ್ಯ ಸದ್ಭಕ್ತಿಯು ಸುಜ್ಞಾನಿಗಳಿಗಲ್ಲದ ಸಿದ್ಧಿಸದಾಗಿ, ಹಿಂದಿನ ಪ್ರಕರಣದಲ್ಲಿ ಸುಜ್ಞಾನ ಸಾರವನ್ನು ಹೇಳಿದ್ದೇನೆ ಈ ಪ್ರಕರಣದಲ್ಲಿ ಸದ್ಭಕ್ತಿಯ ವರ್ಣನೆಯನ್ನು ಸದ್ಭಕ್ತಿಯ ಕ್ರಮವನ್ನು ಸದ್ಭಕ್ತಿಯ ಪ್ರಯೋಜನವನ್ನು ಸದ್ಭಕ್ತಿಯ ಸಂಪದವನ್ನು ವಿಸ್ತಾರವಾಗಿ ಪಾರಮಾರ್ಥ ಕೃಷಿಗನುಸಾರವಾಗಿ ಅದ್ವರ ವಚನಾನುಭಾವ ಪ್ರಮಾಣವಾಗಿ ಹೇಳುತ್ತೇನೆ

ಶಿವಜ್ಞಾನ ಸಂಪನ್ನರಾದ ಪರಮ ಸುಜ್ಞಾನಿಗಳೆನಿಪ ಸದ್ಭಕ್ತರು ಸರ್ವಾರಂಭ ಕ್ರಿಯೆಗಳನ್ನಾಚರಿಸುವಲ್ಲಿ ತ್ರಿಕರಣ ಶುದ್ಧ ಸತ್ಕಾಯಕವೆನಿಪ ಷಟ್‌ಕೃಷಿಗಳನ್ನು ಮಾಡುಲ್ಲಿ, ಈ ಪಾರಮಾರ್ಥಕೃಷಿ ಎನಿಪ ಸುಜ್ಞಾನ ಸದ್ಭಕ್ತಿ ಎನಿಪ ನಿಜಾನುಭಾವ ಸತ್ಕಾಯಕವನ್ನು ಮಾಡುವ ಪರಿ ಹೇಗಂದರೆ, "ಆತ್ಮಾಕಾಶಮಯೋ ಜ್ಞೇಯೋ । ವಾಯುಃ ಪ್ರಾಣ ಮಯೋ ಭವೇತ್ ॥ ತೇಜೋಮಯ ಸ್ತ್ವಹಂಕಾರಂ । ತಥಾ ಜಲಮಯಂ ಮನಃ ॥ ಪೃಥ್ವೀ ಮಯಂ ಶರೀರಶ್ಚ । ತನ್ಮಯೋ ಇಂದ್ರಿಯಾಣಿ ಚ ॥ ತದಿಂದ್ರಿಯ ಮಯೋ ಲೋಕೋ । ವ್ಯಾಪಾರಃ ಕರ್ಮತನ್ಮಯಃ ॥" ಎಂಬಲ್ಲಿ ಪೃಥ್ವೀ ಸಂಬಂಧವಾದ ಶರೀರವೆಂಬ ಕ್ಷೇತ್ರವನ್ನು ಹಸನ ಮಾಡಬೇಕಾದರೆ, ಅರಿವೇ ಗುರುವಾದ ಶ್ರೀಗುರುವೆಂಬ ಕೃಷಿಕನು ಮನ ಪವನಾದಿಗಳೆಂಬ ಎತ್ತುಗಳನ್ನು ಹೂಡಿ ತನು ಕರಣಾದಿಗಳೆಂಬ ಕಸವ ಹರಿಗಿ ಹಸನ ಮಾಡಿ ಶಿವಕರುಣ ಕಟಾಕ್ಷವೆಂಬ ಮಳೆಯ ಹದ ಬೆದೆಯನರಿದು ಭಕ್ತಿಜ್ಞಾನ ವೈರಾಗ್ಯವೆಂಬ ತ್ರಿವಿಧ ತಾಳಿನ ಕೂರಿಗೆಯಿಂದ ಮಹಾಜ್ಞಾನ ಬೀಜವನ್ನು ಬಿತ್ತಿ ಪೂರ್ಣ ಜ್ಞಾನವೆಂಬ ಪರಿಪೂರ್ಣ ಭತ್ತದ ಅಖಂಡ ರಾಶಿಯ ಪಡೆದು ಆ ಪದಾರ್ಥದ ರೂಪು ರುಚಿ ತೃಪ್ತಿ ಗುರು

ಲಿಂಗ ಜಂಗಮಕ್ಕೆ ಕೊಟ್ಟು ಆ ತ್ರಿವಿಧ ಪ್ರಸಾದವಂ ಪಡೆವ, ಸಮಸ್ತ ಭಕ್ತ ಮಾಹೇಶ್ವರರೊಡಗೂಡಿ ಆರ ಹಂಗಿಲ್ಲದನುಭವಿಸಿ, ಸದಾನಂದ ಸುಖಿಗಳಾಗಿಪ್ಪವರೇ ಪಾರಮಾರ್ಥ ಕೃಷಿಕರಾದ ಶರಣ ಸದ್ಭಕ್ತರು.

ಪಾರಮಾರ್ಥ ಕೃಷಿಕರಾದ ಶ್ರೀ ವೀರಶೈವ ಸದ್ಭಕ್ತರು ಮಾಡುವ ಭಕ್ತಿಯ ವಿಶೇಷವು ಹ್ಯಾಗಂದರ, ಸಾಕ್ಷಿ- ಅಣಿಮಾದ್ಯಷ್ಟಗುಣ ಪ್ರಸಿದ್ಧಿ ಮಹದೈಶ್ವರ್ಯಂ ನಿಜೈಶ್ವರ್ಯದೊಳ್ । ತೃಣ ಸಾಧಾರಣಮಿಂದ್ರಜಾಲ ಕೃತಕಂ ಸ್ವಾಭೀಷ್ಟ ಸಂಸಿದ್ಧಿಯೊಳ್ ॥ ಮಣಿ ಮಂತ್ರೌಷಧ ಸಿದ್ಧಿ ಗಿದ್ಧಿಗಳವೆಲ್ಲ ಭ್ರಾಂತು ಮಿಥ್ಯಾಮಯಂ । ಕ್ಷಣಿಕಂ ತಾನೆನಿಸಿರ್ಪ ಭಕ್ತಿ ವಿನ್ನೆನ್ನೊಳ್ ಶಿವಾ ವಲ್ಲಭಾ ॥ ಎಂದು ಮಾಯಿದೇವ ಪ್ರಭುಗಳು ಹೇಳಿದ್ದಾರೆ ಮತ್ತು ವೃತ್ತಃ— ಏನೆನಲುಂಟು ಭಕ್ತಿಯ ಮಹಾತ್ಮ್ಯಂ ಶ್ರುತಿ ಶಾಸ್ತ್ರ ಪಂಙ್ತಿಯೋ । ಗೇನ ಪರಾಯನುತ್ತಮಳ ಭಕ್ತಿಯ ವೈಭವಮಂ ಪೊಗಳ್ದಪ । ನ್ಯಾಸಿಸಿತಾಗಿ ಯೋಗ ಪದದಿಂದುಪ ರಿಷ್ಟವೆನಿಪ್ಪ ಭಕ್ತಿಸಾ । ಖ್ಯಾನುಭವಕ್ಕೆ ನಿಷ್ಕಲಪದಕ್ಕೆಣೆ ಯಾವ ಪದಂ ಶಿವಾಧವಾ ॥ ಎಂದು ಭಕ್ತಿ ಪ್ರತಿಪಾದನ ಶತಕದಲ್ಲಿ ಹೇಳಿದ್ದಾರೆ

“ಭಕ್ತಿ ಶಿವ ಪ್ರಸೀದ ಜನನೀ ಭವನಂ ಶಿವ ಪ್ರಸಾದವಾ । ಭಕ್ತಿಗೆ ಜನ್ಮ ಭೂಮಿ ವಿಪುಲಾಸುರ ಬೀಜದವೋಲ್ । ಪರಸ್ಪರ ವ್ಯಕ್ತಿ ಮಹಿಗೆ ನೋಳ್ಪಡದು ತಾನೆ ನಿರಂತರಮಪ್ಪ ಮುಕ್ತಿಯಾ ಮುಕ್ತಿಯೆ ವಿಶುದ್ಧ ನಿಷ್ಕಲ ನಿಜೈಕ್ಯ ಪದಂ ಪರಮಂ ಶಿವಾಧವಾ ॥ ಎಂದು ಮಾಯಿ ದೇವ ಪ್ರಭುಗಳು ಭಕ್ತಿಯ ವಿಶೇಷವನ್ನು ಹೇಳಿದ್ದಾರ.

“ಆವ ಕಾಲದೊಳು ಬಳಿಕಾವ ದೇಶದೊಳು ಮತ್ತಾವ ವಸ್ತುವಿನೊಳೊಡೆಮರೆಯದತಿ ಮಮತೆ ತನ್ನ ಮೇಲಿರ್ಪುದಂತೆ ನಿಜದೇವತೆಯೊಳಗನುರಾಗವಿಹುದೆ ನಿಜಭಕ್ತಿ” ಹೀಗೆಂದು ಸಹಜ ಸದ್ಭಕ್ತಿಯ ಲಕ್ಷಣವನ್ನು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ

ಸದ್ಭಕ್ತಿಯ ವಿಷಯದಲ್ಲಿ ಪರಮ ಸುಜ್ಞಾನಿಗಳಾದ ಶ್ರೀ ವೀರಶೈವ ಸದ್ಭಕ್ತರು ಮಾರ್ಗಕ್ರಿಯೆ ಮೀರಿದ ಕ್ರಿಯೆಗಳಿಂದ ಅಂತರ್ಜ್ಞಾನ ಬಹಿಃಕ್ರಿಯೆಗಳೊಂದಾಗಿ, ಆಚರಿಸಿದ ಸದಾಚಾರ ಸದ್ಭಕ್ತಿಯಾಚರಣೆ ಎಂತೆಂದಡೆ, ಗುರುಲಿಂಗ ಜಂಗಮದಲ್ಲಿ ವಂಚನೆ ಇಲ್ಲದೆ, ಸಹಜ ಭಾವದಿಂದ ಒಳ ಹೊರಗೆ ಒಂದೇ ಆಗಿ, ತನಗೆ ಶಿವಾಗಮಂಗಳೇ ಧರ್ಮ ಶಾಸ್ತ್ರಂಗಳಾಗಿ, ಅಂತರಂಗ ಬಹಿರಂಗದ ಜ್ಞಾನ ಕ್ರಿಯೆಗಳಲ್ಲಿ ಗುರುಲಿಂಗ ಜಂಗಮವೇ ಪ್ರಾಣವಾಗಿ, ಗುರುಭಕ್ತಿ, ಲಿಂಗಭಕ್ತಿ ಜಂಗಮಭಕ್ತಿಯಲ್ಲಿ, ಅರ್ಥ ಪ್ರಾಣಾಭಿಮಾನವನೊಪ್ಪಿಸಿ, ತನುಮನಧನವನು ನಿರ್ವಂಚಕತ್ವದಿಂದ ಕೊಟ್ಟು ಕೊಳ್ಳುವ

ಸೂಕ್ಷ್ಮ ಸಕೀಲವನು ಗುರುಮುಖದಿಂದರಿದು ಆದ್ಯರಾಚರಣೆಯಂತೆ ನಡೆಗಲಿತು ಡಾಂಭಿಕತ್ವವಿಲ್ಲದೆ, ಸಹಜ ಭಕ್ತರಾಗಿ ಇದ್ದಕ್ಕಿದ್ದ ಹಾಗೆ ಆಚರಿಸುವದೇ ಸದ್ಭಕ್ತಿ ಎನಿಸುವದು

ಸದ್ಭಕ್ತಿಯ ಲಕ್ಷಣವೆಂತೆಂದಡೆ, ಸಾಕ್ಷಿ "ಕಿಂಕುರ್ವಾಣಮಂ ಬಲಿದು ಗುರುಲಿಂಗ ಮುಖಂ ಚರಲಿಂಗವೆಂದು ನಿಃಶಂಕತೆಯಿಂ ಸುವರ್ಣ ವಸನಾನ್ನ ಪುರಸ್ಸರ ವಸ್ತುವಾಹನಾ। ಲಂಕರಣಂಗಳಂ ಸಲೆ ಸಮರ್ಪಿಸಿ, ವೀರಶಿವಾಗಮೋಕ್ತ ಚಿಹ್ನಾಂಕಿತರ್ಗೆ ಮಣಿವಂತುಟಿ ಭಕ್ತಿಪದಂ ಶಿವಾಧವಾ" ಎಂದು ಹೇಳಿದ ಮಾಯಿ ದೇವ ಪ್ರಭುಗಳ ವಾಕ್ಯವಿಹುದಾಗಿ, ಸಹಜ ಭಕ್ತಿಯ ಸ್ಥಿತಿಯು ಹೀಗಿರ್ಪುದು

ಪರಮ ಸುಜ್ಞಾನಿಯೊಾದ ಸದ್ಭಕ್ತನು ಇರುವಂಥ ಲೋಕವೇ ಶಿವಲೋಕವು. ಆ ಭಕ್ತನ ಹಿನ್ನೆರೆ ಮುನ್ನೆರೆಯಲ್ಲಿಪ್ಪವರೇ ಪ್ರಮಥಗಣಾದಿಗಳು. ಆ ಸದ್ಭಕ್ತನ ಹಿತ್ತಿಲು ಅಂಗಳಗಳಲ್ಲಿ ಇಪ್ಪ ಜಾಲಿ ಬೊಬ್ಬುಲಿ ವೃಕ್ಷಂಗಳೇ ಕಲ್ಪವೃಕ್ಷಂಗಳು. ಆ ಭಕ್ತನಿರ್ದ ಕಲ್ಮರ ಮಟ್ಟಿ ಬೆಟ್ಟ ಮೊರಡಿಗಳೇ ಅವಿಮುಕ್ತ ಕ್ಷೇತ್ರವು. ಆತನ ಅಂಗಣವೇ ವಾರಣಾಸಿ ಆತನ ಒಚ್ಚಲ ಹೊಂಡಗಳೇ ಪುಣ್ಯ ತೀರ್ಥಂಗಳು. ಆ ಭಕ್ತನ ಸತಿಯರೇ ಪಾರ್ವತೀದೇವಿಯರು. ಆತನ ಸುತರೇ ವೀರಭದ್ರ ಗಣನಾಯಕರು ಆ ಭಕ್ತನೇ ಸಕಲ ಲೋಕದಲ್ಲಿ ಪೂಜ್ಯನಾಗಿಪ್ಪನು.

ಸದ್ಭಕ್ತಿಯ ಮಹಿಮಾತಿಶಯಕ್ಕೆ ಎಣೆ ಇಲ್ಲವಾಗಿ ಸಕಲ ಕ್ಷುದ್ರ ಪದಂಗಳೆಲ್ಲ ಭಕ್ತಿ ಸತ್ಪಥಕ್ಕೆ ಸಮಬಾರವು. ಅಣಿಮಾದ್ಯಷ್ಟ ಮಹಾ ಸಿದ್ಧಿಗಳೆಲ್ಲವು ಆ ಭಕ್ತನ ಮಹಾದ್ವಾರವನ್ನು ಕಾಯ್ದುಕೊಂಡಿರ್ಪವು

ಸದ್ಭಕ್ತನ ಸ್ಥಿತಿಯು ಲೋಕದ ಕರ್ಮಿಗಳಂತಲ್ಲ. ಹೇಗಂದರೆ, ಸಾಕ್ಷಿ "ನ ಯೋಗೋ ನ ತಪೋ ನಾರ್ಚನೋ। ಕ್ರಮ ಕೋಪಿ ನ ವಿದ್ಯತೆ। ಅಮಾಯ ಶಿವಮಾರ್ಗೇಸ್ಮಿನ್। ಭಕ್ತಿರೇಕಾ ಪ್ರದರ್ಶ್ಯತೆ" ಎಂಬ ಪ್ರಮಾಣವಿಹುದಾಗಿ, ಆ ಭಕ್ತನು ಭಿನ್ನ ಕರ್ಮಿಗಳಂತೆ, ಯೋಗ ತಪ ಅರ್ಚನೆ ಮೊದಲಾದ ಕರ್ಮಂಗಳನ್ನು ಭಿನ್ನವಿಟ್ಟಾಚರಿಸದೆ, ಶಿವಾದ್ವೈತ ಭಕ್ತಿಯುಕ್ತನಾಗಿ, ನಿತ್ಯ ನಿರ್ಮಲನಾಗಿ, ಸತ್ಯವಾಚಕನಾಗಿ ಪರಮಾರೂಢನಾಗಿ ತಾನೆಂಬುದಿಲ್ಲದೆ ಏನೆಂಬುದಿಲ್ಲದೆ ಶಿವಾಜ್ಞೆ ಎಂದು ಸಕಲ ಕಾರ್ಯಗಳಲ್ಲಿ ಶಿವಜ್ಞಾನ ಮುಂದುಗೊಂಡು ಭೃತ್ಯತ್ವದಿಂದಿದ್ದರೂ ಕರ್ತನಾಗಿ ತೋರುವಂತೆ, ಸರ್ವವೂ ಶಿವಮಯವಾಗಿರ್ಪನು. ಹೇಗೆಂದರೆ, ಸಾಕ್ಷಿ "ಶಿವನು ಶಿವಾರ್ಚನೈಕರತನಾಗಿರಲೋಸುಗಮಾತ್ಮಲೋಕದಿಂ। ದವತರಿಸಿ ಸ್ವಕೀಯ ಘನಲೀಲೆಯೊಳೊಯ್ಯನೆ ಮಾನುಷ

ಮುಷ್ಪ ವಿಮುಳ ವೇಷಮುಂ ಧರಿಸಿ ಸರ್ವ ಜಗದ್ಧಿತ ದಿವ್ಯ ಚೇಷ್ಟೆಯಿಂದವೆ ಪರಿರಂಜಿಪಂ ಪರಮ ಭಕ್ತಿಮಯ ಸ್ಥಲದೊಳ್ ಶಿವಾಧವಾ ॥ " ಎಂದುಂಟಾಗಿ ಸದ್ಭಕ್ತನು ಶಿವ ಸ್ವರೂಪಿಯಾಗಿಪ್ಪನು

ಸಂಕಲ್ಪಂ ಚ ವಿಕಲ್ಪಂ ಚ ವರ್ಜಯೇತ್ ಶಿವಭಕ್ತಿಮಾನ್ ॥ ಲಾಂಛನೇನ ಶರಣ್ಯಂ ಚ ಭಕ್ತ ಸ್ಥಲ ಸುಬುದ್ಧಿಮಾನ್ ॥ ಎಂಬಾಗಮ ಪ್ರಮಾಣವಿಹುದಾಗಿ, ಆ ಸದ್ಭಕ್ತಂಗೆ ಸಂಕಲ್ಪ ವಿಕಲ್ಪಗಳಿಲ್ಲ ಹೇಗೆಂದರೆ, ನಾನು ಶಿವ ತತ್ವ ವಹುದೋ ಅಲ್ಲವೋ ಎಂಬ ಸಂಕಲ್ಪ ವಿಕಲ್ಪಗಳಿಲ್ಲವು ಹೇಗಂದರೆ, ನಾನು ಶಿವತತ್ವ ವಹುದೋ ಅಲ್ಲವೋ ಎಂಬ ಸಂಕಲ್ಪವಿಲ್ಲದಾತನಾಗಿ, ಶಿವನ ನಿಜ ಸ್ವರೂಪವಾದ ಶಿವಾಲಾಂಛನವ ಕಂಡಲ್ಲಿ ಭೃತ್ಯಭಾವದಿಂದ ಶರಣಾಗತನಾಗುತ್ತಿಹನು. ಆದಾಗ್ಯೂ ಭೃತ್ಯಾಚಾರಿಯಲ್ಲ. ಎಂತೆಂದೊಡೆ, ಸ್ವಸ್ವರೂಪಕ್ಕೆ ತಾನೇ ಅರ್ಚಿಸಿಕೊಂಬುವ ಹಾಗೆ, ತನ್ನಂತರಂಗದ ಚಿತ್ಕಲಾ ಮೂರ್ತಿಯೇ ಬಹಿರಂಗದಲ್ಲಿ ನಿಜವಾಗಿ ನಿಂದುದಲಾ ಎಂದು ಗುರುಲಿಂಗ ಜಂಗಮದಲ್ಲಿ ಪೂಜಾವಂದನಾದಿ ಅರ್ಚನಾರ್ಪಣ ಕ್ರಿಯೆಯೊಳು ಭೃತ್ಯಾಚಾರಿ ದಾಸಭಾವದ ಸೇವೆಯಂತೆ ಮಾಡದೆ, ಮತ್ತು ಅಹಂ ಬ್ರಹ್ಮಸ್ಮೇಟ ಅಹಂ ಭಾವವಿಲ್ಲದೆ, ಸ್ವಯಮೇವ ನಮಸ್ಕಾರವೆಂಬಂತೆ, ತನ್ನ ತಾನರ್ಚಿಸಿಕೊಂಬುವ ಹಾಗೆ, ಅಭೇದ ಭಾವನೆಯಿಂದ ಆಚರಿಸವ ಶರಣಂಗೆ, ಸಕಲ ಕ್ರಿಯಾ ಕರ್ಮಂಗಳಲ್ಲಿ ತಾನೆದುರೆಂಬ ಸಂಕಲ್ಪವಿಲ್ಲವಾಗಿ ತಾನೇ ಬ್ರಹ್ಮವೆಂದು ಅಹಂ ಭಾವದ ಹುಚ್ಚು ತಲೆಗೇರಿದ ಶುಷ್ಕ ವೇದಾಂತಿಗಳಂತೆ, ವಾಗ್ಬ್ರಹ್ಮಿಯಾಗಿ, ನಿತ್ಯ ಕ್ರಿಯಾರ್ಚನೆಗಳಂ ಬಿಟ್ಟು ಭ್ರಷ್ಟನಾಗದೆ, ಸಕಲ ಕ್ರಿಯಾ ಅರ್ಚನಾದಿಗಳಲ್ಲಿ ಸ್ವಸ್ವರೂಪ ಸಾಕ್ಷಾತ್ಕಾರವನೀಕ್ಷಿಸುತ್ತ ಅಭೇದ ಭಾವನೆಯಿಂದ ಇರುವನು.

ಗುರುಲಿಂಗ ಜಂಗಮಕ್ಕೆ ಕೊಟ್ಟು ಕೊಂಬಲ್ಲಿ ಪೂರ್ವ ಕ್ರಿಯೆ ಮೀರಿದ ಕ್ರಿಯೆಗಳೆಂಬ ಮೇಲು ವಿಚಾರದಲ್ಲಿ ಅಂತರ್ಜ್ಞಾನ ಬಹಿಃಕ್ರಿಯೆಗಳಿಂದ ಸ್ವಲ್ಪಾದರೂ ಭೇದವಿಲ್ಲ ಸಕಲ ಪದಾರ್ಥಗಳನ್ನು ಶಿವಾರ್ಪಿತಕ್ಕೆ ಸಲ್ಲಿಸುವಲ್ಲಿ ತನ್ನ ಪ್ರಸಾದವನ್ನು ಶಿವನಿಗೆ ಕೊಡುವಲ್ಲಿ ಶಿವಪ್ರಸಾದವ ತಾನು ಕೊಂಬಲ್ಲಿ ತಾ ಬೇರೆ ಶಿವ ಬೇರೆನ್ನದೆ ತಾನೆಂಬ ಇದಿರೆಂಬ ಸಂಕಲ್ಪವಿಲ್ಲದೆ, ಪ್ರಸಾದ ಕಾಯ ಸ್ವರೂಪನಾಗಿ ವರ್ತಿಸುವನು.

ಇಂತಪ್ಪ ಜ್ಞಾನ ಮಯನಾದ ಪರಮ ಸದ್ಭಕ್ತನ ಮಹತ್ವಾತಿಶಯವನ್ನು ಎಷ್ಟು ವರ್ಣಿಸಬಹುದು ? ಸಾಕ್ಷಿಃ—“ಪರಮಾದ್ವೈತ ವಿಜ್ಞಾನ । ನಿಷ್ಠಸ್ಯಾಸ್ಯ ಮಹಾತ್ಮನಃ॥ ಶುಶ್ರೂಷಾಕ್ರಿಯತೆ ಏನತತ್ಪಾದೌ ಮಮ ಮಸ್ತಕೇ॥ ಎಂದು ಪರಮರಹಸ್ಯದಲ್ಲಿ ಹೇಳುತ್ತಿಹುದಾಗಿ ಮತ್ತು ಗ್ರಂಥ ॥ ಕರ್ಮಾವಲಂಬನ ಕೇಚಿತ್ ಕೇಚಿತ್ ಜ್ಞಾನಾವಲಂಬನಂ॥ ವಯಂ ತು ಶಿವಭಕ್ತಾನಾಂ। ಪಾದುಕಸ್ಯಾವಲಂ

ಬನಂ॥ ಎಂಬೀಶ್ವರವಾಕ್ಯ ಉಂಟಾಗಿ ಇಂತಪ್ಪ ಸದ್ಭಕ್ತನ ಚಾರಿತ್ರ್ಯಕ್ಕೆ ಮೂರು ಲೋಕದಲ್ಲಿಯೂ ಸಮಾನವಿಲ್ಲ.

"ಪೂಜಕೋ ಬಹವಸ್ಸಂತಿ। ಭಕ್ತಿ ಶತ ಸಹಸ್ರತಾ॥ ಪ್ರಸಾದೇನ್ಯೈವ ಪಾತ್ರಂ ತು। ದ್ವಿತ್ರೀಣ್ಯೈವ ಪಂಚಷಟ್॥ ಎಂಬ ಗ್ರಂಥಾರ್ಥವೇನಂದರೆ ಲೋಕದಲ್ಲಿ ಪರಮೇಶ್ವರನ ಪೂಜೆ ಮಾಡತಕ್ಕಂಥವರು ಬಹು ಜನರುಂಟು. ಮತ್ತು ಭಕ್ತರೆನಿಸಿಕೊಂಬವರು ಕೋಟ್ಯಾವಧಿ ಇದ್ದಾರೆ. ಆದಾಗ್ಯೂ ಇವ ರೆಲ್ಲರು ಶಿವ ಪ್ರಸಾದಕ್ಕೆ ಯೋಗ್ಯರಲ್ಲ ಇವರಲ್ಲಿ ಭೇದ ಭಾವನೆಯಾದ ಭಿನ್ನ ತ್ವವಿರುವದರಿಂದ ಶಿವಪ್ರಸನ್ನತ್ವವನ್ನು ಅವರು ಪಡೆಯಲರಿಯರು

ಒಬ್ಬಾನೊಬ್ಬ ರಾಜಭೋಗವುಳ್ಳ ಸ್ತ್ರೀಯಳು ಸಕಲಾಭರಣಂಗಳಿಂದ ಲಂಕರಿಸಿಕೊಂಡು ನಿರ್ಮಲದರ್ಪಣವನ್ನು ಕೈಯ್ಯಲ್ಲಿ ಹಿಡಿದುಕೊಂಡು ಆ ದರ್ಪ ಣವನ್ನು ನಿರೀಕ್ಷಿಸುತ್ತಿರಲು, ಆ ಸಮಯದಲ್ಲಿ ಆ ಸ್ತ್ರೀಯಳ ಬಳಿಯಲ್ಲಿರ್ದ ವರೆಲ್ಲರಿಗೂ ತಿಳಿಯ ಬರುವದೇನಂದರೆ, ಈ ಸ್ತ್ರೀಯಳು ದರ್ಪಣವನ್ನು ನೋಡು ತ್ತಿಹಳೆಂದು ಕಾಣುವರಲ್ಲದ, ತನ್ನ ನೋಡುವಳೆಂದು ತಿಳಿಯರು ಆದರ, ಆ ಸ್ತ್ರೀಯಳು ತನ್ನನೇ ನೋಡುವಳಲ್ಲದೆ, ಕನ್ನಡಿಯನ್ನು ನೋಡಳು ಕನ್ನ ಡಿಯು ಕೈಗೆ ಬರುವ ವರೆಗೂ ಕನ್ನಡಿಯನ್ನು ನೋಡಬೇಕೆಂಬ ಭಾವವಿರು ವದು ಆ ದರ್ಪಣವು ಕೈಗೆ ಬಂದಾಕ್ಷಣವೇ ದರ್ಪಣದ ಭಾವ ಜಾರಿ ಸ್ವಸ್ವರೂಪದೊಳು ದೃಷ್ಟಿ ನಟ್ಟು ತನ್ನ ಮುಖ ಲಾವಣ್ಯ ಹಾವ ಭಾವ ವಿಲಾಸ ವಿಭ್ರಮಂಗಳನ ನೋಡುತ್ತ ಪರಿಣಾಮಿಸುವಳೆಂಬ ಹಾಗೆ ಸದ್ಭಕ್ತ ರಾದ ಶಿವ ಶರಣರು ನಿಜವನರಿಯದ ಮುನ್ನ ಭಿನ್ನ ಕ್ರಿಯೆ ಎಂಬ ಮಾಯಾ ಜಾಡ್ಯದಲ್ಲಿರ್ಪರಲ್ಲದ ನಿಜವನರಿತ ಬಳಿಕ ಮಾಯಾರಹಿತರಾಗಿ, ಆನೆಯು ರಾಜವೈಭವದಲ್ಲಿರ್ದರೂ ಕಾನನವನ್ನು ಲಕ್ಷವಿಟ್ಟಂತ ಶರಣರು ಸದ್ಭಕ್ತಿ ಪ್ರಯೋಜನ ಮುಂದುಗೊಂಡು ಸಂಸಾರದೊಳಗಿದ್ದು ಷಟ್ ಕೃಷಿ ಲೋಕ ವ್ಯವಹಾರದೊಳಗಿರ್ದರೂ ಮಾಯಾರಹಿತರಾಗಿರ್ಪರು

ಸದ್ಭಕ್ತಿ ಚಾರಿತ್ರ್ಯಕ್ಕೆ ಭಿನ್ನ ಭಕ್ತಿಯೇ ಕೇಡು ಹೇಗೆಂದರೆ, ಲೌಕಿ ಕರು ಕೃಷಿಯ ಮಾಡುವಲ್ಲಿ ವೈಗಳ್ಳತನವು ಹೇಗೆ ದರಿದ್ರತ್ವಕ್ಕೆ ಮುಖ್ಯ ಕಾರಣವೋ ಹಾಗೆ ಈ ಪಾರಮಾರ್ಥ ಕೃಷಿಯಾದ ಸದ್ಭಕ್ತಿ ಚರಿತ್ರಕ್ಕೆ ಭಿನ್ನ ಭಕ್ತಿಯು ಸಲ್ಲದು ಈ ಭಿನ್ನ ಭಕ್ತಿಯಿಂದ ಭವಾಂತರಕ್ಕ ಕಾರಣವಾಗು ತ್ತದ. ಅದು ಕಾರಣ ಸದ್ಭಕ್ತರು ಭಿನ್ನತ್ವವಂ ಬಿಟ್ಟು ಅಭಿನ್ನಕ್ರಿಯಾಚಾರದಿಂ ದಿರ್ದರೂ ಸತ್ಕ್ರಿಯೆಗಳಾದ ನಿತ್ಯ ಕ್ರಿಯಗಳಂ ಬಿಡದೆ ಮಾಡುತ್ತಿರುವರು. ಸಾಕ್ಷಿ "ದಿನ ದಿನ ದುಚಿತ ವೇಳೆಯೊಳುಪಚರಿಸುದು ನಿನಗೆ ಕುಳವೆಲೆ ಯೋಗಿ ನೀನೆ ಬಿಡದಿವನು" ಎಂದು ನಿಜಗುಣಯೋಗಿಗಳ ವಾಕ್ಯವಿಹುದು.

ಇದರಂತೆ ಅಭಿನ್ನ ಭಾವನೆಯಿಂದ ಸ್ವಯಮೇವ ಬ್ರಹ್ಮವಾಗಿ, ಶಿವಲಿಂಗಾರ್ಚನಾರ್ಪಣ ಕ್ರಿಯೆಗಳಂ ಮಾಡುತ್ತಿದ್ದಾಗ್ಯಾವರೂ ಆತನ ಅಂತರಂಗವನರಿಯದ ಲೌಕಿಕರುಗಳ ಕಣ್ಣಿಗೆ ಕರ್ಮಿಯಂತೆ ಕಾಣುತ್ತಿಹನು ಆದಾಗ್ಯೂ ಆತನು ಕರ್ಮಿಯಲ್ಲವು ಸಾಕ್ಷಿ "ಆವ ಬಾಧೆಯನುಂಟು ಮಾಡಬಹುದಖಿಳ ಭೋಗಾವಲಂಬನದೊಳಿರೆ ಶಿವಯೋಗಿಗೆ" ಎಂದು ನಿಜಗುಣವಾಕ್ಯ ಉಂಟಾಗಿಹುದು

ಪಾರಮಾರ್ಥ ಕೃಷಿಕರಾದ ಸಹಜ ಸದ್ಭಕ್ತರಾಚರಣೆಯಾದ ಷಟ್‌ಸ್ಥಲದ ವರ್ತನೆಯು ಎಂತೆಂದೊಡೆ ಗುರು-ಲಿಂಗ-ಜಂಗಮದಲ್ಲಿ ಭೇದವಿಲ್ಲದೆ ತ್ರಿವಿಧಮೂರ್ತಿಗಳೊಂದೇ ಎಂದು ಗುರುಲಿಂಗದ ಮುಖವೇ ಜಂಗಮವೆಂದು ನಿಸ್ಸಂಶಯದಿಂದ ಸುವರ್ಣ ವಸನಾನ್ನ ಮೊದಲಾದ ಸಮಸ್ತ ಭೋಗಪದಾರ್ಥಗಳನ್ನೆಲ್ಲ ಸದ್ಭಕ್ತಿಪೂರ್ವಕದಿಂದ ಚೆನ್ನಾಗಿ ಸಮರ್ಪಿಸಿ ವೀರಶೈವಾಗಮಂಗಳಲ್ಲಿ ಹೇಳಿದ ಸದ್ವೀರಮಾಹೇಶ್ವರ ಕುರುಹಂ ಕಂಡು ಶರಣಾಗತನಾಗುವದೇ ಭಕ್ತಿ ಲಕ್ಷಣವು ಆ ಆಚರಣೆಯಲ್ಲಿ ಆಚರಿಸುತಿರ್ಪ ಸಹಜ ಸದ್ಭಕ್ತನಾಚರಣೆಯೇ ಭಕ್ತಸ್ಥಲವೆನಿಸುವದು

ಈ ಭಕ್ತ ಸ್ಥಲವು ನಿಜವಾದಲ್ಲಿ ಆ ಸದ್ಭಕ್ತಗೆ ಮುಂದಿನ ಐದು ಸ್ಥಲವು ತನ್ನಿಂದ ತಾನೇ ಸಾಧ್ಯವಾಗುವವು ಹೇಗೆಂದರೆ, ಸಾಕ್ಷಿ "ಪರವಧುವಂ ಪರದ್ರವಿಣಮಂ ಪರಹಿಂಸೆಯನ್ನೈದ ದೂರದಿಂ। ಪರಿಹರಿಸಿ ಸ್ವದೇಶಿಕ ನಿರೂಪಿತಮಪ್ಪ ಷಡರ್ಥ ಸಂಗ್ರಹಾ। ಚರಣೆಯೊಳೇಕಲಿಂಗ ನಿಜ ನಿಷ್ಠೆ ಸಮಾಹಿತಮಾದಡಂತದೇ ಪರಮ ಮಹೇಶ್ವರ ಸ್ಥಲದ ಲಕ್ಷಣ ವೃತ್ತಿಪವಂ ಶಿವಾಧವಾ" ಎಂಬ ಮಾಯಿದೇವ ಪ್ರಭುಗಳ ವಾಕ್ಯದ ಅನ್ವಯವು ಹೇಗೆಂದರೆ, ಸಹಜ ಸದ್ಭಕ್ತರ ವರ್ತನೆಯಲ್ಲಿ, ಪರಸತಿ, ಪರಾರ್ಥ, ಪರಹಿಂಸೆಗಳಂ ಬಿಟ್ಟು ಸದ್ಗುರುನಾಥನುಪದೇಶಕ್ರಮದಂತೆ, ಷಡರ್ಥ ಸಂಗ್ರಹಾಚರಣೆಯಲ್ಲಿ, "ಏಕಮೂರ್ತಿಸ್ತ್ರಯೋ ಭಾಗಂ ಗುರುಲಿಂಗಂ ತು ಜಂಗಮಂ॥ ಜಂಗಮಂ ಗುರುಲಿಂಗಂ ಚ। ತ್ರಿವಿಧಂ ಲಿಂಗ ಮುಚ್ಯತೆ॥" ಎಂಬಾಗಮ ಪ್ರಮಾಣದಂತೆ, ಏಕಲಿಂಗನಿಜನೈಷ್ಠೆಯಲ್ಲಿ ಕೂಡಿದ ಭಕ್ತಸ್ಥಲದಾಚರಣೆಯಲ್ಲಿ ಮಹೇಶ್ವರ ಸ್ಥಲವಡಗಿಪ್ಪುದು ಸದ್ಭಕ್ತರಲ್ಲಿ ಅನ್ಯ ಸ್ತ್ರೀಯರ ವ್ಯಸನ, ಅನ್ಯ ದ್ರವ್ಯಕಾಂಕ್ಷೆ, ಅನ್ಯ ಪ್ರಾಣ ಹಿಂಸ, ಅನ್ಯ ದೈವದ ಭಜನೆಗಳಂ ತಿರಸ್ಕರಿಸುತ್ತ ಸದ್ಗುಣಗಳಿಂದ ಲೋಕೋಪಕಾರಿಗಳಾಗಿ ವರ್ತಿಸಬೇಕೆಂಬಾಶೆಯುಂಟಾಗಿ, ಜಗದೋಪಕಾರಿಗಳಾಗಿರುತ್ತ ದುಷ್ಟರಾದ ದುರ್ಜನರಂ ತಿರಸ್ಕರಿಸಿ, ಹಿಡಿದಾಚಾರಮಂ ಬಿಡದೆ ನಡಿಸಬೇಕೆಂಬ ಛಲದ ನೈಷ್ಠೆಯಲ್ಲಿ ಪಂಚಾಚಾರವೇ ಪ್ರಾಣವಾಗಿ ವರ್ತಿಸುವ ವೀರಮಾಹೇಶ್ವರಾಚಾರ್ಯ ಸ್ಥಿತಿಯೇ ಮಹೇಶ್ವರ ಸ್ಥಲವೆನಿಸುವದು.

ಆ ಮಹೇಶ್ವರ ಸ್ಥಲದಲ್ಲಿ ಪ್ರಸಾದಿ ಸ್ಥಲವಡಗಿಪ್ಪುದು ಹೇಗಂದರೆ ಮಹೇಶ್ವರ ಸ್ಥಲದಾಚರಣೆಯು ನಿಜವಾಗಿ ಸಕಲ ಪದಾರ್ಥಂಗಳನ್ನು ಅಂತರಂಗ ಬಹಿರಂಗದಲ್ಲಿ, ಜ್ಞಾನಕ್ರಿಯಾರೂಪ ಸಕಲ ಭೋಗೋಪಭೋಗಂಗಳನೆಲ್ಲ ಲಿಂಗವಿರಹಿತವಾಗಿ ಅಣುಮಾತ್ರವಾದರೂ ಕೊಳ್ಳದೆ, ಸಕಲವೆಲ್ಲವನು ಲಿಂಗಕ್ಕರ್ಪಿಸಿ ಲಿಂಗ ಭೋಗೋಪಭೋಗಿಯಾಗಿರ್ದಲ್ಲಿ ಆ ಭಕ್ತನೇ ಅನಾದಿ ಪ್ರಸಾದಿ ಎನಿಸಿಕೊಂಬುವನು

ಆ ಪ್ರಸಾದಿಯು ಸ್ಥಲದಲ್ಲಿ ಪ್ರಾಣ ಲಿಂಗಿಸ್ಥಲವಡಗಿರ್ಪುದು ಹೇಗೆಂದರೆ "ಪರಿಪೂರ್ಣ ಪ್ರಸನ್ನೇತಿ" ಎಂದುಂಟಾಗಿ, ತಾನು ಪೂರ್ಣ ಪ್ರಸಾದ ಕಾಯನಾದಲ್ಲಿ ಲಿಂಗ ಬೇರೆ ತಾ ಬೇರೆಂಬ ಭಿನ್ನತ್ವವಿಲ್ಲ. ಸರ್ವಾಂಗಲಿಂಗಮಯವಾಗಿ, ವಾಯುಪ್ರಾಣವಳಿದು, ಲಿಂಗಪ್ರಾಣವಾಗಿರ್ಪಲ್ಲಿ, ಆ ಭಕ್ತನೇ ಪ್ರಾಣಲಿಂಗಿ ಎನಿಸಿರ್ಪನು.

ಪ್ರಾಣಲಿಂಗಿ ಸ್ಥಲದಲ್ಲಿ ಶರಣಸ್ಥಲವಡಗಿರ್ಪುದು ಹೇಗಂದರೆ ಪಂಚೇಂದ್ರಿಯ ಸಕಲ ಸುಖಭೋಗಂಗಳನೆಲ್ಲ ಲಿಂಗಕ್ಕೆ ಕೊಟ್ಟು ಭೋಗಿಸುವಲ್ಲಿ, ಶರಣಸತಿ ಲಿಂಗಪತಿ ಭಾವದಿಂದ ನಿರ್ವಂಚಕ ನಿರಭಿಮಾನದಿಂದ ಲಿಂಗ ಸಹ ಭೋಗದಲ್ಲಿ ತೆರೆ ಮರೆ ಇಲ್ಲದೆ ಪರಮ ಪತಿವ್ರತಾಂಗನೆಯು ತನ್ನಂಗ ಸುಖವನ್ನು ಪುರುಷಂಗಿತ್ತು ಮಮಕಾರದಿಂದಪ್ಪಿದಲ್ಲಿ ನಿಜ ವಲ್ಲಭನಂಗ ಭೋಗದ ಸರ್ವ ಸುಖವು ತನಗುಪಭೋಗದಾನಂದವಾಗುವಂತ ಶರಣನ ಲಿಂಗಭೋಗೋಪಭೋಗದ ಪರಿ ಇಪ್ಪುದಾಗಿ ಈ ರೀತಿಯಿಂದ ಸಕಲ ಸುಖಭೋಗಂಗಳನೆಲ್ಲ ಸರ್ವೇಂದ್ರಿಯ ಮುಖಗಳಿಂದ ವೀರಶೈವಾಗಮೋಚಿತ ಕ್ರಮದಿಂದ ಅರ್ಪಿಸುತ್ತ ಲಿಂಗದ ಸರ್ವಾನಂದವೇ ತನಗೆ ಪ್ರಸಾದ ಭೋಗವಾಗಿ ಸರ್ವಾಂಗಲಿಂಗಮಯನಾಗಿ ವರ್ತಿಸುವ ಭಕ್ತನೇ ಶರಣನೆನಿಸಿರ್ಪನು.

ಶರಣ ಸ್ಥಲದಲ್ಲಿ ಐಕ್ಯಸ್ಥಲವಡಗಿಪ್ಪುದು ಹೇಗೆಂದರೆ ತನಗವಸಾನ ಭೂಮಿಯೇ ಶಿವಲಿಂಗ, ಆ ಶಿವಲಿಂಗಕ್ಕವಸಾನಭೂಮಿಯೇ ತಾನಾಗಿ, ಸಕಲ ಪ್ರಪಂಚ ರಚನಾ ಕ್ರಿಯೆಯುಂ ನೆರೆ ಬಿಟ್ಟು, ಅಷ್ಟವಿಧಾರ್ಚನ ಷೋಡಶೋಪಚಾರ ಕ್ರಿಯೆಗಳನೆಲ್ಲವ ನಷ್ಟವ ಮಾಡಿ, ನಿರ್ಭಾವ ಸ್ವರೂಪನಾಗಿ, ಶಿಖಿ ಕರ್ಪುರ ಸಂಯೋಗದಂತೆ, ಸ್ವಯಂಜ್ಯೋತಿ ಸ್ವರೂಪನಾಗಿ, ಲಿಂಗದೊಳ್ ಬೆರೆದು, ಲಿಂಗಾಂಗಸಾಮರಸ್ಯನಾಗಿರ್ಪಲ್ಲಿ ಆ ಭಕ್ತನೇ ಐಕ್ಯನಾಗಿರ್ಪನು.

ಈ ಷಟ್‌ಸ್ಥಲ ಜ್ಞಾನ ಪೂರ್ಣನಾದ ಸದ್ಭಕ್ತನ ಸಹಜ ಭಕ್ತಿಯು ನಿಲವ ತಿಳಿಯಬೇಕಾದರೆ, ಬಹುಜ್ಞಾನಾರ್ಜಿತ ಪುಣ್ಯದಿಂದಲ್ಲದೆ ತಿಳಿಯದು. "ಏಕೇನ

ಜನ್ಮ ಸಂಪ್ರಾಪ್ಯ । ಕರ್ಮಜ್ಞಾನ ಸಮಾಧಿಭಿಃ ॥ ನರಾಣಾಂ ಕ್ಷೀಣ ಪಾಪಾನಾಂ। ಶಿವಭಕ್ತಿಃ ಪ್ರಜಾಯತೆ” ಎಂದು ಮತ್ತು “ದುರ್ಲಭಂ ನರ ಜನ್ಮಾನಿ । ವಿವೇಕ ಮತಿ ದುರ್ಲಭಂ ॥ ದುರ್ಲಭಂ ಶಿವಭಕ್ತಾನಾಂ । ಜ್ಞಾನೀ ತ್ರೈಲೋಕ್ಯ ದುರ್ಲಭಂ” ಎಂದುಂಟಾಗಿ, ಈ ಶಿವ ಸದ್ಭಕ್ತಿಯು ಪ್ರಾಪ್ತಿಸಬೇಕಾದರೆ, ಬಹು ಜನ್ಮದ ಸುಕೃತದಿಂದಲ್ಲದೆ ಪ್ರಾಪ್ತಿಸದು.

ಸದ್ಭಕ್ತರಾದವರು ಸತ್ಯಶುದ್ಧ ಕಾಯಕದಿಂದ ಮಾಡಿ ನೀಡಿ ಮುಕ್ತರಾಗಬೇಕು. ಈ ಸತ್ಯಶುದ್ಧ ಕಾಯಕವೇ ಕೈಲಾಸವೆಂದರಿಯದೆ, ಕೆಲವು ಕೆಲವು ಭಿನ್ನವ್ರತ ನೇಮಾಚಾರದಿಂದಾಚರಿಸಿ, ಪೂರ್ಣ ಭಕ್ತಿಗೆ ವಿಲಕ್ಷಣರಾಗಿ, ಕೈಲಾಸಾದಿ ಚತುರ್ವಿಧ ಫಲಗಳ ಧರ್ಮಾಚಾರ ಪದಗಳಾದ ಧರ್ಮಾದಿ ಮೋಕ್ಷಾಂತ್ಯಮಾದ ಚತುರ್ವಿಧ ಫಲಂಗಳ ಪಡೆವ ಭಿನ್ನ ಭ್ರಾಂತರಾಗಿರ್ದವರು ಕೈಲಾಸದಲ್ಲಿರ್ದರೂ ಭಿನ್ನ ಭವಿತ್ವವೇ ಮುಂದುಗೊಂಡಿರ್ದ ಕಾರಣ ಆ ಕೈಲಾಸದಲ್ಲಿರ್ದರೂ ಶಿವನ ಸಾನ್ನಿಧ್ಯವಿಲ್ಲದೆ ಭವ ಹಿಂಗದೇ ಇರ್ಪರು ಅದು ಹೇಗೆಂದರೆ, ಒಬ್ಬಾನೊಬ್ಬ ರಾಜನ ಪಟ್ಟಣದಲ್ಲಿ ಒಬ್ಬ ದರಿದ್ರನು ನೆಲೆಗೊಂಡಿರ್ದರೂ ರಾಜಬಹುಮಾನವಿಲ್ಲದೆ, ರಾಜಸಂಗ ಸಮರಸವಿಲ್ಲದೆ, ದಾರಿದ್ರ್ಯವನ್ನನುಭವಿಸುತ್ತಲಿರ್ದಂತೆ, ಆ ಷಟ್‌ಸ್ಥಲಜ್ಞಾನ ಹೀನರಾಗಿದ್ದವರು ಕೈಲಾಸದಲ್ಲಿರ್ದರೂ ನಿಜ ಸುಖ ಸಾಧ್ಯವಾಗದೆ, ಭವದುಃಖಿಗಳಾಗಿಯೇ ಇರ್ಪರು.

ಷಟ್‌ಸ್ಥಲಜ್ಞಾನ ಸಂಬಂಧವಾದ ಸದ್ಭಕ್ತಗಣಂಗಳು ಈ ಲೋಕದಲ್ಲಿರ್ದರೂ, ಪರಶಿವನ ಸ್ವಯಾನಂದ ಮೂರ್ತಿಗಳು “ಭಾಸಿತೇರಾಜಪುತ್ರವತ್” ಎಂಬಂತೆ ರಾಜನಿಗೆ ಮಗನಾಗಿ ಹುಟ್ಟಿದಲ್ಲಿ, ಲೋಕದ ಭಿನ್ನಾತ್ಮರಿಗೆ ರಾಜಭಯ, ರಾಜಮಾನ್ಯಗಳುಂಟಲ್ಲದೆ ರಾಜ ಕುಮಾರನಿಗೆ ರಾಜಭಯಾದಿಗಳುಂಟೇ? ಹಾಗೆ ಸದ್ಭಕ್ತರು ಶಿವನಿಗೆ ಸಲುಗೆಗರಾಗಿರುವದರಿಂದ ಮತ್ತು ಶಿವನಿಂ ಹುಟ್ಟಿ ಮತ್ತಾ ಶಿವನಂ ಮುಟ್ಟಿದ ಕಾರಣ ದಾಸಿಯಂತೆ ಭಿನ್ನಕ್ರಿಯಾದಿಗಳ ಭಯವಿಲ್ಲದೆ ಸ್ವತಂತ್ರರಾಗಿ ಸ್ವಲೀಲಾನಂದ ಭಕ್ತಿಯನಾಚರಿಸುತ್ತಿರ್ಪರು

ಆ ಸದ್ಭಕ್ತನಿಪ್ಪ ಲೋಕವೇ ಕೈಲಾಸ. ಆತನಿರ್ದಲ್ಲಿರುವದೇ ಸಾಲೋಕ್ಯಪದವು. ಆತನ ಸಮೀಪದಲ್ಲಿರ್ದ ಸೇವಕರಾದವರೇ ಸಾಮೀಪ್ಯ ಪದಸ್ಥರು. ಆ ಭಕ್ತನಾಚರಣೆಯಂತೆ ಆಚರಣೆಯುಳ್ಳವರೇ ಸಾರೂಪ್ಯಪದಸ್ಥರು. ಆ ಸದ್ಭಕ್ತನ ಸಾಮರಸ್ಯಾನಂದ ಗೋಷ್ಠಿಯಲ್ಲಿಪ್ಪವರೇ ಸಾಯುಜ್ಯಪದಸ್ಥರು. ಇದನರಿಯದೆ, ಧರ್ಮಾರ್ಥ ಕಾಮಮೋಕ್ಷಂಗಳಂ ಬಯಸಿ, ಕರ್ಮನಿಷ್ಠರಾಗಿರ್ದವರು ಭವಿಗಳೆನಿಸುವರು. ಸಾಕ್ಷಿ “ಕೈಲಾಸಾದಿ ಪದೇಷ್ವಾಶಾ ಯಸ್ತಸ್ಯ ಭವಿನೋ ಭವೇತ್ ॥ ಭವಿಶ್ಶೈವಪದಂ ಸರ್ವಂ । ತದ್ಗಣೋ ಭವಿನೋ ಗಣಾಃ ॥” ಎಂದುಂಟಾಗಿ, ಧರ್ಮದಿಂದ ಅರ್ಥ, ಅರ್ಥಪ್ರಯೋಜನವಾದುದೇ ಕಾಮ, ಕಾಮ

ದಲ್ಲಿ ಜ್ಞಾನೋದಯದಿಂದ ಮೋಕ್ಷಾಪೇಕ್ಷೆ ಆದು ಕಾರಣ ಈ ಚತುರ್ವಿಧ ಫಲಪದತ್ವಂಗಳನಿಚ್ಛೈಸದೆ ಶಿವಧರ್ಮದಿಂದಿರ್ಪುದೇ ಧರ್ಮ. ಆ ಶಿವ ಧರ್ಮ ಭಕ್ತಿಯಿಂದ ಪಾರಮಾರ್ಥಜ್ಞಾನಿಯಾಗಿರ್ಪುದೇ ಅರ್ಥ ಮತ್ತು ಕಾಮಾದಿ ಅರಿಷಡ್ವರ್ಗಂಗಳಿಗೆ ವಿಲಕ್ಷಣ ಬ್ರಹ್ಮನಪ್ಪ ನಿಷ್ಕಾಮಿಯಾಗಿಪ್ಪೆನೆಂಬಾಪೇಕ್ಷೆಯೇ ಕಾಮ. ಸ್ವಸ್ವರೂಪ ಸಾಕ್ಷಾತ್ಕಾರದಿಂದಾ ಭಕ್ತನ ಸಾಮರಸ್ಯವೇ ಮೋಕ್ಷ. ಈ ಪ್ರಕಾರವಾದ ಆಚರಣೆಯಿಂದಿರ್ಪುದೇ ಸದ್ಭಕ್ತಿ ಎನಿಸುವದು.

ಇತಿ ಶ್ರೀ ವೀರಶೈವ ಸದ್ಭಕ್ತರ ಜ್ಞಾನಾಚರಣೆ ಎನಿಸ ಪಾರಮಾರ್ಥ ಕೃಷಿಯಲ್ಲಿ ಸದ್ಭಕ್ತಿ ಸ್ಥಿತಿಯನ್ನು ಹೇಳಿರುವೆನು. ಇನ್ನು ಮುಂದೆ ಸಹಜಾನಂದ ಸದ್ಯೋನ್ಮುಕ್ತಿ ಸ್ವರೂಪವಾದ ನಿಜಪಾರಮಾರ್ಥಕೃಷಿ ಎನಿಸ ಕಡೆಯ ಇಪ್ಪತ್ತು ಮೂರನೆಯ ಪ್ರಕರಣವನ್ನು ಆದ್ಯರ ವಚನಾನುಭಾವ ಸಮ್ಮತವಾಗಿ ವಿಸ್ತರಿಸುವೆನು.

---

# ೨೪ ನೇ ಪ್ರಕರಣವು.

## ೧ ಪಾರಮಾರ್ಥ.

ಪಿಂಡ ಬ್ರಹ್ಮಾಂಡಯೋರೈಕ್ಯಂ ಎಂಬ ಶೃತಿ ಪ್ರಮಾಣ ಉಂಟಾಗಿ, ತನ್ನಂಗದೊಳಗಜಾಂಡವೆಲ್ಲವಂ ಕಂಡ ಪರಿ ಎಂತೆಂದರೆ, ಪಾದಂಗಳೇ ಪಾತಾಳಂಗಳು ಕಟಿಯಿಂದ ಕಂಠ ಪರ್ಯಂತರ ಮರ್ತ್ಯಲೋಕವು ಮಸ್ತಕವೇ ಸ್ವರ್ಗವೆಂದೆನಿಸುವದು ಅಷ್ಟಮದವೇ ದಿಗ್ದಂತಿಗಳು ತಲೆಯ ಚಿಪ್ಪೆಂಬುದೇ ಊರ್ಧ್ವಕಟಾಹ ಪಾದ ತಳವೇ ಅಧೋಕಟಾಹವೆನಿಸುವದು. ಕಠಿಣ ದ್ರವ್ಯಾದಿಗಳೈದು ಭೂತಂಗಳು ವದನ ಗುದಂಗಳೇ ಸ್ವರ್ಗನರಕಂಗಳು. ವಾಮಭಾಗದ ನೇತ್ರವೇ ಚಂದ್ರ ದಕ್ಷಿಣ ಭಾಗದ ನೇತ್ರವೇ ಸೂರ್ಯನು. ಉಸುರಿಡೆಯಾಟವೇ ವಾಯು. ಏಳು ಧಾತುಗಳೇ ಸಪ್ತ ದ್ವೀಪಂಗಳು ದೇಹಾದ್ಯಂತವಾಗಿರುವ ಸಮಸ್ತ ಕೇಶಂಗಳೇ ತರುಲತೆಗಳು. ಏಳಾವರ್ತಿಯೇ ಸಪ್ತ ಸಮುದ್ರಂಗಳು. ಗ್ರಂಥಿಗಳೆಲ್ಲವು ಗುಡ್ಡಬೆಟ್ಟಂಗಳು ಸುಳಿಯುತ್ತಿಹ ಸಕಲ ಕರಣಾದಿಗಳೇ ಸಮಸ್ತ ಖಗಮೃಗಾದಿಗಳು. ಪುಣ್ಯ ಪಾಪಂಗಳೇ ದನುಜ ದಿವಿಜರು ಜನನವೇ ಸೃಷ್ಟಿ. ಮರಣವೇ ಲಯುವೆಂದೆನಿಸುವದು ಅಜ್ಞಾನವೆಂಬುದೇ ಕಾರ್ಗತ್ತಲು. ಅರಿವೇ ಬೆಳಕು ನಿದ್ರೆಯೇ ರಾತ್ರಿ ಜಾಗ್ರವೇ ಹಗಲು ದುಃಖವೇ ಇಹ. ಸುಖವೇ ಪರ ಜನನಿ ಜನಕರೇ ಪಾರ್ವತೀ ಪರಮೇಶ್ವರರುಗಳು ಮುಖವೇ ಮೂಡಲು ಬೆನ್ನೇ ಪಡುವಲು ಎಡವೇ ಉತ್ತರದಿಕ್ಕು ಬಲವೇ ದಕ್ಷಿಣ ದಿಕ್ಕು. ಜ್ಞಾನೇಂದ್ರಿಯ ಸಮುದಾಯವೇ ಸುಜನರು. ಕರ್ಮೇಂದ್ರಿಯ ಪ್ರಸರವೇ ಖಲಜನರು ಸಮಸ್ತ ರೋಗಂಗಳೇ ಉತ್ಪಾತಂಗಳು ಮನವೇ ದೊರೆಯು. ಉಳಿದ ಕರಣಂಗಳೇ ಜನರು. ಅಶುಚಿಯೇ ಶೂದ್ರತ್ವವು ಆಚಾರವೇ ಬ್ರಾಹ್ಮಣ್ಯ. ಅಶನವೇ ಸುಗ್ಗಿ. ಹೊಟ್ಟೆಯೇ ಹಗೆ ದಶ ಮಲವೇ ಕಸವು. ಪುಸಿಯೇ ಹೊಲೆತನ ದಾರಿದ್ರ್ಯಂಗಳೇ ಸುಭಿಕ್ಷ ದುರ್ಭಿಕ್ಷಂಗಳು. ಸತ್ವರಜತಮವೆಂಬ ತ್ರಿವಿಧ ಗುಣಗಳೇ ತ್ರೈಮೂರ್ತಿಗಳು. ಐದು ಅವಸ್ಥೆಗಳೇ ಪಂಚಕೃತ್ಯಂಗಳು. ಆದಿಯೇ ಮೃತ್ಯು ಮಾರಾಗ್ನಿ ಮುಖ್ಯವೇ ದಾವಾಗ್ನಿಮೊದಲಾದ ಪಂಚಾಗ್ನಿಗಳು ಶೀತೋಷ್ಣಂಗಳೇ ಚಳಿ ಬಿಸಿಲು. ಆರಯ್ಯ ಸಿರಿಯೇ ಷಡೃತುಗಳು. ವೈಚಿವರೇ ವೃಷ್ಟಿಯು. ಆಧಾರ ಮೊದಲಾದ ದಶವಿಧ ಚಕ್ರಂಗಳೇ ಕ್ಷೇತ್ರಂಗಳು. ಈಡಾದಿ ನಾಡಿಗಳೇ ತೀರ್ಥಂಗಳು. ಮಿಕ್ಕ ನಾಡಿಗಳೇ ಶಟಣಿಗಳು. ಬಾಲ್ಯಾದಿಗಳೇ ಮೂಜಗಂಗಳು ಸಿರವೇ ಮೇರು. ಆ ಸಿರದೊಳ್ ಸೇರಿ ಸುಸ್ಥಿರವಾದ ಸುಷುಮ್ನವೇ ರಜತ ಶೃಂಗವು. ಅಲ್ಲಿಪ್ಪ ಜೀವನೇ ಶಿವನು.

ಇತ್ಯಾದಿ ಬ್ರಹ್ಮಾಂಡದ ಅಖಿಳ ಲಕ್ಷಣಗಳನ್ನು ಪರಿಕಿಸುತ, ತನ್ನಯ ಶರೀರ ದೊಳು ಕಂಡು, ವತ್ತೆ ಘಟಮಠಾದಿಗಳ ಒಳಹೊರಗೆ ತುಂಬಿರ್ದ ಗಗನ ದೋಪಾದಿಯೊಳು, ಶರೀರ ಕೋಟಿಗಳ ನುಂಗಿರುತಿರ್ದ ಬ್ರಹ್ಮಾಂಡದೊಳ ಹೊರಗೆ, ಇನಿತಾದರೂ ತೆರಹಿಲ್ಲದೆ, ಇಡಿಕಿರಿದಾಗಿ ತೋರುತ್ತಿರ್ದ ಚಿದ್ಘನ ಶೇಷ ಭೂಷಣ ಪ್ರಭು ಪದ ದ್ವಯ ಬ್ರಹ್ಮವದು ಪರಿಪೂರ್ಣವೆನಿಸಿರ್ಪುದು.

ಪರಿಪೂರ್ಣ ಬ್ರಹ್ಮದಲ್ಲಿ, ಇಂತನಂತ ಬ್ರಹ್ಮಾಂಡಂಗಳಂತೆ, ಅನಂತ ಪಿಂಡಾಂಡಗಳುಂಟು. ಅವುಗಳಲ್ಲಿ ಜಡಪಿಂಡಗಳಾದರೆ ಶಿವತತ್ವಕ್ಕೆ ಕಾರಣ ವಲ್ಲಾಗಿ, ಈ ಬ್ರಹ್ಮಾಂಡದಲ್ಲಿ ಕೆಲವು ಭೂಮಿಗಳು ಕಲ್ಲು ಮೊರಡಿಗಳಾಗಿ ಏನೇನೂ ಫಲಿಸದೆ, ಭೂತಪ್ರೇತ ಪಿಶಾಚಾದಿ ನಿಶಾಚರ ಪ್ರಾಣಿಗಳ ಮತ್ತು ಕ್ರೂರಪಶುಗಳ ವಾಸಸ್ಥಾನವಾದ ದುರಾರಣ್ಯದಂತಾಗಿ ಕೆಟ್ಟು ಹೋಗುತ್ತಿಹವು. ಹೇಗಂದರೆ, ಸಕಲ ದುರ್ಗುಣಂಗಳ ಸಮುದಾಯದಿಂದ ತುಂಬಿದ ಅಜ್ಞಾ ನಾಂಧಕಾರಭರಿತವಾದ ಖಲಜನರ ಶರೀರವೆಂಬ ಜಡ ಪಿಂಡಾಂಗಳೇ ದುರಾರಣ್ಯ ವೆನಿಸಿರ್ಪುವು.

ಪುಣ್ಯಮಯರಾದ ಸದ್ಗುಣ ಸದಾಚಾರ ಸುಜ್ಞಾನ ಸದ್ಭಕ್ತರೆನಿಪ ಜ್ಞಾನ ಕಲಾತ್ಮರ ಹೃದಯವು ಜ್ಞಾನಸೂರ್ಯಪ್ರಭಾಮಯವಾಗಿರುವದರಿಂದ, ಚಿತ್ಪಿಂಡ ವೆಂಬ ಪುಣ್ಯಭೂಮಿ ಎನಿಸಿ, ಸಮಸ್ತೋತ್ತಮ ಧಾನ್ಯಾದಿ ಸಕಲ ಫಲ ಪದಾ ರ್ಥಂಗಳನ್ನು ಬೆಳಿಸತಕ್ಕ ದಿವ್ಯಕ್ಷೇತ್ರ, ಉದ್ಯಾನವನ, ಪುಣ್ಯವನ, ಪುಷ್ಪವನ, ಬಿಲ್ವವನ, ಕದಳೀ ಚೂತವನ, ಲಿಂಬಿ ದ್ರಾಕ್ಷವನಗಳೆಂಬ ಪೆಸರಂ ಪಡೆದು ಲಿಂಗಕ್ಷೇತ್ರಂಗಳೆನಿಸಿರ್ಪ ಚಿತ್ಪಿಂಡಂಗಳಲ್ಲಿ ಆದಿಪಿಂಡ ಮಧ್ಯಪಿಂಡ ಚಿತ್ಪಿಂಡ ವೆಂಬ ಪಿಂಡತ್ರಯ ಭೇದಂಗಳುಂಟು ಅವುಗಳಲ್ಲಿ ಸಕಲ ತತ್ವಂಗಳಿಂ ಕೂಡಿರ್ದುದೇ ಆದಿಪಿಂಡ ಈ ಪಿಂಡವು ಮನುಷ್ಯರುಗಳಲ್ಲಿ ಜ್ಞಾನ ಕಲಾತ್ಮರು ಧರಿಸಿದ ಪಿಂಡವು ಸಕಲ ನಿಃಕಲ ತತ್ವಂಗಳೊಡನೆ ಕೂಡಿರ್ದುದೇ ಮಧ್ಯ ಪಿಂಡವು. ಇದು ಬಸವಾದಿ ಪುರಾತನರು ಧರಿಸಿದ ಪಿಂಡವು. ಕೇವಲ ನಿಃಕಲ ತತ್ವವಾದದ್ದೇ ಚಿತ್ಪಿಂಡವು. ಇದು ನೂರೊಂದು ವಿರಕ್ತರು ಧರಿಸಿದ ಪಿಂಡವು.

ಈ ತ್ರಿವಿಧ ಭೇದವಾದ ಜ್ಞಾನಪಿಂಡಂಗಳಲ್ಲಿ ಶಿವತತ್ವ ಜ್ಞಾನವೆಂಬ ಪಾರಮಾರ್ಥದ ಬೆಳೆಯಾದ ಕೃಷಿಗೆ ಮುಖ್ಯವಾದ ಮಹಾಕ್ಷೇತ್ರವಾಗಿ ಪುಷ್ಪ ವಾಟ ಎನಿಸಿ, ಪುಣ್ಯ ಭೂಮಿ ಎನಿಸಿ, ಹೊಲಗದ್ದೆ ಕ್ಷೇತ್ರಂಗಳೆನಿಸಿ, ಸತ್ಫಲ ಪ್ರದರಾಗಿ, ತೋಂಟದಾರ್ಯರೆನಿಪ ಪರಶಿವ ಮೂರ್ತಿಯ ವಾಸಸ್ಥಾನವಾದ ಚಿದ್ ಬ್ರಹ್ಮಾಂಡವೆಂಬ "ದಿವ್ಯ ತೋಟದೊಳ್" ಪರಿ ಶೋಭಿಸುತ್ತಿರ್ಪ ಬ್ರಹ್ಮ ಕ್ಷೇತ್ರವೆನಿಪ ಸಹಸ್ರದಳ ಕಮಲ ಪುಷ್ಪ ವನದ ಮಧ್ಯಭಾಗದಲ್ಲಿ, ಪಶ್ಚಿಮ ಚಕ್ರವೆಂಬ ಚೌಕಿಯ ಮಠಂಗಳಲ್ಲಿ, ಅಣುಚಕ್ರವೆಂಬ ಸಿಂಹಾಸನದ ಮೇಲೆ

ನಿಃಕಲತತ್ವವೆಂಬ ನಿರಂಜನ ಜಂಗಮವೆನಿಪ ತೋಂಟದ ಸಿದ್ಧೇಶ್ವರ ದೇವರೆನಿಸಿರ್ಪ ಪರಶಿವ ಮೂರ್ತಿಗಳ ನಿಜಾನಂದ ನಿಳಯವಾದ ಭಕ್ತಹೃನ್ಮಂದಿರವೆಂಬ ದಿವ್ಯಕ್ಷೇತ್ರವು ಶ್ರೀಗುರುವೆಂಬ ಒಕ್ಕಲುಮಗನ ವಶವಾಗಿರ್ಪುದು.

ಶ್ರೀಗುರುದೇವನೆಂಬ ಪಾರಮಾರ್ಥ ಕೃಷಿಕನೇ ಬ್ರಹ್ಮಾಂಡಂಗಳನಂತಕ್ಕೆಲ್ಲ ತಾನೇ ಕರ್ತುವಾದ ಕಾರಣ ಈ ಲೋಕದ ಕೃಷಿಕರಿಗೆ ಬಾದಶಹ ರೈತರೆಂಬ ಪೆಸರಾಯಿತು. ಪಾರಮಾರ್ಥ ಕೃಷಿಕನಾದ ಶ್ರೀಗುರುದೇವನೆಂಬ ಪರಶಿವ ಮೂರ್ತಿ ಹಲಾಯುಧಂಗೆ, ಬ್ರಹ್ಮೇಂದ್ರಾದಿ ದೇವತಾ ಸಾರ್ವಭೌಮರಾದ ರಾಜಾಧಿರಾಜರೆಲ್ಲರು ಮತ್ತು ಯಕ್ಷ ಕಿನ್ನರ ಗರುಡ ಗಂಧರ್ವ ಉರಗ ಮಯೂರ ವಿದ್ಯಾಧರಾಪ್ಸರ ಕುಲದ ರಾಜ ಶ್ರೇಷ್ಠರೆಲ್ಲರು ಸೇವಕರಾಗಿರ್ಪರು.

ಈ ಲೋಕದಲ್ಲಿ ಸದ್ಗುಣ ಸನ್ಮಾರ್ಗದಾಚರಣೆಯುಳ್ಳವರಾದ ಕೃಷಿಜ್ಞಾನ ಪರಿಣತರಾದ ಕೃಷಿಕೃತ್ಯ ಚಾತುರ್ಯ ಧುರೀಣರಾದ ಲೌಕಿಕ ಕೃಷಿಕರೆಂಬ ರೈತಜನರೇ ಭೂಲೋಕಕ್ಕೆ ಬಾದಶಹರಾದ ಕಾರಣ ಈ ಲೋಕದ ಸಮಸ್ತ ರಾಜರೆಲ್ಲರು ಬಾದಶಹ ರೈತರ ಸೇವಕರಲ್ಲದೆ ರಾಜರೆಂಬವರೆಲ್ಲರು ಸ್ವತಂತ್ರ ಅಧಿಕಾರಿಗಳಲ್ಲ ರೈತ ಜನರಲ್ಲಿ ಗಂಭೀರತನದ ಸದ್ಬುದ್ಧಿಯುಳ್ಳ ಸರ್ವ ಜೀವ ದಯಾ ಪಾರಿಗಳಾದ ಲೋಕಹಿತಕಾರಿಗಳೆನಿಪ ಸರ್ವಕಲ್ಯಾಣ ಗುಣದ ಸಮುದಾಯದ ಸದ್ಗುಣದ ಪಂಚರೇ ಈ ಲೋಕದಲ್ಲಿ ಸ್ವತಂತ್ರಾಧಿಕಾರಿಗಳು. ಅವರ ಅಪ್ಪಣೆಯಂತೆ ಸಮಸ್ತ ರಾಜರೆಲ್ಲರು ವರ್ತಿಸತಕ್ಕದ್ದು

ಬ್ರಹ್ಮಾಂಡವೆಂಬ ಸುಕ್ಷೇತ್ರಕ್ಕೆ ಅಧಿಕಾರಿಯಾದ ಪರಶಿವಲಿಂಗವೆಂಬ ಹಲಾಯುಧನು ಶ್ರೀಗುರುದೇವನೆಂಬ ಒಕ್ಕಲಿಗನಾಗಿ ಬಂದು ಭಕ್ತಹೃತ್ಕಮಲವೆಂಬ ಭೂಮಿಯನ್ನು ಹಿಡಿದು, ಜ್ಞಾನಾಚರಣೆ ಎಂಬ ಕುಂಟೆಯ ಕಟ್ಟಿ ಹರಗಿ, ಹಸನ ಮಾಡಿ, ಶಿವೈಕ್ಯಭಕ್ತಿ ಎಂಬ ಮೂಲಪ್ರಣವ ಪಂಚಾಕ್ಷರವೆಂಬ ಜಗದಾದಿ ಬೀಜವನ್ನು ಬಿತ್ತಿ, ಸಚ್ಚಿದಾನಂದ ಪರಿಪೂರ್ಣ ಪ್ರಸಾದವೆಂಬಖಂಡಿತ ಫಲ ಪದಾರ್ಥವ ಘನರಾಶಿಯಂ ಪಡೆದುಂಡು, ಪಾರಮಾರ್ಥವೆಂಬ ಮಹದೈಶ್ವರ್ಯ ಸಂಪನ್ನನಾಗಿ, ವಿಶ್ವಕುಟುಂಬಿಯಾಗಿರ್ದಪನು. ಸಾಕ್ಷಿ ಪದ ॥ ಗುರುವು ಎಂಬೋ ಒಕ್ಕಲ ಮಗ ತನ್ನ। ಶರೀರವೆಂಬೋ ಭೂಮಿಯ ಹಿಡಿದು। ಹರಗಿ ಬಿತ್ತಿ ಹಸನ ಮಾಡಿದನು। ಶ್ರೀಗುರುರಾಯಃ ಹಸನವಾದ ಹರಿ ಎನಗ್ತೋಳಿದನು ॥ ಪಲ್ಲ ॥ ಜಾಲಿ ಬೊಬ್ಬಲಿ ಬೆಳದೈತಣ್ಣ। ಬಾಳಹುಲ್ಲು ತುಂಬೈತಣ್ಣ। ಮೇಲೆ ದೊಡ್ಡ ನೇಗಿಲ ಕಟ್ಟಿದನು॥ ಶ್ರೀಗುರುರಾಯ। ಬೀಳು ಭೂಮಿಯು ಹಸನವ ಮಾಡಿದನು ॥ ೧ ॥ ಎಂಟು ಎತ್ತು ಬಿಟ್ಟಾನಣ್ಣ। ಒಂಟಿ ಕೋಣನ ಕಟ್ಯಾನಣ್ಣ। ಕುಂಟೆ ಕಟ್ಟಿ ಮೆಟ್ಟಿ ಹರಗಿದನು॥ ಶ್ರೀಗುರುರಾಯ ॥ ಬಂಟೆ ನಮ್ಮ ಭಾವರೇರನ್ನೆ। ಶ್ರೀಗುರುರಾಯ ॥ ೨ ॥

ಮೂರು ಬೀಜವ ಬಿತ್ತಿದನಣ್ಣಾ। ಮೇರೆದಪ್ಪಿ ಬೆಳೆದ ಮೊಳಕೆ॥ ತೋರಿದ್ದಾಂಗ ಕೊಯ್ದು ಹಾಕಿದನು ಶ್ರೀಗುರುರಾಯ॥ ತೂರಿ ಒಮ್ಮೆ ರಾಶಿ ಮಾಡಿದನೋ ಶ್ರೀಗುರುರಾಯ ॥೩॥ ಮತ್ತೆ ಬಿತ್ತಲು ಬೀಜಿಲ್ಲಣ್ಣಾ। ಭತ್ತ ತುಂಬಲು ಗುಮ್ಮಿಲ್ಲಣ್ಣಾ। ಎತ್ತ ನೋಡಲು ಬತ್ತ ತುಂಬೈತೆ ಶ್ರೀಗುರುರಾಯ॥ ಚಿತ್ತಜವೈರಿ ಸಂಗಮೇಶನು ಶ್ರೀಗುರುರಾಯ॥೪॥ ಹೊಲದಾಗ ಒಂದ್ಹಕ್ಕಿಲ್ಲಣ್ಣಾ। ತಿಳಿದು ನೋಡಿದರೇನಿಲ್ಲಣ್ಣಾ। ಹಕ್ಕಿ ಹಿಡಿದು ತಾನೇ ಸಲಹಿದನೋ ಶ್ರೀಗುರುರಾಯ। ಹಕ್ಕಿ ಹಿಡಿದು ಸಲಹಿದನಣ್ಣಾ। ಬದುಕೆಂದೆನಗೆ ಕೊಟ್ಟನಣ್ಣಾ। ಕರ್ತನಿಂದ ಬಡತಾನ್ಹಿಂಗೀತೊ ಶ್ರೀಗುರುರಾಯ॥ ಕರ್ತ ನಮ್ಮ ಕೂಡಲಸಂಗನು ಶ್ರೀಗುರುರಾಯ॥೫॥ ಈ ಪದದ ಅನ್ವಯ ಭಾವದಂತೆ ಅಂತರಂಗದ ಪಾರಮಾರ್ಥ ಕೃಷಿಯಿಂದ ಜ್ಞಾನದ ಬೆಳೆಯನ್ನು ಮಾಡಿಕೊಂಡು, ಆ ಮಹಾ ಜ್ಞಾನವನ್ನೇ ಬಹಿರಂಗ ಕ್ರಿಯೆಗಳಲ್ಲಿ ಸತ್ಕಾಯಕವ ಮಾಡಿ ಸಂಬಂಧಿಸಿಕೊಂಡು, ಲೋಕಾಚಾರದ ಲೌಕಿಕ ಕೃಷಿಯ ಕಾರ್ಯವನ್ನು ಮಾಡುವಲ್ಲಿ ವಾಲ್ಮರಿಕೆ ಸೋಮನಾರಾಧ್ಯರು, ಎಲೇಶ್ವರದ ಕೇತಯ್ಯಗಳು ಲಿಂಗಧಾರಣ ಬಸವಗಳ ಕಟ್ಟಿ, ಲಿಂಗ ಮುದ್ರೆಯ ಭೂಮಿಯ ಮಾಡಿ, ಕೃಷಿಯ ಕಾಯಕವ ನಡಿಸಿದರು "ಗೃಹ ಕ್ಷೇತ್ರಂಚ ಧಾನ್ಯಾನಿ, ಗೋಕುಲಾನಿ ಧನಾನಿ ಗೌಃ। ಏತಲ್ಲಿಂಗಾಂಕಿತೇನ ಕೃತ್ವಾ। ಶಿವಭಕ್ತಿಂ ಸಮಾಚರೇತ್" ಎಂಬ ಆಗಮ ಪ್ರಮಾಣದಿಂದ ನಡೆದು ನುಡಿದು, ನಡೆ ನುಡಿಯೊಂದಾಗಿ, ಆಚರಿಸಿದುದೆ ಚಿತ್ಪಿಂಡವೆನಿಸುವದು

---

## ೨ ಪಾರಮಾರ್ಥಕೃಷಿಯು.

ವೃತ್ತಃ— "ರಾಗಾಧಿಕ್ಯತೆಯಿಂದ ಕೃಷಿಯ ಜಗದೊಳ್ಕಾಲ್ಪರ್ಗದೈದೇ ಸದಾ। ಭೋಗಕ್ಕಾಸ್ಪದವಾದ ಸಕಲ ಸುಪದಾರ್ಥಾನೀಕ ಮಿತ್ರೊಲ್ನಿಜೋ। ದ್ಯೋಗಂ ನಿರ್ಮಲಜ್ಞಾನ ಸತ್ಯವ್ರತ ಸದ್ಭಕ್ತಿ ಸದಾಚಾರಮುಂ। ತಾನೀಗಂ ನಡೆವರ್ಗೆ ಮುಕ್ತಿ ಕೊಡದೆ ಈ ಪಾರಮಾರ್ಥಕೃಷಿ" ಅಭಿಪ್ರಾಯವೇನೆಂದರೆ, ಈ ಪಾರಮಾರ್ಥಕೃಷಿಯು ಮುಕ್ತಿಪ್ರದವಾದುದೆಂಬುದಕ್ಕೆ ನಿಶ್ಚಯತ್ವವನ್ನು ಸ್ಥಿರಪಡಿಸುವೆನು. ಹೇಗಂದರೆ, ಈ ಗ್ರಂಥದ ಪೂರ್ವ ಭಾಗದಲ್ಲಿ ಕೃಷಿಯ ವಿಷಯವಾಗಿ ಹೇಳಿದ ಸುಲಭವಾದ ಸಕಲ ಯುಕ್ತಿಗಳನ್ನು ಚನ್ನಾಗಿ ತಿಳಿದು ಕೃಷಿಕರಾದ ಪ್ರವೀಣರು ಸಕಾಮದಿಂದ ಧೈರ್ಯಶಾಲಿಗಳಾಗಿ, ಕೃಷಿಯುದ್ಯೋಗದ ಸಕಲ ಕಾರ್ಯಗಳನ್ನು ಮಾಡೇನು, ಸಕಲ ಫಲಪದಾರ್ಥಗಳನ್ನು ಸಮೃದ್ಧಿಯಾಗಿ ಪಡೆದೇನು, ಎಂದು ಯತ್ನಿಸುವ ಸಾಧಕರ್ಗೆ ಭೂಮಿಯು ಹ್ಯಾಗೆ

ಸದ್ಯಃ ಫಲವನ್ನು ಕೊಡುತ್ತಿಹುದೋ ಹಾಗೆ ಈ ಪಾರಮಾರ್ಥಿಕಕೃಷಿಕರಾದ ಮುಮುಕ್ಷು ಜನರುಗಳಿಗೆ ಈ ಪುಣ್ಯಗ್ರಂಥವು ಸದ್ಯೋನ್ಮುಕ್ತಿಯಂ ಕೊಡುತ್ತಿಹುದು.

ಮೋಕ್ಷಾಪೇಕ್ಷಕರು ಈ ಗ್ರಂಥದ ಉತ್ತರ ಭಾಗವೆನಿಪ ಪಂಚಪ್ರಕರಣಗಳಲ್ಲಿ ಹೇಳಿದ ಸಕಲಸುನೀತಿ ಸದ್ಬೋಧೆಯನ್ನರಿದು, ಲೌಕಿಕದಲ್ಲಿ ಮುಗ್ಧರೆನಿಸಿದಾಗ್ಯಾದರೂ ನವಮು ಗ್ಧರಂತೆ ಪಾರಮಾರ್ಥವಿದಗ್ಧರಾಗಿ, ಪೂರ್ವದರುವತ್ತು ಮುವ್ವರು ಪುರಾತನರಂತೆ ಮತ್ತು ಬಸವಾದಿ ಪುರಾತನರಂತೆ, ನೂತನ ಪುರಾತನರಂತೆ ಶಿವಲಿಂಗೈಕ್ಯ ಸಕಾಮ ನಿಷ್ಠರಾಗಿ, ಅಂಗವೆಂಬ ಪೃಥ್ವಿವಿಡಿದು ಸುಜ್ಞಾನಾದಿ ಸುವಿಚಾರುದುದ್ಯೋಗದಿಂದ ವಿರತಿ ಎಂಬ ನಿಜಧೈರ್ಯ ಶಾಲಿಗಳಾಗಿ, ಬ್ರಹ್ಮಾದಿಗಳಿಗಸಾಧ್ಯವಾದ ನಿಜಮೋಕ್ಷವೆನಿಪ ಪರಬ್ರಹ್ಮೈಕ್ಯವನು ಜ್ಞಾನ ಬಲದಿಂದ ಗುರುಮಾರ್ಗಾಚಾರವಂ ಪಿಡಿದು ನಿರ್ಮಲನಾಗಿ ನಿಜಬೋಧೆವಡೆದು ಸದಾಚಾರಿಯಾಗಿ ಸುಜ್ಞಾನ ಸದ್ಭಕ್ತಿಗಳ ನಿಜವನರಿದಾಚರಿಸಿ ನಿಜಾಷ್ಟಾವರಣದನುವನರಿದು ಜೀವನ್ಮುಕ್ತನೆನಿಸಿ ಲಿಂಗಾಂಗ ಸಾಮರಸ್ಯ ಸಕೀಲಸಂಬಂಧ ವಿಚಾರಪರನಾಗಿ ನಿಜೈಕ್ಯತೆಯಂ ಪಡೆದು ಅಂಗಲಿಂಗ ಸಂಗಂಗಳೆಂಬ ಭೇದಗಳೇನೂ ತೋರದೆ ಪರಿಪೂರ್ಣ ಬ್ರಹ್ಮಾನುಭಾವಿಯಾಗಿ ಇಹಪರವರಿಯದೆ ವಿದೇಹ ಕೈವಲ್ಯ ಯುಕ್ತನಾಗಿ ಇಹಮೋತ್ತರ ಫಲಭೋಗವಿರಾಗಿಯಾಗಿ ನಿಷ್ಕಾಮಿ ಎನಿಸಿ ಸಚ್ಚಿದಾನಂದ ಸ್ವರೂಪದಿಂ ಕಮಲಪತ್ರೋದಕದ ದೃಷ್ಟಾಂತದಂತೆ ಸ್ವೇಚ್ಛೆಯಿಂ ಸ್ವತಂತ್ರನಾಗಿ, ಲೌಕಿಕರ ಸಂಗಸಮರಸದೊಳಿದ್ದಾಗ್ಯಾದರೂ ಅವಿರಳ ಪರಂಜ್ಯೋತಿ ಸ್ವರೂಪನಾಗಿ ನಿರಂಜನ ಲೀಲಾ ಮೂರ್ತಿಯಾಗಿ ಬಹು ರೂಪಿಯು ಸಕಲ ವೇಷಂಗಳ ಧರಿಸಿ ವೇಷಕ್ಕೆ ತಕ್ಕ ಭಾಷಾ ಕ್ರಿಯೆಗಳಿಂದ ವ್ಯವಹರಿಸುತ್ತಿದ್ದಾಗ್ಯೂ ತನ್ನ ನಿಜ ಧರ್ಮದ ಎಚ್ಚರವಂ ಮರೆಯದೆ ವರ್ತಿಸುತ್ತಾನೋ ಹಾಗೆ ಅಲ್ಲದೆ ರಾಜಭೋಗದೈಶ್ವರ್ಯದಿಂದಿರ್ದ ಪಟ್ಟದ ಗಜವು ಸಮಸ್ತ ರಾಜವೈಭವದಲ್ಲಿರ್ದರೂ ಮುನ್ನ ತಾನಿರ್ದ ಕಾನನದಲ್ಲಿ ಲಕ್ಷವಿಟ್ಟಂತೆ, ತೂರ್ಯಾತೀತ ನಿಜಸಮಾಧಿಯು ಪರಿಪೂರ್ಣ ಜಾಗ್ರಾವಸ್ಥೆಯೊಳಿರ್ದು ಲೌಕಿಕರೊಡನೆ ಲೋಕವರ್ತನೆಯಿಂದ ವರ್ತಿಸುತ್ತ ಜ್ಞಾನಿಗಳೊಡನೆ ಜ್ಞಾನ ವರ್ತನೆಯಿಂದ ವರ್ತಿಸುತ್ತ ತಾನು ತನ್ನ ಪೂರ್ಣಜ್ಞಾನದ ಮಹಾನುಭಾವದೊಳ್ಕೂಡಿರ್ದು ಸಕಲ ವ್ಯವಹಾರ ಕೃತ್ಯಂಗಳಲ್ಲಿ ಒಂದೂ ಕೊರತೆಯಾಗದಂತೆ ನಿರ್ಭಯ ನಿಶ್ಶಂಕತೆಯಿಂ ಸಕಲ ಸುಭೋಗ ಸುವಸ್ತುಗಳಂ ಸುನೀತಿಯಿಂ ಭೋಗಿಸುತ್ತ ತಾನು ಜ್ಞಾನಮಯನಾದಾಗ್ಯೂ ಸತ್ಕ್ರಿಯೆಗಳನಾಚರಿಸುತ್ತ ಮೃತ್ಯುಂಜಯನಾಗಿರ್ದಪನೆಂಬ ಚಿದಹಂಕಾರದಿಂದ ಯತ್ನೀಕೃತನಾಗಿ ಅಣವಾದಿ ಮಲತ್ರಯಂಗಳ ಜಂಜಡವ ಹರಿದು ನಿರ್ಮಲನಾಗಿ ನಿಜಜ್ಞಾನ ಸತ್ಯವ್ರತ ಸದ್ಭಕ್ತಿ ಸದಾಚಾರ ಮುಂತಾಗಿ ವರ್ತಿಸುವ ಸಾಧ

ಕರ್ಗೆ ಈ ಪಾರಮಾರ್ಥ ಕೃಷಿಯು ನಿಶ್ಚಯವಾಗಿ ಸದ್ಯೋನ್ಮುಕ್ತಿಯಂ ಕೊಡುವದೆಂದು ಗುರುವಚನ ಸಾಕ್ಷಿಯಾಗಿ ಸಾರಿ ಪೇಳುವೆನು.

ಈ ಪಾರಮಾರ್ಥ ಕೃಷಿ ಎನಿಪ ಈ ಪ್ರಕರಣವನ್ನು ರಚಿಸುವಲ್ಲಿ ಅನಾದಿ ಪರಶಿವಮೂರ್ತಿಯ ಮುಖವಚನದಿಂದುದಿಸಿ ನಿಜಬೋಧೆಯಾದ ಪರಮ ರಹಸ್ಯ ಶಿವಾಗಮಂಗಳ ಸಾರವನ್ನೇ ಸಂಗ್ರಹಿಸಿ, ಮತ್ತದರಲ್ಲಿ ಬಸವಾದಿ ಮಹಾಪುರಾತನರ ಮಹಾವಚನಂಗಳಂ ಸೇರ್ಪಡಿಸಿ ಮತ್ತೀ ಲೋಕ ಪ್ರಸಿದ್ಧರಾದ ನಿಜಗುಣಾಚಾರ್ಯರ ಷಟ್‌ಶಾಸ್ತ್ರಂಗಳ ಜ್ಞಾನ ಸಾರಮಂ ಮೇಳೈಸಿ ಹರಿದೇವ ಕೆರೆಯ ಪದ್ಮರಸ ಶಂಕರಾಚಾರ್ಯ ಮಲ್ಲಣಾಚಾರ್ಯ ಮಾಯಿದೇವ ಪ್ರಭುಗಳಿಂ ವಿರಚಿತಮಾದ ರಘಟಾ ಪ್ರಬಂಧ ದೀಕ್ಷಾಬೋಧೆ ಶಿವಾನಂದಲಹರಿ ಗಣಭಾಷ್ಯ ಶತಕತ್ರಯ ಮೊದಲಾದ ಬಹು ಶಾಸ್ತ್ರಂಗಳ ಅಭಿಪ್ರಾಯಗಳನ್ನೆಲ್ಲ ಹುರಿಗೊಳಿಸಿ ಈ ಪ್ರಕರಣಮಂ ವಿಸ್ತಾರವಾಗಿ ರಚಿಸಿರುವದರಿಂದ ಇದು ಮುಮುಕ್ಷು ಜನರು ಧರಿಸತಕ್ಕ ಸರ್ವಾಭರಣಮಾದ ಮುಕ್ತಾಹಾರದಂತಾಗಿರುವದು.

ಈ ಪಾರಮಾರ್ಥ ಕೃಷಿಯು ಸುಬೋಧವಾಗಿರುವದರಿಂದ ಈ ಪ್ರಕರಣದ ಸಾರವನ್ನು ಚನ್ನಾಗಿ ಗ್ರಹಿಸಿ ಶಿವಯೋಗಿಗಳಾಶೀರ್ವಾದವಿದೆಂದು ನಂಬಿ, ಸುನಿಷ್ಠೆ ಸುವ್ರತ ಸುಜ್ಞಾನ ಸದಾಚಾರ ಸದ್ಭಕ್ತಿಯಿಂದಾಚರಿಸುವ ಸಾಧಕರ್ಗೆ ನಿಜಮೋಕ್ಷವಹುದು ಸತ್ಯ ಸತ್ಯ ಸತ್ಯವಿದೆಂದು ಕೈ ಎತ್ತಿ ಸಾರಿ ಪೇಳಿ ಸ್ಥಿರಗೊಳಿಸಿರುವೆನು.

ಈ ಪುಣ್ಯಗ್ರಂಥದ ಉತ್ತರ ಭಾಗದ ಕಡೆಯ ಪ್ರಕಣವಾದ ಪಾರಮಾರ್ಥ ಕೃಷಿಯಲ್ಲಿ ಸಂಗ್ರಹಿಸಿದ ನಿಜನಿರ್ಮಲತ್ವ ಸತ್ಯ ಸದಾಚಾರ ಸಹಜ ಸುಜ್ಞಾನ ಶಿವೈಕ್ಯ ಸದ್ಭಕ್ತಿ ನಿಜಲಿಂಗೈಕ್ಯ ಎಂಬ ಪಂಚ ಪ್ರಕರಣಂಗಳ ಸಾರ ಸಮ್ಮಿಶ್ರದಿಂ ನಿರ್ಮಿಸುವಲ್ಲಿ ಶ್ರೀಗುರುದೇವನುಪದೇಶಿಸಿದ ನಿಜೋಪದೇಶದ ಸಹಜ ಜ್ಞಾನವನೆ ಸದ್ಗುರುನಾಥನಪ್ಪಣೆಯಿಂದ ಲೋಕ ಹಿತಾರ್ಥವಾಗಿ ಬಹಿರಂಗದಲ್ಲಿ ಪ್ರಕಟಿಸಿ, ಅತಿಬಾಹುಲ್ಯವಲ್ಲದೆ, ಅತಿಸಂಕ್ಷೇಪವಲ್ಲದೆ, ಸಕಲ ವೇದಾಗಮಂಗಳ ಜ್ಞಾನಸಾರವನ್ನೆಲ್ಲ ಸಂಗ್ರಹಿಸಿ, ದಧಿಯಂ ಮಥನಿಸಿ ಘೃತಮಂ ಪ್ರಕಟಿಸಿದಂತೆ, ಪೂರ್ಣ ಜ್ಞಾನದ ನಿಜವನೇ ವಿಸ್ತಾರವಾಗಿ ಹೇಳುವೆನು. ಈ ಪಾರಮಾರ್ಥ ಕೃಷಿಯು ಈ ಲೋಕದ ಭಕ್ತ ಮಾಹೇಶ್ವರರೆಲ್ಲರಿಗೂ ಅತ್ಯಂತ ಹಿತಕರವಾಗಿರ್ಪುದು.

ಲೋಕವರ್ತನೆಯ ನಿರ್ಮಲತ್ವವನ್ನು ಹತ್ತೊಂಬತ್ತನೆಯ ಪ್ರಕರಣದಲ್ಲಿ ತಮ್ಮ ಸ್ವಂತ ತನುಮನಾದಿಗಳನ್ನು ನಿರ್ಮಲ ಮಾಡಿಕೊಂಡ ಮಲಭಾವ ರಹಿತನಾಗಿಪ್ಪುದೇ ನಿಜ ನಿರ್ಮಲತ್ವವೆನಿಸುವದು.

ವೇದಾದಿ ಸಕಲ ಶ್ರುತಿ ಸ್ಮೃತಿಗಳು ಸಾಕ್ಷಿಯಾಗಿ ಸರ್ವೋತ್ಕೃಷ್ಟವೆಂದು ಪ್ರಸಿದ್ಧವಾದ ಶಿವಮತಾಚಾರಕ್ಕೆ ಸರಿಯಾಗಿ, ಲಿಂಗಾರ್ಚನಾದಿ ಸತ್ಕ್ರಿಯೆಗಳಿಂದ ವರ್ತಿಸುವವರೇ ಭಕ್ತರೆನಿಸುವರು. ಉಳಿದಾದವರೆಲ್ಲರು ಭವಿಗಳೆನಿಸುತ್ತಾರೆ ಅವರಲ್ಲಿ ಶೈವ ವೀರಶೈವವೆಂದು ಎರಡು ವಿಧಗಳುಂಟು. ಆ ಶೈವದಲ್ಲಿ ಸಪ್ತ ಭೇದಂಗಳುಂಟು. ಮತ್ತಾ ವೀರಶೈವದಲ್ಲಿ ಸಾಮಾನ್ಯ, ವಿಶೇಷ, ನಿರಾಭಾರವೆಂಬೀ ತ್ರಿವಿಧ ಭೇದಗಳಿರ್ಪವಾಗಿ, ಶೈವರ್ಗೆ ಭವಿತ್ವವು ಭಕ್ತತಯು ಕೂಡಾ ವರ್ತಿಸುವದು. ಹೇಗೆಂದರೆ, ಶೈವರು ಶಿವಲಿಂಗಾಲಯವನು ಪೊಕ್ಕ ದಾಸ ಭಾವದಿಂದ ಸಮ್ಮುಖದಲ್ಲಿ ಕುಳಿತು, ಲಿಂಗಾರಾಧನೆ ಕ್ರಿಯೆಗಳಿಂದ ಅರ್ಚಿಸುವ ಪರಿಯಂತರಕ್ಕೂ ಭಕ್ತನಾಗಿರ್ದು ಮರಳಿ ಲಿಂಗವನಗಲಿದಲ್ಲಿ ಆ ಭಾವವಳಿದು ಭವಿಯಾಗಿರ್ಪನು.

ಇದಲ್ಲವೇ ದೀಕ್ಷಾಹೀನನು ಲಿಂಗಾಲಯಮಂ ಪೊಕ್ಕಲ್ಲಿ, ಸಿಂಹನನ್ನು ಕಂಡ ಆನೆಯು ಭಯಪಟ್ಟು ಓಡಿದಂತೆ, ಪರಮೇಶ್ವರನು ಆ ದೇವಾಲಯಮಂ ಬಿಟ್ಟು ಹೋಗುವನೆಂದು, ಶಿವಾಗಮ ಗ್ರಂಥ ಸಾಕ್ಷಿಗಳುಂಟು. ಮತ್ತಾ ದೀಕ್ಷಾಹೀನನು ಲಿಂಗಾರ್ಚನೆಯಂ ಮಾಡಿದರೆ, ಬ್ರಹ್ಮರಾಕ್ಷಸನಾಗಿ ಪುಟ್ಟುವನೆಂದು ಪುರಾಣಾಗಮಂಗಳ ವಾಕ್ಯಗಳಲ್ಲಿ ಅನೇಕ ಸಾಕ್ಷಿಗಳುಂಟು. ಇದಕ್ಕಾ ಕೆರೆಯ ಪದ್ಮರಸರಿಂದ ವಿರಚಿತವಾದ ದೀಕ್ಷಾಬೋಧೆಯ ಪ್ರಥಮಾಧ್ಯಾಯದಲ್ಲಿ ನೋಡಬೇಕು

ಒಮ್ಮೆ ಭಕ್ತನಾಗಿ ಲಿಂಗಾರ್ಚನೆಯಂ ಮಾಡಿ, ಮರಳಿ ಭವಿಯಾಗಿ ಲಿಂಗವನಗಲಿ ಇರುವದರಿಂದ ಭವಿ ಎನಿಸುವನಲ್ಲದೆ, ಭಕ್ತನಾಗಲಾರನು. ಬಳಿಕ್ಕಾದರೂ ಅರವತ್ತುಮೂರು ಪುರಾತನರಲ್ಲಿ ಕೆಲವರು ಶೈವಾರಾಧಕರಂತೆ ಶೈವಲಿಂಗಂಗಳಂ ಪೂಜಿಸಲಿಲ್ಲವೇ ಎಂದರೆ ಅವರೆಲ್ಲರು ಗಜ ದಂತದಂತೆ ತೋರುವ ಹಲ್ಲು ಬೇರೆಯಾಗಿ ತಿಂಬುವ ಹಲ್ಲು ಬೇರೆ ಇರುವಂತೆ, ಲೌಕಿಕರೆದುರಿಗೆ ಮುಗ್ಧರೆನಿಸಿ ಪಾರಮಾರ್ಥ ವಿದಗ್ಧರಾಗಿ, ಶ್ರೀ ವೀರಶೈವ ದೀಕ್ಷಾಸಂಪನ್ನರಹುದಾದುದರಿಂದ ಬಳ್ಳದಲ್ಲಿ ಮಳಲಲ್ಲಿ ಅಡಿನ ಹಿಕ್ಕೆಯಲ್ಲಿ ಕುಚದಲ್ಲಿ ಜೋಳದ ರಾಶಿಯಲ್ಲಿ ಶಿವಜಗನ್ಮಯ ಸ್ಥಲದಾಚಾರ ಸಮ್ಯಜ್ಞಾನ ಪೂರ್ಣರಾಗಿ, ತಮ್ಮ ಭಾವಲಿಂಗ ಸ್ವರೂಪದ ನಿಜಭಾವದ ಬಲದಿಂದ ಶಿವಕಳೆಯನರಿದು ಶಿವನಂ ನುಡಿಸಿ ಜಗತ್ಪ್ರಸಿದ್ಧ ಮಹತ್ವಾತಿಶಯದಿಂದ ನಿಜಲಿಂಗೈಕ್ಯತೆಯಂ ಪಡೆದರಲ್ಲದೆ, ಅವರು ಈ ಲೋಕದ ಮಲ ಭಾವದ ಅಜ್ಞಾನ ಭಿನ್ನಕರ್ಮಿಗಳಾದ ದಾಸಭಾವದ ಭವಿಗಳಾದ ಶೈವರೇ? ಅಲ್ಲಲ್ಲ.

ಪುರಾತನರೆಲ್ಲರು ವೀರಶೈವ ದೀಕ್ಷೋಪದೇಶದಿಂ ಪೂರ್ಣರಾದವರೆಂದು ತಿಳಿಯಬರುವದು. ಕೆಲವರು ಇದು ಪ್ರಮಾಣವಲ್ಲೆಂದೊಡೆ ಜಗದಾರಾಧ್ಯ

ಸಂಗನಬಸವೇಶ್ವರ ದೇವರು "ಪುರಾತನರೆಮ್ಮಯ ತಂದೆತಾಯಿ" ಗಳೆಂದು
ಹಾಡಿದ ಭಾವತಾತ್ಪರ್ಯದ ವಚನಗಳುಂಟು. ಇದಲ್ಲದೆ ಶೈವಾರಾಧನೆಯು
ಮಾಡಿದ ಕಣ್ಣಪ್ಪನೆನ್ನಯ ಕಣ್ಣೆಂದು ಬಸವಾದಿ ಪುರಾತನರೆಲ್ಲರು ಅವನನ್ನು
ಸ್ತುತಿಸಿದ್ದಾರೆ. ಹೇಗೆಂದು ಸೋಮಾರಾಧ್ಯರು ಶಂಕರಾಚಾರ್ಯ ಭೀಮಕವಿ
ಎಳೆಂದೂರ ಷಡಕ್ಷರೀ ದೇವರಿಂದ ರಚಿತವಾದ ಆಂಧ್ರ ಸಂಸ್ಕೃತ ವರ್ಣಕ
ವಸ್ತುಕಗಳು ಬಸವ ಪುರಾಣಂಗಳಲ್ಲಿ ಕಣ್ಣಪ್ಪನ ಕಥೆಯು ಭಾವ ತಾತ್ಪರ್ಯವಂ
ಜ್ಞಾನಚಕ್ಷುವಿನಿಂ ನೋಡಿ ವಿಚಾರಿಸಿದರೆ, ಅವರು ಪರಮ ವೀರಶೈವರೆಂಬುದು
ನಿಶ್ಚಯವಾದೀತು ಹಾಗಾಗದಿದ್ದರೆ, ಭಿನ್ನ ಕರ್ಮದಿಂದ ದಾಸಭಾವ ಶೈವ
ನಾದರೆ ಕಣ್ಣಪ್ಪನ ಮುಕ್ಕುಳೋದಕವು ಮಜ್ಜನವಾಗಿ, ನಿರ್ಮಾಲ್ಯವೇ ಪ್ರಸಾದ
ಪತ್ರೆಗಳಾಗಿ ಉಚ್ಛಿಷ್ಟವೇ ಪರಮ ಪ್ರಸಾದ ನೈವೇದ್ಯವಾಗಿ ಶಿವಲಿಂಗಕ್ಕರ್ಪಿಸಿ
ಪಾದುಕೆಗಳಂ ಮಸ್ತಕದ ಮೇಲಿಡುವದು ಆ ಲೋಕದ ದೇವ ಶ್ರೇಷ್ಠರಿಂದ
ಲಾದರೂ ಆದೀತೇ ಹ್ಯಾಗೆ? ಆ ಕಣ್ಣಪ್ಪನು ಮೊದಲಾದ ಪುರಾತನರು
ಶೈವಾರಾಧನೆಯು ಮಾಡಿದರೆಂದರೂ ಅವರು ಪರಮ ವೀರಶೈವ ದೀಕ್ಷೋಪ
ದೇಶ ಸಂಪನ್ನರು ಭಾವಲಿಂಗ ಸ್ವರೂಪಿಗಳು ಅಹುದೆಂದು ನಿರ್ಧರಿಸತಕ್ಕದ್ದು.
ಆದು ಕಾರಣ ವೀರಶೈವಾಗಮ ಪ್ರಮಾಣವಿಡಿದು ಮಾರ್ಗಕ್ರಿಯೆ ಎನಿಸುವ
ಬಾಹ್ಯದ ಕ್ರಿಯಾ ದೀಕ್ಷೆಯನ್ನು ಹೊಂದಿ ಆಗಮ ಪ್ರಮಾಣದಂತೆ ಶ್ರೀಗುರು
ದೇವನಿಂದ ಸ್ಥೂಲಾಂಗದ ಮಲಿನತ್ವವಂ ಕಳೆದು ನಿರ್ಮಲನಾಗಿ ಶಿವಲಿಂಗವಂ
ಧರಿಸಿ ಆವ ಕಾಲದಲ್ಲಾದರೂ ಆ ಲಿಂಗವನಗಲದಿರಬೇಕು. ಮತ್ತು ದೀಕ್ಷಾಹೀನ
ರಾದವರು ಭಕ್ತರಲ್ಲಿ ಉದ್ಭವಿಸಿದಾಗ್ಯಾದರೂ ಅವರು ಧರಿಸಿದ ಲಿಂಗದಲ್ಲಿ
ಶಿವಕಳೆ ಇರದು. ಹೇಗೆಂದರೆ ದೀಕ್ಷಾಹೀನನು ಶಿವಾಲಯವಂ ಪೊಕ್ಕಾಗಳೆ
ಸಿಂಹನಿಗಂಜಿದ ಆನೆಯಂತೆ, ಶಿವನು ಭೀತಿಗೊಂಡು ಓಡುವನೆಂಬ ಪ್ರಮಾ
ಣವಿರಲಾಗಿ ದೀಕ್ಷಾಹೀನನ ಅಂಗದ ಮೇಲೆ ಧರಿಸಿರ್ದ ಲಿಂಗದಲ್ಲಿ ಶಿವಕಳೆ
ಹೋಗಿರ್ಪುದು ಅದರಿಂದ ಬಹಿರಂಗದ ಬಾಹ್ಯದ ಕ್ರಿಯಾ ದೀಕ್ಷಾಸಂಪನ್ನ
ರಾಗಿ ಲಿಂಗಾರ್ಚನೆಯು ಮಾಡಬೇಕಲ್ಲದೆ, ದೀಕ್ಷಾಹೀನರಾಗಿ ಶಿವಲಿಂಗಾರ್ಚ
ನೆಯು ಮಾಡಲಾಗದು. ಅಥವಾ ಮಾಡಿದಾಗ್ಯಾದರು ನಿಷ್ಫಲವು- ಸಾಕ್ಷಿ
"ಲಿಂಗಾರ್ಚನಾ ರತಾ ನಾರೀ ಪಂಚಸೂತಕ ವಿವರ್ಜಿತಾ॥ ಯಥಾ ವಾಯು
ರವಿರಗ್ನಿ। ಯಥಾ ಕೋಟಿ ಗುಣಃ ಶುಚಿಃ ॥ ಎಂಬ ಪ್ರಮಾಣ ಉಂಟಾಗಿ
ಭಕ್ತಿ ಸತಿಯರು ಶಿವದೀಕ್ಷೆಯಂ ಹೊಂದಿ, ಲಿಂಗಾರ್ಚನಾ ತತ್ಪರರಾಗಿರುವ
ದರಿಂದ ಪಂಚಸೂತಕಗಳಿಲ್ಲವೆಂದು ಆಗಮ ಪ್ರಮಾಣದ ಆಧಾರವಿರುವದ
ರಿಂದ ಇದು ಸಹಜವೇ ಸರಿ. ಆದಾಗ್ಯೂ ಎಂದಿಗೂ ದೀಕ್ಷೆ ಇಲ್ಲದೆ ಲಿಂಗದ
ಗುರುತು ಸಹ ಅರಿಯದೆ ನಾವು ಲಿಂಗಧಾರಕ ಸ್ತ್ರೀಯರೆಂದು ಹೇಳಿದರೆ
ಪಂಚಸೂತಕ ಹೋಗುವ ಪರಿ ಅದೆಂತು? ಆಗಮವು ಹೀಗೆ ಹೇಳಿರುವದೇ
ಹ್ಯಾಗೆ? ಲಿಂಗಧಾರಕರಿಗೊಂದುದಾಹರಣೆಯುಂಟು. ಅದರಿಂದ ಆಚಾರವರಿ

ಯದ ಅಗವುಜ್ಞಾನ ಶೂನ್ಯರಿಗೆ ಸಮ್ಮತ ಮಾಡುವಿರಿ. ಹ್ಯಾಗೆಂದರೆ ಹುಟ್ಟಿದ ಕೂಸುಗಳಿಗೆ ಲಿಂಗವ ಧರಿಸುವ ಪದ್ಧತಿಯುಂಟು, ಅದು ದೀಕ್ಷೆಯಲ್ಲವೇ ಎಂಬಿರಿ. ಹಾಗಾದರೆ ಒಪ್ಪಿಗೆಯು ಹಾಕಿ ಕನ್ನೆಯನ್ನು ನಿಶ್ಚಯ ಮಾಡಿದ ಮೇಲೆ ವೇದೋಕ್ತ ಸಮ್ಮತ ಪ್ರಕಾರ ಲಗ್ನವಾಯಿತೇ ಹ್ಯಾಗೆ? ಮುಂದೆ ಲಗ್ನವಾಗದೆ ಸ್ತ್ರೀಪುರುಷರ ಸಂಗ ಸಮರಸಕ್ಕೆ ಮಾರ್ಗವಾಯಿತೇ ಹ್ಯಾಗೆ? ಬಲ್ಲವರಾದರೆ ಹೇಳಿರಿ ಇದು ಶ್ರುತ್ಯಾಚಾರ ಧರ್ಮವಲ್ಲವು. ಶಿವದೀಕ್ಷೆ ಇಲ್ಲದೆ ಹೆಣ್ಣು ಗಂಡು ಕೂಸುಗಳಿಗೆ ಲಿಂಗಧಾರಣವಾದಾಗ್ಯೂ ಮುಂದೆ ಲಿಂಗಾಂಗ ಸಾಮರಸ್ಯಕ್ಕೆ ಕಾರಣವಾಗುವದಿಲ್ಲ ಅದು ಕಾರಣ ಭಕ್ತಮಾಹೇಶ್ವರಾಚಾರಕ್ಕೆ ಶಿವದೀಕ್ಷೆ ಇಲ್ಲದೆ ಶುದ್ಧತೆಯಾಗದು ಇದಲ್ಲದೆ ಕಲವು ಮತದವರಿಗೆ ಪುರುಷರಿಗೆ ಮುಂಜಿ ಸ್ತ್ರೀಯರಿಗೆ ಮುಂಜಿ ಇಲ್ಲದ ಕಾರಣ ಪಂಚಸೂತಕವುಳ್ಳವರಾಗಿ ಕರ್ಮಂಗಳಿಂದ ಶುದ್ಧತೆಯನ್ನು ಹೊಂದುವರು ಇದೊಂದು ಪಥವು ಇದು ಉತ್ತಮ ಮಾರ್ಗವೇ ಸರಿ. ಮತ್ತು ಭಕ್ತಾಚಾರವಾದ ಶಿವಮತಾಚಾರದಲ್ಲಿ ಸ್ತ್ರೀಪುರುಷರೀರ್ವರಿಗು ದೀಕ್ಷೆಯುಂಟಾದ ಕಾರಣ, ಇವರು ಲಿಂಗಾರ್ಚನೆಗೆ ಯೋಗ್ಯರಾದುದರಿಂದ, "ಲಿಂಗದೇಹೀ ಸದಾ ಶುಚಿಃ" ಎಂಬಾಧಾರದಿಂದ ಪಂಚಸೂತಕ ವರ್ಜಿತರಾಗಿರುವರು. ಅದು ಕಾರಣ ಭಕ್ತಮಾಹೇಶ್ವರರುಗಳಲ್ಲಿ ಸತಿಪತಿಗಳೀರ್ವರು ಶಿವದೀಕ್ಷೆಯನ್ನು ಹೊಂದಿ ಶಿವಲಿಂಗಾರ್ಚನ ಸತ್ಕ್ರಿಯೆಗಳಿಂದ ಪರಿಶುದ್ಧಿವಡೆದು ಪಂಚಸೂತಕ ವಿರಹಿತರಾಗಿ ಶಿವನ ಸಲುಗಿಗರಾಗಿ ಭೋಗಮೋಕ್ಷಂಗಳೆನಿಪ ಸತ್ಫಲಮಂ ಪಡೆಯಬೇಕು. ಇದು ಶಿವಾಗಮ ಪ್ರಮಾಣದಿಂದಾಚರಿಸತಕ್ಕ ಭಕ್ತ ಮಾಹೇಶ್ವರಾಚಾರ ಕ್ರಮವು

ಈ ಮಾರ್ಗದಲ್ಲಿ ಕ್ರಮತಪ್ಪಿ ದೀಕ್ಷಾಹೀನರಾಗಿ ಲಿಂಗಾರ್ಚನಾದಿ ಸತ್ಕ್ರಿಯೆಗಳ ಪರಿಯನರಿಯದ, ಭಕ್ತಿಪದದ ಮಾರ್ಗಾಚರಣೆಯಲ್ಲಿ ರಜಸ್ಸ್ನಾತಕಿಗಳಾದ ಸ್ತ್ರೀಯರು ಪರಿಶುದ್ಧಿ ಇಲ್ಲದೆ, ಮಾಡಿದ ಪಾಕ ಪದಾರ್ಥಾದಿಗಳನ್ನು ಶಿವಾರ್ಪಿತಕ್ಕೆ ಸಲ್ಲಿಸುವದರಿಂದ, ರೋಗ ದಾರಿದ್ರ್ಯಾದಿ ದುಃಖಂಗಳನನು ಭೋಗಿಸಬೇಕಾಯಿತಲ್ಲದೆ, ಭಕ್ತರಿಗೆ ವಿಘ್ನಂಗಳುಂಟೆ? ಇದಕ್ಕಾ ನಿಜಗುಣಯೋಗಿಗಳ ವಚನ ಸಾಕ್ಷಿ. "ಕ್ರಮದಪ್ಪಿ ನಡೆಯುವದರಿಂ ಕಷ್ಟಮಿನ್ನುಂಟೆ" ಎಂಬ ಕೈವಲ್ಯ ವಾಕ್ಯವಿಹುದಾಗಿ, ಭಕ್ತರಾದವರು ಕ್ರಮ ತಪ್ಪಿದಲ್ಲಿ ಕಷ್ಟಮುಂಟಾಗಿರ್ಪುದು.

ಭಕ್ತ ಮಾಹೇಶ್ವರಾಚರಕ್ಕೆ ಆಚಾರಪತಿಗಳಾದ ಸಿಂಹಾಸನದವರ ಮನೆತನದಲ್ಲಿ ಸಹ ಪುರುಷರಿಗೆ ಅಯ್ಯಾಚಾರವೆಂಬ ಶಿವದೀಕ್ಷೆಯಂ ಮಾಡಿ, ಸ್ತ್ರೀಯರಿಗೆ ದೀಕ್ಷೆ ಇಲ್ಲದೆ ಲಗ್ನ ಮಾಡಿದ ಮೇಲೆ ಈ ಭಕ್ತರಾಚಾರವನಾರು ತಿದ್ದಬೇಕು?

ಇನ್ನಾದರೂ ಭಕ್ತ ಮಾಹೇಶ್ವರರಲ್ಲಿ ಈ ದೀಕ್ಷಾಚಾರವಂ ತಿದ್ದಿಕೊಳ್ಳುವವರೆಗೂ ಅನ್ಯ ಮತದವರು ಮಾಡುವ ದೂಷಣೆಗೆ ಪಾತ್ರರಾಗಿ ಈ ಪಂಚಸೂತಕ ಸೋಂಕಿನ ಅಪವಿತ್ರ ಪದಾರ್ಥಗಳನ್ನು ಆ ಶಿವಲಿಂಗಕ್ಕೆ ನೈವೇದ್ಯ ಮುಖಾಂತರದಿಂದ ಅರ್ಪಿಸುವದರಿಂದಲೂ ಅಭಕ್ಷ ಭಕ್ಷಣ ದೋಷದಿಂದಲೂ ಪಂಚ ಮಹಾಪಾತಕಕ್ಕೀಡಾಗಿದ್ದಾಗ್ಯೂ ಆದರಲ್ಲಿ ಕೆಲವು ಅಜ್ಞಾನಿಗಳೆಂಬುವದೇನಂದರೆ, ಕುಲಗೆಟ್ಟವರು ದೀಕ್ಷೆಯಾಗಬೇಕು, ನಾವು ಕುಲ ಶುದ್ಧರು, ನಮ್ಮಜ್ಜ ಮುತ್ತಂದಿರು ಮೊದಲಾಗಿ ನಮ್ಮ ತಂದೆಯು ಕುಲ ಶುದ್ಧನು, ನಮ್ಮ ತಾಯಿಯಾದರೂ ಕುಲ ಶುದ್ಧಳು, ನನ್ನ ಕುಲಶುದ್ಧವು ನಾನೇಕೆ ದೀಕ್ಷೆ ಹೊಂದುವೆನು, ಎಂದು ಬಿಂಕದ ಮಾತುಗಳನಾಡುವ ಹೊಲೆ ರಕ್ತದ ಹೊಲೆಕುಲವನಾರು ಹೊಗಳಬೇಕು? ಇದು ಶುದ್ಧ ಹೊಲೆ ಕುಲವು ಇವರು ಭಕ್ತರೆಂತಾಗುವರು?

ಅದು ಕಾರಣ, ಜಗತ್ಪಾವನ ಪ್ರಯೋಜನಾರ್ಥಕ್ಕವತರಿಸಿದ ನೂತನಾಲ್ಲಮದೇವರವತಾರ ಶ್ರೀಮನ್ಮಹಾದೇವ ದೇವ ದೇವ ಶಿಖಾಮಣಿ ಶ್ರೀ ವೀರಶೈವಾವಧೂತ ಪರಮಾರೂಢ ಘನಮಠ ನಿವಾಸ ಶ್ರೀ ನಾಗಭೂಷಣ ಸದ್ಗುರು ಜಗದ್ಗುರುಗಳವರು, ಇಂದಿಂಗೆ ಮೂವತ್ತು ವರ್ಷದಾರಭ್ಯದಿಂದ ಬೈದು ಭಂಗಿಸಿ ಪರಮಾರಾಧ್ಯ ಸನಯ ಸಿರಸನ ವಚನಗಳಿಂದ ಶ್ರೀ ವೀರಶೈವಾಚಾರದ ನಿಜೋಪದೇಶವನ್ನು ಹಗಲಿರಳು ಬಿಡದೆ ಬೋಧಿಸುತ್ತ ಭಕ್ತಾಭಿಮಾನಿಯಾಗಿ, ಭಕ್ತರೆಲ್ಲೆಲ್ಲಿರ್ಪರಲ್ಲಲ್ಲಿ, ಸಂಚರಿಸುತ್ತ ಸಕಲಾಗಮ ಶೃತಿ ಸ್ಮೃತಿ ಸತ್ಪುರಾಣೇತಿಹಾಸಂಗಳಿಂದಲೂ ಲೋಕದೃಷ್ಟಾಂತಗಳಿಂದಲೂ ನಿಜವ ಬೋಧಿಸಿದಾಗ್ಯಾದರೂ ಅದಕ್ಕೆ ಸರಿಯಾಗಿ ನಡೆಯಬೇಕೆಂಬ ಬುದ್ಧಿ ಯಾರಿಗೂ ಹುಟ್ಟದೆ ಹೋಯಿತು ಇವರು ಮಲಮಯವಾದ ಹೊಲೆ ಕುಲಮದವಳಿದು, ಭಕ್ತರಾಗಲಿಲ್ಲ. ಇದಕ್ಕಾಗಿ ಶಿವಯೋಗಿಗಳು ಇವರ ಭಾಂಡ ಭಾಜನಾದಿ ಪಾಕ ಪದಾರ್ಥಂಗಳ ಮುಟ್ಟದೆ, ಸ್ವಯಂಪಾಕ ಪ್ರಸಾದವಂ ಸ್ವೀಕಾರ ಮಾಡುತ್ತ ಸಕಲ ದೇಶಗಳಲ್ಲಿ ಸಂಚಾರ ಮಾಡಿದಾಗ್ಯಾದರೂ ಶಿವನ ಸಾಕಾರ ಲೀಲಾವತಾರ ಜ್ಞಾನ ಜಂಗಮ ದೇವರು ನಮ್ಮ ಪದಾರ್ಥ ಭಾಂಡ ಭಾಜನಂಗಳ ಮುಟ್ಟದೆ ಹೋದ ಮೇಲೆ ಭಕ್ತರೆಂದಿನಿಸಿ, ಬದುಕಿ ಫಲವೇನು? ಪ್ಯಾಗೆ ಮೆಚ್ಚುವರೆಂಬ ಅಭಿಮಾನ ಹುಟ್ಟಿ ಒಬ್ಬರಾದರೂ ನಾಚದ ಕಾರಣ, ಆವರು ಅಂದದ್ದೇನಂದರೆ, ನಮ್ಮ ಮಾತನ್ನು ಕೇಳಿ ನೀವೇಕೆ ಭಕ್ತರಾದೀರಿ? ಮುಂದೆ ಹೊಲೆ ಮಾದಿಗರಿಂದ ದೀಕ್ಷೆಯಾದಾಗ ನೆನಿಸುವಿ ಎಂದು ಬೈದು ಭಂಗಿಸಿ, ಮತ್ತಿವರ ಕರ್ಮಕ್ಕೆ ಚಿಂತಿಸಿ, ಇನ್ನಾರಿಗೆ ಹೇಳುವೆನೆಂದು ಬೇಸತ್ತು ನಿರ್ವಾಚ್ಯ ಸ್ವರೂಪಿಗಳಾದರೂ ಭಕ್ತರೆಂಬವರು ಇನ್ನಾದರು ನಾಚಿಕೆ ಹುಟ್ಟಿ ಶಿವದೀಕ್ಷೆಯಂ ಪಡೆಯುವದುತ್ತಮವು.

## ನಿಜ ನಿರ್ಮಲತ್ವವು.

ಬಾಹ್ಯದ ಮಾರ್ಗದ ಕ್ರಿಯಾ ಸಂಬಂಧವಾದ ಶಿವದೀಕ್ಷೆಯನ್ನು ಹೊಂದಿ ಸ್ಥೂಲಾಂಗದ ಮೇಲೆ ಶಿವಲಿಂಗವಂ ಧರಿಸಿ ಪರಿಶುದ್ಧರಾಗಬೇಕು. ಆದಾಗ್ಯೂ "ಲಿಂಗದೇಹೀ ಸದಾ ಶುಚಿಃ" ಎಂಬಾಗಮ ವಾಕ್ಯ ಉಂಟು ಅದು ನಿಶ್ಚಯವೇ ಅಹುದು. ಮತ್ತಾ ಲಿಂಗವ ಧರಿಸಿದವರು ನಾವು ಸದಾ ಶುಚಿಗಳೆಂದು, ನಿತ್ಯದಲ್ಲಿ ಸ್ಥೂಲಾಂಗದ ದಶಮಲವಂ ತೊಳೆಯದೆ, ಮತ್ತು ವಸ್ತ್ರಗಳನ್ನು ನಿರ್ಮಲ ಮಾಡದ, ವಾಗದ್ವೈತಿಗಳಂತೆ ಶೌಚಾಚಮನ ಸ್ನಾನ ಸತ್ಕ್ರಿಯೆಗಳನ್ನು ಬಿಟ್ಟಿರಲಾಗದು

## ಮಲತ್ರಯ.

ಆಣವ ಮಲ ಮಾಯಾಮಲ, ಕಾರ್ಮಿಕಮಲವೆಂಬ ತ್ರಿವಿಧಮಲಭಾವವಿರುವ ವರೆಗೂ ಬಹಿರಂಗದ ವರ್ತನೆಯಲ್ಲಿ ಈ ಶರೀರವನ್ನು ಮತ್ತು ವಸ್ತ್ರಗಳನ್ನು ಎಷ್ಟು ತೊಳೆದಾಗ್ಯೂ ನಿರ್ಮಲನಾಗಲರಿಯನು. ಅವನ ಮಲಭಾವಿಯಾದರೆ ಅವನಂಗವು ಸದಾ ಮಲಿನವೇ ಸರಿ ಅಂಥವರು ಬಾಹ್ಯದ ಕ್ರಿಯಾ ದೀಕ್ಷೆಯನ್ನು ಹೊಂದಿದಾಗ್ಯೂ ಅಂಗದಲ್ಲಿ ಲಿಂಗವ ಧರಿಸಲಿಕ್ಕೆ ಯೋಗ್ಯರಲ್ಲ ಸಾಕ್ಷಿ "ಅಂಗಂ ಮಲಿನಂ ಪ್ರೋಕ್ತಂ। ಲಿಂಗ ನಿರ್ಮಲ ಮೇವ ಚ॥ ಅಂಗಲಿಂಗ ಸಂಯೋಗೇನ। ರೌರವ ನರಕಂ ವ್ರಜೇತ್॥ ಎಂಬಾಗಮ ಉಂಟಾಗಿ, ಮಲಭಾವದ ಮಲಿನಾಂಗದ ಮೇಲೆ ನಿರ್ಮಲವಾದ ಮಲರಹಿತ ಲಿಂಗವನು ಧರಿಸಿದರೆ, ರೌರವ ನರಕವು ಪ್ರಾಪ್ತಿಸುವದೆಂದು ಪರಶಿವನ ನಿರ್ಬಂಧನೆಯುಂಟಾಗಿರುವದು.

ಭಕ್ತರಾದವರು ಬಹಿರಂಗದ ಕ್ರಿಯಾ ದೀಕ್ಷೆಯಾದಾಕ್ಷಣವೇ ಶ್ರೀಗುರುವಿನುಪದೇಶದಿಂದ ಚಿದಂಗ ಸ್ವರೂಪನಾಗಿ, ಮಂತ್ರಮಯ ಶರೀರವಂ ಪಡೆದು ಮಾಂಸಮಯ ಶರೀರಕ್ಕೆ ವಿಲಕ್ಷಣನಾಗಿ, ಮುನ್ನಿನ ಜೀವಭಾವದೊಳಿರ್ದ ಅನಂತ ಜನ್ಮದ ಜಾಡ್ಯವಾದ ಮಾಯಾತನುವೆನಿಸುವ ಈ ಸ್ಥೂಲ ಜಡಾಂಗವೇ ತಾನೆಂಬಭಿಮಾನರಹಿತನಾಗಿ, ಪೂರ್ವಜನ್ಮವಳಿದು, ಪುನರ್ಜಾತನಾಗಿ ಗುರು ಕುಮಾರನೆನಿಸಿದಾತನೇ ಭಕ್ತನಪ್ಪನು. ಆತನು ಲಿಂಗಾರ್ಚನೆಗೆ ಯೋಗ್ಯನಹನು.

## ದೀಕ್ಷಾತ್ರಯವು.

ಮೊದಲಲ್ಲಿ ವೇಧಾದೀಕ್ಷೆ ಎಂಬುದು ಹ್ಯಾಗೆಂದರೆ, ಆಣವಮಲ ಮಾಯಾಮಲ ಕಾರ್ಮಿಕಮಲಗಳೆಂಬ ಮಲತ್ರಯಂಗಳಂ ಕಳೆದಿದ್ದೇ ವೇಧಾ

ದೀಕ್ಷೆ ಎನಿಸುವದು. ಇದುವೇ ಶೃತಿ ಸ್ಮೃತಿ ಉಪನಿಷದ್ವಾಕ್ಯಂಗಳಲ್ಲಿ ಹೇಳುವ ವೇದಾಂತ ಸಾರವು ಇದುವೇ ವೀರಶೈವ ಜ್ಞಾನದೀಕ್ಷೆಯು ಈ ದೀಕ್ಷೆ ಯಿಂದುದಿಸಿದ ಅಪರೋಕ್ಷ ಜ್ಞಾನವೇ ವೇದಾಂತ ಜನ್ಯ ಜ್ಞಾನವೆನಿಸು ವದು. ಸಾಕ್ಷಿ "ವೇದಾಂತ ಜನ್ಯತೇ ಜ್ಞಾನಂ। ವಿದ್ಯೇತಿ ಪರಿಕೀರ್ತ್ಯತೆ। ವಿದ್ಯಾಯಾಂ ರಮತೆ ಯಸ್ಯ। ವೀರ ಇತ್ಯಭಿಧೀಯತೆ"॥ ಎಂದುಂಟಾಗಿ, ವೇದಾಂತದಿಂದುದ್ಭವಿಸಿದ ಜ್ಞಾನವೇ ವೀರಶೈವ ಜ್ಞಾನವೆಂದು ಹೇಳಲ್ಪಡು ತ್ತಿಹುದು ಈ ವೇದಾಂತ ಜನ್ಯದ ಅಪರೋಕ್ಷ ಜ್ಞಾನದಿಂದ ತನ್ನ ನಿಜ ಸ್ವರೂಪಮಂ ತಾನರಿಯದಿದ್ದವನು ಎಷ್ಟು ಶುಚಿಯಾದರೇನು? ಯಾವ ದೀಕ್ಷೆ ಹೊಂದಿದರೇನು? ಎಷ್ಟು ವ್ರತ ನೇಮಂಗಳನಾಚರಿಸಿದರೇನು? ಭವಿ ಶೈವನಾದಾನಲ್ಲದೆ, ವೀರಶೈವ ಸದ್ಭಕ್ತನಾಗಲರಿಯನು. ಈ ವೇಧಾದೀಕ್ಷೆ ಇಲ್ಲದೆ ಅಯ್ಯತನವಾದಾಗ್ಯೂ ಮಹೇಶ್ವರನಾಗಲರಿಯನು

ವೇಧಾದೀಕ್ಷೆಯಿಂದ ಆಣವಾದಿ ಮಲತ್ರಯ ಮಲಭಾವವಮಂ ಕಳೆದು, ಮಂತ್ರ ದೀಕ್ಷೆಯಿಂದ ಮಂತ್ರ ಶರೀರಯಾಗದೆ, ಮಾರ್ಗ ಕ್ರಿಯಾ ಸಂಬಂಧ ವಾದ ಬಾಹ್ಯದ ದೀಕ್ಷಾ ಕಾಲದಲ್ಲಿ ಪಂಚಾಚಾರ್ಯರು ಲಾಂಛನವನ್ನು ಭಿಕ್ಷಾಪಾತ್ರೆಯನ್ನು ಕೊಟ್ಟು ಅಯ್ಯತನವಾಯಿತೆಂದರೆ ಭೀಕ್ಷೆ ಬೇಡಿ, ಉಂಬು ವದಕ್ಕೆ ಮಾರ್ಗವಾಯಿತಷ್ಟೇ ಅಲ್ಲದೆ, ಭಕ್ತರ ಸಾಮರಸ್ಯಕ್ಕೆ ಸಹಜ ಜಂಗಮ ವಾಗಲರಿಯನು ಬಾಹ್ಯದ ಕ್ರಿಯಾ ದೀಕ್ಷೆಯಾಗಿ, ಲಿಂಗವ ಧರಿಸಿದರೇನು? ಲಿಂಗದ ಜ್ಞಾನ ಭಕ್ತಂಗಿಲ್ಲ. ಭಕ್ತನ ಜ್ಞಾನ ಲಿಂಗಕ್ಕಿಲ್ಲ ಇದಿರಿಟ್ಟು ಕ್ರಿಯೆಯ ಶೈವಾಚಾರವೇ ಹೊರತು, ವೀರಮಾಹೇಶ್ವರಾಚಾರವಾಗಲರಿಯದು ಹಾಗಾ ದರೆ, ವಿಷ್ಣು ವಿಧಿ ಮುಖ್ಯ ಇಂದ್ರಾದಿಗಳು ನೀಲರತ್ನ ಮೊದಲಾದ ಲಿಂಗ ಗಳನ್ನು ಧರಿಸಿರ್ಪರು ಅವರು ವೀರಶೈವ ಸದ್ಭಕ್ತರಾದರೇ ಹ್ಯಾಗೆ? ಈ ತ್ರಿವಿಧ ದೀಕ್ಷೋಪದೇಶವಿಲ್ಲದೆ ಮಲಭಾವ ಹೋಗದು ಆ ಮಲಾಂಗ ಭಾವ ವಳಿದು ನಿರ್ಮಲಾಂಗವಾದಲ್ಲದೆ, ಆ ಅಂಗಕ್ಕೆ ಲಿಂಗ ಧಾರಣ ಕ್ರಮ ಸಲ್ಲದು.

## ವೇಧಾದೀಕ್ಷೆಯಲ್ಲಿ ಮೊದಲಣ ಮಲನಿರಸನ.

"ಆಣವಂ ಗರ್ಭ ಸಂಬಂಧಂ" ಎಂಬ ಪ್ರಮಾಣವಿಹುದಾಗಿ, ಸ್ತ್ರೀ ಪುರುಷರ ರೇತ ರಕ್ತದಿಂದುದಿಸಿದೆನೆಂಬ ಅಭಿಮಾನದ ಮಲಭಾವವೇ ಆಣವ ಮಲವೆನಿಸುವದು. ತನು ಕರಣೇಂದ್ರಿಯದ ಜಡ ತತ್ವ ಸಮುದಾಯವೇ ತಾನೆಂಬಭಿಮಾನವು ಕಾರ್ಮಿಕವದಂತಿರಲಿ, ಮಾಯಾ ಮೋಹ ಮಲವೆನಿಸು ವದದೇತಕ್ಕೆನೆ, ತಂದೆ ತಾಯಿಗಳ ರೇತೋ ರಕ್ತದಿಂದುದಯಿಸಿದೆನವರ ಕುಲ ಶುದ್ಧವು. ಅವರ ಹೊಲೆ ರಕ್ತದಿಂದ ಹುಟ್ಟಿದೆನು, ಎನ್ನ ಕುಲ ಶುದ್ಧವು.

ಮತ್ತಿದಲ್ಲದೆ, ನಮ್ಮ ರೀತು ರಕ್ತಾದಿಗಳಿಂದುದಯಿಸಿದರು. ಈ ಕುಮಾರ ಕುಮಾರತಿಯರು ಕುಲಶುದ್ಧರು. ಮತ್ತದಲ್ಲದೆ, ನಮ್ಮಜ್ಜ ಮುತ್ತಂದಿರು ಇಂಥ ಗೋತ್ರದವರು, ಅವರಿಂದ ಹುಟ್ಟಿದಾತ ನಮ್ಮ ತಂದೆ, ಅದೇ ಗೋತ್ರದಾತನು ಅವನಿಂದು ದಯಿಸಿದ ನಾನು ಆ ಗೋತ್ರದವನೆಂಬ ಶುದ್ಧ ಹೊಲೆ ಭಾವದ ಕುಲಗೋತ್ರ ನಾಮಾಚಾರದ ಭ್ರಾಂತಿಯಿಂದ ಬಡಿದಾಡುವದೇ ಮಾಯಾ ಮಲವೆನಿಸುವದು. ಜಡರಕ್ತದಿಂದ ಗಟ್ಟಿಗೊಂಡು ಬೆಳೆದ ತನುವೇ ತಾನೆಂಬುದೀ ಲೋಕದ ಸಮಸ್ತ ಜನರು. ಅವರಲ್ಲಿ ಸ್ವಲ್ಪ ವಿವೇಕವುಳ್ಳವರು ತನುವೀ ಭೂಮಿಯಲ್ಲಿ ಉಳಿದು ಸರ್ವ ಸಾಮರ್ಥ್ಯವಡಗಿ ಮೃಣ್ಮಯ ಬೊಂಬೆಯಂತೆ ಹಸಿಯ ಮಾಂಸ ತುಂಬಿದ ಚರ್ಮದ ತಿತ್ತಿಯೋಪಾದಿಯಲ್ಲಿ ಬಿದ್ದ ಶವದ ಶರೀರವಂ ನೋಡಿ ಕೆಲವರು ಅದರಲ್ಲಿ ರಕ್ತವಿಲ್ಲದಿರುವದ ಕಂಡು ರಕ್ತವೇ ಚೈತನ್ಯವೆಂದು ಪ್ರಮಾಣಿಸುತ್ತಾರೆ. ಮತ್ತೆ ಕೆಲವರು ಶ್ವಾಸವಿಲ್ಲದುದ ಕಂಡು ವಾಯುವೇ ಚೈತನ್ಯವೆಂದು ನಂಬುತ್ತಾರೆ ಕೆಲವರು ಮಲವೇ ತಾವೆಂದು ನಿಶ್ಚಯಿಸುತ್ತಾರೆ ಅವರಲ್ಲಿ ಕೆಲವರು ಜೀವನೇ ಚೈತನ್ಯವೆಂದು ನಿರ್ಧರಿಸುತ್ತಾರೆ. ಅದರೆ ಇವುಗಳೆಲ್ಲ ಜಡತತ್ವಂಗಳಾದ ಕಾರಣ ತನು ಕರಣೇಂದ್ರಿಯಾದಿ ಇಪ್ಪತ್ತೈದು ಜಡತತ್ವಂಗಳ ಸಮುದಾಯವೇ ತಾವು ಎಂಬ ಅಭಿಮಾನವೇ ಕಾರ್ಮಿಕಮಲವೆನಿಸುವದು. ಇವುಗಳೇ ತ್ರಿಮಲಗಳು. ಈ ಲೋಕದಲ್ಲಿ ಉದ್ಭವಿಸುವ ಜೀವಿಗಳೆಲ್ಲರು ಈ ತ್ರಿವಿಧ ಮಲಭಾವಿಗಳಾಗಿ, ಮಾಯಾ ಸಾಮರ್ಥ್ಯದ ವಿಕ್ಷೇಪಾವರಣ ಶಕ್ತಿಯರು ಮುಸುಕಿಟ್ಟ ಅಜ್ಞಾನ ಭರದಿಂದ, ತಮ್ಮ ನಿಜವ ಮರೆದ, ಭವಿಗಳಾಗಿ ಭವಭವಾಂತರಂಗಳಲ್ಲಿ ತೊಳಲುತ್ತ, ಅನಂತ ಯೋನಿಯಲ್ಲಿ ಹುಟ್ಟಿ ಬಳಲುವರು ಈ ತ್ರಿವಿಧ ಮಲಭಾವವಳಿದು, ಸಹಜ ನಿರ್ಮಲರಾಗಬೇಕಾದರೆ, ಗುರುತ್ವಾಭಿಮಾನ ರಹಿತನಾಗಿ ನಿಜೋಪದೇಶಮಂ ಮಾಡುವ ಸಾಮರ್ಥ್ಯವುಳ್ಳ ಸರ್ವಜ್ಞ ಮೂರ್ತಿಯಾದ ಸದ್ಗುರು ದೇವನಿಂದ ವೇಧಾದೀಕ್ಷೆಎಂದು ಹೊಂದಿ ನಿಜ ನಿರ್ಮಲರಾಗಬೇಕು. ಇವೇ ಮಲತ್ರಯ ನಿರಸನ ಮಾರ್ಗವು

ಈ ಮಾರ್ಗವನರಿಯದೆ, ಕೆಲವು ಭ್ರಾಂತರು ಹೊನ್ನು ಹೆಣ್ಣು ಮಣ್ಣುಗಳೇ ತ್ರಿಮಲವೆಂದು ಮತ್ತು ಮಣ್ಣು ಆಣವ ಮಲ ಹೆಣ್ಣು ಮಾಯಾ ಮಲ ಹೊನ್ನು ಕಾರ್ಮಿಕ ಮಲವೆಂದು ಬರಿಯ ಭ್ರಾಂತಿ ತಲೆಗೇರಿದ ಮರ್ಕಟ ವೈರಾಗ್ಯರು ನುಡಿಯುವರು ಹಾಗಲ್ಲ. ಇದೊಂದು ಪರಿಯು ಬೇರೆ. ಮಣ್ಣು ಹೆಣ್ಣು ಹೊನ್ನುಗಳಲ್ಲಿಯ ಲೋಭಗುಣಾಶೆಯೇ ಮಲ್ಲವಲ್ಲದೆ ಹೊನ್ನು ಹೆಣ್ಣು ಮಣ್ಣುಗಳು ಮಲವಾಗುವದುಂಟೆ? ಹೆಣ್ಣಾದರೇನು? ಗಂಡಾದರೇನು? ಜಡ ಭೂತಾಂಶ ಘಟಭೇದವಲ್ಲದೆ ಆತ್ಮಚೈತನ್ಯ ಒಂದೇ ಇರ್ಪುದು. ಮತ್ತಿದಲ್ಲದೆ, ಹೆಣ್ಣಿನ ಹೃದಯದಲ್ಲಾಗಲಿ ಗಂಡಿನ ಹೃದಯದಲ್ಲಾಗಲಿ, ಮುಟ್ಟು ರಕ್ತದಲ್ಲಿ

ಹುಟ್ಟಿದೆನೆಂಬ ಅಭಿಮಾನವು ತುಂಬಿರಲದೇ ಮಲಭಾವವು. ಈ ಮಲವ ನೊಳಗಿಟ್ಟುಕೊಂಡು, ಮಣ್ಣು ಮುಟ್ಟಬಾರದು, ಹೆಣ್ಣು ಮುಟ್ಟಬಾರದು, ಹೊನ್ನು ಮುಟ್ಟಬಾರದು, ಎಂದು ದೊರಕದ ಸನ್ಯಾಸಿಗಳಂತೆ ಕೆಲವರು ಗುಪ್ತಪಾತಕರಾಗಿ, ವಾಗ್ವೈರಾಗ್ಯದ ಮಾತುಗಳನ್ನಾಡಿ ಜನರಂ ಮರುಳುಗೊಳಿಸುತ್ತಾರೆ. ಇವರು ಹೊನ್ನು ಹೆಣ್ಣು ಮಣ್ಣುಗಳ ಬಿಟ್ಟು ಬಹಿರಂಗದಲ್ಲಿ ವರ್ತಿಸುವ ಪರಿ ಹೇಗೆ, ಇದು ತಿಳಿಯದು. ಮಣ್ಣು ದೇಹ ಹೆಣ್ಣು ಪ್ರಾಣ, ಹೊನ್ನು ಕರಣಾದಿ ಇಂದ್ರಿಯಗಳು ಇವುಗಳಲ್ಲಿ ಅಂತರ್ಬಾಹ್ಯದ ಹೊನ್ನು ಹೆಣ್ಣು ಮಣ್ಣುಗಳನ್ನು ಬಿಟ್ಟು ಮುಟ್ಟದೆ ಸರ್ವಸಂಗ ಪರಿತ್ಯಾಗಿಯಾಗಿ, ಆಚರಿಸುವ ಜ್ಞಾನ ಜಂಗಮ ದಾಚರಣೆಯನ್ನು ನಮ್ಮ ನಿಮ್ಮಯ ಪ್ರಭುನಾಗಭೂಷಣ ಶಿವಯೋಗಿಗಳು ಬಲ್ಲರು. ಅವರು ಹೊನ್ನು ಹೆಣ್ಣು ಮಣ್ಣುಗಳಂ ಮುಟ್ಟಲಿಲ್ಲ, ಬಿಡಲಿಲ್ಲ. ಹ್ಯಾಗೆಂದರೆ, ಹಿಂದೆ ಭಕ್ತಿ ಪರೀಕ್ಷೆಗಾಗಿ ಸಿಂಧುಬಲ್ಲಾಳನ ಸತಿಯು ಕೈಕೊಂಡರೂ ಆ ಹೆಣ್ಣನು ಮುಟ್ಟದರೆ? ಮುಟ್ಟಲಿಲ್ಲ. ಬಿಟ್ಟರೆ? ಬಿಡಲಿಲ್ಲ. ಮುಟ್ಟಿ ಮೊಲೆಯುಂಡರು ಹೀಗಿರಬೇಕಲ್ಲದೆ, ಆಶೆಯನೊಳಗಿಟ್ಟು ವಾಗ್ವೈರಾಗ್ಯವ ನುಡಿದರೆ, ಫಲವೇನು? ಮತ್ತದಲ್ಲದೆ ಜ್ಞಾನಶೂನ್ಯರಾದ ವಾಗ್ವೈರಾಗ್ಯರು ಮಣ್ಣು ಮುಟ್ಟಬಾರದೆಂಬರು ಪೃಥ್ವಿಯ ಬಿಟ್ಟು ಸಂಚರಿಸುವದೆಲ್ಲಿ? ಹೆಣ್ಣು ಮುಟ್ಟಬಾರದೆಂಬರು. ಹಾಗಾದರೆ ಭಕ್ತ ಸತಿಯರು ಸದ್ಭಕ್ತಿ ಪೂರ್ವಕವಾಗಿ ಮಾಡುವ ಸರ್ವೋಪಚಾರವನ್ನು ಕೈಕೊಳ್ಳದೆ ಇರುವ ಪರಿ ಹೇಗೆ? ಅಥವಾ ಸ್ತ್ರೀಯರು ಮಾಡಿದ ಪದಾರ್ಥವ ಮುಟ್ಟಬಾರದೆಂಬ ನಿಯಮವಿದ್ದರೂ ಇರಲಿ, 'ಶರಣ ಸತಿ' ಎಂಬ ಪ್ರಮಾಣ ಉಂಟಾಗಿ ಭಕ್ತನು ಹೆಣ್ಣಲ್ಲವೇ? ಮತ್ತು ಭೂಮಿಯಿಂದುದಯವಾದ ಸಕಲ ಧಾನ್ಯಾದಿ ಫಲ ಪದಾರ್ಥಂಗಳೆಲ್ಲ ದ್ರವ್ಯವಲ್ಲವೇ? ಈ ಅಜ್ಞಾನ ಭ್ರಾಂತರು ಬಾಹ್ಯದ ಹೊನ್ನು ಹೆಣ್ಣು ಮಣ್ಣುಗಳೇ ಮಲವೆಂದು ಬಿಟ್ಟು ತಾವು ಪೂರ್ಣಮಲಭಾವಿಗಳಾಗಿ, ಭ್ರಾಂತ ಜ್ಞಾನದ ಮರ್ಕಟ ವೈರಾಗ್ಯದಿಂದ ಸಂಚರಿಸುವ ವಾಗ್ವೈರಾಗ್ಯರನ್ನು ನಂಬಲಾಗದು. ಇದು ಶೃತ್ಯಾಚಾರವಲ್ಲವು. ಮತ್ತ ಭಕ್ತಿ ಭಿಕ್ಷೆಯಂ ಕೈಕೊಳ್ಳುತ್ತ ಜ್ಞಾನ ಜಂಗಮ ಲೀಲಾ ಮೂರ್ತಿಗಳು ಸರ್ವಸಂಗ ಪರಿತ್ಯಾಗಿಯಾಗಿರುವದರಿಂದ ಅವರು ಇವುಗಳನ್ನು ಬಿಡತಕ್ಕದ್ದೇ ಸರಿ ಆದರೆ ಬಿಡುವ ಪರಿ ಬೇರೆ ಇಹುದು. ಸಹಜ ವೈರಾಗ್ಯದಾಚರಣೆಯು ಈಗಿನ ಸಮಯದಲ್ಲಿ ನೂತನಲ್ಲಮ ದೇವರವತಾರ ಶ್ರೀ ಘನಮಠನಿವಾಸ ಶ್ರೀಮನ್ಮಹಾ ಗುರು ನಾಗಭೂಷಣ ಪ್ರಭುಗಳೊರ್ವರಿಗೆ ಸಲ್ಲುವದಲ್ಲದೆ ಮತ್ತಾರಿಗೂ ಬಾರದು.

ಈ ಹೊನ್ನು ಹೆಣ್ಣು ಮಣ್ಣುಗಳೇ ಮಲಗಳಾದರೆ, ವೇದಾಗಮಂಗಳಲ್ಲಿ "ಹಿರಣ್ಯಾತ್ಮನೇ ನಮಃ। ಹಿರಣ್ಯ ಲಿಂಗಾಯನಮಃ। ಹಿರಣ್ಯ ಪದಯೇನಮಃ ಹಿರಣ್ಯ ಬಾಹವೇ ನಮಃ। ಹಿರಣ್ಯಕೇಶಾಯ ನಮಃ। ಎಂದು ಪರಮೇಶ್ವರ

ನನ್ನು ಸ್ತುತಿಸುವ ಪರಿ ಹೇಗೆ? ಇದಲ್ಲದೆ ಹೊನ್ನು ಮಲವಾದರೆ, ಹೇಮಾದ್ರಿಯಲ್ಲಿ ಹೇಗೆ ವಾಸ ಮಾಡುವನು? ಇದರ ವಿಷಯುವನ್ನು ಚನ್ನಾಗಿ ತಿಳಿಯಬೇಕೆಂಬಪೇಕ್ಷೆಯುಳ್ಳವರು ಲಿಂಗಚಿದಮೃತ ಬೋಧೆಯಲ್ಲಿ ಉರಿಲಿಂಗ ಪೆದ್ದಯ್ಯಗಳು ವೇದಾಗಮ ಶೃತಿ ಸ್ಮೃತಿ ವಾಕ್ಯಂಗಳಿಂದ ಅನಂತ ಸಾಕ್ಷಿಗಳನ್ನು ಕೊಟ್ಟು ಹೇಳಿದ ವಚನಾರ್ಥಂಗಳ ನೋಡಿ ತಿಳಿದು ನಿಃಶಂಕಿತರಾಗಬೇಕು. ಹೊನ್ನು ಹೆಣ್ಣು ಮಣ್ಣುಗಳೇ ಮಲವೆಂದು ತಿಳಿದು, ಇವುಗಳನ್ನು ಬಿಟ್ಟರೇನು? ನಿರ್ಮಲರಾಗಲಾರರು ವೇಧಾದೀಕ್ಷೆಯಿಂದ ವೇದಾಂತ ಸಾರವನರಿದು ದೇಹ ಭಾವದ ತ್ರಿವಿಧ ಮಲಭಾವಮಂ ಕಳೆದು ಸ್ವಸ್ವರೂಪವನರಿದು ನಿರ್ಮಲರಾಗಬೇಕು

## ವೇಧಾ ದೀಕ್ಷಾ ಕ್ರಮವು.

ಅಜ್ಞಾನ ಮಯವಾದ ಜಡಾಂಗವೇ ತಾನೆಂದು ನಂಬಿರ್ದ ಜೀವ ಭಾವಿಗಳೆಲ್ಲರು ಮಲ ಶರೀರಿಗಳು ಆದರೆ ಈ ಮಲಯುಕ್ತ ಶರೀರದ ಪೂರ್ವವನ್ನು ಅಳಿದು ಪುನರ್ಜಾತನನ್ನಾಗಿ ಮಾಡುವದಕ್ಕೆ ಶ್ರೀಗುರುವಿನುಪದೇಶವಾದ "ತತ್ವಮಸಿ" ಮಹಾವಾಕ್ಯದರ್ಥವನ್ನರುಹುವದೇ ವೇಧಾ ದೀಕ್ಷೆ ಎನಿಸುವದು ಅದು ಹೇಗೆಂದರೆ, "ಆತ್ಮಾವೈ ಪುತ್ರ ನಾಮಾಸಿ" ಎಂಬ ಶೃತಿ ವಾಕ್ಯವಿಹುದಾಗಿ ಮತ್ತು ಪುತ್ರನಿಗೆ ಇದ್ದ "ಆತ್ಮಜ ಆತ್ಮ ಸಂಭವಃ" ಎಂಬ ವಾಕ್ಯದ ಅಭಿಪ್ರಾಯವನರಿಯದೆ ಶುಕ್ಲ ಶೋಣಿತದಿಂದ ಪಿಂಡ ಬಲಿದ ಪುತ್ರನುದಯಿಸಿದನೆಂಬುದನೆಲ್ಲರು ಪ್ರತ್ಯಕ್ಷ ಪ್ರಮಾಣದಿಂದ ಕಂಡು ಬಲ್ಲವರಾದ ಕಾರಣ ರೇತೋ ರಕ್ತದಿಂದ ನಾನು ಯೋನಿಜನಾಗಿ ಹುಟ್ಟಿದೆನೆಂಬ ಭಾವವು ನಿಶ್ಚಯವಾಗಿರುವದು. ತನ್ನ ತಂದೆ ಇಂಥವನು, ತನ್ನ ತಾಯಿ ಇಂಥವಳು, ಇವರೀರ್ವರ ಮುಟ್ಟು ರಕ್ತಂಗಳೇ ಗಟ್ಟಿಗೊಂಡು ನಾನುದಯಿಸಿದೆನೆಂಬುವ ಬುದ್ಧಿಯು ದೃಢವಾಗಿ ಮೊದಲಾ ತಂದೆಯ ಮಾಣಿ ದ್ವಾರದಿಂದ ಪೊರಮಟ್ಟು ತಾಯಿಯ ಯೋನಿಯ ಕಮಲ ಗರ್ಭ ಮಧ್ಯದೊಳ್ ಬೆಳೆದು ಸರ್ವಾಂಗ ಪೂರ್ಣನಾಗಿ, ರೋಮಾದಿ ಸರ್ವಾವಯವಂಗಳೆಲ್ಲ ಬಲಿದು ನವ ಮಾಸಂಗಳಾದ ಮೇಲೆ ಯೋನಿದ್ವಾರದಿಂದ ಪೊರಮಟ್ಟು ಉದಯಿಸಿದೆನೆಂಬ ಶುದ್ಧ ಮಲಭಾವದಿಂದ ಮಲಮಯವಾದ ಸಪ್ತ ಧಾತುಯುಕ್ತವಾದ ಈ ಶರೀರವೇ ತಾನೆಂದು ನಿರ್ಧರಿಸಿರುವರು.

ಹಾಗಾದರೆ ರೇತೋ ರಕ್ತದಿಂದ ಪಿಂಡೋತ್ಪತ್ತಿಯಾಗಬೇಕಾದರೆ ನಿತ್ಯದಲ್ಲಿ ಸ್ತ್ರೀ ಪುರುಷರ ಸಂಯೋಗ ಕಾಲದಲ್ಲಿ ರೇತ ರಕ್ತಗಳಿಂದ ಪಿಂಡೋತ್ಪತ್ತಿಯಾಗದಿರುವ ಕಾರಣವೇನು? ಇದಲ್ಲದೆ ನಿತ್ಯ ಕ್ರೀಡೆಯಲ್ಲಿ ಗರ್ಭ ನಿಲ್ಲದ್ದು, ಋತುಮತಿಯಾದ ಸಮಯದಲ್ಲಿ ಗರ್ಭನಿಲ್ಲುವದೆಂದರೆ ಬಹು ಜನರು ಪುತ್ರಾ

ಪೇಕ್ಷಿತರಾಗಿ ಹದ ಬೆದೆಯ ಕಾಲಗಳನ್ನು ಪರೀಕ್ಷಿಸಿ ಋತು ಸಮಯದಲ್ಲಿ ಕೂಡಿದಾಗಾದರೂ ಗರ್ಭ ನಿಲ್ಲುವದಿಲ್ಲ ಮತ್ತೆ ಕೆಲವರು ಅಂಬುವದೇನಂದರೆ. ತಂದೆಯ ರೇತುವಿನಿಂದ ಹುಟ್ಟಿದ ಕಾರಣ ತಂದೆಯ ಹೋಲಿಕೆಯಾಗಿರುತ್ತಾರೆಂದು ಹೇಳುತ್ತಾರೆ ಇದು ಪ್ರಮಾಣವಲ್ಲ ಹೇಗಂದರೆ ಕೆಲವರು ಸಹೋದರ ಮಾವಂದಿರ ಹೋಲಿಕೆಯಾಗಿರುತ್ತಾರೆ ಮತ್ತು ಬಹು ತರದ ರೂಪಗಳಿಂದಡಿಸಿರುತ್ತಾರೆ ಅವರೆಲ್ಲರು ಯಾವ ಬಿಂದುವಿನಿಂದ ಹುಟ್ಟಿದರೆಂದು ಪ್ರಮಾಣ ಮಾಡಬೇಕು? ಇವಂತಿರಲಿ ಸ್ತ್ರೀ ಪುರುಷರ ರಕ್ತ ರೇತುಗಳಲ್ಲಿ ಪಿಂಡೋತ್ಪತ್ತಿ ಮಾಡುವ ತ್ರಾಣವಿಲ್ಲ

ಅತಿ ಹೇಯವಾಗಿ ದುರ್ಗಂಧಮಯವಾಗಿ ದ್ವಾದಶ ಮಲಂಗಳಲ್ಲಿ ಅತಿ ಹೀನ ಮಲವಾಗಿ ಮುಟ್ಟಿದರೆ ಮಹಾ ಪಾತಕವೆನಿಸುವ ಸ್ತ್ರೀಯರ ರಜಃಸೂತಕ ರಕ್ತವೂ ಪುರುಷನ ಗುಹ್ಯೇಂದ್ರಿಯ ಮಲವಾದ ರೇತಸ್ಸೂ ಇವುಗಳೆರಡು ಜಡರೂಪವಾಗಿರ್ದು ವೃಕ್ಷಾದಿಗಳಿಗೆ ಸೋಂಕಿದರೆ ಸುಟ್ಟಂತಾಗಿ ಒಣಗಿ ಹೋಗುವವು ಇದಲ್ಲದೆ ರಜಃ ಸೂತಕಿಗಳಾದ ಸ್ತ್ರೀಯರ ನೆರಗು ತಾಕಿದ ಕೂಸುಗಳು ಮುಟ್ಟು ದೋಷದಿಂದ ಮಹಾ ಕ್ಷೀಣವಾಗಿ ಮರಣ ಹೊಂದುವವು ಇವುಗಳನ್ನೆಲ್ಲರೂ ಬಲ್ಲವರಾಗಿ ಇಂಥ ಪಾತಕದ ರಕ್ತ ರೇತಸ್ಸುಗಳಲ್ಲಿ ಪಿಂಡಮಂ ಗಟ್ಟಿಗೊಳಿಸುವ ಸಾಮರ್ಥ್ಯ ಉಂಟೇ? ಇಲ್ಲ

ತಾಯಿ ತಂದೆಗಳೀರ್ವರು ಕೂಡಿ ನನ್ನನ್ನು ಹುಟ್ಟಿಸಿದ್ದಾರೆಂದು ಕೆಲವರು ಪ್ರಮಾಣ ಮಾಡುತ್ತಾರೆ ಹಾಗಾದರೆ, ಕರಚರಣಾದಿ ನಖರೋಮ ಮೊದಲಾದ ಸರ್ವಾವಯವಗಳನ್ನು ಮತ್ತು ಸರ್ವೇಂದ್ರಿಯಗಳನ್ನು ಸಮಸ್ತ ಕರಣೇಂದ್ರಿಯ ಪ್ರಾಣಾದಿಗಳನ್ನು ಸಕಲ ಸಾವಯವದ್ರಿಕಾದಿ ಲಕ್ಷಣಗಳನ್ನು ಗರ್ಭದಲ್ಲಿರುವಾಗ್ಗೆ ತಾಯಿ ಮಾಡಿದಳೋ ತಂದೆ ಮಾಡಿದನೋ, ಇದನ್ನು ಬಲ್ಲರೆ ಹೇಳಿರಿ ಇವರಿಂದ ಆಗುವದಾದರೆ ಕೆಲವರು ವಿಕಾರ ರೂಪದಿಂದ ಅವಯವಹೀನರಾಗಿ ಯಾಕೆ ಹುಟ್ಟುವರು? ಅದು ಕಾರಣ ಈ ಪಿಂಡೋತ್ಪತ್ತಿಯು ಶಿವ ಸೃಷ್ಟಿಯಲ್ಲದೆ ಮತ್ತಾರಿಗೂ ತ್ರಾಣವಿಲ್ಲ ಅದರಿಂದ ಅಣು ರೇಣು ಪ್ರಾಣಿಗಳು ಮೊದಲಾಗಿ ಜಲಚರ ಭೂಚರ ಖೇಚರಗಳಲ್ಲಿ ಸಂಚರಿಸುವ ಕ್ರಿಮಿ ಕೀಟಕ ಪತಂಗ ಪಕ್ಷಿ ಮೃಗಪಶು ನರ ಸುರೋರುಗರೆಲ್ಲರಲ್ಲಿ ಶಿವ ಚೈತನ್ಯದ ಅಂಶ ಕಳೆ ಬಿಂದುವದು ದಶರತ್ನಚ್ಛಾಯೆಯಿಂ ಆಕಾರವಲ್ಲದೆ, ನಿರಾಕಾರವಲ್ಲದೆ ಸಾವಯುವವಲ್ಲದೆ ನಿರವಯುವವಲ್ಲದೆ ಸಕಲವಲ್ಲದೆ ನಿಃಕಲವಲ್ಲದೆ ಗುಣಿಯಲ್ಲದೆ ನಿರ್ಗುಣಿಯಲ್ಲದೆ, ಸ್ತ್ರೀ ಪುಂನಪುಂಸಕವಲ್ಲದೆ, ಶೂನ್ಯ ನಿಃಶೂನ್ಯ ಮಹಾಶೂನ್ಯವನೊಳಕೊಂಡಖಂಡ ದ್ವಯ ಸಚ್ಚಿದಾನಂದ ಶಾಶ್ವತ ಪರಿಪೂರ್ಣ ಪರಬ್ರಹ್ಮವದು ಸರ್ವಜ್ಞತ್ವ ಸರ್ವಚೈತನ್ಯತ್ವ ಸರ್ವೇಶ್ವರತ್ವ ಸರ್ವವ್ಯಾಪಕತ್ವ ಜಗದ್ವಿಲಕ್ಷಣತ್ವ ಸರ್ವ ಸಾಮರ್ಥ್ಯತ್ವ ಸೃಷ್ಟ್ಯಾದಿ ಸ್ಥಿತಿ ಲಯಕಾರ್ಯ ಕಾರ

ಣಂಗಳೆಲ್ಲಕ್ಕಾಧಾರವಾದ ಜಗದಾದಿ ಬೀಜ ಮೂಲ ಸ್ತಂಭನಾದ್ಯಂತ
ರಹಿತ ಸಹಜಾನಂದ ಪರ ತತ್ವವಗಣಿತ ಕೋಟಿ ಸೂರ್ಯ ಚಂದ್ರಾದಿಗಳ
ಪ್ರಭೆಯಂ ತಿರಸ್ಕರಿಸುವ ಪರಂಜ್ಯೋತಿಯದು ಜಡನೇತ್ರಕ್ಕಗೋಚರವಾಗಿ
ಬಚ್ಚ ಬರಿಯ ಪರಮ ಪ್ರಕಾಶವೇ ಪಿಂಡ ಬ್ರಹ್ಮಾಂಡಗಳೊಳಹೊರಗೆಲ್ಲ
ಪರಿಪೂರ್ಣತ್ವದಿಂದ ಅಖಂಡಿತ ತತ್ವಮಾದರೂ ಭಿನ್ನಾಭಿನ್ನತ್ವವಿಲ್ಲದ, ಬಹು
ಭೇದಂಗಳೊಳ್ ಭಿನ್ನರ್ಗೆ ಭಿನ್ನಾತ್ಮನಾಗಿ ಅಭಿನ್ನರ್ಗೆ ಏಕಾತ್ಮನಾಗಿರ್ದ
ಮಹತ್ತಿಗೆ ಮಹಚ್ಛೇತನಾತ್ಮಕನ ಗಿ ಪರಮಾಣುವಿಗತಿ ಪರಮಾಣುರೂಪನಾಗಿ
ತಾನೀ ನಾಮರೂಪ ಕ್ರಿಯಾ ರಹಿತನಾದಾಗ್ಯೂ ಸೃಷ್ಟ್ಯಾದಿ ಸರ್ವ ಕಾರ್ಯಂ
ಗಳಲ್ಲಿ ತಾನಿಲ್ಲದಾಗದಾಗಿ, ಸೂಚೀಕಾಂತವ ಸನ್ನಿಧಿಯಿಂ ಸೂಚಿ ಚೇಷ್ಟಿಸು
ವಂತ, ತನ್ನ ಸಾನಿಧ್ಯದಿಂದಖಿಳಜಡರೂಪವಾದ, ಆ ಅಚೇತನ ಭೂತಾದಿ
ತತ್ವಂಗಳಿಗಲ್ಲ ಚೇತನವುಂಟಾಗಿರುವದರಿಂದ ಆ ಸೂರ್ಯನಖಿಳ ಕಾರ್ಯ
ಸಾಕ್ಷಿ ಚೈತನ್ಯಾತ್ಮ ಚಿನ್ನಾದ ಚಿತ್ಕಲಾ ಬಿಂದುವದು ಪ್ರಭಾಮಯವಾಗಿ,
ಕಾರಣೋದ್ದಿಶ್ಯ ರೇತರೋ ರಕ್ತ ಬಿಂದುವಿನ ಮರೆಯಲ್ಲಕಸ್ಮಿತವಾಗಿರ್ದಪಕ್ಕವಿರ
ಳನಾಗಿ, ವಿಲಕ್ಷಣನಾಗಿರುವದರಿಂದಲಾ ಆತ್ಮ ಸಾನ್ನಿಧ್ಯ ಚೈತನ್ಯದಿಂದಲಾ
ಪಿಂಡೋತ್ಪತ್ತಿಯಾಗುವದಲ್ಲದೆ, ದುರ್ಗಂಧಮಯವಾದ ಮಾತಾಪಿತರ ಯೋನಿ
ಚಕ್ರದ ಜಡ ಮಲದಲ್ಲಿ ಪಿಂಡವಂ ಗಟ್ಟಿಗೊಳಿಸುವ ಸಾಮರ್ಥ್ಯ ಉಂಟೇ ?
ಇಲ್ಲವು ಅದು ಕಾರಣ ಮಾತಾಪಿತರುಗಳ ರಕ್ತ ರೇತುಗಳಿಂದ ನಾನುದಯಿ
ಸಿದನೆಂಬುದು ಸರ್ವಥಾ ನಿಶ್ಚಯವಲ್ಲವು ಇದಕ್ಕಾ ಶ್ರೀಗುರು ಘನಮಠೇಶನ
ವಾಕ್ಯವೇ ಸಾಕ್ಷಿ. ಪದ ' ಕುಲವೇ ಶಿವಕುಲವೋ । ಭಕ್ತನ ಕುಲವೇ ಶಿವ
ಕುಲವೋ । " ಎಂಬ ಪದವಲ್ಲಿ ವೇಧಾದೀಕ್ಷೆಯಭಿಪ್ರಾಯವೆಲ್ಲ ಸೂಕ್ಷ್ಮ ರೂಪ
ದಿಂದ ಅತಿ ರಹಸ್ಯವಾಗಿರ್ಪುದಾ ಪದವಂ ನೋಡಬೇಕು.

ನಿಃಕಲ ಪರಬ್ರಹ್ಮವೆನಿಪ್ಪ ಮೂಲಚಿತ್ತುವಿನ ಚಿನ್ನಾದದಂಶದಿಂದ ಪಿಂಡೋ
ತ್ಪತ್ತಿಯಾಗುತ್ತಿಹುದಾದ ಕಾರಣ ಆತ್ಮಾಂಶವಾದ ಪುತ್ರನಿಗೆ, " ಆತ್ಮಜ ಆತ್ಮ
ಸಂಭವಃ " ಎಂಬ ನಾಮವಾಯಿತಲ್ಲವೆ, ಆತ್ಮನಾಮವು ಪರವಸ್ತುವಿಗಲ್ಲದೆ,
ಮತ್ತಾವ ತೆರದ ಜಡಭೂತ ತತ್ವಂಗಳಿಗುಂಟಾದರೆ ಹೇಳಿರಿ. ಈ ಜಡವಾದ
ರೇತು ರಕ್ತಗಳೆಂಬ ಹೀನ ಮಲದಲ್ಲಿ ಈ ಶರೀರಾದ್ಯಂತ ಅವಯವ ಪ್ರಾಣೇಂ
ದ್ರಿಯ ಕರಣ ತತ್ವ ಸಮುದಾಯಗಳನ್ನು ಕ್ರಮಯುಕ್ತನಾಗಿ ಹುರಿಗೊಳಿಸಿ.
ಸೃಜಿಸುವ ತ್ರಾಣ ಉಂಟೇ ? ಇಲ್ಲ

ಹಾಗಾದರೆ ಸ್ತ್ರೀ ಪುರುಷರು ಕೂಡದೆ ಪಿಂಡೋತ್ಪತ್ತಿಯಾಗಬೇಕು
ಹಾಗಾದರೆ, ಸ್ತ್ರೀ ಪುರುಷರು ಕೂಡಿದಲ್ಲಿ ಪಿಂಡೋತ್ಪತ್ತಿಯಾಗುತ್ತಿರುವ ಕಾರಣ
ವೇನೆಂದರೆ, ಜಗದೀಶ್ವರನು ತಾನು ನಿರ್ನಿಮಿತ್ತನಾದ ಕಾರಣ ಸೃಷ್ಟ್ಯ

ಸರ್ವ ಕಾರ್ಯಾದಿಗಳಿಗೂ ತಾನೇ ಕಾರಣನಾದಾಗ್ಯೂ ತನ್ನನ್ನು ತಪ್ಪಿಸಿಕೊಂ
ಬುವದಕ್ಕೆ ತನ್ನ ಮಾಯಾ ಸಾಮರ್ಥ್ಯದ ಮರವೆಯು ಮುಸುಕನಿಟ್ಟು ಸೂತ್ರವಂ
ಪಿಡಿದು ತೆರೆಮರೆಯಲ್ಲಿ ನಿಂದು ನಾಟಕದ ಬೊಂಬೆಯನಾಡಿಸುವವನಂತೆ ಅತಿ
ಚಮತ್ಕಾರ ಲೀಲಾ ವೈಭವದ ಜಗತ್ ಸೃಷ್ಟಿ ಸ್ಥಿತಿಲಯಂಗಳಂ ಕ್ರಮದಿಂ
ನಡಿಸುವಲ್ಲಿ ಅವುಗಳ ನಿಮಿತ್ಯ ಭಾರವಂ ತಾನು ಹೊರಬಾರದಾಗಿ ಬೇರೆ
ಮಾಡಿ ಇಟ್ಟಾಗ್ಯಾದರೂ ತಾನಿಲ್ಲದೆ ಆ ಕಾರ್ಯ ಸಾಗದು ತಾನೋರ್ವನು
ಅಖಂಡಿತ ಪರಿಪೂರ್ಣ ಪರತತ್ವಮಾಗಿರ್ದರೂ ಎಲ್ಲಿ ನೋಡಿದಡಲ್ಲಲ್ಲಿ ಭಿನ್ನರ್ಗೆ
ಭಿನ್ನಾತ್ಮನಾಗಿ ಕ್ರಿಯಾರಹಿತನಾದಾಗ್ಯೂ ಕಾರ್ಯಸಮರ್ಥನಾಗಿ ಅತಿವಿಚಿತ್ರ
ಲೀಲಾಮಯನಾಗಿ, ತಾನಿರ್ದಕ್ಕಿರ್ದ ಹಾಗೆ ಸಹಜಾನಂದದಿಂದಿರ್ಪ ಪೂರ್ಣ
ಬ್ರಹ್ಮದ ನಿಜವು ಸರ್ವಾಂಗ ನೇತ್ರವನುಳ್ಳ ಸರ್ವಜ್ಞ ಮೂರ್ತಿಗಳಿಗೆ ಸಾಧ್ಯ
ವಲ್ಲದೆ, ಉಳಿದಾದ ನರ ಸುರೋರುಗ ಯಕ್ಷ ಕಿನ್ನರ ಗರುಡ ಗಂಧರ್ವ
ಮಯೂರ ವಿದ್ಯಾಧರ ಮುನಿಗಳಿಗಾದರೂ ಬ್ರಹ್ಮಾದಿ ದೇವತಾ ಸಾರ್ವಭೌಮ
ರಿಗಾದರೂ ಅಗೋಚರವಾಗಿರ್ಪುದು. ಆ ಪರಶಿವಮೂರ್ತಿಯು ಸತಿಪತಿ ಕೂಟ
ದಿಂದುತ್ಪತ್ತಿಯನು ಷಟ್ಕೃಷಿ ಲೋಕ ವ್ಯವಹಾರದಿಂ ಸ್ಥಿತಿಯನು ರೋಗಾದಿ
ತಾಪತ್ರಯಗಳಿಂದ ಮರಣವನು ನೇಮಿಸಿ ಸೃಷ್ಟಿ ಸ್ಥಿತಿಲಯಗಳಿಗೆ ನಿಮಿತ್ಯನು
ಬೇರೆ ಮಾಡಿದಾಗ್ಯಾದರೂ ತನ್ನ ಆ ಕಾರ್ಯ ಸಾಮರ್ಥ್ಯಂಗಳೊಂದರ
ಸ್ವಾಧೀನದಲ್ಲಿರದೆ ಸ್ವತಂತ್ರನಾಗಿರ್ಪನು ಆ ಸೃಷ್ಟಿ ಕ್ರಮವೆಂತೆಂದೊಡೆ ಸ್ತ್ರೀ
ಪುರುಷರ ಕೂಟದ ನೆವದಿಂದ ಜಗತ್ ಸೃಷ್ಟಿಯನ್ನು ನೇಮಿಸಿರ್ಪನದಕ್ಕೆ
ದೃಷ್ಟಾಂತವೇನಂದರೆ—

ಸಮುದ್ರದ ಸಿಂಪಿಯಲ್ಲಿ ಸ್ವಾತಿಯ ಮಳೆಯ ಹನಿಯು ಬಿದ್ದಾಕ್ಷಣವೇ
ಗಟ್ಟಿಗೊಂಡು ಮುತ್ತಾಗುವದೆಂಬರು. ಅದಂತಿರಲಿ. ಸಿಂಪಿಯಲ್ಲಿ ಬಿದ್ದ ಹನಿ
ಗಳೆಲ್ಲ ಮುತ್ತಾದರೆ ಬ್ರಹ್ಮಾಂಡದಲ್ಲಿ ಜೋಳದ ರಾಶಿಯಂತೆ ಮುತ್ತಿನ ರಾಶಿ
ಯಾಗಿರುವದು ಹಾಗಲ್ಲ ಸಮುದ್ರದ ಸಿಂಪಿಗಳು ಸ್ವಾತಿಯ ಮಹಾ ನಕ್ಷತ್ರದ
ಋತು ಸಮಯಕ್ಕೆ ಸಮುದ್ರದ ನೀರಿನ ಮೇಲೆ ತೇಲುತ್ತ ಬಾಯಿ ತೆರೆದಿರು
ವವು ಇದು ಜಗದೀಶ್ವರನ ತಂತ್ರವು ಆ ಸಮಯದಲ್ಲಿ ಸ್ವಾತಿಯು ಮಳೆಯು
ಸಮುದ್ರದ ಮೇಲೆ ಸುರಿಯುವಾಗ ಆ ಸಿಂಪಿಯಲ್ಲಿ ನೀರಿನ ಹನಿಯು ಬಿದ್ದಾ
ಗಲೇ ಸ್ವಾತಿಯ ಮೇಘದಲ್ಲಿ ಮಿಂಚಾಗಿ ಆ ಮಿಂಚಿನ ಪ್ರಕಾಶದ ಛಾಯೆಯು
ಸಿಂಪಿಯಲ್ಲಿ ಬಿದ್ದ ಹನಿಯಲ್ಲಿ ಹೊಳೆಯಲು ಆ ನೀರು ಹೆಪ್ಪಾದಾಗಲೆ ಮಿಂಚಿನ
ಅತಿ ಸೂಕ್ಷ್ಮ ಕಿರಣ ಪ್ರಕಾಶವು ಗಟ್ಟಿಯಾದ ನೀರಿನ ವಶಗತವಾಗಿ ತನ್ನಂಶ
ತತ್ವದೊಳ್ ಕೂಡುವದಕ್ಕೆ ಮಾರ್ಗವಿಲ್ಲಾಗಿ ನೀರಿನುಪಾಧಿವಶದಿಂ ಮಿಂಚಿನ
ಪ್ರಕಾಶವೇ ತೇಜೋಮಯ ಮುತ್ತಾಗಿರ್ಪುದು. ಆ ಮುಕ್ತಾಫಳವಂ ಪರೀಕ್ಷಿ
ಸಲದರಲ್ಲಿ ಮಿಂಚಿನ ಪ್ರಕಾಶದಂಶವಿರ್ಪುದು. ಇದುವೆ ಪಿಂಡೋತ್ಪತ್ತಿಗೆ

ಪ್ರತ್ಯಕ್ಷ ಪ್ರಮಾಣವು. ಮತ್ತಷ್ಟರಲ್ಲಿ ಮಿಂಚಿನ ಪ್ರಕಾಶ ಬೀಳುವದಕ್ಕಿಂತ ಮೊದಲೆ ಹನಿಯು ಬಿದ್ದಾಕ್ಷಣವೇ ಬಾಯಿ ಮುಚ್ಚಿದ ಸಿಂಪಿಯಲ್ಲಿಯ ನೀರು ಮುತ್ತಾಗದೆ ಆ ಹನಿಯು ಹಾಗೇ ಇರುವದು. ಈ ದೃಷ್ಟಾಂತದಂತೆ ಸ್ತ್ರೀಯರು ಋತು ಸಮಯಲ್ಲಿ ಷಡ್ದಳ ಕಮಲ ಗರ್ಭವು ವಿಕಸಿತವಾಗಿ ಋತುವಾದ ಹದಿನೈದು ದಿವಸದ ವರೆಗೂ ಅಥವಾ ಆಕಲ್ಪಿತವಾಗಿ ಹದಿನಾರನೇ ದಿವಸದ ವರೆಗೂ ಬಾಯಿ ತೆರೆದಿರುವದು ಆ ಸಮಯದಲ್ಲಿ ಮೊದಲು ಸ್ತ್ರೀ ಬಿಂದು ಖಲನವಾಗಿ, ತತ್ಕಾಲಕ್ಕೆ ಪುರುಷ ಬಿಂದು ಖಲನವಾದಾಗಲೇ ಪಿಂಡೋತ್ಪತ್ತಿಯಾಗುವದೆಂಬರು ಹಾಗಾದರೆ ಪ್ರತಿ ತಿಂಗಳಲ್ಲಿ ಸ್ತ್ರೀಯರಿಗೆ ಋತುಕಾಲ ಬರುವದುಂಟು. ಆ ಸಮಯದಲ್ಲಿ ಕಮಲ ಗರ್ಭದಲ್ಲಿ ಬಿದ್ದ ರೇತು ಬಿಂದುಗಳೆಲ್ಲ ಪಿಂಡೋತ್ಪತ್ತಿಯಾಗುತ್ತ ಹೋದರೆ, ಜನರಿರುವದಕ್ಕೆ ಬ್ರಹ್ಮಾಂಡದ ಭೂಮಿ ಸಾಲದು ಪಿಂಡೋತ್ಪತ್ತಿಯ ಕ್ರಮವು ಹಾಗಲ್ಲ. "ಆನಂದೋ ಬ್ರಹ್ಮೇತಿ" ಎಂಬ ವೇದ ವಾಕ್ಯ ಉಂಟಾಗಿ, ಆನಂದವೇ ಬ್ರಹ್ಮಾಂಡವಾದ ಕಾರಣ ದೇಹೋಪಾಧಿಯಿಂದ ಸಹಜಾನಂದವೇ ಸಕಲ ಕರಣಾದಿ ಇಂದ್ರಿಯಂಗಳ ತೃಪ್ತಿಯಲ್ಲಿ ಬಹು ಸುಖವಾಗಿ ಭೋಗಂಗಳಲ್ಲಿ ವನಿತಾದ್ಯಷ್ಟ ಮಹಾ ಭೋಗಂಗಳಲ್ಲಿ ಅಷ್ಟಾನಂದವೆನಿಸಿ, ಮಿಂಚಿನ ಪ್ರಕಾಶದಂತೆ ತೋರಿ ಅಡಗುತ್ತಿಹುದಾಗಿ,. ಮತ್ತೆ ಸ್ತ್ರೀ ಪುರುಷರ ಮದನ ವಿಲಾಸ ಕ್ರಿಡಾ ಸಮಯದೊಳಾನಂದಮುದ್ಭವಿಸುತ್ತಿಹುದು. ಆ ವಿಷಯಾನಂದವು ಉಕ್ಕೇರಿದಾಗಲೆ, ನಿಃಕಲ ಬ್ರಹ್ಮದ ಸಹಜಾನಂದವು ಕಲಕಿ ಕಿಡಿಗಳು ಪೊರಸೂಸುತ್ತಲಿರುವ ಕಾದ ಕಬ್ಬಿಣದಂತಾಗಲಲ್ಲಿ ಚಿನ್ನಾದ ಚಿತ್ಕಲಾ ಪ್ರಕಾಶವು ವಾಲಾಗ್ರ ಶತಭಾಗದೊಲು ಅತಿ ಸೂಕ್ಷ್ಮತರಮಾದ ಅನಂತ ಸಹಸ್ರಕೋಟಿ ಕಿರಣಗಳಿಂ ಪಸರಿಸುತ್ತಾ ಸ್ತ್ರೀ ಪುರುಷರೀರ್ವರ ಹೃದಯ ಕಮಲದೋಳ್ ಪರಿಪೂರ್ಣ ಪ್ರಕಾಶಮಯವಾಗಿ, ರವಿಕೋಟಿ ತೇಜದಿಂ ಬೆಳಗುತ್ತಿರ್ಪುದಿದಕ್ಕೆ ದೃಷ್ಟಾಂತ ಮೆಂತೆಂದಡೆ, ಸತಿ ಪತಿಗಳ ಸಂಯೋಗವಾದ ತದನಂತರ ಮತ್ತು ಯೋಗಿಗಳ ಶಿವಯೋಗ ಕಾಲದಲ್ಲಿ ಮನಪವನಂಗಳೊಂದಾದಾಗಲೆ ಬ್ರಹ್ಮಾನಂದ ಕಲಕಿ ಪ್ರಭಾಮಯವಾಗುತ್ತಿರುವದರಿಂದಲಾ ಉಷ್ಣತೆಯಿಂದ ನೇತ್ರಂಗಳು ಕೆಂಪಾಗಿರುವವು. ಇದು ಪ್ರತ್ಯಕ್ಷ ಪ್ರಮಾಣವದಂತಿರಲಿ. ಕಾರ್ಯ ಕಾರಣ ವಶದಿಂದ ಸ್ತ್ರೀ ಪುರುಷರ ಕ್ರೀಡಾ ಕಾಲದೊಳು ಉಭಯತರ ಹೃದಯಮಂ ಪರಮ ಪ್ರಭೆಯಿಂ ಬೆಳಗಲ್ಪಟ್ಟ ಚಿನ್ನಾದ ಚಿತ್ಕಲಾ ಪ್ರಕಾಶವು ಸಕಲ ಕರಣೇಂದ್ರಿಯಂಗಳೊಳ್ ಪಸರಿಸಿ ಸರ್ವಾಂಗದ ರೋಮಕೂಪದ್ವಾರಂಗಳೊಳ್ ಸಹ ಪೊರಸೂಸುತ್ತ ಮನವೆಂಬ ಮೇಘದೊಳ್ಮಿಂಚಾಗಿ ಸುಳಿಯುತ್ತಲಡಗುತ್ತಿರುವ ಕಾಲದಲ್ಲಿ ಶಿವತಂತ್ರದಿಂದಾ ಷಟ್ಚಕ್ರಂಗಳಲ್ಲಿ ಯೋನಿ ಚಕ್ರದ ಷಡ್ದಳ ಕಮಲ ಗರ್ಭ ಗೃಹದೊಳ್ ಉಭಯತರ ಬ್ರಹ್ಮರಂಧ್ರದಂಥ ಗರ್ಭದತಿ ಸೂಕ್ಷ್ಮನಾಳದಿಂ ಪೊರಸೂಸುತ್ತಿರ್ದ ಚಿನ್ನಾದ ಚಿತ್ಕಲಾ ಪ್ರಕಾಶವು ಏಕ ಕಾಲದೊಳ್ ಸಂಯೋಗವಾಗಲದೇ ಚಿದ್ಬಿಂದುವೆನಿಸುವದಾ

ಸಮಯದ ಮೊದಲಲ್ಲಿ ಕ್ರೀಡಾ ಮಥನದ ಸಮಯದ ಉಷ್ಣತೆಯಿಂದ ಮಸ್ತಕದ ಮಡ ವಿನಲ್ಲಿರ್ದ ರೇತು ರಕ್ತಗಳು ಖಲನವಾಗಿರಲದರೊಳ್ ಶಿವಶಕ್ತಿಮಯ ವಾದ ಚಿದ್ಬಿಂದುವದು ಪೊಳೆಯಲದನಾವರಿಸಿ ಜಡಬೀದು ಹೆಪ್ಪಾಗುವದದರ ವಶದಿಂದಲಾ ಪ್ರಕಾಶವು ಅದರ ಮಧ್ಯದೊಳ್ ವಿರಳವಾಗಿ ಮತ್ತದಕ್ಕೆ ವಿಲಕ್ಷಣವಾಗಿ, ಚಿತ್ಪಿಂಡವೆನಿಸಿರ್ಪುದಾ ಚಿತ್ಪಿಂಡವಾತ್ಮಾಂಶವಾದ ಕಾರಣವದರ ಸಾನ್ನಿಧ್ಯದಿಂದಲೇ ಜಡರಕ್ತ ರೇತುಗಳು ಸಮ್ಮಿಶ್ರದಿಂ ಹೆಪ್ಪಾದ ಜಡ ಬಿಂದು ವಿನಲ್ಲಿ ಚೇತನವುದಿಸಿ ದಿನ ಒಂದಕದು ಖಲನ ವೆಂಟಕ್ಕೆ ಸಂತತಂ ಕೊನೆದೋರ್ಪುದೊಂದು ತಿಂಗಳಿಗೆ, ಸಿರವೆರಡಕ್ಕೆ ಬಾಹು, ಮೂರಕ್ಕೆ ತನುವು ನಾಲ್ಕಕ್ಕೆ ನವರಂಧ್ರನೈದಕ್ಕೆ ಕುಕ್ಷಿ ಜನಿಪುದಾರಕ್ಕೆ ಬೆರಳೇಳಕ್ಕೆ ಸಂಪೂರ್ಣ ಮೆನಿಸಿ, ಚೈತನ್ಯಮಿಡಿದೆಂಟಕ್ಕೆ ಪದ್ಮಾಸನದಿಂದಿರ್ಪುದೆಂದು ಪ್ರಮಾಣಮುಂಟ ದರಂತೆ ತನುವು ಬೆಳೆದಿರ್ಪುದಾ ಚಿತ್ತುವಿನ ಚೈತನ್ಯದಿಂದದಕ್ಕಾತ್ಮನು ಪೊಂದಿ ಹೊಂದದಂತಾಗಿ ನಾನಾ ದೇಹದ ಹೃತ್ಕಮಲದ ಚೌದಳ ಪೀಠದ ನೀಲ ದುಪ್ಪರಿಗೆಯ ಮೇಲು ಭಾಗದ ಸಹಸ್ರದಳ ಸುವರ್ಣ ಛಾಯದ ಕಮಲ ಗರ್ಭದೊಳ್ನವರತ್ನಕಾಂತಿಯ ಸಿಂಹಸಿರದೊಳ್ ನಿಜವಾಸನಾಗಿರ್ದು ಸಹಜಾ ನಂದ ಸ್ವರಪದಿಂದಿರ್ಪನಾ ಸಮಯದೊಳ್ ನವಮಾಸ ಬಲಿಯಲಾ ಮಾಯಾ ಪ್ರಸೂತಿವಾಯು ವಶದಿಂ ಪೊರಮಡುವ ಕಾಲದೊಳ್ ಪರಮ ಪ್ರಯಾಸ ಮಾಗಲದರಿಂ ವಿಕಾರಿಯಾಗಿ ತನ್ನ ನಿಜವ ಮರೆದು ಭೂತ ಸಂಗದಿಂ ಭೂತ ಸೋಂಕಿನ ಜೀವಗುಣಮಯವಾಗಿ ಜೀವನೆನಿಸಿ ಮಲಮಯವಾದ ಭೂತ ಪಂಚಕದ ಜಡತನುವೇ ತಾನೆಂದಭಿಮಾನಿಸಿ ತನ್ನ ನಿಜತನುವಾದ ಚಿತ್ಪಿಂಡಮಂ ಮರದು ಮಾಯಾ ಮೋಹಿಯಾಗಿ ಲೋಕ ವ್ಯವಹಾರದೊಳಿರ್ದಪನು

ಮತ್ತೀ ಪಿಂಡೋತ್ಪತ್ತಿಯು ಪರಮ ರಹಸ್ಯ ಮಾಗಿರ್ಪುದೀ ಕ್ರಮವನ ರಿಯ ಬೇಕಾದರೆ, ಶಿವಾಂಶೀ ಭೂತರಲ್ಲದೆ, ಉಳಿದವರಿಗಗೋಚರವಾಗಿರ್ಪುದೀ ಚಿತ್ಪಿಂಡವನರಿಯಲ್ಪಡುವ ಜ್ಞಾನವೇ ಸುಜ್ಞಾನವೆನಿಸುವದು.

ಮನುಷ್ಯದೇಹದಲ್ಲಿ ಮಾತ್ರ ಜ್ಞಾನಾಂಕುರವು ವಿಚಿತ್ರ ವೈಖರ್ಯ ರೂಪದಿಂ ಪ್ರಕಟಿತವಾಗಿರ್ದು ವೇದಾದಿ ಶಾಸ್ತ್ರ ಶ್ರವಣದಾರ್ಢ್ಯಕೆಯಿಂದ ವರ್ಧನವಾಗಿ ದಿನದಿನಕ್ಕೆ ವಿಸ್ತಾರವಾಗಿ ಪಲ್ಲೈಸುತ್ತ ಪರಿಪೂರ್ಣ ಮಹಾ ಜ್ಞಾನವೆನಿಸಿರುವದು

ಉಳಿದಾದ ಪಶುಪಕ್ಷಿ ಪ್ರಾಣಿಗಳು ಯಾವತ್ತರಲ್ಲಿ ಮಹಾಜ್ಞಾನಾಂಕುರವು ಇದ್ದಾಗ್ಯಾದರೂ ಪ್ರಕಟಿತವಾಗಿರದೆ, ಪಾಷಾಣಾದಿಗಳಲ್ಲಿ ಅಗ್ನಿ ಇರ್ಪಂತೆ ಗೋಪ್ಯವಾಗಿರ್ಪುದು.

ಮತ್ತಾ ಶ್ರೀಗುರುವಿನುಪದೇಶದಾದಿಯ ಮಹಾವಾಕ್ಯವಾದ 'ತತ್ವಮಸಿ' ವಾಕ್ಯದ ಪದಗಳಂ ಪದಾರ್ಥಂಗಳಂ ಚೆನ್ನಾಗಿ ಖಂಡಿಸಿ ಅರ್ಥೈಸಿ ಸಕಲ ತತ್ವ ಸಮುದಾಯಂಗಳಲ್ಲಿ ಅತಿಗೋಪ್ಯವಾಗಿರ್ದ ಶಿವತತ್ವವನರಿದು ಆ ಶಿವ ತತ್ವವೇ ತಾನೆಂದು ಕರತಳಾಮಳಕವಾಗಿ ಕಂಡರಿದು ಪರಿಪೂರ್ಣ ಬ್ರಹ್ಮಾನು ಭಾವಿಯಾಗಿ ನಿರ್ವಿಕಲ್ಪ ಸಮಾಧಿಯ ಲಕ್ಷಣದಿಂದ ಎಲ್ಲಿ ನೋಡಿದಡಲ್ಲಿ ಅಂತ ರ್ಬಾಹ್ಯದ ಪಿಂಡ ಬ್ರಹ್ಮಾಂಡಂಗಳಲ್ಲೆಲ್ಲ ಪರಿಪೂರ್ಣನಾಗಿ, ತನ್ನನೇ ಕಂಡು, ತನಗನ್ಯವಾಗಿ ಮತ್ತೇನೂ ತೋರದಿರ್ಪ ನಿಜಸಮಾಧಿಯೊಳು ನಿಸ್ತರಂಗ ಸಮುದ್ರದಂತೆ ನಿಜಾನಂದಮಯವಾಗಿರ್ಪುದೇ ವೇಧಾದೀಕ್ಷೆಯಲ್ಲಿ ಆಣವ ಮಲ ನಿರಸನವೆನಿಸುವದು

ಈ ವಸ್ತು ನಿರ್ದೇಶದಾತ್ಮ ಸಾಕ್ಷಾತ್ಕಾರದಲ್ಲಿ ಸ್ವಸ್ವರೂಪವನರಿಯಬೇ ಕಾದರೆ, ಕೆರೆಯ ಪದ್ಮರಸರಿಂ ವಿರಚಿತವಾದ ದೀಕ್ಷಾಬೋಧೆಯನ್ನು ಮತ್ತು ವಿವೇಕ ಚಿಂತಾಮಣಿಯ ವೇದಾಂತಸಾರವೆಂಬ ಪ್ರಥಮ ಪ್ರಕರಣವನ್ನು ನೋಡಿ ಅದರಲ್ಲಿ ಹೇಳಿರುವ ಇಪ್ಪತ್ತೆರಡು ಪ್ರಮಾಣಂಗಳಿಂದ ವಸ್ತು ಸಾಕ್ಷಾ ತ್ಕಾರವಂ ಮಾಡಿಕೊಳ್ಳಬೇಕು ಮತ್ತು ಅನುಭವಸಾರದ ಎರಡನೆಯ ಅಧ್ಯಾ ಯವನ್ನ ಪರಮಾನುಭವ ಬೋಧೆಯ ಪ್ರಥಮದ ಮೂರು ಪ್ರಕರಣವನ್ನು ನೀತಿಯನ್ನ ನೋಡಿ ತಿಳಿಯಬೇಕು ಮತ್ತು ಗ್ರಂಥಬಾಹುಲ್ಯವಾಗುವದಾಗಿ, ಇವುಗಳಲ್ಲದರ ಸಾರಾಂಶ ಅಂ ಸಂಕ್ಷೇಪವಾಗಿ ಇಲ್ಲಿ ಹೇಳಿರುವೆನು ಈ ಪ್ರಕರಣವಾದರೂ ವಸ್ತು ಸಾಕ್ಷಾತ್ಕಾರಕ್ಕೆ ಸ್ವಸ್ವರೂಪವನೀಕ್ಷಿಸುವದಕ್ಕೆ ನಿರ್ಮಲ ದರ್ಪಣದಂತಾಗಿರುವದು

## ಮಾಯಾಮಲವು.

"ಆಣವಂ ಗರ್ಭಸಂಬಂಧ ಮಾಯಾ ಮೋಹಂಚ ಮಾಯಾಮಲಂ ॥ ಕಾರ್ಮಿಕಂ ದ್ರವ್ಯ ಸಂಬಂಧಂ ಇತ್ಯೇತ ಮಲತ್ರಯಂ ।" ಎಂದುಂಟಾಗಿ, ಜಾತಿ ಸೂತ್ರ ಕುಲಗೋತ್ರ ನಾಮಾಚಾರ ಸ್ವೇಷ್ಟ ವೃತ್ತಿ ಗೃಹ ಕ್ಷೇತ್ರ ಸತಿ ಸುತರಾಪ್ತರಿಷ್ಟರೆಲ್ಲ ತಾನು ತನ್ನದೆಂಬ ಮೋಹದ ಮಮಕಾರ ಭ್ರಾಂತಿಯ ಮದ ಲೋಭಂಗಳಲ್ಲಿ ವರ್ತಿಸುವ ಜೀವವೇ ಮಾಯಾಮಲವೆನಿಸುವದು.

ಈ ಮಾಯಾಮಲದ ಸ್ವರೂಪವನರಿಯಬೇಕಾದರೆ, ಈ ಪ್ರಕರಣದಲ್ಲಿ ಸಂಕ್ಷೇಪವಾಗಿ ಸೂಚಿಸಿರುವೆನು. ಅದನ್ನ ಸಂಜ್ಞೆಯ ಮೇಲಿಂದ ತಿಳಿಯ ಬಹುದು. ಆದರೆ ಬಹು ಜನ್ಮ ಜಾಡ್ಯವೀ ಕುಲಗೋತ್ರದಭಿಮಾನವೀ ಮಾಯಾ ಮಲವು ಸಂಜ್ಞಾ ಮಾತ್ರಕ್ಕೆ ನಿರಸನವಾಗದಿದ್ದರೆ, ಕೋಟಿದಾಚಾರ್ಯರ ಶಿಷ್ಯ ಪ್ರಶಿಷ್ಯ ಸಂತತಿಯವರಾಗಿ, ಜಗದ್ಗುರುಗಳೆನಿಸಿ ನಮ್ಮ ಮನೆತನದವರ ಸಂತ

ತಿಯು ಗುರು ಸೂತ್ರಕ್ಕೆ ಮೂಲಗುರು ಮೂರ್ತಿಯಾದ ಭಕ್ತ ಮಾಹೇಶ್ವರಾಚಾರಕ್ಕೆ ಆಚಾರ ಪಟ್ಟಾಧ್ಯಕ್ಷರಾದ ಸಿದ್ಧಗಿರಿ ಸಿಂಹಾಸನಾಧೀಶ ಕಾಡ ಸಿದ್ಧೇಶ್ವರ ಸ್ವಾಮಿಯ ಪ್ರಭುಗಳಿಂ ರಚಿತವಾದ ಶ್ರೀ ವೀರಶೈವ ಷಟ್‌ಸ್ಥಲದ ವಚನಾರ್ಥವನ್ನು ತರಿಸಿ ನೋಡಬೇಕು. ಕೆಲವರು ಅದು ಪ್ರಮಾಣವಲ್ಲೆಂದರೆ, ಆ ವಚನದ ನಿಜತ್ವಕ್ಕೆ ಸಾಕ್ಷಿಯಾಗಿ ಸಕಲ ಪುರಾತನರ ನಾನೂರು ಬಿಡಿಗಿನ ವಚನವನ್ನೂ ವಿಶೇಷಾನುಭವ ಷಟ್‌ಸ್ಥಲದ ವಚನವನ್ನು ಲಿಂಗಚಿದಮೃತ ಬೋಧೆಯನ್ನು ವೀರಶೈವಾಮೃತ ಮಹಾ ಪುರಾಣವನ್ನು ನೋಡಿ ತಿಳಿಯಬೇಕು ವೇಧಾ ದೀಕ್ಷಾಕಾಲದಲ್ಲಿ ವೇದಾಂತ ಶ್ರವಣದಿಂದ ಆತ್ಮ ಸಾಕ್ಷಾತ್ಕಾರವಾಗಿ ತನ್ನ ನಿಜಸ್ವರೂಪವನರಿದಾಗಲೆ ಪೂರ್ವಜನ್ಮವಳಿದು ಪುನರ್ಜಾತನಾಗುವಲ್ಲಿ ಚಿದಂಗರೂಪನಾಗಿ ಗುರುಕರಜಾತನಾಗಿ, ಪುಟ್ಟಿ ಅಯೋನಿಜಸ್ವರೂಪವನರಿದಾಗಲೆ, ಪೂರ್ವಜನ್ಮವಳಿದು ಪುನರ್ಜಾತನಾಗುವಲ್ಲಿ ಚಿದಂಗರೂಪನಾಗಿ, ಗುರುಕರಜಾತನಾಗಿ ಪುಟ್ಟಿ ಅಯೋನಿಜನಾದ ಮೇಲೆ ಮುನ್ನಿರ್ದ ದೇಹಭಾವವಳಿದಿರುವನು ಅದುವೇ ಬಲಾತ್ಕಾರವಾದದ್ದು ಅದೊಂದು ಹೋದ ಮೇಲೆ ಮಾಯಾ ಮಲವು ನಿಲ್ಲುವದಕ್ಕಾಶ್ರಯವಿಲ್ಲಾಗಿ ತನ್ನಿಂದ ತಾನೇ ಹೋಗಬಹುದು. ಮತ್ತಾ ಮಾಯಾ ಮಲದಂಶರೂಪವಾದ ಪೂರ್ವದಮಲ ಕುಲದ ಜಾತಿ ಗೋತ್ರ ನಾಮಾಚಾರ ಕುಲ ಛಲದಭಿಮಾನವಲ್ಲದೆ, ಇದರಂಶವಾದ ಸತಿಸುತರಾಪ್ತರಿಷ್ಟರು ಜನನೀ ಜನಕರೆನ್ನುವರು. ನಾನವರ ವಂಶಜನೆಂಬದೊಂದಭಿಮಾನವೇ ಮಾಯಾಮಲವು. ಅದಂ ಮರೆದು ನಾನು ಆ ನಿಃಕಲ ಬ್ರಹ್ಮದ ನಾದಾಂಶವೆಂಬ ಭಾವವು ದೃಢವಾಗಿರಬೇಕು ಮತ್ತಾ ಜಗನ್ಮಯ ತತ್ವ ಮೂರ್ತಿಯಾದ ಶಿವಶಿವೆಯರೇ ತಂದೆ ತಾಯಿಗಳು, ಆ ಶಿವಕುಲದ ಭಕ್ತರೇ ಬಾಂಧವರೆಂಬಭಿಮಾನ ದೃಢವಾಗಿರಬೇಕು ಮತ್ತೀ ಜಗತ್ತೆಲ್ಲ ಜಗದೀಶ್ವರನ ಅನ್ನ ಕ್ಷೇತ್ರ ಗೃಹದ ದ್ರವ್ಯಾಲಯವೆಂದು ನಂಬಿ ತನ್ನ ಗೃಹ ಕ್ಷೇತ್ರ ಧನಧಾನ್ಯ ಮೊದಲಾಗಿ ಸಮಸ್ತ ಸ್ವಸ್ತಿ ವೃತ್ತಿಗಳೆಲ್ಲ ಶಿವಾಜ್ಞೆಯ ನೇಮದಿಂದ ಬಂದಿರ್ಪುವು ಅವನ್ನೆಲ್ಲ ಕಳೆದರೂ ಅವನಾಜ್ಞಾ ಮಾತ್ರದಿಂದಲ್ಲದೆ, ಎಷ್ಟು ಖರ್ಚು ಮಾಡಿದರೂ ಸವೆಯದಾಗಿ, ಅತಿ ಮೋಹವುಳ್ಳವನಾಗಿರದೆ ಅಂತರಂಗದಲ್ಲಿ ನಿರ್ಮೋಹಿಯಾಗಿರಬೇಕು. ಇದುವೇ ಮಾಯಾಮಲ ನಿರಸನವು.

## ಕಾರ್ಮಿಕ ಮಲವು.

ಕಾರ್ಮಿಕ ಮಲವೆಂದರೆ ಅಂತರಂಗದಲ್ಲಿ ಆತ್ಮದ್ರವ್ಯ ಸಂಬಂಧವಾದ ಅರುವತ್ತಾರುಕೋಟಿ ವೈಚಿತ್ರ್ಯಕರಣಾದಿಗುಣ ಧರ್ಮ ಕರ್ಮಂಗಳಭಿಮಾನವೇ ಕಾರ್ಮಿಕ ಮಲವೆನಿಸುವದು. ಮತ್ತಿದಲ್ಲದೆ ಬಹಿರಂಗದ ಸಕಲ ದ್ರವ್ಯಾದಿಗಳಲ್ಲಿ

ಮನವು ತೊಳಲುತಿರ್ದು ಅತಿಮೋಹಿಯಾಗಿರಲು ಅದರಲ್ಲಿ ಮಾಯಾ ಕಾರ್ಮಿಕಗಳೆಂಬ ಮಲಗಳು ಸಂಬಂಧವಾಗಿರ್ಪವು. ಅವುಗಳಂತಿರಲಿ. ದ್ರವ್ಯದ ಮೇಲೆ ಲೋಭವುಳ್ಳ ಲೌಕಿಕರುಗಳಾವತ್ತರೂ ಮಾಯಾ ಮರವೆಯಿಂದ ಮಕ್ಕಳು ನನ್ನವರು, ನಾನು ಇವರನ್ನು ಹುಟ್ಟಿಸಿ ಪರಮ ಪ್ರಯಾಸದಿಂದ ಬೆಳಸಿ ರಕ್ಷಿಸಿದೆನೆಂಬ ಅಭಿಮಾನದಿಂದ ತನ್ನ ಸ್ವಾಸ್ತಿ ವೃತ್ತಿ ಗೃಹ ಕ್ಷೇತ್ರ ಧನಧಾನ್ಯಂಗಳೆಲ್ಲವರಲ್ಲಿ ಅಣುಮಾತ್ರವಂಚನೆ ಇಲ್ಲದೆ, ಮಕ್ಕಳಿಗೆ ಬೇಕೆಂದು ಮಡಗುವರು. ಅಲ್ಲದೆ, ಆ ಪುತ್ರನು ಪುಣ್ಯವಂತನಾದರೆ, ಭೋಜರಾಜನಂತೆ ಹುಟ್ಟಿದಾಕ್ಷಣಕ್ಕೆ ಅರಣ್ಯಕ್ಕೆ ಬಿಸಾಟದರೂ ವಿದರ್ಭರಾಜನ ತಾಯಿಯು ಆಗ ಹುಟ್ಟಿದ ಕೂಸನ್ನು ಕೆರೆಯ ದಂಡೆಯಲ್ಲಿ ಹಾಕಿ ರಕ್ತದ ದ್ರವವನ್ನು ತೊಳೆಯುವದಕ್ಕೆ ಕೆರೆಯಲ್ಲಿಳಿದಾಗ ಅವಳನ್ನು ಮೊಸಳೆ ನುಂಗಿದರಿಂದ ಆ ಕೂಸು ನಿರಾಧಾರವಾಯಿತು ಈ ಪ್ರಕಾರದಿಂದ ಅನಂತಕೋಟಿ ಇತಿಹಾಸಂಗಳುಂಟು ಆ ಭೋಜರಾಜನು ದಕ್ಷಿಣ ಸಮುದ್ರದಿಂದ ಗೌಳ ದೇಶದ ಪರ್ಯಂತ ರಕ್ಕೊ ರಾಜ್ಯಮಂ ಸಾಧಿಸಿ ಅಲ್ಲಿಯ ವರಿಗೂ ಏಕಚ್ಛತ್ರಾಧೀಶನೆನಿಸಿ, ಮಿತಿ ಇಲ್ಲದಂತೆ ದಾನ ಧರ್ಮ ಪರೋಪಕಾರಾದಿಗಳಿಂದ ಭೂಲೋಕ ಪ್ರಸಿದ್ಧವಾದ ಅತ್ಯಾಶ್ಚರ್ಯ ಸಂಪತ್ಸತ್ಕೀರ್ತಿಗಳಂ ಪಡೆದು ಸ್ವರ್ಗಸ್ಥನಾದನು. ಈ ಭೋಜರಾಜನ ಪುಣ್ಯಾತಿಶಯಮಂ ಗುಣಧರ್ಮ ಸಂಪತ್ತನ್ನು ಚನ್ನಾಗಿ ತಿಳಿಯಬೇಕೆಂಬವರು ಭೋಜಚರಿತ್ರೆಯನ್ನು ಬತ್ತೀಸ ಪುತ್ತಳಿಯನ್ನು ನೋಡಬೇಕು. ಮತ್ತಾ ವಿದರ್ಭರಾಜನು ಬ್ರಾಹ್ಮಣ ಸತಿಯಿಂದ ಪಾಲನೆ ಮಾಡಲ್ಪಟ್ಟವನಾಗಿ, ಶನಿಪ್ರದೋಷ ಲಿಂಗಪೂಜಾ ಫಲದಿಂ ಗಂಧರ್ವರಾಜನ ಕುಮಾರಿಯಂ ಲಗ್ನವಾಗಿ, ಶಸ್ತ್ರಾಸ್ತ್ರ ವಿದ್ಯಂಗಳನ್ನಭ್ಯಾಸಿಸಿ ಬಲವಂತನಾಗಿ, ತಂದೆಯ ರಾಜ್ಯಮಂ ವಶಮಾಡಿಕೊಂಡ ವೈರಿಗಳಂ ಜಯಿಸಿ ಸಂಪತ್ತಿನಿಂದ ರಾಜ್ಯವನ್ನಾಳಿದನು. ಇದರಭಿಪ್ರಾಯಮಂ ಬ್ರಹ್ಮೋತ್ತರಖಂಡ ಪುರಾಣದಲ್ಲಿ ನೋಡಬೇಕು. ಮತ್ತು ಈ ಮಾಯಾ ಮೋಹ ನಿರಸನಕ್ಕೆ ಕಾರ್ಮಿಕಮಲ ನಿರಸನಕ್ಕೆ ಕೈವಲ್ಯದ ನೀತಿ ಕ್ರಿಯಾಚರ್ಯದಲ್ಲಿ ಕೆಲವು ಪದಗಳನ್ನು ನೋಡಿ ತಿಳಿಯಬೇಕು ಮಗನು ಪುಣ್ಯವಂತನಾದರೆ ತಂದೆಯು ಸಂಪಾದಿಸಿದ ಸ್ವಾಸ್ತಿ ವೃತ್ತಿ ದ್ರವ್ಯಂಗಳೇತಕ್ಕೆ ಬೇಕು? ಮತ್ತಾ ಪುಣ್ಯ ಹೀನಂಗೆ, ಕುಬೇರನಲ್ಲಿರ್ದ ದ್ರವ್ಯವನ್ನು ಇವಂಗಿಟ್ಟರೂ, ಕ್ಷಣಮಾತ್ರ ನಿಲ್ಲದು. ಇದರ ವಿಷಯಕ್ಕೆ ಕೋಟಿ ಕೋಟಿ ಲೋಕ ದೃಷ್ಟಾಂತಗಳು ಪುರಾಣ ಸಾಕ್ಷಿಗಳುಂಟು. ಅದರಲ್ಲಿ ದಿವಾನ ನೀಲಕಂಠರಾಯರು ಸಂಪಾದಿಸಿದ ಸ್ವಾಸ್ತಿ ವೃತ್ತಿ ದ್ರವ್ಯ ಮೊದಲಾಗಿ ತ್ರಿಪೀಡಿ ಸಹಿತ ಮಕ್ಕಳು ಮೊಮ್ಮಕ್ಕಳುಗಳಿಗೆ ಬೇಕೆಂದು ಪಿಂಚಣಿ ಇಟ್ಟದ್ದು ಈಗ ಯಾವ ಸ್ಥಿತಿಗೆ ಬಂದಿರುವದು ಇದನ್ನು ಪರೀಕ್ಷಿಸಿ ಭ್ರಾಂತಿಯನುಳಿದು ನಿರ್ಮೋಹವುಳ್ಳವರಾಗಬೇಕು.

ವೇದಾಂತ ಶ್ರವಣದಿಂದ ಅಪರೋಕ್ಷ ಜ್ಞಾನ ಹುಟ್ಟಿ ವಸ್ತು ಸಾಕ್ಷಾತ್ಕಾರ ವಾದಾಗಲೆ ತನ್ನ ಸ್ವರೂಪದ ನಿಜವು ಸಾಧ್ಯವಾಗಿ, ತಾನು ನಿಜನಿರ್ಮಲಾ ತ್ಮನೆಂಬ ಬುದ್ಧಿಯು ದೃಢವಾದಾಗಲೇ ಅಣವ ಮಲವು ನಿರ್ಮೂಲವಾಗು ವದು. ಮತ್ತಾ ತ್ರಿವಿಧ ಮಲಗಳಲ್ಲಿ ಆಣವ ಮಲವೇ ಬಲಾತ್ಕಾರವಾದದ್ದು ಅದು ಹೋದಾಗಲೇ ಅದರ ಸಂಗಡವೇ ಮಾಯಾಮಲ ಕಾರ್ಮಿಕ ಮಲ ಗಳು ಪರಿಹಾರವಾಗಿ ಸಹಜಜ್ಞಾನದಿಂದ ನಿಜ ನಿರ್ಮಲತ್ವವು ಪ್ರಾಪ್ತಿಸುವದು.

ಇದುವೇ ಪಾರಮಾರ್ಥಿಕ ಕೃಷಿಕರೆನಿಸುವ ಸಹಜ ಸದ್ಭಕ್ತ ಮಾಹೇ ಶ್ವರರು ಮಲಿನಾಂಗವೆಂಬ ಮಲಮಾಯಾ ತನುವಿನ ಮಲಭಾವದ ಜಡಮಂ ಕಳೆದು ತಮ್ಮ ನಿಜಸ್ವರೂಪವನರಿದು ತಾವೀ ತನುವಿಗೆ ವಿಲಕ್ಷಣರಾಗಿ ಚಿದಂಗ ವೆಂಬ ತಮ್ಮ ನಿಜದೇಹವನ್ನು ನಿರ್ಮಲವಮಾಡಿ ಪಡಕೊಂಡು ಆ ಚಿತ್ ಪೃಥ್ವಿ ಎಂಬ ಭೂಮಿಯಲ್ಲಿ ಸತ್‌ಕ್ರಿಯಾ ಸಮ್ಯಜ್ಞಾನದಾಚರಣೆ ಎಂಬ ಸರ್ವಾ ರಂಭದ ಕೃಷಿಯ ಉದ್ಯೋಗವಂ ಮಾಡಿ ಪರತತ್ವದಖಂಡ ಪರಿಪೂರ್ಣ ರಾಶಿಯಂ ಬೆಳೆಮಾಡಿಕೊಂಡು ನಿಜಾನಂದದಿಂದಿರುವ ಪಾರಮಾರ್ಥ ಕೃಷಿಯ ಮಾರ್ಗವು.

ಶ್ರೀ ಗುರುದೇವನಿಂ ಪಡಕೊಂಡ ಮಲರಹಿತವಾದ ನಿರ್ಮಲ ಚಿದಂಗಕ್ಕೆ ಚಿತ್‌ಪಿಂಡವೆಂಬರು. ಮತ್ತು ಶರಣಸ್ಥಲದಾಚರಣೆಯ ನೂರಾವೊಂದು ಸ್ಥಲ ದಲ್ಲಿ ಪಿಂಡಸ್ಥಲವೇ ಪ್ರಥಮ ಸ್ಥಲವಾದ ಕಾರಣ ತ್ರಿವಿಧ ಮಲಭಾವ ನಾಸ್ತಿ ಯಾದಾಗಲೇ ಪಿಂಡಸ್ಥಲ ಸಾಧ್ಯವಾಗುವದು ಅದು ಕಾರಣ ಮೊದಲು ವೇದಾಂತವನರಿಯದೆ ಸಿದ್ಧಾಂತವನರಿಯಬಾರದು. ಯಾತಕ್ಕೆಂದರೆ ವೇದಾಂ ತದಿಂದ ಸುಜ್ಞಾನೋದಯವಾಗದೆ ಮೊದಲೇ ಸಿದ್ಧಾಂತ ಶ್ರವಣವಾ ದರೆ, ಜ್ಞಾನಹೀನತ್ವದಿಂದ ಚಿತ್ಪಿಂಡ ಸಾಧ್ಯವಾಗದಾಗಿರುವದರಿಂದ ಜಡಕರ್ಮಿ ಗಳಾಗಿ, ಕರ್ಮವೇ ಪರವೆಂದು ಭಿನ್ನಜ್ಞಾನಿಗಳಾಗಿ ಕೆಟ್ಟುಹೋಗುವರು ಅದುವೇ ಕಾರಣ ಮೊದಲು ಆ ವೇಧಾದೀಕ್ಷೆ ಎನಿಸುವ ವೇದಾಂತಸಾರವನರಿದು ತರು ವಾಯದಲ್ಲಿ ಶಿವಾಗಮ ಸಾರವಾದ ಶಿವಸಿದ್ಧಾಂತದ ಭಿನ್ನ ಸತ್‌ಕ್ರಿಯೆಯನರಿದು ಮಂತ್ರಾತ್ಮಕ ಲಿಂಗವನರ್ಚಿಸುವದೇ ಮಂತ್ರದೀಕ್ಷೆ ಎನಿಸುವದು

## ಮಂತ್ರದೀಕ್ಷೆಯು.

ಮಂತ್ರದೀಕ್ಷೆಯು ಹ್ಯಾಗೆಂದರೆ ತಾರಕಬ್ರಹ್ಮವೆಂಬ ನಿಃಕಲ ಪರವಸ್ತು ವದು ಜಗದಾದಿ ಬೀಜವೆನಿಪ ನಿಃಕಲ ಪ್ರಣವಸ್ವರೂಪವಮಾಗಿರಲಾ ತೇಜೋ ಮಯ ಪರಿಪೂರ್ಣ ಮೂಲಲಿಂಗದ ಕಲೆ, ವರ್ಣ, ನಾದ, ಮುಖ, ಹಸ್ತ ಮೊದಲಾದ ಇನ್ನೂರು ಹದಿನಾರು ಸಕೀಲ ಸಂಬಂಧಗಳ ಕರತಳಾಮಲಕವಾಗಿ

ಗೋಚರಿಸಿ ಮತ್ತಾ ತಾರಕ ಮಂತ್ರವೆನಿಸಿ ಪ್ರಣವ ಪಂಚಾಕ್ಷರಿಯೇ ಅಂಗವಾಗಿ ಲಿಂಗವಾದ ಪರಿಯನದರ ಸ್ವರೂಪವನರುಪಿ, ಮಂತ್ರೋಪದೇಶವಂ ಮಾಡಿ ಮತ್ತಾ ಪ್ರಣವವೇ ಜಗದಾದಿ ಬೀಜವೆಂಬುದನರುಹಿ, ಬಳಿಕೀ ಪಿಂಡೋತ್ಪತ್ತಿಗೆ ಪ್ರಣವನಾದವೇ ಕಾರಣವಹುದಾಗಿ, ಆ ಪ್ರಣವದ ತಾರಕಾಕೃತಿ ದಂಡಕಾ ಕೃತಿ ಕುಂಡಲಾಕೃತಿ ಅರ್ಧಚಂದ್ರಾಕೃತಿ ದರ್ಪಣಾಕೃತಿ ಜ್ಯೋತಿರಾಕೃತಿ ಎಂಬಾಕೃತಿ ಕಲೆವರ್ಣಪದ ಮಂತ್ರ ನಾದ ಮೊದಲಾದ ಸರ್ವಸಕೀಲಂಗಳನಂಗದಲ್ಲಿಯೂ ಲಿಂಗದಲ್ಲಿಯೂ, ತೋರಿಕೊಟ್ಟು ಆ ಮಂತ್ರವೇ ಅಂಗವಾಗಿ ಮತ್ತಾ ಅಂಗಕ್ಕೆ ಪ್ರಣವವೇ ಪ್ರಾಣವಾಗಿ ಪ್ರಾಣಕ್ಕೆ ಮಂತ್ರವೇ ಚೇತನಾತ್ಮಕ ಲಿಂಗವಾಗಿ ಸರ್ವಾಂಗವಂ ಭೇದಿಸಿ ಸ್ಥೂಲಾದಿ ಕಾರಣಾಂಗಗಳೊಳ ಹೊರಗೆಲ್ಲ ಮುಳ್ಳಿಡ ಲಿಂಬಿಲ್ಲದಂತೆ, ಸರ್ವಾಂಗ ಪರಿಪೂರ್ಣವಾಗಿರ್ದ ಪರಿಯನರುಹಿಸಿಕೊಟ್ಟು ಮರಳಿ ಮತ್ತಾ ಪ್ರಣವದೊಳ್ ಗುರುಲಿಂಗ ಜಂಗಮ ಪಾದೋದಕ ಪ್ರಸಾದ ಭಸ್ಮರುದ್ರಾಕ್ಷಾದಿಯಾದ ನಿಜಾಷ್ಟಾವರಣಂಗಳು ಗೋಪ್ಯವಾಗಿರ್ದ ಪರಿಯನರುಹಿ ಮತ್ತಾ ಪ್ರಣವದ ಸರ್ವಸಾಮರ್ಥ್ಯಂಗಳಂ ಸಮಸ್ತ ಸಿದ್ಧಿಗಳಂ ಕ್ರಮದಿಂದ ರುಹಿ, ಬಳಿಕ್ಕಾ ಪ್ರಣವಸಿದ್ಧಿಯಿಂದ ಅಣಿಮಾದ್ಯಷ್ಟ ಮಹ ಸಿದ್ಧಿಗಳಂ ಉಪ ಸಿದ್ಧಿಗಳಂ ಕೈವಶ ಮಾಡಿಕೊಟ್ಟು ಸಮಸ್ತ ಮಂತ್ರಶಾಸ್ತ್ರಗಳಿಗೆ ಷಡಕ್ಷರಿಯೇ ಮಂತ್ರಮಾತ ಎಂಬ ಲಕ್ಷಣವನರುಹಿ ಈ ಶಿವಮಂತ್ರದಿಂದನಂತ ಸಿದ್ಧಿಗಳಂ ವಶಮಾಡಿಕೊಟ್ಟು ಮಂತ್ರ ಕಲಾ ಪದ ಬೀಜ ಪಲ್ಲವ ಛಂದಸ್ಸಾದಿಗಳಂ ತಿಳಿಸಿ, ಮಂತ್ರೋಪದೇಶದಿಂದ ಮಂತ್ರಶರೀರಮಂ ಮಾಳ್ಪುದೇ ಮಂತ್ರದೀಕ್ಷೆಯು

ಮತ್ತಾ ನಿಃಕಲ ಬ್ರಹ್ಮಕ್ಕನಂತ ನಾಮಂಗಳುಂಟಾಗಿ ವೇದಾಗಮಂಗಳಿಲ್ಲ ಶಿವತತ್ವವನು ಪರತತ್ವವೆಂದು ಪರವಸ್ತುವೆಂದು ಬ್ರಹ್ಮ ಪರಬ್ರಹ್ಮ ಅವಾಚ್ಯ ಬ್ರಹ್ಮ ನಿಃಕಲಬ್ರಹ್ಮ ನಿರಂಜನಬ್ರಹ್ಮ ನಿರವಯಬ್ರಹ್ಮ ನಿಃಶೂನ್ಯಬ್ರಹ್ಮವೆಂದು ಪ್ರಣವವೆಂದು ಮಂತ್ರವೆಂದು ಚಿತ್ತೆಂದು ಚಿನ್ಮಾತ್ರವೆಂದು ಲಿಂಗ ಶಿವಲಿಂಗ ಮಹಲಿಂಗ ನಿರವಯಲಿಂಗ ನಿ ಶೂನ್ಯಲಿಂಗ ನಿರಂಜನಲಿಂಗ ನಿಃಕಲಲಿಂಗವೆಂದು ಮತ್ತಾ ಲಿಂಗವನೆ ಮೂಲಚಿತ್ತುವೆಂದು ನಿರಂಜನ ತತ್ವವೆಂದು ನಿ.ಶೂನ್ಯತತ್ವವೆಂದು ನಿಜತತ್ವವೆಂದು ಪೂರ್ಣಬ್ರಹ್ಮವೆಂದು ಅನಂತ ನಾಮಂಗಳಿಂ ಬಣ್ಣಿಸುವವು. ಆ ವಸ್ತು ನಿರ್ನಾಮ ಸ್ವರೂಪವಾಗಿರ್ಪುದದರಿಂದ ವೇದಾಗಮಂಗಳಿಗಗೋಚರಮೆಂದು ಸ್ತುತಿಸಲ್ಪಟ್ಟಿತು ಮತ್ತೀ ಪರಿಯಾಯ ನಾಮಂಗಳಿಲ್ಲ ಒಂದೇ ಸ್ವರೂಪವಾ ವಸ್ತು ವರ್ಣನೆಯಿಂದ ಇದರ ಅನುಭವವನ್ನು ವೇದಾಗಮಂಗಳ ಸಮ್ಮತದಿಂದರುಹಿಸಿ, ಶ್ರುತಿ ಸ್ಮೃತಿಗಳ ದೃಷ್ಟೋಪ ಮಾನಂಗಳಿಂದ ಸಾಕ್ಷಾತ್ಕಾರವ ಮಾಡಿಕೊಟ್ಟು ನಿರಂಜನ ಪ್ರಣವಸ್ವರೂಪ ನೀನಹುದೆಂಬುದನರುಹಿ ಕೊಟ್ಟು ನಿಜಮಂತ್ರೋಪದೇಶವ ಮಾಡುವದೇ ಮಂತ್ರ ದೀಕ್ಷೆ ಎನಿಸುವದರ ಕ್ರಮವರಿಯದೆ, ಆಕಾರಯುಕ್ತವಾಗಿ ಜಡಹಸ್ತದಿಂ ಬರೆದು ತೋರಿ

ಸುವ ಅಕ್ಷರಗಳನ್ನುಚ್ಚರಿಸಿ ಭೂತ ಸೋಂಕಿದವರಿಗೆ ಊದಿದಂತೆ ಊದುವದು ಮಂತ್ರೋಪದೇಶವೇ? ಇದು ಮಂತ್ರವೇ? ಜಡಾಕ್ಷರಂಗಳು ಪ್ರಣವವೇ? ಇದು ನಿಜಮಾರ್ಗವಲ್ಲ. ಮಂತ್ರವು ತೇಜೋಮಯವಾಗಿ ಸರ್ವಾಂಗದ ಸಮಸ್ತ ಸಂದುಗಳಲ್ಲಿ ದ್ವಾದಶ ಚಕ್ರದ ದ್ವಾದಶ ಕಮಲಂಗಳ ದಳಗಳಲ್ಲಿ ಮತ್ತು ಆ ಕಮಲ ಗರ್ಭಬೀಜ ಕೋಶಂಗಳಂ ಬೆಳಗುತ್ತ ಅಲ್ಲಲ್ಲಿ ಲಿಂಗವಾಗಿ, ಪ್ರಣವ ವಾಗಿ, ಆಪಾದ ಮಸ್ತಕ ರೋಮರೋಮಾಗ್ರದಲ್ಲಿ ಸಹ ವ್ಯಾಪಕವಾಗಿರ್ಪ ಪರಮ ಚೈತನ್ಯವೇ ಪಂಚಾಕ್ಷರಿ ಎನಿಪುದದರ ಅನುವನರುಹಿಸುದೆ ಮಂತ್ರೋ ಪದೇಶವೆನಿಸುವದು ಈ ಅಕ್ಷರವೇ ಮಂತ್ರವಾದರೆ ಇದಕ್ಕುಪದೇಶವೇಕೆ? ಅಕ್ಷರಾಭ್ಯಾಸವ ಮಾಡುವ ಏಳೆಂಟು ವರುಷದ ಹುಡುಗರೆಲ್ಲರೂ ಬಲ್ಲರು.

ಮತ್ತು ವೇಧಾಮಂತ್ರ ಕ್ರಿಯೆಗಳೆಂಬ ತ್ರಿವಿಧ ದೀಕ್ಷೆಯಿಂದ ಶಿಷ್ಯನ ಪೂರ್ವ ಜನ್ಮವಳಿದು ಪುನರ್ಜಾತನ ಮಾಡುವ ಸಾಮರ್ಥ್ಯವು ಈಗಿನ ಕಾಲದಲ್ಲಿ ನೂತನಲ್ಲಮಃದೇವರವತಾರ ಶ್ರೀ ಘನಮಠನಿವಾಸ ಶ್ರೀಮನ್ಮಹಾಗುರು ನಾಗ ಭೂಷಣ ಪ್ರಭುಗಳೋರ್ವರಿಗಲ್ಲದೆ, ಸಹಜೋಪದೇಶವ ಮಾಡಿ ಶಿಷ್ಯರ ಮಲ ಮಾಯಾ ಜಾಡ್ಯಮಂ ಪರಿಹರಿಸುವ ಸಾಮರ್ಥ್ಯ ಸಾಲದು.

ಮಾಯಾಕೋಲಾಹಲನೀತನೊಬ್ಬನಲ್ಲದೆ ಸರ್ವರೂ ಮಾಯಾ ವಶಗತ ರಾದ ಕಾರಣ ನಿಜೋಪದೇಶವ ಮಾಡುವ ಸಾಮರ್ಥ್ಯವು ಹೇಗೆ ಘಟಿಸು ವದು? ಆದಾಗ್ಯೂ ಈ ಮಂತ್ರದೀಕ್ಷಾ ವಿಧವನ್ನು ಶ್ರೀಗುರುವಿನುಪದೇಶ ಬಲದಿಂದ ಕ್ರಮಯುಕ್ತವಾಗಿ ಈ ಪ್ರಕರಣದಲ್ಲಿ ಬರೆಯಬೇಕಾದರೆ, ಗ್ರಂಥ ಬಾಹುಲ್ಯವಾಗುವದಾಗಿ ಸಂಕ್ಷೇಪದಿಂದ ಸೂಚಿಸಿರುವೆನು.

ಈ ವಿಷಯವನ್ನು ಚನ್ನಾಗಿ ತಿಳಿಯಬೇಕೆನ್ನುವವರು ಕೈವಲ್ಯ ಪದ್ಧತಿ ಯಲ್ಲಿ ಮಂತ್ರಯೋಗದ ಅಭಿಪ್ರಾಯವನು ವಿವೇಕಚಿಂತಾಮಣಿಯ ಸಿದ್ಧಾಂತ ಪ್ರಕರಣವನು ಪಾರಮಾರ್ಥ ಪ್ರಕಾಶವನು ಮತ್ತು ಋಗ್ವೇದವನು ಸಕಲಾಗ ಮಂಗಳನು ಕಾಡಸಿದ್ಧೇಶ್ವರ ಸ್ವಾಮಿಗಳ ವಚನಗಳನು ನೋಡಿ ತಿಳಿಯಬೇಕು.

## ಕ್ರಿಯಾ ದೀಕ್ಷೆಯು.

ಕ್ರಿಯಾ ದೀಕ್ಷೆ ಎಂದರೆ, ವೇದಾಂತವನರಿದಾಗ್ಯಾದರೂ ವಾಗ್ಬ್ರಹ್ಮ ತ್ವದಿಂದ ಮುಕ್ತಿ ಘಟಿಸದು ಹ್ಯಾಗೆಂದರೆ, ಸ್ವಪ್ನದೊಳಿಂದ್ರ ಭೋಗವ ಕಂಡ ದರಿದ್ರನು ಎಚ್ಚರದೊಳ್ಮುನ್ನಿನ ದರಿದ್ರವನು ಭೋಗಿಸುವಂತಾಗಿ ವೇದಾಂತವ ನರಿದಡೇನು? ನಡೆನುಡಿಗಳಲ್ಲಿ ಜೀವಭಾವವಿಡಿದಾಚರಿಸುವದರಿಂದ ಭವ ದುಃಖ ಹೋಗದಾಗಿ, ಭಕ್ತರಾಗಲಿ, ಷಟ್‌ಸ್ಥಲ ಮಹೇಶ್ವರರಾಗಲಿ ಬ್ರಹ್ಮೋ

ಪದೇಶವಂ ಪಡೆದು ಭಕ್ತಿ. ಜ್ಞಾನ, ವೈರಾಗ್ಯವಿಡಿದಾಚರಿಸದಿದ್ದರೆ, ಮಾಯಾ ಮೋಹ ತೊಲಗದು. ಇದಲ್ಲದೆ, ಪಂಚಯೋಗಂಗಳಲ್ಲಿ ಸಹಜ ಶಿವಸಿದ್ಧಾಂತ ಮಾದ ಶಿವಯೋಗದನುಭಾವವಿಲ್ಲದೆ, ಜಡಕರ್ಮವಾದ ಮಂತ್ರಲಯ ಹಠ ರಾಜ ಯೋಗಂಗಳಿಂದ ಸಹಜ ಮುಕ್ತಿಯಾಗದೇತಕ್ಕೆಂದರೆ, ಈ ಯೋಗಂ ಗಳು ಭಿನ್ನಕರ್ಮಯೋಗಂಗಳಾಗಿರುವದರಿಂದ ಯೋಗದೊಳೊಮ್ಮೆ ವಿಷಯಸುಖ ಭೋಗದೊಳೊಮ್ಮೆ ವರ್ತಿಸುತ್ತ ಹಗಲಿರುಳು ಸಕಲ ವ್ಯವಹಾರಂಗಳಲ್ಲಿ ಜೀವ ಭಾವದ ವರ್ತನೆಯಿಂದ ವರ್ತಿಸುವಲ್ಲಿ ಸಹಜ ಬ್ರಹ್ಮತ್ವ ಘಟಿಸದು.

ಅದುಕಾರಣ ಆದ್ಯರ ವಚನಗಳಲ್ಲಿ ಮತ್ತು ಸಿದ್ಧರಾಮೇಶ್ವರ ದೇವರ ಮಂತ್ರ ಗೋಪ್ಯದಲ್ಲಿ ಹೇಳಿರುವದೇನಂದರೆ, "ವಾಗದ್ವೈತ ವೇದಾಂತಿ ಜಡ ಕರ್ಮ ಸಿದ್ಧಾಂತಿ ಭಿನ್ನ ಭ್ರಾಂತಯೋಗ ಮಾರ್ಗಗಳ ಮತವ ಹೊಗದೆ ಸಹಜ ಶಿವಯೋಗ ಸತ್ಕ್ರಿಯೆ ಸಮ್ಯಜ್ಞಾನವಿಡಿದ್ಧಾಚರಿಸಿ, ನಿರ್ಮಯಲ ಬೆರೆ ಯಬೇಕು" ಎಂದು ಹೇಳಿದ್ದಾರೆ

ಮತ್ತು ಅಭಿನ್ನ ಶಿವಯೋಗವೆನಿಪ ಶಿವಾದ್ವೈತ ವೀರಶೈವಾಚರಣೆಯ ನುಳ್ಳ ಸದ್ಭಕ್ತ ಶರಣರಾಚಾರವಾದ ಕ್ರಿಯಾ ದೀಕ್ಷೋಪದೇಶದಿಂದಲ್ಲದೆ, ಮುಕ್ತಿ ಘಟಿಸದಾಗಿ ಆ ಕ್ರಿಯಾದೀಕ್ಷೆಯಿಂದ ನಿರ್ವಾಚ್ಯ ಬ್ರಹ್ಮವೆನಿಪ ನಿಃಕಲ ಲಿಂಗ ವನೆ ಶ್ರೀಗುರುದೇವನು ತನ್ನ ನಿರ್ಭಾವ ನಿಜಾತ್ಮವೆನಿಪ ನಿಃಕಲ ಲಿಂಗವನೆ ಶ್ರೀಗುರುದೇವನು ತನ್ನ ನಿರ್ಭಾವ ನಿಜಾನಂದ ಸ್ಥಲದಿಂದಾಹ್ವಾನಿಸಿ ಶಿಷ್ಯನ ಸದ್ಭಾವ ಹಸ್ತಕ್ಕೆ ಗೋಚರಿಸಿಕೊಟ್ಟು ಭಾವಲಿಂಗವ ಮಾಡಿ ತೋರಿದದರಿಂದ ಆ ಭಾವವು ಲಿಂಗವನಪ್ಪಿ ಅಗಲದಂತಾಗಿರ್ದುದರಿಂದ ಆ ಭಾವವೆಲ್ಲೆಲ್ಲಿ ಸುಳಿದ ಡಲ್ಲಲ್ಲಿ ಲಿಂಗವು ಪ್ರತ್ಯಕ್ಷವಾಗಿರುವದು ಮತ್ತಾ ಭಾವಲಿಂಗವನೇ ಮನ ಸ್ಥಲಕ್ಕೆ ತಂದು ಪ್ರಾಣದಲ್ಲಿ ಸಂಬಂಧಿಸಿ ಪ್ರಾಣಲಿಂಗ ಸ್ವರೂಪವ ಮಾಡಿ ಸುಮನಹಸ್ತಕ್ಕೆ ಗೋಚರಿಸಿ ಕೊಟ್ಟ ಕಾರಣ ಆ ಪ್ರಾಣಲಿಂಗದೊಳ್ ಮನ ಪ್ರಾಣಂಗಳು ಲಯವನೈದಿದರಿಂದ ಮನಪ್ರಾಣಂಗಳೆಲ್ಲ ಪ್ರಾಣಲಿಂಗ ಸ್ವರೂ ಪವಾದ ಕಾರಣ ಮನವೆಲ್ಲೆಲ್ಲಿ ಸಂಚರಿಸುವದಲ್ಲಲ್ಲಿ ಲಿಂಗವೇ ಪ್ರತ್ಯಕ್ಷವಾಗಿ ಪುರ್ದಲ್ಲದೆ, ಬೇರೇನು ತೋರದು. ಮತ್ತಾ ಲಿಂಗವು ಪ್ರಾಣವಂ ಬೆರೆದು ಪ್ರಾಣಕ್ಕೆ ಪ್ರಾಣ ಚೈತನ್ಯವಾಗಿರ್ದುದರಿಂದ ಪ್ರಾಣಲಿಂಗಿಗಳ ದೃಷ್ಟಿಯಲ್ಲಿ ಪ್ರಾಣ ಮುಂಟು, ಅಲ್ಲಿ ಲಿಂಗಮುಂಟು ಎಂಬದು ದೃಢಾನುರಾಗವಿಪ್ಪುದು ಮತ್ತಾ ಪ್ರಾಣಲಿಂಗವನೆ ಚಿದಂಗ ಸ್ಥಲವೆಂಬ ಚಿತ್ಕಾಯದ ಕರಸ್ಥಲವೆನಿಸುವ ಶಿವ ಲಿಂಗ ಸ್ಥಲವೆಂಬ ನಿಜಹಸ್ತಕ್ಕೆ ಬಿಜಯಂಗೈಸಿ ಇಷ್ಟಲಿಂಗವ ಮಾಡಿಕೊಟ್ಟು ಆ ಇಷ್ಟವನೇ ಸರ್ವಾಂಗ ಪರಿಪೂರ್ಣವಾಗಿ ಅಪಾದಮಸ್ತಕ ರೋಮರೋ ಮಾಗ್ರದಲ್ಲಿ ಸಹ ವ್ಯಾಪಕವ ಮಾಡಿಕೊಟ್ಟದ್ದು ಹೇಗೆಂದರೆ, ಸಾಕ್ಷಿ- "ಸರ್ವ

ದಷ್ಟಂ ತದ್ದೇಹಂ। ಸರ್ವಾಂಗವಿಷದೇಹವತ್ ॥ ಲಿಂಗದಷ್ಟಂ ತದ್ದೇಹಂ। ಸರ್ವಾಂಗ ಲಿಂಗದೇಹವತ್॥ ಎಂಬ ಆಗಮಪ್ರಮಾಣದಂತೆ, ಆ ಲಿಂಗವನೇ ಸರ್ವಾಂಗ ಪರಿಪೂರ್ಣವಾಗಿ ಆಪಾದಮಸ್ತಕ ರೋಮರೋಮಾಗ್ರದಲ್ಲಿ ಸಹ ವ್ಯಾಪಕ ಮಾಡಿಕೊಟ್ಟು ಆ ಲಿಂಗವನೆ ಸ್ಥೂಲ ಸೂಕ್ಷ್ಮಕಾರಣಾಂಗಂಗಳಲ್ಲಿ ಇಷ್ಟ ಪ್ರಾಣ ಭಾವಲಿಂಗಂಗಳಂ ಮಾಡಿ ಸ್ಥಿರಗೊಳಿಸಿ, ಬಳಿಕಾ ಇಷ್ಟ ಲಿಂಗದ ನಿಜವಂ ಸ್ಥಿರಪಡಿಸುವದಕ್ಕಾಗಿ, ಆ ಲಿಂಗದ ಚಿತ್ಕಲಾ ಸ್ವರೂಪವಾದ ಪ್ರಣವದ ನಾಳ ಗೋಳಕ ಗೋಮುಖಂಗಳನೆ ಸ್ಥೂಲದೃಷ್ಟಿಗೆ ಗೋಚರವಾಗುವಂತೆ, ಲಿಂಗದ ಪಂಚಸೂತ್ರಾಕಾರವಾಗಿ ತನ್ನ ನಿಜೇಷ್ಟದ ಸ್ವರೂಪು ನಿದರ್ಶನಕ್ಕೆ ನಿಲ್ಲುವದಕ್ಕಾಗಿ, ಮಾರ್ಗ ಕ್ರಿಯಾ ವರ್ತನೆಗೆ ಬಾಹ್ಯದ ಅರ್ಚನಾದಿ ಸತ್‌ಕ್ರಿಯೆಗಳಿಲ್ಲದಾಗದೆಂದು ಮತ್ತಾ ಶ್ರೀ ಗುರುದೇವನು ಜಲದಲ್ಲೀಸುವದಕ್ಕೆ ಕಾಯಿ ಕಟ್ಟಿ ತೇಲಿಸುವ ಗುಣವನಂಗ ಮಾಡಿಕೊಡುವಂತ, ಪೃಥ್ವೀ ಸಂಬಂಧವಾದ ಸ್ಥೂಲಾಂಗದ ಕರಕ್ಕೆ ಮಾರ್ಗ ಕ್ರಿಯೆಗೆ ಪೃಥ್ವೀ ಸಂಬಂಧವಾದ ಇಷ್ಟ ಲಿಂಗವಂ ನಿರ್ಮಿಸಿಕೊಟ್ಟು ಅದರೊಳ್ ನಿಜವನರಿಯುವ ಪರಿಯನರುಪಿದ ಕ್ರಮವೆಂತೆಂದಡೆ, ದರ್ಪಣದೋಳ್ ತನ್ನ ಮುಖಲಾವಣ್ಯವನರಿದ ಹಾಗೆ ಈ ಲಿಂಗದ ಕುರುಹಿನುಪಾಧಿ ಅರ್ಚನಾರ್ಪಣ ಕ್ರಿಯೆಗಳ ಮರೆಯಲ್ಲಿ ನಿರುಪಾಧಿಕ ಲಿಂಗವನರಿದರ್ಚಿಸಲೆಂದು ಶಿವಲಿಂಗದ ಶಿವಕಳೆಯನಾ ಲಿಂಗದೋಳ್ ಭಾವದ ಬಲುಮೆಯಿಂ ನೆಲೆಗೊಳಿಸಿ ಜಡವ ಪೂಜಿಸದೆ, ಸತ್ಕ್ರಿಯೆಗಳಂ ಬಿಡದೆ ಅನಾದಿ ಸಂಸಿದ್ಧ ಮೂಲ ಲಿಂಗದರ್ಚನಾದಿ ಅಭಿನ್ನ ಸತ್‌ಕ್ರಿಯಾ ಸಂಬಂಧಗಳನ್ನೆಲ್ಲ ಉಪದೇಶಿಸಿ ಮಾರ್ಗ ಕ್ರಿಯೆ ಮರೆಯಲ್ಲಿ ಮೂರಿದ ಕ್ರಿಯಿಡಿದಾಚರಿಸುವಂತೆ, ಸಕಲ ಶಿವಾಗಮ ಶಿವ ರಹಸ್ಯ ಪರಮ ರಹಸ್ಯ ಪ್ರಮಾಣಂಗಳಿಂದ ದೀಕ್ಷೋಪದೇಶವಂ ಮಾಳ್ಪುದೇ ಕ್ರಿಯಾ ದೀಕ್ಷೆ ಎನಿಸುವದು.

ಈ ಪ್ರಕಾರ ದೀಕ್ಷೋಪದೇಶವಂ ಮಾಡತಕ್ಕಂಥ ಶ್ರೀಗುರುದೇವನ ನಿಜಸ್ಥಿತಿಯು ಹೇಗಂದರೆ, ವೇದಾಗಮಃ ಶ್ರುತಿ ಸ್ಮೃತಿ ಸತ್ಪುರಾಣಾಗಮಂಗಳ ಅರ್ಥ ಸಾರಜ್ಞನಾದ ಮಂತ್ರಶಾಸ್ತ್ರ ಬೋಧಾಕಲಾಪದೊಳ್ ಪ್ರವೀಣನಾದ ಶಾಸ್ತ್ರ ಸರ್ವಜ್ಞ ಮೂರ್ತಿಯಾದ ನೀತಿ ಶಾಸ್ತ್ರ ಕೋವಿದನಾದ ಭಕ್ತಿ ಜ್ಞಾನ ವೈರಾಗ್ಯ ಚಾತುರ್ಯ ಧುರೀಣನಾದ ಶಾಂತಿಕಲೆಯಿಂ ಕೂಡಿದ ನಿಜಾನಂದಮಯನಾದ ಜಗದೋಪಕಾರಿ ನೂತನಲ್ಲಮ ಪರಮ ನಿರಾಭಾರಿ ಶ್ರೀ ವೀರಶೈವಾವಧೂತಪರಮಾರೂಢ ಗುರುಕುಲ ಚಕ್ರವರ್ತಿ ತ್ರೈಲೋಕ ಪೂಜ್ಯ ಚಿದ್ಘನಮರ ನಿವಾಸ ಸಿದ್ಧರಾಮಪ್ರಿಯ ಶ್ರೀನಾಗಭೂಷಣ ಮಹಾಪ್ರಭುಗಳಂತೆ ಸಾಮರ್ಥ್ಯಯುತರಾಗಿ ಗುರುತ್ವಾಭಿಮಾನ ರಹಿತನಾದ ಸದ್ಗುರುದೇವನಿಂದ ವೇಧಾ ಮಂತ್ರ ಕ್ರಿಯೆಗಳೆಂಬ ತ್ರಿವಿಧ ದೀಕ್ಷೋಪದೇಶವಂ ಪಡೆದು ಬಹಿರಂಗದ

ಅಷ್ಟಾವರಣವಿಡಿದು ರಹಸ್ಯವಾದ ನಿಜ ಅಷ್ಟಾವರಣ ಸಂಬಂಧದ ಆಚರಣೆಯ ಅನುವನರಿದು ವೇದಾಗಮಂಗಳ ಸ್ತೋತ್ರಕ್ಕೆ ಅಗಮ್ಯ ಅಗೋಚರ ಅಪ್ರಮಾಣ ಲಿಂಗವನರ್ಚಿಸುತ್ತ ಲಿಂಗಪ್ರಾಣಿಯಾಗಿ ಲಿಂಗಾಭಿಮಾನಿಯಾಗಿ ಲಿಂಗವೇ ಅಂಗವಾಗಿ ಅಂಗವೇ ಲಿಂಗವಾಗಿ ಲಿಂಗಾಂಗವೆಂಬ ಭೇದವಿಲ್ಲದೆ ಮಹಾಲಿಂಗ ಸ್ವರೂಪನಾಗಿ ಪ್ರಪಂಚ ಪಾರಮಾರ್ಥಗಳಲ್ಲಿ ಜ್ಞಾನವನ್ನೇ ಕ್ರಿಯಾ ರೂಪದ ಸತ್ಕಾರ್ಯಯುಕವಾಗಿ ಆಚರಿಸುತ್ತ ಸಹಜ ಸದ್ಭಕ್ತರಾಗಿ ಅಂತರ್ಜ್ಞಾನ ಬಹಿಃ ಕ್ರಿಯೆಗಳಲ್ಲಿ ಗುರುಲಿಂಗ ಜಂಗಮದ ನಿಜವನರಿದ ಸದ್ಭಕ್ತನಾಚರಣೆಯ ಪರಿ ಹೇಗೆಂದರೆಃ —

ಅವಿರಳ ಪರಂಜ್ಯೋತಿ ಸ್ವರೂಪದಿಂ ಮೃತ್ಯುಂಜಯನಾದ ಶ್ರೀ ಗುರುದೇವನು ನಿಜೋಪದೇಶವ ಮಾಡುವ ಕಾಲದಲ್ಲಿ ಆ ಶ್ರೀಗುರುದೇವನ ನಿಜ ಚಿತ್ಕಳೆಯ ನಿಜಸ್ವರೂಪವೇ ಶಿಷ್ಯನ ಭಾವಕ್ಕೆ ಭಾವಲಿಂಗವಾಗಿ ಬಳಿಕಾ ಲಿಂಗವೇ ಮನ ಪ್ರಾಣಂಗಳಲ್ಲಿ ಬೆರೆದು ಪ್ರಾಣಲಿಂಗವಾಗಿ ಆ ಪ್ರಾಣಲಿಂಗವು ಸರ್ವಾಂಗಮಂ ವ್ಯಾಪಿಸಿ ಪರಿಪೂರ್ಣ ಸ್ವರೂಪದಿಂ ತನ್ನಿಷ್ಟ ಲಿಂಗವಾಗಿ ಆ ಲಿಂಗದ ಪ್ರಕಾಶವೇ ಭಸ್ಮವಾಗಿ ಆ ಇಷ್ಟಲಿಂಗದ ಏಕ ತ್ರಿ ಚೌ ಪಂಚ ಷಟ್ ದಶ ದ್ವಾದಶ ಷೋಡಶ ಶತಸಹಸ್ರಾದಿ ಮುಖಕಲೆಗಳೇ ಏಕಮುಖ ತ್ರಿಮುಖ ಚತುರ್ಮುಖ ಪಂಚಮುಖ ಷಣ್ಮುಖ ದಶಮುಖ ದ್ವಾದಶಮುಖ ಷೋಡಶಮುಖ ಶತಮುಖ ಸಹಸ್ರಮುಖವಾದಿಯಾದ ಅನಂತ ಮುಖದ ರುದ್ರಾಕ್ಷಿಗಳಾಗಿ ಮತ್ತಾ ಇಷ್ಟಲಿಂಗ ಸದ್ರೂಪವೇ ಗುರುವಾಗಿ ಬಳಿಕಾ ಪ್ರಾಣಲಿಂಗದ ಚಿದ್ರೂಪವೇ ಲಿಂಗವಾಗಿ ಮತ್ತಾ ಭಾವಲಿಂಗದ ಆನಂದರೂಪವೇ ಜಗತ್ಪೂಜ್ಯ ಜಂಗಮವಾಗಿ, ಸಾಕ್ಷಿ "ಶಿವನ ಸುಖಮಯವಾದ ಪಾದತೀರ್ಥವನು" ಎಂಬ ನಿಜಗುಣವಾಕ್ಯ ಸಾಕ್ಷಿಯಾಗಿ ಬಳಿಕಾ ಜಂಗಮದ ಅಚಲಾನಂದದ ಪದಂಗಳಿಂ ಪಸರಿಸುವ ಪ್ರಕಾಶಮಯ ಚಿದಮೃತ ಚಿತ್ಸಾರವೇ ಪರಮಪಾವನ ಸ್ವರೂಪ ಪಾದೋದಕವದೇ ಜಾಹ್ನವಿ ಎನಿಪ ದೇವ ಗಂಗಾ ಎನಿಸಿರ್ದುದಾ ಪುಣ್ಯ ನದಿಯಂ ಮುಕ್ತಾಫಳ ಸ್ವರೂಪಮಂ ಮಾಡಿ ಪರಶಿವಮೂರ್ತಿಯು ಜಟಾಗ್ರದೋಳ್ ಧರಿಸಿರ್ದನದರಿಂ ಜಾಹ್ನವೀಚೂಡನೆಂಬ ಗಂಗಾಧರ ಲೀಲೆಯಾಗಿರ್ಪುದು. ಈ ಪಾದೋದಕದ ಮಹತ್ವಾತಿಶಯಮಂ ವೇದಾದಿ ಸಕಲ ಶೃತಿ ಸ್ಮೃತಿ ಸತ್ಪುರಾಣಾಗಮಂಗಳೆಲ್ಲ ವಿಸ್ತಾರವಾಗಿ ಬಣ್ಣಿಸಿರುವವು ಬಳಿಕಾ ಭಕ್ತನ ತನು ಮನ ಭಾವಂಗಳಲ್ಲಿ ಅಚಲವಾಗಿ ನೆಲೆಗೊಂಡಿರ್ಪ ಗುರುಲಿಂಗ ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಲ್ಪಟ್ಟ ಸಕಲ ಸುಪದಾರ್ಥ ಸುಭೋಗೋಪಚಾರಂಗಳ ತೃಪ್ತಿಯ ಪರಿಣಾಮವೇ ಶುದ್ಧ ಸಿದ್ಧ ಪ್ರಸಿದ್ಧವೆಂಬ ಪರಿಪೂರ್ಣ ಪ್ರಸಾದವಾಗಿರ್ಪುದು. ಸಾಕ್ಷಿ "ಭಕ್ತ ಜಿಹ್ವಾಗ್ರತೆ ಲಿಂಗಂ। ಲಿಂಗ ಜಿಹ್ವಾಗ್ರತೇರುಚಿಃ॥ ರುಚಿ ಜಿಹ್ವ ಪ್ರಸಾದೇನ। ಪ್ರಸಾದಂ ಪರಮಂ ಪದಂ॥

ಎಂಬಾಗವು ಉಂಟು. ಮತ್ತವಾ ಗುರುಲಿಂಗ ಜಂಗಮದೇಕ ಸ್ವರೂಪವಾದ ಅವಾಚ್ಯ ಪ್ರಣವ ಪ್ರಕಾಶಮಯ ನಿರಂಜನ ಪರತತ್ವದ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಪರಂಜ್ಯೋತಿ ಪ್ರಕಾಶದ ನಿಜವೇ ಷಡಕ್ಷರ ಪಂಚಾಕ್ಷರ ಮಂತ್ರವಾಗಿ ಆ ಮೂಲ ಮಂತ್ರವೇ ಮುಳ್ಳಿಡಲಿಂಬಿಲ್ಲದಂತೆ ಸರ್ವಾಂಗವುಂ ವ್ಯಾಪಿಸಿದಲ್ಲಿ ಮಂತ್ರಕಾಯನಾಗಿ ಮಂತ್ರಜಾತಯ್ಯಗಳಂತೆ, ಮಂತ್ರದ ನಿಜವ ನರಿದೋದಿ ಶಿವಮಂತ್ರ ಶರೀರಿಯಾಗಿ ಮಂತ್ರದೊಳ್ ಬಯಲಾಗಿ ನಿರಂಜನ ಪ್ರಣವವೆಂಬ ನಿರ್ವಯಲನೈದಿ ನಿಃಶೂನ್ಯರಾದವರೇ ಮೃತ್ಯುಂಜಯರು, ಅವರೇ ನಮ್ಮ ನಿರ್ಮಾಯ ಪ್ರಭುನಾಗಭೂಷಣ ಶಿವನ ಗರ್ಭ ಗೃಹವ ಬಗೆದು ಹೊಕ್ಕವರು, ಅವರೇ ಬಸವಾದಿ ಪುರಾತನರ ಸಾಂಪ್ರದಾಯಕರು, ಮತ್ತೀ ನಿಜಾಷ್ಟಾವರಣದನುವನರಿಯಬೇಕೆಂಬ ಭಕ್ತರು. ಕೈವಲ್ಯ ಪದ್ಧತಿಯಲ್ಲಿ ಸಾಕ್ಷಿ ಪದ:- "ದಿನದಿನದುಚಿತ ವೇಳೆಯೊಳುಪಚರಿಪುದು ನಿನಗೆ ಕುಳವೆಲೆ ಯೋಗಿ ನೀನೆ ಬಿಡದಿವನು" ಎಂಬ ಪದಕ್ಕೆ ಸಹಜಾರ್ಥವುಂ ಮಾಡಿ ತಿಳಿದಾಚರಿಸತಕ್ಕದ್ದು.

ಈ ಪ್ರಕರಣದಲ್ಲಿ ಹೇಳಿದ ಪ್ರಕಾರ ವೇಧಾ ಮಂತ್ರ ಕ್ರಿಯೆಗಳೆಂಬ ತ್ರಿವಿಧ ದೀಕ್ಷೋಪದೇಶದಿಂದ ಮೊದಲಾಣವಾದಿ ಮಲತ್ರಯಂಗಳ ಕಳೆದು ಪರಿಶುದ್ಧರಾಗಿ ಜಡದೇಹದ ಜಾಡ್ಯವಾದ ಮಲಭಾವದ ಪೂರ್ವವನಳಿದು ಗುರುಕರ ಸಂಜಾತರಾಗಿ ಪುಟ್ಟಿ ಮತ್ತು ಆ ಮಂತ್ರ ದೀಕ್ಷೋಪದೇಶದಿಂದ ಮಂತ್ರ ಶರೀರಿಗಳಾಗಿ ಕ್ರಿಯಾ ದೀಕ್ಷೋಪದೇಶದಿಂದ ನಿಜೇಷ್ಟಲಿಂಗಧಾರಣರಾಗಿ ಸರ್ವಾಂಗಲಿಂಗಮಯರೆನಿಸಿ, ಲಿಂಗಾರ್ಚನಾಪರರಾಗಿ ಸಕಲ ಸುಖ ಭೋಗಂಗಳಲ್ಲಿ ಲಿಂಗ ಭೋಗೋಪಭೋಗಿಗಳಾಗಿ ಗುರುಲಿಂಗ ಜಂಗಮದ ಭಕ್ತಿ ದಾಸೋಹ ಮುಂದುಗೊಂಡು ಬಸವಾದಿ ಪುರಾತನರ ಸಾಂಪ್ರದಾಯಕರೆನಿಸಿ, ಸಹಜ ಸದ್ಗುಣ ಸತ್ಕ್ರಿಯೆ ಸಮ್ಯಜ್ಞಾನ ಸದ್ಭಕ್ತಿ ಸುಜ್ಞಾನದಿಂದಾಚರಿಸುವಲ್ಲಿ ಸತ್ಕಾಯಕದಿಂ ಮುಕ್ತಿಯನೀವ ಭಕ್ತಿಕಾಂಡಮತವಿಡಿದು ವರ್ತಿಸುವದೇ ಸದ್ಭಕ್ತರ ಪಥವು.

ಪರಮ ಸದ್ಭಕ್ತರಾದ ಶರಣರುಗಳು ಶಿವ ದಾಸೋಹಿಗಳಾಗಿ ವರ್ತಿಸುವಲ್ಲಿ ಆದ್ಯರಾಚರಣೆಯಂತೆ, ಜ್ಞಾನ ಕ್ರಿಯೆಗಳೊಂದಾಗಿ, ಏಕರೂಪದಿಂ ನಡಿಸುವಲ್ಲಿ ಪೂರ್ವ ಪುರಾತನರು ಬಸವಾದಿ ಪುರಾತನರು ನೂತನ ಪುರಾತನರಂತೆ, ಅಂತರಂಗದ ಮಹಾಜ್ಞಾನದ ಬಲದಿಂದ ಪೂರ್ಣ ಪದವನ್ನೇ ಬಹಿರಂಗದ ಕಾಯಕದಲ್ಲಿ ಪ್ರಕಟಿಸುತ್ತ ಮತ್ತು ಬಹಿರಂಗದ ಕಾಯಕವನ್ನೇ ಅಂತರಂಗದ ಮಹಾ ಜ್ಞಾನದಲ್ಲಿ ಸಂಬಂಧವ ಮಾಡಿ ಸದಾ ಸರ್ವದಾ ನಿಜವನೀಕ್ಷಿಸುತ್ತ ಆಚರಿಸಬೇಕಾದರೆ ಹಿಂದೆ ಪುರಾತನರಲ್ಲಿ ಸಕಲರು ಬಹು ಪ್ರಕಾ

ರವಾದ ಲೋಕ ವ್ಯವಹಾರಂಗಳಲ್ಲಿ ಒಂದೊಂದು ಕಾಯಕವ ಹಿಡಿದು ತಮ್ಮ ತಮ್ಮ ಕಾಯಕವನ್ನೇ ಈ ಶರೀರದಲ್ಲಿ ಜ್ಞಾನರೂಪದಿಂದ ಸಂಬಂಧವ ಮಾಡಿಕೊಂಡು ಭಕ್ತಿ ದಾಸೋಹ ಮುಖಾಂತರವಾಗಿ ವೇದಾಗಮ ಸಮ್ಮತವಾದ ನೀತಿಗಳಲ್ಲಾದರೂ ಸ್ವತಂತ್ರರಾಗಿ ಲೌಕಿಕ ಪಾರಮಾರ್ಥಂಗಳೆಂಬುಭಯ ವ್ಯವಹಾರಂಗಳನೇಕ ರೂಪದಿಂ ನಡಿಸಿ ಶುದ್ಧ ಶಿವಯೋಗವಿಡಿದಾಚರಿಸಿ ಭಾವಲಿಂಗ ಸ್ವರೂಪಿಗಳಾಗಿ ಕಡೆಯಲ್ಲಿ ನಿಜವನ್ನೈದಿದರು ಈಗಿನ ಭಕ್ತರಾದರು ಆದ್ಯರಾಚರಣೆಯಂತೆ ಆಚರಿಸಿ ನಿಜಮುಕ್ತರಾಗಬೇಕು. ಮತ್ತೀ ಭಕ್ತ ಮಾಹೇಶ್ವರರಾಚರಣೆಯ ವಿಷಯಕ್ಕಾಧಾರವಾಗಿ ಮಾರ್ಗತೋರಿಸುವದಾಗಿ, ಮೊಗ್ಗೆಯ ಮಾಯಿದೇವ ಪ್ರಭುಗಳಿಂ ವಿರಚಿತವಾಗಿ ತೋಂಟದಾರ್ಯರಿಂದಗ್ಗಳಿಸಲ್ಪಟ್ಟ ಭಕ್ತಿಜ್ಞಾನ ವೈರಾಗ್ಯ ಪ್ರತಿಪಾದಕವಾದ ಶತಕತ್ರಯವ ನೋಡಿ ಭಕ್ತಿಜ್ಞಾನ ವೈರಾಗ್ಯ ಲಕ್ಷಣವನ್ನು ಮತ್ತು ಸಹಜ ಸದ್ಭಕ್ತಿಯ ಸ್ಥಿತಿಯನ್ನು ತಿಳಿದುಕೊಳ್ಳಬೇಕು

ಆದರೆ ಪೂರ್ವದ ಪುರಾತನ ನೂತನ ಪುರಾತನ ಬಸವಾದಿ ಪುರಾತನರು ಶಿವಾಜ್ಞೆಯಿಂದ ಭೂಪವಿತ್ರಾರ್ಥವಾಗಿ ಭೂಲೋಕಕ್ಕೆ ಅವತರಿಸಿ ಅನಂತ ಶಿವಶರಣರು ಬೇರೆ ಬೇರೊಂದು ಕುಲದಲ್ಲಿ ಅವತಾರ ಮಾಡಿ ಎಲ್ಲರೂ ಶಿವದೀಕ್ಷಾ ಸಂಪನ್ನರಾಗಿ ಲೈಂಗಿಕಾಚಾರ ಕ್ರಿಯೆಗಳಿಂದ ಬೇರೆ ಬೇರೆ ಅನಂತ ರೀತಿಯ ಕಾಯಕಂಗಳಂ ನಿರ್ಧರಿಸಿಕೊಂಡು ತಮ್ಮ ತಮ್ಮ ಸತ್ಕಾಯಕಂಗಳಲ್ಲಿ ಶಿವ ದಾಸೋಹಿಗಳಾಗಿ ವರ್ತಿಸುವಲ್ಲಿ ಷಟ್‌ಕೃಷಿಲೋಕ ವ್ಯವಹಾರಂಗಳಾದಿಯಾದ ಅನಂತ ಪ್ರಕಾರದ ಸ್ವೇಚ್ಛಾಚಾರ ಸತ್ಕಾಯಕಂಗಳಿಂ ಆಚರಿಸಿದವರಲ್ಲಿ ಕೃಷಿ ಕಾಯಕವನ್ನು ಮಾಡಿದವರಾರೆಂದಡೆ ಇಳಿಯಾಂಡ ಗುಡಿ ಮಾರರು ಇಳಿಯಾಳ ಬ್ರಹ್ಮಯ್ಯಗಳು ಅರಿವಾಳತ್ತಂಡರು ಬಡಿಕೋರಿ ಬ್ರಹ್ಮಯ್ಯಗಳು, ಬಾಹೂರು ಬ್ರಹ್ಮಯ್ಯಗಳು ಕೈಕೂಲಿ ಚಾಮಯ್ಯಗಳು ಗೊಗ್ಗಯ್ಯಗಳು ಒಕ್ಕಲರ ಮುದ್ದಣ್ಣಗಳು ಮೊದಲಾದ ಪುರಾತನರು ಕೃಷಿಯನ್ನು ಮಾಡುತ್ತ ಲೋಕವರ್ತನ ಕೃಷಿ ಕಾಯಕವೇ ಅಂತರಂಗದ ಪಾರಮಾರ್ಥ ಕೃಷಿಯಾಗಿ ಜ್ಞಾನ ಕೃಷಿಯಿಂದ ಆಚರಿಸುತ್ತ ಇರುವಲ್ಲಿ ಪ್ರಭುದೇವರೊಡನೆ ತಮ್ಮ ನಿಜಾನುಭಾವ ಪ್ರಸಂಗ ಕಾಲದಲ್ಲಿ ಪ್ರಸಂಗಿಸಿ, ಸೂಚಿಸಿದ ಕೃಷಿ ವಚನಂಗಳು ಕೆಳಗೆ ಹೇಳಲ್ಪಟ್ಟವೆ

## ಪಾರಮಾರ್ಥ ಕೃಷಿ ಕಾಯಕದ ವಚನಗಳು.

ಮೊದಲಾ ಪ್ರಭುದೇವರು ಪಾರಮಾರ್ಥ ಸೂಚಕವಾಗಿ ಸೂಚಿಸಿದ ಕೃಷಿ ವಚನ. "ತನುವ ತೋಟವ ಮಾಡಿ ಮನವ ಗುದ್ದಲಿಯ ಮಾಡಿ

ಆಗಿದು ಕಳೆದೆನಯ್ಯ ಭ್ರಾಂತಿಯ ಬೇರ. ಒಡೆದು ಸಂಸಾರದೋಟೆಯ ಬಗೆದು ಬಿತ್ತಿದೆನಯ್ಯ ಬ್ರಹ್ಮ ಬೀಜವ. ಅಖಂಡ ಮಂಡಲವೆಂಬ ಬಾವಿ ಪವನವೇ ರಾಟಾಳ ಸುಷುಮ್ನನಾಳದಿಂದುದಕವ ತಿದ್ದಿ ಬಸವಗಳೈವರು ಹಸಗೆಡಿಸಿಹ ವೆಂದು ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ ಆವಾಗಳೂ ಈ ತೋಟದಲ್ಲಿ ಜಾಗರವಿರ್ದು ಸಸಿಯ ಸಲುಹಿದೆನು ಕಾಣಾ ಗುಹೇಶ್ವರಾ" ಹೀಗೆಂದು ಪ್ರಭುದೇವರು ಗೊಗ್ಗಯ್ಯಗಳೊಡನೆ ತಮ್ಮಂತರಂಗದ ಮಹಾ ಜ್ಞಾನದ ಕೃಷಿಯನ್ನು ಸೂಚಿಸಿದರು.

ಪ್ರಸಂಗ ಕಾಲಕ್ಕೆ ಬಸವರಾಜದೇವರು ಪಾರಮಾರ್ಥ ಕೃಷಿಯ ಸೂಚಕವಾಗಿ ನುಡಿದ ವಚನದಭಿಪ್ರಾಯವೇನಂದರೆ, "ನಾಲ್ವತ್ತೆಂಟು ತೆರದ ಭಕ್ತಿ ಎಂಬ ಚಿತ್ ಪೃಥ್ವಿ ಸ್ವರೂಪವಾದ ಶರಣನಾಚಾರಾಂಗದಲ್ಲಿ ನಿಷ್ಕಲ ಬ್ರಹ್ಮದ ಸದ್ರೂಪವೇ ಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡಷ್ಟಕ್ಕೆ ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಗಿ, ಆ ಎಲೆಯ ಮೇಲೆ ವಿಚಾರವೆಂಬ ಹುವ್ವಾಯಿತ್ತು ಮತ್ತು ನಿಃಕಲ ಬ್ರಹ್ಮದ ಸದ್ರೂಪವೆಂಬ ಗುರುವು ತನುವಿನಲ್ಲಿ ಆ ಬ್ರಹ್ಮದ ಚಿದ್ರೂಪವೆಂಬ ಲಿಂಗವು ಮನದಲ್ಲಿ ಬಳಿಕಾ ಬ್ರಹ್ಮದಾನಂದತ್ವವೆಂಬ ಜಂಗಮವು ಪ್ರಾಣಜ್ಞಾನದಲ್ಲಿ ಸಂಬಂಧವಾಗಿ, ಆ ನಿಃಕಲ ಬ್ರಹ್ಮದ ಪರಿಪೂರ್ಣತ್ವವೇ ಪಾದೋದಕವಾಗಿ ಸರ್ವಾಂಗದಲ್ಲಿ ನಿತ್ಯತ್ವವೇ ಪ್ರಸಾದವಾಗಿ ಆತ್ಮಾಂಗದಲ್ಲಿ ನೆಲೆಗೊಂಡಷ್ಟಕ್ಕೆ ಇಷ್ಟಲಿಂಗವೆಂಬ ಕೂಡಲ ಸಂಗಮದೇವರು ತನಗಾಚಾರಾಂಗವಾಗಬೇಕೆಂದೆತ್ತಿಕೊಂಡನೆಂಬ ಭಾವದಿಂದ ಪಾರಮಾರ್ಥ ಕೃಷಿಯ ಸಂಬಂಧವಾಗಿ ಸೂಚಿಸಿದ ವಚನವೆಂತೆಂದೊಡೆ:— "ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ ಲಿಂಗವೆಂಬ ಎಲೆಯಾಯಿತ್ತು. ಆ ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹುವ್ವಾಯಿತ್ತು ಆಚಾರವೆಂಬ ಕಾಯಾಯಿತ್ತು, ನಿಷ್ಪತ್ತಿ ಎಂಬ ಹಣ್ಣಾಯಿತ್ತು ಆ ನಿಷ್ಪತ್ತಿ ಎಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವನು ತನಗೆ ಬೇಕೆಂದೆತ್ತಿಕೊಂಡನು." ಹೀಗೆಂದು ಬಸವರಾಜದೇವರು ನಿಜಾನುಭಾವದ ಜ್ಞಾನಮಯ ಕೃಷಿ ಎನಿಪ ಪಾರಮಾರ್ಥ ಕೃಷಿಯ ಸೂಚಿಸಿದರು.

ಹೊಡೆಹುಲ್ಲ ಬಂಕಣ್ಣಗಳು ತಮ್ಮ ಪರಿಪೂರ್ಣ ಜ್ಞಾನದ ನಿಜವನ್ನು ಪ್ರಭುದೇವರೊಡನೆ ಪ್ರಸಂಗಿಸುವ ಕಾಲದಲ್ಲಿ ಕೃಷಿ ಸಂಬಂಧವಾಗಿ ಸೂಚಿಸಿದ ವಚನ "ಧರೆಯಲ್ಲಿ ಬಿದ್ದ ಬೀಜ ಧರೆಯಲ್ಲಿಯೇ ಅಳಿಯಿತ್ತು. ಆಕಾಶದಲ್ಲಿ ಫಲವಾಯಿತ್ತು. ಆ ಫಲವ ಬಯಲ ಕಣದಲ್ಲೊಕ್ಕಿ, ಮನದ ಹಗಹದಲ್ಲಿ ತುಂಬಿ ಬಾಯ ಹಗಹದಲ್ಲಿ ತೆಗೆದು ಕಣ್ಣಿನ ಕೊಳಗದಲ್ಲಿ ಅಳೆವುತ್ತಿರಲು ಕಂಡುಗವೆಂಬುದಕ್ಕೆ ಮೊದಲೆ ಕೊಳಗಡಗಿತ್ತು ಕುಂಭೇಶ್ವರನಲ್ಲಿರ್ದ ಜಗನ್ನಾಥನ

ರಿಕೆಯಾಗಿ" ಈ ವಚನದ ಅರ್ಥಾನ್ವಯವು ಹೇಗೆಂದರೆ, ಸುಜ್ಞಾನೋದಯ ವಾದ ಶರಣನ ಆಚಾರಾಂಗದಲ್ಲಿ ಸಂಬಂಧವಾದ ನಿರ್ಬೀಜ ಸ್ವರೂಪವಾದ ಇಷ್ಟಲಿಂಗವೆಂಬುದೀಗ ಧರೆಯಲ್ಲಿ ಬಿದ್ದ ಬೀಜವೆಂಬ ಶಬ್ದಕ್ಕರ್ಥ ಅಂತಪ್ಪ ಚಿದ್ಘನ ಲಿಂಗವು ಚಿದ್ರೂಪವಾದ ಶರಣನ ಆಚಾರಾಂಗದಲ್ಲಿ ಸಂಬಂಧವಾಯಿ ತ್ತೆಂಬುದೀಗ ಧರೆಯಲ್ಲಿಯೇ ಅಳಿಯಿತ್ತೆಂಬ ಶಬ್ದಕ್ಕರ್ಥ. ಗುರುಕರುಣದಿಂ ಪ್ರತ್ಯಕ್ಷವಾದ ಪರಬ್ರಹ್ಮವು ಚಿತ್‌ಸ್ವರೂಪನಿಂ ಬಂದು ಆತ್ಮನನವಗ್ರಹಿಸಿತ್ತೆಂ ಬುದೀಗ ಆಕಾಶದಲ್ಲಿ ಫಲವಾಯಿ-ತ್ತೆಂಬ ಶಬ್ದಕ್ಕರ್ಥ ಅಂತಪ್ಪ ಚೈತನ್ಯ ಸ್ವರೂಪವಾದ ಪ್ರಾಣಲಿಂಗದಲ್ಲಿ ಮೀರಿದ ಕ್ರಿಯಾಚಾರವಿಡಿದಾಚರಿಸುತ್ತಿರ್ದ ನೆಂಬುದೀಗ ಆ ಫಲವ ಬಯಲ ಕಣದಲ್ಲೊಕ್ಕಿ ಎಂಬ ಶಬ್ದಕ್ಕರ್ಥ ಅಂತು ಉನ್ಮನಿ ಸ್ವರೂಪವಾದ ಮನೋಮಧ್ಯದ ನಿಜಾನುಭಾವಾಂತರಂಗದಲ್ಲಿ ಪ್ರಾಣ ಲಿಂಗವ ಸಮರಸವ ಮಾಡಿದನೆಂಬುದೀಗ ಮನದ ಹಗಹದಲ್ಲಿ ತುಂಬಿ ಎಂಬ ಶಬ್ದಕ್ಕರ್ಥ ಅಂತಪ್ಪ ಶರಣನು ಚೈತನ್ಯ ಸ್ವರೂಪವಾದ ಪ್ರಾಣಲಿಂಗವನು ಷಡಿಂದ್ರಿಯಂಗಳಲಿ ಷಡ್ವಿಧ ಲಿಂಗವಾಗಿ ಸಂಬಂಧವ ಮಾಡಿದನೆಂಬುದೀಗ ಬಾಯ ಹಗಹದಲ್ಲಿ ತೆಗೆದು ಎಂಬ ಶಬ್ದಕ್ಕರ್ಥ ಆ ಚಿತ್ ಸ್ವರೂಪವಾದ ಶರಣನು ಸುಜ್ಞಾನ ದೃಷ್ಟಿಯಿಂ ನೋಡಿ ತನ್ನ ನಿಜ ಸ್ವರೂಪವನು ವಿವೇಕಿ ಸುತ್ತಿರ್ದನೆಂಬುದೀಗ ಕಣ್ಣಿನ ಕೊಳಗದಲ್ಲಿ ಅಳವುತ್ತಿರಲಾಗಿ ಎಂಬ ಶಬ್ದಕ್ಕರ್ಥ ಅಖಂಡ ಪರಿಪೂರ್ಣ ಪರಬ್ರಹ್ಮವೆಂದು ಭಾವಿಸಿ, ಶಿವೋಹಂ ಶಿವೋಹಂ ಎನ್ನುತ್ತಿರಲಲ್ಲಿ ಲಿಂಗಾಂಗವೆಂಬ ಉಭಯವಳಿದು ಒಂದೇ ಪರಬ್ರಹ್ಮವಾಯಿ ತ್ತೆಂಬುದೀಗ ಕಂಡುಗವೆಂಬುದಕ್ಕೆ ಮೊದಲೆ ಕೊಳಗಡಗಿತ್ತು ಕುಂಭೇಶ್ವರ ನಲ್ಲಿರ್ದ ಜಗನ್ನಾಥನರಿಕೆಯಾಗಿ ಎಂಬ ಶಬ್ದಕ್ಕರ್ಥ.

ಒಕ್ಕಲಿಗರ ಮುದ್ದಣ್ಣಗಳ ವಚನಃ- ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲೆವಾಗಿ ಬಿದ್ದ ಮರನ ತಂದು ನಿಬದ್ಧಕಾರನ ಕೈಯಲ್ಲಿ ಸುಬುದ್ಧಿ ಶಿಸುವು ಉದಯಿಸಿ ಅನಾದಿ ಎಂಬ ಹುಗಲು ತೆಗೆದು ಆದಿ ಈಯುವನಿಕ್ಕಿ ಇಷ್ಟವೆಂಬ ವಿಶ್ವಾಸದ ಮೆಳಿಯ ಮೆಟ್ಟಿ ಭಾವವೆಂಬ ಜಿಗುಳಿಯನಿಕ್ಕಿ, ಸದ್ಭಾವವೆಂಬ ಗುಳವ ತೊಡಿಸಿ ಸತ್‌ಕ್ರಿಯೆ ಎಂಬ ಕಣ್ಣಿಯ ನಿಲ ತೊಡಿಚಿ ಜ್ಞಾನಚಕ್ಷು ವೆಂಬ ನೊಗದ ಉಭಯದ ಕೊನೆಯಲ್ಲಿ ನೆಲೆಗೊಳಿಸಿ ಎಡಗೋಲಿನಲ್ಲಿ ಕಾರಿಯ ಹೂಡಿ ಬಲಗೋಲಿನಲ್ಲಿ ಬೆಳ್ಳಿಯ ಹೂಡಿ ಅಡಿ ಕೆತ್ತುವಂತೆ ದಾ ಎಂದು ಹೊಡೆ ಯಲಾಗಿ, ಭೂಮಿಯ ಒಡಗೂಡಿಸವೆಯಿತ್ತು ಬಿತ್ತವಟ್ಟಕ್ಕೆ ದಿಕ್ಕಿಲ್ಲ ಕಾಮ ಭೀಮ ಜೀವದನದೊಡೆಯ ನೀನೆ ಬಲ್ಲೆ.

ಇದಲ್ಲದೆ ಮತ್ತಾ ಮುದ್ದಣ್ಣಗಳು ನುಡಿದ ಕೃಷಿಯ ವಚನಃ- ಅಂಗವೆಂಬ ಭೂಮಿಯಾಗಿ ಲಿಂಗವೆಂಬ ಬೆಳೆಯಾಗಿ ವಿಶ್ವಾಸವೆಂಬ ಬಿತ್ತ ಬಲಿದು, ಉಂಡು ಸುಖಿಯಾಗಿರಬೇಕೆಂದ ಕಾಮ ಭೀಮ ಜೀವದನದೊಡೆಯ.

ಈ ಪ್ರಕಾರ ತಮ್ಮ ನಿಜಾಂತರಂಗದ ಮಹಾಜ್ಞಾನವನ್ನೇ ಬಹಿರಂಗದ ಕ್ರಿಯೆಯಲ್ಲಿ ಸಂಬಂಧಿಸಿ, ಕ್ರಿಯಾಜ್ಞಾನಂಗಳೊಂದಾಗಿ ಸತ್ಕಾಯಕವನಾಚರಿಸಿ, ಶಿವದಾಸೋಹದೊಳಿರ್ದು ನಿಃಕಲ ಬ್ರಹ್ಮದೊಳ್ ಬೆರೆದು, ನಿರ್ವಯಲಾದರು

ನಿಜಮುಕ್ತಿಯು ನೀವ ಪಾರಮಾರ್ಥ ಕೃಷಿ ಎನಿಪ ಈ ಪ್ರಕರಣಮಂ ಪುರಾತನರ ಉಕ್ತಿಗನುಸಾರವಾಗಿ ಸಕಲವೇದಾದಿ ಶೃತಿ ಸ್ಮೃತ್ಯಾಗಮಂಗಳ ಸಾರವನ್ನೆ ಸಂಗ್ರಹಿಸಿ, ಪರಮಾರಾಧ್ಯರ ವಚನ ಸಾಕ್ಷಿಗಳಿಂದ ಶ್ರೀಗುರು ದೇವನಪ್ಪಣೆಯ ಪ್ರಕಾರ ರಚಿಸಲ್ಪಟ್ಟ ಜ್ಞಾನ ಪ್ರಕರಣ ಪರಿಸಮಾಪ್ತಮಾದುದು.

ಈ ಪುಣ್ಯ ಗ್ರಂಥವು ಭೂಲೋಕಹಿತಕರವಾಗಿ ಭೋಗ ಮೋಕ್ಷಾರ್ಥ ಮಾಗಿ, ಸತ್ಫಲ ಪ್ರದಮಾಗಿರ್ದು ಸಕಲಸುನೀತಿ ಸದ್ಬೋಧಯುಕ್ತವಾಗಿರುವದ ರಿಂದ ಜಕದ್ವೈಭವಕ್ಕಾಗಿ ಶ್ರೀಗುರು ದೇವನಪ್ಪಣೆಯಿಂ ರಚಿಸಲ್ಪಟ್ಟಿದಾದುದ ರಿಂದ ಭೂಲೋಕದ ಸಮಸ್ತ ಜನರಿಗಾಶೀರ್ವಾದ ರೂಪಮಾಗಿರುವದರಿಂದ ಸರ್ವ ಜನರಿಗೂ ಪ್ರಿಯಕರವಾಗಿ ಚಂದ್ರಾರ್ಕರಿರುವ ವರೆಗೂ ಲೋಕ ಪೂಜ್ಯ ಮಾಗಿರ್ಪುದು.

**ಇತಿ ಪಾರಮಾರ್ಥ ಕೃಷಿ ಸಮಾಪ್ತವು.**

---

# ಈ ಗ್ರಂಥದ ಸತ್ಫಲವು.

ಶ್ರೀ ಮನ್ಮಹಾದೇವ ದೇವ ಶಿಖಾಮಣಿ ತ್ರೈಲೋಕ್ಯಪೂಜ್ಯ ಗುರುಕುಲ ಚಕ್ರವರ್ತಿಗಳಾದ ನೂತನಲ್ಲಮದೇವರವತಾರ ಶ್ರೀಮನ್ನಿರಾಭಾರಿ ದೇಶಿಕ ವರೇಣ್ಯ ಶ್ರೀ ಮದ್ವೀರಶೈವಾವಧೂತಪರಮಾರೂಢ ನಿರಂಜನ ಜಂಗಮ ಲೀಲಾ ಮೂರ್ತಿ ಚಿದ್ಘನ ಗಂಭೀರ ಚಿದಾಕಾಶ ಸುಕ್ಷೇತ್ರ ಶ್ರೀ ಘನಮಠ ನಿವಾಸ ಭಕ್ತ ಹೃತ್ಕಮಲವಾಸ ಮಾಯಾ ಕೋಲಾಹಲ ನಿರ್ಮಾಯ ಪ್ರಭು ನಾಗ ಭೂಷಣ ಶಿವಯೋಗಿಗಳು ಉಪದೇಶವಿತ್ತಂತೆ, ಮತ್ತಮಾ ಶಿವಯೋಗಿಗಳಾ ಜ್ಞಾನುಸಾರವಾಗಿ ಭೂಲೋಕದ ಸಕಲ ಸಂಭ್ರಮವತಿ ವಿಶೇಷವಾಗಲೆಂಬ ಆಶೀರ್ವಚನವಾಗಿ ಮತ್ತು ಭೋಗ ಮೋಕ್ಷಪದ ಮಾಗುವಂತೆ ರಚಿಸಬೇ ಕೆಂದು ಸೂಚಿಸಿದ ಸಕಲ ಯುಕ್ತಿಗಳಿಂದಲಾ ಪರಶಿವಯೋಗಿಗಳ ಕರಕಂಜೋ ದ್ಭವ ಸಿದ್ಧರಾಮನಿಂದೀ ಭೂಲೋಕಹಿತವಾಗಿ ನಿರ್ಮಿತವಾದುದೀ ಲೌಕಿಕ ಪಾರಮಾರ್ಥ ಕೃಷಿ ಜ್ಞಾನ ಪ್ರದೀಪಿಕೆ ಎಂಬ ಪುಣ್ಯ ಗ್ರಂಥವು.

ಈ ಲೋಕದ ಸಕಲ ಜನರೆಲ್ಲರು ಸಮಸ್ತ ಸದ್ಭಕ್ತರಾದೆವರುಗಳಿಗೆ ಈ ಗ್ರಂಥವು ಕಲ್ಪವೃಕ್ಷದೋಪಾದಿಯಲ್ಲಿ ಸದ್ಯಃ ಫಲವುಳ್ಳದಾಗಿದೆ ಹೇಗೆಂದರೆ ಕೃಷಿಯುದ್ಯೋಗದ ಸಕಲ ಸುಲಭವಾದ ಯುಕ್ತಿಗಳಂ ತಿಳಿಸುವದರಿಂದ ಅಷ್ಟ ಮಹದೈಶ್ವರ್ಯ ಸಕಲ ಸಂಪತ್ಸುಭೋಗವುಂ ಮತ್ತು ಸುಜ್ಞಾನದುಪದೇಶ ವೆಂಬ ಪಾರಮಾರ್ಥ ಕೃಷಿಯ ಸಾಧಕದಿಂದ ಸದ್ಯೋನ್ಮುಕ್ತಿಯುಂ ಕೊಡತಕ್ಕ ಸಾಮರ್ಥ್ಯದಿಂದಿರುವದು

ಶ್ರೀ ಮನ್ಮಹಾಗುರು ಗುರುಕುಲಚಕ್ರವರ್ತಿ, ಚಿದ್ಘನಮಠನಿವಾಸ ನಾಗ ಭೂಷಣ ಪ್ರಭುಗಳಾಶೀರ್ವಚನ ಭಾಷಾಪತ್ರವೀ ಗ್ರಂಥವೆಂದು ನಂಬುಗೆಯಿಂ ಬರೆಸಿದವರಿಗಿಷ್ಟಾರ್ಥ ಸಿದ್ಧಿಯುಂ ಸುನಿಷ್ಠೆಯಿಂದೋದಿದವರಿಗೆ ಉಭಯವಿಧ ಜ್ಞಾನವುಂ ಮತ್ತಿದರಭಿಪ್ರಾಯ ಅರ್ಥಾನ್ವಯ ಸಾರವುಂ ತಿಳಿದವರಿಗತಿ ಚಾತುರ್ಯ ಮತಿ ಧರ್ಮ ಗುಣ ಭಕ್ತಿ ಜ್ಞಾನ ದಾನೈಶ್ವರ್ಯ ಲೌಕಿಕ ಪಾರ ಮಾರ್ಥದ ನಿರ್ಮಲತ್ವದ ನಿಜಮುಕ್ತಿಯುಂ ಮತ್ತೀ ಗ್ರಂಥವನೋದಿ ಪೇಳ್ದರಿ ಗುಭಯ ವಿಧ ಸುಕೃತಂಗಳಂ ಮತ್ತೀ ಗ್ರಂಥದ ಅಭಿಪ್ರಾಯಾನುಸಾರವಾಗಿ ಉಭಯ ವಿಧ ಕೃಷಿಯುದ್ಯೋಗವುಂ ಮಾಳ್ಪರಿಗಖಂಡಿತ ಮಹದೈಶ್ವರ್ಯವುಂ ಶಿವಸುಖ ಸಂಪದವುಂ ಪಾಲಿಸುವದಿದು ಸತ್ಯ ನಾಗಭೂಷಣ ಪರಮ ಶಿವ ಯೋಗಿ ಹರಿಸಿದಾಶೀರ್ವಚನ ಸಟೆಯಪ್ಪುದೇ? ಲೋಕ ಪ್ರಸಿದ್ಧವಾಗಿ ಅಲ್ಲಮನವತಾರವೀ ನಾಗಭೂಷಣನೆಂದು ಕೈ ಎತ್ತಿ ಸಾರಿ ಪೇಳುವೆನೀ ಗ್ರಂಥವೀ ಲೋಕದೈಶ್ವರ್ಯಕಾರಣವಾಗಿ ಪ್ರಭುದೇವರಾಶೀರ್ವಚನವು .

ಶ್ರೀ ಮನ್ಮಹಾಗುರು ಜಗದೋಪಕಾರ ಮೂರ್ತಿಗಳಾದ ಘನಮಠನಿವಾಸ ನಾಗಭೂಷಣ ಶಿವಯೋಗಿಗಳ ಮನೋವಾಂಛೆ ಇದ್ದಂತೆ ಈ ಗ್ರಂಥವನ್ನು ಅಚ್ಚು ಹಾಕಿಸಿ ಲೋಕ ಪ್ರಸಿದ್ಧ ಮಾಡುವ ವಿಷಯದಲ್ಲಿ ಸಮಸ್ತ ಸದ್ಭಕ್ತ ಪುಣ್ಯಶಾಲಿಗಳಾದವರೆಲ್ಲರೂ ಕೂಡಿ ತಮ್ಮ ಶಕ್ತ್ಯಾನುಸಾರವಾಗಿ ದ್ರವ್ಯದ ಸಹಾಯ ಮಾಡಿ ಈ ಪುಣ್ಯದ ಫಲವನ್ನು ತೆಗೆದುಕೊಳ್ಳಬೇಕು. ಸಾಕ್ಷಿ "ಸ್ವದತ್ತಾ ದ್ವಿಗುಣಂ ಪುಣ್ಯಂ । ಪರದತ್ತಾನುಪಾಲನಂ ॥ ಪರದತ್ತಾಪಹಾರೇಣ । ಸ್ವದತ್ತಾ ಚ ನಿಷ್ಫಲಂ" ಎಂಬ ಪ್ರಮಾಣವುಂಟು.

ಮತ್ತೀ ಜಗದುಪಕಾರವಾದ ಈ ಪುಣ್ಯ ಗ್ರಂಥವನ್ನು ಪ್ರಸಿದ್ಧ ಮಾಡ ತಕ್ಕ ವಿಷಯದಲ್ಲಿ ದ್ರವ್ಯದ ಸಹಾಯ ಮಾಡಿದ ಪುಣ್ಯ ಶಾಲಿಗಳಿಗೆ ಪ್ರಾಪ್ತಿ ಸುವ ಫಲವಂ ಸೂಚಿಸುವೆನು.

ಈ ಲೋಕ ಪ್ರಸಿದ್ಧರಾದ ಪರಮಪ್ರಭು ನಾಗಭೂಷಣ ಪರ ಶಿವಯೋಗಿ ಗಳ ಮನದಪೇಕ್ಷೆಯುಂ ತೀರಿಸಿದ ಸತ್ಫಲವೊಂದು, ಮತ್ತೀ ಗ್ರಂಥವ ನೋಡಿ

ಸಕಲ ಯುಕ್ತಿಗಳಂ ತಿಳಿದು ಸಮಸ್ತ ಫಲ ಪದಾರ್ಥಂಗಳಂ ಬೆಳೆದು ಬಹು ಜನರು ಸಂಪದ್ಯುಕ್ತರಾಗುವರು, ಆ ಸಂಪತ್ತಿಗೆ ಸಹಾಯ ಮಾಡಿದ ಪುಣ್ಯ ವೊಂದು, ಮತ್ತೀ, ಗ್ರಂಥದಲ್ಲಿರುವ ರಾಜನೀತಿಯನ್ನು ಮಹಾರಾಜರು ತಿಳಿದು ಹಾಗೆ ವರ್ತಿಸಿದರೆ ಬ್ರಹ್ಮಾಂಡವಿರುವ ವರೆಗೂ ದುಷ್ಕಾಲವಿಲ್ಲದಂತಾಗುವದು ಇದರ ಸತ್ಫಲವೊಂದು, ಭೂಲೋಕವೆಲ್ಲ ಮಹದೈಶ್ವರ್ಯದಿಂದ ತುಂಬಲ್ಪಡು ವದಾಗಿ ಶ್ರೀಗಳಾಶೀರ್ವಾದದಿಂದ ಸಕಲ ಜನರ ದಾರಿದ್ರ್ಯವು ದೂರಾಗುವ ದರಿಂದ ಸರ್ವ ಜನರು ಸದ್ಗುಣಿಗಳಾಗಿ ಲೋಕಕಂಟಕರಾದ ದುರ್ಜನರು ಮಾಡುವ ದುಷ್ಕರ್ಮಗಳಡಗಿ ಸರ್ವರಿಗೂ ಸುಖವಾಗುತ್ತಿಹುದೀ ಪುಣ್ಯವೊಂದು, ಮತ್ತಿದಲ್ಲದೆ ಭೂಲೋಕದೈಶ್ವರ್ಯ ಹೆಚ್ಚಿದ ಹಾಗೆ ಭೂಪತಿಗಳ ಸಂಪತ್ತು ವರ್ಧನವಾಗಿ ಲೋಕಹಿತವಾದನಂತ ಕಲ್ಯಾಣ ಕಾರ್ಯಂಗಳಾದಿಸುತ್ತಿಹವದರ ಸುಕೃತವೊಂದು, ಮತ್ತೀ ಲೋಕದ ಸಮಸ್ತ ಜನರೆಲ್ಲರು ಮಹದೈಶ್ವರ್ಯ ವುಳ್ಳವರಾಗಿರುವದರಿಂದ ಜಗತ್ತೆಲ್ಲ ಸೌಭಾಗ್ಯದಿಂದೊಪ್ಪಿ ಅಲ್ಲಲ್ಲಿಗನ್ನ ಕ್ಷೇತ್ರ, ಅರವಟಿಗೆ, ದಿವ್ಯಕ್ಷೇತ್ರ, ದೇವಾಲಯಗಳಾದಿಸುತ್ತ, ಧರ್ಮ ಕಾರ್ಯ, ಗುರು ಕಾರ್ಯ, ಶಿವಕಾರ್ಯಂಗಳಿಂದಲೂ, ಪುರಾಣ ಶ್ರವಣ, ಪ್ರಯೋಜನ, ಶುಭ ಶೋಭನ, ಹೋಮ ಹವನ, ಯಜ್ಞ ತಪಸ್ಸುಗಳೆಲ್ಲ ಸಂಭ್ರಮದಿಂ ಜರಗುತ್ತ ಜಗತ್ತಿನೊಳಲ್ಲಲ್ಲಿ ಭಕ್ತ ಮಾಹೇಶ್ವರರುಗಳ ಭಕ್ತಿ ಮಂದಿರ ಮಠಗಳಲ್ಲಿ ಗುರು ಸೇವೆ ಲಿಂಗ ಪೂಜೆ ಜಂಗಮ ದಾಸೋಹಂಗಳಾಗುತ್ತಲೀ ಭೂಲೋಕವೆಲ್ಲ ಭೂಕೈಲಾಸವಾಗಿ ಸುಮಂಗಲಕರವಾಗಿ ಒಪ್ಪುತ್ತಿಹುದಿಂತಹ ಅನಂತ ಸತ್ಫ ಲಂಗಳಿಗೆ ಕಾರಣವಾದ ಈ ಪುಣ್ಯ ಗ್ರಂಥಮಂ ಪ್ರಸಿದ್ಧ ಮಾಡುವ ವಿಷಯ ದಲ್ಲಿ ಸಹಾಯ ಮಾಡಿದ ಪುಣ್ಯಶಾಲಿಗಳಿಗೆ ಪುಣ್ಯದ ಬೀಜಮಂ ಬಿತ್ತಿದ ಸತ್ಫಲ ಪ್ರಾಪ್ತಿಸುವದೆಂದು ನಿರ್ಧಾರವಾಗಿ ಶ್ರೀ ಗುರುವಿನಾಜ್ಞೆಯಿಂದ ಪ್ರತಿಜ್ಞಾ ಪೂರ್ವಕವಾಗಿ ಬರೆದಿರುವೆನು ಇದು ಸತ್ಯ ಸತ್ಯ ಸತ್ಯ ಈ ಗ್ರಂಥವು ಭೋಗ ಮೋಕ್ಷಂಗಳ ವಿಷಯದಲ್ಲಿ ಭೂಲೋಕದೈಶ್ವರ್ಯ ಕಾರಣಕ್ಕೆ ಶುಭ ಸೂಚನಾರ್ಥವಾಗಿ ಶ್ರೀ ಗುರುದೇವನಾಶೀರ್ವಾದವೆನಿಸಿದದರಿಂದ ಕಾಮ ಧೇನು ಕಲ್ಪವೃಕ್ಷ ಚಿಂತಾಮಣಿಯಂತೆ ಇಷ್ಟಾರ್ಥ ಸಿದ್ಧಿಪ್ರದವಾಗಿರುವದು.

ಈ ಪುಣ್ಯ ಗ್ರಂಥಮಂ ಬರೆದೋದಿ ತಿಳಿದಾಚರಿಸಿದವರಿಗೆ ಇಹ ಪರದ ಭೋಗ ಮೋಕ್ಷಂಗಳಾಗಲೆಂದು ಹರಿಸಿ ಒರೆದ ಆಶೀರ್ವಾದವೀ ಪುಣ್ಯ ಗ್ರಂಥ ವಿದು ಗುರುವಾಕ್ಯವೆಂದು ನಂಬಬೇಕು.

### ಈ ಪುಣ್ಯ ಗ್ರಂಥಕ್ಕೆ ಸಹಾಯ ಮಾಡಿ ಸತ್ಫಲವಂ ಪಡೆದುಕೊಂಡ ಪುಣ್ಯಶಾಲಿಗಳಿಗೆ

## ಶ್ರೀಮನ್ಮಹಾಶಿವಯೋಗಿಗಳ ಆಶೀರ್ವಾದ

## ಸೂಚನೆಯು.

ಶ್ರೀಮತ್ಚಿದ್ಘನ ಗಂಭೀರವಾದ ಚಿದಾಕಾಶ ಸುಕ್ಷೇತ್ರವೆನಿಸುವ ಶಾಂಭವ ಪುರ ಚಿದ್ಘನ ಮಠ ನಿವಾಸ ಶ್ರೀವೀರಶೈವಾವಧೂತ ನಿರಾಧಾರ ಗುರುತಿಲಕ ಪರಮಾರೂಢ ಗುರುಕುಲಚಕ್ರವರ್ತಿ, ನೂತನಲ್ಲಮದೇವರವತಾರ, ಶ್ರೀಮತ್ಪ್ರಾಣ ಹಂಸ, ಪರಮ ಮಹಿಮೋದ್ಧಾರ, ಭಕ್ತಹೃನ್ನಿಲಯ, ನಾಗಭೂಷಣ ಶಿವಯೋಗಿಗಳವರು, ಸೋಮಾರಾಧ್ಯರವತರಿಸಿದ ಪುಣ್ಯ ದೇಶವಾದಾಂಧ್ರ ಪ್ರಾಂತದೊಳು ದೋರ್ವೇಡೆ ಎನಿಪ ಗ್ರಾಮವದರೊಳ್ ಪರಮ ಮಾಹೇಶ್ವರರಾದ ವೀರಾಂಹಯರ ಸತಿ ವೀರಾಂಬೆಯ ಪುಣ್ಯ ಗರ್ಭದ ತೆರೆಮರೆಯಿಂ ಜಗತ್ಪಾವನ ಪ್ರಯೋಜನಾರ್ಥವಾಗಿ ಶಿವಾಜ್ಞೆಯಿಂದೀ ಜಗದ್ವೈಭವವತಿ ಸಂಭ್ರಮವಾಗಲೆಂದಾಶೀರ್ವಾದ ಬೀಜವಂ ಬಿತ್ತುವದೊಂದು ಫ್ರೆಂಚದೇಶದ ಸನ್ಯಾಸಿಗಳ ಬೋಧೆಯಿಂ ಪುಟ್ಟಿ ಬೆಳೆದು ಹಬ್ಬಿದ ವಾಗದ್ವೈತ ಮತವಂ ಸಂಹರಿಸುವದೊಂದು ಶ್ರೀವೀರಶೈವಾಚಾರದ ಸ್ಥಿತಿಗತಿಗಳಂ ಕ್ರಮಯುಕ್ತವಾಗಿ ಭಕ್ತ ಮಾಹೇಶ್ವರರಿಗರುಪಿ ಭಕ್ತ ಹೃಕ್ಷೇತ್ರದೊಳು ಜಗದಾದಿ ಬೀಜವಂ ಬಿತ್ತಿ ಸಹಜೋಪದೇಶವಂ ಮಾಡಿ, ಶಿವಭಕ್ತಿ ಸಂಪದವ ಸ್ಥಿರಪಡಿಸುವದೊಂದು ಈ ಪ್ರಕಾರವಾದ ಜಗದೋಪಕಾರ ಕಾರಣಾರ್ಥಕ್ಕೆ ಶ್ರೀನೃಪಶಾಲಿವಾಹನ ಶಕೆ ಪದಿನೇಳು ನೂರ್ಕೈವತ್ತರೊಳವತಾರವಂ ಮಾಡಿ ಬಾಲ ಲೀಲೆಯ ನಟಿಸಿ, ಭಕ್ತ ಗೃಹದೊಳು ಸುಳಿದು, ಏಳನೆಯ ವರ್ಷದೊಳು ಶಿವ ದೀಕ್ಷೆಯಂ ಪಡೆದು ಪನ್ನೆರಡು ವತ್ಸರಕನಾದಿ ವೃಷಭನ ಸ್ಮರಿಸಿ ಪ್ರಸನ್ನತೆಯ ಮಾಡಿಕೊಂಡಂದಿನ ನಿಮಿಷಕ್ಕೆ ಲಿಂಗವನಿತ್ತ ಗುಹೇಶ್ವರನೀತನೆಂದರಿದಾತನಿಂದನುಗ್ರಹವಂ ಪಡೆದು, ಭಕ್ತಿ ಜ್ಞಾನ ವೈರಾಗ್ಯಯುತನಾಗಿ ಬಸವ ಭಕ್ತಿಯು ತನಗ ಪ್ರಾಣಪ್ರದವಾಗಿರ್ದು, ಬಸವನಾಮಾಮೃತವ ಸವಿದುಂಡು ಬೆಳೆಯುತ್ತ, ಬಸವ ನಿಜಮೂಲ ಮೂರ್ತಿಯ ನೋಡಿ ನಲಿಯುತ್ತ, ಬಸವ ಗುರು ಸಕಲ ಲೋಕಕ್ಕೆಂಬುದನು ಅರಿದು ಬಸವ ಭಸಿತವನು ಸ್ವೀಕರಿಸುತದರಿಂ ಪಂಡಿತಾರಾಧ್ಯರಂತಖಿಳ ಶಾಸ್ತ್ರ ಸಾರಜ್ಞನಾಗಿ "ಬಸವ, ಬಸವಾ। ಬಸವ ಬಸವಪ್ಪ" ಎನುತಲತಿ ಭಕ್ತಿಯಿಂದಂತರಂಗದೊಳಭವಗತಿ ಸಲುಗೆಯುತನಾಗಿ ಬಹಿರಂಗದೊಳು ಬಸವ ಮಹಿಮೆಗಳ ನುತಿಸುತ್ತಲಿಪ್ಪತ್ತೊಂದನೆಯ ವರ್ಷ ಪರಿಯಂತರವು ಗೋಪ್ಯದಿಂದಿರ್ದು ಬಳಿಕ ಶಿವನಾಜ್ಞೆಯಿಂ ಬಂದ ನೆವಗಳಂ ತಾನರಿದು ಅವಿರಳಾತ್ಮಕನಖಿಳ ಜಂಜಡವ ಪರಿದೊತ್ತಿ ಭುವನದೊಳು ಭಕ್ತ

ರೆಲ್ಲೆಲ್ಲಿರ್ಪರಲ್ಲಲ್ಲಿ ಸಂಚರಿಸುತರ್ಥಿಯಿಂ ಕವಿತೆ ಪದ ಗಾನ ಪದ್ಯಂಗಳಾದ್ಯರ ವಚನ ಶಿವನ ನಿಜ ಮಹಿಮೆ ಶಿವಭಕ್ತರುನ್ನತ ಭಕ್ತಿ ಶಿವನ ಮುಖ ವಚನ ಮಾದಾಗಮಂಗಳನೋದಿ ಶಿವಭಕ್ತಿ ಸಾರ ಸದ್ಭಕ್ತಿ ಕ್ರಮವನರಿಪುತ್ತಲತಿ ಶೀಲ ದಿಂದ ಪರಮಾರೂಢ ಪಥವಿಡಿದು ಪರಿಪೂರ್ಣ ಜ್ಞಾನ ಜಂಗಮ ಲೀಲೆಯಿಂ ಚರಿಸಿ, ಸ್ವತಂತ್ರನಾಗಿ, ಭಕ್ತಿ ಭಿಕ್ಷೆಯಂ ಕೈಕೊಳ್ಳುತ್ತ ಭಕ್ತರುದ್ಧಾರಾರ್ಥ ವಾಗಿ, ಅವರವರಧಿಕಾರಕ್ಕೆ ತಕ್ಕ ಹಾಗೆ, ಭಕ್ತಿ ಜ್ಞಾನ ವೈರಾಗ್ಯದಾಚರಣೆ ಯನು ಮತ್ತು ಷಟ್ಕೃಷಿ ಲೋಕವ್ಯಹಾರಂಗಳಲ್ಲಿ ಕೃಷಿಯುದ್ಯೋಗದ ಸಕಲ ಚಾತುರ್ಯತರವಾದ ಸುಲಭೋಪಾಯದ ಯುಕ್ತಿಗಳನ್ನು ಲೋಕಾಚಾರದ ಸಮಸ್ತ ಧರ್ಮ ನೀತಿಗಳನ್ನು ಹಗಲಿರಳು ಹೊತ್ತು ನಾಲದಂತಾಗಿ ಬೋಧಿ ಸುತ್ತ ಶರಣಸ್ಥಲದಾಚರಣೆಯು ಭಕ್ತ ಮಾಹೇಶ್ವರರಲ್ಲಿ ಪರಮಾರಾಧ್ಯರ ವಚನಾನು ಭಾವ ನಿಜ ಬೋಧೆಯಿಂ ಗುರುತ್ವಾಭಿಮಾನವಿಲ್ಲದನಿಮಿತ್ತ ಬಾಂಧ ವನಾಗಿ ತೆರೆಮರೆ ಇಲ್ಲದೆ ಸಹಜಾರ್ಥವನೆ ವೇದಾದಿ ಶೃತಿ ಸ್ಮೃತ್ಯಾಗಮ ಸತ್ಪು ರಾಣ ದೃಷ್ಟೋಪಮಾನಂಗಳಿಂದ ವರ್ಷಾ ಋತು ಮೇಘ ವೃಷ್ಟಿಯ ಜಲಬಿಂದು ಗಳಂತೆ ವಾಕ್ಯಾಮೃತಬಿಂದುಗಳಂ ಸುರಿಸುತ್ತ ಮೂವತ್ತು ವರ್ಷಗಳ ವರೆಗೂ ದೇಶ ಸಂಚಾರವಂ ಮಾಡಿ ಕಲ್ಯಾಣ ಮಂಡಲದ ನಾಲ್ವತ್ತೆಂಟು ಗಾವುದ ವಿಸ್ತೀ ರ್ಣವಾಗಿ ಪೂರ್ವ ಪಶ್ಚಿಮ ದಕ್ಷಿಣ ಸಮುದ್ರದ ವರೆಗೂ ಭಕ್ತ ಜನೋಪಕಾರಾ ರ್ಥವಾಗಿ ಸದ್ಬೋಧೆಯಂ ಬೋಧಿಸುತ್ತ ಸ್ವತಂತ್ರದಿಂ ಚರಿಸಿ ನವರಸಾಲಂ ಕಾರ ವಾಕ್ಚಾತುರ್ಯ ಹಾಸ್ಯಬೀಭತ್ಸ ಭಯ ವಿಲಾಸ ಶೃಂಗಾರ ಮೊದಲಾದ ರಸ ಪೂರಿತ ವಾಕ್ಯಂಗಳಿಂದ ಭಕ್ತರಿಗಾನಂದವಂ ದುರ್ಮಾದಿಗಳಿಗೆ ಭಯ ಕಂಪಾಯ ಮಾನಂಗಳ ಪುಟ್ಟಿಸುತ್ತ ಸನಯ ನಿರಸನ ವಚನಂಗಳಭಿಪ್ರಾಯವಂ ಸೂರೆಗೈಯ್ಯುತ್ತ ಇಂದಿಗೆ ಹತ್ತು ವರ್ಷದ ಹಿಂದೆ ಭಕ್ತವತ್ಸಲನಾಗಿ ಬಂದೆನ್ನ ನುದ್ಧರಿಸಿ ಅಂದಿನಾರಭ್ಯದಿಂದಿಂದಿನ ವರೆಗೂ ಲೋಕದ ಭಕ್ತರೆಲ್ಲರಿಗೂ ಬೋಧಿ ಸುವಂತೆ ಬೋಧಿಸಿ ಮಲಮಾಯಾ ಜಾಡ್ಯವಂ ಪರಿದು ನಿಜೋಪದೇಶವಿತ್ತು ತವಕುಮಾರನೆಂದೆನಿಸಿ ಬಳಿಕೀ ಲೋಕಕ್ಕೆ ಬಂದ ಕಾರ್ಯವಾಗಬೇಕೆಂದು ಯೋಚಿಸಿ ಲೋಕಹಿತವಾದ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥವನ್ನು ನಿರ್ಮಿಸುವ ವಿಷಯವಾಗಿ ಲೌಕಿಕ ಪಾರಮಾರ್ಥ ಜ್ಞಾನದ ಸಕಲ ಯುಕ್ತಿ ಗಳಂ ಸುಬೋಧವಾಗಿ ತವ ಕುಮಾರನಾದೆನಗೆ ಮೊದಲಲ್ಲುಪದೇಶವಿತ್ತು ಬಳಿಕೀ ಗ್ರಂಥವಂ ಭೋಗ ಮೋಕ್ಷಪ್ರದವಾಗಿ ಸುಲಭವಾದ ಸಕಲ ಯುಕ್ತಿಗಳಂ ಮೇಳೈಸಿ ಶೃತಿ ಸತ್ಪುರಾಣಾಗಮಂಗಳ ಸಾರವಂ ಸಂಗ್ರಹಿಸಿ ಪರಮಾರಾಧ್ಯರ ವಚನಾನುಭಾವ ಸಾಕ್ಷಿಗಳಿಂದ ಸಕಲರಿಗೂ ತಿಳಿಯುವಂತೆ ಕನ್ನಡ ವಾಚ್ಯ ರೂಪದಿಂದ ರಚಿಸಬೇಕೆಂದು ಅಪ್ಪಣೆಯನಿತ್ತದರಿಂದ ಗುರು ವಾಜ್ಞೆಯ ಪ್ರಕಾರ ಈ ಗ್ರಂಥಕ್ಕೆ ಬೇಕಾದ ಸಕಲ ಸಂಗ್ರಹಗಳನ್ನು ಕೂಡಿಸಿ ಈ ಗ್ರಂಥವಂ ರಚಿಸುವದಕ್ಕೆ ಪ್ರಾರಂಭಿಸಿದೆನು. ಬಳಿಕಾ ಗ್ರಂಥವು ಸ್ವಲ್ಪ

ಸಾಗುವಷ್ಟರಲ್ಲಿ ನನ್ನ ಕುಟುಂಬವು ಬಹಳ [illegible]ವಾಗಿದ್ದು ಖರ್ಚಿನ ವಿಷಯಕ್ಕೆ ಮತ್ತಾರು ಮಾಡುವವರಿಲ್ಲದಾದುದರಿಂದ ಇಲ್ಲಿ ಪರಿಣಾಮ ಕಾಣಿಸದಾಗಿ ಅನಿರ್ವಾಹ ಪಕ್ಷಕ್ಕೆ ಕುಟುಂಬ ಸಹಿತ ಸೊನ್ನಲಾಪುರಕ್ಕೆ ಹೋಗಿ ನಿತ್ಯ ಕಾಯಕದಿಂದ ಕಾಲಕ್ಷೇಪವಂ ಮಾಡುತ್ತಿರುವದರಿಂದ ನಾಲ್ಕು ವರ್ಷ ಪರ್ಯಂತರವು ಈ ಗ್ರಂಥವು ಹಾಗೇ ಉಳಿಯಿತು. ಇತ್ತಲಾಗಿ ಶ್ರೀ ಮನ್ಮಹಾಗುರು ಪರಮಶಿವಯೋಗಿಗಳವರ ಹೃದಯದಲ್ಲಿ ಲೋಕೋಪಕಾರವಾದ ಈ ಗ್ರಂಥವು ಪೂರ್ಣವಾಗಬೇಕೆಂಬ ಅಪೇಕ್ಷೆಯು ಅತ್ಯಾತುರವಾಗಿದ್ದು ದ್ರವ್ಯಾಧಿಕಾರಿಗಳಾದ ಅನಂತ ಭಕ್ತರೆಲ್ಲರಿಗೂ ಈ ಗ್ರಂಥಕ್ಕಾಶ್ರಯ ಕೊಟ್ಟು ನನ್ನನ್ನು ಕರಿಸಿಕೊಂಡು ಸರ್ವ ವಿಷಯಕ್ಕೂ ದ್ರವ್ಯದ ಸಹಾಯ ಮಾಡಿ ಜಗದೋಪಕಾರವಾದ ಈ ಗ್ರಂಥವನ್ನು ಪೂರ್ಣ ಮಾಡಿಸಿ ಅದರ ಸತ್ಫಲವನ್ನು ಪಡಕೊಳ್ಳಬೇಕೆಂದು ಹೇಳಿದಾಗ್ಯಾದರೂ ಸಹಾಯ ಮಾಡಿ ಅವರ ಅಪೇಕ್ಷೆಯನ್ನು ತೀರಿಸಿ ಮನಸ್ಸಂತೋಷಮಾಡಿಸಲಿಲ್ಲ

ಇತ್ತಲಾಗಿ ಶ್ರೀ ಮನ್ಮಹಾಶಿವಯೋಗಿಗಳವರು ಕುಂಟೋಜಿಯ ಸ್ಥಲದಲ್ಲಿರುವಾಗ್ಗೆ ಶ್ರೀಮನ್ಮಹಾರಾಜರಾಜ ರಾಜಶ್ರೀ ಪರಗಣೆ ಹುನುಗುಂದ ಸೀಮೆಯ ದೇಸಾಯಿ ಸರದೇಸಾಯಿ ಮಾಮಲೇ ಮುದಗಲ್ಲ ಸೀಮೆಯ ಪಗನಾಡಗೌಡ ಸಂಗಪ್ಪ ಧೊರೆಗಳವರು ಮಹಾ ಶಿವಯೋಗಿಗಳ ಪಾದದರ್ಶನಕ್ಕೆ ಬಂದ ಸಮಯದಲ್ಲಿ ಶ್ರೀಗಳವರು ಸ್ವಲ್ಪ ತಯಾರಾದ ಈ ಗ್ರಂಥವನ್ನು ತೋರಿಸಿ ಈ ಶಾಸ್ತ್ರವಂ ಪೂರ್ಣ ಮಾಡಿಸಬೇಕೆಂಬ ತಮ್ಮ ಮನದ ಅಪೇಕ್ಷೆಯನ್ನು ತಿಳುಹಿಸಿದ ಕಾರಣ ಲೋಕೋಪಕಾರ ವಿಷಯದಲ್ಲಿ ಅವರ ಮನೋವಾಂಛಿತಾರ್ಥವಿದ್ದಂತೆ ಗ್ರಂಥವನ್ನು ಸಂಪೂರ್ಣ ಮಾಡಿಸುವದಕ್ಕೋಸ್ಕರ ಸಹಾಯ ಮಾಡತಕ್ಕ ರೀತಿಯನ್ನು ಅವರು ಹೇಳಿದ ಪ್ರಕಾರ ಕೇಳಿ ಅದಕ್ಕೆ ಸಮ್ಮತಿಪಟ್ಟು ಕರಿಸಿ ಗ್ರಂಥ ಪೂರ್ಣ ಮಾಡಿಸುವೆವೆಂದು ದೊರೆಗಳವರು ವಚನಕೊಟ್ಟು ನನ್ನನ್ನು ಕರಿಸಬೇಕೆಂದು ಹೇಳಿ ತಾನೇ ಪತ್ರ ಬರೆದು ಶ್ರೀಗಳವರಿಗೆ ಸಮರ್ಪಿಸಿದ ಕಾರಣ ಶ್ರೀಗುರುಗಳೆನಗಿದರಭಿಪ್ರಾಯವೆಲ್ಲವನು ಪತ್ರಮುಖದಿಂದ ತಿಳುಹಿಸಲು ಆ ಪತ್ರದ ಅಭಿಪ್ರಾಯಕ್ಕೆ ಸಂತೋಷಪಟ್ಟು ಕುಟುಂಬ ಸಹಿತ ಸೊನ್ನಲಾಪುರದಿಂದ ಬಂದು ಈಹೊತ್ತಿಗೆ ಹನ್ನೊಂದು ತಿಂಗಳಾಯಿತು.

ಅಲ್ಲಿಂದ ಬಂದಾಕ್ಷಣವೇ ಈ ಗ್ರಂಥಕ್ಕೆ ಬೇಕಾದ ಅನೇಕ ಸಂಗ್ರಹಗಳನ್ನು ಮೇಳೈಸಿಕೊಂಡು ಗ್ರಂಥ ರಚನೋದ್ಯೋಗಕ್ಕೆ ಪ್ರಾರಂಭಿಸಿ ಒಂದು ಪ್ರತಿಯನ್ನು ಪೂರ್ಣ ಮಾಡಿ ಶ್ರೀಗಳವರು ಇಳಕಲ್ಲ ಮುಕ್ಕಾಮಿನಲ್ಲಿರುವಾಗ ಅದನ್ನು ತಂದು ಒಪ್ಪಿಸಲಾಗಿ ಬಳಿಕೀ ಗ್ರಂಥವಂ ಪರಿಶೋಧಿಸಿ ಅದರಲ್ಲಿ

ಪ್ರಸ್ತಾಪಕ್ಕೆ ಸೇರ್ಪಡೆಯಾಗ[illegible] ಕೆಲವು ಸಾಕ್ಷಿ ಗ್ರಂಥದುದಾಹರಣೆಗಳ ಸೂಚನಾರ್ಥವಂ ತಿಳುಹಿಸಿ, ಮತ್ತಾ ಗ್ರಂಥಗಳು ಬೇರೆ ಬೇರೆ ಅಲ್ಲಿರುವದರಿಂದ ಅವುಗಳನ್ನು ತಂದು ಸೇರ್ಪಡೆ ಮಾಡುವದಕ್ಕೋಸ್ಕರ ಕೆಲವು ಪತ್ರಗಳನ್ನು ಬರೆಯಿಸಿಕೊಟ್ಟು ಆ ಪ್ರತಿಯು ತಮ್ಮಲ್ಲಿರಬೇಕಾಗುವದೆಂದು ಮತ್ತೊಂದು ಪ್ರತಿಯನ್ನು ಬರೆಯಲಿಕ್ಕೆ ಅಪ್ಪಣೆಯನ್ನು ಮಾಡಿದುದರಿಂದಲಾ ಸಮಯದಲ್ಲಿ ಇದಕ್ಕೆ ಅನುಕೂಲವಾಗುವರಾರು, ಎಲ್ಲಿ ಕೂತು ಬರೆಯಬೇಕೆಂದು ಬಿನ್ನಹ ಮಾಡಲದಕ್ಕೆ ಶ್ರೀಗುರು ದೇವರು ಹುನಗುಂದದಿಂದ ನಾಗರಾಳ ದೊಡ್ಡಪ್ಪನವರ ಪುತ್ರರಾದ ಬಸಪ್ಪನವರನ್ನು ಕರಿಸಿ ತಮ್ಮ ಅಪೇಕ್ಷೆಯಂ ತಿಳಿಸಿ ಲೋಕಹಿತವಾದ ಈ ಗ್ರಂಥವಂ ಪರಿಶುದ್ಧ ಮಾಡಿ ಸಂಪೂರ್ಣ ಮಾಡುವ ವರೆಗೂ ಈತನ ಸರ್ವೋಪಚಾರಕ್ಕೆ ಸಹಾಯ ಮಾಡಬೇಕೆಂದು ಹೇಳಲದಕ್ಕನುಕೂಲನಾಗುವೆನೆಂದೊಡಂಬಟ್ಟು ಸದ್ಭಕ್ತಿ ಪೂರ್ವಕನಾಗಿ ಶ್ರೀಗಳವರಿಗೆ ಬಿನ್ನಹವನ್ನು ಮಾಡಿಕೊಂಡು ಅವರನ್ನು ಸಹ ಹುನಗುಂದಕ್ಕೆ ಕರಕೊಂಡು ಬಂದು ಆ ಶಿವಯೋಗಿಗಳ ಮನ ಹರ್ಷವಾಗುವಂತೆ ಸದ್ಭಕ್ತಿಯಿಂದ ಅನಂತ ಪ್ರಕಾರದ ಸೇವೆಗನುಕೂಲನಾಗಿ ಸಕಲ ಸಾಹಿತ್ಯಾದಿಗಳನ್ನು ಅನುಕೂಲಿಸಿ ಕೊಟ್ಟು ಭಕ್ತಿಯಿಂದ ಅರ್ಪಿತಾವಧಾನಂಗಳಂ ಮಾಡಿಸುತ್ತ ಮೂರು ತಿಂಗಳ ವರೆಗೂ ಅನಂತ ಪ್ರಕಾರದ ಸುಭೋಜನಗಳಿಂದ ಲಿಂಗಾರ್ಪಿತವ ಮಾಡಿಸಿ ಸತ್ಫಲವಂ ಪಡೆದುಕೊಂಡರು. ಅಷ್ಟರಲ್ಲಿ ನಾನು ಹುನಗುಂದ ಮುಕ್ಕಾಮಿನಲ್ಲಿ ಕುಳಿತು ಮತ್ತೊಂದು ಪ್ರತಿಯನ್ನು ತಯಾರ ಮಾಡಿದೆನು. ಆ ಪ್ರತಿಯನ್ನು ನೋಡಿ ಸಂತೋಷಪಟ್ಟು ಹೇಳಿದ್ದೇನಂದರೆ ಇದರಂತೆ ಇನ್ನೊಂದು ಪ್ರತಿಯನ್ನು ಅತ್ಯಾಶ್ಚರ್ಯವಾಗಿ ಚಿತ್ರ ಚಮತ್ಕಾರಂಗಳಿಂದ ಬರೆದು ಧೊರೆಗಳಿಗೆ ಕೊಡಬೇಕೆಂದು ಹೇಳಿದ ಕಾರಣ ಈ ಗ್ರಂಥವನ್ನು ಅವರ ಮನೋಭಾವವಿದ್ದಂತೆ ನಿತ್ಯದಲ್ಲಿ ಸೂಚಿಸುತ್ತ ಬಂದ ಹೊಸ ಯುಕ್ತಿಗಳಿಂದ ಪರಮಾಶ್ಚರ್ಯವಾಗುವಂತೆ ಈ ಪ್ರತಿಯನ್ನು ತಯಾರು ಮಾಡಿ ತೋರಿಸಲಾಗಿ ಈ ಗ್ರಂಥದ ಆದಿಯಿಂದ ಬರೆದದ್ದನ್ನೆಲ್ಲ ಚನ್ನಾಗಿ ನೋಡಿ ಅತಿ ಹರುಷಿತರಾಗಿ ಆನಂದ ಉಕ್ಕೇರಿ ಹಾಲುಕ್ಕಿ ಮೇಲುವರಿದಂತಾಗಿ ಈ ಗ್ರಂಥಕ್ಕೆ ಸಂಪೂರ್ಣ ಮಾಡಿಸುವದಕ್ಕೆ ಅನುಕೂಲರಾದ ಪುಣ್ಯಶಾಲಿಗಳಿಗಾಶೀರ್ವಾದವಾದ ಈ ಗ್ರಂಥದ ಕಡೆಯ ಭಾಗದಲ್ಲಿ ಆಶೀರ್ವಚನವಂ ಬರೆಯಬೇಕೆಂದು ಸೂಚಿಸಿ ಮತ್ತೀಗ್ರಂಥವಂ ನಾಗರಾಳ ಬಸಪ್ಪನವರಿಗೆ ಸಕಲೈಶ್ವರ್ಯ ಸಂಪದಕ್ಕೆ ಕಾರಣವಾದ ಆಶೀರ್ವಾದವಾಗಿ ಕೊಟ್ಟಿದ್ದಾರೆ.

ದೊರೆಗಳಿಗೊಂದು ಪ್ರತಿಯನ್ನು ಮತ್ತು ತಮಗೊಂದು ಪ್ರತಿಯನ್ನು ಬರೆಯುವ ವರೆಗೆ ಈ ಗ್ರಂಥಕ್ಕೆ ಬೇಕಾದದ್ದನ್ನೆಲ್ಲ ಅನುಕೂಲಿಸಿಕೊಟ್ಟು

ಐದು ತಿಂಗಳ ವರೆಗೂ ನನ[illegible]ವೊದಲಾದ ಯಾವತ್ತೂ ಪರಾಮರ್ಶವನ್ನು ಮಾಡಿದರು. ಈ ಗ್ರಂಥವನ್ನು ಪರಿಶುದ್ಧವಾಗಿ ಸಮಾಪ್ತಿಯನ್ನು ಮಾಡುವ ವಿಷಯದಲ್ಲಿ ಶ್ರೀ ಮನ್ಮಹಾಶಿವಯೋಗಿಗಳು ಹರ್ಷಬಡುವಂತೆ, ಸದ್ಭಕ್ತಿ ಪೂರ್ವಕವಾಗಿ ಸಹಾಯವನ್ನು ಮಾಡಿದ ನಾಗರಾಳ ಬಸಪ್ಪನವರಿಗೆ ದೊರಕಿಕೊಂಡ ಘನಪುಣ್ಯವು ಅತ್ಯಾಶ್ಚರ್ಯವಾದದ್ದು ಸಹಸ್ರಾವಧಿ ದ್ರವ್ಯವನ್ನು ಖರ್ಚುಮಾಡಿದ ಕೆಲವರಿಗೆ ಅರಸರಿಯದ ಬಿಟ್ಟಿಯಾಗಿರುವದು ಇವರು ಸ್ವಲ್ಪ ದ್ರವ್ಯವಾದರೂ ಖರ್ಚು ಮಾಡಿ ಮಾಡಿದ ಭಕ್ತಿಯು ಶಿವನಿಗೆ ಪ್ರೀಮವಾಗಿ ಸಲ್ಲಿತು ಆ ಸತ್ಫಲವು ಸಪ್ತ ಸಂತಾನದ ವರೆಗೂ ಮಹದೈಶ್ವರ್ಯಕ್ಕೆ ಬೀಜವಾಗಿರ್ಪುದು ಹೇಗೆಂದರೆ: -

ಪರಶಿವಯೋಗೀಶ್ವರರುಗಳು ಮತ್ತು ಭಕ್ತರಾದಾಗ್ಯೂ ಶಿವಜ್ಞಾನ ಸಂಪನ್ನರಾದ ಶ್ರೀ ವೀರಶೈವ ಸದ್ಭಕ್ತ ಶರಣ ಜನರು ಶಿವಲಿಂಗಾರ್ಚನ ಅರ್ಪಿತ ಮಾಡುವ ಪರಿಯು ಲೌಕಿಕರಂತಲ್ಲ. ಅವರು ತನುಮನ ಪ್ರಾಣ ಭಾವಂಗಳಲ್ಲಿ ಗುರುಲಿಂಗ ಜಂಗಮದೇಕ ಸ್ವರೂಪವಾದ ಪರಶಿವಮೂರ್ತಿಯಂ ಸಂಬಂಧ ಮಾಡಿಕೊಂಡು ಷಡ್ವಿಧ ಹಸ್ತದಿಂ ಪಿಡಿದು ಷಡ್ವಿಧ ಭಕ್ತಿ ಶಕ್ತಿಯರೊಡಗೂಡಿ ಷಡ್ವಿಧ ಲಿಂಗಮುಖಂಗಳನರಿದು ಷಡ್ವಿಧ ಮಂತ್ರಸ್ಮರಣೆಯಿಂದ ರೂಪು ರುಚಿ ತೃಪ್ತಿಯನರ್ಪಿಸುತ್ತ ಪರಿಣಾಮ ಪ್ರಸಾದ ಭೋಗಿಗಳಾದುದರಿಂದ ಶಿವ ತೃಪ್ತಿಯಾದಲ್ಲಿ ಸಮುದ್ರದ ಮಳಲಿಗೆ ಸಮಾನವಾದಸಂಖ್ಯಾತ ಪ್ರಮಥಗಣ ರುದ್ರಗಣರಮರಗಣ ತೃಪ್ತಿಯಾಗುವದಾಗಿ "ಶಿವಯೋಗಿ ಭಿಕ್ಷಾ ಮಾತ್ರೇಣ ಕೋಟಿ ಯಜ್ಞಃ ಫಲಂ ಭವೇತ್ ॥" ಎಂಬ ಸಾಕ್ಷಿಯುಂಟಾಗಿರ್ಪುದು. ಮತ್ತು "ಕ್ಷೀರಕುಂಭ ಸಹಸ್ರಾಣಿ। ಘೃತಕುಂಭ ಶತೈರಪಿ ॥ ಶಿವಯೋಗಿ ಭಿಕ್ಷಾ ಮಾತ್ರೇಣ। ಕೋಟಿಯಜ್ಞಃ ಫಲಂ ಭವೇತ್ ॥" ಎಂಬಾಗಮ ವಾಕ್ಯ ಪ್ರಸಿದ್ಧ ಮುಂಟಾಗಿ ಮತ್ತು "ವಿಪ್ರಕೋಟಿ ಸಹಸ್ರೇಭ್ಯೋ। ಏಕಘಂಟಾ ಮಹಾಧ್ವನಿಃ॥ ಮದ್ಭಕ್ತ ಏಕ ಭುಂಜತಿ। ಕಬಳೆ ಕಬಳೆ ವರಾನನೆ ॥" ಎಂದು ಆಗಮ ಪ್ರಮಾಣಮುಂಟು ಮತ್ತು ಶಿವರಹಸ್ಯ ಪರಮರಹಸ್ಯ ಭಕ್ತಾಧಿಕ್ಯ ವೀರಶೈವ ಮುಂತಾದ ಮಹಾ ಗ್ರಂಥಗಳಲ್ಲಿ ಅನೇಕ ಸಾಕ್ಷಿಗಳುಂಟು ಮತ್ತು "ಹತ್ತು ಸಾವಿರಕಿಕ್ಕಿ ವ್ಯರ್ಥ ದಣಿಯಲು ಬೇಡ। ತತ್ವವನು ಬಲ್ಲ ಶಿವಯೋಗಿಗಳಿಗೊಂದು ತುತ್ತು ನೀಡೆಂದ ಸರ್ವಜ್ಞ ॥" ಈ ಪ್ರಕಾರವಾಗಿ ಸರ್ವಜ್ಞಮೂರ್ತಿಯ ವಚನ ಸಾಕ್ಷಿಯುಂಟಾಗಿ ಈ ಶಿವಯೋಗಿಗಳ ಲಿಂಗಾರ್ಚನಾದ ಶಿವಲಿಂಗಾರ್ಪಿತಾವಧಾನಂಗಳಂ ಮಾಡಿಸಿ ಮೂರು ನಾಲ್ಕು ತಿಂಗಳ ವರೆಗೂ ಇಚ್ಛೆಯನರಿತು ಅನುಕೂಲಿತರಾಗಿ ಸದ್ಭಕ್ತಿಯಿಂದ ಈ ಪುಣ್ಯ ಗ್ರಂಥಗಳ ಪರಿಶುದ್ಧವಾಗಿ ಸಂಪೂರ್ಣ ಮಾಡುವ ವರೆಗೂ ಸಕಲ ವಿಷಯಗಳಲ್ಲಿ ಸಹಾಯಮಾಗಿ ಶ್ರೀಮನ್ಮಹಾ ಯೋಗೀಶ್ವರರ ಪ್ರಸನ್ನತೆಯಂ ಪಡೆದು ಐದು ತಿಂಗಳ ವರೆಗೂ ಸಕಲ ಸಾಹಿತ್ಯಂಗಳ ಕೊಟ್ಟು ಪರಾಮರಿಷಿದುದರಿಂದ ಈ ಸತ್ಫಲದ ಸುಕೃತವತಿ ವಿಶೇಷವಾಗಿ ಪ್ರಾಪ್ತಿಸಿತು. ಇದರ ವಿಶೇಷ್ಯವನ್ನು ವರ್ಣಿಸತಕ್ಕದ್ದೇಸಿದೆ? ಮೇಲಾಗಿ ಅನೇಕ ಸಾಕ್ಷಿಗಳುಂಟು.

## ಶ್ರೀ ಮನ್ಮಹಾಗುರು ನಾಗಭೂಷಣ ಶಿವಯೋಗಿಗಳು ಜಗದ್ವೈಭವವತಿ ವಿಶೇಷವಾಗುವದಕ್ಕಾಗಿ ಹರಸಿದಾಶೀರ್ವಾದವು.

ವನಿತಾದ್ಯಷ್ಟ ಮಹಾ ಭೋಗ ವಿಲಾಸದ ಬಹು ಸಂಪತ್ಕರಕ್ಕೆ ಕಾರಣ ಮಾದಾಶೀರ್ವಾದವಿದು ಸದ್ಗುರು ಜಗದೋಪಕಾರ ಮೂರ್ತಿಗಳು ಜಗದ್ವೈಭವವತಿ ವಿಶೇಷವಾಗುವದಕ್ಕಾಗಿ, ತಮ್ಮ ಹರುಷಾನಂದದಿಂದ ಹಾಲುಕ್ಕಿ ಮೇಲು ವರಿದೋಪಾದಿಯಲ್ಲಿ ಲೌಕಿಕ ಪಾರಮಾರ್ಥ ಕೃಷಿ ಜ್ಞಾನದ ಸಕಲ ಯುಕ್ತಿಗಳಂ ಸೂಚಿಸಿ ಅತ್ಯಾನಂದದಿಂ ರಚಿಸಿ ಸಂಪೂರ್ಣ ಮಾಡಿಸಿಕೊಟ್ಟ ಈ ಗ್ರಂಥವಾಶೀರ್ವಾದವೆಂದು ನಂಬಿ ಸಕಲಾರಂಭಗಳನುದ್ಯೋಗಿಸಿ ಸಕಲೈಶ್ವರ್ಯ ಪುತ್ರ ಮಿತ್ರ ಕಳತ್ರರೊಡಗೂಡಿ ಸಪ್ತ ಸಂತಾನ ಸುಕೃತದಿಂ ಸಂಪದ್ಯುತರಾಗಿ ಮಹದೈಶ್ವರ್ಯದೊಡಗೂಡಿ ಭಕ್ತಿಗೃಹವಂ ಕಟ್ಟಿ ಗುರುಲಿಂಗ ಜಂಗಮ ಭಕ್ತ್ಯಾಪೇಕ್ಷಿತರಾಗಿ ತನುಮನ ಧನಂಗಳಂ ಕೊಟ್ಟು ಇಹದಲ್ಲಿ ಸತ್ಕೀರ್ತಿ ಪರದಲ್ಲಿ ನಿಜಮೋಕ್ಷವಂ ಪಡೆದು ಸುಖದಲ್ಲಿ ಬಾಳುವುದು.

### ಗ್ರಂಥಸಮಾಪ್ತಿ.

ಈ ಪ್ರಕಾರದಾಶೀರ್ವಾದವು ಬರೆಯಲ್ಪಟ್ಟುದಾಗಿ ಜಗದ್ಹಿತ ಭೋಗ ಮೋಕ್ಷಪ್ರದವಾದ ಕೃಷಿಜ್ಞಾನ ಪ್ರದೀಪಿಕ ಎಂಬ ಪುಣ್ಯ ಗ್ರಂಥವು ಗುರು ವಾಜ್ಞೆಯ ಪ್ರಕಾರ ಸಿದ್ಧರಾಮಪ್ಪ ಕುನ್ನಾಳ ಮುಕ್ಕಾಮ ಬೆಕ್ಕಿನಾಳ ಇವರಿಂದ ಶ್ರೀ ನೃಪಶಾಲಿವಾಹನ ಶಕೆ ೧೮೦೧ ಪ್ರಮಾಧಿ ನಾಮ ಸಂವತ್ಸರ ಮಾಘ ಶುದ್ಧ ೧೫ ರಲ್ಲಿ ಸಂಪೂರ್ಣವಾದುದು ಶ್ರೀ ಶ್ರೀ

ಇತಿಃ-

ಕೃಷಿಜ್ಞಾನ ಪ್ರದೀಪಿಕಾ ಗ್ರಂಥ ಸಂಪೂರ್ಣ.

ಮಂಗಲ ಮಸ್ತು

ಶ್ರೀ. ಶ್ರೀ ಶ್ರೀ ಶ್ರೀ ಶ್ರೀ.

